
ಆರಾಧ್ಯ ಸಿರಿ

ಪ್ರೊ. ಎನ್. ಬಸವಾರಾಧ್ಯ-೮೦
ಅಭಿನಂದನ ಸಂಪುಟ

ಸಂಪಾದಕರು
ಡಾ. ಸಿ. ಶಿವಕುಮಾರ ಸ್ವಾಮಿ



ಆರಾಧ್ಯ ಸಿರಿ

(ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಂಪುಟ)

ಸಂಪಾದಕರು

ಡಾ. ಸಿ. ಶಿವಕುಮಾರ ಸ್ವಾಮಿ

ಪ್ರಕಾಶಕರು

ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಮಿತಿ

ನಂ. ೬೧/೧, ಶ್ರೀ ಜ್ಞಾನಜ್ಯೋತಿ ವಿದ್ಯಾಮಂದಿರ, ೪ನೇ 'ಎನ್' ಬ್ಲಾಕ್

ರಾಜಾಜಿನಗರ, ಬೆಂಗಳೂರು-೫೬೦ ೦೧೦

ಆರಾಧ್ಯ ಸಿರಿ

(ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಂಪುಟ)

ಸಂಪಾದಕರು : **ಡಾ. ಸಿ. ಶಿವಕುಮಾರ ಸ್ವಾಮಿ**

ಪ್ರಕಾಶಕರು : **ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಮಿತಿ**
ನಂ. ೬೧/೧, ಶ್ರೀ ಜ್ಞಾನಜ್ಯೋತಿ ವಿದ್ಯಾಮಂದಿರ, ೪ನೇ 'ಎನ್' ಬ್ಲಾಕ್
ರಾಜಾಜಿನಗರ, ಬೆಂಗಳೂರು-೧೦. ✆ : 23128168, ಮೊಬೈಲ್ : 9844358483

ಪುಟಗಳು : xvi+೨೬೪

ಮೊದಲ ಮುದ್ರಣ : ಮಾರ್ಚ್ ೧೩, ೨೦೦೫

ಬೆಲೆ : **ರೂ. ೧೦೦/-**

ಮುಖಪುಟ ವಿನ್ಯಾಸ : **ಮೋನಪ್ಪ** ಹಾಗೂ **ಪ್ರೊ. ಎಂ. ಪ್ರಸನ್ನಕುಮಾರ್**

ಛಾಯಾಕ್ಷರ ಜೋಡಣೆ:
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ✆ : 23402575

ಮುದ್ರಣ:
ಸ್ನೇಹಾ ಪ್ರಿಂಟರ್ಸ್
ನಂ. ೧೧೪, ೪ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ, ಬೆಂಗಳೂರು-೪೦ ✆ : 23392814
E-Mail-snehaprinters1@rediffmail.com
karthikenterprisesin@yahoo.com

◆◆ ನಮ್ಮ ಮಾತು ◆◆

೫-೯-೨೦೦೪ರಂದು ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ತುಮಕೂರಿನ ನಮ್ಮ ಮಹಾವಿದ್ಯಾಲಯದಲ್ಲಿ ಆತ್ಮೀಯವಾಗಿ ಮುಗಿಸಿ, ಹಿರಿಯ ಶಿಕ್ಷಕರಾದ ಶ್ರೀಯುತ ಮಂಜುನಾಥ್ ಅವರಿಗೆ ಗೌರವ ಸಮರ್ಪಣೆ ಮಾಡಿ, ವಿದ್ಯಾರ್ಥಿಗಳೊಂದಿಗೆ ದಿವಂಗತ ರಾಷ್ಟ್ರಪತಿ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಪ್ರತಿಭಾಪೂರ್ಣ ಬರಹಗಳನ್ನು ಮೆಲುಕು ಹಾಕುತ್ತಿದ್ದ ಸಂದರ್ಭದಲ್ಲಿ ನನ್ನ ಚೇಂಬರಿನ ದೂರವಾಣಿ ಶಬ್ದ ಮಾಡಿತು. ಅದು ಯಾರದೆಂದು ಕೈಗೆತ್ತಿಕೊಂಡಾಗ ಆ ಕಡೆಯಿಂದ ಮಾತನಾಡಿದವರು ಜ್ಞಾನಜ್ಯೋತಿ ವಿದ್ಯಾಮಂದಿರದ ಸಂಸ್ಥಾಪಕ ಕಾರ್ಯದರ್ಶಿಗಳಾಗಿರುವ ಸನ್ಮಿತ್ರರಾದ ಶ್ರೀ ಈಶ್ವರದೇವರು ಎಂದು ತಿಳಿಯಿತು. ಶ್ರೀ ಈಶ್ವರದೇವರು ಅವರು ಅದೇ ದಿನ ಸಂಜೆ ಸ್ನೇಹಿತರ ಸಂತೋಷಕೂಟ ಏರ್ಪಡಿಸಿರುವುದಾಗಿಯೂ, ನಾನು ತಪ್ಪದೆ ಅದರಲ್ಲಿ ಭಾಗವಹಿಸಬೇಕೆಂತಲೂ ಒತ್ತಾಯಪೂರ್ವಕವಾಗಿ ಆಹ್ವಾನಿಸಿದರು. ಶಿಕ್ಷಕರ ದಿನಾಚರಣೆ ಪ್ರಯುಕ್ತ ಸ್ನೇಹಿತರ ಸಂತೋಷಕೂಟವೆಂದು ತಿಳಿದು, ನಾನು ತುಮಕೂರಿನಿಂದ ಬೆಂಗಳೂರಿಗೆ ಆಗಮಿಸಿ ಜ್ಞಾನಜ್ಯೋತಿ ಶಿಕ್ಷಣ ಕೇಂದ್ರಕ್ಕೆ ಸಮಯಕ್ಕೆ ಸರಿಯಾಗಿ ಧಾವಿಸಿದೆ.

ಅಲ್ಲಿ ಕೆಲವು ಸ್ನೇಹಿತರು ನೆರೆದಿದ್ದರು. ವಿಷಯವೇನೆಂದು ಮನವರಿಕೆ ಮಾಡಿಕೊಟ್ಟವರು ಡಾ. ನಂಜುಂಡಸ್ವಾಮಿಯವರು. ಡಾ. ಸ್ವಾಮಿಯವರು ಮಾತಿಗಾರಂಭಿಸಿ, ಸನ್ಮಾನ್ಯ ಶ್ರೀ ಎನ್. ಬಸವಾರಾಧ್ಯರಿಗೆ ೭೯ ವಸಂತಗಳು ಮುಗಿಯುತ್ತಾ ಬರುತ್ತಿವೆ. ಆ ಪ್ರಯುಕ್ತ ಸ್ನೇಹಿತರೆಲ್ಲ ಸೇರಿ ಅವರಿಗೆ ಒಂದು ಅಭಿನಂದನ ಸಮಾರಂಭ ಏರ್ಪಡಿಸುವುದು ಸೂಕ್ತವೆಂದು ತಿಳಿಸಿದರು. ನೆರೆದಿದ್ದ ಬಹುಮಂದಿ ಮಿತ್ರರು, ಪ್ರಮುಖವಾಗಿ ಶ್ರೀ ಈಶ್ವರದೇವರು, ಡಾ. ಎಸ್. ವಿದ್ಯಾಶಂಕರ, ಪ್ರೊ. ಪ್ರಸನ್ನಕುಮಾರ್, ಶ್ರೀಯುತ ಯಜಮಾನ್ ಶ್ರೀಕಂಠಪ್ಪ ಮುಂತಾದವರು ಡಾ. ಸ್ವಾಮಿಯವರ ಸಲಹೆ ಒಪ್ಪಬಹುದಾದ ವಿಚಾರವೆಂದೂ ನಾವೆಲ್ಲ ಸೇರಿ ಆ ಕಾರ್ಯವನ್ನು ಆಗುಮಾಡಿಕೊಡಬಹುದೆಂದೂ ತೀರ್ಮಾನಿಸಿದರು ಮತ್ತು ಮುಂದಿನ ವಾರ ಪ್ರೊ. ಎನ್. ಬಸವಾರಾಧ್ಯರ ಆತ್ಮೀಯ ಸ್ನೇಹಿತರ ವಿಸ್ತೃತ ಸಭೆಯನ್ನು ಕರೆದು ಮಾಡಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ, ಒಂದು ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಲು ತೀರ್ಮಾನವಾಗಿ ಅಂದಿನ ಸಂತೋಷಕೂಟ ಮುಕ್ತಾಯವಾಯಿತು.

೧೫.೯.೨೦೦೪ರ ಸಂಜೆ ೪ ಗಂಟೆಗೆ ಜ್ಞಾನಜ್ಯೋತಿ ವಿದ್ಯಾಮಂದಿರದಲ್ಲಿ ಪ್ರೊ. ಎನ್. ಬಸವಾರಾಧ್ಯರ ಅಭಿಮಾನಿಗಳ ವಿಸ್ತೃತ ಸಭೆ ಸೇರಿ ಒಂದು ಕಾರ್ಯನಿರ್ವಹಣ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ನೆರೆದಿದ್ದ ಸ್ನೇಹಿತರೆಲ್ಲ ಒಮ್ಮತದಿಂದ ನನ್ನನ್ನೇ ಔಪಚಾರಿಕವಾಗಿ ಅಧ್ಯಕ್ಷನಾಗಿರಬೇಕೆಂದು ಒತ್ತಾಯಿಸಿದರು. ಅವರ ಒತ್ತಾಯಕ್ಕೆ ಮಣಿದು ಮತ್ತು ಸನ್ಮಿತ್ರರಾದ ಪ್ರೊ. ಬಸವಾರಾಧ್ಯರ ಬಗ್ಗೆ ನನಗಿದ್ದ ಅಪಾರ ಪ್ರೀತಿ, ಗೌರವಗಳ ದ್ಯೋತಕವಾಗಿ ಆ ಸಮಿತಿಗೆ ಅಧ್ಯಕ್ಷನಾಗಿರಲು ನನ್ನ ಒಪ್ಪಿಗೆ ಸೂಚಿಸಿದೆ. ಈ ಒಪ್ಪಿಗೆಗೆ ಮತ್ತೊಂದು ಪ್ರಕರಣವೆಂದರೆ ಶ್ರೀಯುತ ಯಜಮಾನ್ ಶ್ರೀಕಂಠಪ್ಪ ಮತ್ತು ಶ್ರೀ ಈಶ್ವರದೇವರು ಅವರು ತೋರಿದ ಅಪರಿಮಿತ ಆಸಕ್ತಿ ಮತ್ತು ಅವರು ನೀಡಿದ ಭರವಸೆಗಳು.

ಡಾ. ಎಸ್. ವಿದ್ಯಾಶಂಕರ, ಪ್ರೊ. ಎಂ. ಪ್ರಸನ್ನಕುಮಾರ್, ಡಾ. ಸಿ. ಶಿವಕುಮಾರ ಸ್ವಾಮಿ, ಶ್ರೀ ಎಂ.ಜಿ. ನಾಗರಾಜ್, ಶ್ರೀ ಚಂದ್ರಣ್ಣಗೌಡ ಮುಂತಾದ ಸ್ನೇಹಿತರ ಬಳಗ ಕಾರ್ಯಕ್ರಮವನ್ನು ಅದ್ದೂರಿಯಾಗಿ ನೆರವೇರಿಸಲು ತೀರ್ಮಾನಿಸಿ ಆ ಸಮಿತಿಗೆ ಶ್ರೀ ಈಶ್ವರದೇವರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಶ್ರೀ ಯಜಮಾನ್ ಶ್ರೀಕಂಠಪ್ಪ ಅವರು ಕೋಶಾಧ್ಯಕ್ಷರಾಗಿಯೂ, ಪ್ರೊ. ಎಂ. ಪ್ರಸನ್ನಕುಮಾರ್, ಡಾ. ಚಂದ್ರಣ್ಣಗೌಡ, ಡಾ. ಸಂಧ್ಯಾರೆಡ್ಡಿಯವರು ಕಾರ್ಯದರ್ಶಿ-ಗಳಾಗಿರುವಂತೆಯೂ ಮತ್ತು ಮೈಸೂರು, ಬೆಂಗಳೂರು, ಧಾರವಾಡ ಮತ್ತಿತರೆಡೆ ಇರುವ ಪ್ರೊ. ಎನ್. ಬಸವಾರಾಧ್ಯರ ಅಭಿಮಾನಿ ಬಳಗದವರನ್ನು ಸಮಿತಿಯ ಸದಸ್ಯರನ್ನಾಗಿಯೂ ಸೇರಿಸಿಕೊಳ್ಳಲು ತೀರ್ಮಾನಿಸಲಾಗಿತ್ತು.

ಅಭಿನಂದನ ಸಮಾರಂಭ ನಡೆಯುವ ದಿನಾಂಕಕ್ಕೆ ಎರಡು ಅಭಿನಂದನ ಗ್ರಂಥಗಳನ್ನು ಹೊರತರಬೇಕೆಂತಲೂ, ಒಂದು ಗ್ರಂಥ ಪ್ರೊ. ಎನ್. ಬಸವಾರಾಧ್ಯರು ಸ್ವತಃ ಬರೆದ ಲೇಖನಗಳ ಸಂಗ್ರಹವಾಗಿರಬೇಕೆಂದೂ, ಮತ್ತೊಂದು ಅವರ ಬಗೆಗೆ ಅವರ ಅಭಿಮಾನಿ ಬಳಗ ವ್ಯಕ್ತಮಾಡುವ ಅಭಿಪ್ರಾಯಗಳ ಸಂಗ್ರಹವಾಗಿರಬೇಕೆಂದೂ ತೀರ್ಮಾನಿಸಲಾಯ್ತು. ಈ ಎರಡು ಕೃತಿಗಳನ್ನು ಸಂಪಾದಿಸಲು, ಡಾ. ಎಸ್. ವಿದ್ಯಾಶಂಕರ ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ನೀಡಲಾಯ್ತು ಮತ್ತು ಸಂಪಾದಕ ಸಮಿತಿಯನ್ನು ನೇಮಿಸಿಕೊಳ್ಳಲು ಅವರಿಗೆ ಅಧಿಕಾರವನ್ನು ನೀಡಲಾಯಿತು.

ತದನಂತರದಲ್ಲಿ ಶ್ರೀ ಈಶ್ವರದೇವರು ತಮ್ಮ ಶಿಕ್ಷಣ ಸಂಸ್ಥೆಯ ಸಿಬ್ಬಂದಿಯನ್ನು ಈ ಕಾರ್ಯದಲ್ಲಿ ತೊಡಗಿಸಿ ಡಾ. ಎಸ್. ವಿದ್ಯಾಶಂಕರ ಹಾಗೂ ಪ್ರೊ. ಪ್ರಸನ್ನಕುಮಾರ್ ಅವರುಗಳು ಬರೆದುಕೊಟ್ಟ ಬಿನ್ನಹ ಪತ್ರವನ್ನು ಪ್ರೊ. ಎನ್. ಬಸವಾರಾಧ್ಯರ ಅಭಿಮಾನಿ ಬಳಗಕ್ಕೆ ತಲುಪಿಸುವ ಜವಾಬ್ದಾರಿಯನ್ನು ಹೊತ್ತರು. ಶ್ರೀ ಈಶ್ವರದೇವರು ಮತ್ತು ಇತರ ಸ್ನೇಹಿತರು ಬಿಜಾಪುರ, ಧಾರವಾಡ, ಮೈಸೂರು, ತುಮಕೂರು ಮುಂತಾದ ನಗರಗಳಿಗೆ ಖುದ್ದು ಭೇಟಿ ನೀಡಿ ಅಲ್ಲಿನ ಪ್ರೊ. ಎನ್. ಬಸವಾರಾಧ್ಯರ ಅಭಿಮಾನಿಗಳನ್ನು ಸಂಪರ್ಕಿಸಿ ಅವರ ಸಹಕಾರ ಬಯಸಿ ಲೇಖನಗಳನ್ನು ಹಾಗೂ ಸಂಪನ್ಮೂಲವನ್ನು ದೊರಕಿಸಿಕೊಡಲು ವಿನಂತಿ ಮಾಡಲಾಯಿತು.

ಪ್ರೊ. ಎನ್. ಬಸವಾರಾಧ್ಯರು ಹೆಸರಾಂತ ಸಂಶೋಧಕರಾಗಿಯೂ ಮತ್ತು ಸಾಹಿತಿಗಳಾಗಿಯೂ ಬಹು ದೀರ್ಘಕಾಲ ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್ತುಗಳಲ್ಲಿ ಸೇವೆಗೈದು ಅಪಾರ ಸಂಖ್ಯೆಯ ಸಾಹಿತ್ಯಾಭಿಮಾನಿಗಳನ್ನು ಹೊಂದಿದವರಾಗಿದ್ದಾರೆ. ವೈಯಕ್ತಿಕವಾಗಿಯೂ ಅವರು ಸರಳತೆಗೆ, ಸಜ್ಜನಿಕೆಗೆ, ಸ್ನೇಹಪರತೆಗೆ ಹೆಸರಾದವರಾಗಿದ್ದಾರೆ. ನಿಗರ್ವಿಗಳು, ಸದಾ ಪರೋಪಕಾರ ಮನಸ್ಸಿನ ಪ್ರೊ. ಆರಾಧ್ಯರ ಬಗ್ಗೆ ಅವರ ಅಭಿನಂದನ ಗ್ರಂಥದಲ್ಲಿ ಅವರ ಸ್ನೇಹಿತರ ಬಳಗ ಬಹಳ ಆತ್ಮೀಯವಾಗಿ ಲೇಖನಗಳನ್ನು ಬರೆದಿರುವರು. ಅವರ ಕೃತಿಗಳ ಬಗೆಗೆ ಮೌಲಿಕ ವಿವೇಚನೆ ನಡೆಸಿರುವರು. ಅವರ ವಿದ್ವತ್ತಿಗೆ ಸಾಕ್ಷಿಯಾಗಿ ಅಭಿನಂದನ ಗ್ರಂಥದ ಮೊದಲ ಸಂಪುಟದಲ್ಲಿ ಅವರಿಂದ ಹೊರಹೊಮ್ಮಿರುವ ಅನೇಕ ಸಂಶೋಧನಾತ್ಮಕ, ಸಾಹಿತ್ಯ ಮೌಲ್ಯವುಳ್ಳ ಲೇಖನಗಳ ಸಂಗ್ರಹವಿದೆ. ಈ ಎರಡು ಬೃಹತ್ ಕೃತಿಗಳು ಅಚ್ಚಾಗಲು ಅತೀವ ಶ್ರಮವಹಿಸಿದವರು ಡಾ. ಎಸ್. ವಿದ್ಯಾಶಂಕರ ಅವರು. ಅವರಿಗೆ ನಮ್ಮೆಲ್ಲರ ಮೆಚ್ಚುಗೆ, ಅಭಿನಂದನೆ ಸಲ್ಲಬೇಕಾಗಿದೆ.

ಅಭಿನಂದನಾ ಸಮಾರಂಭವನ್ನು ಮಾರ್ಚ್ ತಿಂಗಳ ೧೩ನೇ ದಿನಾಂಕ ಭಾನುವಾರದಂದು ಏರ್ಪಡಿಸಲು ಸಮಿತಿಯವರು ತೀರ್ಮಾನಿಸಿದಂತೆ ನಗರದ ಪ್ರತಿಷ್ಠಿತ ಕಲಾಭವನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯಶ್ರೀ ವೀರಪ್ಪ ಮೊಯಿಲಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಶ್ರೀ ಬಸವಾರಾಧ್ಯರ ಹೆಸರಿನಲ್ಲಿ ಹೊರಬರಲಿರುವ ಎರಡು ಉದ್ಗ್ರಂಥಗಳನ್ನು ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ, ಹೆಸರಾಂತ ಸಾಹಿತಿಗಳೂ ಆಗಿರುವ 'ನಾಡೋಜ' ಡಾ. ಡಿ. ಜವರೇಗೌಡ ಅವರೂ ಮತ್ತು ಖ್ಯಾತ ವಿದ್ವಾಂಸರಾದ ಡಾ. ಪ್ರಭುಶಂಕರ ಅವರೂ ಬಿಡುಗಡೆ ಮಾಡಲಿದ್ದಾರೆ. ಕರ್ನಾಟಕ ರಾಜ್ಯದ ಮಾಜಿ ಸಚಿವರೂ ಮತ್ತು ಪ್ರಸ್ತುತದಲ್ಲಿ ಶಾಸಕರೂ ಆಗಿರುವ ಶ್ರೀ ವಿ. ಸೋಮಣ್ಣನವರು ವಿಶೇಷ ಆಹ್ವಾನಿತರಾಗಿಯೂ; ನಾಡಿನ ಹೆಸರಾಂತ ಶಿಕ್ಷಣತಜ್ಞರಾಗಿರುವ ಪ್ರೊ. ಎಸ್.ಆರ್. ರೋಹಿಡೇಕರ್ ಅವರು ಮುಖ್ಯ ಅತಿಥಿಗಳಾಗಿಯೂ; ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾಗಿರುವ ಹೆಸರಾಂತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿಯವರು; ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರೂ, ಹೆಸರಾಂತ ಸಾಹಿತಿಗಳೂ ಆಗಿರುವ ಡಾ. ಸಿದ್ಧಲಿಂಗಯ್ಯ ಅವರು ಮತ್ತು ನಿವೃತ್ತ ಪ್ರಾಧ್ಯಾಪಕಿ ಡಾ. ವಿಜಯಾ ಸುಬ್ಬರಾಜ್ ಅವರು ಅಭಿನಂದನಪರ ಭಾಷಣ ಮಾಡಲಿರುವರು. ಇಂತಹ ಒಂದು ಅದ್ದೂರಿ ಸಮಾರಂಭದ ಯಶಸ್ಸಿಗೆ ಕಾರಣಕರ್ತರಾದ ಎಲ್ಲರಿಗೂ ಕಾರ್ಯನಿರ್ವಾಹಕ ಸಮಿತಿಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಈ ಕಾರ್ಯಕ್ರಮಕ್ಕೆ ಸಂಪನ್ಮೂಲವನ್ನು ಕ್ರೋಡೀಕರಿಸಲು ಸಹಕರಿಸಿದ ಸನ್ಮಿತ್ರರೆಲ್ಲರಿಗೂ ನನ್ನ ನಮನಗಳು.

–ಪ್ರೊ. ಎಚ್.ಆರ್. ದಾಸೇಗೌಡ

ಅಧ್ಯಕ್ಷರು, ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಮಿತಿ

◆◆ ಸಂಪಾದಕರ ಮಾತು ◆◆

ಮಾತೇವ ರಕ್ಷತಿ ಪಿತೇವ ಹಿತೇ ನಿಯುಂಕ್ತೇ
ಕಾಂತೇವ ಚಾಭಿರಮಯತ್ಯಪನೀಯ ಖೇದಮ್।
ಲಕ್ಷ್ಮೀಂ ತನೋತಿ ವಿತನೋತಿ ಚ ದಿಕ್ಷು ಕೀರ್ತಿಂ
ಕಿಂ ಕಿಂ ನ ಸಾಧಯತಿ ಕಲ್ಪಲತೇವ ವಿದ್ಯಾ॥
-ವಿಕ್ರಮಾರ್ಕ ಚರಿತ

[ವಿದ್ಯೆಯು ತಾಯಿಯಂತೆ ರಕ್ಷಿಸುತ್ತದೆ. ತಂದೆಯಂತೆ ಹಿತವಾದ ಕಾರ್ಯಗಳಲ್ಲಿ ತೊಡಗಿಸುತ್ತದೆ. ದುಃಖವನ್ನು ಹೋಗಲಾಡಿಸಿ ಹೆಂಡತಿಯಂತೆ ಸಂತೋಷಗೊಳಿಸುತ್ತದೆ. ಸಂಪತ್ತನ್ನು ನೀಡುತ್ತದೆ. ದಿಕ್ಕುಗಳಲ್ಲಿ ಕೀರ್ತಿಯನ್ನು ಹರಡುತ್ತದೆ. ಕಲ್ಪವೃಕ್ಷದಂತೆ ವಿದ್ಯೆಯು ಏನನ್ನು ತಾನೇ ಸಾಧಿಸುವುದಿಲ್ಲ?]

ಸತ್ಯಂ ತಪೋ ಜ್ಞಾನಮಹಿಂಸತಾ ಚ
ವಿದ್ವತ್ ಪ್ರಮಾಣಂ ಚ ಸುಶೀಲತಾ ಚ।
ಏತಾನಿ ಯೋ ಧಾರಯತೇ ಸ ವಿದ್ವಾನ್
ನ ಕೇವಲಂ ಯಃ ಪಠತೇ ಸ ವಿದ್ವಾನ್॥
-ಅಪ್ಪಯ್ಯ ದೀಕ್ಷಿತ : ಕುವಲಯಾನಂದ

[ಸತ್ಯ ತಪಸ್ಸು ಜ್ಞಾನ ಅಹಿಂಸೆ ಪಾಂಡಿತ್ಯ ಒಳ್ಳೆಯ ನಡತೆ -ಇವುಗಳನ್ನು ಯಾವನು ಹೊಂದಿದ್ದಾನೋ ಅವನೇ ವಿದ್ವಾಂಸ. ಕೇವಲ ಓದಿದವನು ಮಾತ್ರ ವಿದ್ವಾಂಸನಲ್ಲ.]

ಪ್ರೊ. ಎನ್. ಬಸವಾರಾಧ್ಯರ ವ್ಯಕ್ತಿತ್ವವನ್ನು ನೆನೆಯುವಾಗ ನನಗೆ ಮೇಲಿನ ಎರಡು ಶ್ಲೋಕಗಳು ನೆನಪಿಗೆ ಬರುತ್ತವೆ. ಮೊದಲನೆಯದು ವಿದ್ಯೆಯನ್ನು ಕುರಿತದ್ದು, ಎರಡನೆಯದು ವಿದ್ವಾಂಸನ ಲಕ್ಷಣವನ್ನು ಹೇಳುವಂತಹದ್ದು. ಪ್ರೊ. ಎನ್. ಬಸವಾರಾಧ್ಯರು ಬಡತನದಿಂದ ಬಂದು ವಿದ್ಯೆಯನ್ನು ಕಷ್ಟಪಟ್ಟು ಸಂಪಾದಿಸಿದವರು. ಖ್ಯಾತ ವಿದ್ವಾಂಸರಾದ ಅವರಿಗೆ ಓರ್ವ ಒಳ್ಳೆಯ ವಿದ್ವಾಂಸನಲ್ಲಿರಬೇಕಾದ ಗುಣಲಕ್ಷಣಗಳೆಲ್ಲವೂ ಸೇರಿ ಅವರ ವ್ಯಕ್ತಿತ್ವದ ಮುಖ್ಯ ಭಾಗವಾಗಿದೆ.

ಪ್ರೊ. ಎನ್. ಬಸವಾರಾಧ್ಯರು ೮೦ನೇ ವಯಸ್ಸಿಗೆ ಕಾಲಿಡುತ್ತಿರುವಾಗ ಅವರನ್ನು ಸನ್ಮಾನಿಸುವ ವಿಚಾರ ಅಭಿನಂದನ ಸಮಿತಿಯ ಗೆಳೆಯರಿಗೆ ಬಂದಿತು. ಒಂದು ವಿಶಿಷ್ಟ ಅಭಿನಂದನ ಗ್ರಂಥವನ್ನು ಅವರಿಗೆ ಸಮರ್ಪಿಸುವ ವಿಷಯ ಅಂಗೀಕಾರವಾಯಿತು. ಪ್ರೊ. ಎನ್. ಬಸವಾರಾಧ್ಯರ ಮಿತ್ರರ-ಅಭಿಮಾನಿಗಳ ಬಳಗ ದೊಡ್ಡದು. ಹಾಗೆಯೇ ಅವರ ವ್ಯಕ್ತಿತ್ವ-ಸಾಧನೆ-ಸಿದ್ಧಿಯೂ ದೊಡ್ಡದು. ಬಹುಮುಖಿಯಾದ ಅವರ ವ್ಯಕ್ತಿತ್ವದ ಹಲವು ಮಜಲುಗಳನ್ನು ಭಿನ್ನರೂಪಗಳಲ್ಲಿ ಕಲೆಹಾಕುವ, ಅವರ ಕೃತಿಗಳ ಮೌಲಿಕ ವಿವೇಚನೆ ನಡೆಸುವ ಒಂದು ಪುಟ್ಟ ಪ್ರಯತ್ನ ಏಕೆ ನಡೆಸಬಾರದು ಎನ್ನುವ ಆಲೋಚನೆ ನಮ್ಮಲ್ಲಿ ಬಂದಿತು. ಪ್ರೊ. ಎನ್. ಬಸವಾರಾಧ್ಯರಲ್ಲಿ ಕಂಡ ವಿಶಿಷ್ಟ ಗುಣವನ್ನು ನಿಮ್ಮ ನೆನಪುಗಳ ಸಂಪುಟದಿಂದ ತೆಗೆದುಕೊಡಿ ಎಂದು ಅವರ ಮಿತ್ರರಲ್ಲಿ / ಅಭಿಮಾನಿಗಳಲ್ಲಿ ಅರಿಕೆ ಮಾಡಿದೆವು; ಹಾಗೆಯೇ ಅವರ ಕೃತಿಗಳ ಬಗೆಗೂ ಲೇಖನ ಬರೆದುಕೊಡಲು ವಿನಂತಿಸಿದೆವು. ನಮ್ಮ ನಿರೀಕ್ಷೆ ಮೀರಿ ಲೇಖನಗಳು ಬಂದುವು. ಅಭಿನಂದನ ಸಂಪುಟ- **'ಆರಾಧ್ಯ ಸಿರಿ'**ಯಲ್ಲಿ ಮೂರು

ಎಸಳುಗಳಿವೆ: ೧. ವ್ಯಕ್ತಿತ್ವ ದರ್ಶನ ೨. ಸಾಹಿತ್ಯಾಲೋಕನ ೩. ಕುಟುಂಬವತ್ಸಲ ಎನ್.ಬಿ. (ಅವರ ಕುಟುಂಬದ ಸದಸ್ಯರಿಂದ ಬರೆಯಿಸಿದ ಲೇಖನಗಳು.) ಈ ಭಾಗದ ಕೊನೆಯಲ್ಲಿ ಸ್ವತಃ ಪ್ರೊ. ಎನ್. ಬಸವಾರಾಧ್ಯರೇ ತಮ್ಮ ಬದುಕಿನ ಮುಸ್ಸಂಜೆಯ ಹೊತ್ತಿನಲ್ಲಿ ಆತ್ಮಾವಲೋಕನ ಮಾಡಿಕೊಂಡಿರುವರು. ನನಗೆ ಆಶ್ಚರ್ಯವಾಗಿ ಕಂಡುದು ಮೊದಲ ಭಾಗದಲ್ಲಿನ ಆರಾಧ್ಯರ ವೈವಿಧ್ಯಮಯವಾದ ವ್ಯಕ್ತಿತ್ವದ ಮೆಲುಕುಗಳು. ಅಲ್ಲಿನ ಬರಹಗಳಲ್ಲಿ ಕೃತಕತೆಯಿಲ್ಲ, ಅಂತಃಕರಣದ ಮಧುರವಾದ ನೆನಪುಗಳು ಅವು. ಅವರ ಬಗೆಗಿನ ಗೌರವ ಅಲ್ಲಿ ಶುಭ್ರ ಸ್ಫಟಿಕದಂತೆ ಗೋಚರವಾಗುತ್ತದೆ. ಆರಾಧ್ಯರಲ್ಲಿ ನಾನು ವಿಶೇಷವಾಗಿ ಕಂಡದ್ದು ಸಮತೆ-ಸಮಾಧಾನ ಚಿತ್ತಸ್ಥಿತಿ. ಅದು **'ಆರಾಧ್ಯ ಸಿರಿ'**ಯ ಕೊನೆಯ ಲೇಖನದಲ್ಲಿ ಕಾಣಬಂದಿದೆ.

ಕಿರಿಯವನಾದ ನನ್ನಲ್ಲಿ ವಿಶ್ವಾಸವಿಟ್ಟು ನನಗೆ 'ಆರಾಧ್ಯ ಸಿರಿ' ಅಭಿನಂದನ ಸಂಪುಟದ ಸಂಪಾದನೆಯ ಜವಾಬ್ದಾರಿಯನ್ನು ಅಭಿನಂದನ ಸಮಿತಿಯವರು ವಹಿಸಿಕೊಟ್ಟರು. ಪ್ರೊ. ಎನ್. ಬಸವಾರಾಧ್ಯರಂತಹ ಹಿರಿಯ ಚೇತನದ ಜೊತೆಗೆ ಈ ನೆಪದಲ್ಲಿ ನಾನು ಹಲವು ತಿಂಗಳು ಸತತ ಸಂಪರ್ಕವನ್ನು ಹೊಂದಲು ಸಾಧ್ಯವಾಯಿತು. ಈ ಭಾಗ್ಯವನ್ನು ಒದಗಿಸಿದ ಅಭಿನಂದನ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನಾನು ಋಣಿ. ಈ ಅಭಿನಂದನ ಸಂಪುಟಕ್ಕೆ ಲೇಖನ ಕೇಳಿದ ಕೂಡಲೇ ಕಳುಹಿಸಿದ ಎಲ್ಲ ಲೇಖಕಮಾನ್ಯರಿಗೂ ಧನ್ಯವಾದಗಳು. ಒಂದು ವಿಶೇಷವೆಂದರೆ, ನಾನು ಲೇಖನಕ್ಕಾಗಿ ನೆನಪಿನ ಪತ್ರಗಳನ್ನು ಬರೆದು ಯಾರನ್ನೂ ಒತ್ತಾಯಿಸಲಿಲ್ಲ. ಇದು **'ಆರಾಧ್ಯ ಸಿರಿ'**. ಪ್ರೊ. ಎನ್. ಬಸವಾರಾಧ್ಯರು ಗಳಿಸಿದ ಬೆಲೆ ಕಟ್ಟಲಾಗದ ವಿಶ್ವಾಸದ ಅಭಿಮಾನದ ಸಿರಿ.

ಛಾಯಾಕ್ಷರ ಜೋಡಣೆ ಮಾಡಿದ ವರ್ಷಿಣಿ ಗ್ರಾಫಿಕ್ಸ್‌ನವರಿಗೆ, ಸೊಗಸಾಗಿ ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್‌ನವರಿಗೆ, ಉಪಯುಕ್ತ ಸಲಹೆ-ಸೂಚನೆ ನೀಡಿದ್ದಲ್ಲದೆ ರಕ್ಷಾಪತ್ರ ವಿನ್ಯಾಸದಲ್ಲೂ ಮಾರ್ಗದರ್ಶನ ಮಾಡಿದ ಪ್ರೊ. ಎಂ. ಪ್ರಸನ್ನಕುಮಾರ್ ಅವರಿಗೆ ಧನ್ಯವಾದಗಳು.

–ಡಾ. ಸಿ. ಶಿವಕುಮಾರ ಸ್ವಾಮಿ



೧. ಬಿ.ಎ. ಆನರ್ಸ್ ವಿದ್ಯಾರ್ಥಿಯಾಗಿದ್ದಾಗ ಪೂಜ್ಯ ಗುರುಗಳೊಂದಿಗೆ



೨. ಬಿ.ಎ. ಆನರ್ಸ್ ವಿದ್ಯಾರ್ಥಿಗಳು ಗುರುಗಳೊಂದಿಗೆ




೭. ಪ್ರಾಚ್ಯ ವಿದ್ಯಾ ಸಂಶೋಧನ ಸಂಸ್ಥೆ, ಮೈಸೂರು




೮. ಕನ್ನಡ ನಿಘಂಟು ಸಂಪಾದಕ ಮಂಡಳಿ



೯. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿ



೭. ಎಂ.ಎ. (ಕನ್ನಡ) ಪದವಿ ೧೯೫೦



೮. ವಿವಾಹ ಮಹೋತ್ಸವಾಹ್ವಾನ ಪತ್ರಿಕಾ

Wedding Couple



Chi. Sow. Sarvamangala



Chi. N. Basavaradhya, M.A.

೫. ವಿವಾಹ (೧೯೫೧)

Srimathi & Sri G. Siddalingiah

request the pleasure of your company with family and friends

on the occasion of their daughter

Chi. Sow. Sarvamangala

with

Chi. N. Basavaradhya, M.A.,


(Oriental Research Institute, Mysore.)

Adopted Son of Sri Vatada Hosalli Matada Veerabhadraradhya, Mysore.

on Friday the 22nd June 1951

at their Residence, Anekal, Bangalore District.

MUHURTHAM 7-45 TO 9-30 A.M. RECEIPTION 6-30 P.M.



೬. ಎನ್‌. ಬಸವಾರಾಧ್ಯ ದಂಪತಿಗಳು

With the best compliments of:-

G. Gurunanjiah & Sons, Anekal.
S. Guruswamaradhya, Tavarekere.
S. Prabhiah, Prop. Sree Renuka Press, Bangalore 2.
Matada Nanjaiah, Narasimhanahalli.
N. C. Renukaradhya, Merchant, Namagondlu.
H. Doddaveeriah, Chamarajapet, Bangalore City.
M. C. Aradhya, Bangalore City.

★★
★

SREE RENUKA PRESS, B'LORE.

◆◆ ಪರಿವಿಡಿ ◆◆

ವ್ಯಕ್ತಿತ್ವ ದರ್ಶನ ◆◆

ಸಾಹಿತ್ಯಾಲೋಕ ◆◆

ಕುಟುಂಬವತ್ಸಲ ಎನ್.ಬಿ. ◆◆



ಪ್ರೊ.ಎನ್. ಬಸವಾರಾಧ್ಯ



ಶ್ರೀಮತಿ ಸರ್ವಮಂಗಳಮ್ಮ



ಷಷ್ಠಿಪೂರ್ತಿ ಶಾಂತಿ ಸಮಾರಂಭ ೧೯೮೬ರ ಜೂನ್



ಮೊಮ್ಮಕ್ಕಳೊಂದಿಗೆ ಬಸವಾರಾಧ್ಯ ದಂಪತಿಗಳು



ಮೊಮ್ಮಕ್ಕಳ ಜೊತೆಯಲ್ಲಿ ಪ್ರೊ.ಎನ್. ಬಸವಾರಾಧ್ಯ



ಮೊಮ್ಮಕ್ಕಳು



ಎಂ. ಜಿ. ನಂಜುಂಡಾರಾಧ್ಯರ ಸಮಗ್ರ ಕೃತಿ ಬಿಡುಗಡೆ ಸಮಾರಂಭದಲ್ಲಿ ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಜೊತೆ ಆತ್ಮೀಯ ಸಂಭಾಷಣೆ



ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ ಜನ್ಮ ಶತಮಾನೋತ್ಸವ ಉದ್ಘಾಟನಾ ಸಮಾರಂಭ



ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರಿಂದ ಸನ್ಮಾನ



ಡಾ.ಜಿ. ಮರುಳಸಿದ್ಧಯ್ಯ ಸ್ಮಾರಕ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಡಾ. ಹಾಮಾನಾ ಅವರಿಂದ ಸನ್ಮಾನ



ಕನ್ನಡ-ಕನ್ನಡ ನಿಘಂಟು ಸಂಪುಟ- ೮ರ ಬಿಡುಗಡೆ ಸಮಾರಂಭದಲ್ಲಿ ಪ್ರೊ.ಎ.ಎನ್. ಮೂರ್ತಿರಾವ್‌ರವರಿಂದ ಸನ್ಮಾನ



ಪ್ರೊ.ಎಸ್.ಬಸವಾರಾಧ್ಯರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



೧೯೯೭ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮುಖ್ಯಮಂತ್ರಿ ಶ್ರೀ.ಜೆ. ಹೆಚ್. ಪಟೇಲ್ ಅವರಿಂದ



ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಪ್ರೊ.ಎನ್. ಬಸವಾರಾಧ್ಯ ಅವರ ಸಮಗ್ರ ಸಾಹಿತ್ಯ ಸಮೀಕ್ಷೆ
ಹಾಗೂ ಶ್ರೇಷ್ಠಸಾಹಿತಿ ಪ್ರಶಸ್ತಿ ಪ್ರದಾನ



ರಾಜಾಜಿನಗರದಲ್ಲಿ ನಡೆದ ಮೂರನೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ



ಕನಕಪುರದಲ್ಲಿ ನಡೆದ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ
ಮುಖ್ಯಮಂತ್ರಿ ಶ್ರೀ ಜೆ.ಹೆಚ್. ಪಟೇಲ್‌ರವರಿಂದ



ಕನಕಪುರದಲ್ಲಿ ನಡೆದ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಿ.ಜಿ.ಆರ್. ಸಿಂಧ್ಯಾ, ಸಿದ್ಧರಾಮಯ್ಯ,
ಡಾ.ಎಸ್.ಎಲ್. ಭೈರಪ್ಪ, ಡಿ.ಕೆ. ಶಿವಕುಮಾರ್, ಮುಮ್ಮಡಿ ನಿರ್ವಾಣ ಸ್ವಾಮಿಗಳೊಂದಿಗೆ ಶ್ರೀ ಎನ್. ಬಸವಾರಾಧ್ಯ ಅವರು



ಕನಕಪುರದಲ್ಲಿ ನಡೆದ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಡಾ.ಎಸ್.ಎಲ್. ಭೈರಪ್ಪನವರೊಂದಿಗೆ



ಶ್ರೀ ಡಿ.ಕೆ. ಶಿವಕುಮಾರ್‌ರವರಿಂದ ಪ್ರೊ.ಎಸ್.ಬಸವಾರಾಧ್ಯ ಅವರಿಗೆ ಸನ್ಮಾನ



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್‌ರವರ ಜೊತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ.ಎನ್. ಬಸವಾರಾಧ್ಯ ಅವರು ಮಾತುಕತೆ ನಡೆಸುತ್ತಿರುವುದು



'ಶಿವಕಮಲ ಪ್ರಶಸ್ತಿ' ಕಾಶೀ ಜಗದ್ಗುರುಗಳವರಿಂದ



ಪಿ.ಜಿ.ಆರ್. ಸಿಂಧ್ಯಾ ಅವರು ಪ್ರೊ.ಎನ್. ಬಸವಾರಾಧ್ಯ ಅವರನ್ನು ಸನ್ಮಾನಿಸುತ್ತಿರುವುದು



ಶ್ರೀ ಟಿ.ಎಸ್. ರೇವಣ್ಣ ಶ್ರೀಮತಿ ರೇವಮ್ಮ ಧರ್ಮದತ್ತಿಯವರಿಂದ ಸನ್ಮಾನ



ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಮತ್ತು ಶ್ರೀ ಈಶ್ವರ ದೇವರು ಅವರೊಂದಿಗೆ ಪ್ರೊ.ಎಸ್. ಬಸವಾರಾಧ್ಯರು



ಸಿದ್ಧಾಂತ ಶಿಖಾಮಣಿ ಗ್ರಂಥ ಬಿಡುಗಡೆಯ ಸಮಾರಂಭ

ವ್ಯಕ್ತಿತ್ವ ದರ್ಶನ

ಪ್ರೊ. ಎನ್. ಬಸವಾರಾಧ್ಯ-
ಸಾತ್ವಿಕ ಸರಳ ಜೀವಿ

-ಡಾ. ಎಂ. ಚಿದಾನಂದ ಮೂರ್ತಿ

ಕಳೆದ ನಾಲ್ಕು ದಶಕಗಳಿಂದ ನಾನು ಹತ್ತಿರದಿಂದ ಬಲ್ಲ ಹಿರಿಯ ಗೆಳೆಯ ಪ್ರೊ. ಎನ್. ಬಸವಾರಾಧ್ಯ ವಿದ್ವತ್‌ಕ್ಷೇತ್ರದ ಶ್ರಮಜೀವಿ. ಅವರು ವೃತ್ತಿಯಾಗಿ, ಅಂತೆಯೇ ಪ್ರವೃತ್ತಿಯಾಗಿ ಆರಿಸಿಕೊಂಡ ಮುಖ್ಯ ಕ್ಷೇತ್ರ ಹಸ್ತಪ್ರತಿ ಶಾಸ್ತ್ರ ಮತ್ತು ಅದರ ಅಂಗವಾದ ಗ್ರಂಥಸಂಪಾದನೆ. ಆ ಕ್ಷೇತ್ರದಲ್ಲಿ ಅವರಿಗೆ ಮಾರ್ಗದರ್ಶಕರಾಗಿದ್ದ ಪ್ರೊ. ಡಿ.ಎಲ್. ನರಸಿಂಹಾಚಾರ್ ಹಾಗೂ ಶ್ರೀ ಎಚ್. ದೇವೀರಪ್ಪನವರು ಶಿಸ್ತಿನ ಅಧ್ಯಯನಕ್ಕೆ ಹೆಸರಾಗಿದ್ದವರು; ಮತ್ತು ಅವರು ಗ್ರಂಥಸಂಪಾದನಾ ಶಾಸ್ತ್ರಕ್ಕೆ ನೀಡಿದ ಕೊಡುಗೆಗಳು ಹಲವು ಅಮೂಲ್ಯ ಮತ್ತು ಇಂದಿಗೂ ಯುವ ಸಂಶೋಧಕರಿಗೆ ಸ್ಫೂರ್ತಿಯ ತಾಣಗಳು. ಆ ಮಾರ್ಗದಲ್ಲಿ ನಡೆದಿರುವ ಬಸವಾರಾಧ್ಯರು ಅಷ್ಟೇ ಬೆಲೆ ಬಾಳುವ ಕೊಡುಗೆಗಳನ್ನು ನೀಡಿದ್ದಾರೆ. ಹಸ್ತಪ್ರತಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಕೆಲವೊಮ್ಮೆ ಭೂತಗನ್ನಡಿಯಿಂದ ಓದಿ ಪ್ರತಿಮಾಡಿ, ಬೇರೆ ಬೇರೆ ಪ್ರತಿಗಳ ಭಿನ್ನ ಪಾಠಗಳನ್ನು ತೌಲನಿಕವಾಗಿ ಪರಿಶೀಲಿಸಿ ಕವಿಯ ಅಥವಾ ಲೇಖಕನ ಮೂಲಪಾಠವನ್ನು ನೀಡುವುದು ಅಪಾರ ಶ್ರಮವನ್ನು ನಿರೀಕ್ಷಿಸುತ್ತದೆ. ಅಂತಹ ಶ್ರಮಕ್ಕೆ ಇನ್ನೊಂದು ಹೆಸರು ಬಸವಾರಾಧ್ಯರು. ಕನ್ನಡ ಗ್ರಂಥ ಸಂಪಾದನೆಯ ಕ್ಷೇತ್ರ ಬೆಳೆದು ಬಂದಿರುವ ಇತಿಹಾಸವನ್ನು ಯಾರಾದರೂ ಬರೆದರೆ ಅದರಲ್ಲಿ ಬಸವಾರಾಧ್ಯರ ಹೆಸರು ಪ್ರಮುಖವಾಗಿ ಉಲ್ಲೇಖವಾಗಬೇಕು; ಆಗಲೇ ಉಲ್ಲೇಖಗೊಂಡೂ ಇದೆ.

ಅಂತೆಯೇ ಅವರು ನಿಘಂಟು ಕ್ಷೇತ್ರಕ್ಕೆ ನೀಡಿರುವ ಕಾಣಿಕೆಗಳೂ ಮಹತ್ವದವು. ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡು ಮುಗಿಸಿರುವ ಒಂದು ಮಹತ್ವದ ಯೋಜನೆ. ಆ ನಿಘಂಟಿನ ಸಂಪಾದಕ ಸಮಿತಿಯ ಸಂಪಾದಕರಾಗಿ ಅವರು ಕೆಲಸ ಮಾಡಿರುವುದನ್ನು ನಾನು ಪ್ರತ್ಯಕ್ಷವಾಗಿ ಹತ್ತಿರದಿಂದ ಕಂಡಿದ್ದೇನೆ. ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ಐದು

ಅಥವಾ ಆರರವರೆಗೆ ಇತರ ಕಚೇರಿ ಸಿಬ್ಬಂದಿಯೊಡನೆ ಕುಳಿತು ಕೃತಿಗಳ ಪ್ರಯೋಗಗಳನ್ನು ಪರಿಶೀಲಿಸುವುದು, ಇತರ ನಿಘಂಟುಗಳನ್ನು ಪರಿಶೀಲಿಸಿ ಪದಗಳಿಗೆ ಅರ್ಥನಿರ್ಣಯಿಸುವುದು, ತಾಳ್ಮೆಯಿಂದ ಎಲ್ಲವನ್ನೂ ಪ್ರತಿ ಮಾಡಿ ತಿಂಗಳ ಕೊನೆಯಲ್ಲಿ ನಡೆಯುತ್ತಿದ್ದ ನಿಘಂಟು ಸಂಪಾದಕ ಸಮಿತಿಯ ಸದಸ್ಯರಿಗೆ ಕಳುಹಿಸಿಕೊಡುವುದು ಈ ಕೆಲಸಗಳಲ್ಲಿ ತನ್ಮಯರಾಗಿರುತ್ತಿದ್ದರು. ನಿಘಂಟು ಸಮಿತಿಯ ಚರ್ಚೆಗಳಲ್ಲಿ ಅವರ ಮಾತಿಗೆ ಬೆಲೆಯಿತ್ತು. ಕನ್ನಡ ಸಾಹಿತ್ಯ ಪರಿಷತ್ತು ಅವರ ವಿದ್ವತ್ತನ್ನು ಗುರುತಿಸಿ ಅವರ ಸೇವೆಯನ್ನು ಸರಿಯಾಗಿಯೇ ಬಳಸಿಕೊಂಡಿತು. ಅಂತಹ ನಿಘಂಟಿನ ಪರಿಷ್ಕರಣ ಕಾರ್ಯ ಮುಂದುವರಿಯಬೇಕಾಗಿದೆ.

ಅವರು ಪರಿಷತ್ತಿನ ಅಧ್ಯಕ್ಷರಾಗಿ ಆ ಸ್ಥಾನದ ಘನತೆಗೆ ಚ್ಯುತಿ ಬಾರದಂತೆ ಕಾರ್ಯ ನಿರ್ವಹಿಸಿದರು. ವ್ಯಕ್ತಿಯಾಗಿ ಅವರು ನಿಗರ್ವಿಗಳು, ಮೃದು ಸ್ವಭಾವದವರು, ನೇರ ನಿಷ್ಠುರ ಆದರೆ ನಾಗರಿಕ ಭಾಷೆಯ ಮಾತಿನವರು, ಸದಾ ಅಧ್ಯಯನಶೀಲರು ಹಾಗೂ ಉದಾರಿಗಳು. ವಿದ್ವತ್ ಕ್ಷೇತ್ರದಲ್ಲಿ ಅವರು ಡಿ.ಎಲ್.ಎನ್., ತೀ.ನಂ.ಶ್ರೀ.ಯವರ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿ, ನ್ಯಾಯವಾಗಿ ಸಂಪೂರ್ಣ ವಿಶ್ರಾಂತಿಯಲ್ಲಿರಬೇಕಾದ ವಯಸ್ಸಿನಲ್ಲಿ ಅವರು ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಅಹರ್ನಿಶಿ ದುಡಿಯುತ್ತಿದ್ದಾರೆ; ಆ ದೃಷ್ಟಿಯಿಂದ ಅವರು ಇತರರಿಗೆ ಒಂದು ಮಾದರಿಯಾಗಿದ್ದಾರೆ. ಅವರು ಆರೋಗ್ಯವಂತರಾಗಿ ನೂರ್ಕಾಲ ಬಾಳಲಿ, ಅವರಿಂದ ಪ್ರಾಚೀನ ಕೃತಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹೊರಬರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

XXX

ಎನ್. ಬಸವಾರಾಧ್ಯರ ಆತಿಥ್ಯ -ಒಂದು ಸವಿನೆನಪು

-ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ನನ್ನ ಆತ್ಮೀಯರಲ್ಲೊಬ್ಬರಾದ ಎನ್. ಬಸವಾರಾಧ್ಯರಲ್ಲಿ ಎರಡು ಪ್ರಧಾನ ಮುಖಗಳಿವೆ. ಒಂದು, ನಿಘಂಟು ಶಾಸ್ತ್ರದಲ್ಲಿ ಅವರಿಗಿರುವ ಪ್ರಾವೀಣ್ಯ. ಅದು ಅಪಾರವಾದ ಶ್ರದ್ಧೆ. ಎ.ಆರ್.ಕೃ. ಅಂಥ ವಿದ್ವಾಂಸರಿಂದ ಸಾಣೆ ಹಿಡಿದ ವಿದ್ವತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಏಳು ಮತ್ತು ಎಂಟನೆಯ ಸಂಪುಟಗಳಲ್ಲಿ ಅದು ಎಲ್ಲರಿಗೂ ಢಾಳಾಗಿ ಕಾಣುವಂಥದ್ದು. ಆರನೆಯ ಸಂಪುಟ ಅಚ್ಚಿಗೆ ಹೋದಾಗ ಎಂಟು ಸಂಪುಟಗಳಲ್ಲಿ ಇದು ಮುಗಿಯುವುದೋ ಇಲ್ಲವೊ ಎಂಬ ಸಂದಿಗ್ಧದಲ್ಲಿ ಬಿದ್ದಾಗ ಆ ಗೊಂದಲವನ್ನು ನಿವಾರಿಸಿ ಕನ್ನಡ ಸಾಹಿತ್ಯ ಪರಿಷತ್ತು ನಿಘಂಟಿನ ಬಗ್ಗೆ ಕಂಡ ಕನಸೊಂದನ್ನು ನನಸಾಗಿಸಿದವರು ಅವರು, ಪ್ರಧಾನ ಸಂಪಾದಕರಾಗಿ. ಇರಲಿ.

ಅವರ ವ್ಯಕ್ತಿತ್ವದ ಮತ್ತೊಂದು ಮುಖ ಶರಣನದು. ಅವರ ಮನೆ ದಾಸೋಹದ ಮನೆಯೇ. ಅವರು ನಾಲ್ಕು ಮಕ್ಕಳ ಮದುವೆ ಮಾಡಿದ್ದಾರೆ. ಎಲ್ಲೂ ಕಾಸಿಗೆ ಆಸೆಪಟ್ಟವರಲ್ಲ. ಅದರಲ್ಲೂ ತಮ್ಮ ಇಬ್ಬರು ಗಂಡುಮಕ್ಕಳ ಮದುವೆಯಲ್ಲಿ ಸೊಸೆಯರನ್ನಲ್ಲ ಅವರು ಮನೆ ತುಂಬಿಸಿಕೊಂಡದ್ದು, ಹೆಣ್ಣುಮಕ್ಕಳಿಬ್ಬರನ್ನು. ಇಂದು ಅವರ ಧರ್ಮಪತ್ನಿ ಇಲ್ಲ; ಎರಡು ಮೂರು ವರ್ಷವಾದುವು- ಅವರು ಒಬ್ಬಂಟಿಯಾಗಿ. ಆದರೆ ಮನೆಯಲ್ಲಿರುವ ಮೂವರು ಸೊಸೆಯರೂ ಸೊಸೆಯರಲ್ಲ, ಆರಾಧ್ಯರ ಸ್ವಂತ ಹೆಣ್ಣುಮಕ್ಕಳಾಗಿಬಿಟ್ಟಿದ್ದಾರೆ. ಅವರ ಒಂಟಿತನದ ಅರಿವು ಅವರಿಗಾಗದಂತೆ ಪ್ರೀತ್ಯಭಿಮಾನ ಗೌರವಗಳಿಂದ ನೋಡುತ್ತಿದ್ದಾರೆ. ಇಲ್ಲಿ ಅವರ ಸೊಸೆಯಂದಿರ ಪ್ರೀತಿ ಹೆಚ್ಚೊ ಮಾವನಾಗಿರುವ ಆರಾಧ್ಯರ ವಾತ್ಸಲ್ಯ ಹೆಚ್ಚೋ ಎಂದು ತಕ್ಕಡಿಗೆ ಹಾಕಿದರೆ ತಕ್ಕಡಿಯೆ ತಟಸ್ಥವಾಗಿಬಿಡುತ್ತದೆ. ನಾನೇಕೆ ಅಯೋಗ್ಯ ಅನ್ನಿಸಿಕೊಳ್ಳಲಿ ಎಂದು. ಅಂಥ ಪ್ರೀತಿ ತುಂಬಿದ ಶರಣ ಹೃದಯ ಅವರದು. ಅವರ ಸ್ನೇಹಪರತೆ ಔದಾರ್ಯಗಳನ್ನು ನೆನಪು ಮಾಡಿಕೊಳ್ಳುವುದು ಎಂದರೆ ನೆನಪಿನ ಉಗ್ರಾಣದಿಂದ ಒಂದೊಂದಾಗಿ ಸವಿಯುಕ್ಕಿಸುವ ಘಟನೆಗಳನ್ನು ಮೆಲುಕು ಹಾಕಿ ಹಿಗ್ಗುವುದು. ಅಂಥವುಗಳಲ್ಲಿ ಒಂದನ್ನು ಮಾತ್ರ ಇಲ್ಲಿ ನೆನೆಪಿಸಲು ಯತ್ನಿಸುತ್ತೇನೆ.

ಅದು ನೀನು ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನಲ್ಲಿ ಪ್ರಿನ್ಸಿಪಾಲನಾಗಿದ್ದ ಕಾಲ. ೧೯೭೫ರ ಬೇಸಿಗೆಯ ರಜೆ. ನಾನಾಗ ಬಿ.ಎ., ಬಿ.ಎಸ್ಸಿ. ಪದವಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಪ್ರಧಾನ ಮೌಲ್ಯಮಾಪಕನಾಗಿದ್ದೆ. ಒಂದನೆಯ ವರ್ಷದ ಪದವಿಯೊ ಎರಡನೆಯ ವರ್ಷದ ಪದವಿಯೊ ಖಚಿತವಾಗಿ ಹೇಳಲಾರೆ. ಆಗ ನನಗೆ ಸಹಾಯಕರಾಗಿದ್ದವರಲ್ಲಿ ಮುಖ್ಯರು ಎ.ಆರ್. ಮಿತ್ರ ಎನ್ನುವವರು. ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಮಗೆಲ್ಲ ಒಂದು ಸಾಂಸ್ಕೃತಿಕ ಮಹತ್ವದ ಕೆಲಸ ಆಗಿತ್ತು. ಆಗ ಬಹುಶಃ ಒಂದು ತಿಂಗಳು ಇಡಿಯಾಗಿ ಮೌಲ್ಯಮಾಪನ ನಡೆದಿತ್ತು. ಆ ಕಾರ್ಯಭಾರದ ಹೊರೆಯಿಳಿಸುವುದಕ್ಕಾಗಿ ನಾನು ಹಾಗೂ ಮಿತ್ರ ಒಂದು ಉಪಾಯ ಹೂಡಿದ್ದೆವು.

ಬೆಳಗಿನ ಜಾವದ ಕಾಫಿಯಂತು ಗಂಗೋತ್ರಿಯ ಅತಿಥಿ ಗೃಹದಲ್ಲೆ ನಡೆಯುತ್ತಿತ್ತು. ಬೆಳಗಿನ ಜಾವ ೫ ಅಥವಾ ೫೧/೨ ಗಂಟೆಗೆ ಸರಿಯಾಗಿ ನಮ್ಮ ಕೋಣೆಯ ಬಾಗಿಲನ್ನು ಯಾರೊ ಬಡಿದಂತಾಗುತ್ತಿತ್ತು. ಎದ್ದುನೋಡಿದರೆ- ಬಸವಾರಾಧ್ಯ ಮತ್ತವರ ಇಬ್ಬರು ಮಿತ್ರರು. ಆ ಅವರಿಬ್ಬರು ಮಿತ್ರರು ಈಗ ಬದುಕುಳಿದಿಲ್ಲ. ನಮ್ಮ ಆರಾಧ್ಯರು ನಮ್ಮೊಂದಿಗಿದ್ದಾರೆ. ಅವರು ಬೆಳಗಿನ ಟೀ ಕುಡಿದು ವಾಯುವಿಹಾರ ಮುಗಿಸಿ ಹೊರಡುವರು- ನಾವೂ ಅವರ ಜೊತೆಗೇ ಹೊರಡುತ್ತಿದ್ದೆವು. ಆಗತಾನೆ ರೂಪುಗೊಂಡಿದ್ದ ಅತಿಥಿಗೃಹದ ಮಗ್ಗುಲಲ್ಲೆ ಕ್ರೀಡಾಂಗಣವೊಂದಿತ್ತು; ಈಗಲೂ ಇದೆ. ಅಲ್ಲಿ ಹೋಗುತ್ತಲೆ ಆರಾಧ್ಯರ ಮಂಗಾಟದ್ದೇ ಒಂದು ಹಿಗ್ಗು. ಅವರು ಮೆಟ್ಟಿಲೇರುವುದು, ಮೆಟ್ಟಿಲಿಳಿಯುವುದು, ಆಮೇಲೆ ಕಾಲುಗಳನ್ನು, ಅದಾದ ಮೇಲೆ ಕೈಗಳನ್ನು ತೂರಾಡುವ ಮತ್ತು ತಿರುಗಿಸುವ ಅವರದೇ ಆದ ರೀತಿಯ ವ್ಯಾಯಾಮ ಅವರದು. ಅಲ್ಲಿಂದ ಅವರು ಮನೆಗೆ ಹೋಗುವರು.

ಆದರೆ ನನ್ನ ಮತ್ತು ನನ್ನ ಮಿತ್ರರದು ಬೇರೆಯದೇ ಯೋಜನೆ. ಒಂದು ತಿಂಗಳು ಮೌಲ್ಯಮಾಪನ ನಡೆಯಿತು ಎಂದೆನಲ್ಲವೆ? ಆ ಒಂದು ತಿಂಗಳು ಪೂರಾ ದಯವಿಟ್ಟು ನಗಬೇಡಿ, ನಾವೆಂದೂ ಬೆಳಗಿನ ತಿಂಡಿಯನ್ನಾಗಲಿ ರಾತ್ರಿಯ ಊಟವನ್ನಾಗಲಿ ಅತಿಥಿ ಗೃಹದಲ್ಲಿ ನಡೆಸಿದ್ದೇ ಇಲ್ಲ. ಮಧ್ಯಾಹ್ನದ ಊಟ ಮಾತ್ರ ಗಂಗೋತ್ರಿಯಲ್ಲಿರುವ ಉಪಾಹಾರ ಗೃಹದಲ್ಲಿ. ಹಾಗೆ ಮುವತ್ತು ದಿನಗಳ ಬೆಳಗಿನ ತಿಂಡಿ, ಬೆಳಗಿನ ತಿಂಡಿ, ಅದನ್ನು ತಿಂಡಿ ಎನ್ನುವುದಕ್ಕಿಂತ ಊಟ ಎನ್ನಬಹುದೇನೋ! ಅಂದರೆ ತಿಂಡಿ+ಊಟ ಎರಡು ಪದಗಳನ್ನು ಸೇರಿಸಿ ಮಾಡಿದ ಪದ ಆ 'ತೂಟ' ಎಂಬುದು.

ಆ ಮುವತ್ತು ದಿನಕ್ಕೆ ನಾನು ಮತ್ತು ಮಿತ್ರ ಕುಳಿತು ಒಂದು ಟೈಮ್‌ಟೇಬಲ್ ಹಾಕಿದೆವು, ಮೈಸೂರಿನಲ್ಲಿರುವ ನಮ್ಮ ಮಿತ್ರರ ಮನೆಯ ಪಟ್ಟಿಯನ್ನು ಮುಂದಿಟ್ಟುಕೊಂಡು. ಬಹುಶಃ ಎರಡು ಅಥವಾ ಮೂರನೆ ದಿನದ ಬೆಳಗಿನ 'ತೂಟ'ದ ವ್ಯವಸ್ಥೆ ಬಸವಾರಾಧ್ಯರ ಮನೆಯಲ್ಲಿ. ಸುಮ್ಮನೆ ವ್ಯವಸ್ಥೆ ಎಂದರೆ ಏನೇನೂ ಅರ್ಥವಾಗುವುದಿಲ್ಲ. ಒಂದು ಯೋಜಿತ ಕಾರ್ಯಕ್ರಮ. ಇಂದು ಪೂರಿ ಸಾಗು ತಿಂದರೆ, ಮಾರನೆಯ ದಿನ ಉಪ್ಪಿಟ್ಟು ಮೊಸರು ಉಪ್ಪಿನಕಾಯಿ. ಅದರ ಮುಂದಿನ ದಿನ ಚಪಾತಿ ಚಟ್ನಿ ಹಾಗೂ ಸಾಗು. ಅದರ ಮುಂದಿನ ದಿನ ದೋಸೆ ಪಲ್ಯ ಮತ್ತು ಚಟ್ನಿ. ಮುಂದಿನ ದಿನ ಇಡ್ಲಿ, ಚಟ್ನಿ ಮತ್ತು ಸಾಗು. ಇಷ್ಟಲ್ಲದೆ ಪ್ರತಿಯೊಂದರ ಜೊತೆಗೂ ಒಳ್ಳೆಯ ತುಪ್ಪ ಇದ್ದರೆ; ಇಲ್ಲವೆ; ಹೊಸ ಹೊಸ ಬೆಣ್ಣೆಯ ಸಣ್ಣ ದಿಬ್ಬ. ಹೀಗೇ ಈ ಪಟ್ಟಿ ಬೆಳೆಯುವುದು. ಆಶ್ಚರ್ಯ ಎಂದರೆ ನಮ್ಮ ಮಿತ್ರರು ಯಾರಾದರೂ ಎದುರು ಸಿಕ್ಕರೆ ನಮ್ಮ ಪ್ರಶ್ನೆ- 'ನೀವು ನಾಳೆ ಬೆಳಿಗ್ಗೆ ಬಿಡುವಾಗಿದ್ದೀರಾ?' ಅವರು ಹೂ ಎನ್ನುತ್ತಿದ್ದಂತೆ ನಮ್ಮ ಮುಂದಿನ ವಿವರ- ಹಾಗಾದರೆ ನಾವಿಬ್ಬರೂ ಬೆಳಿಗ್ಗೆ ೮ ಗಂಟೆಗೆ ಸರಿಯಾಗಿ ನಿಮ್ಮ ಮನೆಗೆ ಬರುತ್ತೇವೆ, ತಿಂಡಿಗೆ. ಅವರು ದಿಙ್ಮೂಢರಾಗುವ ಮೊದಲೇ ನಾವು ಮುಂದುವರಿಸುತ್ತಿದ್ದೆವು ನಿನ್ನೆ... ಮನೆಯಲ್ಲಿ ಚಪಾತಿ ಸಾಗು ಚಟ್ನಿಯಿತ್ತು. ನಿಮ್ಮ ಮನೆಯಲ್ಲಿ ಬೇರೆ ಮಾಡಿಸು. ಸಂಕೋಚ ಖಂಡಿತ ಬೇಡ ಎಂದು ಅವರನ್ನು ಒಪ್ಪಿಸಿ, ನಮ್ಮ ಪುಣ್ಯ ಇನ್ನೂ ನಮ್ಮ ಪುಣ್ಯ ಹಾಗೇ ಉಳಿದಿದೆ. ಯಾವೊಬ್ಬ ಮಿತ್ರರೂ ನಮ್ಮ ಇಂಥ ವಿನಂತಿಯನ್ನು ಹಾಸ್ಯವೆಂದೋ ತಿರಸ್ಕಾರಯೋಗ್ಯವೆಂದೋ ಭಾವಿಸಲಿಲ್ಲ. ತಿಂಡಿಗೆ ಹೋಗುವುದು.

ಒಂದು ತಿಂಗಳ ಇಂಥದೇ ಆತಿಥ್ಯದಲ್ಲಿ ನಾವಿಬ್ಬರೂ ಕೊಬ್ಬಿ ಹೋಗಿದ್ದೆವು ಎಂದು ಹೇಳಬೇಕಾಗೋವಷ್ಟು. ಇರಲಿ.

ಈಗ ಆರಾಧ್ಯರ ಮನೆಯ ಬೆಳಗಿನ ಉಪಹಾರದ ವಿಷಯಕ್ಕೆ ಬರೋಣ. ನಾವು ಬರುತ್ತೇವೆಂದು ಆರಾಧ್ಯರು ಬಾಗಿಲಲ್ಲಿ ಕಾದಿದ್ದರು; ಗೇಟಿನ ಬಾಗಿಲನ್ನು ತೆರೆದು ಸಮಯಕ್ಕೆ ಸರಿಯಾಗಿ ಮನೆ ಹೊಕ್ಕೆವು. ಆತಿಥ್ಯ ಅಂದರೆ ಅದು ರಾಜಾತಿಥ್ಯ ಎನ್ನಬೇಕು. ಬಿಸಿ ಬಿಸಿ ನೀರು ಕೈಕಾಲು ತೊಳೆಯಲು; ಅದನ್ನೊರೆಸಿಕೊಳ್ಳಲು ಟವಲ್. ಮಹಾಸ್ವಾಮಿಗಳನ್ನು ಸ್ವಾಗತಿಸುವಂತೆ ನಮ್ಮಿಬ್ಬರನ್ನೂ ಒಳಕ್ಕೆ ಕರೆದೊಯ್ದರು. ಎರಡು ಹರಿವಾಣದಂಥ ತಟ್ಟೆಗಳು. ಒಂದೊಂದು ತಟ್ಟೆಯ ಪಕ್ಕದಲ್ಲಿ ಒಂದೊಂದು ತಂಬಿಗೆಯ ತುಂಬ ಕಾದು ಆರಿಸಿದ ನೀರು; ಕುಡಿಯಲಿಕ್ಕೆಂದು ಒಂದೊಂದು ಲೋಟ. ಕುಳಿತುಕೊಳ್ಳುತ್ತಿದ್ದಂತೆ ಬಿಸಿಬಿಸಿಯಾಗಿ ಹಬೆಯಾಡುವ ಇಡ್ಡಲಿಗಳು; ತಟ್ಟೆಯ ಇಡ್ಡಲಿಗಳಲ್ಲ; ಉಂಡೆ ಇಡ್ಡಲಿಗಳು. ಒಂದೊಂದು ಇಡ್ಡಲಿಯು ಬೆಣ್ಣೆಯ ಮುದ್ದೆಯ ಹಾಗೆ ಮೃದು; ಮಲ್ಲಿಗೆ ಹಾಗೆ ಅವುಗಳ ಬಣ್ಣ. ಮೊದಲು ನನ್ನ ತಟ್ಟೆಗೆ ಒಂದು ಎರಡು ಮೂರು ಎಂದು ಎಣಿಸಿಯಲ್ಲ; ಸುರಿದರು ಇಡ್ಡಲಿಗಳನ್ನು ಏಳೋ ಎಂಟೋ ಇರಬೇಕು. ನಂಚಿಕೊಳ್ಳಲು ತೆಂಗಿನಕಾಯಿ ಹಸಿರು ಮೆಣಸಿನಕಾಯಿ ಚಟ್ನಿ. ಅದಕ್ಕೊಂದಿಷ್ಟು ಹದವಾಗುವ ಹಾಗೆ ಬೆಳ್ಳುಳ್ಳಿ ಶುಂಠಿಗಳು. ಜೊತೆಗೆ ರುಚಿರುಚಿಯಾದ ಸಾಗು, ತರಕಾರಿಗಳನ್ನು ಹದವಾಗಿ ಬೇಯಿಸಿ ಮಾಡಿದ್ದು; ಇದರ ಮೇಲೆ ಘಮ್ಮೆನ್ನುವ ಮನೆಯಲ್ಲಿ ಹದವಾಗಿ ಬೆಣ್ಣೆಯನ್ನು ಕಾಯಿಸಿ ಸಿದ್ಧಪಡಿಸಿದ ಹರಳುಹರಳಾದ ಹಸುವಿನ ತುಪ್ಪ; ಒಂದಿಷ್ಟು ಅರಿಸಿನ ಬೇರೆ ಆ ತುಪ್ಪಕ್ಕೆ ಬಣ್ಣ ಕಟ್ಟಲು. ಇಡ್ಡಲಿಗಳ ಮೇಲೆ ಇಡ್ಡಲಿಗಳು ತಟ್ಟೆಗಿಳಿದವು; ಚಟ್ನಿಯ ಗುಡ್ಡಗಳು ಕರಗಿದವು; ಸಾಗು ಕೂಡ. ಇದೆಲ್ಲದರ ಜೊತೆಗೆ ತುಪ್ಪ ಬೇರೆ. ಆ ತುಪ್ಪಕ್ಕಿಂತ ಹೆಚ್ಚು ರುಚಿಯಾದದ್ದು ನಿಧಾನವಾಗಿ ತಿನ್ನಿ; ಚೆನ್ನಾಗಿ ತಿನ್ನಿ ಎನ್ನುವ ಉತ್ಸಾಹದ ಪ್ರೋತ್ಸಾಹ- ಆರಾಧ್ಯರದು. ನಾನು ಒಂದಿಪ್ಪತ್ತು, ಮಿತ್ರ ಒಂದಿಪ್ಪತ್ತು ಇಡ್ಲಿ ಮುಗಿಸಿ ಪಕ್ಕದಲ್ಲಿ ಉಳಿದ್ದ ಚಟ್ನಿ ಮತ್ತು ತುಪ್ಪವನ್ನು ನೆಕ್ಕಿ ಬೆರಳನ್ನು ಚೀಪುತಿದ್ದೆವು.

ಮೈತ್ರಿಯ ಜೊತೆಗೆ ಸಾಕಷ್ಟು ಚೇಷ್ಟೆಯ ಸ್ವಭಾವವೂ ಇದ್ದವರು ಮಾನ್ಯ ಆರಾಧ್ಯರು. ಅಂದರೆ ನಾವು ಬಹಳ ಸಭ್ಯಸ್ಥರೆಂದೇನೂ ಅಲ್ಲ. ಹಾಗೆ ಕುಳಿತಾಗ ಏನೆನ್ನಿಸಿತೊ ಆರಾಧ್ಯರಿಗೆ ಮೆಲ್ಲನೆ ರೇಗಿಸುವ ದನಿಯಲ್ಲಿ ಪ್ರಶ್ನಿಸಿದರು, ನಗುನಗುತ್ತಲೆ 'ಅತಿಥಿಗಳು ಎಂದು ಬಂದಿರಿ, ತಿಥಿ ಮಾಡಿದ್ದು ಸಾಲದೆ? ಇನ್ನೂ ಏನು ಮಾಡಬೇಕೆಂದಿದ್ದೀರಿ' ಎಂದು ಹುಸಿಮುನಿಸು ತೋರಿದರು. ನಾವೇನು ಅದಕ್ಕೆ ಹೆದರುವವರಾಗಿರಲಿಲ್ಲ.

'ಹಾಗಾದರೆ ನೀವು ಉಪಹಾರಕ್ಕೆ ಕರೆದದ್ದೇಕೆ?' ನಮ್ಮ ಪ್ರಶ್ನೆ.

'ಅಲ್ಲಯ್ಯ! ನಿಮ್ಮನ್ನು ಕರೆದವರು ಯಾರು? ನೀವೇ ಬರುತ್ತೇವೆಂದು ಆಗ್ರಹ ಮಾಡಿದವರಲ್ಲವೆ?'

'ಬರಬೇಡಿ ಅನ್ನಬೇಕಾಗಿತ್ತು. ಬಂದಮೇಲೆ ಹೀಗೆ ಮಾಡುವುದು ಮರ್ಯಾದೆಯೆ?'

'ಅದು ಸರಿ. ಮನೆಗೆ ಬಂದು ಮಾಡಿದ್ದನ್ನೆಲ್ಲ ಬಕಾಸುರರಂತೆ ತಿನ್ನುವುದು ಮರ್ಯಾದೆಯೆ?'

'ತಿಂದಿರಬಹುದು ಏನು ತಿಂದಿದ್ದೀವಿ. ಇನ್ನೂ ತಿನ್ನುತ್ತೇವೆ- ತನ್ನಿ ಇನ್ನಷ್ಟು ಇಡ್ಲಿ ಚಟ್ನಿ ತುಪ್ಪ ಸಾಗು.'

ಆರ್ಭಟಿಸುವವರಂತೆ ಆರಾಧ್ಯರು ರೇಗಿದರು- 'ಎದ್ದೇಳಿ ಮೇಲಕ್ಕೆ ನಡೆಯಿರಿ ಹೊರಕ್ಕೆ.'

'ನಾನೇಕೆ ಹೋಗಬೇಕು ಹೊರಕ್ಕೆ- ಬೇಕಾದರೆ ನೀವೇ ಹೋಗಿ' ಎಂದು ನಾನು ಮಿತ್ರ ಇಬ್ಬರೂ ಅವರನ್ನು ದಬ್ಬಿಕೊಂಡು ಗೇಟಿನವರೆಗೆ ಹೋದೆವು. ಆರಾಧ್ಯರಿಗೆ ಏನು ಹೊಳೆಯಿತೊ, ತಟ್ಟನೆ ಒಳನುಗ್ಗಿ ಗೇಟು ಮುಚ್ಚಿ ಚಿಲಕ ಹಾಕಿಬಿಟ್ಟರು. ನಾವೇನು ಕಡಿಮೆಯೆ? ಗೇಟನ್ನು ಹತ್ತಿ ಒಳಕ್ಕೆ ಹೋದೆವು. ಇಷ್ಟೆಲ್ಲ ನಡೆಯುತ್ತಿದ್ದಂತೆ ಇದೇನು ಜಗಳ ಎಂದು ಅಕ್ಕಪಕ್ಕದ ಮನೆಯವರು ಮತ್ತೆ ಆರಾಧ್ಯರ ಮನೆಯಾಕೆ- ಎಲ್ಲರೂ ಅಲ್ಲಿಗುಂಪು ಸೇರಿದರು. ಆರಾಧ್ಯರ ಗೃಹಿಣಿ- ನಿಜವಾದ ಅರ್ಥದಲ್ಲಿ

ಗೃಹಿಣಿಯಾದವರು ಆಕೆ. ಅವರು ನಿಜವಾಗಿ ಅನ್ನಪೂರ್ಣೆ. ಅವರು ಕೈಯಿಟ್ಟ ಅಡಿಗೆಗೆ ಅಮೃತದ ರುಚಿ. ತಮ್ಮ ಪತಿದೇವರಾದ ಆರಾಧ್ಯರ ಮೇಲೆ ಮುನಿಸು ತೋರುತ್ತ ಇದೇ ಏನ್ರಿ ನಿಮ್ಮ ಆತಿಥ್ಯ? ಇನ್ನೂ ಇಡ್ಡಲಿಗಳ ಬುಟ್ಟಿ ತುಂಬಿಯೇ ಇದೆ. ತುಪ್ಪದ ಪಾತ್ರೆ ತುಂಬಿದೆ. ಚಟ್ನಿ ಹಾಗೂ ಸಾಗು ಸಿದ್ಧವಿದೆ- ಒಳಕ್ಕೆ ಬನ್ನಿ- ಮೂವರೂ ಕುಳಿತು ಸಾವಧಾನವಾಗಿ ಸ್ವೀಕರಿಸಿ ಎಂದರು. ಆರಾಧ್ಯರೂ ನಗುನಗುತ್ತಲೇ ನನ್ನ ಕೈಯಿಂದ ನೀವು ಇದು ಬದುಕಿಕೊಂಡು ಮರ್ಯಾದೆ ಉಳಿಸಿಕೊಂಡಿರಿ ಎಂದು ನಗುನಗುತ್ತ, ನಮ್ಮಿಬ್ಬರನ್ನು ಕೈಹಿಡಿದೆಳೆದುಕೊಂಡು ಹೋಗಿ ಮತ್ತೆ ಕಂಠಪೂರ್ತಿಯಾಗುವ ಹಾಗೆ ಇಡ್ಡಲಿಗಳನ್ನು ಬಡಿಸಿದರು. ತುಪ್ಪ, ಚಟ್ನಿ ಹಾಗೂ ಸಾಗು ಅವುಗಳ ಜೊತೆ ಇದ್ದವೆಂದು ಹೇಳಬೇಕಾಗಿಲ್ಲ. ಸುಮಾರು ಹೊತ್ತು ಕಷ್ಟಪಟ್ಟು ಇನ್ನಷ್ಟು ಇಡ್ಡಲಿಗಳನ್ನು ತಿನ್ನುವ ವೇಳೆಗೆ ನಮ್ಮ ಮುಂದೆ ನಂಜನಗೂಡಿನ ರಸಬಾಳೆ ಹಣ್ಣು, ಮೈಸೂರು ಚಿಗುರೆಲೆ, ಶಿವಮೊಗ್ಗೆಯ ಸಣ್ಣಡಕೆ ಬೆಳ್ಳಿಯ ಸುಣ್ಣದ ಡಬ್ಬಿ ಸಿದ್ಧವಾಗಿದ್ದುವು. ಸ್ವಾಮಿಗಳಿಗೆ ಊಟೋಪಚಾರಗಳಾದ ಮೇಲೆ ನಡೆಸುವ ಸಾಷ್ಟಾಂಗವೊಂದು ಮಾತ್ರ ಇರಲಿಲ್ಲ. ಒಳ್ಳೆ ಭರ್ಜರಿಯಾದ ತಿಂಡಿ ತಿಂದು ಅಲ್ಲಿಂದ ನಡೆದೇ ಹೋದೆವು. ಮಹಾರಾಜ ಕಾಲೇಜಿಗೆ ಮೌಲ್ಯಮಾಪನಕ್ಕೆ ಹೊರಡುವಾಗ ಮತ್ತೆ ಆರಾಧ್ಯರು ಹೇಳಿದ್ದು- “ನೋಡಿ ಯಾರ ಮನೆಯಲ್ಲಾದರೂ ನಿಮಗೆ ತಿಂಡಿ ಅಥವಾ ರಾತ್ರಿಯ ತಿಂಡಿಯ ‘ವಾರ’ ತಪ್ಪಿದರೆ ಖಂಡಿತ ನಾಚಿಕೊಳ್ಳಬೇಡಿ. ನಮ್ಮ ಮನೆ ಸದಾ ನಿಮಗಾಗಿ ತೆರೆದಿದೆ. ಆದರೆ ಬರುವ ಮೊದಲು ಸ್ವಲ್ಪ ತಿಳಿಸಿ. ಇಲ್ಲದಿದ್ದರೆ ನಿಮ್ಮ ಬಕಾಸುರ ಹೊಟ್ಟೆಗೆ ತೃಪ್ತಿಪಡಿಸುವುದು ಕಷ್ಟವಾದೀತು.” ಅವರ ಔದಾರ್ಯ ಅಂದಿನದಲ್ಲ. ಇಂದೂ ಅವರ ಮನೆಗೆ ಹೋದರೆ; ತಿಳಿಸಿ ಹೋದರೆ ಮಾತ್ರ ಅಲ್ಲ, ಆಕಸ್ಮಿಕವಾಗಿ ಹೋದರೂ ತಿಂಡಿಯ ವೇಳೆಗೆ ಪುಷ್ಕಳವಾಗಿ ತಿಂಡಿ; ಊಟದ ವೇಳೆಯಾದರೆ ಪುಷ್ಕಳವಾದ ಊಟ ತಮ್ಮನ್ನು ಆಹ್ವಾನಿಸುತ್ತದೆ. ಆರಾಧ್ಯರು ಶರಣರ ದಾಸೋಹ ಪರಂಪರೆಯನ್ನು ಇಂದಿಗೂ ಪ್ರೀತಿ ಅಭಿಮಾನಗಳಿಂದಲೇ ನಡೆಸುತ್ತಾರೆ.

ಅಂಥ ಶರಣ, ಅಂಥ ವಿದ್ವಾಂಸ, ಅದರಲ್ಲೂ ನಿಘಂಟು ಶಾಸ್ತ್ರ ಪ್ರವೀಣ ನನ್ನ ಒಬ್ಬ ಆತ್ಮೀಯ ಎಂದುಕೊಳ್ಳಲು ನಿಜವಾಗಿ ಹೆಮ್ಮೆಯಾಗುತ್ತದೆ.

ಪ್ರೊ. ಎನ್. ಬಸವಾರಾಧ್ಯರು ಹಾಗೂ ನಾನು

-ಡಾ. ಎಸ್.ಜೆ. ನಾಗಲೋಟಿಮಠ

ನನಗೂ ಪ್ರೊ. ಬಸವಾರಾಧ್ಯರಿಗೂ ಇತ್ತೀಚಿನ ಪರಿಚಯ. ಅವರು ಬೆಳೆದದ್ದು ಜೀವಿಸಿದ್ದು ಮೈಸೂರು ಸೀಮೆ. ನಾನು ಬಿರುಸು ಬಿಜಾಪುರದವ. ಅವರು ಕನ್ನಡ ಪ್ರಾಧ್ಯಾಪಕರು, ಕನ್ನಡ ಸಂಶೋಧಕರು ಕನ್ನಡ ಶ್ರೇಷ್ಠ ಪಂಡಿತರು. ನಾನು ಒಬ್ಬ ವೈದ್ಯ. ಆಸ್ಪತ್ರೆಗಳ ನೆರಳಿನಲ್ಲಿ ದುಡಿದವನು. ನಾನು ಕನ್ನಡ ಓದಲು ಬರೆಯಲು ಕಲಿತಿರುವುದು ನಿಜ. ಆದರೆ ಕನ್ನಡವನ್ನು ಅಧ್ಯಯನ ಮಾಡಿದವನಲ್ಲ. ಹೀಗಾಗಿ ನನಗೂ ಹಾಗೂ ಬಸವಾರಾಧ್ಯರಿಗೂ ಸಂಪರ್ಕ ಬರಲೇ ಇಲ್ಲ, ಬಸವಾರಾಧ್ಯರು ಒಳ್ಳೆಯ ಆರೋಗ್ಯ ಇಟ್ಟುಕೊಂಡವರು. ನಾನು ರೋಗ ಗುರಿತಿಸುವಲ್ಲಿ ಪ್ರವೀಣನು. ಅಲ್ಲಿಯೂ ನಮ್ಮ ಸಂಪರ್ಕ ಆಗಲಿಲ್ಲ. ಅವರ ಹೆಸರನ್ನು ಒಂದೆರಡು ಬಾರಿ ಸಭೆಗಳಲ್ಲಿ ಕೇಳಿದ್ದೆ ಮಾತ್ರ.

ಮೊಟ್ಟಮೊದಲಿಗೆ ನಾನು ಅವರನ್ನು ಕಂಡದ್ದು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದಾಗ, ಅವರು ಪ್ರಚಾರ ಮಾಡಿಕೊಳ್ಳಲು ಬಾಗಲಕೋಟೆಗೆ ಆಮಂತ್ರಿಸಿದ್ದಾಗ. ಆ ಸಲ ಅವರು ಅಧ್ಯಕ್ಷರೆಂದು ಆರಿಸಿ ಬಂದರು. ಬಹಳ ಚೆನ್ನಾಗಿ ಆಡಳಿತ ನಡೆಸಿದರು. ತಮ್ಮ ಕಾರ್ಯದಿಂದ ಪರಿಷತ್ತಿಗೆ ಹೆಸರು ತಂದರು.

ಮುಂದೆ ಕನ್ನಡ ಸಾಹಿತ್ಯ ಸಮ್ಮೇಳನ ಬಾಗಲಕೋಟೆಯಲ್ಲಿಯೇ ಜರುಗಿತು. ಸಮ್ಮೇಳನ ಜರುಗಿದಾಗ ನಾನು ಬಾಗಲಕೋಟೆಯಲ್ಲಿಯೇ ಸೇವೆ ಸಲ್ಲಿಸುತ್ತಿದ್ದೆ. ಆಗ ಹಲವಾರು ಬಾರಿ ನಾವು ಕೂಡಿದೆವು ಚರ್ಚಿಸಿದೆವು. ಆಗ ಅವರ ಬಗ್ಗೆ ಹೆಚ್ಚು ಪರಿಚಯವಾಯಿತು.

ಬಸವಾರಾಧ್ಯರು ಶ್ರೇಷ್ಠ ಕನ್ನಡ ಪಂಡಿತರು. ಅವರ ಉಪನ್ಯಾಸಗಳು ಪ್ರಭಾವ ಪೂರ್ಣವಾಗಿರುತ್ತವೆ, ಪಾಂಡಿತ್ಯದಿಂದ ತುಂಬಿರುತ್ತವೆ, ಆಳವಾದ ಅಧ್ಯಯನದ ಮೇಲೆ ನಿಂತಿರುತ್ತವೆ. ಪಂಡಿತರು ಇರಬಹುದು ಎನಿಸುತ್ತದೆ.

ಬಸವಾರಾಧ್ಯರ ಇನ್ನೊಂದು ವಿಶೇಷತೆ ಎಂದರೆ ಸಭೆ ಸಮಾರಂಭಗಳಲ್ಲಿ ವೇಳೆಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಸಭೆಗೆ ಒಂದು ಮೆರಗು ತಂದು ಕೊಡುವುದು. ಉಪನ್ಯಾಸಕರಲ್ಲಿ ವಾದಗಳು ಪ್ರಾರಂಭವಾದರೆ ಬಸವಾರಾಧ್ಯರು ಸಲೀಲವಾಗಿ ಅವುಗಳನ್ನು ಬಿಡಿಸಿಕೊಡುವ ಚಾಚಕ್ಯತೆಯನ್ನು ಪಡೆದಿದ್ದಾರೆ.

ಬಹುಶ್ರುತ ಪಂಡಿತ -ಪ್ರೊ. ಎನ್. ಬಸವಾರಾಧ್ಯ

-ಅನ್ನದಾನಯ್ಯ ಪುರಾಣಿಕ

ಪ್ರೊ. ಎನ್. ಬಸವಾರಾಧ್ಯರನ್ನು ಪ್ರಥಮ ಸಾರಿ ನೋಡಿದ್ದು ೧೯೬೦ರಲ್ಲಿ. ಆಗ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಹಾಗೂ ಕನ್ನಡ ನುಡಿ ಪತ್ರಿಕೆಯ ಸಂಪಾದಕನಾಗಿದ್ದೆ. ಪ್ರೊ. ಎನ್. ಬಸವಾರಾಧ್ಯರು ಕನ್ನಡ ನಿಘಂಟು ಉಪಸಂಪಾದಕ-ರಾಗಿದ್ದರು. ಕನ್ನಡ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದ ಪ್ರೊ. ತೀ.ನಂ. ಶ್ರೀಕಂಠಯ್ಯನವರು ನನಗೆ ನಿಘಂಟಿನ ಮುದ್ರಣದ ಬಗ್ಗೆ ಸರ್ಕಾರ ಮತ್ತು ಸಾಹಿತ್ಯ ಪರಿಷತ್ತಿನ ಮಧ್ಯೆ ಒಪ್ಪಂದ ಮಾಡಿಸುವ ಕಾರ್ಯವನ್ನು ವಹಿಸಿದ್ದರು. ಮೂರುತಿಂಗಳ ಅವಧಿಯಲ್ಲಿ ಒಪ್ಪಂದವು ಏರ್ಪಡದಿದ್ದರೆ ತಾವೆಲ್ಲರೂ ರಾಜೀನಾಮೆ ನೀಡುತ್ತೇವೆಂಬ ಎಚ್ಚರಿಕೆಯನ್ನು ನೀಡಿದ್ದರು. ವಯಸ್ಸು ಮತ್ತು ಅನುಭವದಲ್ಲಿ ಚಿಕ್ಕವನಾಗಿದ್ದ ನಾನು ಈ ಮಹಾನ್ ಕಾರ್ಯದಲ್ಲಿ ತೊಡಗಿದ್ದೆ. ನಿಘಂಟು ಸಂಪಾದಕ ಸಮಿತಿಯ ಪದನಿಮಿತ್ತ ಸದಸ್ಯನಾಗಿದ್ದ ನಾನು ಸಂಪಾದಕ ಸಮಿತಿಯ ಸಭೆಗಳಲ್ಲಿ ಭಾಗವಹಿಸುತ್ತಿದ್ದ. ಸಭೆಗಳಲ್ಲಿ ಪ್ರೊ. ತೀ.ನಂ.ಶ್ರೀ. ಮತ್ತು ಪ್ರೊ. ಡಿ.ಎಲ್.ಎನ್. ಅವರ ನಡುವೆ ಶಬ್ದಗಳ ಅರ್ಥದ ವಿಷಯದಲ್ಲಿ ನಡೆಯುತ್ತಿದ್ದ ವಾಗ್ಯುದ್ಧಗಳು ವಶಿಷ್ಠ ಮತ್ತು ವಿಶ್ವಾಮಿತ್ರರ ಮಧ್ಯೆ ನಡೆಯುತ್ತಿದ್ದ ವಾಗ್ಯುದ್ಧಗಳನ್ನು ನೆನಪಿಗೆ ತರುತ್ತಿದ್ದವು. ಇಬ್ಬರೂ ಪ್ರಕಾಂಡ ಪಂಡಿತರು. ಇವರಿಬ್ಬರಿಗೂ ಬೇಕಾಗಿದ್ದರು ಶ್ರೀಆರಾಧ್ಯರು. ಒಮ್ಮೊಮ್ಮೆ ಇವರೀರ್ವರೂ ತಮ್ಮ ವಿವಾದವನ್ನು ಪ್ರೊ. ಎನ್. ಬಸವಾರಾಧ್ಯರು ತೀರ್ಪಿಗೆ ಒಪ್ಪಿಸುತ್ತಿದ್ದುದುಂಟು. ಸದ್ದುಗದ್ದಲಗಳಿಲ್ಲದೆ, ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದ ಶ್ರೀ ಆರಾಧ್ಯರು ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ನಮ್ಮಿಬ್ಬರ ನಡುವೆ ಸ್ನೇಹ ಅವರ್ಧಿಸಿತ್ತು. ಅಂದು ಅಂಕುರಿಸಿದ ಸ್ನೇಹ ಇಂದು ಬೆಳೆದು ಮರವಾಗಿದೆ.

ಆಗ ರಾಜ್ಯದಲ್ಲಿ ಶ್ರೀ ಜತ್ತಿ ಮಂತ್ರಿಮಂಡಲವಿತ್ತು, ಗುಲಬರ್ಗಾದವರಾದ ಮಾನ್ಯ ಶ್ರೀ ಅಣ್ಣಾರಾವ್ ಗಣಮುಖಿಯವರು

ಶಿಕ್ಷಣಸಚಿವರಾಗಿದ್ದರು. ನಿಘಂಟಿನ ಒಪ್ಪಂದದ ಬಗ್ಗೆ ಅವರ ಮನ ಒಲಿಸಲು ನಾನು ಸಾಕಷ್ಟು ಪ್ರಯತ್ನಿಸಬೇಕಾಯಿತು. ಸಂಬಂಧಿಸಿದ ಅಧಿಕಾರಿಗಳನ್ನು ನಾನು ಸ್ವತಃ ಭೇಟಿ ಮಾಡಿ ಅವರ ಒಪ್ಪಿಗೆಯನ್ನು ಪಡೆದೆ. ಸುಮಾರು ಎರಡು ತಿಂಗಳಕಾಲದ ನನ್ನ ಭಗೀರಥ ಪ್ರಯತ್ನದ ಫಲವಾಗಿ ನಿಘಂಟಿನ.ಬಗೆಗಿನ ಒಪ್ಪಂದ ಸಿದ್ಧವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿಗೆ ಲಾಭವಾಗಲೆಂದು ಆ ಒಪ್ಪಂದದಲ್ಲಿ ಪರಿಷತ್ತಿಗೆ ೧೬% ರಾಯಲ್ಟಿ ಕೊಡಬೇಕೆಂದು. ನಿಘಂಟು ಪರಿಷತ್ತಿನ ಅಚ್ಚುಕೂಟದಲ್ಲಿಯೇ ಅಚ್ಚಾಗಬೇಕೆಂದು ಹಾಗೂ ಹೊಸ ಮುದ್ರಣಯಂತ್ರವನ್ನು ಕೊಳ್ಳಲು ಒಂದುಲಕ್ಷ ರೂಪಾಯಿ ಮುಂಗಡ ಹಣ ನೀಡಬೇಕೆಂಬ ಕ್ಲಾಜುಗಳನ್ನು ಸೇರಿಸಲಾಯಿತು. ಕರ್ನಾಟಕ ಸರ್ಕಾರ ಮತ್ತು ಪರಿಷತ್ತಿನ ಮಧ್ಯದ ಒಪ್ಪಂದಕ್ಕೆ ಸಹಿಹಾಕುವ ಸಮಾರಂಭದಲ್ಲಿ ಪರಿಷತ್ತಿನ ಅಧ್ಯಕ್ಷರಾದ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ನಾನು, ಶ್ರೀ ಜಿ. ಶ್ರೀನಿವಾಸನ್, ಪ್ರೊ. ತೀ.ನಂ.ಶ್ರೀ., ಪ್ರೊ. ಬಸವಾರಾಧ್ಯರು, ಸರ್ಕಾರದ ಪರವಾಗಿ ಮಾನ್ಯಶ್ರೀ ಅಣ್ಣಾರಾವ್ ಗಣಮುಖಿಯವರು, ಶಿಕ್ಷಣ ಕಾರ್ಯದರ್ಶಿ ಶ್ರೀ ರಹಮತ್ತುಲ್ಲರು, ಉಪಕಾರ್ಯದರ್ಶಿ ಶ್ರೀ ಸಿದ್ಧಯ್ಯ ಪುರಾಣಿಕರು ಮೊದಲಾದವರು ಭಾಗವಹಿಸಿದ್ದರು. ಅದೊಂದು ಐತಿಹಾಸಿಕ ಸಮಾರಂಭ. ಮಾನ್ಯ ಶ್ರೀ ಗಣಮುಖಿಯವರು ನೀಡಿದ ಬೆಂಬಲವು ಚಿರಸ್ಮರಣೀಯ. ಈ ಕಾರ್ಯದಲ್ಲಿ ಸಹಕರಿಸಿದ ಸರ್ವಶ್ರೀ ಸಿದ್ಧಯ್ಯ ಪುರಾಣಿಕರು, ಶಾಸ್ತ್ರಿಗಳು, ತುಕೋಳರು, ದೇವೇಗೌಡರು, ಧರಣೇಂದ್ರಯ್ಯನವರು ಗುರುಬಸಪ್ಪನವರು ಸ್ಮರಣಾರ್ಹರು! ಪ್ರೊ. ತೀ.ನಂ.ಶ್ರೀಯವರಿಗೆ ನಾನಿತ್ತ ವಚನವನ್ನು ಅವರಿತ್ತ ಅವಧಿಯೊಳಗಾಗಿ ಪೂರೈಸಿದ ತೃಪ್ತಿ ನನಗುಂಟಾಯಿತು. ಪರಿಷತ್ತಿನ ಹೊಸ ಮುದ್ರಣಾಲಯದ ಕಟ್ಟಡವು ನಿರ್ಮಾಣವಾಯಿತು, ಹೊಸ ಮಶೀನ್ ಬಂತು. ಹೊಸದಾಗಿ ಪೇಪರ್ ತಯಾರಾಯಿತು. ೧೯೫೩ರಲ್ಲಿ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅಮೃತ ಹಸ್ತದಿಂದ ಕನ್ನಡ ನಿಘಂಟಿನ ಮುದ್ರಣ ಕಾರ್ಯವು ಪ್ರಾರಂಭವಾಯಿತು. ಅಲ್ಲಿಗೆ ನಾನು ಒಪ್ಪಿಕೊಂಡಿದ್ದ ಕಾರ್ಯವು ಮುಗಿಯಿತು. ನಾನು ಪರಿಷತ್ತಿನ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ಮತ್ತು ಕನ್ನಡ ನುಡಿ ಸಂಪಾದಕ ಸ್ಥಾನಕ್ಕೆ ರಾಜೀನಾಮೆ ನೀಡಿದೆ. ಮುಂದೆ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯನಾಗಿ ೧೯೬೮ರವರೆಗೆ ಸೇವೆ ಸಲ್ಲಿಸಿದೆ. ಈ ಅವಧಿಯಲ್ಲಿ ಪರಿಷತ್ತಿನ ಸರ್ವಾಂಗೀಣ ಪ್ರಗತಿಗಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಿದೆ. ಕೆಲವು ಅಕ್ರಮಗಳ ವಿರುದ್ಧ ಹೋರಾಡಿ ಸರಿಪಡಿಸಿದೆ. ನನ್ನ ಅಳಿಲು ಸೇವೆಯ ಅರಸರಿಯದ ಬಿಟ್ಟಿ ಕೆಲಸವಾಗಿದ್ದರೂ, ಅದು ಕನ್ನಡ ದೇವಿ ಭುವನೇಶ್ವರಿಗೆ ಅರ್ಪಿತವಾಗಿರುವುದೆಂದು ನಾನು ನಂಬಿರುವೆ.

ಪ್ರೊ. ಎನ್. ಬಸವಾರಾಧ್ಯರು ನಂತರ ನಿಘಂಟಿನ ಸಂಪಾದಕರಾದರು. ನಿಘಂಟಿನ ಮುದ್ರಣ ಕಾರ್ಯವೂ ಪ್ರಾರಂಭವಾಯಿತು. ಅವರ ಹೊಣೆಗಾರಿಕೆ ಹೆಚ್ಚಿತು. ನನ್ನ ಕಾರ್ಯವಲ್ಲಿ ಅವರು, ಅವರ ಕಾರ್ಯದಲ್ಲಿ ನಾನು ಪರಸ್ಪರ ಸಹಕರಿಸಿ ನಮ್ಮ ಕರ್ತವ್ಯಗಳನ್ನು ಪೂರೈಸಿದ್ದೆವು. ಕನ್ನಡ ನಿಘಂಟಿನ ಸಂಪಾದನೆ ಹಾಗೂ ಪ್ರಕಟನೆಯಲ್ಲಿ ಶ್ರೀ ಆರಾಧ್ಯರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. ನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅವರು ಆ ಸಂಸ್ಥೆಗೆ ಘನತೆ ಗೌರವವನ್ನು ತಂದುಕೊಟ್ಟರು. ಪ್ರಕಾಂಡ ಪಂಡಿತರಾದರೂ ವಿನಯಸಂಪನ್ನರು, ಸ್ನೇಹಶೀಲರು, ಅಜಾತಶತ್ರುಗಳು, ಕಾಯಕ ಯೋಗಿಗಳು, ಘನಮನ ಸಂಪನ್ನರು ಶ್ರೀ ಎನ್. ಬಸವಾರಾಧ್ಯರು. 'ತುಂಬಿದುದು ತುಳಕದು ನೋಡಾ' ಎಂಬ ಮಾತು ಶ್ರೀ ಆರಾಧ್ಯರಿಗೆ ಅಕ್ಷರಶಃ ಅನ್ವಯಿಸುತ್ತದೆ; ಅವರಿಗೆ ದೀರ್ಘಾಯು, ಆರೋಗ್ಯಭಾಗ್ಯ, ಶಾಂತಿ ಹಾಗೂ ಸುಖ ಸಂತಸಗಳನ್ನು ಪರಶಿವನು ಅನುಗ್ರಹಿಸಲೆಂದು ಪ್ರಾರ್ಥಿಸುವೆ.

XXX

ವಿನಯಸಂಪನ್ನ ವಿದ್ವಾಂಸ ಬಸವಾರಾಧ್ಯರು

-ಪ್ರೊ. ಎಸ್.ಆರ್. ರೊಹಿಡೇಕರ್

ಪ್ರೊ. ಎನ್. ಬಸವಾರಾಧ್ಯರು ಒಬ್ಬ ಅಪರೂಪದ ವ್ಯಕ್ತಿ, "ವಿದ್ಯಾ ವಿನಯೇನ ಶೋಭತೆ" ಎಂಬ ಉಕ್ತಿಗೆ ತಕ್ಕ ಶ್ರೇಷ್ಠ ವಿದ್ವಾಂಸರು. ಸಾಹಿತ್ಯ ಹಾಗೂ ಭಾಷಾಶಾಸ್ತ್ರ ಸಂಶೋಧಕರಾಗಿ, ಡಿ.ಎಲ್.ಎನ್., ಎ.ಆರ್. ಕೃಷ್ಣಶಾಸ್ತ್ರಿಗಳು, ತೀ.ನಂ. ಶ್ರೀಕಂಠಯ್ಯ, ಕ.ವೆಂ. ರಾಘವಾಚಾರ್ಯರಂಥ ಶ್ರೇಷ್ಠ ಸಂಶೋಧಕರ ಸಾಲಿನಲ್ಲಿ ನಿಲ್ಲುವ ಪಂಡಿತರತ್ನರು ಅವರು.

ಅವರ ಪಾಂಡಿತ್ಯದ ಬಗ್ಗೆ ಕೇಳಿ ತಿಳಿದಿದ್ದೆ. ಅವರ ಕೆಲವು ವಿದ್ವತ್‌ಪೂರ್ಣ ಲೇಖನಗಳನ್ನು ಓದಿದ್ದೆ. ಆದರೆ ಅವರ ಜೊತೆಗೆ ಕೆಲಸಮಾಡುವ ಅಪೂರ್ವ ಅವಕಾಶ ನನಗೆ ಸಿಕ್ಕದ್ದು ನಾನು "ಕನ್ನಡ ಭಾಷಾಂತರ ಸರಳೀಕರಣ ಸಮಿತಿ"ಯ ಸದಸ್ಯನಾಗಿ ನೇಮಕಗೊಂಡಾಗ. ಈ ಅವಕಾಶವನ್ನು ಕಲ್ಪಿಸಿ ಕೊಟ್ಟವರು ಆಗ ಕನ್ನಡ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಡಾ॥ ಪಾಟೀಲ ಪುಟ್ಟಪ್ಪನವರು. ಆ ಸಮಿತಿಯ ಚೇರ್‌ಮನ್‌ರಾಗಿದ್ದ ಪ್ರೊ. ಬಿ.ಟಿ. ಸಾಸನೂರರು ನನ್ನ ವಿದ್ಯಾರ್ಥಿಗಳಾಗಿದ್ದರು. ಅದರಲ್ಲಿ ವಿಶಿಷ್ಟ ವ್ಯಕ್ತಿಗಳಾಗಿದ್ದ. ನಿವೃತ್ತ IAS ಅಧಿಕಾರಿ, ವಾಯ್ ರೂಪ್ಲಾ ನಾಯಕರು, ವಿದ್ವಾಂಸರುಗಳಾದ ಆರ್.ಎಸ್. ರಾಮರಾವ್ ಅವರು ಹಾಗೂ ಪಂಡಿತ ಎರೆಸೀಮೆ ಅವರಲ್ಲದೆ, ಶ್ರೀ ಬಣಕಾರರಂಥ ಸಾಹಿತಿಯು ನಮ್ಮ ಸಹಸದಸ್ಯರಾಗಿದ್ದರು. ಈ ಸಮಿತಿಯಲ್ಲಿ ಹಲವಾರು ಇಲಾಖೆಗಳ ಆಂಗ್ಲ ಪುಸ್ತಕಗಳನ್ನು ಶುದ್ಧ ಹಾಗೂ ಸರಳ ಕನ್ನಡಕ್ಕೆ ಭಟ್ಟಿ ಇಳಿಸುವಾಗ ನಡೆಯುತ್ತಿದ್ದ ಚರ್ವಿತ ಚರ್ವಣಗಳಲ್ಲಿ "ಇದಮಿತ್ಥಂ" ಎಂಬ ಪ್ರೊ. ಬಸವಾರಾಧ್ಯರ ಅಭಿಪ್ರಾಯವೇ ನಮಗೆಲ್ಲ ಪ್ರಮಾಣ ವಾಕ್ಯವಾಗಿರುತ್ತಿತ್ತು. ಹಾಗೆ ಅವರು ನಿಶ್ಚಿತಾರ್ಥದ ಪದಗಳನ್ನು ಸೂಚಿಸುವಾಗ, ಅವರ ಧ್ವನಿಯಲ್ಲಿ, ಹೇಳುವ ರೀತಿಯಲ್ಲಿ ಆತ್ಮೀಯ ಸೌಜನ್ಯವಿರುತ್ತಿತ್ತೇ ಹೊರತು, ಅಹಂಭಾವದ ಪಾಂಡಿತ್ಯ ಪ್ರದರ್ಶನ

ಲವಲೇಶವೂ ಇರುತ್ತಿರಲಿಲ್ಲ. "ತುಂಬಿದ ಕೊಡ ತುಳುಕುವುದಿಲ್ಲ" ಎಂಬಂತೆ ಮೃದುಮಾತಿನಲ್ಲಿ ಎಲ್ಲರ ಮನಮೆಚ್ಚುವಂತೆ ಹೇಳುವ ರೀತಿ ನನ್ನಲ್ಲಿ ಅವರ ಬಗ್ಗೆ ಅತ್ಯಾದರವನ್ನುಂಟು ಮಾಡಿತು.

ಅವರ ತಿಳಿಹಾಸ್ಯದ ಇನ್ನೊಂದು ಮುಖ ನನಗೆ ಪರಿಚಯವಾದದ್ದು, ನಮ್ಮ ಸರಳೀಕರಣ ಸಮಿತಿಯು ಕೆಮ್ಮಣ್ಣುಗುಂಡಿಗೆ ಪ್ರವಾಸಕ್ಕೆ ಹೋದಾಗ. ಅವರು ತುಂಬ ಸಹೃದಯಿ ಗೆಳೆಯರಾಗಿ ಕಂಡರು.

ನಮ್ಮ ಸಮಿತಿ ರಚಿಸಿದ "ಸಂಕ್ಷಿಪ್ತ ಆಡಳಿತ ಪದಕೋಶ" ಮತ್ತು ಕನ್ನಡ "ಕಚೇರಿ ಕೈಪಿಡಿ" ಇವೆರಡರಲ್ಲೂ ಪ್ರೊ. ಬಸವಾರಾಧ್ಯರ ಕೊಡುಗೆ ನಿಖರ ಪಾಂಡಿತ್ಯ, ವೈವಿಧ್ಯ ಮತ್ತು ಸರಳತೆಯಿಂದ ಕೂಡಿತ್ತು. ಈಗಲು ಕೂಡ, ಸರಕಾರಿ ಸಿಬ್ಬಂದಿಯ ತರಬೇತಿಯಲ್ಲಿ, ಆ ಎರಡು ಕೃತಿಗಳ ಬಳಕೆ ಮುಂದುವರಿಯುತ್ತಿರುವದು ನಮಗೆಲ್ಲ ಸಂತಸದ ಸಂಗತಿ.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ಒಂದೆರಡು ಸಲ ಪರಿಷತ್ತಿನಲ್ಲಿ ಅವರನ್ನು ಕಂಡಿದ್ದೆ. ಆಗಲೂ ಅದೇ ಸೌಜನ್ಯ, ಅದೇ ವಿನಯ, ಅದೇ ಆತ್ಮೀಯತೆ ಎದ್ದು ಕಂಡವು. ಕನ್ನಡದ ಏಳ್ಗೆಗಾಗಿ ಸರಕಾರ ಅವರ ಸೇವೆಯನ್ನು ಇನ್ನಷ್ಟು ಪಡೆಯಲಿ. ಅವರು ನೂರು ವರುಷ ಬಾಳಲಿ ಎಂದು ಹಾರೈಸುತ್ತೇನೆ.

ಶ್ರೀ ಎನ್. ಬಸವಾರಾಧ್ಯರು -ಒಂದು ನೆನಪು

-ಎಚ್. ಗಂಗಾಧರನ್

ಶ್ರೀ ಎನ್. ಬಸವಾರಾಧ್ಯರು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಚಿರಸ್ಮರಣೀಯವಾದವರು. ಅವರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನೀಡಿರುವ ಕೊಡಿಗೆಯು ಅಮೂಲ್ಯವಾದಂತಹುದು. ನಾಡು-ನುಡಿ ಮತ್ತು ಸಂಸ್ಕೃತಿ ಮುಂತಾದ ಕ್ಷೇತ್ರಗಳಲ್ಲಿ ಪ್ರವೇಶಿಸುವುದು, ಕೃಷಿಮಾಡುವುದು ಕೀರ್ತಿಪಡೆಯುವುದಲ್ಲ, ಒಂದೆ ಜನ್ಮದ ಸಾಧನೆಯಲ್ಲ, ಅದಕ್ಕೆ ಜನ್ಮಾಂತರದ ಸಾಧನೆಯ ಸಂಸ್ಕಾರವಿರಬೇಕು, ಜಗತ್ತಿನಲ್ಲಿ ಬಹುಜನರು ತಮ್ಮ ಮಾತೃಭಾಷೆಯಲ್ಲಿ ವಿಶ್ವವಿದ್ಯಾನಿಲಯದ ಪದವಿಯನ್ನು ಪಡೆಯುತ್ತಾರೆ. ಅವರೆಲ್ಲರೂ ಸಾಹಿತ್ಯ ಕ್ಷೇತ್ರದಲ್ಲಿ ಪರಿಣಿತರಾಗುವುದಿಲ್ಲ, ಯಾವುದೇ ಸಾಹಸಕ್ಕೆ ಕೈಹಚ್ಚುವುದಿಲ್ಲ. ಸಾಹಿತ್ಯಕ್ಷೇತ್ರ ಒಂದು ತಪೋಭೂಮಿ. ಕೃತಿ, ಮತಿ, ಮೈಮನಗಳು ಸಮರಸಗೊಂಡವರಿಗೆ ಮಾತ್ರ ಈ ಕ್ಷೇತ್ರದಲ್ಲಿ ಪ್ರತಿಭೆಯನ್ನು ಬೆಳೆಸಿಕೊಂಡು ಸೇವೆಸಲ್ಲಿಸಲು ಸಾಧ್ಯವಾಗುತ್ತದೆ. ಈ ಕ್ಷೇತ್ರದಲ್ಲಿ ತಪಸ್ಥಂಭ ಸಾಧನೆಯನ್ನುಂಟುಮಾಡಬಯಸಿದವರು ಸದುದ್ದೇಶವನ್ನು ಹೊಂದಿ ನಿರಂತರ ಶ್ರಮಿಸುತ್ತಿದ್ದರೆ ಜೀವನದಲ್ಲಿ ಅವರು ಬೆಳಕು ಕಾಣಬಹುದು.

ಇಂದಿನ ನಮ್ಮ ಭಾರತದ ವಿದ್ಯಾಕ್ಷೇತ್ರದಲ್ಲಿ ಜೀವನದ ಅಮೂಲ್ಯ ಗುರಿಯನ್ನು ಸಾಧಿಸಬೇಕೆಂಬ ಸಂಕಲ್ಪದಿಂದ ಅಭ್ಯಾಸ ಮಾಡುವವರು ವಿರಳ. ಜೀವನೋಪಾಯಕ್ಕಾಗಿ ವಿದ್ಯಾಭ್ಯಾಸ ಮಾಡುವ ಮನೋಧರ್ಮವುಳ್ಳವರೇ ಅಧಿಕ. ನಮ್ಮ ಇಂದಿನ ಶಿಕ್ಷಣ ಪದ್ಧತಿಯು ಸಾಧಕನ ಪ್ರವೃತ್ತಿಗೆ ಹೊಂದುವಂತಹ ಶಿಕ್ಷಣಕ್ಕೆ ಅವಕಾಶ ಕೊಡುವುದಿಲ್ಲ. ಜೀವನೋಪಾಯಕ್ಕೆ ಒಂದು ಮಾರ್ಗಕಲ್ಪಿಸುವ ಗುರಿಯನ್ನು ಹೊಂದಿದೆ. ಅದರಿಂದಾಗಿ ವಿದ್ಯಾರ್ಥಿಗಳಿಗೆ ಅವರ ಮನೋಗತವನ್ನು ತಿಳಿದು ಅವನಲ್ಲಿರುವ ಪ್ರತಿಭೆಯನ್ನು ಬೆಳೆಸಿ ಪಲ್ಲವಿಸಿ, ಫಲ ನೀಡುವಂತಹ ಮಾರ್ಗದರ್ಶನ ಮಾಡುವ ವ್ಯವಸ್ಥೆಯಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಸುಲಭವಾಗಿ ನೌಕರಿ ದೊರೆಯುವ, ಕಷ್ಟವಿಲ್ಲದೆ ಪದವಿಪಡೆಯವ ವಿಷಯಗಳನ್ನು

ಆರಿಸಿಕೊಂಡು ಹೇಗೆ ಪದವಿಯನ್ನು ಪಡೆಯುತ್ತಾರೋ ಹಾಗೆಯೇ ಅನಿವಾರ್ಯವಾಗಿ ಪದವಿ ಪಡೆದವರು ಕೆಲವರು ತಮ್ಮ ಪ್ರವೃತ್ತಿಗೆ ಅನುಗುಣವಾದ ವಿಷಯದಲ್ಲಿ ಪ್ರತಿಭೆಯನ್ನು ಬೆಳೆಸಿಕೊಂಡು ತಮ್ಮ ಜೀವನವನ್ನು ವಿಕಾಸಗೊಳಿಸಿಕೊಂಡು ನಾಡಿಗೆ ತಮ್ಮ ಸ್ಮರಣೀಯ ಕೊಡುಗೆಯನ್ನು ಕೊಟ್ಟು ಧನ್ಯರಾಗುತ್ತಾರೆ. ಇಂದಿನ ಶಿಕ್ಷಣ ಪದ್ಧತಿಗೆ ನಮ್ಮ ರಾಷ್ಟ್ರ ದಾಸ್ಯದಲ್ಲಿದ್ದಾಗ ಅದನ್ನು ನಿರಂತರವಾಗಿ ಉಳಿಸಿಕೊಂಡು ಬರಬೇಕೆಂಬ ಉದ್ದಿಶ್ಯದಿಂದ ಆಂಗ್ಲೇಯರು ಇಟ್ಟ ನೆಲಗಟ್ಟು ಅದರ ಮೇಲೆ ಸ್ವಾತಂತ್ರ್ಯದ ಅರ್ಧ ಶತಮಾನ ಕಳೆದರೂ ನಮ್ಮ ಮನೋಮಂದಿರಗಳನ್ನು ಕಟ್ಟುತ್ತಲೇ ಇದ್ದೇವೆ. ಜೀವನೋಪಾಯದ ಉದ್ಯೋಗವೇ ಗುರಿಯಾಗಿ ವಿದ್ಯಾಭ್ಯಾಸ ಮಾಡಿದವರು ಉದ್ಯೋಗಕ್ಕಾಗಿ ಅಲೆದು ಬೇಸತ್ತು ನಿರಾಶರಾಗಿ ನಿರ್ಜೀವಿಗಳಾಗಿ, ನಿರುಪೇಕ್ಷ ವ್ಯಕ್ತಿಗಳಾಗಿರುವುದು ಕೇಂದ್ರಸರ್ಕಾರದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಇರುವ ದಾಖಲೆಯಂತೆ ವರ್ಷ ನಾಲ್ಕುವರೆ ಕೋಟಿ ಉದ್ಯೋಗ ಅಪೇಕ್ಷಿಗಳ ಹೆಸರು ನೊಂದಣಿಯಾಗಿದೆ. ಅದರಲ್ಲಿ ನಾಲ್ಕೈದುಲಕ್ಷ ಜನರಿಗೆ ಮಾತ್ರ ಉದ್ಯೋಗ ದೊರೆತಿದೆ. ಅದರಂತೆ ಕರ್ನಾಟಕದಲ್ಲಿ ಉದ್ಯೋಗವನ್ನು ಅಪೇಕ್ಷಿಸಿದಂತೆ ಹಿಂದಿನ ವರ್ಷ ಸರ್ಕಾರದ ದಾಖಲೆಗಳಲ್ಲಿ ೧೯ ಲಕ್ಷ ಎಂದು ನಮೂದಿಸಿ ಅದರಲ್ಲಿ ಉದ್ಯೋಗ ದೊರಕಿಕೊಂಡವರು ಅತ್ಯಲ್ಪ. ಇತಂಹ ದಾರುಣ ಭೀಕರ ಪರಿಸ್ಥಿತಿ ತಾಂಡವಾಡುತ್ತಿದ್ದರೂ ಅದನ್ನು ಈ ರಾಷ್ಟ್ರದ ಪ್ರಮುಖ ಸಮಸ್ಯೆಯೆಂದು ಭಾವಿಸಿದರು ಮತ್ತು ಅದನ್ನು ಪರಿಹರಿಸಬೇಕೆಂಬ ಆಶಯವನ್ನು ಆತ್ಮೀಯವಾಗಿ ಹೊಂದಿರುವವರು ಅತ್ಯಲ್ಪ. ಇಂತಹ ಒಂದು ಪರಿಸ್ಥಿತಿಯಲ್ಲಿ ಸಾಹಿತ್ಯ ಮತ್ತು ಸಾಹಿತಿಗಳ ಯೋಗಕ್ಷೇಮವನ್ನು ಬಯಸುವವರು ದುರ್ಲಭ.

ಜಗತ್ತಿನಲ್ಲಿ ಇಂದು ವಿಜ್ಞಾನದ ಪ್ರತಿಭೆಯಿಂದಾಗಿ ಇದನ್ನು ವಿಜ್ಞಾನಯುಗವೆಂದು ಕರೆಯಬೇಕಾಗಿದೆ. ಆಳವಾಗಿ ಅಧ್ಯಯನ ಮಾಡಿದರೆ ವಿಜ್ಞಾನದ ಪ್ರತಿಭೆಗೆ, ವಿಕಾಸಕ್ಕೆ ಸಾಹಿತ್ಯವೇ ಸಂಪನ್ಮೂಲವೆಂಬುದನ್ನು ನಾವು ಮನಗಾಣಬಹುದು. ಪಾಶ್ಚಾತ್ಯರ ವಿಜ್ಞಾನದ ಪ್ರತಿಭೆಗೆ ವಿಜ್ಞಾನದ ಅವತರಣಕ್ಕೆ ಸಾಕ್ರೆಟೀಸನ ಶಿಷ್ಯ ಪರಂಪರೆಯ ಪ್ಲೇಟೋ ಮತ್ತು ಅರಿಸ್ಟಾಟಲ್ ಅವರ ಸಾಹಿತ್ಯ ಕೃತಿಗಳು ಮೂಲಾಧಾರ ಮತ್ತು ಪ್ರೇರಕಗಳಾಗಿವೆ. ಅದರಂತೆಯೇ ಭಾರತದ ಹಾಗೂ ಪೂರ್ವರಾಷ್ಟ್ರಗಳ ವೈಜ್ಞಾನಿಕ ಪ್ರಗತಿಗೂ ಕೂಡ ಪೂರ್ವಜರ ಸಾಹಿತ್ಯಸಂಪತ್ತೇ ಆಧಾರ. ಭಾರತದಲ್ಲಂತೂ ವೇದಸಾಹಿತ್ಯ ಸಂಪತ್ತು ಎಲ್ಲ ವಿಜ್ಞಾನದ ಪ್ರೇರಕಶಕ್ತಿಯಾಗಿದೆ. ಈ ಸಂಪತ್ತನ್ನು ಪರರಾಷ್ಟ್ರಗಳು ಮಾತ್ರ ಬೆಳೆಸಿಕೊಂಡಿವೆ. ಆದರೆ ಭಾರತ ವೇದಸಾಹಿತ್ಯದ ಅಧ್ಯಾತ್ಮ ಸಂಪತ್ತನ್ನು ಮಾತ್ರ ಅನುಭವಿಸುತ್ತಾ ಬಂದು ಬಾಹ್ಯವಿಜ್ಞಾನ ಸಂಪತ್ತನ್ನು ಬೆಳೆಸಿಕೊಳ್ಳುವುದರಲ್ಲಿ ಪ್ರಯತ್ನ ಶೀಲವಾಗಿಲ್ಲ. ಈ ದೃಷ್ಟಿಯಿಂದ ಸಾಹಿತ್ಯ ಸಂಪತ್ತು ಜೀವನೋದ್ಧಾರದ ದಿವ್ಯಸಂಪತ್ತು ಆಗಬಹುದು. ಅನೇಕರ ಜೀವನದಲ್ಲಿ ಅದು ಸಾಧ್ಯವಾಗಿರುವ ಸಾವಿರಾರು ನಿದರ್ಶನಗಳಿವೆ. ಯುಗಾಂತರಗಳ ಇತಿಹಾಸವನ್ನು ಗಮನಿಸಿದರೆ ಸಾಹಿತ್ಯಕ್ಕೆ ರಾಜಾಸ್ಥಾನಗಳು ಕೊಡುತ್ತಲಿದ್ದ ಪ್ರೇರಣೆ ಪೋಷಣೆಗಳು ಗಮನಾರ್ಹವಾಗಿವೆ. ಇಂದು ರಾಜಾಸ್ಥಾನಗಳಲ್ಲಿ, ರಾಜಾಸ್ಥಾನಗಳಿಗೆ ಅವುಗಳಿಂದ ದೊರೆಯುವ ಪ್ರೇರಣೆ ನಗಣ್ಯ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಕೀರ್ತಿವಂತ ಸಾಹಿತಿಗಳಾದ ಶ್ರೀ ಎನ್. ಬಸವಾರಾಧ್ಯರು ಹಳ್ಳಿಗಾಡಿನ ಸಾಧಾರಣ ಕುಟುಂಬದಲ್ಲಿ ಜನಿಸಿದವರು. ಆದರೆ ಸುಸಂಸ್ಕೃತ ಮನೆತನದಲ್ಲಿ ಜನಿಸಿದವರು. ಅವರ ಮಾತಾ ಪಿತೃಗಳು ಎಲ್ಲರಂತೆ ತಮ್ಮ ಮಗ ಒಬ್ಬ ಅಧಿಕಾರಿಯಾಗುವಂತಹ ವಿದ್ಯಾವಂತನನ್ನಾಗಿ ಮಾಡಬೇಕೆಂದು ಬಯಸಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ವಿಜ್ಞಾನದ ಪದವಿಪಡೆಯುವವರು ಬೆಂಗಳೂರಿನಲ್ಲಿ ಅಭ್ಯಾಸ ಮಾಡಬೇಕಾಗಿತ್ತು. ಕಲಾತ್ಮಕ ವಿಷಯದಲ್ಲಿ ಪದವಿಪಡೆಯಬೇಕಾದವರು ಮೈಸೂರಿಗೆ ಬರಬೇಕಾಗಿತ್ತು. ಇದು ಹಳೆಯ ಮೈಸೂರು ರಾಜ್ಯದಲ್ಲಿದ್ದಂತಹ ವ್ಯವಸ್ಥೆ. ಶ್ರೀಯುತರು ಕಲಾವಿಷಯಗಳಲ್ಲಿ ಇಂಟರಮೀಡಿಯೆಟನ್ನು ಪೂರ್ಣಗೊಳಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು. ಅವರು ತಮ್ಮ ಶಿಕ್ಷಣಕ್ಕೆ ಅದ್ದೂರಿಯಾಗಿ ವೆಚ್ಚ ಮಾಡುವಂತಹ ಶ್ರೀಮಂತರಾಗಿರಲಿಲ್ಲ ಎಂದು ನನ್ನ ಭಾವನೆ. ಆದುದರಿಂದ ಊಟ-ವಸತಿಯ ಸೌಲಭ್ಯಕ್ಕಾಗಿ ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಆಶೀರ್ವಾದ

ಮತ್ತು ಆಶ್ರಯವನ್ನು ಪಡೆಯಬಯಸಿದರು. ಅವರು ಮನಶ್ಶಾಸ್ತ್ರದಲ್ಲಿ ತಮ್ಮ ಪದವಿಪಡೆಯ ಬೇಕೆಂಬ ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಜಗದ್ಗುರುಗಳವರು ಶ್ರೀಯುತರಿಗೆ ಇರುವ ಸಂಸ್ಕೃತಿ ಹಿನ್ನೆಲೆಯನ್ನು ಮತ್ತು ಅವರ ನುಡಿಗಳಲ್ಲಿ ಕಂಡುಬರುವ ಸಾಹಿತ್ಯ ಅಭಿರುಚಿಯನ್ನು ಗಮನಿಸಿದರು. ಶ್ರೀಗಳವರ ಅಂತರಂಗಶಕ್ತಿಯ ಪ್ರೇರಣೆ ಶ್ರೀ ಎನ್. ಬಸವಾರಾಧ್ಯರು ಕನ್ನಡ ಸಾಹಿತ್ಯದಲ್ಲಿ ಪದವಿ ಪಡೆಯಬೇಕೆಂದು. ಹಾಗಿದ್ದಲ್ಲಿ ಮಾತ್ರ ತಮ್ಮ ವಿದ್ಯಾರ್ಥಿನಿಲಯದಲ್ಲಿ ಆಶ್ರಯಕೊಡುವುದಾಗಿ ಸೂಚಿಸಿದರು. ಇದು ದೈವೀಪ್ರೇರಣೆ ಎಂದೇ ಭಾವಿಸಬೇಕಾಗುತ್ತದೆ. ಕಲಾಶಿಕ್ಷಣಕ್ಕೆ ಹಳೆಯ ಮೈಸೂರು ರಾಜ್ಯದ ಎಲ್ಲಾ ಜನಾಂಗದವರು ಮೈಸೂರಿಗೆ ಬರಬೇಕಾಗಿತ್ತು. ಹಾಗೆ ಬಂದ ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಆಶ್ರಯ ವಸತಿಗಳನ್ನು ಕೊಡುವ ಸಂಸ್ಥೆ ಎಂದರೆ ಸುತ್ತೂರು ಮಠದ ವಿದ್ಯಾರ್ಥಿನಿಲಯ ಮಾತ್ರ. ಇನ್ನು ಕೆಲವು ವಿದ್ಯಾರ್ಥಿನಿಲಯಗಳಿದ್ದರೂ ಅಲ್ಲಿ ಊಟ ವೆಚ್ಚವನ್ನು ಭರಿಸಬೇಕಾಗಿತ್ತು. ಜಗದ್ಗುರುಗಳವರ ಆದೇಶದಂತೆ ಶ್ರೀ ಎನ್. ಬಸವಾರಾಧ್ಯರಿಗೆ ಅನಿವಾರ್ಯ ಪ್ರೇರಣೆಯೋ ಅಥವಾ ಅಂತರಂಗ ಪ್ರೇರಣೆಯೋ ಎಂಬುದನ್ನು ಹೇಳುವುದು ಕಷ್ಟಸಾಧ್ಯ. ಆದರೆ ಅವರ ಜೀವನದ ಸಾಧನೆ ಜಗದ್ಗುರುಗಳವರು ಮತ್ತು ಬಸವಾರಾಧ್ಯರ ಆಂತರಿಕ ಪ್ರೇರಣೆಯೆಂದೇ ನಾನು ಭಾವಿಸಬೇಕಾಗುತ್ತದೆ.

ಹೀಗಾಗಿ ಅವರು ಸುತ್ತೂರು ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶವನ್ನು ಪಡೆದು ಕನ್ನಡದಲ್ಲಿ ತಮ್ಮ ಶಿಕ್ಷಣವನ್ನು ಮುಂದುವರಿಸಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಅವರು ವಿದ್ಯಾರ್ಥಿನಿಲಯದಲ್ಲಿ ಅಭ್ಯಾಸ ಮಾಡುವಾಗ ನಾನೂ ಸಹ ವಿದ್ಯಾರ್ಥಿಯಾಗಿದ್ದುದು ಸುಯೋಗವೆಂದೇ ಭಾವಿಸುತ್ತೇನೆ. ಅಂದು ಸುತ್ತೂರು ವಿದ್ಯಾರ್ಥಿನಿಲಯದಲ್ಲಿ ಇಂದು ಖ್ಯಾತರಾದ ಅನೇಕ ಪ್ರತಿಭಾವಂತರಿಗೆ ಪ್ರವೇಶ ಕೊಡಲಾಗಿತ್ತು. ಅಂದಿನ ವಿದ್ಯಾರ್ಥಿಗಳ ನಿಲಯದ ಜೀವನ ಸ್ಮರಣೀಯ. ವಿದ್ಯಾರ್ಥಿಗಳ ಸಮೂಹದ ವ್ಯವಹಾರ ಚಿಂತನೆ ಸಮಾವೇಶ ಇವುಗಳು ಒಂದಲ್ಲ ಒಂದು ಮಹತ್ವದ ಮಾರ್ಗದತ್ತ ನಡೆಯಲೇಬೇಕೆಂಬ ಸ್ಫೂರ್ತಿಯನ್ನು ಒದಗಿಸುತ್ತಿದ್ದು ವಿದ್ಯಾರ್ಥಿಗಳು ಅನಾವಶ್ಯಕ ಸಂಗತಿಗಳನ್ನು ಚರ್ಚಿಸುವ ಪ್ರಸಂಗಗಳು ಅಪೂರ್ವ. ಜೀವನಕ್ಕೆ ಪ್ರೇರಣೆ ಕೊಡುವ ಆಶಾಭಾವನೆಯನ್ನು ಪ್ರತಿಧ್ವನಿಸುವಂತಹ ಪ್ರಸಂಗಗಳೇ ಅಧಿಕ. ಭೋಜನಕ್ಕೆ ಕುಳಿತಾಗಲೂ ಅದನ್ನು ಮುಗಿಸಿ ವಿರಾಮಕ್ಕಾಗಿ ಕೊಂಚಕಾಲ ವಿಹರಿಸುತ್ತಲಿದ್ದಾಗಲೂ ಮಹತ್ವದ ವಿಷಯಗಳ ವಿಚಾರವಿನಿಮಯದ ಸಂಗತಿಗಳಾಗಿದ್ದವು. ಹೀಗೆ ರಾಜಕಾರಣಗಳ ಚಿಂತನೆ ನಡೆಯುವಾಗ ರಾಷ್ಟ್ರಾಭಿಮಾನದ ಪ್ರೇರಣೆಯೂ ದೊರೆಯುತ್ತಲಿತ್ತು. ಧರ್ಮಜ್ಞಾನದ ಚರ್ಚೆ ನಡೆಯುವಾಗ ವಿದ್ಯಾರ್ಥಿಗಳಲ್ಲಿ ಸದ್ಭಾವನೆಯು ಮೂಡಿಬರುತ್ತಿತ್ತು. ಸಾಹಿತ್ಯಭಿಮಾನಿಗಳ ಸಂಗಮದಲ್ಲಿ ಸಾಹಿತ್ಯದ ಸಂಪಾದನೆಯೇ ಪ್ರೇರಣೆಯು ದೊರೆಯುತ್ತಲಿತ್ತು. ಬಹುಶಃ ಇದಕ್ಕೆ ಮೂಲಕಾರಣವೆಂದರೆ ಅಂದು ಮಹಾರಾಜಾ ಕಾಲೇಜಿನಲ್ಲಿದ್ದ ಪ್ರತಿಭಾವಂತ ಋಷಿ ಸದೃಶರಾದ ಅಧ್ಯಾಪಕರುಗಳ ಪ್ರಭಾವವೇ ಕಾರಣವೆನ್ನಬಹುದು. ರಾಜಭರ್ತೃಹರಿ ಹೇಳುವಂತೆ ಮಾನವನ ಪ್ರತಿಭೆಯ ವಿಕಾಸಕ್ಕೆ ಪರಿಸರವು ಮಹತ್ವದ ಹಿನ್ನೆಲೆಯಾಗುತ್ತದೆ. ಇಂತಹ ಭವ್ಯಪರಂಪರೆಯ ಪರಿಸರದ ಸನ್ನಿವೇಶವನ್ನು ಪಡೆದುಕೊಂಡು ಅದನ್ನು ಸಫಲಗೊಳಿಸಿಕೊಂಡವರು ಶ್ರೀಮಾನ್ ಬಸವಾರಾಧ್ಯರು.

ನನಗೆ ಗೊತ್ತಿರುವಂತೆ ಶ್ರೀಮಾನ್ ಬಸವಾರಾಧ್ಯರು ಕಾಲಹರಣ ಮಾಡುವಂತಹ ಸಹವಾಸದಲ್ಲಿ ಮತ್ತು ಸನ್ನಿವೇಶದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿರಲಿಲ್ಲ. ಸಾತ್ವಿಕ ಸಂಗತಿಗಳ ವಿಚಾರ ವಿನಿಮಯವಾಗುತ್ತಲಿದ್ದಾಗ ಕುತೂಹಲದಿಂದ ಆಲಿಸುತ್ತ ತಮಗೆ ಸಮ್ಮತವೆಂಬುದನ್ನು ತಮ್ಮ ಲಘು ನಗೆಯಿಂದ ವ್ಯಕ್ತಪಡಿಸುತ್ತಿದ್ದರು. ಅವಶ್ಯಕವಿದ್ದಲ್ಲಿ ಮಾತ್ರ ತಮ್ಮ ಅನುಭವವನ್ನು ವಿನಿಯೋಗಿಸಿಕೊಳ್ಳುತ್ತಿದ್ದರು. ತಮ್ಮ ಅಭಿಪ್ರಾಯಗಳನ್ನು ಸಮರ್ಥನೀಯವಾಗಿ ಅಭಿವ್ಯಕ್ತಗೊಳಿಸುತ್ತಿದ್ದರು. ಅವರು ನಿರಂತರ ಅಧ್ಯಯನಶೀಲರಾಗಿರುತ್ತಲಿದ್ದರು. ಅವರಿಂದ ಏನಾದರೂ ವಿಷಯ ತಿಳಿಯ ಬಯಸಿದರೆ ಸಹ ವಿದ್ಯಾರ್ಥಿಗಳಿಗೆ ಸಂತೋಷದಿಂದ ತಮಗೆ ತಿಳಿದಿರುವ ಸಂಗತಿಗಳನ್ನು ಆತ್ಮೀಯವಾಗಿ ತಿಳಿಸುತ್ತಲಿದ್ದರು. ಹೀಗೆ ವಿದ್ಯಾರ್ಥಿ ಜೀವನದಲ್ಲಿ ಸಂಸ್ಕಾರಯುತವಾದ ಸನ್ನಿವೇಶವನ್ನೇ ನಿರ್ಮಾಣಮಾಡಿಕೊಂಡು ತಮ್ಮ ಗುರುಹಿರಿಯ ಸಹ ವಿದ್ಯಾರ್ಥಿಗಳಿಗೂ ಪ್ರಿಯರು ಮತ್ತು ಆತ್ಮೀಯರಾಗಿ ವಿದ್ಯಾಭ್ಯಾಸವನ್ನು ಮುಗಿಸಿ ವಿಶ್ವವಿದ್ಯಾನಿಲಯದ ಉದ್ಯೋಗವನ್ನು ಪಡೆದರು. ಅವರು ಬೋಧಕೇತರ ಕ್ಷೇತ್ರದಲ್ಲಿ ಕೆಲಸ

ಮಾಡುವುದರೊಂದಿಗೆ ಪ್ರಾಚೀನ ಕಾವ್ಯಗಳ ಅಧ್ಯಯನ ಸಂಪಾದನೆ ಮತ್ತು ಸಂಸ್ಕರಣ ಕಾರ್ಯದಲ್ಲಿ ಆಸಕ್ತಿಯನ್ನು ಬೆಳಸಿಕೊಂಡು, ತೊಡಗಿಸಿಕೊಂಡರು. ಅವರು ಪ್ರಚಾರ ಪ್ರಿಯರಲ್ಲ ಮತ್ತು ಪ್ರಚಾರಕ್ಕಾಗಲೀ ಪೋಷಣೆಗಾಗಲಿ ಮತ್ತೊಂದೆಡೆ ಅಂಗಲಾಚಿದವರಲ್ಲ. ಸ್ವತಂತ್ರ ಶಕ್ತಿಯಿಂದ ಸ್ವಾಭಿಮಾನಿಯಾಗಿ ಸಮರ್ಥ ವಿದ್ವತ್ತನ್ನು ಸಂಪಾದನೆ ಮಾಡಿ ಕನ್ನಡಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವ ಸ್ಮರಣೀಯ ವ್ಯಕ್ತಿಗಳಲ್ಲಿ ಶ್ರೀಯುತ ಬಸವಾರಾಧ್ಯರು ಒಬ್ಬರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧಕರಾಗಿ ಕೃತಿ ಕಾವ್ಯಗಳ ಸಂಪಾದಕರಾಗಿ ಮಹತ್ವದ ಕಾರ್ಯಗಳನ್ನು ನಡೆಸಿದ್ದಾರೆ. ಅನೇಕ ಸಂಶೋಧಕರಿಗೆ ಮಾರ್ಗದರ್ಶನ ಮಾಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ವೀರಶೈವ ಸಂಸ್ಕೃತಿಯಲ್ಲಿ ಪ್ರಮುಖ ಕೃತಿಗಳಾದ ಚತುರಾಚಾರ್ಯ ಚಾರಿತ್ರ, ಆರಾಧ್ಯ ಚಾರಿತ್ರ ಮತ್ತು ವೀರಶೈವಾಮೃತ ಮಹಾಪುರಾಣ ಇವುಗಳ ವಿದ್ವತ್‌ಪೂರ್ಣ ಪ್ರಸ್ತಾವನೆಗಳೊಡನೆ ಸಂಸ್ಕರಣಗೊಳಿಸಿ ಸಂಪಾದಿಸಿಕೊಟ್ಟಿದ್ದಾರೆ. ಚತುರಾಚಾರ್ಯ ಚಾರಿತ್ರದ ಪೀಠಿಕೆಯ ಮಹತ್ವದ ಸಂಶೋಧನಾಂಶದಿಂದ ಕೂಡಿದೆ. ಹೀಗೆ ತಮ್ಮ ಸಂಶೋಧನಾತ್ಮಕ ಅಧ್ಯಯನವನ್ನು ನಡೆಸುತ್ತಾ ನೂರಾರು ವಿದ್ವತ್‌ಪೂರ್ಣ ವ್ಯಾಖ್ಯಾನಗಳನ್ನು ಬರೆದು ಕನ್ನಡದ ವಿದ್ವತ್ ಪ್ರಪಂಚದಲ್ಲಿ ಕೀರ್ತಿಗಳಿಸಿದ್ದಾರೆ. ಅವರ ಸಾಹಿತ್ಯ ಸಂಪತ್ತಿಗಾಗಿ ಅನೇಕ ಮಹತ್ವದ ಪ್ರಶಸ್ತಿಗಳು ಲಭ್ಯವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಗಣನೀಯ ಸೇವೆಯನ್ನು ಸಲ್ಲಿಸಿದ್ದಾರೆ. ಇಂತಹ ಒಬ್ಬ ಶ್ರೇಷ್ಠ ಸಾಹಿತ್ಯ ವಿದ್ವಾಂಸರನ್ನು ಸ್ಮರಿಸಿ ಸಮರ್ಪಣ ಗ್ರಂಥವನ್ನು ಹೊರತರುತ್ತಲಿರುವುದು ಅಭಿನಂದನೀಯ. ಅವರು ಶತಾಯುಗಳಾಗಲಿ. ಮುಂದೆಯೂ ಮಹತ್ವದ ಕೃತಿಗಳು ಅವರಿಂದ ಬರುವಂತಾಗಲಿ ಎಂದು ಹಾರೈಸುತ್ತೇನೆ.

XXX

ಆತ್ಮೀಯ ಗೆಳೆಯ ಬಸವಾರಾಧ್ಯ

-ಡಾ. ನ. ಸುಬ್ರಹ್ಮಣ್ಯಂ

ಬಸವಾರಾಧ್ಯ ಮತ್ತು ನಾನು ಮಹಾರಾಜಾ ಕಾಲೇಜಿನಲ್ಲಿ, ಕನ್ನಡ ಆನರ್ಸ್ ತರಗತಿಯಲ್ಲಿ ಮೂರುವರ್ಷ ಸಹಾಧ್ಯಾಯಿಗಳಾಗಿದ್ದೆವು. ಏಕವಚನದ ಸ್ನೇಹಿತರು. ಆತ್ಮೀಯರಾಗಿದ್ದವರು. ನಮ್ಮ ಜೊತೆಗೆ ಜಿ.ಎಸ್. ಶಿವರುದ್ರಪ್ಪ, ಜಿ. ಬ್ರಹ್ಮಪ್ಪ, ಸೋ.ಕೆಂ. ರಾಮಣ್ಣ ಮತ್ತಿತರ ಮೂವರೂ ಇದ್ದರು. ಸ್ವಲ್ಪ ಹೆಚ್ಚು ಕಡಿಮೆ ಎಲ್ಲರು ಸಮಾನಶೀಲರು, ಆರ್ಥಿಕವಾಗಿ ಒಂದೇ ದೋಣಿಯಲ್ಲಿ ತೇಲುತ್ತಿದ್ದವರು.

ನಾವು ಕಾಲೇಜನ್ನೇನೋ ಸೇರಿಬಿಟ್ಟೆವು. ಆದರೆ ಹೊಟ್ಟೆಗೆ ಹಿಟ್ಟಿಲ್ಲದೆ ಜುಟ್ಟಿಗೆ ಮಲ್ಲಿಗೆಯ ಹೂವನ್ನು ಮುಡಿಯುವುದು ಹೇಗೆ? ಹಿಟ್ಟಿಗೆ ಮಾರ್ಗ ಮಾಡಿಕೊಳ್ಳಬೇಕಲ್ಲ? ಪುಣ್ಯವಶಾತ್ ನಮ್ಮಂತಹ ಬಡಪಾಯಿಗಳಿಗಾಗಿಯೇ ಕಾಮಧೇನು ಕಲ್ಪವೃಕ್ಷಗಳಂತಹ ಅನ್ನದಾನ ಸಂಸ್ಥೆಗಳಿದ್ದುವಷ್ಟೆ? ನಮ್ಮನ್ನು ಒಳ್ಳೆಯ ಹುಡುಗರೆಂದು ಪರಿಗಣಿಸಿ ಬಸವಾರಾಧ್ಯ ಮತ್ತು ಜಿ.ಎಸ್. ಶಿವರುದ್ರಪ್ಪನವರಿಗೆ ಜಗದ್ಗುರು ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಕೊಟ್ಟರು. ನನಗೆ ತಾತಯ್ಯನವರು (ದಿ|| ವೆಂಕಟ ಕೃಷ್ಣಯ್ಯನವರ) ಅನಾಥಾಲಯದಲ್ಲಿ ಆಶ್ರಯ ಸಿಕ್ಕಿತು. ಈ ಸಂಸ್ಥೆಗಳಲ್ಲಿ ಪ್ರಸಾದವನ್ನುಂಡು ಬೆಳೆದವರು ಅನಂತರದ ಜೀವನದಲ್ಲಿ ಉನ್ನತ ಪದವಿಯನ್ನಲಂಕರಿಸಿ ಪ್ರಖ್ಯಾತರಾಗಿದ್ದಾರೆ. ಏನು ಊಟ ಮಾಡುತ್ತೀರಿ ಎನ್ನುವುದಕ್ಕಿಂತ ಯಾರ ಕೈನ ಊಟ ಮಾಡುತ್ತೀರಿ ಎನ್ನುವುದು ಮುಖ್ಯ. ತಾಯಿ ಮಗುವಿಗೆ ಉಣಿಸಿದಂತೆ ಅಕ್ಕರೆಯಿಂದ ಮತ್ತು ಸದ್ಭಾವನೆಯಿಂದ ಇಕ್ಕಿದ ಅನ್ನವೇ ಮೈಹತ್ತುವುದು. ನಿಮ್ಮ ಅನ್ನಾಂಗಗಳು, ಸಾರಜನಕ ವಸ್ತುಗಳು ಶರ್ಕರಪಿಷ್ಟಾದಿಗಳು ಯಾವ ಕೆಲಸಕ್ಕೂ ಬಾರವು. ಈ ಸಂಸ್ಥೆಗಳ ದಾಸೋಹದಿಂದ ಬೆಳೆದ ನಾವು ಆ ಅನ್ನದ ಋಣವನ್ನು ಈ ಜನ್ಮದಲ್ಲಿ ತೀರಿಸಲಾರೆವು.

ಅಂತೂ, ಆರ್ಥಿಕ ಬೆಂಬಲವಾಗಲಿ ಮನೆಯವರ ಪ್ರೋತ್ಸಾಹವಾಗಲಿ ಇಲ್ಲದೆ, ಮಹತ್ಸಾಧನೆಯ ದೂರದ ಆಸೆಯನ್ನಿಟ್ಟುಕೊಂಡು ಕಾಲೇಜು ಸೇರಿದೆವು.

"ಪ್ರಾಂಶುಲಭ್ಯೇ ಫಲೇ ಲೋಭಾತ್ ಉದ್ಬಾಹುರಿವ ವಾಮನಃ' ಎಂಬಂತಾಗಿತ್ತು ನಮ್ಮ ಸ್ಥಿತಿ. ಹುಡುಗ ಚೋಟುದ್ದ ಇದ್ದಾನೆ, ಮರ ಭಾರಿ, ಹತ್ತುವುದಕ್ಕೆ ಸಾಧ್ಯವಿಲ್ಲ. ಹಣ್ಣು ಮೇಲಿನ ಕೊಂಬೆಯಲ್ಲಿ ನೇತಾಡುತ್ತಿದೆ. ಆ ಹಣ್ಣು ಕೀಳಬೇಕೆಂದು ಕೈ ಎತ್ತಿ ನಿಂತಿದ್ದಾನೆ ಹುಡುಗ ಕೀಳಲಾದೀತೇ? ....ಉತ್ಕಟ ಅಭೀಪ್ಸೆಯ ಗಾಳಿ ಬೀಸಿದರೆ ರೆಂಬೆಗಳು ಅಲುಗಾಡಿ ಪಕ್ವವಾದ ಆ ಹಣ್ಣು ತೊಟ್ಟುಕಳಚಿ ಕೈಗೆ ಬಂದುಬೀಳಬಹುದಲ್ಲ!

ನಾವು ಕಾಲೇಜಿಗೆ ಸೇರಿದುದು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಸಂಧಿಕಾಲದಲ್ಲಿ. ಆಗ ಸ್ವಾತಂತ್ರ್ಯ ಚಳುವಳಿ ನಡೆಯುತ್ತಲಿತ್ತು. ಅತ್ತ ನಾವು ಕಾಲೇಜಿನಲ್ಲಿ ಓದುತ್ತಲೂ ಇದ್ದೆವು. ಇತ್ತ ಗಾಂಧೀಟೋಪಿ ಧರಿಸಿ ಚಳುವಳಿಯಲ್ಲಿ ಭಾಗವಹಿಸಿ 'ಭಾರತಮಾತಾ ಕೀ ಜೈ' ಎಂದು ಕೂಗುತ್ತಲೂ ಇದ್ದೆವು. ಆದರೆ ಚಳುವಳಿ ಎಷ್ಟೇ ನಡೆಯಲಿ, ಬ್ರಿಟಿಷರು ರೂಪಿಸಿದ್ದ ಆಡಳಿತ ವ್ಯವಸ್ಥೆ, ಅವರ ಅಚ್ಚುಕಟ್ಟು, ನಡೆನುಡಿ, ವೇಷ. ಭೂಷಣ, ಭಾಷೆ, ಸಾಹಿತ್ಯ ನಮಗೆ ಬಳುವಳಿಯಾಗಿ ಬಂದು ಬಿಟ್ಟಿತ್ತು. ಯಾರಾದರೂ ಉದ್ದದ ಚೆಲ್ಲಣ ತೊಟ್ಟು, ಕಂಠಕ್ಕೆ ಬಣ್ಣದ ಕೌಪೀನ ಬಿಗಿದು ತಲೆಗೆ ಮಕ್ಕರಿ ಟೋಪಿ ಇಟ್ಟು, ಕೊಸ್‌ಪಿಸ್ ಎಂದು ಮಾತಾಡಿದರೆ ನಾವೇ ಗೌರವಕೊಡುತ್ತಿದ್ದೆವು. ನಮ್ಮವರೇ ಆದ ಮಹಾಮಹಾ ಪಂಡಿತರನ್ನೂ ವಿದ್ವಾಂಸರನ್ನೂ, ಅವರು ಕೇವಲ ಶಾಲುವನ್ನು ಹೊದೆದು, ಜುಟ್ಟು ಬಿಟ್ಟುಕೊಂಡು, ಗಂಧಾಕ್ಷತೆಯನ್ನಿಟ್ಟುಕೊಂಡಿರುವರೆಂಬ ಕಾರಣದಿಂದ ಗಹಗಹಿಸಿ ಪರಿಹಾಸ ಮಾಡುತ್ತಿದ್ದೆವು. ಅಂತಹ ಸಂದಿಗ್ಧ ಕಾಲದಲ್ಲಿ ನಾವು ಮಹಾರಾಜಾ ಕಾಲೇಜಿನಲ್ಲಿ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಬಿ.ಎ. ಆನರ್ಸ್ ತರಗತಿಗೆ ಸೇರಿದ್ದೆವು.

ಎಲ್ಲೆಲ್ಲಿಂದಲೋ ಬಂದು ಕಾಲೇಜಿಗೆ ಹೊಸದಾಗಿ ಸೇರಿದ ವಿದ್ಯಾರ್ಥಿಗಳು ಪರಸ್ಪರ ಪರಿಚಯ ಮಾಡಿಕೊಳ್ಳುವಾಗ ಅಧ್ಯಯನಕ್ಕೆ ನೀನೇನು ವಿಷಯ ಆಯ್ದುಕೊಂಡೆ ಎಂದು ಕೇಳುವುದು ಸಹಜ. ಆಗ ಮಹಾರಾಜಾ ಕಾಲೇಜಿನಲ್ಲಿ ಪ್ರಚಲಿತವಾಗಿದ್ದುದು ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಶಾಸ್ತ್ರ, ಅವನ್ನು ಬಿಟ್ಟರೆ ಇತಿಹಾಸ, ಅದಾದ ಮೇಲೆ ಇತರ ಭಾಷೆಗಳು ಇತ್ಯಾದಿ. ಇವೆಲ್ಲವುಗಳಿಗಿಂತ ಅಗ್ರಮಾನ್ಯವಾಗಿದ್ದುದೆಂದರೆ ಇಂಗ್ಲಿಷ್. ಅದನ್ನು ಆಯ್ಕೆ ಮಾಡಿಕೊಂಡವರಿಗೆ ಕಾಲು ನೆಲದ ಮೇಲೆ ನಿಲ್ಲುತ್ತಿರಲಿಲ್ಲ, ತಲೆ ಆಕಾಶದಲ್ಲಿ ತೇಲಿ ಹೋಗುತ್ತಿತ್ತು. ಯಾರಾದರೂ ಅವರನ್ನು 'ನೀನೇನು ವಿಷಯ ಆರಿಸಿಕೊಂಡೆ?' ಎಂದು ಕೇಳಿದರೆ 'ಲಿಟರೇಚರ್' ಎಂದು ಗರ್ವದಿಂದ ಬೀಗುತ್ತಿದ್ದರು. ಅವರ ಭಾಗಕ್ಕೆ ಇಂಗ್ಲಿಷ್ ಒಂದೇ 'ಲಿಟರೇಚರ್', ಕನ್ನಡ, ಸಂಸ್ಕೃತ, ಇತ್ಯಾದಿ ಲಿಟರೇಚರ್ರೇ ಅಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವು ಸ್ವಾಭಿಮಾನದಿಂದ ಕನ್ನಡ ಸಾಹಿತ್ಯವನ್ನು ಅಧ್ಯಯನ ವಿಷಯವಾಗಿ ಆರಿಸಿಕೊಂಡಿದ್ದೆವು. ಅಧ್ಯಯನ ವಿಷಯವೇನೆಂದು ಯಾರಾದರೂ ನಮ್ಮನ್ನು ಕೇಳಿದರೆ, ಏನೇ ಮಾಡಬಾರದ ಅಪರಾಧವನ್ನು ಮಾಡಿದವರಂತೆ 'ಕನ್ನಡ' ಎಂದು ತಗ್ಗಿದ ದನಿಯಲ್ಲಿ ಹೇಳುತ್ತಿದ್ದೆವು. ಅವರು 'ಅಯ್ಯೋ ಪಾಪ' ಎಂಬಂತೆ ಕನಿಕರದ ನಗೆ ಬೀರಿ ಮುಂದೆಹೋಗುತ್ತಿದ್ದರು.

ಭಾರತದ ಪೂರ್ವದಿಗಂತದಲ್ಲಿ ಸ್ವಾತಂತ್ರ್ಯದ ಉಷಃಕಾಲ ಹೇಗೆ ಮೂಡಿತೋ ಹಾಗೆಯೇ ಕನ್ನಡದ ಉಜ್ಜ್ವಲಯಕಾಲದ ಅರುಣೋದಯವೂ ಅದೇ ತಾನೆ ಆಗಿತ್ತು.

ಸಾಗರದ ನಡುವೆ ಬಿರುಗಾಳಿಗೆ ಸಿಕ್ಕಿದ ಕನ್ನಡದ ಹಡಗು ಅಲೆಗಳ ಭೋರ್ಗರೆತದಿಂದ ಅಸ್ತವ್ಯಸ್ತವಾಗಿ ಮುಳುಗುವಂತಾಗಿತ್ತಷ್ಟೆ? ಅದರ ಸಂರಕ್ಷಣೆಗೆ ಒಬ್ಬ ಸಮರ್ಥ ಕರ್ಣಧಾರನ ಆವಶ್ಯಕತೆಯಿತ್ತು. ಅವನನ್ನು ಪ್ರಕೃತಿ ದಯಪಾಲಿಸಿತು. ಬಿ.ಎಂ. ಶ್ರೀಕಂಠಯ್ಯನವರು ಸಕಾಲದಲ್ಲಿ ಕರ್ಣಧಾರಿತ್ವವನ್ನು ವಹಿಸಿ ಆ ಹಡಗನ್ನು ಹತೋಟಿಗೆ ತಂದರು.

ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನ ದೊರೆಯದಿದ್ದುದು ಬಿ.ಎಂ. ಶ್ರೀಯವರಿಗೆ ಬಹಳ ನೋವಾಗಿತ್ತು. ಹಳೆಯ ಸಂಪ್ರದಾಯದ ಜಾಡಿನಲ್ಲೇ ತೆವಳಿಕೊಂಡು ಹೋಗುತ್ತಿದ್ದ ಕನ್ನಡಕ್ಕೆ ಘನತೆಯ ಸ್ಥಾನವನ್ನು ಕಲ್ಪಿಸಿಕೊಟ್ಟು, ಅದರ ಸರ್ವತೋಮುಖ ಅಭಿವೃದ್ಧಿಗೆ ಹೊಸಮಾರ್ಗವನ್ನು ಹಾಕಿಕೊಡಬೇಕೆಂದು ಅವರು ಪಣತೊಟ್ಟರು. ಅದೇ ಅವರ ಜೀವನದ ಧ್ಯೇಯವೂ ಬಾಳಗುರಿಯೂ ಆಯಿತು. ಆದರೆ ಈ ಕಡೆ ಶಾಲು ಮತ್ತು ಜುಟ್ಟಿನ ಸಂಪ್ರದಾಯವನ್ನು ತಿದ್ದುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆ ಕಡೆ ಇಂಗ್ಲಿಷಿನ ದಾಳಿಯನ್ನು ತಡೆದುಕೊಳ್ಳುವುದಾಗಲಿ ಪ್ರತಿಭಟಿಸುವುದಾಗಲಿ ಸರಳವಾಗಿರಲಿಲ್ಲ.

ಅವಕಾಶಕ್ಕಾಗಿ ಕಾದರು. ೧೯೦೯ರಲ್ಲಿ ಅವರು ಮಹಾರಾಜಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಇಂಗ್ಲಿಷ್ ಕನ್ನಡ ಎರಡನ್ನು ಅವರು ಬೋಧಿಸಬೇಕಾಗಿತ್ತು. ಎರಡನ್ನು ನಿರ್ವಹಿಸಿದರು. ಶ್ರೇಷ್ಠ ದರ್ಜೆಯ ಅಧ್ಯಾಪಕರೆಂದು ಖ್ಯಾತಿ ಪಡೆದರು. ಕೆಲವೇ ವರ್ಷಗಳಲ್ಲಿ ಉಪಪ್ರಾಧ್ಯಾಪಕರಾಗಿ ಬಡ್ತಿಯನ್ನೂ ಪಡೆದರು. ಅವರು ಬರೇ ಕನ್ನಡದ ಅಧ್ಯಾಪಕರಾಗಿದ್ದಿದ್ದರೆ ಅವರಿಗೆ ವಿಶ್ವವಿದ್ಯಾಲಯದಲ್ಲಾಗಲಿ ಸಮಾಜದಲ್ಲಾಗಲಿ ಗೌರವ ಸಿಗುತ್ತಿರಲಿಲ್ಲ ಎನ್ನುತ್ತಾರೆ ಅವರ ಶಿಷ್ಯರಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು. ಅದನ್ನು ಶ್ರೀಕಂಠಯ್ಯನವರೂ ಅರ್ಥಮಾಡಿಕೊಂಡಿದ್ದರು.

೧೯೧೯ರಲ್ಲಿ ವಿಶ್ವವಿದ್ಯಾಲಯದಿಂದ ಅವರಿಗೊಂದು ಪತ್ರ ಬಂದಿತು. ಅದರ ಪ್ರಕಾರ ಅವರು ಪೂರ್ಣವಾಗಿ ಕನ್ನಡ ವಿಭಾಗಕ್ಕೆ ಸೇರಬೇಕು, ಇಲ್ಲವೇ ಪೂರ್ಣವಾಗಿ ಇಂಗ್ಲಿಷ್ ವಿಭಾಗಕ್ಕೆ ಸೇರಬೇಕು ಎನ್ನುವಂತಾಗಿತ್ತು. "ಉನ್ನತ ದರ್ಜೆಯ ಕನ್ನಡ ಪ್ರಾಧ್ಯಾಪಕರ ಹುದ್ದೆ ಬೇಕೇ, ಅಥವಾ ಕೆಳದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕರ ಹುದ್ದೆ ಬೇಕೇ?" ಎಂದು ಕೇಳಿದ್ದರು. ಆ ಪ್ರಶ್ನೆಯನ್ನು ಬಿ .ಎಂ. ಶ್ರೀ ತೂಗಿ ನೋಡಿದರು. ಕನ್ನಡದ ಪಕ್ಷವನ್ನೇ ಹಿಡಿದು ಇಂಗ್ಲಿಷ್‌ನ ಭದ್ರಕೋಟೆಯನ್ನು ಭೇದಿಸುವುದು ದುಸ್ಸಾಧ್ಯವಾದ ಕೆಲಸ. ಇಂಗ್ಲಿಷಿನ ಕೋಟೆಯೊಳಕ್ಕೇ ಸೇರಿಕೊಂಡು ಪ್ರಬಲನಾಗಿ ಕನ್ನಡಕ್ಕೆ ಮಾನ್ಯತೆಯನ್ನು ತಂದುಕೊಡಬೇಕೆಂದು ತೀರ್ಮಾನಿಸಿದರು. ಹಾಗಾಗಿ ಕೆಳದರ್ಜೆಯ ಇಂಗ್ಲಿಷ್ ಪ್ರಾಧ್ಯಾಪಕ ಹುದ್ದೆಯನ್ನೇ ಆರಿಸಿಕೊಂಡರು. ಆ ಕ್ಷೇತ್ರದಲ್ಲಿಯೇ ಶ್ರಮಿಸಿ ವಾಗ್ಮಿತೆಯಲ್ಲಿ ಪಳಗಿದ್ದ ಅವರು ಆಕ್ಸ್‌ಫರ್ಡ್ ಕೇಂಬ್ರಿಜ್ ಪ್ರೊಫೆಸರುಗಳಿಗಿಂತ ಏನೇನೂ ಕಡಿಮೆಯಲ್ಲವೆಂಬ ಮಟ್ಟಿಗೆ ಪ್ರಖ್ಯಾತಿಗೊಂಡರು. "ಇವರೇನಾದರೂ ಇಂಗ್ಲೆಂಡಿಗೆ ಹೋದರೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದವರು ಇವರನ್ನು ಮತ್ತೆ ಹಿಂದಕ್ಕೆ ಕಳಿಸುವುದಿಲ್ಲ" ಎಂದು ಆಂಗ್ಲ ಪ್ರೊಫೆಸರರೇ ಒಬ್ಬರು ಉದ್ಗರಿಸಿದರಂತೆ! ಪ್ರಾಸಂಗಿಕವಾಗಿ ಅವರು ವಿಶ್ವವಿದ್ಯಾಲಯದ ಆಡಳಿತ ಸೂತ್ರಗಳನ್ನು ಹಿಡಿದ ರಿಜಿಸ್ಟ್ರಾರರೂ ಆದುದರಿಂದ, ತಮ್ಮ ಸಂಕಲ್ಪಗಳನ್ನೆಲ್ಲ ಜಾರಿಗೊಳಿಸಲು ಅವರಿಗೆ ಸಾಧ್ಯವಾಯಿತು. 'ಇಂಗ್ಲಿಷ್ ಗೀತಗಳು', 'ಹೊಂಗನಸುಗಳು' ಮತ್ತಿತರ ಕೃತಿಗಳ ಮೂಲಕ, ತಮ್ಮ ಭಾಷಣಗಳು ಲೇಖನಗಳ ಮೂಲಕ ಸಾಹಿತಿಗಳಿಗೆ ಹೊಸ ಹಾದಿಯನ್ನು ಹಾಕಿಕೊಟ್ಟು, ಹೊಸದೃಷ್ಟಿಯನ್ನು ತಂದು ಕೊಟ್ಟ, ಕನ್ನಡ ಸಾಹಿತ್ಯ ಸಂಪತ್ತಿನ ಸಮೃದ್ಧಿಯನ್ನು ತೋರಿಸಿಕೊಟ್ಟು, ಕನ್ನಡ ಭಾಷೆ ಸಾಹಿತ್ಯದ ಮೇಲೆ ಅಭಿಮಾನ ಮೂಡುವಂತೆ ಮಾಡಿದರು. ಕನ್ನಡ ಪ್ರಾಧ್ಯಾಪಕರಾಗಿ ಶ್ರೇಷ್ಠ ಮಟ್ಟದ ಕನ್ನಡ ಸೇನಾನಿಗಳನ್ನೇ ತಯಾರುಮಾಡಿಕೊಟ್ಟರು. ಮೊದಲ ಕಂತಿನಲ್ಲಿ ತಯಾರಾದವರು ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಮತ್ತು ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು. ಆನಂತರದ ಕಂತಿನಲ್ಲಿ ತಯಾರಾಗಿ ಬಂದವರು ಕುವೆಂಪು, ಡಿ.ಎಲ್.ಎನ್., ತೀ.ನಂ.ಶ್ರೀ., ಎಂ.ವಿ. ಸೀತಾರಾಮಯ್ಯ, ಕೆ. ವೆಂಕಟರಾಮಪ್ಪ, ಎನ್. ಅನಂತರಂಗಾಚಾರ್ ಮೊದಲಾದವರು.

ನಾವು ಮಹಾರಾಜಾ ಕಾಲೇಜಿನ ಹೊಸ್ತಿಲು ಮೆಟ್ಟುವ ವೇಳೆಗೆ ಕನ್ನಡದ ಕ್ರಾಂತಿ ವಿಶ್ವವಿದ್ಯಾಲಯದ ಆವರಣದಲ್ಲಿ ವ್ಯಾಪಿಸಿಕೊಳ್ಳುತ್ತ ಬಂದಿತ್ತು. ಬಿ.ಎಂ. ಶ್ರೀಯವರು ನಿವೃತ್ತರಾಗಿ ತಮ್ಮ ಜೀವನದ ಕೊನೆಯ ಘಟ್ಟವನ್ನು ಎದುರು ನೋಡುತ್ತಿದ್ದರು. ಪ್ರೊ. ವೆಂಕಣ್ಣಯ್ಯನವರೂ ತೀರಿಕೊಂಡಿದ್ದರು. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು ನಮಗೆ ಮೂರು ತಿಂಗಳು ಅಧ್ಯಾಪಕರಾಗಿದ್ದು ನಿವೃತ್ತರಾದರು. ಅದೇ ಸ್ಥಾನಕ್ಕೆ ಬಂದರು ಬೆಂಗಳೂರಿನಲ್ಲಿದ್ದವರು ಮೈಸೂರಿಗೆ ಪ್ರೊ. ಕುವೆಂಪು ಅವರು ಡಿ.ಎಲ್.ಎನ್.ರವರು, ಕ.ವೆಂ. ರಾಘವಾಚಾರ್ಯರು, ಎನ್. ಅನಂತರಂಗಾಚಾರ್ಯರು ಅಲ್ಲೇ ಇದ್ದರು.

ಬಿ.ಎಂ. ಶ್ರೀಯವರ ನೇರ ಶಿಷ್ಯರಾಗಿ, ಕನ್ನಡದ ಕಟ್ಟಾಭಿಮಾನಿಯಾಗಿ, ತಮ್ಮ ಪ್ರತಿಭೆಯಿಂದಲೂ ವಿದ್ವತ್ತಿನಿಂದಲೂ ಕೃತಿಗಳಿಂದಲೂ ಆಬಾಲವೃದ್ಧರಲ್ಲಿ ಪ್ರಸಿದ್ಧಿ ಪಡೆದಿದ್ದ ಅವರನ್ನು ನೋಡುವುದೇ ಒಂದು ಪುಣ್ಯ, ಅವರ ನುಡಿಯನ್ನು ಕೇಳುವುದೇ ಒಂದು ಪುಣ್ಯ ಎಂದಿದ್ದ ನಮಗೆ ಅವರ ಪದತಳದಲ್ಲಿ ಕುಳಿತು ಪಾಠ ಕೇಳುವ ಸೌಭಾಗ್ಯ ದೊರೆತುದಕ್ಕೆ ನಮ್ಮ ಆನಂದಕ್ಕೆ ಪಾರವೇ ಇಲ್ಲ. ಅವರ ಆಗಮನದಿಂದ ಇಡೀ ಮಹಾರಾಜಾ ಕಾಲೇಜಿನ ವಾತಾವರಣವೇ ಬದಲಾಯಿತು. ಸೇನಾನಿಯೇ ಇಲ್ಲದೆ ಚೆಲ್ಲಾ ಪಿಲ್ಲಿಯಾಗಿದ್ದ ಸೈನ್ಯಕ್ಕೆ ಸಮರ್ಥ ಸೇನಾನಿಯೊಬ್ಬ ದೊರೆತಂತಾಗಿತ್ತು. ಕನ್ನಡದ ವಿದ್ಯಾರ್ಥಿಗಳಲ್ಲಿ ಸಹಜವಾಗಿದೆ ಹೊಸಹುರುಪು ಉತ್ಸಾಹ ಹುಟ್ಟಿ, ಅವರು ತಲೆಯೆತ್ತಿ ಸ್ವಾಭಿಮಾನದಿಂದ ಬೀಗುವ ದಿನಗಳು ಬಂದವು. ನಮ್ಮ ನೆರೆಯ ಕೋಣೆಯಲ್ಲೇ ಇದ್ದ ಇಂಗ್ಲಿಷ್ ಪ್ರಾಧ್ಯಾಪಕರ ಕೋಣೆಯಿಂದ ಹೊರಬೀಳುತ್ತಿದ್ದ ವಿದ್ಯಾರ್ಥಿಗಳು ನಮ್ಮತ್ತ ಕುಹಕದೃಷ್ಟಿ ಬೀರುತ್ತಿದ್ದುದು ಮಾಯವಾಯಿತು. ಕನ್ನಡವೆಂದರೆ ಅಪಹಾಸ್ಯಮಾಡಿ ಅವಹೇಳನೆಗೆ ಗುರಿಮಾಡುತ್ತಿದ್ದವರ ಗಂಟಲು ಕಟ್ಟಿತು.

ಮೂರು ವರ್ಷಕಾಲ ಕುವೆಂಪು, ಡಿ .ಎಲ್.ಎನ್., ತೀ.ನಂ.ಶ್ರೀ., ವಿ.ಸೀ. ಮೊದಲಾದ ಮೇರುಸದೃಶ ಅಧ್ಯಾಪಕರಿಂದ ಜ್ಞಾನದಾನ ಪಡೆದು ನಮ್ಮ ವ್ಯಕ್ತಿತ್ವವನ್ನೇ ರೂಪಾಂತರಿಸಿಕೊಂಡ ಮಹಿಮೆಯನ್ನು ಮಾತುಗಳಲ್ಲಿ ವರ್ಣಿಸಲಾದೀತೇ?

'ಪ್ರಾಂಶುಲಭ್ಯೇ ಫಲೇ ಲೋಭಾತ್ ಉದ್ಬಾಹುರಿವ ವಾಮನಃ' ಎಂದುಕೊಂಡು ಅಳುಕಿನಿಂದ 'ರಘುವಂಶ' ಕಾವ್ಯ ರಚನೆಗೆ ಮೊದಲಿಟ್ಟ ಕಾಳಿದಾಸ ದಿವ್ಯಸುಂದರವಾದ ಮಹಾಕಾವ್ಯವನ್ನೇ ಬರೆದಿಟ್ಟನಲ್ಲವೆ!

ಪರೀಕ್ಷೆ ಮುಗಿದ ಕೂಡಲೇ ಹಾಸ್ಟೆಲ್ ಊಟ ನಿಂತಿತು. ಫಲಿತಾಂಶಕ್ಕೆ ಕಾಯಬೇಕು. ಪಾಸಾದ ಕೂಡಲೇ ಕೆಲಸದ ಅನ್ವೇಷಣೆ ಮಾಡಬೇಕು, ಇಲ್ಲದಿದ್ದರೆ ಬದುಕಲು ಮಾರ್ಗ? ಆಗಿನ ಕಾಲಕ್ಕೆ ಹೆಚ್ಚೆಂದರೆ ಲೆಕ್ಚರರ್ ಉದ್ಯೋಗ ಸಿಗಬಹುದು. ತಿಂಗಳಿಗೆ ನೂರು ರೂ ಸಂಬಳ, ಆಗಿನ ನೂರು ರೂ ಈಗಿನ ಹತ್ತು ಸಾವಿರಕ್ಕೆ ಸಮಾನ. ನಮ್ಮ ತಂಡದವರ ಪೈಕಿ ಜಿ.ಎಸ್. ಶಿವರುದ್ರಪ್ಪ ಮತ್ತು ನಾನು ಲೆಕ್ಚರರ್ ಕೆಲಸ ಸಿಕ್ಕಿ ಒಬ್ಬರು ದಾವಣಗೆರೆ ಕಾಲೇಜಿಗೆ ಇನ್ನೊಬ್ಬರು ಹಾಸನದ ಕಾಲೇಜಿಗೆ ಹೋದೆವು. ಉಳಿದವರು ಎಂ.ಎ. ತರಗತಿಗೆ ಸೇರಿದರು. ಸ್ವಲ್ಪ ದಿನಗಳ ಮೇಲೆ ಬಸವಾರಾಧ್ಯರಿಗೂ ಅದೇ ಸಂಬಳದ ಮೇಲೆ ಕೆಲಸ ಸಿಕ್ಕಿತು, ಆದರೆ ಓರಿಯೆಂಟಲ್ ಲೈಬ್ರೆರಿಯಲ್ಲಿ. ನಮ್ಮ ಕೆಲಸವಾದರೋ ಕಾಲೇಜು ವಿದ್ಯಾರ್ಥಿಗಳಿಗೆ ಕಾವ್ಯದ ಪಾಠ ಹೇಳುವುದು. ಅಂದರೆ, ಸ್ವಲ್ಪ ಹಿನ್ನೆಲೆಯೊಡನೆ ಪದ್ಯಗಳ ಅರ್ಥವನ್ನು ಸ್ವಾರಸ್ಯವನ್ನು ನಾವೂ ಸವಿಯುತ್ತ ಮಕ್ಕಳಿಗೂ ಉಣಬಡಿಸುವುದು. ನಮಗೇನಾದರೂ ಪಾಠ ಹೇಳಲು ಪುಣ್ಯವಶಾತ್ ಪಂಪ, ರನ್ನ, ನಾಗಚಂದ್ರ, ನಾಗವರ್ಮರಂತಹ ಕವಿಗಳ ಕಾವ್ಯ ದೊರೆತರೆ ವಿದ್ಯಾರ್ಥಿಗಳೊಡನೆ ನಾವು ರಸಾನಂದದಲ್ಲಿ ಮುಳುಗಿರುತ್ತಿದ್ದೆವು. ವಿದ್ಯಾರ್ಥಿಗಳು ತಾವು ಕಲಿತ ಪಾಠವನ್ನು ಎಂದೂ ಮರೆಯುತ್ತಿರಲಿಲ್ಲ. ಪಾಠ ಆದಮೇಲೆ ನಮಗೆ ವಿಶ್ರಾಂತಿ, ಬೇರೆ ತಲೆಹೋಗುವ ಕೆಲಸವಿಲ್ಲ. ಪಾಪ, ಬಸವಾರಾಧ್ಯರಿಗೆ ಓಲೆಗರಿ, ಕೈಬರಹದ ಪುಸ್ತಕಗಳನ್ನು ಓದುವುದು, ತಪ್ಪು ಸರಿ ನೋಡುವುದು, ಪಾಠಾಂತರಗಳನ್ನು ಗುರುತಿಸುವುದು, ಟಿಪ್ಪಣಿಗಳನ್ನು ಬರೆಯುವುದು-ಇತ್ಯಾದಿಯಾಗಿ ಕಾವ್ಯಸಂಪಾದನ ಕಾರ್ಯ. ಅದೃಷ್ಟವಶಾತ್ ಪಕ್ಕದಲ್ಲೇ ಕಾಲೇಜಿದ್ದುದರಿಂದ ಎಂ.ಎ. ತರಗತಿಯಲ್ಲಿ ಕಲಿಯಲು ಅವರಿಗೆ ಅವಕಾಶ ಸಿಕ್ಕಿತ್ತು. ಅಂತು, ನಮ್ಮ ಉದ್ಯೋಗ ಹೀಗೆಯೇ ಮುಂದುವರಿಯಿತು. ಅವರ ಉದ್ಯೋಗ ಹಾಗೆಯೇ ಮುಂದುವರಿಯಿತು.

ಮುಂದೆ ಪ್ರೊ. ಡಿ.ಎಲ್.ಎನ್. ಸಾಹಿತ್ಯ ಪರಿಷತ್ತಿನ ಬೃಹತ್ ಅರ್ಥಕೋಶದ ಪ್ರಧಾನ ಸಂಪಾದಕರಾದಾಗ ತಮ್ಮ ಸಹಾಯಕ್ಕೆ ಶ್ರದ್ಧಾವಂತನೂ ಸಮರ್ಥನೂ ಅದ ಶಿಷ್ಯನೊಬ್ಬನ ಅಗತ್ಯವಿತ್ತು. ಅವರ ದೃಷ್ಟಿ ಸಹಜವಾಗಿ ಓರಿಯೆಂಟಲ್ ಲೈಬ್ರೆರಿಯ ಉದ್ಯೋಗದಲ್ಲಿದ್ದ ಬಸವಾರಾಧ್ಯರ ಕಡೆಗೆ ಹೋಯಿತು. ಸರಿ ಬಸವಾರಾಧ್ಯರು ಬೆಂಗಳೂರಿಗೆ ಬಂದು ಡಿ.ಎಲ್.ಎನ್.ರವರ ಆಶ್ರಯ ಸೇರಿದರು.

ಅವರ ಕೆಲಸ ಮಹಾಹೊಣೆಗಾರಿಕೆಯದಾಯಿತು. ನಾನಾ ಕಾವ್ಯಗಳಿಂದ ಗ್ರಂಥಗಳಿಂದ ಅಗತ್ಯ ಮಾಹಿತಿಗಳ-ನ್ನೊದಗಿಸುವುದು, ಶಬ್ದಗಳ ಪಟ್ಟಿಯನ್ನು ತಯಾರಿಸುವುದು, ಶಬ್ದಶಬ್ದವನ್ನೂ ಅಕ್ಷರ ಅಕ್ಷರವನ್ನೂ ಎಚ್ಚರಿಕೆಯಿಂದ ಪರಿಶೀಲಿಸುವುದು, ಜೊತೆಗೆ ಅರ್ಥಕೋಶದ ಸಲಹಾಮಂಡಲಿಯ ಸಭೆಯ ಏರ್ಪಾಟು, ಸಭೆಗೆ ಪೂರ್ವಸಿದ್ಧತೆ, ಸಭೆಯ ನಿರ್ವಹಣೆ, ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗಿಯಾಗಿ ಸೂಚನೆಗಳನ್ನು ಕಾರ್ಯಗತವಾಗಿಸುವುದು ಇಂತಹ ಜವಾಬ್ದಾರಿಯುತವಾದ ಹಾಗೂ ಶ್ರಮದಾಯಕವಾದ ಕೆಲಸಗಳನ್ನು ಮಾಡಬೇಕಾಗಿತ್ತು. ಆದರೆ ಗುರುಗಳ ಮಾರ್ಗದರ್ಶನವಿದ್ದುದರಿಂದ ಧೈರ್ಯವಾಗಿ ಮುಂದುವರಿದರು. ಒಟ್ಟಿನಲ್ಲಿ ಈ ಅರ್ಥಕೋಶ ರಚನೆಯ ಕಾರ್ಯ, ವಿನೋದವಾಗಿ ಹೇಳಬೇಕೆಂದರೆ, ಆಹಾರ ಪರಿಕರಗಳನ್ನೆಲ್ಲ ಸರಬರಾಜು ಮಾಡಿಕೊಂಡು, ನೂರಾರು ಬಗೆಯ ಸಿಹಿ-ಖಾರ ಭಕ್ಷ್ಯಗಳನ್ನು ಭೋಜ್ಯಗಳನ್ನು ಅಚ್ಚು ಕಟ್ಟಾಗಿ ತಯಾರಿಸಿ ಬೇರೆಯವರ ಉಪಯೋಗಕ್ಕಾಗಿ ಸಾಲಾಗಿ ಜೋಡಿಸಿಡುವುದು. ಅವನ್ನು ಸವಿದವರೆಲ್ಲ ಸರಿಯಾಗಿದೆ ಚೆನ್ನಾಗಿದೆ ಎಂದು ಪ್ರಶಂಸಿಸುವಂತಿರಬೇಕು. ಸಿದ್ಧಪಡಿಸಿ ಇಡುವುದಷ್ಟೇ ಜವಾಬ್ದಾರಿ. ಅನುಭೋಗವೆಲ್ಲ ಸಾರ್ವಜನಿಕರಿಗೆ. ಆದರೆ, ಅವರು ಮಾಡಿ ಸಿದ್ಧಪಡಿಸಿಟ್ಟ ಕಾರ್ಯ-ಅರ್ಥಕೋಶ-ಮಾತ್ರ ಶತಮಾನಗಳ ಕಾಲ ಸ್ಮರಣೀಯವಾಗಿ ಉಳಿಯುವಂತಹದು. ಈ ಉದ್ಯಮದಲ್ಲಿ ಜಯಶಾಲಿಯಾಗಿ ಹೊರಹೊಮ್ಮಿ ಬಂದರು ಬಸವಾರಾಧ್ಯರು.

ಇಂಗ್ಲಿಷಿನಲ್ಲಿ ಒಂದು ನಾಣ್ಣುಡಿಯಿದೆ, 'ನಿನ್ನ ಗೆಳೆಯರಾರು ಹೇಳು, ನಿನ್ನ ಯೋಗ್ಯತೆಯೇನೆಂದು ತಿಳಿದುಕೊಳ್ಳುವೆ' ಎಂದು ನಾವು ಆನರ್ಸ್ ತರಗತಿಯಲ್ಲಿದ್ದಾಗ ಹಳೆಗನ್ನಡದ ಪಂಚತಂತ್ರದಲ್ಲಿ 'ಸಂಸರ್ಗಜಾ ದೋಷಗುಣಾ ಭವನ್ತಿ' ಎಂಬ ಎರಡು ಗಿಳಿಮರಿಗಳ ಕಥೆಯನ್ನು ಓದಿದ್ದೆವು. ಯಾರ ಸಹವಾಸ ನಮಗೆ ಸತತವಾಗಿರುತ್ತದೋ ಅವರ ಗುಣಸ್ವಭಾವಗಳನ್ನೇ ನಾವು ಮೈಗೂಡಿಸಿಕೊಳ್ಳುತ್ತೇವೆ. ಪ್ರೊ. ಡಿ.ಎಲ್.ಎನ್.ರವರ ಮಾರ್ಗದರ್ಶನದಲ್ಲಿ ಕೆಲಸಮಾಡುತ್ತಾ, ಅರ್ಥಕೋಶದ ಸಲಹಾ ಮಂಡಲಿಯ ಸದಸ್ಯರುಗಳಾದ, ಡಾ. ಆರ್.ಸಿ. ಹಿರೇಮಠ್‌ರವರು, ಡಾ. ಎ.ಎನ್. ಉಪಾಧ್ಯೆ, ಪ್ರೊ. ಎಮ್. ಮರಿಯಪ್ಪ ಭಟ್, ಪ್ರೊ. ಎಸ್.ಎಸ್. ಮಾಳವಾಡ, ಪ್ರೊ. ಡಿ.ಕೆ. ಭೀಮಸೇನರಾವ್, ಡಾ. ಬಿ. ಶಿವಮೂರ್ತಿಶಾಸ್ತ್ರಿ, ಡಾ. ಭೂಸನೂರುಮಠ, ಪ್ರೊ. ಜವರೇಗೌಡ, ಡಾ. ಹಾ.ಮಾ. ನಾಯಕ, ಡಾ. ಜಿ.ಎಸ್. ಶಿವರುದ್ರಪ್ಪ -ಇಂತಹ ದಿಗ್ಗಜಗಳ ನಿರಂತರ ಸಾಹಚರ್ಯದಲ್ಲಿ ಪಳಗಿದವರಾಗಿ ಬಸವಾರಾಧ್ಯರು ಕಳಂಕರಹಿತವಾದ ಮತ್ತು ಸರ್ವಾದರಣೀಯವಾದ ಉನ್ನತವ್ಯಕ್ತಿತ್ವವನ್ನು ರೂಪಿಸಿಕೊಂಡರು.

ಜೇನನ್ನು ಅಳೆಯುವವನು ಜೇನಂಟಿದ ಕೈಯನ್ನು ನೆಕ್ಕದೆ ಇದ್ದಾನೆಯೇ ಎಂಬುದೊಂದು ಗಾದೆ. ಜೇನನ್ನು ಅಳೆಯುವಾಗ ಪ್ರಸಂಗವಶಾತ್ ಕೈಗೆ ಅಂಟಿಕೊಂಡ ಜೇನನ್ನು ನೀರಿನಲ್ಲಿ ತೊಳೆದು ವ್ಯರ್ಥಮಾಡಿಕೊಳ್ಳುವ ಬದಲು ನೆಕ್ಕಿಕೊಳ್ಳುವುದು ಕ್ಷಮಾರ್ಹವಲ್ಲವೇ? ಅದನ್ನು ದೋಷವೆಂದು ಯಾರೂ ಪರಿಗಣಿಸುವುದಿಲ್ಲ. ಆದರೆ ಸಾಲು ಸಾಲು ಜೇನುಕೊಡಗಳನ್ನು ನೋಡಿ, ಮೇಲಿಂದ ಮೇಲೆ ಜೇನು ಅಳೆಯುವುದನ್ನೇ ಉದ್ಯಮಮಾಡಿಕೊಂಡು ಕೈಗಳನ್ನು ಜೇನು ಮಯವಾಗಿಸಿಕೊಳ್ಳುತ್ತಲೇ ಇದ್ದು, ನೆಕ್ಕುತ್ತಲೇ ಇರುವವರನ್ನು ಏನೆನ್ನೋಣ?

ಒಂದು ಕಾಲದಲ್ಲಿ ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿಗಳ ಏಳಿಗೆಗಾಗಿ, ಬಹುಮುಖ ಸೇವೆಗಾಗಿ ಕನ್ನಡ ಸಾಹಿತ್ಯದ ಪರಿಷತ್ತಿನ ನಂತಹ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ಆಗಿನವರು ನಿಸ್ಪೃಹರಾಗಿ ದುಡಿದು ಕೃತಾರ್ಥರಾದರು, ಚಿರಸ್ಮರಣೀಯರಾದರು, ಅನಂತರ ಪ್ರಜಾಪ್ರಭುತ್ವದ ಸರ್ಕಾರ ಬಂದಿತು.

ಜೇನಿನ ಕೊಡಗಳು ಬರತೊಡಗಿದವು. ಕನ್ನಡ ಸಾಹಿತ್ಯ ಪರಿಷತ್ತಿಗೂ ರಾಜಕೀಯ ಪ್ರವೇಶಿಸಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ, ಯಾವ ರಾಜಕೀಯ ಚುನಾವಣೆಗೂ, ಕಡಮೆಯಲ್ಲವೆಂಬತಾಯಿತು. ಒಬ್ಬರನ್ನೊಬ್ಬರ ಮೀರಿಸುವ ಸಂಚು ಮೊದಲಾಯಿತು. ಒಮ್ಮೆ ಚುನಾವಣೆಯಲ್ಲಿ ಸೋತ ಒಬ್ಬ ಮಹಾನುಭಾವರು "ನಾನು ರಾಜಕೀಯದ ವ್ಯಕ್ತಿ, ನಾನು ಏನೋ ಕಾರ್ಯಾರ್ಥ ದೆಹಲಿಗೆ ಹೋಗಿ ಬರುವಷ್ಟರಲ್ಲಿ ಈ ಸಾಹಿತಿ ಬಂದು ನನ್ನನ್ನೇ ಏಮಾರಿಸಿಬಿಟ್ಟನಲ್ಲ!" ಎಂದು ಉದ್ಗರಿಸಿದ್ದುಂಟು. ಇಂತಹ ಪೈಪೋಟಿ ಇದ್ದ ಕಾಲದಲ್ಲಿ ಎಲ್ಲ ಮಿತ್ರರು, ವಿಶ್ವಾಸಿಗಳು, ಸಜ್ಜನರು, ಸಾರ್ವಜನಿಕರು ತಾವಾಗಿ ಬಸವಾರಾಧ್ಯರನ್ನು ಚುನಾವಣೆ ನಿಲ್ಲಿಸಿ, ಆಯ್ಕೆಮಾಡಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಮಾಡಿದರು. ಅದು ಅವರ ಸಜ್ಜನಿಕೆಯ ಫಲ. ನಿರ್ಮಲ ಹಸ್ತರಾದ ಅವರು ತಮ್ಮಿಂದ ಆದಷ್ಟು ಸಾರ್ಥಕ ಸೇವೆಯನ್ನು ಮಾಡಿ ಕೃತಾರ್ಥರಾದರು.

'ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರ ಪೂಜನಮ್' ಎಂಬುದು ಹಿರಿಯರ ಉಕ್ತಿ. ಮನುಷ್ಯ ಬದುಕಿರುವಾಗ ನಾಲ್ಕು ಜನರಿಗೆ ಸಂತೋಷವಾಗುವಂತೆ ನಡೆದುಕೊಳ್ಳಬೇಕು, ಆಗ ಬಾಳು ಸಾರ್ಥಕ, ಅದೇ ಈಶ್ವರನ ಪೂಜೆ, ಅದಕ್ಕಿಂತ ಮಿಗಿಲೆನಿಸುವ ಪೂಜೆಯಿಲ್ಲ, ಅಂತಹ ವ್ಯಕ್ತಿತ್ವ ಗೆಳೆಯ ಬಸವಾರಾಧ್ಯರದು. ಅವರಿಗೆ ನನ್ನ ಶುಭಾಶಂಸನೆಗಳು.

XXX

ಸಹೃದಯ ಹಿರಿಯಣ್ಣ ಬಸವಾರಾಧ್ಯ

-ಜಿ.ಟಿ. ನಾರಾಯಣರಾವ್

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶಾಲ ಆಶ್ರಯದಲ್ಲಿ ಬಸವಾರಾಧ್ಯರೂ ನಾನೂ ಪಾಠಪ್ರವಚನೇತರ (non-academic ಎಂಬ ತಪ್ಪು ಹಣೆಪಟ್ಟಿಹೊತ್ತ) ವಿವಿಧ ವಿಭಾಗಗಳಲ್ಲಿ ಕನ್ನಡದ ಕೆಲಸದಲ್ಲಿ ಮಗ್ನರಾಗಿದ್ದೆವು. (೧೯೭೦ರ ದಶಕ) ಅವರು ಗ್ರಂಥಸಂಪಾದನಾ ವಿಭಾಗದ ಮುಖ್ಯಸ್ಥರಾಗಿ, ನಾನು ಕನ್ನಡ ವಿಶ್ವಕೋಶದ ವಿಜ್ಞಾನ ಸಂಪಾದಕನಾಗಿ. ಅವರದು ಶುದ್ಧ ಪಂಡಿತಪ್ರಪಂಚ. ನನ್ನದೋ ಆಧುನಿಕ ವಿಜ್ಞಾನ ಪರಿಕಲ್ಪನೆಗಳನ್ನು (ಇವು ಇಂಗ್ಲಿಷಿನಲ್ಲಿ ದೊರೆಯುವಂಥವು). ಕನ್ನಡದಲ್ಲಿ, ಇದರ ಜಾಯಮಾನಕ್ಕೆ ಒಪ್ಪುವಂತೆ, ನಿರೂಪಿಸುವ ಪ್ರಯತ್ನ. ನನ್ನನ್ನು ದಿನದಿನ ಎಂಬಂತೆ ಕಾಡುತ್ತಿದ್ದುದು ವಿಜ್ಞಾನಸಂವಹನಕ್ಕೆ ಸುಲಭವಾಗಿ ಒಗ್ಗದ ಕನ್ನಡವನ್ನು ಬಗ್ಗಿಸಿ ಗುರಿ ಸಾಧಿಸುವುದು. ಇದು ಬಲು ಸೂಕ್ಷ್ಮದ ಕುಸುರಿ ಕೆಲಸ. ಖಂಡಿತವಾಗಿಯೂ ಕನ್ನಡದಲ್ಲಿಯ ನನ್ನ ಬಂಡವಾಳ ಈ ಸವಾಲಿನ ಎದುರು ಅಸಮರ್ಪಕ ಎನ್ನಿಸುತ್ತಿತ್ತು.

ನಮ್ಮ ಸಂಸ್ಥೆಯಲ್ಲಿದ್ದ ಅನೇಕ ಕನ್ನಡ ಪಂಡಿತರ ಜೊತೆ ನಾನು ಪದೇ ಪದೇ ಈ ಸಮಸ್ಯೆಯನ್ನು ಚರ್ಚಿಸುವುದಿತ್ತು. ಕನ್ನಡ ಪದಗಳ ಛಾಯೆ, ಧ್ವನಿ, ಅನ್ವಾರ್ಥ, ಪರ್ಯಾಯ ಪದಗಳು, ವ್ಯಾಕರಣಬಂಧ ಇತ್ಯಾದಿ. ಪ್ರತಿಸಲವೂ ನನ್ನ ಸಮಸ್ಯೆಯನ್ನು ಚೆನ್ನಾಗಿ ಗ್ರಹಿಸಿ, ಸ್ವಾಂಗೀಕರಿಸಿ, ನನಗೆ ವಿವರಿಸಿ, ಯುಕ್ತ ಪರಿಹಾರವೀಯುತ್ತಿದ್ದ ಹಿರಿಯಣ್ಣ ಬಸವಾರಾಧ್ಯ. ಇವರದು ನಿರ್ದುಷ್ಟ ಭಾಷಾಪಾಂಡಿತ್ಯ, ಅಕೃತ್ರಿಮ ಪಾರದರ್ಶಕತೆ ಮತ್ತು ವೈಜ್ಞಾನಿಕ ಚಿಂತನ ಕ್ರಮ.

ಹೀಗೆ ನಮ್ಮ ಬೌದ್ಧಿಕ ಸಾಹಚರ್ಯ ಮುಂದುವರಿಯುತ್ತಿದ್ದಂತೆ ಬಸವಾರಾಧ್ಯರಿಗೆ ವಯಸ್ಸು ಐವತ್ತೈದು ತುಂಬಿತು. ಆಗ ಅವರನ್ನು (ನಿವೃತ್ತಿನಿಯಮವನ್ನು ತಪ್ಪಾಗಿ ಅರ್ಥವಿಸಿ) ಹಠಾತ್ತನೆ ನಿವೃತ್ತಿಗೊಳಿಸಲಾಯಿತು! ವಿಶ್ವವಿದ್ಯಾನಿಲಯಸೇವೆಯಲ್ಲಿ ಕೃತಕವಾಗಿ ಮತ್ತು ಸಾಮಾಜಿಕನ್ಯಾಯವಿರುದ್ಧವಾಗಿ ಎರಡು ವರ್ಗಗಳನ್ನು ಮಾಡಲಾಗಿತ್ತು: ಬೋಧಕರು (teaching staff - academic), ಬೋಧಕೇತರರು (non-teaching staff - non-academic); ಮೊದಲಿನ ವರ್ಗದವರಿಗೆ ನಿವೃತ್ತಿ ವಯಸ್ಸು ೬೦ ಎಂದೂ

ಎರಡನೆಯ ವರ್ಗದವರಿಗೆ ೫೫ ಎಂದೂ ನಿಗದಿಪಸಲಾಗಿತ್ತು. ನಮ್ಮ ಬಸವಾರಾಧ್ಯರನ್ನು ಬೋಧಕೇತರರ ವರ್ಗಕ್ಕೆ ಗುಟ್ಟಾಗಿ ತಳ್ಳಿ ಅವರನ್ನು ಮನೆಗೆ ಕಳಿಸಿದ್ದರು! ಅವರು ಉಚ್ಚ ನ್ಯಾಯಾಲಯದಿಂದ ಸಕಾರಣವಾಗಿ ತಡೆಯಾಜ್ಞೆ ತಂದರು. ಮುಂದೆ ಸಾಕಷ್ಟು ನಷ್ಟ ಕಷ್ಟ ಮತ್ತು ವಿಳಂಬ ಅನುಭವಿಸಿ ಅವರೇನೋ ಗೆದ್ದರು: ನಿವೃತ್ತಿಪೂರ್ವದಲ್ಲಿ ವಿಶ್ವವಿದ್ಯಾನಿಲಯ ಅವರಿಗೆ ಕನಿಷ್ಠ ೬ ತಿಂಗಳ ಲಿಖಿತ ಸೂಚನೆ ಕೊಟ್ಟಿರಲಿಲ್ಲ ಎಂಬುದೇ ಇಲ್ಲಿಯ ಮುಖ್ಯ ಸಬೂಬು.

ಈ ಮುಖಭಂಗದಿಂದ ಎಚ್ಚರಗೊಂಡ ವಿಶ್ವವಿದ್ಯಾನಿಲಯ ಮುಂದೆ ನನಗೆ ಆ ಪೂರ್ವಸೂಚನೆಯನ್ನು (೫೫ ವರ್ಷ ತುಂಬಲು ಇನ್ನೂ ೬ ತಿಂಗಳಿದ್ದಾಗ) ಕೊಟ್ಟೇಬಿಟ್ಟಿತು. ಬಸವಾರಾಧ್ಯರನ್ನು ನಿವೃತ್ತಿಗೊಳಿಸಿದ ಅದೇ ನಿರ್ದೇಶಕರು ನನಗೆ ಈ ಆದೇಶವನ್ನು ಜಾರಿಮಾಡುತ್ತ "ಇದು ನಾನು ವೇದನೆಸಹಿತ ನಿರ್ವಹಿಸಬೇಕಾದ ಕರ್ತವ್ಯ. ನಿಮ್ಮನ್ನು ಬಿಟ್ಟುಕೊಡಲು ನನಗೇನೂ ಇಷ್ಟವಿಲ್ಲ. ಆದ್ದರಿಂದ ದಯಪಿಟ್ಟು ನೀವು ನಿಮ್ಮ ಸೇವೆಯನ್ನು ವಿಸ್ತರಿಸಲು ಲಿಖಿತ ಮನವಿಯನ್ನು ಕುಲಸಚಿವರಿಗೆ ಸಲ್ಲಿಸಬೇಕು" ಎಂಬ ಸಲಹೆ ನೀಡಿದರು.

"ನಾನು ಈ ವಿಶ್ವವಿದ್ಯಾನಿಲಯದಿಂದ ಆಹ್ವಾನಿತನಾಗಿ ಬಂದವನು. ಈಗ ಸೇವೆ ಮುಂದುವರಿಸಿ ಎಂದು ಬೇಡಲೇ? ಸುತರಾಂ ಸಾಧ್ಯವಿಲ್ಲ. ನಾನಾಗಿ ನಿವೃತ್ತನಾಗುತ್ತೇನೆ ಎಂದೇನೂ ಹೇಳಿಲ್ಲವಲ್ಲ! ಅಲ್ಲದೇ ನನ್ನ ತತ್‌ಕ್ಷಣದ ನಿವೃತ್ತಿಯಿಂದ ಯಾವುದೇ ಸಾಮಾಜಿಕ ನ್ಯಾಯವೂ ಈಡೇರುವುದಿಲ್ಲ. ಏಕೆಂದರೆ ಈ ಹುದ್ದೆಗೆ ಸ್ಪರ್ಧೆಯೇ ಇಲ್ಲ. ಇಷ್ಟಾಗಿಯೂ ನನ್ನ ಸೇವೆ ಮುಂದುವರಿಯಬೇಕೆಂಬುದು ನಿಮ್ಮ ಖಚಿತ ಆಶಯವಾದರೆ ಮೇಲಿನವರಿಗೆ ನೀವೇ ಪತ್ರ ಬರೆಯಬಹುದಲ್ಲ?"

ಮುಂದೆ ನಡೆದ ಪಿಷ್ಟಪೇಷಣ ವಾದಾನಂತರ ನಾನೊಂದು ಶರತ್ತು ಹಾಕಿ ಅರ್ಜಿ ಸಲ್ಲಿಸಲು ಒಪ್ಪಿದೆ. ನಿರ್ದೇಶಕರ ಮೂಲಕ ಕುಲಸಚಿವರಿಗೆ ಕಳಿಸಿದ ಅಧಿಕೃತ ಜವಾಬಿನಲ್ಲಿ ಮೂರು ಅಂಶಗಳನ್ನು ಎತ್ತಿ ಕಾಣಿಸಿದೆ: "ಕನ್ನಡ ವಿಶ್ವಕೋಶದೊಂದಿಗೆ ಬೆಳೆದಿರುವ ನಾನು ಈ ಯೋಜನೆ ಪೂರ್ಣವಾಗುವ ತನಕ ನನ್ನ ಅನುಭವವನ್ನು ಇದಕ್ಕೆ ಒಪ್ಪಿಸಬೇಕೆಂದಿದ್ದೇನೆ; ನಾನು ಬೋಧಕವರ್ಗದಿಂದ ಆಹ್ವಾನಿತನಾಗಿ ಬಂದವನಾದ್ದರಿಂದ ಶೇಕಡಾ ೧೦೦ ಅಕೆಡೆಮಿಕ್. ಆದ್ದರಿಂದ ಕಾನೂನು ಪ್ರಕಾರ ೬೦ರ ತನಕ ಈ ವೃತ್ತಿಯಲ್ಲಿ ಮುಂದುವರಿಯಲು ಹಕ್ಕು ಇರುವವನು; ನನ್ನ ಅವಧಿಪೂರ್ವ ನಿವೃತ್ತಿಯಿಂದ ಯಾವ ವ್ಯಕ್ತಿಗೂ ಬಡ್ತಿ ದೊರೆಯುವುದಿಲ್ಲ ಎಂದೇ ಸದ್ಯದ ಆದೇಶ ಕಾನೂನು-ನೀತಿ-ವಿಶ್ವಕೋಶ ಹಿತಗಳಿಗೆ ವಿರೋಧವಾದದ್ದು. ಇದನ್ನು ವಿಶ್ವವಿದ್ಯಾನಿಲಯ ತತ್‌ಕ್ಷಣ ವಾಪಸು ಪಡೆಯದಿದ್ದರೆ ನ್ಯಾಯಾಲಯದ ಪಾವಟಿಗೆ ಖಂಡಿತ ಏರುತ್ತೇನೆ."

ಈ ಕರಡನ್ನು ರೂಪಿಸುವಲ್ಲಿ ಹಿರಿಯಣ್ಣ ಬಸವಾರಾಧ್ಯರಿಂದ ದೊರೆತ ಮಾರ್ಗದರ್ಶನ ಅಮೂಲ್ಯವಾದದ್ದು. ಎಷ್ಟಾದರೂ ಹಳೆ ಹುಲಿ ಅಲ್ಲವೇ? ಮುಂದಿನ ಐದೂವರೆ ತಿಂಗಳು ವಿಶ್ವವಿದ್ಯಾನಿಲಯದಿಂದ ಯಾವ ಸುಳುಹೂ ಇಲ್ಲ, ದಿವ್ಯ ಮೌನ! ನಾನು ನಿರ್ಲಿಪ್ತನಾಗಿದ್ದೆ. ಬಸವಾರಾಧ್ಯರು ಪತ್ತೆಹಚ್ಚಿದರು ಮೇಲಿನವರ ಹುನ್ನಾರ. ನಿಗದಿಯಾದ ಗಡು ಮುಗಿದಾಗ ಹಠಾತ್ತನೆ ನನ್ನನ್ನು ನಿವೃತ್ತಿಗೊಳಿಸುವುದು, ಮತ್ತು ನ್ಯಾಯಾಲಯಕ್ಕೆ ನಾನು ಹೋಗುವುದನ್ನು ತಪ್ಪಿಸುವುದು!

"ಈಗಿಂದೀಗಲೇ ನೀವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲೇಬೇಕು. ಇಲ್ಲವಾದರೆ ಮೇಲಿನವರ ಅನ್ಯಾಯಕ್ಕೆ ನಿಮ್ಮದೊಂದು ಪೂರ್ವನಿದರ್ಶನ ದೊರೆತಂತೆ ಆಗುವುದು. ಇದು ಆಗಕೂಡದು. ದುಡ್ಡಿನ ತೊಂದರೆ ಇದ್ದರೆ ಹೇಳಿ, ನಾನು ಏರ್ಪಾಡು ಮಾಡುತ್ತೇನೆ. ವಕೀಲರಾಗಿ ನನ್ನ ಫಿರ್ಯಾದಿ ಮಂಡಿಸಿ ತಡೆ ಆಜ್ಞೆ ತಂದು ಈಗಲೂ ಅದನ್ನು ನಡೆಸುತ್ತಿರುವ ಹಿರಿಯ ವಕೀಲರಿದ್ದಾರೆ. ಅವರನ್ನು ಕಾಣೋಣ." ಅವರ ಸಾತ್ವಿಕ ಆಕ್ರೋಶ ಕುದಿಯುತ್ತಿತ್ತು.

ಬಸವಾರಾಧ್ಯರ ಆ ಅಕೃತ್ರಿಮ ಮತ್ತು ಪರಿಶುದ್ಧ ನ್ಯಾಯಪ್ರೀತಿಗೆ ಶರಣಾಗಿ ನಾನು ಉಚ್ಚನ್ಯಾಯಾಲಯಕ್ಕೆ ಹೋದೆ. ಅದು ವಿಶ್ವವಿದ್ಯಾನಿಲಯಕ್ಕೆ ಛೀಮಾರಿ ಹಾಕಿ ನನ್ನ ನಿಲವನ್ನು ಸಮರ್ಥಿಸಿ ತೀರ್ಪು ನೀಡಿತು. ಆಗ ಅತ್ಯಂತ ಹರ್ಷಪಟ್ಟವರು ನಮ್ಮ ಗೌರವಾನ್ವಿತ ಬಸವಾರಾಧ್ಯರು. ನಾನು ಸೇವೆಯಲ್ಲಿ ೬೦ರ ತನಕ ಮುಂದುವರಿದೆ. ಈಗೇನಾಗಿದೆ ಗೊತ್ತೇ? ಜೂನ್ ೨೦೦೪ರಲ್ಲಿ ಮತ್ತೆ ಅದೇ ವಿಶ್ವವಿದ್ಯಾನಿಲಯ ನನ್ನ ಸೇವೆ ಬಯಸಿ ನನ್ನನ್ನು ಗೌರವ ವಿಜ್ಞಾನಸಂಪಾದಕತ್ವಕ್ಕೆ ಆಹ್ವಾನಿಸಿತು! (ನನಗೀಗ ೭೯ ನಡೆಯುತ್ತಿದೆ) ಕನ್ನಡದ ಕೆಲಸ ಎಂದು ನಾನಿದನ್ನು ಒಪ್ಪಿ ಯಥಾಶಕ್ತಿ ಕೈಂಕರ್ಯ ಸಲ್ಲಿಸುತ್ತಿದ್ದೇನೆ, ಪ್ರತಿದಿನವೂ ಬಸವಾರಾಧ್ಯರನ್ನು ನೆನೆಯುತ್ತ ಶರಣು ಶರಣು ಎನ್ನುತ್ತಿದ್ದೇನೆ.

XXX

ಶ್ರೀ ಎನ್. ಬಸವಾರಾಧ್ಯರ ಪರಿಚಯ

-ಎಸ್.ಎನ್. ಕೃಷ್ಣಜೋಯಿಸ್

ನನ್ನ ಮತ್ತು ಶ್ರೀ ಬಸವಾರಾಧ್ಯರ ಪ್ರಥಮ ಭೇಟಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ. ಶ್ರೀಯುತರ ಕನ್ನಡ ಬಿ.ಎ. ಆನರ್ಸ್‌ನಲ್ಲಿ ಉತ್ತೀರ್ಣರಾದ ಮೇಲೆ ಸಂಶೋಧನಾಲಯದ ಕನ್ನಡ ವಿಭಾಗದಲ್ಲಿ ಕನ್ನಡ ಗ್ರಾಜುಯೇಟ್ ಸ್ಪೆಷಲಿಷ್ಟರಾಗಿ ನಿಯಮಿತರಾದರು. ಕೆಲಸದಲ್ಲಿರುವಾಗಲೇ ಕನ್ನಡ ಎಮ್.ಎ. ಪರೀಕ್ಷೆಗೆ ವ್ಯಾಸಂಗಮಾಡಿ ಉತ್ತೀರ್ಣರಾದರು. ಸಂಶೋಧನಾಲಯದಲ್ಲಿರುವಾಗಲೇ ಇವರಿಗೆ ಮದುವೆ ಆಯಿತು. ದಂಪತಿಗಳ ಹೊಂದಾಣಿಕೆ ಮತ್ತು ಮದುವೆ ಮೂಹೂರ್ತವನ್ನು ನನ್ನನ್ನೇ ಕೇಳಿ ಅದರಂತೆ ವಿವಾಹ ಮಾಡಿಕೊಂಡರು. ಇವರ ಜನ್ಮಸ್ಥಳ ಕೋಲಾರ ಜಿಲ್ಲೆ ಎಂದು ನನಗೆ ಆಗ ತಿಳಿಯಿತು. ಇವಿಷ್ಟು ಅವರ ಪ್ರಥಮ ಪರಿಚಯ.

ಸಂಶೋಧನಾಲಯದ ಕಾರ್ಯಾಗಾರದಲ್ಲಿ ನನ್ನ ಆಸನದ ಎದುರುಗಡೆಯೇ ಇವರ ಆಸನ. ಮೊಟ್ಟಮೊದಲು ಇವರಿಗೆ ತೊರವೆ ರಾಮಾಯಣದ ಕೃತಿಯ ಸಂಪಾದನಾ ಕಾರ್ಯವನ್ನು ಆಗಿನ ಸಂಶೋಧನಾಲಯದ ಮುಖ್ಯಾಧಿಕಾರಿಗಳಾಗಿದ್ದ ಶ್ರೀಯುತ ಹೆಚ್.ಆರ್. ರಂಗಸ್ವಾಮಯ್ಯಂಗಾರ್ ರವರು ವಹಿಸಿದ್ದರು. ಪ್ರಾಚೀನ ಓಲೆಪ್ರತಿಯಿಂದ ಪ್ರತಿಮಾಡಿ, ಉಳಿದ ಓಲೆಪ್ರತಿಗಳೊಡನೆ ತಾಳೆನೋಡಿ ಪಾಠಾಂತರಗಳನ್ನು ಗುರುತಿಸುವುದರ ಮೂಲಕ ಗ್ರಂಥ ಸಂಪಾದನಾ ಕಾರ್ಯವನ್ನು ಮಾಡುತ್ತಿದ್ದರು. ಎಮ್.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಕೆಲಸಕ್ಕೆ ಸೇರಿ ಮೂರು ವರ್ಷಗಳ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡಕೋಶ ವಿಭಾಗದಲ್ಲಿ ಮುಖ್ಯಾಧಿಕಾರಿಗಳಾಗಿದ್ದು ಕನ್ನಡಕೋಶದ ಸಂಪಾದನಾ ಕಾರ್ಯವನ್ನು ಮಾಡುತ್ತಿದ್ದರು. ಅವರು ಅಲ್ಲಿರುವಾಗಲೇ ನನಗೆ ಓಲೆಗರಿ ಗ್ರಂಥಗಳಿಂದ ಪದಗಳ ಸಂಗ್ರಹ ಕಾರ್ಯವನ್ನು ಮಾಡುವ ಏರ್ಪಾಡು ಮಾಡಿದ್ದರು. ಅಂತೆಯೇ ಪಂಡಿತರಿಗೆ ಸರ್ಕಾರದಿಂದ ಗೌರವ ಸಮರ್ಪಣಾ ಸಮಾರಂಭದಲ್ಲಿ ನನಗೂ ಆ ಮರ್ಯಾದೆ ಸಲ್ಲುವಂತೆ ಏರ್ಪಡಿಸಿದರು.

ಮಾನ್ಯ ಪ್ರೊಫೆಸರ್ ಜವರೇಗೌಡರ ಬೃಹತ್ ಪ್ರಯತ್ನದಿಂದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿದ್ದ ಕನ್ನಡ ವಿಭಾಗವು ವರ್ಗಾವಣೆ ಆಗಿ ಗಂಗೋತ್ರಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಒಂದು ಭಾಗವಾಯಿತು.

ಶ್ರೀ ಬಸವಾರಾಧ್ಯರು ಈ ವಿಭಾಗಕ್ಕೆ ಉಪಮುಖ್ಯ ಅಧಿಕಾರಿಗಳಾಗಿ ನಿಯಮಿತರಾಗಿ ಮತ್ತೇ ಇವರೊಡನೆ ನಾವೂ ಕೆಲಸಮಾಡುವಂತಾಯಿತು.

ಶ್ರೀಯುತರ ಪ್ರೊಫೆಸರ್ ಬಸವರಾಜುರವರೊಡನೆ ತೊರವೆ ರಾಮಾಯಣ ಸಂಗ್ರಹ ಕಾರ್ಯವನ್ನು ಮಾಡಿರುತ್ತಾರೆ. ಇದಲ್ಲದೆ ಇನ್ನು ಹಲವಾರು ಕೃತಿಗಳನ್ನು ಸಿದ್ಧಪಡಿಸಿರುತ್ತಾರೆ. ಅಧ್ಯಯನ ಸಂಸ್ಥೆಯಿಂದ ನಿವೃತ್ತರಾದ ಮೇಲೆ ಮತ್ತೆ ಸಾಹಿತ್ಯ ಪರಿಷತ್ತಿನ ಕನ್ನಡಕೋಶ ವಿಭಾಗದಲ್ಲಿ ಮುಖ್ಯ ಕಾರ್ಯಕರ್ತರಾಗಿದ್ದು ನಿಘಂಟಿನ ಉಳಿದ ಭಾಗಗಳನ್ನು ಅಚ್ಚುಮಾಡಿಸಿರುತ್ತಾರೆ. ಇದಲ್ಲದೆ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲೂ ದೊಡ್ಡ ಕಾರ್ಯಕರ್ತರಾಗಿದ್ದು ಕನ್ನಡಭಾಷಾ ಸೇವೆಯಲ್ಲಿ ನಿರತರಾಗಿದ್ದು, ಈ ಪ್ರತಿಷ್ಠಾನದ ಆರಂಭದಲ್ಲಿ ನಡೆದ ಉಪನ್ಯಾಸ ಸಮಾರಂಭದಲ್ಲಿ ನನಗೆ ಕುಮಾರವ್ಯಾಸ ಭಾರತದ ಬಗ್ಗೆ ಉಪನ್ಯಾಸ ಮಾಡುವ ಅವಕಾಶವನ್ನು ಏರ್ಪಡಿಸಿ ಸಹಕಾರಕೊಟ್ಟರು.

ಅಹಂಕಾರ, ಕೋಪ, ಅಸೂಯೆ, ವಾಕ್ಪಾರುಷ್ಯ ಈ ನಾಲ್ಕು ದುಷ್ಟಶಕ್ತಿಗಳಿಂದ ಇವರು ಮುಕ್ತರಾಗಿದ್ದು ಸರಳ ಸ್ವಭಾವದವರಾಗಿದ್ದಾರೆ. ಯಾರನ್ನು ದ್ವೇಷಿಸುವವರಲ್ಲ. ಪ್ರೀತಿಯಿಂದ ಸಂಭಾಷಣೆ ಮಾಡುವರಾಗಿದ್ದು ಕನ್ನಡ ಸಾಹಿತ್ಯ ಪ್ರಪಂಚದಲ್ಲೇ ಸದಾ ನಿರತರಾಗಿದ್ದು, ಸಾಹಿತ್ಯಾಭಿಮಾನಿಗಳ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ.

ಭಗವಂತನು ಅವರಿಗೆ ಆಯುರಾರೋಗ್ಯವನ್ನು ಕೊಟ್ಟು ಕನ್ನಡ ಸಾಹಿತ್ಯದ ಬಗ್ಗೆ ಇತೋಪ್ಯತಿಶಯ ಕಾರ್ಯಗಳನ್ನು ಇವರಿಂದ ಮಾಡಿಸಲಿ.

XXX

ಉನ್ನತ ವ್ಯಕ್ತಿ

-ಜಿ.ಎಸ್. ಸಣ್ಣಯ್ಯ

ಪ್ರೊ. ಎನ್. ಬಸವಾರಾಧ್ಯರನ್ನು ನಾವು ಅಜಾತಶತ್ರುವೆಂದೇ ಪರಿಗಣಿಸಬಹುದು. ಅವರು ನಮ್ಮೊಡನಿದ್ದ ಹಲವಾರು ವರ್ಷಗಳಲ್ಲಿ ನಡೆದುಕೊಂಡ ರೀತಿ, ತೋರಿಸಿದ ಪ್ರೀತಿ, ಆದರಿಸುತ್ತಿದ್ದ ಸಹಜಸ್ವಭಾವ ಅನುಕರಣೀಯವಾದುದು. ಇವರು ಸಹೋದ್ಯೋಗಿಗಳೊಡನೆ ತಮ್ಮ ಅಧಿಕಾರದ ಅಮಲನ್ನು ಎಂದೂ ತೋರಿಸಿದವರಲ್ಲ ; ಆದರೆ ಕೆಲಸವನ್ನು ಬಹಳ ನಾಜೋಕಾಗಿಯೇ ತೆಗೆದುಕೊಳ್ಳುತ್ತಿದ್ದರು. ಸಹೋದ್ಯೋಗಿಗಳೊಡನೆ ಹೇಗೋ ಹಾಗೆಯೇ ಬಂದ ಅತಿಥಿ ಅಭ್ಯಾಗತರೊಡನೆಯೂ ತುಂಬಾ ಸರಳವಾಗಿ ಸಹಜ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು; ಆದರಿಸುತ್ತಿದ್ದರು. ಇದು ಅವರ ಸನಿಹಕ್ಕೆ ಬಂದವರಿಗೆಲ್ಲಾ ಅರಿವಾಗಿರುತ್ತದೆ ಎಂದು ಭಾವಿಸಿದ್ದೇನೆ.

ಅವರು ಕಛೇರಿಯ ಕೊಠಡಿಗೆ ಬಂದುದರ ಗುರುತು ಎಲ್ಲರಿಗೂ ಹತ್ತುತ್ತಿದ್ದುದು ಸುತ್ತಮುತ್ತಲ ಕೊಠಡಿಗಳಿಗೆ ಹಬ್ಬುತ್ತಿದ್ದ ಪರಿಮಳದಿಂದ. ಈ ಸುವಾಸನಾ ಅಗರಬತ್ತಿಗಳನ್ನು ಅದೆಲ್ಲಿಂದ ತರುತ್ತಿದ್ದರೋ ಅದರ ವಿಳಾಸವನ್ನು ತೆಗೆದುಕೊಂಡು ಹುಡುಕಿ ನಾವೂ ಕೆಲವು ತಂದಿರುವುದುಂಟು. ಅವರು ಧರಿಸುತ್ತಿದ್ದ ಉಡುಪಿನ ವೈಖರಿ ಅವರ ಕೊಠಡಿಯಲ್ಲಿಯೂ ಮನೆಮಾಡಿದ್ದಿತು. ಅವರ ಮೇಜಿನ ಮೇಲೆ ಸಂಶೋಧನೆಗೆ ಬೇಕಾದ ಗ್ರಂಥಗಳನ್ನು ಜೋಡಿಸಿ ಅಣಿಯಾಗಿಟ್ಟುಕೊಂಡಿರುತ್ತಿದ್ದುದೇ ನಮಗೊಂದು ಸೋಜಿಗವಾಗಿ ತೋರುತ್ತಿದ್ದಿತು. ನಾನು ಎಷ್ಟೇ ಪ್ರಯತ್ನ ಪಟ್ಟರೂ ಆ ಅಚ್ಚುಕಟ್ಟು ನನಗೆ ಸಾಧ್ಯವಾಗಲೇ ಇಲ್ಲವೆಂದು ಹೇಳಬಯಸುತ್ತೇನೆ.

ಸಂಶೋಧಕರಿಗೆ ಮಾರ್ಗದರ್ಶಕರಾಗಿ ಆದರ್ಶತೆಯನ್ನು ಮೆರೆಯುವಂತೆಯೇ ಕಛೇರಿಯ ನಿಗದಿತವೇಳೆಗೆ ಬಂದು ತಮ್ಮ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದುದು ಇತರರಿಗೆ ಮಾದರಿಯಾಗಿದ್ದಿತು. ಹಾಗಾಗಿಯೇ ಅವರ ಸಹೃದಯತೆಗೆ ಮೆಚ್ಚಿದ

ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ವಿಭಾಗದ ಸಹೋದ್ಯೋಗಿಗಳಿಗೂ ಅವರು ಅಚ್ಚುಮೆಚ್ಚಿನವರಾಗಿದ್ದು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಯಾರಿಗಾದರೂ ಅನುಕೂಲವಾಗುತ್ತದೆ ಎಂದು ಕಂಡುಬಂದರೆ ಅದಕ್ಕೆ ತಮ್ಮ ಕೈಲಾದ ಸಹಾಯವನ್ನು ಒದಗಿಸುವುದರಲ್ಲಿ ಮುಂಚೂಣಿಯಲ್ಲಿದ್ದರು. ನನಗೆ ಚಾವುಂಡರಾಯ ಪ್ರಶಸ್ತಿ ದೊರಕಿದಾಗ ನನಗಿಂತಲೂ ಹೆಚ್ಚಾಗಿ ಅವರೇ ಸಂತಸಗೊಂಡುದನ್ನು ನಾನು ಗುರುತಿಸಿದ್ದೇನೆ. ಇಂತಹ ಉನ್ನತ ವ್ಯಕ್ತಿತ್ವವನ್ನು ಹೊಂದಿದ್ದುದರಿಂದಲೇ ಪ್ರೊ. ಡಿ.ಎಲ್. ನರಸಿಂಹಾಚಾರ್, ಪ್ರೊ. ತೀ.ನಂ. ಶ್ರೀಕಂಠಯ್ಯ ಅವರಂತಹ ಹಿರಿಯ ವಿದ್ವಾಂಸರ ಪ್ರೀತಿಗೆ ಪಾತ್ರರಾದರು. ಎನ್.ಬಿ. ಅವರು ಆದರ್ಶ ಗುಣಗಳನ್ನು ಹೊಂದಿರುವಂತೆಯೇ ವಿದ್ವತ್ತನ್ನು ಗಳಿಸಿ ಕನ್ನಡ ಸಾಹಿತ್ಯಕ್ಕೆ ಅನೇಕ ಪ್ರಾಚೀನ ಕನ್ನಡ ಗ್ರಂಥಗಳನ್ನು ಕೊಡುಗೆಯಾಗಿ ನೀಡಿರುವುದಲ್ಲದೆ ಪ್ರತಿಷ್ಠಿತ ಕನ್ನಡ ನಿಘಂಟುವಿನ ಸಂಪಾದಕರಾಗಿ ಚಿರಸ್ಥಾಯಿ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ ಕನ್ನಡಿಗರ ಬಹು ನಿರೀಕ್ಷಿತ ಕನ್ನಡ ನಿಘಂಟುವಿನ ಪರಿಪೂರ್ಣತೆಗೆ ಅದರ ಸಂಪಾದಕರಾಗಿ ಹಿರಿಯ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ. ಪ್ರತಿಷ್ಠಾನ ಮೊದಲಾದ ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಆ ಸಂಸ್ಥೆಗಳ ಔನ್ನತ್ಯಕ್ಕೆ ಪ್ರಸಿದ್ಧಿಗೆ ಕಾರಣರಾಗಿದ್ದಾರೆ. ಅವರು ತಮ್ಮ ಉನ್ನತ ವ್ಯಕ್ತಿತ್ವದಿಂದ ಎಲ್ಲ ಹಿರಿಯ ಕಿರಿಯರ ಆದರಕ್ಕೆ ಗೌರವಕ್ಕೆ ಪಾತ್ರರಾಗಿದ್ದಾರೆ.

ಹಿರಿಯ ಗ್ರಂಥಸಂಪಾದಕರು

ಅನೇಕ ಅಪ್ರಕಟಿತ ಪ್ರಾಚೀನ ಕನ್ನಡ ಕೃತಿಗಳ ಪರಿಷ್ಕರಣೆ ಮತ್ತು ಪ್ರಕಟಣೆಯಿಂದ ಪ್ರಸಿದ್ಧರಾದ ಪ್ರೊ. ಎನ್. ಬಸವಾರಾಧ್ಯರು ಅನೇಕ ಸಂಪಾದಿತ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಶಿಶುಮಾಯಣನ ಅಂಜನಾಚರಿತೆ ಎಂಬ ಸಾಂಗತ್ಯ ಕೃತಿಯಿಂದ ಮೊದಲ್ಗೊಂಡು ಬಾಹುಬಲಿಯ ಧರ್ಮನಾಥಪುರಾಣವೆಂಬ ಚಂಪೂಕೃತಿಯವರೆಗೆ ಅವರ ಗ್ರಂಥ ಪರಿಷ್ಕರಣಕಾರ್ಯ ಹರಿದಿದೆ.

ಯಾವ ಒಂದು ಧರ್ಮಕ್ಕೂ ಸೀಮಿತವಾಗಿರದ ಸತ್ಯ ಧರ್ಮಗಳ ನಿಷ್ಠ ರಾಜನೊಬ್ಬನ ಧೀಮಂತ ಚಿತ್ರಣವನ್ನೊಳಗೊಂಡಿರುವುದೇ ರಾಘವಾಂಕನ ಹರಿಶ್ಚಂದ್ರ ಕಾವ್ಯ. ಸತ್ಯವ್ರತವನ್ನು ಪರಿಪಾಲಿಸುವುದೊಂದಿಗೇ ತನ್ನ ಜೀವನದ ಪರಮಗಂತವ್ಯ ಎಂಬುದನ್ನು ಸಾಬೀತುಪಡಿಸುವುದೇ ಏಕೈಕ ಗುರಿಯಾಗಿರುವ ವಸ್ತುವನ್ನೊಳಗೊಂಡ ಈ ಕಾವ್ಯವನ್ನು ಒಂಬತ್ತು ಹಸ್ತಪ್ರತಿಗಳೊಡನೆ ಸಂಪಾದಿಸಿರುವವರು ಎನ್. ಬಸವಾರಾಧ್ಯರು ಮತ್ತು ಎಸ್. ಬಸಪ್ಪ ಅವರು. ಈಗಾಗಲೇ ಮುದ್ರಿತ ಪ್ರತಿಗಳಿದ್ದರೂ ಅವು ಸಮರ್ಪಕವಾಗಿರಲಿಲ್ಲವೆಂಬುದನ್ನು ಮನಗಂಡ ಇವರು ಉಪಯುಕ್ತ ಪೀಠಿಕೆಯೊಡನೆ ಸಂಪಾದಿಸಿರುವುದು ಸಹೃದಯರಿಗೆ ಸಹಾಯಕವಾಗಿದೆ. ೧೯೯೯ರಲ್ಲಿ ಪ್ರಕಟವಾದ ಈ ಆವೃತ್ತಿಯು ಜನಪ್ರಿಯವಾದುದರಿಂದಲೇ ಬಹುತೇಕ ಮರುಮುದ್ರಣ ಪಡೆದಿದೆ.

ಇದರಂತೆಯೇ ಎನ್.ಬಿ. ಅವರು ಪರಿಷ್ಕರಣೆ ಮಾಡಿದ ಮತ್ತೊಂದು ಷಟ್ಪದೀ ಕಾವ್ಯವೆಂದರೆ ೧೯೪೮ರಲ್ಲಿದ್ದ ನೀಲಕಂಠಾಚಾರ್ಯನ ಆರಾಧ್ಯ ಚಾರಿತ್ರ. ಶೈವ ಪಾರಮ್ಯವನ್ನು ನಿರೂಪಿಸುವ ದೀಕ್ಷಾ, ಪುರಾತನ, ವಾದ, ಮಹಿಮ ಮತ್ತು ಪರ್ವತ ಪ್ರಕರಣಗಳೆಂಬ ಐದು ವಿಭಾಗಗಳನ್ನೊಳಗೊಂಡ ಈ ಬೃಹತ್ ಕಾವ್ಯದಲ್ಲಿ ೯೫ ಸಂಧಿಗಳೂ ಮೂರು ಸಹಸ್ರಕ್ಕಿಂತ ಹೆಚ್ಚು ವಾರ್ಧಕ ಷಟ್ಪದಿಗಳೂ ಇವೆ. ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಯನ ಸಂಸ್ಥೆಯಿಂದ ಹೊರಬಂದಿರುವ ಈ ಕಾವ್ಯವು ಕನ್ನಡ ಸಾಹಿತ್ಯಕ್ಕೆ ಅದರಲ್ಲಿಯೂ ವೀರಶೈವ ಸಾಹಿತ್ಯಕ್ಕೆ ಸಂದ ಅಮೂಲ್ಯ ಕೊಡುಗೆಯಾಗಿದೆ. ಮೂರು ಹಸ್ತಪ್ರತಿಗಳು ಹಾಗೂ ಒಂದು ಅಸಮಗ್ರ ಅಚ್ಚಿನ ಪ್ರತಿಯ ಸಹಾಯದಿಂದ ಮಾಡಿರುವ ಸಂಪಾದನಾ ಕಾರ್ಯ ಉತ್ತಮವಾಗಿದೆ. ೯೮ ಪುಟಗಳ ದೀರ್ಘ ಪೀಠಿಕೆಯಲ್ಲಿ ಕವಿಕಾಲ ಕಥಾಸಾರವೇ ಮೊದಲಾದ ವಿಷಯಗಳ ನಿರೂಪಣೆ ಓದುಗರಿಗೆ ಅನುಕೂಲಕರವಾಗಿವೆ. ಅನುಬಂಧದಲ್ಲಿರುವ ಪದ್ಯಗಳ ಅಕಾರಾದಿ, ವಿಶಿಷ್ಟ ಪದಸೂಚಿ, ಪಾರಿಭಾಷಿಕ ಪದಕೋಶ ಮೊದಲಾದುವೆಲ್ಲವೂ ಗ್ರಂಥ ಸಂಪದನಾ ಕಾರ್ಯದ ಮಾರ್ಗದರ್ಶನಕ್ಕೆ ಸಹಕಾರಿಯಾಗಿವೆ.

ಇವರು ಪರಿಷ್ಕರಣೆ ಮಾಡಿರುವ ಮತ್ತೊಂದು ಷಟ್ಪದಿ ಗ್ರಂಥವೆಂದರೆ ೩೧೮೩ ವಾರ್ಧಕ ಷಟ್ಪದಿಗಳನ್ನುಳ್ಳ ಹಿರಿಯ ಗ್ರಂಥ. ವೀರಶೈವ ಆಚಾರ್ಯ ಪರಂಪರೆಯಲ್ಲಿ ಪ್ರಸಿದ್ಧರಾದ ರೇಣುಕ, ಮರುಳಸಿದ್ಧ, ಏಕೋರಾಮ ಮತ್ತು ಪಂಡಿತಾರಾಧ್ಯರೆಂಬ ನಾಲ್ವರು ಆಚಾರ್ಯರ ಕಥೆಯನ್ನೊಳಗೊಂಡ ಈ ಕಾವ್ಯವನ್ನು ೧೬೯೮ರಲ್ಲಿದ್ದ ಸಂಪಾದನೆಯ ಪರ್ವತೇಶನು ರಚಿಸಿದ್ದಾನೆ. ಇಂತಹ ಒಂದು ಉದ್ಗ್ರಂಥವು ಮೊದಲಬಾರಿಗೆ ೧೯೪೯ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾಯಿತು. ನಾಲ್ಕು ಹಸ್ತಪ್ರತಿಗಳನ್ನು ಬಳಸಿ ಮಾಡಿರುವ ಸಂಪಾದನಾಕಾರ್ಯ ಅಚ್ಚುಕಟ್ಟಾಗಿದೆ. ಹಸ್ತಪ್ರತಿಯಿಂದ ಬಿಡುಗಡೆಗೊಂಡು ಮೊದಲ ಬಾರಿಗೆ ಅಚ್ಚಿನ ಸ್ವರೂಪದೊಡನೆ ಕನ್ನಡಿಗರ ಕೈಸೇರಿದ ಈ ಕೃತಿಯ ೧೯೮ ಪುಟಗಳ ದೀರ್ಘಪೀಠಿಕೆಯಲ್ಲಿ ಕಾವ್ಯದ ಸಾರ ಸತ್ವವನ್ನು ಓದುಗರಿಗೆ ಒದಗಿಸಿದ್ದಾರೆ; ಕಾವ್ಯದ ತಿರುಳನ್ನು ತೆರೆದಿಟ್ಟಿದ್ದಾರೆ. ಇದರಲ್ಲಿ ಅಳವಡಿಸಿರುವ ಪದ್ಯಗಳ ಅಕಾರಾದಿ, ವಿಶಿಷ್ಟ ಪದಸೂಚಿ, ಶಬ್ದಾರ್ಥಕೋಶಗಳು ಸಂಪಾದಕರ ಸತ್ಯವನ್ನು ಸಾದರಪಡಿಸುತ್ತವೆ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೫೭ರಲ್ಲಿ ಪ್ರಕಾಶಿತವಾಗಿರುವ ಮತ್ತೊಂದು ಷಟ್ಪದೀ ಗ್ರಂಥವೆಂದರೆ ೧೫೫೦ರಲ್ಲಿ ರಚಿತವಾದ ಬಸವಾಂಕನ ಉದ್ಭಟದೇವಚರಿತೆ. ಉದ್ಭಟದೇವನೆಂಬ ಶಿವಶರಣನ ಕಥೆಯನ್ನೊಳಗೊಂಡ ಈ ಗ್ರಂಥದ ಪರಿಷ್ಕರಣೆಗೆಗೆ ಎರಡು ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಪುಟ್ಟ ಪೀಠಿಕೆಯಾದರೂ ಉತ್ತಮ ನಿರೂಪಣೆಯಿಂದ ಕೂಡಿದೆ.

ಕನ್ನಡ ಕಾವ್ಯಕ್ಷೇತ್ರದಲ್ಲಿ ಗದುಗಿನ ಭಾರತದಂತೆಯೇ ಜನಪ್ರಿಯವಾಗಿರುವ ಕಾವ್ಯವೆಂದರೆ ನರಹರಿ ಅಥವಾ ಕುಮಾರ ವಾಲ್ಮೀಕಿಯಿಂದ ರಚಿತವಾದ ತೊರವೆ ರಾಮಾಯಣವೆಂಬ ಷಟ್ಪದಿ ಗ್ರಂಥ. ಪ್ರಕಟವಾಗಿರುವ ಎರಡು ಸಂಪುಟಗಳಲ್ಲಿ ಮೊದಲನೆಯದನ್ನು ಎನ್.ಬಿ. ಅವರು ಸಂಪಾದಿಸಿದ್ದಾರೆ. ಎಂಟು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಣಗೊಂಡ ಈ ಆವೃತ್ತಿಯು ಸಂಪಾದನಾ ನಿಯಮಗಳಿಗನುಸಾರವಾಗಿದ್ದು ಅಧಿಕೃತ ಆವೃತ್ತಿಯ ಮನ್ನಣೆಯನ್ನು ಪಡೆಯಿತು. ಇದು ೧೯೫೮ರಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದಿಂದ ಪ್ರಕಾಶಿತವಾಯಿತು.

ಹೀಗೆ ಷಟ್ಪದೀ ಗ್ರಂಥಗಳಲ್ಲದೆ ಹಲವು ಉತ್ತಮ ಸಾಂಗತ್ಯ ಕೃತಿಗಳನ್ನು ಸಂಪಾದಿಸಿರುವ ಎನ್. ಬಸವಾರಾಧ್ಯರು ಅವುಗಳನ್ನು ಕನ್ನಡ ಕಾವ್ಯಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಇವುಗಳಲ್ಲಿ ೧೩ರಿಂದ ೧೫ನೆಯ ಶತಮಾನದವರೆಗೂ ಕಾಲದ ಊಹೆಗೆ ಒಳಗಾಗಿರುವ ಶಿಶುಮಾಯಣನ ಅಂಜನಾಚರಿತೆ. ೧೫೩೮ರಲ್ಲಿ ಬೊಂಬೆಯಲಕ್ಕನಿಂದ ರಚಿತವಾಗಿರುವ ಹರಿಶ್ಚಂದ್ರ ಸಾಂಗತ್ಯ, ೧೮೫೦ರಲ್ಲಿದ ಹೆಳವನಕಟ್ಟೆ ಗಿರಿಯಮ್ಮನ ಚಂದ್ರಹಾಸನ ಕಥೆ ಮೊದಲಾದವು ಎನ್.ಬಿ. ಅವರಿಂದ ಪರಿಷ್ಕೃತಗೊಂಡು ಪ್ರಕಟವಾದ ಕೃತಿಗಳಾಗಿವೆ. ಇವುಗಳೆಲ್ಲವೂ ಮೊದಲ ಬಾರಿಗೆ ಸಂಪಾದನಾ ಶಾಸ್ತ್ರಕ್ಕನುಗುಣವಾಗಿ ಪ್ರಕಟವಾದುದಾಗಿವೆ.

ಜೈಮಿನಿ ಭಾರತದ ಚಂದ್ರಹಾಸನ ಕಥೆಯಿಂದ ಪ್ರೇರಿತಳಾಗಿ ಗಿರಿಯಮ್ಮ ರಚಿಸಿದ ಚಂದ್ರಹಾಸನ ಕಥೆ ೪ ಸಂಧಿಗಳನ್ನು ೩೫೫ ಪದ್ಯಗಳನ್ನು ಒಳಗೊಂಡಿರುವ ಕೃತಿ. ೪ ಹಸ್ತಪ್ರತಿಗಳ ಸಹಾಯದಿಂದ ಸಂಪಾದಿತವಾಗಿರುವ ಈ ಕಾವ್ಯವು ಮೈಸೂರು ಪ್ರಾಚ್ಯಕಾವ್ಯ ಪ್ರಕಾಶನ ಮಂದಿರದಿಂದ ಹೊರಬಂದಿದ್ದು ೧೯೭೮ರಲ್ಲಿ ಮರುಮುದ್ರಣ ಪಡೆದಿದೆ. ಬೊಂಬೆಯಲಕ್ಕನಿಂದ ರಚಿತವಾದ ಹರಿಶ್ಚಂದ್ರ ಸಾಂಗತ್ಯವು ೧೯೫೪ರಲ್ಲಿ ಮೈಸೂರು ವಯಸ್ಕರ ಶಿಕ್ಷಣ ಸಂಸ್ಥೆಯಿಂದ ಪ್ರಕಾಶಿತವಾಗಿದೆ. ಈ ಎರಡು ಕೃತಿಗಳು ಉತ್ತಮ ಜನಪ್ರಿಯ ಕಥೆಗಳನ್ನೊಳಗೊಂಡಿದ್ದು ಸಾಮಾನ್ಯ ಜನರಿದೆ ತುಂಬಾ ಉಪಯುಕ್ತ ಕೃತಿಗಳಾಗಿವೆ.

ಎನ್.ಬಿ. ಅವರು ಸಂಪಾದಿಸಿರುವ ಚಂಪೂಕೃತಿಗಳಲ್ಲಿ ೧೨ನೇ ಶತಮಾನದಲ್ಲಿದ್ದ ಬಾಲಚಂದ್ರನಿಂದ ರಚಿತವಾಗಿರುವ ಕಿರು ಚಂಪೂಕೃತಿಯಾದ ಉದ್ಯೋಗಸಾರ ಮತ್ತು ೧೩೫೨ರಲ್ಲಿ ಬಾಹುಬಲಿಯಿಂದ ನಿರ್ಮಿತವಾಗಿರುವ ಧರ್ಮನಾಥಪುರಾಣ, ಎರಡೂ ಜೈನ ಸಾಹಿತ್ಯದ ಕೊಡುಗೆಗಳಾಗಿವೆ. ೧೯೭೩ರಲ್ಲಿ ಮೊದಲಬಾರಿಗೆ ಪ್ರಕಟವಾಗಿರುವ ಉದ್ಯೋಗಸಾರದ ಪರಿಷ್ಕರಣೆಗೆ ಮೂರು ಓಲೆ ಮತ್ತು ಒಂದು ಕಾಗದದ ಹಸ್ತಪ್ರತಿಗಳನ್ನು ಬಳಸಲಾಗಿದೆ. ಆರ್ಷೇಯ ತತ್ತ್ವವನ್ನು ಜೈನಪ್ರಕ್ರಿಯೆಗೆ ಅನುಗುಣವಾಗಿ ನಿರೂಪಿಸಿರುವ ಈ ಕೃತಿ ೪೨೯ ಕಂದ ವೃತ್ತಗಳನ್ನು ಕೆಲವು ವಚನಗಳನ್ನು ಒಳಗೊಂಡಿದೆ. ಶ್ರಾವಕನ ಕರ್ತವ್ಯದ ಸ್ವರೂಪವನ್ನು

ನಿವೇದಿಸುವ, ವೈರಾಗ್ಯದ ಪ್ರತಿಪಾದನೆಯನ್ನು ಮಾಡಿರುವ ಈ ಸರಳ ಕೃತಿಯನ್ನು ಎನ್.ಬಿ. ಅವರು ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ಇದಕ್ಕೆ ನಾಲ್ಕು ಹಸ್ತಪ್ರತಿಗಳನ್ನು ಬಳಸಲಾಗಿದೆ, ಉತ್ತಮ ಪೀಠಿಕೆಯಿದೆ, ಪದ್ಯಗಳ ಅಕಾರಾದಿಯಿದೆ.

ಮತ್ತೊಂದು ಹದಿನೈದನೆಯ ತೀರ್ಥಂಕರನಾದ ಧರ್ಮನಾಥನ ಕಥೆಯನ್ನೊಳಗೊಂಡ ೧೬ ಆಶ್ವಾಸಗಳ ಸುದೀರ್ಘ ಚಂಪೂಕಾವ್ಯ ಧರ್ಮನಾಥಪುರಾಣ. ಪಠ್ಯಭಾಗವೇ ೫೪೧ ಪುಟಗಳಷ್ಟಿದೆ. ಇಂತಹ ಹಿರಿಯ ಕಾವ್ಯವನ್ನು ನಾಲ್ಕು ಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪ್ರಥಮವಾಗಿ ಕನ್ನಡ ಸಾಹಿತ್ಯಕ್ಕೆ ಸೇರ್ಪಡೆಯಾಗುವಂತೆ ಮಾಡಿದ ಹಿರಿಮೆ ಎನ್.ಬಿ. ಅವರದಾಗಿದೆ. ಮೂವತ್ತು ಪುಟಗಳ ಪ್ರಸ್ತಾವನೆಯಲ್ಲಿ ಕವಿ ಕೃತಿಗಳ ಬಗೆಗೆ ಉತ್ತಮ ನಿರೂಪಣೆಯಿದೆ, ವಿಷಯ ಸೂಚಿ, ಪದ್ಯಗಳ ಅಕಾರಾದಿ, ಶಬ್ದಾರ್ಥಕೋಶ, ವಿಶಿಷ್ಟ ಪದಸೂಚಿ, ಪಾರಿಭಾಷಿಕ ಪದಕೋಶ ಎಲ್ಲವೂ ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ ; ಸಹೃದಯರ ಮೆಚ್ಚುಗೆಗೆ ಪಾತ್ರವಾಗಿವೆ.

ಈ ಎಲ್ಲ ಕೃತಿಗಳಿಗೆ ಕಳಶವಿಟ್ಟಂತೆ ಯಾವುದೇ ಗ್ರಂಥ ಸಂಪಾದನೆಗೆ ಅಗತ್ಯವಾಗಿ ಬೇಕಾದ ಹಳಗನ್ನಡ ನಿಘಂಟುಗಳನ್ನು ವಿವಿಧ ಹಸ್ತಪ್ರತಿಗಳ ಸಹಾಯದಿಂದ ಹಾಗೂ ಪೂರ್ವದಲ್ಲಿ ಬಿಡಿಬಿಡಿಯಾಗಿ ಹೊರಬಂದಿದ್ದ ಪ್ರತಿಗಳ ನೆರವಿನಿಂದ ಒತ್ತಟ್ಟಿಗೆ ಜೋಡಿಸಿ ಪರಿಷ್ಕರಿಸಿ ಪ್ರಕಟಗೊಳ್ಳುವಂತೆ ಮಾಡಿದುದು ಎನ್.ಬಿ. ಅವರ ಹಿರಿಯ ಸಾಧನೆಯಾಗಿದೆ. ಡಿ.ವಿ.ಕೆ. ಮೂರ್ತಿ ಅವರಿಂದ ೧೯೭೭ರಲ್ಲಿ ಪ್ರಕಾಶಿತವಾಗಿರುವ ಈ ಆವೃತ್ತಿಗಳಲ್ಲಿ ನಿಘಂಟುಗಳ ಬಗೆಗೆ ಬರೆದಿರುವ ೪೩ ಪುಟಗಳ ಪೀಠಿಕೆ ಬಹುಮೌಲ್ಯವುಳ್ಳದ್ದಾಗಿದೆ. ಪದ್ಯಗಳ ಅಕಾರಾದಿ, ಶಬ್ದಾರ್ಥಕೋಶ ಜೋಡಣೆಗಳು ಬಳಕೆದಾರರಿಗೆ ಬಳುವಳಿಯಾಗಿ ಪರಿಣಮಿಸಿವೆ.

ಹೀಗೆಯೇ ಇನ್ನೂ ಹಲವಾರು ಕೃತಿಗಳು ಎನ್.ಬಿ. ಅವರಿಂದ ಸಂಪಾದಿತವಾಗಿ ಹೊರಬಂದಿರುವುದುಂಟು. ಅವರ ಬಹುಪಾಲಿನ ಸೇವಾವಧಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗಿರುವ ಕನ್ನಡ ನಿಘಂಟುವಿನ ಸಂಪಾದನೆಯಲ್ಲಿಯೇ ಕಳೆದುದರಿಂದ ಇನ್ನೂ ಹೆಚ್ಚಿನ ಸಾಹಿತ್ಯ ಕೃತಿಗಳನ್ನು ಸಂಪಾದಿಸಲು ಸಾಧ್ಯವಾಗಲಿಲ್ಲ. ಆದರೆ ಎಲ್ಲ ಕನ್ನಡಿಗರಿಗೆ ಅಗತ್ಯವಾಗಿ ಬೇಕಾಗಿದ್ದ ಸಂಪೂರ್ಣ ಸಮರ್ಥ ಮಾಹಿತಿಯನ್ನೊಳಗೊಂಡ ಕನ್ನಡ ನಿಘಂಟುವಿನ ಕೊಡುಗೆ ಸಾಧ್ಯವಾದಂತಾಯಿತು. ಸಾಹಿತ್ಯ ಕ್ಷೇತ್ರದಲ್ಲಿಯೇ ಬಹುಬೆಲೆಬಾಳುವ ಈ ಸಂಪುಟಗಳ ಹರವು ಎಂಟು ಬೃಹತ್ ಸಂಪುಟಗಳಲ್ಲಿ ನಡೆದಿದೆ. ಇದಕ್ಕೆ ವಿವಿಧ ಕ್ಷೇತ್ರದ ಹಲವು ವಿದ್ವಾಂಸರ ನೆರವಿದ್ದರೂ ಅದರ ಸೂತ್ರಧಾರರಾಗಿ ಕಾರ್ಯನಿರ್ವಹಿಸಿದ ಎನ್. ಬಸವಾರಾಧ್ಯರ ಕೊಡುಗೆ ಅಪಾರವಾದುದು ಎಂಬುದರಲ್ಲಿ ಎರಡು ಮಾತಿಲ್ಲ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಎನ್.ಬಿ. ಅವರ ಸಾಧನೆ ಸಿದ್ಧಿಗಳು ಅಪರೂಪವಾದುವು; ಜನಮೆಚ್ಚಿಗೆಗೆ ಪಾತ್ರವಾದುವು; ಸಕಲ ಸಜ್ಜನರ ಹೃದಯಸ್ಪರ್ಶಿಯಾದವು.

XXX

ಸಹೃದಯಿ ಬಸವಾರಾಧ್ಯರು

-ಪ್ರೊ. ಬಿ. ವಿರೂಪಾಕ್ಷಪ್ಪ

ತಾಡೆ ಓಲೆಗಳಲ್ಲಿರುವ ಸಾಹಿತ್ಯವನ್ನು ಸಂಗ್ರಹಿಸುವ, ಸಂಪಾದಿಸುವ ಕೆಲಸ ಕಠಿಣವಾದ ಕೆಲಸ, ಗುರುತರವಾದ ಕೆಲಸ ಮತ್ತು ಮಹತ್ವಪೂರ್ಣವಾದ ಕೆಲಸ. ಈ ಕೆಲಸ ೧೯ನೇ ಶತಮಾನದ ಕೊನೆಯಲ್ಲಿಯೇ ಪ್ರಾರಂಭವಾಗಿದ್ದರೂ, ಇದು ವ್ಯವಸ್ಥಿತವಾಗಿ ಶಾಸ್ತ್ರೀಯವಾಗಿ ನಡೆದದ್ದು ೨೦ನೇ ಶತಮಾನದ ಆದಿಭಾಗದಲ್ಲಿ.

ಡಾ|| ಫ.ಗು. ಹಳಕಟ್ಟಿಯವರು ಈ ಕೆಲಸ ಪ್ರಾರಂಭಿಸದಿದ್ದರೆ ವಿಶ್ವಸಾಹಿತ್ಯದಲ್ಲಿಯೇ ಮಹತ್ವದ ಸ್ಥಾನವನ್ನು ಪಡೆದಿರುವ ವಚನ ಸಾಹಿತ್ಯ ಬೆಳಕಿಗೆ ಬರುತ್ತಿರಲೇ ಇಲ್ಲ. ಕನ್ನಡ ಸಾಹಿತ್ಯ ವ್ಯಾಪ್ತಿಯ ದೃಷ್ಟಿಯಿಂದಲೂ, ವಿಶಾಲತೆಯ ದೃಷ್ಟಿಯಿಂದಲೂ, ಆಳದ ದೃಷ್ಟಿಯಿಂದಲೂ ಒಂಭತ್ತನೆಯ ಶತಮಾನದಿಂದಲೇ ಗ್ರಂಥಸ್ಥವಾಗಿ ಬೆಳೆದು ಬಂದಿವೆ. ತಾಡೆವೋಲೆ ಪ್ರತಿಗಳಲ್ಲಿ ಈ ಜ್ಞಾನರತ್ನ ಅಡಗಿದೆ. ಇದನ್ನು ಅನೇಕ ಜನ ವಿದ್ವಾಂಸರು ಸಂಗ್ರಹಿಸಿ ಸಂಪಾದಿಸಿ ಇದು ಪ್ರಕಟಣೆಯ ಬೆಳಕು ಕಾಣುವಂತೆ ಮಾಡಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ವಿಭಾಗದಲ್ಲಿ ಉಪನಿರ್ದೇಶಕರಾಗಿ ಈ ಕಾರ್ಯದ ಹೊಣೆ ಹೊತ್ತ ಶ್ರೀ ಎನ್. ಬಸವಾರಾಧ್ಯರ ಹೆಸರು ಈ ಕ್ಷೇತ್ರದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ಕನ್ನಡ ಸಾಹಿತ್ಯದ ವ್ಯಾಪ್ತಿ ಅಗಾಧವಾದದ್ದು, ಇದೆಲ್ಲವೂ ಇನ್ನೂ ಪ್ರಕಟಣೆಯ ಬೆಳಕು ಕಂಡಿಲ್ಲ. ಅದರ ಬಹುಮುಖ್ಯ ಆಸ್ತಿಯಾದ ವೀರಶೈವ ಸಾಹಿತ್ಯ, ಶರಣ ಸಾಹಿತ್ಯ ಹಾಗೂ ವಚನ ಸಾಹಿತ್ಯದ ಅನೇಕ ಕೃತಿಗಳು ಇನ್ನೂ ಪ್ರಕಟಣೆಯ ಬೆಳಕನ್ನು ಕಾಣದೆ ಕಾಲಗರ್ಭದಲ್ಲಿಯೇ ಅಡಗಿ ಹೋಗಿವೆ. ಅವುಗಳನ್ನು ಕಂಡು ಹಿಡಿದು, ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಬೇಕೆಂಬುದು ಶ್ರೀ ಎನ್. ಬಸವಾರಾಧ್ಯರ ಹೃದಯಾಂತರಾಳದ ಉತ್ಕಟ ಇಚ್ಛೆಯಾಗಿದೆ. ಈ ಮಾತನ್ನು ಇವರು ಬಸವ ಸಮಿತಿಗೆ ಬಂದಾಗಲೆಲ್ಲ ಪದೇ ಪದೇ ಹೇಳುವುದು ನನ್ನ ಗಮನದಲ್ಲಿದೆ.

ಶ್ರೀ ಗುಬ್ಬಿಯ ಮಲ್ಲಣಾರ್ಯರ ವೀರಾಶೈವಾಮೃತ ಮಹಾಪುರಾಣ ಒಂದು ಮೇರು ಕೃತಿಯಾಗಿದ್ದು ವೀರಶೈವದ ವಿಶ್ವಕೋಶದಂತಿದೆ. ಇದನ್ನು ಶ್ರೀ ಎನ್. ಬಸವಾರಾಧ್ಯರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಪಾದಿಸಿ ಕೊಟ್ಟಿದ್ದಾರೆ. ಇದರ ಸಂಪಾದನೆಯಲ್ಲಿ, ಅವರು ತೋರಿದ ಕಾರ್ಯ ಕುಶಲತೆ, ಕಾಯಕ ನಿಷ್ಠೆಯ ಬಗೆಗೆ ನಾನು ಹಲವಾರು ವಿದ್ವಾಂಸರಿಂದ ಕೇಳಿ ತಿಳಿದಿದ್ದೇನೆ.

ಹೈದರಾಬಾದ್, ಕಲ್ಬುರ್ಗಿ ಹಾಗೂ ಧಾರವಾಡಗಳಲ್ಲಿ ನಾನು ಅಧ್ಯಾಪಕನಾಗಿ, ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿ ೧೯೬೪ರಲ್ಲಿ ಚಿತ್ರದುರ್ಗ ಕಾಲೇಜಿಗೆ ಪ್ರಿನ್ಸಿಪಾಲನಾಗಿ ಬಂದಾಗಿನಿಂದಲೂ, ನಾನು ಶ್ರೀ ಎನ್. ಬಸವಾರಾಧ್ಯರ ಹೆಸರನ್ನು ಕೇಳುತ್ತಲೇ ಇದ್ದೆ. ಅವರ ವೈಯಕ್ತಿಕ ಪರಿಚಯ ನಾನಗಾದದ್ದು, ನಾನು ಸರಕಾರಿ ಸೇವೆಯಿಂದ ನಿವೃತ್ತನಾಗಿ ಬೆಂಗಳೂರಿನಲ್ಲಿ ನೆಲೆಸಿದ ಮೇಲೆ. ಅದೂ ಕೂಡ ನಾನು ಬಸವ ಸಮಿತಿಯಲ್ಲಿ ಬಸವತತ್ವ ಪ್ರಚಾರಕ್ಕೆ ನನ್ನ ಅಳಿಲು ಸೇವೆಯನ್ನು ಪ್ರಾರಂಭಿಸಿದ ಮೇಲೆ.

ನಾನು ೧೯೮೭ರಲ್ಲಿ ಬಸವ ಪಥ ಹಾಗೂ ಜರ್ನಲ್ ಪತ್ರಿಕೆಗಳ ಸಂಪಾದಕನಾದ ಮೇಲೆ ಆಗಾಗ್ಗೆ ಇವರು ಬರೆದು ಕಳಿಸಿದ ವಿದ್ವತ್‌ಪೂರ್ಣ ಲೇಖನಗಳನ್ನು ಓದಿ ಪ್ರಕಟಿಸುವ ಸುಯೋಗ ನನ್ನದಾಗಿತ್ತು. ೧೯೯೦ರ ಅವಧಿಯಲ್ಲಿ ಬಸವ ಸಮಿತಿ ತಾಡವೋಲೆ ಪ್ರತಿಗಳನ್ನು ಸಂಗ್ರಹಿಸಿ, ಅವುಗಳನ್ನು ಪ್ರಕಟಿಸುವ ಕಾರ್ಯವನ್ನು ಕೈಗೆತ್ತಿಕೊಂಡಿತು. ನನ್ನ ಮಿತ್ರರಾದ ಶ್ರೀ ಎನ್.ಎಂ.ಕೆ. ಸೋಗಿಯವರು ಬಸವ ಸಮಿತಿಯ ಸಂಶೋಧನ ಹಾಗೂ ಪ್ರಕಟಣಾ ಕೇಂದ್ರದ ನಿರ್ದೇಶಕರಾಗಿದ್ದಾಗಲೇ ಈ ಕೆಲಸ ಪ್ರಾರಂಭವಾಗಿತ್ತು. ೧೬೫೦ರಲ್ಲಿ ಬಸವಣ್ಣಾಚಾರ್ಯನೆಂಬ ಕವಿ ವಿರಚಿತ "ನವರತ್ನ ಮಾಲಿಕೆ" ಎಂಬ ಕೃತಿ ಐತಿಹಾಸಿಕ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದದ್ದು. ಇದರಲ್ಲಿ ಕನ್ನಡದ ವೀರಕುವರ, ಕುಮಾರರಾಮ ಹಾಗೂ ಹರತಿಪಾಳೆಯಗಾರರ ವಿಚಾರಗಳು ಬಂದಿರುವುದಲ್ಲದೆ, ಶಿವಭಕ್ತಿಯನ್ನು ಎತ್ತಿ ಹಿಡಿಯುವ ಗಮನಾರ್ಹ ಕೃತಿ. ಬಸವ ಸಮಿತಿ ಇದನ್ನು ಪ್ರಕಟಿಸುವ ನಿರ್ಣಯ ಕೈಕೊಂಡು ಇದರ ಪ್ರಕಟಣೆಗಾಗಿ ಧನ ಸಹಾಯವನ್ನು ಕೋರಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಗೆ ಪತ್ರವೊಂದನ್ನು ಕಳುಹಿಸಿತ್ತು. ಇದಕ್ಕೆ ಭಾಗಶಃ ಸರ್ಕಾರದಿಂದ ನೆರವು ಬಂದ ನಂತರ ಇದರ ಪ್ರಕಟಣೆಯನ್ನು ಬಸವ ಸಮಿತಿ ಕೈಗೆತ್ತಿಕೊಂಡಿತು. ಇದನ್ನು ಹಸ್ತಪ್ರತಿಯಿಂದ ಪ್ರತಿಮಾಡುವ ಕಾರ್ಯವನ್ನು ಗೀತಾಚಾರ್ಯ ಹಾಗೂ ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್‌ರವರಿಗೆ ವಹಿಸಿ ಕೊಡಲಾಯಿತು. ಈ ಕೆಲಸ ಮುಗಿದ ಮೇಲೆ ಇದನ್ನು ಸಂಪಾದಿಸುವ, ಪ್ರಕಟಿಸುವ ಕಾರ್ಯ ಸುಲಭವೇನೂ ಆಗಿರಲಿಲ್ಲ.

ಆಗ ಶ್ರೀ ಎನ್. ಬಸವಾರಾಧ್ಯರು ಆಪದ್ಬಾಂಧವರಾಗಿ ಬಸವ ಸಮಿತಿ ನೆರವಿಗೆ ಬಂದರು. ಅವರು ಗೀತಾಚಾರ್ಯ ಹಾಗೂ ಶ್ರೀ ಎನ್.ಎಸ್. ರಾಮಸ್ವಾಮಿ ಅಯ್ಯರ್‌ರವರ ಸಹಾಯವನ್ನು ತೆಗೆದುಕೊಂಡು ಈ ಕೃತಿಯನ್ನು ಸಂಪಾದಿಸಿಕೊಟ್ಟರು.ಈ ಕೃತಿಗೆ ಶ್ರೀ ಬಸವಾರಾಧ್ಯರು ಬರೆದ ಇಪ್ಪತ್ತೈದು ಪುಟಗಳ ಸುದೀರ್ಘ ಪೀಠಿಕೆ, ಸಂಪಾದನೆ ಕಲೆಯಲ್ಲಿ ಅವರಿಗಿರುವ ನೈಪುಣ್ಯತೆ ಹಾಗೂ ವಿದ್ವತ್ತಿಗೆ ನಿದರ್ಶನವಾಗಿದೆ. ಹೀಗಾಗಿ ಇದು ಬಸವ ಸಮಿತಿ ತಾಡವೋಲೆಗಳಲ್ಲಿದ್ದ ಅಪ್ರಕಟಿತ ಕೃತಿಯನ್ನು ಪ್ರಕಟಿಸಿದ ಮೊದಲನೆಯ ಕೃತಿಯಾಗಿ ಒಂದು ಇತಿಹಾಸವನ್ನು ನಿರ್ಮಿಸಿತು.

'ಅನಾದಿ ವೀರಶೈವ ಸಾರ ಸಂಗ್ರಹ' ಸಂಪಾದನೆಯ ಸಿದ್ಧ ವೀರಣಾರ್ಯರವರಿಂದ ಕ್ರಿ.ಶ. ೧೬೫೦ ರಲ್ಲಿ ರಚಿತವಾದ ಮಹತ್ವಪೂರ್ಣ ತಾತ್ವಿಕ ಕೃತಿ. ಇದೂ ಕೂಡ ಒಂದು ಬೃಹತ್ ಕೃತಿ. ಇದರಲ್ಲಿ ವೀರಶೈವ ತತ್ವಗಳು, ವೇದಾಗಮ ಉಪನಿಷತ್ತುಗಳ ಆಧಾರದ ಮೇಲೆ ವ್ಯಾಖ್ಯಾನಿಸಲ್ಪಟ್ಟಿವೆ. ಇದು ವೀರಶೈವ ತತ್ವಗಳನ್ನು ಪ್ರತಿಪಾದಿಸುವ ಗ್ರಂಥವಾದರೂ ವೀರಶೈವರಲ್ಲದವರಿಗೂ ಕೂಡ ಇದರಲ್ಲಿ ತಾತ್ವಿಕ ಆಹಾರವಿದೆ. ಈ ದೃಷ್ಟಿಯಿಂದ ಬಸವ ಸಮಿತಿ ಕೇಂದ್ರ ಸರಕಾರದ ನೆರವಿನಿಂದ ಇದರ ಪ್ರಕಟಣೆಯನ್ನು ಹಮ್ಮಿಕೊಂಡಿತು. ಇಂಥ ಬೃಹತ್ ಕೃತಿಯನ್ನು ಸಂಪಾದಿಸುವ ಕಾರ್ಯ ಗುರುತರವಾದದ್ದು. ಇದನ್ನು ಪ್ರತಿಮಾಡಿ ಬಹಳ ಶ್ರಮಪಟ್ಟು ಜಿ.ಎ. ಶಿವಲಿಂಗಯ್ಯನವರು ಇದನ್ನು ಸಂಪಾದಿಸಿಕೊಟ್ಟಿದ್ದರು. ಆದರೆ, ಸಂಪಾದನೆಯ ಶಾಸ್ತ್ರದಲ್ಲಿ ನಿಪುಣರಾದ ಮತ್ತೊಬ್ಬರು ಇದನ್ನು ಪರಿಶೀಲಿಸದೆ ಪ್ರಕಟಿಸುವುದನ್ನು ಬಸವ ಸಮಿತಿ ಒಪ್ಪಿಕೊಳ್ಳಲಿಲ್ಲ. ಆಗ ಮತ್ತೆ ಶ್ರೀ ಎನ್. ಬಸವಾರಾಧ್ಯರ

ನೆರವನ್ನು ಕೋರಬೇಕಾಯಿತು. ಶ್ರೀ ಎಸ್. ಬಸವಾರಾಧ್ಯರು ಇದನ್ನು ಕೂಲಂಕಷವಾಗಿ ಪರಿಶೀಲಿಸಿ, ಇದರ ಪ್ರಕಟಣೆಗೆ ಅನುವು ಮಾಡಿಕೊಟ್ಟರು. ಬಸವಾರಾಧ್ಯರ ಸಹಾಯ ದೊರೆಯದಿದ್ದರೆ, ಇದು ಪ್ರಕಟಣೆಯ ಬೆಳಕನ್ನು ಕಾಣುವ ಸಂಭವವಿರಲಿಲ್ಲ ಎಂದು ಹೇಳಬೇಕಾಗುತ್ತದೆ.

ಪಾಲ್ಕುರಿಕೆ ಸೋಮನಾಥ ಕವಿ ತೆಲುಗು ಭಾಷೆಯಲ್ಲಿ ಬಹಳ ಪ್ರಸಿದ್ಧ ಕವಿ. ವೀರಶೈವ ಧರ್ಮವನ್ನು ಪ್ರಚಾರ ಮಾಡುವ ಕಾರ್ಯದಲ್ಲಿ ಈತನ ಪಾತ್ರ ಬಹಳ ಮಹತ್ವಪೂರ್ಣವಾದದ್ದು. ಈತ ಅಪ್ರತಿಮ ಬಸವ ಭಕ್ತ. ಬಸವನೆಂದರೆ ಸೋಮನಾಥ, ಸೋಮನಾಥನೆಂದರೆ ಬಸವನೆಂಬ ಖ್ಯಾತಿಯನ್ನು ಈತ ಪಡೆದಿದ್ದಾನೆ. ಈತ ಬಸವಣ್ಣನನ್ನು ಕುರಿತು ಪ್ರಪ್ರಥಮವಾಗಿ ತೆಲುಗಿನಲ್ಲಿ ಬಸವ ಪುರಾಣವನ್ನು ಬರೆದುದು ಒಂದು ಐತಿಹಾಸಿಕ ದಾಖಲೆಯಾಗಿದೆ. ಈತನ ಕೃತಿ ಕನ್ನಡದಲ್ಲಿಯೂ ಭೀಮಕವಿಯಿಂದ ಬಸವ ಪುರಾಣವನ್ನು ರಚಿಸುವಂತೆ ಮಾಡಿ ಕನ್ನಡದಲ್ಲಿಯೂ ಪುರಾಣ ಪರಂಪರೆಗೆ ನಾಂದಿಯಾಯಿತು. ಇದಲ್ಲದೆ ಬಸವಣ್ಣನವರನ್ನು ಕುರಿತು ಸೋಮನಾಥನ ಇತರ ಕೃತಿಗಳಲ್ಲೂ ಕೂಡಾ ಬಹಳ ಮಹತ್ವ ಪೂರ್ಣವಾಗಿದೆ. ಈತನನ್ನು ಕುರಿತು ಬಸವ ಸಮಿತಿ ೧೯೯೯ರಲ್ಲಿ ಒಂದು ವಿಚಾರ ಸಂಕಿರಣವನ್ನೇರ್ಪಡಿಸಿತು. ಇದಕ್ಕೆ ಮುಖ್ಯವಾಗಿ ಕಾರಣವಾದವರು ಹೈದರಾಬಾದಿನ ಬಸವ ನಾಗಯ್ಯನವರು. ಇದಕ್ಕೆ ಆಧಾರ ಸ್ತಂಭವಾಗಿ ನಿಂತವರು ಶ್ರೀ ಎಸ್. ಬಸವಾರಾಧ್ಯರು. ಅವರು ಈ ಸಂದರ್ಭದಲ್ಲಿ ಮಂಡಿಸಿದ ಪಾಲ್ಕುರಿಕೆ ಸೋಮನಾಥನ "ಪಂಡಿತಾರಾಧ್ಯ ಚರಿತ್ರೆ" ಎಂಬ ೬೬ ಪುಟಗಳಷ್ಟು ದೀರ್ಘವಾದ ಪ್ರಬಂಧ ಈ ಕವಿಯನ್ನು ಕುರಿತು ಇವರ ಆಳವಾದ ಅಧ್ಯಯನದ ಪ್ರತೀಕವಾಗಿದೆ. ಪಾಲ್ಕುರಿಕೆ ಸೋಮನಾಥನ ಕಾವ್ಯ ಪ್ರತಿಭೆಯ ಬಗೆಗೆ ಇದು ಬೆಳಕು ಚೆಲ್ಲುತ್ತದೆ. ಈ ಪ್ರಬಂಧವನ್ನು ಮಂಡಿಸಿದ್ದಲ್ಲದೆ, ಶ್ರೀ ಬಸವಾವಾಧ್ಯರು ಈ ವಿಚಾರಸಂಕಿರಣದಲ್ಲಿ ಭಾಗವಹಿಸಿದ ಇತರ ಆರು ಜನ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನು ಸಂಪಾದಿಸಿ, "ಪಾಲ್ಕುರಿಕೆ ಸೋಮನಾಥ ಒಂದು ಅಧ್ಯಯನ" ಎಂಬ ಕೃತಿ ಪ್ರಕಟವಾಗಲು ಕಾರಣರಾಗಿದ್ದಾರೆ. ಈ ಕೃತಿ ಪಾಲ್ಕುರಿಕೆ ಸೋಮನಾಥನನ್ನು ಕುರಿತು ಒಂದು ಕೈಪಿಡಿಯಂತಿವೆ. ಇದಕ್ಕಾಗಿ, ಬಸವಾರಾಧ್ಯರಿಗೆ ಬಸವ ಸಮಿತಿ ಅಭಿನಂದನೆಗಳನ್ನು ಸಲ್ಲಿಸಲೇಬೇಕು.

ವೀರಶೈವ ಪಾರಿಭಾಷಿಕ ಪದಗಳನ್ನು ಅರ್ಥಮಾಡಿಕೊಳ್ಳಲು ಒಂದು ಅರ್ಥಕೋಶ ಬೇಕೇಬೇಕಾಗಿತ್ತು. ಡಾ॥ ಫ.ಗು. ಹಳಕಟ್ಟಿಯವರು ಇಂಥ ಒಂದು ಮಾದರಿ ಅರ್ಥಕೋಶವನ್ನು ತಾವೇ ಸ್ವತಃ ವಚನಸಾಹಿತ್ಯವನ್ನು ಇತರ ಶರಣ ಸಾಹಿತ್ಯವನ್ನು ಪ್ರಕಟಿಸಿದ ಮೇಲೆ ಕನ್ನಡ ಸಾಹಿತ್ಯಕ್ಕೆ ನೀಡಿದ್ದರು. ಆದರೆ, ಅದು ವ್ಯಾಪ್ತಿಯ ದೃಷ್ಟಿಯಿಂದ ಮತ್ತು ಇತರ ಕಾರಣದಿಂದಲೂ ಪರಿಪೂರ್ಣವಾಗಿರಲಿಲ್ಲ. ಇದಲ್ಲದೆ, ಕರ್ನಾಟಕ ಸರ್ಕಾರದವರು ೧೯೯೩ರಲ್ಲಿ ಸಮಗ್ರ ವಚನ ಸಂಪುಟಗಳ ಶೀರ್ಷಿಕೆಯಲ್ಲಿ ಹದಿನಾಲ್ಕು ಸಂಪುಟಗಳನ್ನು ಪ್ರಕಟಿಸಿತು. ಹದಿನೈದನೆಯ ಸಂಪುಟವನ್ನು ಪಾರಿಭಾಷಿಕ ಪದಕೋಶವನ್ನಾಗಿ ಪ್ರಕಟಿಸಿತು. ಇದರಲ್ಲಿ ಹಲವಾರು ಪದಗಳಿಗೆ ಅರ್ಥವಿವರಣೆಯನ್ನು ನೀಡಲಾಗಿದ್ದರೂ, ಇದೂ ಕೂಡ ಪರಿಪೂರ್ಣವಾಗಿರಲಿಲ್ಲ. ಇದನ್ನು ಮನಗಂಡ ಬಸವ ಸಮಿತಿ ಈ ಕುರಿತು ಒಂದು ಬೃಹತ್ ಅರ್ಥಕೋಶವನ್ನು ಪ್ರಕಟಿಸಲು ನಿರ್ಣಯಿಸಿತು. ಇದಕ್ಕೆ ಭಾಗಶಃ ಕರ್ನಾಟಕ ಸರ್ಕಾರದ ಆರ್ಥಿಕ ನೆರವೂ ದೊರೆಯಿತು. ಮೊದ ಮೊದಲು ಸರಕಾರ, ಈಗಾಗಲೇ ಹಲವಾರು ಪದಕೋಶಗಳಿರುವುದರಿಂದ ಮತ್ತೊಂದು ಅರ್ಥಕೋಶದ ಅವಶ್ಯಕತೆ ಇಲ್ಲವೆಂದು ಪ್ರತಿಪಾದಿಸಿದರೂ, ಆಗ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವೆಯಾಗಿದ್ದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರ ದಿಟ್ಟ ಹಾಗೂ ದೂರದೃಷ್ಟಿ ಕ್ರಮದಿಂದ ನೆರವು ದೊರಕಿತು. ಡಾ॥ ಎಸ್. ವಿದ್ಯಾಶಂಕರ್‌ರವರು ಪ್ರಧಾನ ಸಂಪಾದಕರಾಗಿ ಮತ್ತು ಪ್ರೊ॥ ಬಿ. ವಿರೂಪಾಕ್ಷಪ್ಪನವರು ವ್ಯವಸ್ಥಾಪಕ ಸಂಪಾದಕರಾಗಿಯೂ ಕಾರ್ಯನಿರ್ವಹಿಸಲು ಮುಂದೆ ಬಂದರು. ಈ ಸಂಪಾದಕ ಮಂಡಳಿಯ ಸದಸ್ಯರಾಗಿ ಕಾರ್ಯಗೈಯ್ಯಲು ಏಳು ಜನ ವಿದಾಂಸರು ಮುಂದೆ ಬಂದರು. ಆದರೆ ಇದೆಲ್ಲಕ್ಕಿಂತ ಮಿಗಿಲಾಗಿ ಸಂಪಾದಕೀಯ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಎಸ್. ಬಸವಾರಾಧ್ಯರು ಕಾರ್ಯ ನಿರ್ವಹಿಸಲು ಒಪ್ಪಿಕೊಂಡುದುದು ಈ ಯೋಜನೆಯ ಯಶಸ್ಸಿಗೆ ಕಾರಣವಾಯಿತು. ಬೇರ ಬೇರೆ ವಿದ್ವಾಂಸರ ಮೂಲಕ ಹಲವಾರು ಗ್ರಂಥಗಳಿಂದ ಪಾರಿಭಾಷಿಕ ಪದಗಳನ್ನು ಸಂಗ್ರಹಿಸಿ ಅವುಗಳನ್ನು ಸಂಪಾದಕ

ಮಂಡಳಿ ಎರಡು ವರ್ಷಗಳ ಕಾಲ ಹಲವಾರು ಸಾರಿ ಸೇರಿ ಪದಗಳನ್ನು ಹಿಂಜಿ ಹಿಂಜಿ ಸರಿಯಾದ ಅರ್ಥ ದೊರಕುವಂತೆ ಶ್ರೀ ಬಸವಾರಾಧ್ಯರ ಮಾರ್ಗದರ್ಶನದಲ್ಲಿ ನಡೆಸಿದ ಪ್ರಯತ್ನಗಳ ಫಲವಾಗಿ ಸುಮಾರು ಮೂರೂವರೆ ಸಾವಿರ ಪದಗಳನ್ನೊಳಗೊಂಡ ೬೪೩ ಪುಟಗಳ ಗ್ರಂಥ ಹೊರಬೀಳಲು ಕಾರಣವಾಯಿತು. ಈ ವಿಷಯದಲ್ಲಿ ಶ್ರೀ ಬಸವಾರಾಧ್ಯರಿಂದ ದೊರೆತ ಮಾರ್ಗದರ್ಶನವನ್ನು ಮರೆಯುವಂತಿಲ್ಲ.

ಇಲ್ಲಿಯವರೆಗೆ ಕರ್ನಾಟಕ ವಿಶ್ವವಿದ್ಯಾಲಯದಿಂದಲೂ, ಕರ್ನಾಟಕ ಸರ್ಕಾರದ ಸಮಗ್ರ ವಚನ ಸಂಪುಟಗಳಲ್ಲಿ ಪ್ರಕಟವಾದ ಶರಣರ ವಚನಗಳ ಸಂಖ್ಯೆ ಇಪ್ಪತ್ತೆಂಟು ಸಾವಿರಕ್ಕೂ ಮೀರಿದೆ. ಇವುಗಳನ್ನು ಹಿಂದಿ ಹಾಗೂ ಇಂಗ್ಲೀಷ್ ಭಾಷೆಗೆ ಅನುವಾದಿಸುವ ಕಾರ್ಯವನ್ನು ಹಮ್ಮಿಕೊಳ್ಳಬೇಕೆಂದು ಬಸವ ಸಮಿತಿಯು ನಿರ್ಣಯಿಸಿತು. ಎಲ್ಲ ವಚನಗಳನ್ನು ಈ ಭಾಷೆಗಳಲ್ಲಿ ಅನುವಾದ ಮಾಡುವ ಬದಲು, ಎಲ್ಲ ಶರಣರ ವಚನಗಳನ್ನು ಆಯ್ಕೆಮಾಡಿ ಆಯ್ದ ವಚನಗಳ ಸಂಗ್ರಹವನ್ನು ಮೊದಲು ಕನ್ನಡದಲ್ಲಿ ಸಂಗ್ರಹಿಸಿ, ಪ್ರಕಟಿಸಿದ ನಂತರ ಅವುಗಳನ್ನು ಇಂಗ್ಲೀಷ್ ಹಾಗೂ ಹಿಂದಿ ಭಾಷೆಗೆ ಅನುವಾದಿಸಬೇಕೆಂದು ನಿರ್ಣಯಿಸಲಾಯಿತು. ಈ ಕಾರ್ಯ ಶ್ರೀ ಎನ್. ಬಸವಾರಾಧ್ಯರ ಮಾರ್ಗದರ್ಶನದಲ್ಲಿಯೇ ಪ್ರಾರಂಭವಾಯಿತು. ವಚನಗಳನ್ನು ಆಯ್ಕೆ ಮಾಡಲು ಸೂತ್ರಗಳೂ ರೂಪುಗೊಂಡವು. ಈಗ ಬೇರೆ ಬೇರೆ ವಿದ್ವಾಂಸರು ವಚನಗಳನ್ನು ಆಯ್ಕೆ ಮಾಡಿಕೊಟ್ಟಿದ್ದಾರೆ. ಸಂಗ್ರಹದ ಕಾರ್ಯ ಪ್ರಗತಿಯಲ್ಲಿದ್ದು, ಮುಕ್ತಾಯ ಹಂತದಲ್ಲಿದೆ.

ಇದಲ್ಲದೆ, ಶ್ರೀ ಎನ್. ಬಸವಾರಾಧ್ಯರು ೧೯೯೦ರಿಂದ ಸಂಶೋಧನ ಹಾಗೂ ಪ್ರಕಟಣಾ ಸಮಿತಿಯ ಗೌರವಸದಸ್ಯರಾಗಿ, ಅನೇಕ ಸಲಹೆ ಸೂಚನೆಗಳನ್ನು ನೀಡಿ ಸಂಶೋಧನೆಯ ವಿಷಯದಲ್ಲಿಯೂ, ಗ್ರಂಥ ಪ್ರಕಟಣಾ ವಿಷಯದಲ್ಲಿಯೂ ತಮ್ಮ ಅಪಾರ ಅನುಭವದ ಹಿನ್ನೆಲೆಯಲ್ಲಿ ಮಾರ್ಗದರ್ಶನವನ್ನು ನೀಡಿದ್ದಾರೆ. ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದ ಯೋಜನೆಗಳಲ್ಲಿ ನಾನು ಅವರೊಂದಿಗೆ ವ್ಯವಹರಿಸಿದ ನೆನಪು ನನ್ನ ಮನದ ಅಂತರಾಳದಲ್ಲಿ ಹಚ್ಚ ಹಸುರಾಗಿ ಉಳಿದಿದೆ. ಅವರ ಕಾಯಕ ನಿಷ್ಠೆ, ಸಂಶೋಧನೆಯ ಶಿಸ್ತು, ಪ್ರಾಮಾಣಿಕತೆ, ಅಪಾರ ಅನುಭವ ಇವೆಲ್ಲಕ್ಕಿಂತಲೂ ಮಿಗಿಲಾಗಿ ಅವರ ಸಹೃದಯತೆಯನ್ನು ಯಾರಾದರೂ ಮೆಚ್ಚಿಕೊಳ್ಳಬೇಕು. ಇವರಿಂದ, ಕನ್ನಡ ಸಾಹಿತ್ಯ ಸಂಶೋಧನೆಗೆ ಅಪಾರವಾದ ಸೇವೆ ಸಂದಿದೆ. ಈ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯ. ಅವರು ಇನ್ನೂ ಹಲವಾರು ವರ್ಷ ಆರೋಗ್ಯವಂತರಾಗಿದ್ದು, ನೂರುವರ್ಷಗಳನ್ನು ದಾಟಿ ಕನ್ನಡ ಸಾಹಿತ್ಯವನ್ನು, ವೀರಶೈವ ಸಾಹಿತ್ಯವನ್ನು, ಸಂಶೋಧನಾ ಕ್ಷೇತ್ರವನ್ನು ಶ್ರೀಮಂತಗೊಳಿಸಲೆಂದು ಹಾರೈಸುತ್ತೇನೆ.

ಶ್ರೇಷ್ಠವಿದ್ವಾಂಸ : ಶ್ರೀ ಎನ್. ಬಸವಾರಾಧ್ಯರು

-ಪ್ರೊ. ಆರ್. ರಾಚಪ್ಪ

ಸಾಧುಂಗೆ ಸಾಧುಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗವಿಪರೀತ್
ಮಾಧವನೀತನ್ ಪೆಱನಲ್ಲ.

ಇದು ಕನ್ನಡರಾಜ ಕಪ್ಪೆ ಅರಭಟನ ಸ್ತುತಿ. ಇದು ಕನ್ನಡಿಗರ ಸ್ವಭಾವವನ್ನು ಚಿತ್ರಿಸುವ ಪದ್ಯವೂ ಹೌದು. ಕನ್ನಡಿಗರು ಸಾಧುಸ್ವಭಾವದವರು ಮಾಧುರ್ಯಸ್ವಭಾವದವರು. ಹಾಗೆಂದು ತಮ್ಮನ್ನು ಪೀಡಿಸುವವರನ್ನು ಸುಮ್ಮನೆ ಬಿಡುವವರಲ್ಲ. ಕಲಿಯುಗವನ್ನೇ ವಿಪರೀತಗೊಳಿಸುವಂತಹ ವೀರರು. ಕನ್ನಡಿಗರ ಸ್ವಭಾವ, ಸಂಸ್ಕೃತಿಗಳ ಚಿತ್ರ ಈ ಪದ್ಯದಲ್ಲಿದೆ. ಈ ಪದ್ಯವನ್ನು ಲಕ್ಷಿಸಿ ಓದಿದರೆ ಕನ್ನಡಕ್ಕೆ ತನ್ನದೇ ಆದ ಸಂಸ್ಕೃತಿ ಸಾಹಿತ್ಯವಿದ್ದು ಕನ್ನಡಿಗರು ಯಾರಿಗೂ ಕಡಿಮೆಇಲ್ಲ ಎಂಬಂಶ ಸ್ಪಷ್ಟವಾಗುತ್ತದೆ. ಹಾಗೆಯೇ ಪಂಪ, ರನ್ನ, ಜನ್ನ, ಹರಿಹರ-ರಾಘವಾಂಕ, ವಚನಕಾರರು, ದಾಸರು, ನಿಜಗುಣ, ಮುಪ್ಪಿನಷಡಕ್ಷರಿ, ಕುಮಾರವ್ಯಾಸ, ಚಾಮರಸ, ಸಿದ್ಧನಂಜೇಶ, ಷಡಕ್ಷರಿ, ಮುದ್ದಣ್ಣ ಮೊದಲಾದ ಕವಿವರೇಣ್ಯರು ಕಾವ್ಯರಚಿಸಿದ್ದಾರೆ. ಇವರಲ್ಲಿ ಅನೇಕರು ಕವಿಗಳೂ ಹೌದು, ದಂಡಾಧೀಶರೂ ಹೌದು. "ನಿಂದಿರೆ ದಂಡಾಧೀಶರು ತೊಡಂಕೆ ಕವಿ"ಗಳಾಗಿ ಮೆರೆದವರು. ಆಧುನಿಕ ಕಾಲದಲ್ಲಿಯೂ ಬಿ.ಎಂ.ಶ್ರೀ., ಪಂಜೆಮಂಗೇಶರಾಯರು, ಗೋವಿಂದ ಪೈ., ಹುಯಿಲಗೊಳ ನಾರಾಯಣರಾಯರು. ಕಡೆಗೊಂಡ್ಲು ಶಂಕರಭಟ್ಟ, ಮಧುರಚೆನ್ನರಂತಹ ಕವಿಗಳೂ, ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಕ.ವೆಂ. ರಾಘವಾಚಾರ್, ಕೆ. ವೆಂಕಟರಾಮಪ್ಪ, ಡಿ.ವಿ.ಜಿ., ಪ್ರೊ. ಮರಿಯಪ್ಪಭಟ್ಟ, ಡಾ. ಎಸ್.ವಿ. ಪರಮೇಶ್ವರಭಟ್ಟ, ಪ್ರೊ. ಸ.ಸ. ಮಾಳವಾಡ, ಕೆ.ಜಿ. ಕುಂದಣಗಾರ್, ಡಾ. ಆರ್.ಸಿ. ಹಿರೇಮಠ, ಪ್ರೊ. ಭೂಸನೂರಮಠ, ಡಾ. ಸಿದ್ಧಯ್ಯಪುರಾಣಿಕ -ಮೊದಲಾದ ವಿದ್ವಾಂಸರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಈ ಸಾಲಿಗೆ ಸೇರುವ ಮತ್ತೊಂದು ಹೆಸರು ಶ್ರೀ ಎನ್. ಬಸವಾರಾಧ್ಯ ಅವರದ್ದು.

ನಾನು ಶ್ರೀ ಬಸವಾರಾಧ್ಯರನ್ನು ಮೊದಲು ಕಂಡದ್ದು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಛೇರಿಯಲ್ಲಿ. ಅದಕ್ಕೂ ಮೊದಲು ಅವರು ಸಂಪಾದಿಸಿದ್ದ "ಕನ್ನಡ ಗದ್ಯವಿಕಾಸ" ಕೃತಿಯಿಂದ ಅವರ ಸಾಹಿತ್ಯಾಸ್ತಿ, ಸಂಪಾದನಾಕ್ರಮ ಮತ್ತು ವಿದ್ವತ್ತುಗಳು ಪರಿಚಯವಾಗಿದ್ದುವಾದರೂ, ವೈಯಕ್ತಿಕವಾಗಿ ಅವರನ್ನು ಕಂಡು ಮಾತನಾಡಿದ್ದು ಪರಿಷತ್ತಿನ ನಿಘಂಟು ಕಛೇರಿಯಲ್ಲಿಯೇ. ಅದಕ್ಕೂ ಮೊದಲು ಅವರು ಮೈಸೂರು ವಿಶ್ವವಿದ್ಯಾನಿಲಯದ ಓರಿಯಂಟಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನಲ್ಲಿದ್ದುದಾಗಿ ಕೇಳಿದ್ದೇನಾದರೂ ಅವರನ್ನು ಮುಖತಃ ಕಂಡು ಮಾತನಾಡಿದುದು ನಿಘಂಟು ಕಛೇರಿಯಲ್ಲಿಯೇ. ಒಮ್ಮೆ ಪರಿಚಯವಾದದ್ದು ಇಂದಿನವರೆಗೂ ನಮ್ಮಿಬ್ಬರ ನಡುವೆ ಸ್ನೇಹ ಬಾಂಧವ್ಯ ಅಚ್ಚಳಿಯದೆ ಉಳಿದಿದೆ. ನನ್ನ ಕಾಲೇಜಿನಲ್ಲಿ ಅಧ್ಯಾಪನ ಮುಗಿದು ಬಿಡುವಾದಾಗಲೆಲ್ಲಾ ನಿಘಂಟು ಕಛೇರಿಗೆ ತೆರಳಿ ಅಧ್ಯಯನ ಮಾಡುತ್ತಿದ್ದ ನನ್ನ ಬಗೆಗೆ ಬಸವಾರಾಧ್ಯರಿಗೆ ಆಸಕ್ತಿ, ಪ್ರೀತಿ, ಸ್ನೇಹಗಳು ಹೆಚ್ಚಾದುವು. ಅಲ್ಲಿ ನಾವು ಸೇರಿದರೆ ಸಾಹಿತ್ಯಿಕ ವಿಷಯಗಳ ಚರ್ಚೆಯೇ ಮುಖ್ಯವಸ್ತು. ಅದರಲ್ಲೂ ಗದ್ಯಸಾಹಿತ್ಯದ ಬಗೆಗೆ ಹೆಚ್ಚು ಕೇಂದ್ರೀಕೃತವಾಗಿರುತ್ತಿತ್ತು. ಹೀಗಾಗಿ ಗದ್ಯಸಾಹಿತ್ಯದ ಬಗೆಗೆ ನನ್ನಲ್ಲಿ ಹೆಚ್ಚಿನ ಆಸಕ್ತಿ ಮೂಡಲು ಬಸವಾರಾಧ್ಯರು ಕಾರಣರಾದರು.

೧.೪.೧೯೬೩ರಲ್ಲಿ ಶ್ರೀ ಎಲ್. ಗುಂಡಪ್ಪನವರು ನಿಘಂಟು ಸಂಪಾದಕತ್ವದಿಂದ ನಿವೃತ್ತರಾಗಲಾಗಿ ಮುಂದೆ ಈ ಕೆಲಸ ಯಾರು ಮಾಡುವರು ಎಂಬ ಜಿಜ್ಞಾಸೆ ಉಂಟಾದಾಗ, ಸಂಪಾದಕ ಮಂಡಳಿ ಅಧ್ಯಕ್ಷರಾಗಿದ್ದಂತಹ ಆಚಾರ್ಯ ಡಿ.ಎಲ್.ಎನ್. ಅವರು ಬಸವಾರಾಧ್ಯರ ಹೆಸರನ್ನು ಸೂಚಿಸಲಾಗಿ, ಸಂಪಾದಕ ಮಂಡಳಿಯಲ್ಲಿದ್ದ ಎಲ್ಲಾ ವಿದ್ವಾಂಸರು ಒಪ್ಪಿ ಬಸವಾರಾಧ್ಯರು ಸಂಪಾದಕತ್ವ ಜವಾಬ್ದಾರಿ ಹೊರಬೇಕಾಗಿ ಬಂದಿತು. ಬಸವಾರಾಧ್ಯ ವಿಚಲಿತರಾಗದೆ ತಮ್ಮ ಗುರುಗಳ ಆದೇಶವನ್ನು ಶಿರೋಧಾರ್ಯ ಎಂದು ಭಾವಿಸಿ ಅದನ್ನು ಪವಿತ್ರ ಕರ್ತವ್ಯ ಎಂಬಂತೆ ನಿಭಾಯಿಸಿದರು. ತಮಗೆ ಇದ್ದ ವಿದ್ವನ್ಮಂಡಳಿಯ ಸಲಹೆ ಸೂಚನೆಗಳನ್ನು ಗ್ರಹಿಸಿ ಸಾರ್ಥಕವಾಗಿ ಸಂಪಾದನಾ ಕಾರ್ಯ ನಿರ್ವಹಿಸಿದ ಕೀರ್ತಿ ಬಸವಾರಾಧ್ಯರದು.

ಇವರ ವಿದ್ವತ್ತಿಗೆ ಕಲಶವಿಟ್ಟಂತೆ ಅವರು ಸಂಪಾದಿಸಿಕೊಟ್ಟಿರುವ 'ಕನ್ನಡಗದ್ಯವಿಕಾಸ' ಮತ್ತು ಮಹಾಕವಿರಾಘವಾಂಕನ 'ಹರಿಶ್ಚಂದ್ರ ಕಾವ್ಯ'ಗಳು ಇಂದು ಕನ್ನಡಸಂಪಾದನಾಸಾಹಿತ್ಯದಲ್ಲಿ ಹೆಸರು ಮಾಡಿದೆ. 'ಗದ್ಯವಿಕಾಸ' ಅವರ ಆಳವಾದ ಅಧ್ಯಯನದ ಪ್ರತೀಕವಾಗಿದೆ. ಇಲ್ಲಿ ಸಂಗ್ರಹವಾಗಿರುವ ಗದ್ಯಭಾಗಗಳು ಅರಾಧ್ಯರ ಜಾಣತನ ಮತ್ತು ಪರಿಪಕ್ವತೆಯ ಪ್ರತೀಕವಾಗಿದೆ. ಕನ್ನಡ ಗದ್ಯಸಾಹಿತ್ಯದಲ್ಲಿ ಕೆಲಸ ಮಾಡುವವರಿಗೆ ಇದು ಕೈದೀವಿಗೆ "ಗದ್ಯಂ ಕವಿನಾಂ ನಿಕಷಂ ವದಂತಿ' ಎಂಬಂತೆ ಗದ್ಯಸಾಹಿತ್ಯ ಅಧ್ಯಯನದಿಂದ ಬಸವಾರಾಧ್ಯರು ಪರಿಪಕ್ವವಾದರೆಂದು ಹೇಳಲಡ್ಡಿಯಿಲ್ಲ. ಈ ಗದ್ಯಭಾಗಗಳನ್ನು ಮೈಸೂರು ಪ್ರಾಚ್ಯಕೋಶಾಗಾರದಲ್ಲಿದ್ದ ಹಸ್ತಪ್ರತಿಗಳಿಂದ ಸಂಗ್ರಹಿಸಿರುವುದಾಗಿ ತಿಳಿಸುತ್ತಾರೆ. ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಿದ್ಧಪಡಿಸಿದ ಗ್ರಂಥವಿದಾದರೂ ಗದ್ಯಸಾಹಿತ್ಯಾಸಕ್ತರಿಗೆ ಇದು ಉಪಯುಕ್ತ ಗ್ರಂಥವಾಗಿದೆ.

ಮಹಾಕವಿ ರಾಘವಾಂಕನ "ಹರಿಶ್ಚಂದ್ರ ಕಾವ್ಯ"ವನ್ನು ಸಂಪಾದನಾಶಾಸ್ತ್ರಕ್ಕನುಗುಣವಾಗಿ ಸಂಪಾದಿಸಿಕೊಟ್ಟು ಕನ್ನಡ ಓದುಗರಿಗೆ ಉಪಕಾರ ಮಾಡಿದ್ದಾರೆ. ಸುಮಾರು ನಲವತ್ತೇಳು ಪುಟಗಳ ಸುದೀರ್ಘ ಪ್ರಸ್ತಾವನೆಯಲ್ಲಿ, 'ಕವಿಯ ಜೀವನಚರಿತ್ರೆ,' 'ಕಾಲವಿಚಾರ', ''ಹರಿಶ್ಚಂದ್ರನ ಕಥೆಯ ಪೂರ್ವವೃತ್ತಾಂತ', 'ಹರಿಶ್ಚಂದ್ರಕಥೆಯ ಪೂರ್ವ ವೃತ್ತಾಂತ ಸಂಗ್ರಹ ಪುರಾಣಗಳಲ್ಲಿ ಕಂಡುಬರುವ ವ್ಯತ್ಯಾಸಗಳು, ಹರಿಶ್ಚಂದ್ರನ ಕಥೆ ಬರುವ ಕನ್ನಡಗ್ರಂಥಗಳು, ಕಾವ್ಯವಿಮರ್ಶೆ, ಹರಿಶ್ಚಂದ್ರ ಕಾವ್ಯದಲ್ಲಿಯ ಪ್ರಯೋಗವಾಗಿರುವ ಶಬ್ದರೂಪಗಳು, ಪರಿಷ್ಕರಣಕ್ಕೆ ಉಪಯೋಗಿಸಿಕೊಂಡಿರುವ ಪ್ರತಿಗಳ ಸಂಕ್ಷಿಪ್ತಚರಿತ್ರೆ, ಸ್ಥಲ-ಸಂಧಿ, ಪರಿಶಿಷ್ಟ, ಅರ್ಥಕೋಶಗಳನ್ನು ಸಿದ್ಧಪಡಿಸಿ ಓದುಗರಿಗೆ ತುಂಬಾ ನೆರವಾಗಿದ್ದಾರೆ. ಈ ಕೃತಿಗಳು ಅವರ ಸಂಪದನಾಕಾರ್ಯಕ್ಕೆ ಕಲಶಪ್ರಾಯವಾಗಿವೆ.

ನಾನು ಮತ್ತು ಶ್ರೀ ಎಚ್. ದೇವೀರಪ್ಪನವರು "ಜೇಡರದಾಸಿಮಯ್ಯನ ವಚನಗಳನ್ನು ಸಂಪಾದಿಸುವ ಉದ್ದೇಶಹೊಂದಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದ ಹಸ್ತಪ್ರತಿಗಳ ಪರಿಶೀಲನೆಗೆ ಹೋದಾಗ ಬಸವಾರಾಧ್ಯರು ಬಹುಮುತುವರ್ಜಿವಹಿಸಿ

ಅಲ್ಲಿದ್ದ ವಚನಗಳ ಹಸ್ತಪ್ರತಿಗಳನ್ನು ತೆಗೆದು ಕೊಟ್ಟು ಅಲ್ಲಿರುವ ವಚನಗಳ ಅಕಾರಾದಿಗಳನ್ನು ಪಟ್ಟಿಮಾಡಲು ಹೇಳಿ ನಮಗೆ ನೆರವಾದರು. ಅಂದು ಸಂಜೆವರೆಗೆ ಅದೇ ಕೆಲಸವಾಗಲಾಗಿ ನಾವು ಅಂದು ಅಲ್ಲಿಯೇ ಉಳಿಯಬೇಕಾಯಿತು. ಆಗ ನಮಗೆ ಆತಿಥ್ಯ ನೀಡಿದವರು ಬಸವಾರಾಧ್ಯರು. ಅಂದು ಅವರ ಮನೆಯಲ್ಲಿ ಉಳಿದುಕೊಂಡು ಮುಂಜಾನೆ ಬೆಂಗಳೂರು ಕಡೆಗೆ ಹೊರಡಲು ತೀರ್ಮಾನಿಸಿ ಆರಾಧ್ಯರ ಮನೆಗೆ ಹೋದೆವು. ಊಟವಾದ ಮೇಲೆ ನಮಗೆ ನಿದ್ದೆ ಎಲ್ಲಿ ಬರಬೇಕು. ಆ ಇಬ್ಬರು ವಿದ್ವಾಂಸರ ಮಧ್ಯೆ ನಾನೂ ಚರ್ಚೆಗೆ ತೊಡಗಿದೆವು. ಅಲ್ಲಿ ನಾವು ಚರ್ಚಿಸಿದ ವಿಷಯ ಅದೇ ವಚನಕಾರ ಜೇಡರದಾಸಿಮಯ್ಯನೇ ಹೊರತು, ಈಗೆಲ್ಲಾ ತಿಳಿದಿರುವಂತೆ ದೇವರ ದಾಸಿಮಯ್ಯನಲ್ಲ ಎಂಬುದು. ಸುಮಾರು ಎರಡು ಗಂಟೆವರೆಗೂ ಚರ್ಚೆನಡೆದಾಗ ಆ ಇಬ್ಬರು ವಿದ್ವಾಂಸರನ್ನು ಸೂಕ್ಷ್ಮವಾಗಿ ಗಮನಿಸಿದ ನನಗೇ ಹೆಚ್ಚಿನ ಲಾಭವಾಯಿತು. ಅಂದಿನಿಂದ ನನ್ನ ವಚನ ಸಾಹಿತ್ಯಾಭ್ಯಾಸ ಹೊಸದಿಕ್ಕನ್ನು ಹಿಡಿಯಿತು. ನಿವೃತ್ತರಾದ ಮೇಲೆ ಬಸವಾರಾಧ್ಯರು ಬೆಂಗಳೂರಿನಲ್ಲಿ ನೆಲೆಸಿದರು. ಆಗಾಗ ನಾನು ಅವರ ಮನೆಗೆ ಹೋಗಿ ಹಳಗನ್ನಡ ಕಾವ್ಯಗಳ ಬಗೆಗೆ ಚರ್ಚೆಮಾಡಿ ನನ್ನಜ್ಞಾನ ಹೆಚ್ಚಿಸಿಕೊಂಡೆನು.

ಬಸವಾರಾಧ್ಯರು ಸ್ನೇಹಜೀವಿ. ಒಮ್ಮೆ ತಮಗೆ ಪರಿಚಯವಾಗಿ ಸ್ನೇಹಬೆಳೆದರೆ ಅದು ಎಂದಿಗೂ ಕಡಿಮೆಯಾಗುತ್ತಿರಲಿಲ್ಲ. ಈ ಸ್ನೇಹ-ವಿದ್ವತ್ತು ಅಂತಸ್ತು, ವಯಸ್ಸನ್ನು ಗುರುತಿಸದೆ ಸಿದ್ಧಗೊಳ್ಳುವಂತಹದು. ಅವರಿಗಿಂತ ಹಿರಿಯರಾದ ಎಚ್. ದೇವೀರಪ್ಪನವರ ಬಗೆಗೆ ಅಪಾರಗೌರವ. ಅವರ ವಿದ್ವತ್ತಿಗೆ ಮಣಿದು ತಾವೂ ದೊಡ್ಡವರಾದರು. ಹಾಗೆಯೇ ಅವರಿಗಿಂತ ಕಿರಿಯರಾದ ನನ್ನನ್ನು ಟಿ.ಆರ್. ಮಹಾದೇವಯ್ಯನನ್ನು ಸಮಾನಸ್ಕಂದರಂತೆ ಕಂಡು ನಾವೇ ನಾಚುವಂತೆ ಮಾಡುತ್ತಿದ್ದರು. ಇಂತಹ ಶ್ರೇಷ್ಠ ವಿದ್ವಾಂಸರನ್ನು ಹಿರಿಯ ಸ್ನೇಹಿತರಾಗಿ ಪಡೆದ ನಾನು ಧನ್ಯ.

ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದರು. ಅವರ ಚುನಾವಣಾಪ್ರಕ್ರಿಯೆಯಲ್ಲಿ ನಾವೆಲ್ಲಾ ಭಾಗಿಯಾಗುವುದು ಸಹಜ. ಅಂತೆಯೇ ನಾವು ಒಂದೆಡೆ ಕುಳಿತು ಚರ್ಚಿಸಿ ಚುನಾವಣಾ ತಂತ್ರಗಳನ್ನು ರೂಪಿಸಲು ಒಂದು ಕಛೇರಿ ಬೇಕಾಗಿತ್ತು. ಆಗ ನಮಗೆ ನೆರವಾದವರು ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯರು. ಗಾಂಧಿಬಜಾರಿನಲ್ಲಿದ್ದ ಅವರ ಕಛೇರಿಯನ್ನು ನಮಗೆ ತೆರವು ಮಾಡಿಕೊಟ್ಟು ಪ್ರೋತ್ಸಾಹಿಸಿದರು. ಅಲ್ಲಿ ಪ್ರೊ. ಅ.ರಾ. ಮಿತ್ರ, ಪ್ರೊ. ಎಂ.ಎಚ್. ಕೃಷ್ಣಯ್ಯ, ನಾನು, ಶ್ರೀ ಚನ್ನವೀರಸ್ವಾಮಿ ಮೊದಲಾದವರು ಸೇರಿ ಕಾರ್ಯಪ್ರವೃತ್ತರಾದೆವು. ಆಗ ಚನ್ನವೀರಸ್ವಾಮಿಯವರ ಸಲಹೆಯಂತೆ ಅಂದೇ ನಾನು, ಬಸವಾರಾಧ್ಯರು, ಚನ್ನವೀರಸ್ವಾಮಿ, ಬಳ್ಳಾರಿ, ಧಾರವಾಡ, ಗದಗ ಬೆಳಗಾಂ ಕಡೆ ಹೊರಡತಕ್ಕದೆಂದು ತೀರ್ಮಾನಿಸಿ ಹೊರಟೇಬಿಟ್ಟೆವು. ಮಧ್ಯಾಹ್ನ ಊಟಮುಗಿಸಿ ಹೊರಟನಾವು ರಾತ್ರಿ ಬಳ್ಳಾರಿ ಸೇರಿದೆವು. ಅಲ್ಲಿ ಹೋಟೇಲಿನಲ್ಲಿ ವಸತಿಮಾಡಿ, ಮುಂಜಾನೆ ಎದ್ದು ಬಳ್ಳಾರಿಯಲ್ಲಿನ ಮಿತ್ರರನ್ನು ಕಂಡು ಚುನಾವಣಾ ತಂತ್ರರೂಪಿಸಿ ಅಂದೇ ಗದಗ, ಕೊಪ್ಪಳಗಳಿಗೆ ಪ್ರಯಾಣಿಸಿ ಅಲ್ಲೆಲ್ಲಾ ಸದಸ್ಯರನ್ನು ಭೇಟಿಯಾಗಿ ಅಂದೇ ಧಾರವಾಡ ಸೇರಿದೆವು. ಧಾರವಾಡ ರೆಸ್ಟೋರೆಂಟಿನಲ್ಲಿ ವಸತಿಮಾಡಿ ಮುಂಜಾನೆ ಎದ್ದು ಅಲ್ಲಿ ಶಿವಾನಂದಗಾಳಿ, ವೀರಣ್ಣ ರಾಜೂರ, ಬಿ.ಆರ್. ಹಿರೇಮಠ, ಶ್ರೀಮತಿ ಶಾಂತಾದೇವಿ ಮಾಳವಾಡ, ಎಂ.ಎಂ. ಕಲಬುರ್ಗಿ, ಚನ್ನವೀರಕಣವಿ, ಮೊದಲಾದವರನ್ನು ಭೇಟಿಮಾಡಿ ಬೆಳಗಾವಿ ಕಡೆ ಹೊರಟೆವು. ಈ ಎಲ್ಲಾ ವಿದ್ವಾಂಸರೊಂದಿಗೆ ಶ್ರೀ ಬಸವರಾಧ್ಯರು ನಡೆದುಕೊಂಡ ರೀತಿ ಎಂತಹವರೂ ಮೆಚ್ಚುವಂತಹುದು. ಆ ವಿದ್ವಾಂಸರು ಬಸವಾರಾಧ್ಯರ ಬಗೆಗೆ ಹೊಂದಿದ್ದ ಗೌರವ ನೋಡಿ ನಾನು ಮಂತ್ರಮುಗ್ಧನಾದೆನು. ನಾವು ಹೋದ ಊರುಗಳಲ್ಲೆಲ್ಲಾ ನಮಗೆ ಭವ್ಯಸ್ವಾಗತ, ಆದರಣೆ, ಆಯಾ ಊರಿನ ಜನತೆ ಪರಿಷತ್ತಿನ ಸದಸ್ಯರು ಬಸವಾರಾಧ್ಯರ ಬಗೆಗೆ ತೋರಿದ ಗೌರವ, ಪ್ರೀತಿಗಳು ನಿಜಕ್ಕೂ ಯಾರಾದರೂ ಕರುಬುವಂತಿದ್ದುವು. ನಾವು ಬೆಳಗಾವಿಯ ನಾಗನೂರು ಮಠಕ್ಕೆ ಹೋಗಿ ಮಠಾಧ್ಯಕ್ಷರನ್ನು ಭೇಟಿಯಾದಾಗ, ಸ್ವಾಮೀಜಿಯವರು ನಮ್ಮನ್ನು ಆಶೀರ್ವದಿಸಿ ಹೇಳಿದ ಮಾತುಗಳು ಬಸವಾರಾಧ್ಯರ ಬಗೆಗೆ ಅವರು ತಳೆದಿದ್ದ ಗೌರವ ಎಷ್ಟು ಅಗಾಧ ಎಂಬುದನ್ನು ತಿಳಿಸುತ್ತವೆ. ಸ್ವಾಮೀಜಿಯವರು ಅಶೀರ್ವಾದ ನುಡಿಗಳನ್ನು ನಾನು ಈ ರೀತಿ ಲಿಖಿಸಿದ್ದೇನೆ. "ಬಸವಾರಾಧ್ಯರೇ, ನೀವು ಒಂದು ಪತ್ರ ಬರೆದಿದ್ದರೂ ಸಾಕಾಗಿತ್ತು. ನಾವು ತಮ್ಮ ಪರವಾಗಿ ಕೆಲಸಮಾಡಿ

ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡುತ್ತಿದ್ದೆವು. ಈಗ ನೀವು ಖಿದ್ದಾಗಿ ಬಂದಿದ್ದೀರಿ. ಪ್ರಸಾದಮಾಡಿ. ಬಸವ ನಿಮಗೆ ಒಳ್ಳೆಯದನ್ನು ಮಾಡುತ್ತಾನೆ. ಬೆಳಗಾವಿ, ಧಾರವಾಡ, ಬಿಜಾಪುರ ಜಿಲ್ಲೆಗಳನ್ನು ನಮ್ಮ ಉಸ್ತುವಾರಿಗೆ ಬಿಟ್ಟುಬಿಡಿ. ನಾವು ನಿಮ್ಮ ಪರವಾಗಿ ಸದಸ್ಯರನ್ನು ಒಲಿಸಿ ಮತಕೇಳಿ ಜಯಶೀಲರನ್ನಾಗಿಸುವೆವು. ಅಲ್ಲದೆ ಶ್ರೀ ಶಿವಮೂರ್ತಿಶಾಸ್ತ್ರಿಗಳ ನಂತರ ಒಬ್ಬ ವಿದ್ವಾಂಸರನ್ನು ಪರಿಷತ್ತಿನ ಅಧ್ಯಕ್ಷರನ್ನಾಗಿಸಿದ ಅನಂದ, ತೃಪ್ತಿಹೊಂದುವೆವು". ಈ ಎಲ್ಲಾ ಮಾತುಗಳನ್ನು ಕೇಳಿ ನಾವು ಮೂರು ಜನ ಮಂತ್ರ ಮುಗ್ಧರಾದೆವು. ಈ ಮಾತುಗಳನ್ನು ಉಲ್ಲೇಖಿಸಿದ ಉದ್ದೇಶ ಇಷ್ಟೆ. ಅಂದಿಗೆ ಕನ್ನಡ ಸಾಹಿತ್ಯವಲಯದಲ್ಲಿ ಮಠಾಧೀಶರ ದೃಷ್ಟಿಯಲ್ಲಿ ಬಸವಾರಾಧ್ಯರ ವ್ಯಕ್ತಿತ್ವ ಎಷ್ಟು ಎತ್ತರದಲ್ಲಿದೆ ಎಂಬುದು ನಮಗೆ ಚಿರಪರಿಚಿತವಾಗಿ ನಮ್ಮನ್ನು ಮೂಕರನ್ನಾಗಿಸಿದುವು.

ನಾವೆಲ್ಲಾ ನಿರೀಕ್ಷಿಸಿದಂತೆ ಬಸವಾರಾಧ್ಯರು ಅಧ್ಯಕ್ಷರಾಗಿ ಆಯ್ಕೆಯಾದರು. ಪರಿಷತ್ತಿನಲ್ಲಿ ಸಾಹಿತ್ಯಿಕ ಚಟುವಟಿಕೆಗಳು ನಿರಂತರವಾದುವು. ಅವರ ಅಧ್ಯಕ್ಷಾವಧಿಯಲ್ಲಿ ಕನಕಪುರದಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನ ಭೂತೋ, ನ ಭವಿಷ್ಯತಿ, ಎಂಬತ್ತಿತ್ತು. ಸಮ್ಮೇಳನಾಧ್ಯಕ್ಷರನ್ನು ಆರಿಸುವ ಪ್ರಕ್ರಿಯೆಯಲ್ಲಿ ಬಸವಾರಾಧ್ಯರು ಅನುಸರಿಸುತ್ತಿದ್ದ ವಿಧಾನ ಪ್ರಜಾಸತ್ತಾತ್ಮಕವಾಗಿರುತ್ತಿತ್ತು. ಹಾಗೆಯೇ ಬಾಗಲಕೋಟೆಯಲ್ಲಿ ನಡೆದ ಸಮ್ಮೇಳನ ಅಷ್ಟೇ ಉನ್ನತವಾಗಿತ್ತು. ಬಹಳ ಕಾಲದ ನಂತರ ಮತ್ತೊಬ್ಬ ಮಹಿಳೆಯನ್ನು (ಶ್ರೀಮತಿ ಶಾಂತದೇವಿ ಮಾಳವಾಡ ಅವರು) ಅಧ್ಯಕ್ಷರನ್ನಾಗಿಸಿದ ಕೀರ್ತಿ ಬಸವಾರಾಧ್ಯರದಾಗಿತ್ತು. ಸಮ್ಮೇಳನದ ವ್ಯವಸ್ಥೆ, ಗೋಷ್ಠಿಗಳು, ತೆಗೆದುಕೊಂಡ ನಿರ್ಣಯಗಳು ಪ್ರಜಾಸತ್ತಾತ್ಮಕವಾಗಿದ್ದು ಅವೆಲ್ಲಾ ಬಸವಾರಾಧ್ಯರ ವ್ಯಕ್ತಿತ್ವ ಎದ್ದುಕಾಣುತ್ತಿತ್ತು. ಇಂತಹ ಒಬ್ಬ ಹಿರಿಯ ವಿದ್ವಾಂಸ, ಜನಾನುರಾಗಿ, ಒಬ್ಬ ಮನುಷ್ಯ (ನಿಜವಾದ ಅರ್ಥದಲ್ಲಿ ಮನುಷ್ಯ) ನನಗೆ ಹಿರಿಯ ಮಿತ್ರರಾಗಿರುವುದು ನನ್ನ ಸುಕೃತವೇ ಸರಿ. ತಮ್ಮ ಅಧ್ಯಾಪಕರುಗಳಿಗೆ, ಕನ್ನಡ ಸಾರಸ್ವತ ಲೋಕದ ವಿದ್ವನ್ಮಣಿಗಳಿಗೆ ಆತ್ಮೀಯರಾಗಿ ಬೆಳೆದು ನಿಂತ ಬಸವಾರಾಧ್ಯರ ಬಗೆಗೆ ಅಭಿನಂದನಾಗ್ರಂಥ ತಡವಾಗಿಯಾದರು ಹೊರಬರುತ್ತಿರುವುದು ಸಂತೋಷದ ಸಂಗತಿ. ಅವರ ಮಿತ್ರರು, ಅಭಿಮಾನಿಗಳು, ಸೇರಿ ಅಭಿನಂದಿಸಲು ತೀರ್ಮಾನಿಸಿ "ಸಂಸ್ಮರಣ ಗ್ರಂಥ" ತರುತ್ತಿರುವ ಸಂಗತಿ ಅಭಿಮಾನಾಸ್ಪದವಾದುದು. ಕನ್ನಡ ಜನತೆ ಒಬ್ಬ ವಿದ್ವಾಂಸರನ್ನು ಗೌರವಿಸಿ ಅಭಿನಂದಿಸುತ್ತಿರುವುದು, ನಮ್ಮನ್ನು ಗೌರವಿಸಿಕೊಂಡಂತೆ. ಬಸವಾರಾಧ್ಯರು ದೀರ್ಘ ನಮ್ಮೊಂದಿಗಿದ್ದು ನಮಗೆ ಮಾರ್ಗದರ್ಶನ ಮಾಡುತ್ತಿರಲಿ, ನಮ್ಮನ್ನು ಪ್ರೋತ್ಸಾಹಿಸುತ್ತಿರಲಿ ಎಂದು ಹಾರೈಸುತ್ತೇನೆ. ಭಗವಂತ ಅರಾಧ್ಯರಿಗೆ ಆಯಸ್ಸು, ಆರೋಗ್ಯ ನೀಡಲೆಂದು ಪ್ರಾರ್ಥಿಸುತ್ತೇನೆ.

ಅನುಕರಣೀಯ ವ್ಯಕ್ತಿತ್ವದ ಶ್ರೀ ಎನ್. ಬಸವಾರಾಧ್ಯ

-ಎಸ್.ವಿ. ಶ್ರೀನಿವಾಸ್‌ರಾವ್

ಯಾವುದೇ ವ್ಯಕ್ತಿಯ ಪರಿಚಯ ಎರಡು ವಿಧದಲ್ಲಿ ಆಗಬಹುದಾಗಿರುತ್ತದೆ. ಮೊದಲನೆಯದು 'ವೃತ್ತಿಪರ ಪರಿಚಯ' ಎರಡನೆಯದು 'ವ್ಯಕ್ತಿಗತ ಪರಿಚಯ'. ವೃತ್ತಿ ಪರಿಚಯದಲ್ಲಿ ಇಬ್ಬರು ವ್ಯಕ್ತಿಗಳ ಮಧ್ಯದಲ್ಲಿನ 'ವೃತ್ತಿ' ಇಡೀ ಪ್ರಾಧಾನ್ಯತೆ ಪಡೆಯುವುದರಿಂದ ಪರಿಚಯ ಕೇವಲ ವ್ಯಾವಹಾರಿಕವಾಗಿರುತ್ತದೆ. ಕೊಡು ತೆಗೆದುಕೊಳ್ಳವ ಪರಿಧಿಯನ್ನು ಲಾಭ-ನಷ್ಟ ಪರಿಭ್ರಮಿಸುತ್ತಿರುತ್ತವೆ. 'ಲಾಭ' ಧನಾತ್ಮಕವಾದಾಗ ಪರಿಚಯ ಗಾಢವಾಗುತ್ತದೆ. 'ಋಣಾತ್ಮಕವಾದಾಗ ಶಿಥಿಲಗೊಳ್ಳುತ್ತದೆ. ಇಲ್ಲಿ ಬಾಹ್ಯ ತಿಳುವಳಿಕೆಗೆ ಮಾತ್ರ ಆಧ್ಯತೆ ಇರುತ್ತದೆ. ಆದರೆ 'ವ್ಯಕ್ತಿಗತ' ಪರಿಚಯ ಇದಕ್ಕೆ ಪೂರ್ಣ ವ್ಯತಿರಿಕ್ತವಾಗಿರುತ್ತದೆ ಇಲ್ಲಿ ಮನಸ್ಸು ಮತ್ತು ಬುದ್ಧಿಗೆ ಮುಟ್ಟುವ ಸ್ನೇಹ, ಪ್ರೀತಿ, ವಾತ್ಸಲಕ್ಕೆ ಆಧ್ಯತೆ ಇರುತ್ತದೆ. ಈ ಬಾಂಧವ್ಯ ಹಸಿದಾರದ ಸರಪಣಿಯಿಂದ ಬಂಧಿಸಲ್ಪಟ್ಟಿದ್ದರೆ, 'ವೃತ್ತಿಪರ' ಬಾಂಧವ್ಯ ಹಸಿದಾರದ ಸೇರ್ಪಡೆಯಾಗಿರುತ್ತದೆ.

ನನ್ನ ಮತ್ತು ಎನ್. ಬಸವಾರಾಧ್ಯರ ಸ್ನೇಹ ಬಾಂಧವ್ಯ ಎರಡನೆ ಗುಂಪಿಗೆ ಸೇರಿದುದಾಗಿದೆ. ಇಲ್ಲಿ ಪ್ರೀತಿ, ವಿಶ್ವಾಸದೊಡನೆ ನಂಬಿಕೆ ಮತ್ತು ಪರಸ್ಪರ ಲಾಭಮಾನಗಳ ಮಧುರ ಮಿಲನ ನಡೆದಿದೆ. ಪ್ರತಿಭೆ ಮತ್ತು ವಿದ್ವತ್ತನ್ನು ಆದರಿಸುವ ವಿಶಾಲ ದೃಷ್ಟಿ ಜಾತಿ ಮತಗಳ ಸಂಕುಚಿತ ಭಾವನೆಗಳನ್ನು ಮೆಟ್ಟಿ ಮೆರೆದಿದೆ. ಆದ್ದರಿಂದಲೇ ನಮ್ಮಿಬ್ಬರ ಸ್ನೇಹ ಬಾಂಧವ್ಯ ಬಿಡಿಸಲಾರದಷ್ಟು ಭದ್ರವಾಗಿ ಬೆಸೆದುಕೊಂಡಿದೆ.

ನಾನು ಬಸವಾರಾಧ್ಯರಲ್ಲಿನ ಮೆಚ್ಚಿರುವ ಗುಣ ವಿಶೇಷಗಳೆಂದರೆ ವಾದವನ್ನು ಮಂಡಿಸುವಾಗ ಅವರು ತೋರುವ ನಮ್ರತೆ, ವಿರೋಧವನ್ನು ಮೆದುವಾಗಿಸುವ ಕಾರ್ಯಕ್ಷಮತೆ ಹಾಗೂ ಸೌಜನ್ಯ ಪೂರ್ಣ ವ್ಯಾವಹಾರಿಕ ಕುಶಲತೆ.

ಮೊದಲು ನನಗೆ ಅವರ ಭೇಟಿಯಾದದ್ದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾನು ಗೌರವ ಕೋಶಾಧ್ಯಕ್ಷನಾಗಿದ್ದಾಗ. (೧೯೮೯)

ನಿಘಂಟು ರಚನಾ ಸಮಿತಿಯಲ್ಲಿ ಪ್ರತಿ ತಿಂಗಳೂ ಇತರ ಸದ್ಯಸರೊಡನೆ ಇವರ ಭೇಟಿಯಾಗುತ್ತಿತ್ತು. ಇವರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಪ್ರೊ.ಹೆಚ್.ಆರ್. ದಾಸೇಗೌಡರ ಮೂಲಕ ಗಳಿಸಿದ್ದುದರಿಂದ ಇವರ ಸ್ನೇಹ ಸಂಬಂಧ ವೃದ್ಧಿಸಿಕೊಳ್ಳಲು ಉತ್ಸುಕನಾಗಿದ್ದೆ. ನನ್ನ ಉತ್ಸಾಹಕ್ಕೆ ಬಸವಾರಾಧ್ಯರು ನೀರೆರೆದರು. ಸ್ನೇಹ ಸಸಿ ಪಲ್ಲವಿಸತೊಡಗಿತು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದಕ ವಿಭಾಗದಲ್ಲಿ ಅಮೋಘ ಸೇವೆ ಸಲ್ಲಿಸಿದ್ದಾರೆಂಬ ಹಿನ್ನೆಲೆಯ ಅರಿವಿದ್ದ ನನಗೆ, ನಿಘಂಟು ಸಭೆಯಲ್ಲಿ ಪ್ರತಿಯೊಂದು ಪದಕ್ಕೂ ಅರ್ಥ ವ್ಯಾಖ್ಯಾನ ನೀಡುತ್ತಿದ್ದ ಪರಿ ಬಹಳ ಮೆಚ್ಚುಗೆ ಆಗುತ್ತಿತ್ತು. ಅದರಲ್ಲಿ ಖಚಿತತೆ ಇರುತ್ತಿತ್ತು, ವಿದ್ವತ್‌ಪೂರ್ಣ ವಿವರಣೆ ಸದಾ ಸಿದ್ಧವಿರುತ್ತಿತ್ತು. ಒಂದು ಪದದ ಮೂಲವನ್ನು ಶೋಧಿಸಿ ಅರ್ಥೈಸುವಾಗ ಹಲವು ಬಾರಿ ಡಾ. ವೆಂಕಟಾಚಲಶಾಸ್ತ್ರಿ ಮತ್ತು ಪ್ರೊ. ಜಿ. ವೆಂಕಟಸುಬ್ಬಯ್ಯನವರ ನಡುವೆ ವಾಗ್ಯುದ್ಧ ಪ್ರಾರಂಭವಾದಾಗ ಬಸವಾರಾಧ್ಯರು ಅರ್ಥಪೂರ್ಣ ಸಮಜಾಯಿಸಿ ನೀಡಿ ವಾಗ್ವಾದಕ್ಕೆ ತೆರೆ ಎಳೆಯುತ್ತಿದ್ದರು. ಸಮಯೋಚಿತ ಈ ಕಾರ್ಯದಂತೆ ಸತ್ವದ ಮೆಚ್ಚುಗೆಗಳಿಸುತ್ತಾ ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಪ್ರಾರಂಭ ದೆಸೆಯಿಂದಲೂ ಸಂಪಾದಕ ಮಂಡಲಿಯ ಸದಸ್ಯರಾಗಿ, ಉಪ ಸಂಪಾದಕರಾಗಿ, ಮುಖ್ಯ ಸಂಪಾದಕರಾಗಿ, ಅಧ್ಯಕ್ಷರಾಗಿ ಬಹುಶ್ರುತ ಕೊಡುಗೆಗಳನ್ನು ನೀಡಿರುತ್ತಾರೆ.

ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟನ್ನು ಪರಿಷ್ಕೃತಗೊಳಿಸುವಾಗ ಇವರು ತೆಗೆದುಕೊಂಡ ಕಾಳಜಿ ಪ್ರಶಂಸನೀಯ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರು ಪ್ರತಿಯೊಂದು ಕಾರ್ಯಕ್ರಮವನ್ನು ರೂಪಿಸುವಲ್ಲಿ ಹಾಗೂ ಅದನ್ನು ಕಾರ್ಯಗತ ಗೊಳಿಸುವಲ್ಲಿ ತೆಗೆದು ಕೊಳ್ಳುತ್ತಿದ್ದ ಮುತವರ್ಜಿ ಹಾಗೂ ಎಚ್ಚರಿಕೆ ನಿಜಕ್ಕೂ ಎಲ್ಲರಿಗೂ ಅನುಕರಣೀಯ ಮೇಲ್ಪಂಕ್ತಿಯಾಗಿದೆ.

ಹಳಗನ್ನಡ ಸಾಹಿತ್ಯದ ಮೇಲೆ ಪೂರಾ ಪ್ರಬುದ್ಧತೆಯನ್ನು ಸಾಧಿಸಿ ಕೊಂಡಿರುವ ಶ್ರೀಯುತರು ಹಲವು ಕನ್ನಡ ಪ್ರಾಚೀನ ಗ್ರಂಥಗಳನ್ನು ಪರಿಶೋಧಿಸಿ ಸಂಪಾದಿಸಿದ್ದಾರೆ. ಇವರು ಆಗಾಗ್ಗೆ ಪ್ರಕಟಿಸುತ್ತಿರುವ ನೂರಾರು ಸಂಶೋಧನಾ ಲೇಖನಗಳು ಇತ್ತೀಚಿನ ಸಂಶೋಧಕರಿಗೆ ಆಕರ ಲೇಖನಗಳಾಗಿವೆ.

ಇವರ ಬಹುಮುಖ ಪ್ರತಿಭೆಯನ್ನು ಸರ್ತಿಸಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದ್ದರೆ, ಸಾಹಿತ್ಯ ಅಕಾಡೆಮಿ ಇವರ ವಿದ್ವತ್ತನ್ನು ಗುರುತಿಸಿ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.

ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ (೧೯೮೮-೨೦೦೧) ರಾಜ್ಯಾದ್ಯಂತ ಸಂಚರಿಸಿ ಕನ್ನಡ ಸಾಹಿತ್ಯದ ಕಂಪನ್ನಹರಿಸಲು ಹಾಗೂ ಕನ್ನಡಾಭಿಮಾನವನ್ನು ವೃದ್ಧಿಗೊಳಿಸಲು ಸತತವಾಗಿ ಶ್ರಮಿಸಿ ಸಾಕಷ್ಟು ಯಶಸ್ವಿಯಾಗಿದ್ದಾರೆ, ಈ ಬಗ್ಗೆ ಅವರು ಗಳಿಸಿರುವ ಜನಾಭಿಮಾನವೇ ಸಾಕ್ಷಿಯಾಗಿದೆ. ಶ್ರೀಯುತರಿಗೆ ೭೫ ತುಂಬಿದ ಈ ಸಂದರ್ಭದಲ್ಲಿ ಇವರನ್ನು ಅಭಿನಂದಿಸಲು ನಾನೂ ಕಾತುರನಾಗಿದ್ದೇನೆ.

ಇವರು, ಇನ್ನೂ ಶತಕಾಲವಿದ್ದು ಉತ್ಕೃಷ್ಟ ಗ್ರಂಥಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಲಿ ಎಂದು ಹೃತ್ಪೂರ್ವಕವಾಗಿ ಶುಭ ಕೋರುತ್ತೇನೆ. ಇವರಿಗೆ ಸಕಲ ಸನ್ಮಂಗಳಗಳನ್ನು ಕರುಣಿಸಿ ಇನ್ನೂ ಬಹುಕಾಲ ಸಲುಹಲಿ ಎಂದು ದೇವರಲ್ಲಿ ಪ್ರಾರ್ಥನೆ. ಸಲ್ಲಿಸುತ್ತೇನೆ.

ಸಜ್ಜನಿಕೆಯ ಸಾಕಾರಮೂರ್ತಿ

-ಟಿ.ವಿ. ವೆಂಕಟರಮಣಯ್ಯ

ಪ್ರೊ|| ಎನ್. ಬಸವಾರಾಧ್ಯ -ಈಗ ನಮ್ಮ ಮಧ್ಯೆ ಉಳಿದಿರುವ ಹಳಗನ್ನಡ ಸಾಹಿತ್ಯದ ಅಪರೂಪದ ವಿದ್ವಾಂಸರಲ್ಲಿ ಒಬ್ಬರು. ಹಳಗನ್ನಡ ಸಾಹಿತ್ಯ ಕೃತಿಗಳ ಸಂಪಾದನೆಯಲ್ಲಿ, ಸಂಶೋಧನೆಯಲ್ಲಿ, ನಿಘಂಟು ರಚನೆಯಲ್ಲಿ ಅವರು ಎತ್ತಿದ ಕೈ. ಇಂತಹ ಮಹನೀಯರ ಆಪ್ತವರ್ಗದಲ್ಲಿ ನಾನು ಸೇರಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ. ಅವರ ವ್ಯಕ್ತಿತ್ವ ಕುರಿತ ಒಂದೆರಡು ನೆನಪುಗಳನ್ನು ಮಾತ್ರ ಇಲ್ಲಿ ದಾಖಲಿಸಲಿಚ್ಛಿಸುತ್ತೇನೆ.

೧೯೬೮ರ ಡಿಸೆಂಬರ್‌ನಲ್ಲಿ ನಾನು ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯದ ಸೇವೆಯಿಂದ ಬಿಡುಗಡೆಯಾಗಿ ಬೆಂಗಳೂರು ವಿಶ್ವವಿದ್ಯಾಲಯ ಗ್ರಂಥಾಲಯದಲ್ಲಿ ಸಹಾಯಕ ಗ್ರಂಥಪಾಲಕನಾಗಿ ಸೇವೆಯನ್ನಾರಂಭಿಸಿದೆ. ಅದೇ ವರ್ಷ (ನಾನು ಕಲ್ಕತ್ತೆಯಲ್ಲಿದ್ದಾಗಲೇ) ನನ್ನ '**ಪಡೆನುಡಿಕೋಶ**'ವನ್ನು ಧಾರವಾಡದ ಸಮಾಜ ಪುಸ್ತಕಾಲಯವು ಪ್ರಕಟಿಸಿತ್ತು. ಇದರ ವಿಸ್ತೃತ ವಿಮರ್ಶೆಯನ್ನು 'ಪ್ರಜಾವಾಣಿ' ಯಲ್ಲಿ ೧೯೬೯ರಲ್ಲಿ ಪ್ರೊ|| ಎನ್. ಬಸವಾರಾಧ್ಯರು ಮಾಡಿದ್ದರು. ಆ ವಿಮರ್ಶೆಯಲ್ಲಿ ಕೋಶದಲ್ಲಿ ನಾನು ಮಾಡಿದ್ದ ವ್ಯವಸ್ಥೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆಂಬ ನೆನಪು. ಎಲ್ಲಾ ನಿಘಂಟುಗಳಲ್ಲಿನ ವ್ಯವಸ್ಥೆಯಂತೆ ಪಡೆನುಡಿಗಳನ್ನು 'ಅಕಾರಾದಿಯಾಗಿ ಜೋಡಿಸಬೇಕಿತ್ತು ಎಂಬುದು ಬಹುಶಃ ಅವರ ಅನಿಸಿಕೆಯಾಗಿತ್ತು. ಆದರೆ ಆ ಕೋಶದಲ್ಲಿನ ವ್ಯವಸ್ಥೆ ಸಾಂಪ್ರದಾಯಿಕ ಕೋಶಗಳಲ್ಲಿನ ವ್ಯವಸ್ಥೆಗಿಂತ ಭಿನ್ನವಾಗಿತ್ತು. ಹಾಗೂ ನನ್ನ ನಿಲುವನ್ನು ಪರಿವಿಡಿಯಲ್ಲಿ ಸೂಚಿಸಿದ್ದೆ. ಈ ಅಂಶವನ್ನು ಆಗ ಡಾ|| ಎಂ. ಚಿದಾನಂದಮೂರ್ತಿ ಅವರ ಗಮನಕ್ಕೆ ತರಲಾಗಿ "ಪ್ರೊ|| ಎನ್. ಬಸವಾರಾಧ್ಯರು ನಿಘಂಟುಕಾರರಾಗಿ ಅವರ ಅಭಿಪ್ರಾಯ ಸೂಚಿಸಿದ್ದಾರೆ. ಅದನ್ನು ಬಿಡಿ. ಆದರೆ ಕಡೆಯಲ್ಲಿ ನಿಮಗೆ "Compliments" ಕೊಟ್ಟಿದ್ದಾರೆ ನೋಡಿ!" ಎಂದು ನನ್ನನ್ನು ಸಮಾಧಾನಪಡಿಸಿದರು. ಈ ಪ್ರಸಂಗ ನನಗೆ ಪ್ರೊ|| ಬಸವಾರಾಧ್ಯರ ಬಗ್ಗೆ ಗೌರವ ಮೂಡಿಸಿತು-ಕಾರಣ ವಿಮರ್ಶಕರಲ್ಲಿರಬೇಕಾದ ನಿಷ್ಠುರತೆ ಹಾಗೂ ಮೆಚ್ಚುಗೆ ಎರಡೂ ಅವರಲ್ಲಿ ಮೇಳೈಸಿದ್ದವು.

ಪ್ರೊ|| ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಅಲ್ಲಿನ ಗ್ರಂಥಾಲಯ ಸಲಹಾ ಸಮಿತಿಯ ಸದಸ್ಯನಾಗಿ ನಾನಿರಬೇಕೆಂದು ಆಶಿಸಿದರು. ಮಿಗಿಲಾಗಿ ಗ್ರಂಥಾಲಯವನ್ನು ಸುವ್ಯವಸ್ಥೆಗೆ ತರುವಲ್ಲಿ ನಾನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕೆಂದು ಇಚ್ಛಿಸಿದ್ದರು. ನನ್ನ ಅನಾರೋಗ್ಯ ನಿಮಿತ್ತ ಅದು ಸಾಧ್ಯವಾಗದಿದ್ದರೂ, ಅಲ್ಲಿನ ಗ್ರಂಥಾಲಯದ ಅಭಿವೃದ್ಧಿ ಕುರಿತು ಅವರ ಕಾಳಜಿ ನನ್ನ ಮೆಚ್ಚುಗೆಗೆ ಪಾತ್ರವಾಯಿತು.

ಇದಲ್ಲದೆ ವೈಯಕ್ತಿಕವಾಗಿ ಅವರನ್ನು ನಾನು ಕಂಡಿದ್ದು - ಒಬ್ಬ ಸಹೃದಯ ಸಂಪನ್ನ, ಸರಳಜೀವಿ ಸ್ನೇಹಜೀವಿ ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿ. ನನ್ನ ಪುಸ್ತಕಗಳಲ್ಲಿ, ಆಯ್ದು ಕೆಲವನ್ನು, ಅವರ ಅವಗಾಹನೆಗೆ ಕಳುಹಿಸಿದಾಗ, ಅವರಿಂದ ಶೀಘ್ರ ಪ್ರತಿಕ್ರಿಯೆ ದೊರೆಯುತ್ತದೆ. ಅವರ ಮನ ತುಂಬಿದ ಹಾರೈಕೆ ಲಭಿಸುತ್ತದೆ. ನಮ್ಮಲ್ಲಿ ವಿದ್ವಾಂಸರು ಹಲವರು, ಸಹೃದಯರು ಕೆಲವರು. ಇಂತಹ ಅಪರೂಪದ ಸಜ್ಜನ, ಸಹೃದಯ, ಸಭ್ಯವ್ಯಕ್ತಿಗಳಲ್ಲಿ ಪ್ರೊ|| ಬಸವಾರಾಧ್ಯರು ಎದ್ದು ನಿಲ್ಲುತ್ತಾರೆ.

ಇಂತಹವರು ನೂರ್ಕಾಲ ಬಾಳಲಿ, ನಾಡು, ನುಡಿಗೆ ಇನ್ನು ಹೆಚ್ಚಿನ ಅನುಪಮ ಸೇವೆ ಇವರಿಂದ ಸಲ್ಲಲೆಂದು ಹಾರೈಸುತ್ತೇನೆ.

XXX

ಅಜಾತಶತ್ರು ಪ್ರೊ. ಎನ್. ಬಸವಾರಾಧ್ಯ

-ಡಾ. ಪಂಚಾಕ್ಷರಿ ಹಿರೇಮಠ

ಬಹುಭಾಷಾವಿದ್ವಾಂಸ ಮಿತ್ರರಾದ ಪ್ರೊ. ಬಸವಾರಾಧ್ಯ ಅಜಾತಶತ್ರು. ತಮ್ಮ ವಿದ್ವತ್ತು ಮತ್ತು ನಿರಂತರ ಸಾಧನೆಯಿಂದ ಅಹಂಕಾರ ನಿರಸನ ಸಾಧಿಸಿದ ಪರಿಪೂರ್ಣ ಸಾಧಕರು. ಧರ್ಮಭೀರು ಆಗಿಯೂ ಸಂಪ್ರದಾಯ ಶರಣರಾಗಲಿಲ್ಲ. ತಾವು ನಂಬಿದ ಧರ್ಮವನ್ನು, ಮಾನವ ಪ್ರೀತಿಗಾಗಿ ಬಳಸಿಕೊಂಡ, ಮಾನವತಾವಾದಿ ಬಹುಕಷ್ಟದಿಂದ ಜೀವನವನ್ನು ಮುದಗೊಳಿಸಿಕೊಂಡವರು, ಬಸವಾರಾಧ್ಯ.

ಸದಾ ಹಸನ್ಮುಖದ, ಕೋಮಲಸ್ವಭಾವದ ಈ ತೆಳ್ಳಗಿನ ವ್ಯಕ್ತಿ, ಪ್ರಸಂಗಬಂದಾಗ ವಜ್ರಾದಪಿ ಕಠೋರವಾದುದೂ ಉಂಟು. ಈ ಕಠೋರತೆ ಎದುರಾಳಿಯ ಮೇಲಿಲ್ಲ ಅಂದರೆ ವ್ಯಕ್ತಿಯ ಮೇಲಲ್ಲ-ಆತನ ಅಪ್ರಬುದ್ಧ ಹೇಳಿಕೆ, ಅಭಿಪ್ರಾಯದ ಮೇಲೆ. ಆ ಕ್ಷಣ ಮುಗಿದ ನಂತರ ಅದೇ ಕೋಮಲತೆ. ಮತ್ತೆ ಅದೇ ಹಸನ್ಮುಖ. ನೋಡಿದವರಿಗೆ ಇದೇ ವ್ಯಕ್ತಿಯೇ ಕೆಲಕ್ಷಣದ ಹಿಂದೆ ಅಷ್ಟೊಂದು ಆರ್ಭಟ ಮಾಡಿದಾತ ಎನ್ನುವಂಥ ಅಚ್ಚರಿ. ಇದು ನನ್ನ ಸನ್ಮಿತ್ರ ಬಸವಾರಾಧ್ಯರ ಸ್ವಭಾವ. ಈ ಸ್ವಭಾವದಿಂದ ಅವರು ಕೆಲವರನ್ನು ಮಿತ್ರರೆಂದು ತಪ್ಪಾಗಿ ಭಾವಿಸಿ, ಆ ಮೇಲೆ ಅವರಿಂದ ದೂರಾಗಲು ಪ್ರಯತ್ನಿಸಿದ್ದುಂಟು. ಅಂಥವರಿಂದ ಕಷ್ಟಕ್ಕೆ ಗುರಿಯಾದರೂ, ಅದೆಲ್ಲ ತಾವೊಬ್ಬರೇ ಸಹಿಸಿದರೇ ಹೊರತು, ಅದಕ್ಕೆ ಯಾರೊಬ್ಬರನ್ನು ಹೊಣೆಗಾರರನ್ನಾಗಿ ಮಾಡಲಿಲ್ಲವೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಇಂಥ ಚಾಡಿಕೊರರ, ಸ್ವಾರ್ಥಿಗಳ ಮಾತುಗಳಿಂದ ಒಳ್ಳೆಯ ಗೆಳೆಯರನ್ನು ಕಳೆದುಕೊಂಡು, ಅದಕ್ಕೆ ಪಶ್ಚಾತ್ತಾಪ ಪಟ್ಟದ್ದನ್ನೂ ನಾನು ಕಂಡಿದ್ದೇನೆ. ಇದು ಬಸವಾರಾಧ್ಯರ ಪಾರದರ್ಶಕ ವ್ಯಕ್ತಿತ್ವಕ್ಕೆ ನಿದರ್ಶನವೆಂದೇ ನಾನು ಭಾವಿಸಿರುವೆ.

ಬಸವಾರಾಧ್ಯರಲ್ಲಿ ಒಳಗೊಂದು, ಹೊರಗೊಂದು ಇಲ್ಲ. ಎಲ್ಲವೂ ತೆರೆದ ಪುಸ್ತಕ. ಡಾಂಭಿಕತೆ, ಒಣಪ್ರತಿಷ್ಠೆ, ಅನಾವಶ್ಯಕ ಗಾಂಭೀರ್ಯ ಅವರ ಹತ್ತಿರ ಕೂಡ ಸುಳಿದುದನ್ನು, ನನ್ನ ನಾಲ್ಕು ದಶಕದ ಸ್ನೇಹದಲ್ಲಿ ಕಂಡಿಲ್ಲ.

ಬಸವಾರಾಧ್ಯರಲ್ಲಿರುವ ಇನ್ನೊಂದು ದೊಡ್ಡ ಗುಣ ನಿರಂತರ ಅಧ್ಯಯನ. ಅವರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಸಂಶೋಧಕರಾಗಿ ಅವರು ಮಾಡಿದ ಕಾರ್ಯಗಳು ಅಮೋಘವಾದವುಗಳು. ಅವರು ದುಡಿಮೆಯಲ್ಲಿಟ್ಟ ಶ್ರದ್ಧೆಯೇ ಅವರತ್ತ ನನ್ನನ್ನು ಸೆಳೆಯಿತು. ಈ ವಿಷಯದಲ್ಲಿ ನಾವಿಬ್ಬರೂ ಸರಿಸಮಾನರು.

ಅಂಥವರಿಗೀಗ ಎಪ್ಪತ್ತೆಂಟು ವರ್ಷ. ಈಗಲೂ ಅವರು ತಮ್ಮ ಶುಚಿತ್ವ, ಸದಾಚಾರದಿಂದ ಆರೋಗ್ಯಭಾಗ್ಯವನ್ನು ಕಾಪಾಡಿಕೊಂಡಿದ್ದಾರೆ. ಅವರು ನೂರುವರ್ಷ ಕಾಲ ಹೀಗೆಯೇ ಕ್ರಿಯಾಶೀಲ ಬದುಕನ್ನು ಸಾಗಿಸಲಿ. ನನ್ನ ಇನ್ನೋರ್ವ ವಿದ್ವಾಂಸ ಮಿತ್ರರಾದ ಡಾ. ಎಸ್. ವಿದ್ಯಾಶಂಕರ ಅವರು ಈ ಅಭಿನಂದನ ಗ್ರಂಥದ ಸಂಪಾದಕರಾಗಿದ್ದಾರೆನ್ನುವುದು ನನಗಿನ್ನು ಹೆಮ್ಮೆ. ಈ ಗ್ರಂಥ ಸಂಗ್ರಾಹ್ಯ ಹಾಗೂ ಸುಂದರವಾಗಿ ಬರುವಲ್ಲಿ ನನಗೆ ಸಂಶಯವೇ ಇಲ್ಲ.

ನಾನು ನಿತ್ಯಯಾತ್ರಿಕ, ಸದಾಬರವಣಿಗೆಯ ಕಾರ್ಯದಲ್ಲಿರುವವನು ಎಂಬುದನ್ನು ಬಲ್ಲವರು ಡಾ. ವಿದ್ಯಾಶಂಕರ. ಆದರೂ ಪ್ರೊ. ಬಸವಾರಾಧ್ಯರ ಬಗ್ಗೆ ದೀರ್ಘವಾಗಿ ಆಗದಿದ್ದರೂ, ಈ ಸಮಯದ ಅಭಾವದಲ್ಲಿ ಚಿಕ್ಕದಾದರೂ ಲೇಖನ ಕಳಿಸಿಯೇ ಕಳಿಸುತ್ತೇನೆ ಎನ್ನುವ ಅವರ ಆಸೆಯನ್ನು, ಈ ಲೇಖನದಿಂದ ನಾನು ಪೂರೈಸಿದ್ದೇನೆ -ಎನ್ನುವ ತೃಪ್ತಿ ನನಗೆ ಇದೆ. ಏಕೆಂದರೆ ನಾನು ಡಾ. ವಿದ್ಯಾಶಂಕರರೇ ಬರೆದಿರುವಂತೆ "....ಪ್ರೊ. ಎನ್. ಬಸವಾರಾಧ್ಯರ ಆಪ್ತವರ್ಗದಲ್ಲಿ ಸೇರಿದವರು" ಎಂಬ ಮಾತನ್ನು ಒಪ್ಪಿಕೊಳ್ಳುತ್ತ, ಸೋದರ ಪ್ರೊ. ಎನ್. ಬಸವಾರಾಧ್ಯ ಅವರಿಗೆ ಇನ್ನೊಮ್ಮೆ ಸಕಲ ಸನ್ಮಂಗಲ ಬಯಸುತ್ತೇನೆ.

ನಾ ಕಂಡ ಸೌಜನ್ಯಶೀಲ ಸರಳ ವ್ಯಕ್ತಿತ್ವದ ಪಾಂಡಿತ್ಯ ಮೇರು ಶ್ರೀ ಎನ್. ಬಸವಾರಾಧ್ಯರು

-ಡಾ. ಬಸವರಾಜ ನೆಲ್ಲಿಸರ

ಕಿರಿಯರ ಬೆಳವಣಿಗೆಯನ್ನು ಕುತೂಹಲದಿಂದ ನೋಡುತ್ತಾ ಮೆಚ್ಚುಗೆ ಹಾಗೂ ಪ್ರೋತ್ಸಾಹವನ್ನು ನೀಡುತ್ತಾ ಮಾರ್ಗದರ್ಶಕರಾಗಿ ಕೈಹಿಡಿದು ಬೆಳೆಸಬಲ್ಲ ಶಕ್ತಿ ಕೆಲವು ಮಹಾತ್ಮರಿಗೆ ಮಾತ್ರ ಸಾಧ್ಯ. ಅಂತಹವರಲ್ಲಿ ಪ್ರೊ. ಎನ್. ಬಸವಾರಾಧ್ಯರೂ ಒಬ್ಬರು. ತಮ್ಮ ಹಿರಿತನದ ವ್ಯಕ್ತಿತ್ವದಿಂದ ನೂರಾರು ಜನ ನನ್ನಂಥ ಶಿಷ್ಯರನ್ನು ಪ್ರಭಾವಿತರನ್ನಾಗಿ ಮಾಡಿದ್ದಾರೆ. ಯಾವ ಅಂಜಿಕೆಗೂ ಒಳಗಾಗದೆ, ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಸ್ನೇಹಿತರೊಡನೆ, ಸಂಭಾವಿತರೊಡನೆ ಆತ್ಮೀಯವಾಗಿ ಮಾತನಾಡುತ್ತಾ ಸಿಗರೇಟು ಸೇದುತ್ತಾ ಪ್ರೀತಿಯ ಮುಗುಳ್ನಗುವಿನೊಡನೆ ಬೀಳ್ಕೊಡುವುದು ಅವರ ದಿನಚರಿ. ನಾನು ೧೯೭೪ ರಿಂದ ೧೯೮೦ ರವರೆಗೆ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ವಿದ್ಯಾರ್ಥಿಯಾಗಿ, ಸಂಶೋಧಕನಾಗಿ, ಅಲ್ಲಿನ ಎಲ್ಲ ವಿದ್ವಾಂಸರ ಒಳ್ಳೆತನಗಳನ್ನು ಮತ್ತು ಸಣ್ಣತನಗಳನ್ನು ಬಲ್ಲವನಾಗಿದ್ದಂತಹವನು. ಪ್ರತಿನಿತ್ಯ ಮಧ್ಯಾಹ್ನ ಊಟದ ವೇಳೆಯಲ್ಲಿ ಪ್ರೊ. ಬಸವಾರಾಧ್ಯರ ಕೊಠಡಿಗೆ ಹೋದಾಗಲೆಲ್ಲಾ ನನಗೆ ಬಾಳೆಹಣ್ಣು, ತಿಂಡಿ ನಂತರ ಹಾಸ್ಯ ಚಟಾಕಿ ನಡೆಯುತ್ತಿತ್ತು. ಅದರಲ್ಲೇ ಗಂಭೀರ ಚರ್ಚೆಗಳೂ ನಡೆಯುತ್ತಿದ್ದವು. ಅಲ್ಲಿ ಅವರ ಜೊತೆಗೆ ಹಿರಿಕಿರಿಯರ ದೊಡ್ಡ ಗುಂಪು ಸೇರಿರುತ್ತಿತ್ತು. ಹಳಗನ್ನಡ ಸಾಹಿತ್ಯದ ಬಗ್ಗೆ ಶಾಸ್ತ್ರಸಾಹಿತ್ಯದ ಬಗ್ಗೆ ಗ್ರಂಥಸಂಪಾದನೆಯ ಬಗ್ಗೆ ಅತ್ಯಂತ ಅಧಿಕಾರವಾಣಿಯಿಂದ ಮಾತಾಡಬಲ್ಲಂಥ ವಿದ್ವತ್ತನ್ನು ಅವರು ಗಳಿಸಿಕೊಂಡಿದ್ದರು. ನಮ್ಮ ಪರಂಪರೆ ಮತ್ತು ಸಂಪ್ರದಾಯದ ಬಗ್ಗೆ ಅತ್ಯಂತ ಹೆಮ್ಮೆಯಿಂದ ಮಾತಾಡುತ್ತಿದ್ದರು. ವಿಜ್ಞಾನ ಎಷ್ಟು ಬೆಳೆದರೂ ವಿಮಾನದಲ್ಲಿ ಅನ್ನ ಬೆಳೆಯಲಿಕ್ಕಾಗುವುದಿಲ್ಲ. ಜಗತ್ತಿಗೇ ಅನ್ನ ಕೊಡುವ ರೈತ ದೊಡ್ಡ ಮನುಷ್ಯನಾಗಬೇಕು. "ಕಸವ ಹೊಡೆದ ಕೈ ಕಸ್ತೂರಿ

ನಾತಾವ, ಬಸವಣ್ಣ ನಿನ್ನ ಸೆಗಣೀಯ ಬಳಿದ ಕೈ ಎಸಳ ಯಾಲಕ್ಕಿ ಗೊನಿನಾಥ" ಎನ್ನುತ್ತದೆ ಜಾನಪದ. ಆದರೆ ಎಷ್ಟು ಜನ ರೈತರ ಮಕ್ಕಳಿಗೆ ಇದರ ಅನುಭವ ಇದೆ? ನಾವು ನಮಗೇ ಗೊತ್ತಿಲ್ಲದಂತೆ ಪಾಶ್ಚಾತ್ಯರ ಪರಕೀಯರ ದಾಸ್ಯಕ್ಕೆ ಒಳಗಾಗುತ್ತಿದ್ದೇವಲ್ಲವೇ? ನಮ್ಮ ಹಿರಿಯರ ಆಚರಣೆ ಸಂಪ್ರದಾಯಗಳೆಲ್ಲಾ ಮೌಢ್ಯವಾಗಿ ಕಾಣಿಸುತ್ತಾ ಅಂಧಾನುಕರಣೆಗೆ ಒಳಗಾಗುತ್ತಿದ್ದೇವಲ್ಲವೇ? ಹಿರಿಯರಾದ ನಾವು, ಕಿರಿಯರನ್ನು ವೈಚಾರಿಕವಾಗಿ ಬೆಳೆಸುತ್ತಾ ನಿಜದ ನಿಲುವನ್ನು ತಿಳಿಸಬೇಕಾದದ್ದು ನಮ್ಮ ಕರ್ತವ್ಯವಲ್ಲವೇ? ಎಷ್ಟು ಜನ ವಿದ್ವಾಂಸರು ವಿದ್ಯಾರ್ಥಿಗಳನ್ನು ಹತ್ತಿರಕ್ಕೆ ಬಿಟ್ಟುಕೊಂಡು ಅವರಲ್ಲಿ ಇಂಥ ಪ್ರೀತಿಯ ಬೀಜಗಳನ್ನು ಬಿತ್ತುತ್ತಿದ್ದಾರೆ ಹೇಳಿ ಎಂದು, ತುಂಬಾ ಆರೋಗ್ಯಪೂರ್ಣವಾದ ಚರ್ಚೆಯನ್ನು ಮಾಡಿದ್ದುದು ನನಗಿಂದೂ ನೆನಪಿದೆ. ನಾನು ನನ್ನ ದಿನಚರಿಯಲ್ಲಿ ಅವರ ಮಾತುಗಳನ್ನೇ ದಾಖಲಿಸಿಕೊಂಡಿರುವೆ. ಸಾಹಿತ್ಯದಲ್ಲೇ ಆಗಲಿ ಜೀವನದಲ್ಲೇ ಆಗಲಿ ಸಂಕುಚಿತ ವಿಚಾರಗಳಿಗೆ ಸಣ್ಣತನಗಳಿಗೆ ಆಸ್ಪದ ನೀಡುತ್ತಿರಲಿಲ್ಲ.

ಅವರ ಉಡಿಗೆ-ತೊಡಿಗೆ ಸರಳ, ಮಾತು ಮಾತ್ರ ನೇರ ಮತ್ತು ಸ್ಪಷ್ಟ. ವ್ಯಾಕರಣ ಮತ್ತು ಛಂದಸ್ಸುಗಳನ್ನು ಕುರಿತು ಹೇಳುವಾಗಲೂ ಪೂರ್ವಾಗ್ರಹವಿಲ್ಲದ ಸಮಚಿತ್ತ ವಿಚಾರ ಮಂಡನೆಯಿರುತ್ತಿತ್ತು. ನಾನು ಜೀಶಂಪ ಅವರ ಶಿಷ್ಯನಾಗಿ ಗುರುತಿಸಿಕೊಂಡಿದ್ದರೂ ಪ್ರೊ. ಬಸವಾರಾಧ್ಯರು ಎಂದೂ ನನ್ನಲ್ಲಿ ಭಿನ್ನತೆಯನ್ನು ತೋರುತ್ತಿರಲಿಲ್ಲ. ನೀನು ಮಾಡುವ ಕೆಲಸ ಪರಿಶುದ್ಧವಾಗಿರಬೇಕು. ನಿನ್ನ ಓದು, ಸಂಶೋಧನೆಯ ಕಡೆಗೆ ಲಕ್ಷ್ಯವಿರಬೇಕೆಂದು ಎಚ್ಚರಿಸುತ್ತಾ ಈ ಹುಡುಗನಿಗೆ ದಾರಿ ತೋರಿದರೆ ನಿಶ್ಚಯವಾಗಿ ವಿಶ್ವವಿದ್ಯಾನಿಲಯದಲ್ಲಿ ದೊಡ್ಡ ವಿದ್ವಾಂಸನಾಗಿ ಬೆಳೆಯಬಲ್ಲನೆಂಬ ಮಾತನ್ನು ಎಷ್ಟೋ ಜನರ ಮುಂದೆ ಆಡಿದ್ದುಂಟು. ಒಮ್ಮೆ ಏನಾಯಿತೆಂದರೆ, (೧೯೭೮ ಜನವರಿ ೧೧ನೇ ತಾರೀಖು) ನನಗೆ ಇಲ್ಲಿ ಕೆಲಸ ಸಿಗದಿದ್ದರೆ ಜಾನಪದ ಎಂ.ಎ. ಮಾಡಿ ಏನು ಪ್ರಯೋಜನ? ಹೊರಗಡೆ ಕಾಲೇಜಿನಲ್ಲಿ ಕನ್ನಡ ಎಂ.ಎ. ಮಾಡಿರುವವರಿಗೇ ಕೆಲಸವಿಲ್ಲದೆ ಲಾಟರಿ ಹೊಡೆಯುತ್ತಿರುವಾಗ ನೀನೇನು ಮಾಡುವೆ? ಎಂದು ಕೆಲವು ಸ್ನೇಹಿತರು ಚುಚ್ಚು ಮಾತಾಡಿದರು. ಅಂದು ನನಗೆ ತುಂಬಾ ಬೇಸರವಾಯ್ತು. ಆಗ ಸಂಜೆಯಾಗಿತ್ತು. ಅಲ್ಲಿಂದ ನೇರವಾಗಿ ಪ್ರೊ. ಬಸವಾರಾಧ್ಯರ ರೂಮಿಗೆ ಹೋಗಿ ಕುಳಿತು ನನ್ನ ಕಷ್ಟವನ್ನೆಲ್ಲಾ ತೋಡಿಕೊಂಡೆ. ಅದನ್ನೆಲ್ಲಾ ಸಾವಕಾಶವಾಗಿ ಕೇಳಿಸಿಕೊಂಡು, ಆಯ್ತು ನಾಳೆ ಬೆಳಿಗ್ಗೆ ಬೆಂಗಳೂರಿಗೆ ಹೋಗೋಣ. ಪ್ರೊ. ಜಿ.ಎಸ್.ಎಸ್. ಅವರನ್ನು ಭೇಟಿ ಮಾಡೋಣ. ಅವರ ಸಲಹೆ ಪ್ರಕಾರ ಏನಾದರೊಂದು ಕಾರ್ಯ ಮಾಡುವಿಯಂತೆ ಎಂದರು. ದಿಢೀರನೆ ಅವರ ಕೆಲಸ ಕಾರ್ಯಗಳನ್ನೆಲ್ಲಾ ಬದಿಗೊತ್ತಿ ಮಾರನೇ ದಿನವೇ ಜಿ.ಎಸ್.ಎಸ್. ಅವರನ್ನು ಮನೆಯಲ್ಲಿ ಭೇಟಿ ಮಾಡಿಸಿ ನನ್ನ ಉತ್ಸಾಹಶೀಲತೆ, ಪ್ರತಿಭೆ, ಕೌಶಲ್ಯದ ಬಗೆಗೆ ತುಂಬಾ ಚೆನ್ನಾಗಿ ಜಿ.ಎಸ್.ಎಸ್. ಅವರಿಗೆ ಹೇಳಿ, ಮನವರಿಕೆ ಮಾಡಿಕೊಟ್ಟು, ಅವರಲ್ಲಿ ನನ್ನ ಮೇಲೆ ಪ್ರೀತಿ ಹುಟ್ಟುವಂತೆ ಮಾಡಿದ ದೊಡ್ಡ ವ್ಯಕ್ತಿ ಪ್ರೊ ಎನ್. ಬಸವಾರಾಧ್ಯರು. ನನ್ನಂತಹ ಸಣ್ಣವನಲ್ಲಿ ಅವರೇನು ಕಂಡುಕೊಂಡಿದ್ದರೋ ನನಗಂತೂ ಗೊತ್ತಿಲ್ಲ. ನನ್ನಂತಹ ಅನೇಕ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಸೃಷ್ಟಿಗೆ ಯೋಗ್ಯವಾದ ಗರಡಿಯನ್ನು ನಿರ್ಮಿಸಿದ್ದಾರೆ. ನಿರ್ಮಾತ್ಸರ್ಯದ ಸ್ನೇಹದ ಅವರ ನಗುವಿನ ಮಾತು ಶತ್ರುಗಳನ್ನು ಮಿತ್ರರನ್ನಾಗಿ ಮಾಡಿದೆ. ಅವರ ನಿಷ್ಕಪಟ ಮುಗ್ಧ ಮಾಧುರ್ಯಕ್ಕೆ ಅಂದು ಮಾರುಹೋದವನು ಇಂದಿಗೂ ಅವರ ಶಿಷ್ಯನಾಗಿಯೇ ಇದ್ದೇನೆ. ನಾನು ಎಲ್ಲೇ ಸಿಗಲಿ ಏನ್ರೀ ಹೇಗಿದ್ದೀರಿ? ಏನು ಬರಿತಾ ಇದ್ದೀರಿ? ಪ್ರೊಫೆಸರ್, ಆಗಿದ್ದಕ್ಕೆ ನಾನೇ ಭರ್ಜರಿ ಊಟ ಕೊಡಿಸ್ತೀನಿ ಬರ್‍ರೀ! ಆಮೇಲೆ ಸಿಗಬೇಕು ಎನ್ನುತ್ತಾ ಪ್ರೀತಿಯ ಹೂಮಳೆಯನ್ನೇ ನನ್ನ ಮೇಲೆ ಇಂದಿಗೂ ಎರೆಯುತ್ತಾರೆ.

ಸಚ್ಚಾರಿತ್ರ್ಯವಿದ್ದಲ್ಲಿ ಸಣ್ಣತನವಿರುವುದಿಲ್ಲ ಎಂಬುದಕ್ಕೆ ಶ್ರೀಯುತರೇ ಸಾಕ್ಷಿ. ೧೯೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಗ ಒಮ್ಮೆ ಅವರ ಬಳಿಗೆ ಹೋದೆ. ಏನ್ರೀ ಎಲ್ಲಿಂದ ಬಂದ್ರಿ? ಎಂದು ಅವರದೇ ಆದ ಶೈಲಿಯಲ್ಲಿ ವಿಚಾರಿಸಿದರು. ಇದೀಗ ಮದ್ರಾಸ್‌ನಿಂದ ಬಂದೆ. ಒಂದು 'National Seminar'ನಲ್ಲಿ ಭಾಗವಹಿಸಲು ಹೋಗಿದ್ದೆ ಎಂದೆ.

ಅದಕ್ಕವರು ತಕ್ಷಣ, ನೆಲ್ಲಿಸರ, ನಿನ್ನ ಯೋಗ್ಯತೆ ಮತ್ತು ಅರ್ಹತೆಗಳೇ ನಿನ್ನನ್ನು ಇಲ್ಲಿಯವರೆಗೆ ತಂದಿವೆ. ನಿನ್ನ ಸಾಮರ್ಥ್ಯದ ಬಗ್ಗೆ, ಮಾಡುವ ಕೆಲಸದ ಬಗ್ಗೆ ನಿಷ್ಠೆ ಇರಲಿ ಎಂದರು. ಜನ ಮೆಚ್ಚುವಂತೆ ನಡೆದುಕೊಳ್ಳುವುದಲ್ಲ, ನಿನ್ನ ಮನ ಮೆಚ್ಚುವಂತೆ ನಡೆದುಕೊಳ್ಳಬೇಕೆಂದರು. ಹೀಗೆ ತುಂಬಾ ಆತ್ಮೀಯವಾಗಿ ಮಾತನಾಡುತ್ತ ನಮ್ಮಲ್ಲಿ ಧೈರ್ಯವನ್ನು ಆತ್ಮಸ್ಥೈರ್ಯವನ್ನು ತುಂಬಿದುದನ್ನು ನಾವೆಂದೂ ಮರೆಯುವುದಿಲ್ಲ. ಅವರಿಗೆ ಎಷ್ಟೋ ಕಷ್ಟನಷ್ಟಗಳು ಸಂಭವಿಸಿವೆ. ಅದಕ್ಕೆಂದೂ ಅಂಜಲಿಲ್ಲ, ನಮ್ಮ ಜೀವನದ ರೀತಿಯನ್ನು ನಾವು ಸುಧಾರಿಸಿಕೊಳ್ಳಬೇಕಲ್ಲದೆ ಬೇರೆಯವರು ಏನು ಮಾಡ್ಯಾರು? ಮನುಷ್ಯ ಸೌಜನ್ಯ ಮತ್ತು ಸದ್ಗುಣಗಳನ್ನು ಕಳೆದುಕೊಂಡರೆ ಇನ್ನೇನು ಗಳಿಸ್ಯಾನು ಎನ್ನುವುದು ಅವರ ಜೀವನಾದರ್ಶವಾಗಿತ್ತು.

ಅವರು ಭಾಷಣ ಮಾಡಿದ್ದು, ಸ್ನೇಹಿತರೊಡನೆ ಚರ್ಚೆ ನಡೆಸಿ ಇತರರನ್ನು ಬೆಳೆಸಿದ್ದು ಬಹಳ. ಬರವಣಿಗೆಯಲ್ಲಿಳಿಸಿದ್ದು ಕಡಿಮೆ, ಕೃತಿ ವಿಮರ್ಶೆ, ಪ್ರಬಂಧಗಳು, ವ್ಯಕ್ತಿ ಚಿತ್ರಗಳು, ನಿಘಂಟು ರಚನೆ, ಭಾಷಾ ಬೋಧನೆ ಇತ್ಯಾದಿ ಕ್ಷೇತ್ರಗಳಲ್ಲಿ ತಮ್ಮ ಹೆಜ್ಜೆ ಗುರುಗಳನ್ನು ಮೂಡಿಸಿ, ತಮ್ಮ ಸಮರ್ಥ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಈ ಕೃತಿಗಳಲ್ಲಿ ವಿಸ್ತೃತ ಲೋಕಾನುಭವ, ನಿರಂತರ ಅಧ್ಯಯನಶೀಲತೆ, ಬದುಕಿನ ನೈತಿಕ ಮೌಲ್ಯಗಳು, ಅನುಭಾವಿಕ ಸಾಮಾಜಿಕ ಸಂಗತಿಗಳು, ಸೃಜನಶೀಲತೆಗಳು ವಿಶಿಷ್ಟವಾಗಿ ಮೂಡಿಬಂದಿವೆ. ಅವರಿಗೆ ಕನ್ನಡದ ಮೇಲಿನ ಅಭಿಮಾನ ಅಸದೃಶವಾದುದು. ವ್ಯಕ್ತಿಚಿತ್ರಗಳು ಮತ್ತು ವಿಚಾರ ಸಾಹಿತ್ಯದಲ್ಲಿ ಹಾಸ್ಯ, ವ್ಯಂಗ್ಯ, ಕಟಕಿ, ಕ್ರೋಧ, ಬಂಡಾಯ -ಮುಂತಾದ ದರ್ಶನಗಳನ್ನು ಕಾಣಬಹುದಾಗಿದೆ. ತೋಚಿದ್ದನ್ನು ಗೀಚುವ ಜಾಯಮಾನದವರಲ್ಲ. ತಮ್ಮ ಬರವಣಿಗೆಯಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗಬಾರದೆಂಬುದು, ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರಬಾರದೆಂಬುದು ಅವರ ಧ್ಯೇಯವಾಗಿತ್ತು. ಬಿ.ಎಂ.ಶ್ರೀ., ತೀ.ನಂ.ಶ್ರೀ., ಅಂಥ ಮಹಾನ್ ವ್ಯಕ್ತಿಗಳಿಗೆ ಮಾರುಹೋಗಿದ್ದರಿಂದ ಉದಾತ್ತ ವಿಚಾರಗಳಿಂದ ಪ್ರೇರಿತರಾದ ನಿರ್ಮಲ ಮನಸ್ಸಿನ ಸ್ನೇಹಿತರು ದೊರಕಿದ್ದಾರೆಂದು ಯಾವಾಗಲೂ ಹೇಳುತ್ತಿರುತ್ತಾರೆ. ಜಾತಿಮತ ಪಂಥಗಳಿಂದ ದೂರವಿದ್ದು, ಆದರ್ಶ ಜೀವನ ನಡೆಸುತ್ತಿರುವ ಈ ವ್ಯಕ್ತಿ ಶತಾಯುಷಿಯಾಗಿ ಆರೋಗ್ಯವಂತ ತುಂಬುಜೀವನ ನಡೆಸಲೆಂದು ಭಗವಂತನಲ್ಲಿ ಪ್ರಾರ್ಥಿಸುವೆ.

ಡಿ.ಎಲ್.ಎನ್. ಅವರ ಪತ್ರಗಳಲ್ಲೂ ಸಂಶೋಧನೆ

-ಡಾ. ಎಚ್.ಎಸ್. ಗೋಪಾಲರಾವ್

ರಾಮಾಯಣ ಕಾಲದ ಪ್ರತಿಮಾ ಗೃಹದಂತೆ ನನ್ನ ಬಳಿ ಪ್ರತಿಮಾ ಕೋಶ ಇದೆ; ಬೇಕೆನಿಸಿದಾಗೆಲ್ಲಾ ಅದನ್ನು ಮುಂದಿಟ್ಟುಕೊಂಡು, ಓದುತ್ತಾ ಖುಷಿಪಡುತ್ತೇನೆ; ಮಾತ್ರವಲ್ಲ ಹುರುಪು ಪಡೆಯುತ್ತೇನೆ. ನನ್ನ ಬಂಧು ನೆಲಮಂಗಲ ಲಕ್ಷ್ಮೀನಾರಾಯಣ ರಾಯರ ಎರಡು ವೈಯಕ್ತಿಕ ಕಡತ (ಫೈಲ್)ಗಳು ನನ್ನ ಬಳಿ ಇವೆ. ಅವುಗಳಲ್ಲಿ ಅವರಿಗೆ ಬಂದಿದ್ದ ವೈಯಕ್ತಿಕ ಪತ್ರಗಳು ಮತ್ತು ಅ ಪತ್ರಗಳಿಗೆ ಅವರ ಉತ್ತರದ ಕರಡುಗಳು ಅಥವಾ ಟಿಪ್ಪಣಿಗಳು ಇವೆ.

ನಮ್ಮ ಹಿಂದಿನ ಪೀಳಿಗೆಯ ಡಿ.ಎಲ್.ಎನ್., ತೀ.ನಂ.ಶ್ರೀ., ಎ.ಎಸ್. ಅಲ್ತೇಕರ್, ಎಸ್.ಎ. ನೀಲಕಂಠ ಶಾಸ್ತ್ರಿ ಮತ್ತು ಇನ್ನೂ ಕೆಲವು ವಿದ್ವಾಂಸರ ಪತ್ರಗಳು ಆ ಪ್ರತಿಮಾ ಕೋಶದಲ್ಲಿವೆ. ನನಗೆ ತಿಳಿದಿರುವಂತೆ ಎನ್.ಎಲ್. ರಾಯರು ಯಾವುದೇ ವಿಷಯದ ಬಗ್ಗೆ ಬರೆದರು ಎಂದರೆ, ಆ ವಿಷಯದಲ್ಲಿ ಮತ್ತೆ ಯಾವ ಅನುಮಾನಗಳೂ ಇರಲಿಲ್ಲ ಎಂದೇ ಅರ್ಥ. ನೀವು ಹೆಚ್ಚಿಗೆ ಬರೆಯಲಿಲ್ಲ ಏಕೆ? ಎಂದು ನಾನು ಅವರನ್ನು ಒಮ್ಮೆ ಪ್ರಶ್ನಿಸಿದ್ದೆ. ಅದಕ್ಕವರು 'ನನಗೆ ಪರ್ಫೆಕ್ಟ್ ಎನಿಸುವವರೆಗೆ ನಾನು ಏನನ್ನೂ ಬರೆಯುವುದಿಲ್ಲ. ನನಗೆ ಖಚಿತ ಎನಿಸಿದ ವಿಷಯಗಳ ಬಗ್ಗೆ ಮಾತ್ರ ಬರೆದಿದ್ದೇನೆ' ಎಂದಿದ್ದರು. ಅವರ ಆ ಮಾತಿನಿಂದ ನನ್ನ ಅರಿವಿಗೆ ಬಂದಿದ್ದ ಮತ್ತೊಂದು ವಿಷಯ ಎಂದರೆ, ಆ ಕಾಲದ ಬಹುತೇಕ ವಿದ್ವಾಂಸರು ತಮಗೆ ಸ್ಪಷ್ಟವಾಗದ, ಖಚಿತ ಎನಿಸದ ವಿಷಯಗಳನ್ನು ಬರೆಯುವ ಸಾಹಸ ಮಾಡುತ್ತಿರಲಿಲ್ಲ. ಅದೇ ಕಾರಣಕ್ಕೆ ಅವರ ಬರವಣಿಗೆಯ ಪ್ರಮಾಣ ಕಡಿಮೆ. ಅವರ ವಿದ್ವತ್ತನ್ನು ಅವರ ಪುಸ್ತಕಗಳ ಅಥವಾ ಲೇಖನಗಳ ಸಂಖ್ಯೆಯಿಂದ ಅಳೆಯಲಾಗುವುದಿಲ್ಲ. ಆ ಲೇಖನಗಳ ಗುಣವನ್ನು ಅಳೆಯಲೂ ಸಹ ಖುದ್ದು ವಿದ್ವಾಂಸನಾಗಿರಬೇಕು. ಇಲ್ಲವಾದರೆ, ಆ ವಿದ್ವಾಂಸರೆಲ್ಲರನ್ನೂ ದೂರದಿಂದ ನೋಡಿ ಮಾತ್ರ ಬಹಳ ಭಯ, ಭಕ್ತಿಭಾವದಿಂದ ಸಂತೋಷ ಪಡೆಯಬೇಕು.

ನನ್ನ ಆತ್ಮೀಯರಲ್ಲಿ ಒಬ್ಬರಾದ ಪ್ರೊ॥ ಎನ್. ಬಸವಾರಾಧ್ಯರ ಅಭಿನಂದನ ಗ್ರಂಥಕ್ಕೆ ಲೇಖನವೊಂದನ್ನು ಕೋರಿ ಆಹ್ವಾನ ಬಂದಾಗ, ನನಗೆ ತಕ್ಷಣ ನೆನಪಾದದ್ದು ಅವರ ಗುರುವೃಂದ. ಅಲ್ಲಿ ಡಿ.ಎಲ್.ಎನ್. ಅವರೂ ಇದ್ದಾರೆ. ಅವರನ್ನು ನೆನಪು ಮಾಡಿಕೊಳ್ಳುವ ನೆಪದಿಂದ, ನನ್ನ ಪ್ರತಿಮಾ ಕೋಶದಿಂದ ಡಿ.ಎಲ್.ಎನ್. ಅವರ ಪತ್ರಗಳನ್ನು ತೆಗೆದು, ಆ ಕಾಲದ ವಿದ್ವಾಂಸರು ಸಂಶೋಧನೆಯಲ್ಲಿ ಇರಿಸಿಕೊಂಡಿದ್ದ ಆಸಕ್ತಿಯನ್ನು ಈಗಿನ ಪೀಳಿಗೆಗೆ ತಿಳಿಸುವ ಸಲುವಾಗಿ ಈ ಲೇಖನ.

ಡಿ.ಎಲ್.ಎನ್. ಮತ್ತು ಎನ್.ಎಲ್. ರಾಯರು ಸಂಯುಕ್ತವಾಗಿ ಜಯಸಿಂಹನ ತಳಂಗೆರೆಯ ಶಾಸನದ ಬಗ್ಗೆ ಬರೆದಿರುವುದು ತಿಳಿದಿರುವ ವಿಚಾರ. ಆ ಇಬ್ಬರ ಪರಸ್ಪರ ವಿಶ್ವಾಸ ಎಷ್ಟರಮಟ್ಟಿನದು ಎಂದು ತಿಳಿಯುವ ಕುತೂಹಲ ನನಗಿತ್ತು. ಆದ್ದರಿಂದ ಎನ್.ಎಲ್. ರಾಯರ ದಿನಚರಿ ಏನಾದರೂ ಸಿಕ್ಕಿದರೆ, ಅವರು ಮತ್ತು ಅವರ ಸಹವರ್ತಿಗಳ ಸಂಬಂಧಗಳ ಬಗ್ಗೆ ಏನಾದರೂ ಸಿಗಬಹುದು ಎಂದು ಭಾವಿಸಿದ್ದೆ. ಅವರ ಕ್ಷೇತ್ರಕಾರ್ಯದ ದಿನಚರಿಗಳು ಮಾತ್ರ ಸಿಕ್ಕಿವೆ. ಸ್ವಂತ ವಿಷಯಗಳನ್ನು ತಿಳಿಸುವ ಯಾವುದೇ ದಿನಚರಿ ಸಿಕ್ಕಿಲ್ಲ. ಅವರ ಕ್ಷೇತ್ರಕಾರ್ಯದ ದಿನಚರಿಗಳ ಬಗ್ಗೆ ಮುಂದೆ ಎಂದಾದರೊಂದು ದಿನ ತಿಳಿಸುವ ಅವಕಾಶ ದೊರೆಯಬಹುದು. ಸದ್ಯಕ್ಕೆ ಅವರ ವೈಯಕ್ತಿಕ ಕಡತನದಲ್ಲಿ ದೊರೆತ ನಾಲ್ಕು ಪತ್ರಗಳ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪಿಸಲು ಇಚ್ಛಿಸಿದ್ದೇನೆ.

ಪ್ರಸ್ತಾಪಿಸುತ್ತಿರುವ ಡಿ.ಎಲ್.ಎನ್. ಅವರ ಎಲ್ಲ ನಾಲ್ಕು ಪತ್ರಗಳೂ ಇಂಗ್ಲಿಷ್ ಭಾಷೆಯಲ್ಲೇ ಇವೆ. ಕರ್ತೃಮತ್ತು ಕೃತಿಗಳ ಹೆಸರುಗಳು ಹಾಗೂ ಒಂದು ಸಂಬಂಧ ಸೂಚಕ ಪದಗುಚ್ಛ ಮಾತ್ರ ಕನ್ನಡ ಲಿಪಿಯಲ್ಲಿವೆ.

ಡಿ.ಎಲ್.ಎನ್. ಅವರು ೧೨-೬-೧೯೪೩ರಂದು ಲಕ್ಷ್ಮೀನಾರಾಯಣ ರಾಯರಿಗೆ ಬರೆದಿರುವ ಪತ್ರವೇ ಈ ಕಡತದಲ್ಲಿ ಅವರ ಮೊದಲ ಪತ್ರ. ಅದು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ೨೮ನೆಯ ಸಂಪುಟದ ಮೊದಲ ಸಂಚಿಕೆಯಲ್ಲಿ (೧೯೪೩ ಏಪ್ರಿಲ್) ಪ್ರಕಟವಾದ ಲಕ್ಷ್ಮೀನಾರಾಯಣರಾಯರ 'ಕವಿ ಕೀರ್ತಿವರ್ಮ' ಲೇಖನಕ್ಕೆ ಡಿ.ಎಲ್.ಎನ್. ನೀಡಿದ ಪ್ರತಿಕ್ರಿಯೆ. ಪತ್ರವು ಇಂಗ್ಲಿಷ್ ಭಾಷೆಯಲ್ಲಿ ಇರುವುದರಿಂದ, ಅದರ ಪೂರ್ಣಪಾಠವನ್ನು ದಾಖಲಿಸುವುದರ ಬದಲು, ಸಾರಾಂಶವನ್ನು ಮಾತ್ರ ಕನ್ನಡದಲ್ಲಿ ನೀಡುತ್ತೇವೆ.

ಆರನೆಯ ವಿಕ್ರಮಾದಿತ್ಯನ ತಮ್ಮನಾದ ವಿಷ್ಣುವರ್ಧನ ವಿಜಯಾದಿತ್ಯನ ಮತ್ತೊಂದು ಹೆಸರೇ ಕೀರ್ತಿವರ್ಮ ಎಂಬ ದೀರ್ಘಕಾಲದ ವಿವಾದವನ್ನು ಅನುಮಾನವಿಲ್ಲದಂತೆ ತಮ್ಮ ಹೊಸ ಸಂಶೋಧನೆಯ ಮೂಲಕ ಬಗೆಹರಿಸಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸುವ ಡಿ.ಎಲ್.ಎನ್., ಲೇಖನದಲ್ಲಿ ರಾಯರು ಉದ್ಧರಿಸಿರುವ ಕೊಲ್ಲೂರು ಶಾಸನದ ಪದ್ಯವನ್ನು ಒಪ್ಪಿಕೊಂಡಿದ್ದಾರೆ. ತಾವು ನೋಡಿದ ಸಮಯ ಪರೀಕ್ಷೆಯ ಮತ್ತೊಂದು ಹಸ್ತಪ್ರತಿಯಲ್ಲಿ ಕೀರ್ತಿವರ್ಮನ ಹೆಸರು ಕೀರ್ತಿದೇವ ಎಂದಿರುವುದನ್ನು ತಿಳಿಸಿ, ಅದು ಅಂತಹ ಮುಖ್ಯ ವ್ಯತ್ಯಾಸವೇನಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಬ್ರಹ್ಮಶಿವ ಮತ್ತು ಲಕ್ಕುಂಡಿಯ ಕ್ರಿ.ಶ. ೧೦೦೭ರ ಶಾಸನಗಳೆರಡೂ ಉಲ್ಲೇಖಗೊಂಡಿರುವ ಪವಾಡಗಳಲ್ಲಿ ಸಾಮತ್ಯೆ ಇರುವುದರಿಂದ, ಬ್ರಹ್ಮಶಿವ ಉಲ್ಲೇಖಿಸುವ ಅತ್ತಿಮಬ್ಬೆ ಮತ್ತು ದಾನಚಿಂತಾಮಣಿ ಅತ್ತಿಮಬ್ಬೆ ಇಬ್ಬರೂ ಒಬ್ಬರೇ ಎಂದು ರಾಯರು ಗುರುತಿಸಿರುವುದನ್ನು ಡಿ.ಎಲ್.ಎನ್. ದೃಢೀಕರಿಸುತ್ತಾರೆ. ಬ್ರಹ್ಮಶಿವ ಉಲ್ಲೇಖಿಸಿರುವ ಜೈನಗುರುಗಳು, ಕವಿಗಳು ಮತ್ತು ಇತರ ವ್ಯಕ್ತಿಗಳ ಆಯ್ಕೆಯು ಕಾಲಾನುಕ್ರಮದಲ್ಲಿಲ್ಲದೆ, ಮನಸ್ಸಿಗೆ ತೋಚಿದಂತೆ ಇರುವುದರಿಂದ ಜೈನಗುರುಗಳೊಡನೆ ಇರುವ ಪರಸ್ಪರ ಸಂಬಂಧವು ತಿಳಿಯುವುದಿಲ್ಲ ಮತ್ತು ಅವರನ್ನು ಗುರುತಿಸುವುದು ಕಷ್ಟ ಎಂದು ರಾಯರು ಲೇಖನದಲ್ಲಿ ಸ್ಪಷ್ಟಪಡಿಸಿರುವುದನ್ನು ಡಿ.ಎಲ್.ಎನ್. ಒಪ್ಪಿಕೊಂಡಿದ್ದಾರೆ. ಬ್ರಹ್ಮಶಿವ ಮೆಚ್ಚಿರುವ ಜೈನಗುರುಗಳ ಪೈಕಿ, ಇಬ್ಬರು ಮೇಘಚಂದ್ರರು ಮತ್ತು ಇಬ್ಬರು ವೀರನಂದಿಯರು ಇದ್ದು, ಇವರಲ್ಲಿ ಎರಡನೆಯ ಮೇಘಚಂದ್ರನು ಮೊರಂಬದವನು. ಈ ಮೊರಂಬವು, ೧೯೨೫ರ ಶಾಸನ ವರದಿಯಲ್ಲಿಯ

೩೦೫ರಲ್ಲಿ ಉಲ್ಲೇಖವಾಗಿರುವ ಮೊರಂಬ ಇರಬೇಕು ಎಂದು ಸೂಚಿಸುವ ಡಿ.ಎಲ್.ಎನ್. ಪತ್ರವನ್ನು ಅಂಚೆಗೆ ಹಾಕುವ ಮೊದಲು, ಮತ್ತೊಮ್ಮೆ ಗಮನಿಸಿ, ಮತ್ತೊಂದು ಉಲ್ಲೇಖದ ಮೂಲಕ ಪೆನ್ಸಿಲ್‌ನಲ್ಲಿ, ಈ ಮೊರಬವು ನವಲಗುಂದ ತಾಲ್ಲೂಕಿನಲ್ಲಿರುವ ಮುಳಗುಂದ ಇರಬಹುದು ಎಂಬ ಸೂಚನೆ ನೀಡಿದ್ದಾರೆ. ಉಲ್ಲೇಖಗೊಂಡಿರುವ ಇಬ್ಬರು ವೀರನಂದಿಯರಲ್ಲಿ ಬ್ರಹ್ಮಶಿವನ ಗುರು ಯಾರು ಎಂದು ಸ್ಪಷ್ಟವಾಗಿಲ್ಲ ಎಂದು ಹೇಳುವ ಡಾ|| ಡಿ.ಎಲ್.ಎನ್., ಎರಡನೆಯ ವೀರನಂದಿಯು ಹದಿಮೂರು ದಿನ ಕಾಯೋತ್ಸರ್ಗ ಮುದ್ರೆಯಲ್ಲಿ ನಿಂತು ಮರಣವನ್ನು ಸಾಧಿಸಿದವನಿರಬೇಕು ಎಂದು ಅನುಮಾನಿಸುತ್ತಾರೆ. ಬ್ರಹ್ಮಶಿವನಿಂದ ಸುತ್ತಿಸಲ್ಪಟ್ಟ ವಾದಿರಾಜನು, ಕ್ರಿ.ಶ. ೧೦೨೫ರ ಸುಮಾರಿಗೆ ಇದ್ದನೆನ್ನಲಾದ ಮತ್ತು ಯಶೋಧರ ಕಾವ್ಯ ಮತ್ತು ಇತರ ಕಾವ್ಯಗಳನ್ನು ರಚಿಸಿದ ಕವಿ ಎಂದು ತಿಳಿಸುತ್ತಾರೆ. ಸೋಮದೇವ ಪಂಡಿತ ಎಂಬುವವನು ಶಕ ವರ್ಷ ೧೧೨೭ರಲ್ಲಿ ಪೂಜ್ಯಪಾದರ ವ್ಯಾಕರಣದ ಮೇಲೆ ಶಬ್ದಾರ್ಣವ ಚಂದ್ರಿಕೆ ಎಂಬ ಟೀಕನ್ನು ಬರೆದಿರುವ ವಿಷಯವನ್ನು ರಾಯರ ಗಮನಕ್ಕೆ ತಂದು, ಬ್ರಹ್ಮಶಿವನಿಂದ ಸುತ್ತಿಸಲ್ಪಟ್ಟ ಸೋಮದೇವನೂ ಅವನೇ ಆದರೆ ಬ್ರಹ್ಮಶಿವನ ಕಾಲವು ಕ್ರಿ.ಶ. ೧೨೦೫ರ ನಂತರ ಆಗುತ್ತದೆ. ಬ್ರಹ್ಮಶಿವ ಪ್ರಸ್ತಾಪಿಸಿರುವ ಸೋಮದೇವನು, ಕ್ರಿ.ಶ. ೧೦ನೆಯ ಶತಮಾನದಲ್ಲಿ ಯಶಸ್ತಿಲಕ ಚಂಪೂ ಕೃತಿಯನ್ನು ರಚಿಸಿದವನಾಗಿರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿ, ಮೇಲಿನ ಉಲ್ಲೇಖಗಳು ಮತ್ತು ಅವನೇ ನೀಡಿರುವ ಇತರ ಸಾಕ್ಷ್ಯಗಳಿಂದ ಬ್ರಹ್ಮಶಿವನ ಕಾಲವನ್ನು ನಿರ್ಧರಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಮುಂದಿಡುತ್ತಾರೆ. ಜೊತೆಗೆ ಬ್ರಹ್ಮಶಿವನು ತನ್ನನ್ನು ತಾನು 'ಸುಕವಿರಾಜನ ಪಂಪರಾಜನ ಮೊಮ್ಮಂ' ಎಂದು ಕರೆದುಕೊಂಡಿರುವುದರಿಂದ ಈ ಪಂಪರಾಜ ಯಾರು ಎಂಬ ಒಂದು ಪ್ರಶ್ನೆಯೂ ಡಿ.ಎಲ್.ಎನ್. ಅವರನ್ನು ಕಾಡಿದೆ.

ಈ ಮೇಲೆ ಪ್ರಸ್ತಾಪಿಸಿದ ಪತ್ರದ ಆರಂಭದ ಒಂದು ವಾಕ್ಯವು ತಮ್ಮ ನಡುವೆ ಬಹು ದೀರ್ಘಕಾಲದಿಂದ ಪತ್ರ ವ್ಯವಹಾರ ನಡೆದಿಲ್ಲ ಎಂದೂ, ಕೊನೆಯ ಒಂದು ವಾಕ್ಯವು ಕೆಲಸವಿಲ್ಲದೆ ಇರುವ ಒಬ್ಬ 'ಕನ್ನಡ ಎಂ.ಎ., ಅಭ್ಯರ್ಥಿಗೆ ರಾಯರ ಇಲಾಖೆಯಲ್ಲಿ ಉದ್ಯೋಗಾವಕಾಶ ಏನಾದರೂ ಇದೆಯೇ ಎಂಬ ಪ್ರಶ್ನೆಯೂ ಇವೆ. ಉಳಿದಂತೆ ಡಿ.ಎಲ್.ಎನ್. ಅವರ ಪತ್ರವೆಲ್ಲಾ ಸಂಶೋಧನೆಗೇ ಮುಡಿಪಾಗಿರುವುದು ವಿಶೇಷ

ಬಹುತೇಕ ೧೪-೯-೧೯೪೩ರ ಪತ್ರ ತಲುಪುವ ಮೊದಲೇ ರಾಯರು ಡಿ.ಎಲ್.ಎನ್. ಅವರಿಗೆ ಪತ್ರವೊಂದನ್ನು ಸಿದ್ಧಪಡಿಸಿದ್ದು, ಅದರ ಕರಡಿನಲ್ಲಿ, ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಕವಿ ಕೀರ್ತಿವರ್ಮ' ಲೇಖನದಲ್ಲಿ ಹಲವು ಮುದ್ರಣ ದೋಷಗಳು ಉಳಿದಿವೆ ಎಂದು ತಿಳಿಸಿದ್ದಾರೆ. ಮರುದಿನವೇ, ಅಂದರೆ ೧೬-೯-೧೯೪೩ರಂದು ಅವರೇ, ಡಿ .ಎಲ್.ಎನ್. ಅವರಿಗೆ ಸಿದ್ಧಪಡಿಸಿರುವ ಪತ್ರದ ಕರಡಿನಲ್ಲಿ, ಲೇಖನದಲ್ಲಿ ತಾವು ಚರ್ಚಿಸಿರುವ ವಿಷಯಗಳಲ್ಲಿ ಡಿ.ಎಲ್.ಎನ್. ಅವರಿಗೆ ಸಹಮತ ಇರುವುದಕ್ಕಾಗಿ ಸಂತೋಷ ವ್ಯಕ್ತಪಡಿಸುತ್ತಾ, ಡಿ.ಎಲ್.ಎನ್. ಅವರು ತಮ್ಮ ಗಮನಕ್ಕೆ ತಂದಿರುವ ವಿಷಯಗಳ ಬಗ್ಗೆ ಪರಿಶೀಲಿಸಿ, ಯಾವುದೇ ವಿಷಯದ ಬಗೆಗೆ ಖಚಿತ ನಿರ್ಧಾರಕ್ಕೆ ಬಂದ ನಂತರ ತಿಳಿಸುವುದಾಗಿ ಬರೆಯುತ್ತಾರೆ.

ನನ್ನ ಬಳಿ ಇರುವ ಡಿ.ಎಲ್.ಎನ್. ಅವರ ಎರಡನೆಯ ಪತ್ರದ ದಿನಾಂಕ ೨೧-೨-೧೯೫೩. ಈ ಮಧ್ಯೆ ಡಿ.ಎಲ್.ಎನ್. ಮತ್ತು ರಾಯರ ಮಧ್ಯೆ ಪತ್ರ ವ್ಯವಹಾರ ಆಗಿಲ್ಲವೆ ಎಂದು ಪ್ರಶ್ನಿಸಲು ಅವಕಾಶ ಇದೆ. ನನ್ನ ಬಳಿ ಇರುವ ಪ್ರತಿಮಾ ಕೋಶದಲ್ಲಿ ಡಿ.ಎಲ್.ಎನ್. ಅವರ ಯಾವ ಪತ್ರಗಳೂ ಇಲ್ಲ ಎಂದಷ್ಟೇ ನಾನು ಹೇಳಬಲ್ಲೆ.

ಈಗ ಪ್ರಸ್ತಾಪಿಸುತ್ತಿರುವ ಪತ್ರದಲ್ಲಿ ಡಿ.ಎಲ್.ಎನ್. ಅವರು, ರಾಯರು ಕಳುಹಿಸಿದ್ದ ಎರಡು ಪ್ರಕಟಿತ ಲೇಖನಗಳ ಮೇಲುಪ್ರತಿಗಳ (1. The country of sapadalaksha 2. Ten years of Indian Epigraphy.) ಸ್ವೀಕೃತಿಯ ಬಗ್ಗೆ ಮೊದಲೇ ತಿಳಿಸದಿರುವುದಕ್ಕೆ ವಿಷಾದ ವ್ಯಕ್ತಪಡಿಸಿ, ರಾಯರು ಗುರುತಿಸಿರುವ 'ಸಪಾದಲಕ್ಷ ಪ್ರದೇಶ ಕುರಿತು ತಮ್ಮ ಸಹಮತ

ಇರುವುದನ್ನು ತಿಳಿಸಿ, ಹಾಗೆ ಗುರುತಿಸಲು ಬಳಸಿಕೊಂಡಿರುವ ಆಕರಗಳ ಅಗಾಧತೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಆಗಿನ ಹೈದರಾಬಾದ್ ಪ್ರಾಂತ್ಯದ ನಿಜಾಮಾಬಾದ್ ಮತ್ತು ಕರೀಂ ನಗರ್ ಜಿಲ್ಲೆಗಳ ಸ್ವಲ್ಪ ಭಾಗವು ಪ್ರಾಚೀನ 'ಸಪಾದಲಕ್ಷ ಪ್ರದೇಶಕ್ಕೆ ಸೇರಿತ್ತು ಎಂದು ಸರಿಯಾಗಿಯೇ ಗುರುತಿಸಲ್ಪಟ್ಟಿದೆ ಎಂದು ತಿಳಿಸಿದ್ದಾರೆ. ತನ್ನ ಆಶ್ರಯದಾತನಾದ ಇಮ್ಮಡಿ ಅರಿಕೇಸರಿಯು ತನಗೆ ದಾನವಾಗಿ ನೀಡಿದ್ದ ಧರ್ಮಪುರ ಅಗ್ರಹಾರವು 'ಬಚ್ಚಿಸಾಸಿರ ದಲ್ಲಿತ್ತು ('ಬಚ್ಚಿಸಾಸಿರದೊಳಂ ಧರ್ಮಪುರಂ') ಎಂದು ಪಂಪ ಹೇಳಿರುವುದನ್ನು ನೆನಪು ಮಾಡಿಕೊಂಡು ಅದು 'ಸಬ್ಬಿಸಾಸಿರ ಇರಬಹುದೇ ಎಂಬ ಅನುಮಾನ ವ್ಯಕ್ತಪಡಿಸಿ, ಆ ವಿಷಯವು ಪರಿಶೀಲನೆಗೆ ಒಳಪಡಬೇಕು ಎಂದು ಅಭಿಪ್ರಾಯಪಡುತ್ತಾರೆ. ಎರಡನೆಯ ಲೇಖನದಲ್ಲಿ ಅಪಾರ ಮಾಹಿತಿಗಳು ಇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿ, ಕುಮಾರ ರನ್ನನ ಬಗ್ಗೆ ಮತ್ತು ಭಟ್ಟಾಕಳಂಕನ ಸಾವಿನ ಬಗೆಗಿನ ಮಾಹಿತಿಗಳು ತಮ್ಮ ಆಸಕ್ತಿಯವು ಎಂದು ಸಂತೋಷಪಟ್ಟಿದ್ದಾರೆ.

ನನ್ನ ಪ್ರತಿಮಾ ಕೋಶದಲ್ಲಿರುವ ಡಿ.ಎಲ್.ಎನ್. ಅವರ ಮೂರನೆಯ ಪತ್ರದ ದಿನಾಂಕ ೬-೭-೧೯೫೩. ಆ ಹೊತ್ತಿಗೆ ರಾಯರು ಡಿ.ಎಲ್.ಎನ್. ಅವರಿಗೆ ತಳಂಗೆರೆ ಶಾಸನದ ಪಾಠದ ಲಿಪ್ಯಂತರದ ನಕಲನ್ನು ೨೯-೬-೧೯೫೩ರಂದು ಕಳುಹಿಸಿದ್ದರು. ಹಾಗೆ ಕಳುಹಿಸುವಾಗ ಶಾಸನದ ಪಾಠದಲ್ಲಿ ತಮಗಿರುವ ಕೆಲವು ಅನುಮಾನಗಳ ಬಗ್ಗೆ ಪ್ರಸ್ತಾಪಿಸಿದ್ದರು. ಆ ಅನುಮಾನಗಳಲ್ಲಿ ಮುಖ್ಯವಾಗಿ ಊರ್ಮ್ಮ ಜೋಗಬ್ಬೆಯ ವಂಶದೊಳ್ ಎಂಬ ಪಾಠದಲ್ಲಿ ಊರ್ಮ್ಮ ಎಂಬ ಪದದ ಅರ್ಥ ಮುಖ್ಯವಾದುದು. ೧) ಊರ್ಮ್ಮಾಜೋಗು ಅಬ್ಬೆಯ ವಂಶ, ೨) ಊರ್ಮ್ಮಜೋಗು ಮತ್ತು ಅಬ್ಬೆಯ ವಂಶ ಅಥವಾ ೩) ಊರ್ಮ್ಮ ಜೋಗಬ್ಬೆಯ ವಂಶ ಇವುಗಳಲಿ ಯಾವುದು ಸರಿ ಎಂಬ ಬಗ್ಗೆ ರಾಯರಿಗೆ ಸ್ಪಷ್ಟನೆ ಬೇಕಾಗಿತ್ತು. ಅದಕ್ಕಾಗಿ ಡಿ.ಎಲ್.ಎನ್. ಅವರಿಗೆ ಪತ್ರ. ಆ ಪತ್ರಕ್ಕೆ ಡಿ.ಎಲ್.ಎನ್. ಉತ್ತರ ಬರೆದದ್ದು ೬-೭-೧೯೫೩ರಂದು.

ಶಾಸನದ ಲಿಪ್ಯಂತರ ಮತ್ತು ಭಾಷಾಂತರಗಳನ್ನು ಮುಗಿಸಿರುವುದಾಗಿಯೂ, ಭಾಷೆ ಇತ್ಯಾದಿಗಳ ವಿಷಯದಲ್ಲಿ ಅಭಿಪ್ರಾಯ ಬರೆಯಬೇಕಾಗಿದೆ ಎಂದೂ, ಒಂದೆರಡು ದಿನಗಳಲ್ಲಿ ಪೂರ್ಣಗೊಳಿಸುವುದಾಗಿಯೂ ಬರೆದಿರುವ ಡಿ.ಎಲ್.ಎನ್., ಶಾಸನದಲ್ಲಿ ಕೆಲವು ಸೂಕ್ಷ್ಮ ವಿಚಾರಗಳಿದ್ದು, ಅವುಗಳ ಪರಿಶೀಲನೆ ಆಗಬೇಕೆಂದು ತಿಳಿಸಿದ್ದಾರೆ. ಊರ್ಮ್ಮ ಜೊಗಬ್ಬೆಯ ವಂಶದೊಳ್ ಎಂಬ ವಾಕ್ಯಭಾಗದ ಊರ್ಮ್ಮ ಪದವು ಜೋಗಬ್ಬೆಯ ಗುಣವಾಚಕದ ಒಂದು ಬಿರುದಾಗಿರಬಹುದು ಎಂದು ಅಭಿಪ್ರಾಯಪಡುತ್ತಾರೆ. ಪಂಪ ಭಾರತದ ಒಂದನೆಯ ಆಶ್ವಾಸದ ಪದ್ಯವನ್ನು ಆಧರಿಸಿ, ಊರ್ಮ್ಮಯ ಅರ್ಥವು ಅತಿಶಯ ಅಥವಾ ಅತ್ಯುತ್ತಮ ಎಂದಿರಬೇಕು ಎಂದು ತೀರ್ಮಾನಿಸಿದ್ದಾರೆ. ಶಾಸನದ ಕೊನೆಯ ಎರಡು ಶಾಸನಗಳ ಮೂಲಕ ತಿಳಿಯುವ ಅರ್ಥದ ಪ್ರಕಾರ ಕನ್ಯಾದಾನವನ್ನು ಕನ್ಯೆಗೆ+ದಾನ ಎಂದೇ ಬಿಡಿಸಬೇಕು. ಇದಕ್ಕೆ ಶಾಸನದ ೨೧ನೆಯ ಸಾಲಿನ ಅಪುತ್ರಿಕನು (ಮ)ಪ್ಪನಕ್ಕೆ ಎಂಬ ಉಲ್ಲೇಖವು ಪುಷ್ಟಿನೀಡುತ್ತದೆ. ಎಂದರೆ, ವಾರಸುದಾರಿಕೆಯ ಹಕ್ಕು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಿಗೆ ಸೇರುತ್ತದೆ. ಡಿ.ಎಲ್.ಎನ್. ಅವರ ಅಭಿಪ್ರಾಯದಂತೆ, ಕನ್ಯಾದಾನ ಎಂದರೆ ಕನ್ಯೆಗೆ ನೀಡಿದ ದಾನ. ಜೋಗಬ್ಬೆಯು ಜಯಸಿಂಹನ ಸೋದರಿಯರಲ್ಲೊಬ್ಬಳು ಮತ್ತು ಅವಳ ಮಗಳು ಮೋಚಬ್ಬೆ ಎಂದು ಹೇಳುವ ಡಿ.ಎಲ್.ಎನ್. ನಾಲ್ಕನೆಯ ಪದ್ಯ (ಉತ್ಸಾಹ ರಗಳೆ)ದಲ್ಲಿನ ಅಂಭೋರುಹಾಕ್ಷಿಯು ಜೋಗಬ್ಬೆಯನ್ನು ಕುರಿತಾಗಿಯೇ ಇರಬೇಕು ಎಂದಿದ್ದಾರೆ.

ನೀರಿನ ಹನಿಗಳ ಮೂಲಕ ಸೂರ್ಯನ ಬೆಳಕು ಹಾದು ಹೋಗುವ ಕ್ರಿಯೆಯು ಕಾಮನಬಿಲ್ಲಿನ ಹುಟ್ಟಿಗೆ ಕಾರಣ ಎಂಬ ಬಗ್ಗೆ ಸಂಸ್ಕೃತ ಅಥವಾ ಕನ್ನಡ ಕೃತಿಗಳಲ್ಲಿರಬಹುದಾದ ಉಲ್ಲೇಖಗಳ ವಿಚಾರವಾಗಿ ರಾಯರು ಬಹುತೇಕ ಡಿ.ಎಲ್.ಎನ್. ಅವರನ್ನು ಕೇಳಿದ್ದು, ಅದಕ್ಕೆ ಡಿ.ಎಲ್.ಎನ್. ತಕ್ಷಣಕ್ಕೆ ತಮಗೆ ಅಂತಹ ಯಾವ ಉಲ್ಲೇಖಗಳೂ ನೆನಪಿಗೆ ಬರುತ್ತಿಲ್ಲವೆಂದೂ, ಆ ಬಗ್ಗೆ ನೋಡಿ, ತಿಳಿಸುವುದಾಗಿ ಬರೆದಿದ್ದಾರೆ.

ಡಿ.ಎಲ್.ಎನ್. ಅವರ ನಾಲ್ಕನೆಯ ಪತ್ರದ ದಿನಾಂಕ ೨೯-೭-೧೯೫೩. ಅದರಲ್ಲಿ ರಾಯರು ತಮಗೆ ಕಳುಹಿಸಿದ್ದ ಬಾಂಬೆ ಕರ್ನಾಟಕ್ ಇನ್ಸ್‌ಕ್ರಿಪ್ಷನ್ಸ್‌ನ ಗೌರವ ಪ್ರತಿಗಾಗಿ ತಮಗೆ ಅತೀವ ಸಂತೋಷವಾಗಿರುವುದನ್ನು ಧನ್ಯವಾದಗಳ ಸಹಿತ ತಿಳಿಸಿರುವ ಡಿ.ಎಲ್. ಎನ್. ಉತ್ತರಿಸಲು ಆಗಿರುವ ವಿಳಂಬಕ್ಕೆ ವಿಷಾದ ವ್ಯಕ್ತಪಡಿಸಿ, ಕ್ಷಮೆಕೋರಿ, ತಳಂಗೆರೆ ಶಾಸನದ ಲಿಪ್ಯಂತರ, ಅನುವಾದಗಳನ್ನು ತಮ್ಮ ಅಭಿಪ್ರಾಯಗಳ ಸಹಿತ ಕಳುಹಿಸಿರುವ ಬಗ್ಗೆ ತಿಳಿಸುತ್ತಾ, ಶಾಸನದ ಐತಿಹಾಸಿಕ ವಿಷಯಗಳು ಮತ್ತು ಲಿಪಿ ಮತ್ತು ವಿವರಗಳ ಬಗ್ಗೆ ತಿಳಿಸುವುದು ತಮ್ಮ ಕ್ಷೇತ್ರಕ್ಕೆ ಹೊರತಾದ್ದರಿಂದ ಆ ಬಗ್ಗೆ ರಾಯರೇ ಬರೆದು, ತಮ್ಮಿಬ್ಬರ ಹೆಸರಿನಲ್ಲೂ ಸಂಯುಕ್ತ ಲೇಖನವಾಗಿ ಎಫಿಗ್ರಾಫಿಯಾ ಇಂಡಿಕಾ ಪ್ರಕಟಿಸಬಹುದೆಂದು ಸೂಚನೆ ನೀಡಿದ್ದಾರೆ. ತಮ್ಮ ಬರವಣಿಗೆಯಲ್ಲಿ ಪೆನ್ಸಿಲ್‌ನಿಂದ ಅಡಿಗೆರೆ ಹಾಕಿರುವ ಪದಗಳು ಇಟಾಲಿಕ್ ಅಥವಾ ಆಂಟಿಕ್ ಅಕ್ಷರಗಳಲ್ಲಿ ಇರಬೇಕು ಎಂಬ ಸೂಚನೆ ನೀಡಲೂ ಡಿ.ಎಲ್.ಎನ್. ಮರೆತಿಲ್ಲ.

ಜಯಸಿಂಹನ ತಳಂಗೆರೆಯ ಶಾಸನದ ಬಗೆಗೆ ಎಪಿಗ್ರಾಫಿಯಾ ಇಂಡಿಕಾದ ೨೯ನೆಯ ಸಂಚಿಕೆಯಲ್ಲಿ, ನೆಲಮಂಗಲ ಲಕ್ಷ್ಮೀನಾರಾಯಣ ರಾಯರು ಮತ್ತು ಡಿ.ಎಲ್.ಎನ್. ಅವರು ಸಂಯುಕ್ತವಾಗಿ ಲೇಖನ ಪ್ರಕಟಿಸಿರುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಈ ಇಬ್ಬರು ವಿದ್ವಾಂಸರು ಈ ಶಾಸನದಲ್ಲಿ ಕನ್ನಡಕ್ಕೆ ವಿಶಿಷ್ಟವಾದ ಉತ್ಸಾಹ ರಗಳೆಯನ್ನು ಗುರುತಿಸಿದ್ದಾರೆ.

ಇದು ನಮ್ಮ ಹಿಂದಿನ ಪೀಳಿಗೆಯ ವಿದ್ವಾಂಸರು ಸಂಶೋಧನೆಯನ್ನು ಪರಿಭಾವಿಸಿದ್ದ ರೀತಿಗೆ ಮಹತ್ವದ ಉದಾಹರಣೆ. ಅವರ ನಡುವೆ ನಡೆಯುತ್ತಿದ್ದ ಪತ್ರ ವ್ಯವಹಾರಗಳು ಸಂಶೋಧನೆಯ ಒಂದು ಭಾಗವೇ ಆಗಿರುತ್ತಿದ್ದವು. ಇತಂಹ ಗುರುವರ್ಗದ ಸಂಪರ್ಕ ಪಡೆದಿದ್ದ ಪ್ರೊ|| ಬಸವಾರಾಧ್ಯರಂತಹವರು ಧನ್ಯರು.

XXX

ನಾ ಕಂಡ ವಿನಯಶೀಲ ವಿದ್ವಾಂಸ

-ಪ್ರೊ. ಜಿ. ಅಶ್ವತ್ಥನಾರಾಯಣ

ಶ್ರೀ ಎನ್. ಬಸವಾರಾಧ್ಯರು ಸುಮಾರು ನಾಲ್ಕು ದಶಕಗಳಿಗೂ ಮಿಕ್ಕು ಪರಿಚಿತರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಮಿತಿಗೆ ನಿಯೋಜಿತರಾದಾಗಿನಿಂದ ಅವರು ಇಂದಿನವರೆಗೆ ಒಂದೇ ರೀತಿಯ ಸ್ನೇಹಾಭಿಮಾನಗಳಿಂದ ಇದ್ದಾರೆ. ತಮ್ಮ ಜೀವನದಲ್ಲಿ ಸ್ಥಾನಮಾನದಲ್ಲಿ ಎಷ್ಟೇ ಏರುಪೇರಾದರೂ ಸ್ನೇಹಿತರ ನಡುವೆ ನಗುನಗುತ ಸೌಮ್ಯಭಾವದಿಂದ ಒಂದೇ ರೀತಿಯಲ್ಲಿ ಇರುವುದು ಅವರ ವಿಶಿಷ್ಟ ಗುಣ. ಅವರನ್ನು ನಿಘಂಟುವಿನ ಉಪಸಂಪಾದಕರಾಗಿ, ಮುಖ್ಯ ಸಂಪಾದಕರಾಗಿ, ಪರಿಷತ್ತಿನ ಅಧ್ಯಕ್ಷರಾಗಿ, ಇತರ ಸಮಿತಿಗಳ ಸದಸ್ಯರಾಗಿ 'ಮಿತ್ರ' ಗೊಷ್ಠಿಗಳಲ್ಲಿ ಲೋಕಾಭಿರಾಮದ ಹರಟೆಗೆಳೆಯರಾಗಿ, ಗೃಹಸ್ಥರಾಗಿ ಅವರನ್ನು ಬಲ್ಲೆ. ಎಲ್ಲ ಸಂದರ್ಭಗಳಲ್ಲೂ ಒಂದೇ ರೀತಿಯ ಸ್ನೇಹವರ್ತನೆಯಿಂದ ಇರುವುದು ಅಚ್ಚರಿಸಂಗತಿ. ಅವರು ಯಾರ ಬಗ್ಗೆ ಆಗಲಿ ಆವೇಶದ ಕ್ರೋಧದ ವರ್ತನೆ ತೋರಿದ್ದನ್ನು ನಾನು ನೋಡಿಲ್ಲ. ಏನಾದರೂ ಕೆಲಸವಾಗಬೇಕಾದರೆ ನೇರವಾಗಿ ಕೇಳುವುದು ಅವರ ಸ್ವಭಾವ. ಮುಂದಿನವಾರ ಇಂಥ ಕಾರ್ಯಕ್ರಮವಿದೆ ನೀವು ಮಾತಾಡಬೇಕು..... ಇಂಥ ಗ್ರಂಥಕ್ಕೆ ಒಂದು ಲೇಖನ ಕೊಡಿ. ನೀವು ಖಂಡಿತಾ ಬರೆದುಕೊಡಬೇಕು ಎಂದು ನೇರವಾಗಿ ಆತ್ಮೀಯವಾಗಿ ಅವರು ಕೇಳಿದಾಗಲೆಲ್ಲಾ ಯಾರಿಗೆ ಆದರೂ ಇಲ್ಲವೆನ್ನಲಾಗುತ್ತಿರಲಿಲ್ಲ. ನೋಡಿ ನನ್ನ ತಲೆಗೆ ಇದನ್ನು ಕಟ್ಟಿಬಿಟ್ಟಿದ್ದಾರೆ. ನಾನು ಸ್ನೇಹಿತರಾದ ನಿಮ್ಮ ತಲೆಗೂ ಸ್ವಲ್ಪ ಕಟ್ಟುತ್ತಿದ್ದೇನೆ. ಸ್ನೇಹಿತರು ಎಂದ ಮೇಲೆ ಸುಖ-ದು:ಖ ಸಮಾನವಾಗಿ ಹಂಚಿಕೊಳ್ಳಬೇಕು ಅಲ್ಲವೆ? ಎನ್ನುತ್ತಿದ್ದರು. ಕೆಲಸ ಅನಿವಾರ್ಯವಾದಾಗ ಕೈಲಾದಷ್ಟು ನೆರವು ನೀಡುವುದು ಅವರ ಜಾಯಮಾನ.

ನಾನು ವಿದ್ಯಾರ್ಥಿ ಆಗಿದ್ದಾಗ ೧೯೬೦ನೇ ಇಸವಿ ಅಂತ ಕಾಣುತ್ತೆ. ಆಗ ಅವರು ಕನ್ನಡ ಗದ್ಯವಿಕಾಸವೆಂಬ ಕ್ರಿ.ಶ. ೪೫೦ ರಿಂದ ೧೯೦೦ವರೆಗಿನ ಕನ್ನಡ ಗದ್ಯಗಳ ಪ್ರಾತಿನಿಧಿಕ ಸಂಕಲನವೊಂದನ್ನು ಹೊರತರಲು ತಯಾರಿ ನಡೆಸಿದ್ದರು. ಅದಕ್ಕಾಗಿ ತೀನಂಶ್ರೀ,

ಡಿಎಲ್‌ಎನ್ ಮಾರ್ಗದರ್ಶನ ಪಡೆದು ಮೈಸೂರು ಪ್ರಾಚ್ಯಕೋಶಾಗಾರದ ಹಸ್ತಪ್ರತಿಗಳೊಡನೆ ಪ್ರಕಟಿತ ಕೃತಿಗಳನ್ನು ಹೋಲಿಸಿ, ಶುದ್ಧಪಾಠ ಸಿದ್ಧಪಡಿಸುತ್ತಿದ್ದರು. ಹೀಗೆ ಸಿದ್ಧಪಡಿಸಿದ ಲೇಖನಗಳ ಕರಡು ಪ್ರತಿಗಳನ್ನು ಅಚ್ಚಿಗೆ ಶುದ್ಧವಾಗಿ ಪ್ರತಿಮಾಡಿಕೊಡಿ ಎಂದು ನನಗೆ ಕೊಟ್ಟರು. ಆಗ ನನಗೆ ಹಣದ ಅವಶ್ಯಕತೆ ಇತ್ತು. ನೋಡಿ ನೀವು ತುಂಬ ಸುಲಭವಾಗಿ ಪ್ರತಿಮಾಡಬಲ್ಲಿರಿ, ನಿಮಗೆ ಸಾಹಿತ್ಯದಲ್ಲಿ ಆಸಕ್ತಿ ಇದೆ. ತಪ್ಪು ಬರೆಯುವುದಿಲ್ಲ, ನೀವು ಬಿಟ್ಟಿ ಮಾಡಬೇಡಿ, ನಮ್ಮ ಪ್ರಾಚ್ಯ ಕೋಶಾಗಾರದಲ್ಲಿ ಕೊಡುವಂತೆ ಗ್ರಂಥಕ್ಕೆ ಇಷ್ಟು ದರದಂತೆ ಹಣ ಕೊಡುತ್ತೇನೆ ಎಂದರು. ಪರವಾಗಿಲ್ಲ ಸಾರ್, ಏನೂ ಬೇಡಿ, ನಾನು ಹಾಗೇ ಬರೆದುಕೊಡುತ್ತೇನೆ ಎಂದೆ. ಎಲ್ಲಾದರೂ ಉಂಟೆ ಅಶ್ವತ್‌ನಾರಾಯಣ್, ನೀವು ವಿದ್ಯಾರ್ಥಿಗಳು ನಿಮ್ಮಂಥವರನ್ನು ಎಂದೂ ಬಿಟ್ಟಿ ದುಡಿಸಿಕೊಳ್ಳಬಾರದು. ನೀವು ಬಿಟ್ಟಿ ಬರೆದುಕೊಟ್ಟರೆ ನಿಮಗೆ ಪುಣ್ಯಬರಬಹುದು ಆದರೆ ನನಗೆ ಪಾಪಸುತ್ತಿಕೊಳ್ಳುತ್ತದೆ. ನೋಡಿ ಮನುಷ್ಯ ಪುಣ್ಯವಂತನಾಗದಿದ್ದರೂ ಪಾಪಿಷ್ಟನಾಗಬಾರದು, ಅದರಲ್ಲೂ ಇಂಥ ಕೆಲಸಮಾಡಿದರೆ ನಾನು ಮಹಾನರಕಕ್ಕೆ ಹೋಗಿ ಬಿಡುತ್ತೇನೆ. ದಯವಿಟ್ಟು ಬರೆದುಕೊಡಿ. ನಾನು ಕೊಟ್ಟಿದ್ದನ್ನು ತೆಗೆದುಕೊಳ್ಳಿ ಎಂದರು. ಪ್ರೀತಿ-ವಿಶ್ವಾಸದಿಂದ ನೇರವಾಗಿ ಅವರು ಮಾತನಾಡಿದ ರೀತಿ ನನ್ನ ಬಾಯನ್ನು ಕಟ್ಟಿಹಾಕಿತು. ಯಾರೊಬ್ಬರನ್ನು ನಮ್ಮ ಸ್ವಾರ್ಥಕ್ಕಾಗಿ ಬಿಟ್ಟಿ ದುಡಿಸಿಕೊಳ್ಳಬಾರದು ಶೋಷಣೆ ಮಾಡಬಾರದು. ಒಂದಲ್ಲ ಒಂದು ರೀತಿಯಲ್ಲಿ ಪ್ರತಿಫಲ ನೀಡಿ ನಮ್ಮ ಋಣವನ್ನು ತೀರಿಸಿಕೊಳ್ಳಬೇಕು ಎಂಬ ಅವರ ಧೋರಣೆ ನನಗೆ ತಂಬಾ ಮೆಚ್ಚುಗೆ ಆಯಿತು. ಇಂದೂ ಅವರ ಸ್ವಭಾವ ಹಾಗೇ ಇದೆ.

ಅವರಲ್ಲಿ ನಾನು ಕಂಡ ಇನ್ನೊಂದು ಸದ್ಗುಣ ಎಂದರೆ ಗುರುಭಕ್ತಿ. ಗುರುಭಕ್ತಿ ಎಲ್ಲರಿಗೂ ಇರುತ್ತದೆ ನಿಜ. ಆದರೆ ಅವರಿಗಿರುವ ಗುರುಭಕ್ತಿ ಎಲ್ಲರಿಗೂ ಇರದು. ಡಿಎಲ್‌ಎನ್ ಅವರ ಶಿಷ್ಯರು ಅನೇಕರಿದ್ದಾರೆ. ಅವರನ್ನೆಲ್ಲಾ ಕಂಡರೆ ಡಿಎಲ್‌ಎನ್‌ಗೆ ತುಂಬ ಪ್ರೀತಿ ಇತ್ತು. ಉಳಿದವರಿಗಿಂತ ಇವರ ಬಗ್ಗೆ ಗುಲಗಂಜಿ ತೂಕ ಜಾಸ್ತಿ ಇತ್ತು. ಬಹುಶಃ ಪೂರ್ವಜನ್ಮದ ಋಣಾನುಬಂಧ. ಅದಕ್ಕೆ ಕಾರಣ ಅಷ್ಟೆ. ಡಿಎಲ್‌ಎನ್ ಅವರ ಬಗ್ಗೆ ಏಕಲವ್ಯನಿಷ್ಠೆ. ಇವರದು ಎಂದೂ ಡಿಎಲ್‌ಎನ್ ಅವರ ಮಾತಿಗೆ ಇಲ್ಲ ಎಂಬುದೇ ಇಲ್ಲ. ನಯ-ವಿನಯ, ಶ್ರದ್ಧೆ-ಭಕ್ತಿಗಳಿಂದ, ಸಂತೋಷದಿಂದ ಗುರುಸೇವೆಗೆ ಸದಾ ಬಸವಾರಾಧ್ಯರು ಸಿದ್ಧರಿರುತ್ತಿದ್ದರು. ಜಾತಿಭೇದ, ಸಂಕುಚಿತಭಾವ ಗುರುಶಿಷ್ಯರಿಬ್ಬರಲ್ಲಿ ಕನಸು-ಮನಸುಗಳಲ್ಲೂ ಎಂದೂ ಸುಳಿಯಲಿಲ್ಲ. ಡಿಎಲ್‌ಎನ್ ಅವರ ಮಗನಂತೆ ಬಸವಾರಾಧ್ಯರನ್ನು ಕಂಡಿದ್ದಾರೆ ಎಂದರೆ ತಪ್ಪಲ್ಲ. ಬಸವಾರಾಧ್ಯರೂ ಅಷ್ಟೆ ಅವರ ಜೀವ ಡಿಎಲ್‌ಎನ್ ಆಗಿದ್ದರು. ಗುಲ್ಬರ್ಗಾ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಿಎಲ್‌ಎನ್ ಅವರ ಬಗ್ಗೆ ವ್ಯವಸ್ಥಾಪಕರ ಕರ್ತವ್ಯಲೋಪದಿಂದ ಸ್ನಾನ-ಊಟವಿಲ್ಲದೆ ಇದ್ದಾಗ, ಅದನ್ನು ಕಂಡ ಬಸವಾರಾಧ್ಯರು ಹೌಹಾರಿ ತಕ್ಷಣವೇ ಮಿತ್ರ ಬಾಂಧವರೊಬ್ಬರ ಮನೆಯಲ್ಲಿ ವ್ಯವಸ್ಥೆ ಮಾಡಿ ತಂದೆ-ಮಗಳಿಬ್ಬರಿಗೆ ಅನುಕೂಲ ಮಾಡಿಕೊಟ್ಟರು. ಬಹಳ ವರ್ಷಗಳವರೆಗೆ ಇಂದೂ ಸಹ ನಮ್ಮ ಗುರುಗಳಿಗೆ ಎಷ್ಟು ತೊಂದರೆ ಆಗಿಹೋಗಿತ್ತು ಸಮ್ಮೇಳನದಲ್ಲಿ ಎಂದು ಮರುಗುತ್ತಾರೆ. ಇಂದು ನಮ್ಮ ಶಿಕ್ಷಣ ರಂಗದಲ್ಲಿ ಓದುವ ಕಾಲದಲ್ಲೇ ಗುರುಗಳ ಬಗ್ಗೆ ಶಿಷ್ಯರಿಗೆ ಭಕ್ತಿಗೌರವಗಳು ಇಲ್ಲ. ಗುರುಗಳಿಗೆ ಶಿಷ್ಯರಲ್ಲಿ ಆತ್ಮೀಯತೆ ಅಭಿಮಾನಗಳಿಲ್ಲ. ಆದರೆ ಈ ಗುರು-ಶಿಷ್ಯರಲ್ಲಿ ಜಿವನದುದ್ದಕ್ಕೂ ಗುರು-ಶಿಷ್ಯ ಪ್ರೇಮವಿರುವುದನ್ನು ಹಲವಾರು ಸಂದರ್ಭಗಳಲ್ಲಿ ನಾನು ನೋಡಿದ್ದೇನೆ. ಗುರುವಿನ ಬಗ್ಗೆ ಹಳೆಯ ತಲೆಮಾರಿನವರಿಗೆ ಇದ್ದ ಶ್ರದ್ಧಾಗೌರವಗಳು ನನಗೆ ನೆನಪಾಗುತ್ತದೆ. ದಿ॥ ನಿಟ್ಟೂರು ಶ್ರೀನಿವಾಸರಾಯರಿಗೆ ಎಂ.ಆರ್. ಶ್ರೀನಿವಾಸಮೂರ್ತಿಗಳು ಶಾಲಾಶಿಕ್ಷಣ ಕಾಲದಲ್ಲಿ ಗುರುಗಳಾಗಿದ್ದರು. ಅರ್ಧ-ಮುಕ್ಕಾಲು ಶತಮಾನ ಆದಾಗಲೂ ಅವರನ್ನು ಸ್ಮರಿಸಿದಾಗಲೆಲ್ಲ- ಅವರ ಬಗ್ಗೆ ಮಾತನಾಡುವಾಗಲೆಲ್ಲ ಅವರ ಉಲ್ಲೇಖ ಬಂದಾಗಲೆಲ್ಲ ಕೈಮುಗಿದೇ ಮಾತಾಡುತ್ತಿದ್ದರು. ಅವರು ಮಹಾನುಭಾವರು ನಮ್ಮ ಗುರುಗಳು ಎನ್ನುತ್ತಿದ್ದರು. ಅವರ ಸುದೀರ್ಘ ಸಂದರ್ಶನಗಳಲ್ಲಿ ಹತ್ತಾರು ಬಾರಿ ನನಗೆ ಎಂ.ಎಚ್. ಕೃಷ್ಣಯ್ಯ, ಹೆಚ್.ಕೆ. ರಂಗನಾಥ್ ಅವರಿಗೆ ಆದ ಅನುಭವ. ಗುರುಗಳ ವಿನಯಶೀಲತೆ ಮತ್ತು ಪಾಂಡಿತ್ಯ ಗೌರವ ಬಸವಾರಾಧ್ಯರಲ್ಲೂ ಮೈವೆತ್ತಿದೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿ.ಶಿವಮೂರ್ತಿಶಾಸ್ತ್ರಿಗಳ ಕಾಲದಲ್ಲಿ ಅನಕೃ ಪರವಾಗಿ ನಿಂತು ಹೋರಾಡಿದ ಕನ್ನಡ ಭಕ್ತರಲ್ಲಿ ನಾನು ನನ್ನ ಮಿತ್ರ ಕನ್ನಡ ಸಾಹಿತ್ಯ ಕುಟೀರದ ಸುಬ್ಬರಾಯರೂ ಇತರರೂ ಮುಖ್ಯರು ಎಂದರೆ ಅತಿಶಯೋಕ್ತಿ ಅಲ್ಲ.

ಆದರೆ ಶಾಸ್ತ್ರಿಗಳು ಎಂದೂ ವೈಯಕ್ತಿಕ ದ್ವೇಷ ಸಾಧಿಸಿದವರಲ್ಲ. ಸಣ್ಣತನದಿಂದ ನಡೆದುಕೊಂಡವರಲ್ಲ. ಶಾಸ್ತ್ರಿಗಳಿಗೆ ನಿಜವಾದ ಸಹೃದಯತೆ ಇತ್ತು, ವ್ಯಾವಹಾರಿಕ ಜಾಣ್ಮೆಯೂ ಇತ್ತು. ಆ ಕಾಲದಲ್ಲಿ ನಿಘಂಟು ಕಚೇರಿಯ ಸಹಾಯಕ ಹುದ್ದೆಗೆ ನಾನೊಂದು ಅರ್ಜಿ ಹಾಕಿದ್ದೆ. ಆಗ ನಿಘಂಟು ಸಂಪಾದಕರಾಗಿದ್ದ ಎಲ್. ಗುಂಡಪ್ಪನವರು ಕನ್ನಡದ ವಿಶೇಷ ಅರ್ಹತೆ (ಐಚ್ಛಿಕ ಕನ್ನಡ ಅಭ್ಯಾಸಮಾಡಿಲ್ಲ) ಎಂಬ ತಾಂತ್ರಿಕ ಕಾರಣದಿಂದ ನಿಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆಗದು ಎಂದು ಕಾರ್ಡ್ ಬರೆದರು. ಅದನ್ನು ಬಸವಾರಾಧ್ಯರಿಗೆ ತೋರಿಸಿ ಈ ಕೆಲಸಕ್ಕೆ ಬೇಕಾದ ಕನ್ನಡ ಅರ್ಹತೆ ನನಗಿಲ್ಲವೇ ನೀವೇ ಹೇಳಿ ಎಂದೆ. ಅವರು ಎಲ್. ಗುಂಡಪ್ಪನವರ ಬಳಿ ನನ್ನ ಕರೆದುಕೊಂಡು ಹೋಗಿ ನೋಡಿ ಇವರು ಉಳಿದವರಿಗಿಂತ ಚೆನ್ನಾಗಿ ಕೆಲಸಮಾಡಬಲ್ಲರು. ಸಾಕಷ್ಟು ಚೆನ್ನಾಗಿ ಕನ್ನಡ ಗೊತ್ತಿದೆ ಎಂದು ಪರಿಪರಿಯಾಗಿ ಹೇಳಿದರು. ಎಲ್. ಗುಂಡಪ್ಪನವರು ಒಪ್ಪಲಿಲ್ಲ. ಆದರೆ ಬಸವಾರಾಧ್ಯರು ಹೇಳಿದ ಮಾತು ನನಗೆ ಸಮಾಧಾನ ತಂದಿತು. ಅಶ್ವತ್ಥ್‌ನಾರಾಯಣ್ ನಿಮ್ಮ ಯೋಗ್ಯತೆ ನನಗೆ ಗೊತ್ತು. ನಿಮಗೆ ಅವಕಾಶ ಸಿಗದ ಮಾತ್ರಕ್ಕೆ ನಿಮ್ಮಲ್ಲಿ ಅರ್ಹತೆ ಇಲ್ಲ ಅಂತ ಭಾವಿಸಬೇಡಿ. ಅವಕಾಶ ಸಿಕ್ಕಿದವರಿಗೆಲ್ಲಾ ಅರ್ಹತೆ ಇದ್ದೇ ಇದೆ ಎಂದಲ್ಲ. ಎಷ್ಟೋ ಜನಕ್ಕೆ ಅರ್ಹತೆಬಿಟ್ಟು ಬೇರೆ ಕಾರಣಗಳಿಗೆ ಅವಕಾಶ ಸಿಕ್ಕಿರುತ್ತೆ. ನಿಮಗೆ ಗೊತ್ತಲ್ಲ... ಅವರಿಗೆ ಹೇಗೆ ಸಿಕ್ಕಿತು ಎಂಬುದನ್ನು ಹೇಳಿದರು. ಇದಾದ ಕೆಲವು ವರ್ಷಗಳ ನಂತರ ಮತ್ತೆ ನಿಘಂಟುವಿನ ಉದ್ಯೋಗವೊಂದಕ್ಕೆ ಅರ್ಜಿ ಹಾಕಿದ್ದೆ. ಈ ವೇಳೆಗೆ ಡಿಎಲ್ಎನ್ ಅವರು ನಿಘಂಟು ಸಂಪಾದಕ ಸಮಿತಿ ಅಧ್ಯಕ್ಷರಾಗಿದ್ದರು. ಮೈಸೂರಿನ ಅವರ ಮನೆಯಲ್ಲಿ ಸಂದರ್ಶನಕಾರ್ಯ ನಡೆಯಿತು. ಡಿಎಲ್ಎನ್ ಸಹೋದ್ಯೋಗಿ ಆತ್ಮೀಯ ಏಕವಚನ ಮಿತ್ರರಾದ ಅಂತರರಾಷ್ಟ್ರೀಯ ಖ್ಯಾತಿಯ ಪ್ರಾಧ್ಯಾಪಕರು (ನಾನು ಅವರ ವಿದ್ಯಾರ್ಥಿ ಆಗಿದ್ದೆ) ನನ್ನ ಕನ್ನಡ ಅರ್ಹತೆ ಬಗ್ಗೆ ಡಿಎಲ್ಎನ್‌ಗೆ ಶಿಫಾರಸು ಮಾಡಿದ್ದರು. ಆ ಸಂದರ್ಭದಲ್ಲಿ ಅವರನ್ನು ಕಂಡಾಗ ಡಿಎಲ್ಎನ್ ಹೇಳಿದ ಮಾತು. "ನೋಡಿ ನೀವು ನನ್ನ ಆತ್ಮೀಯ ಪ್ರಾಧ್ಯಾಪಕರಿಂದ ಪತ್ರ ತಂದಿದ್ದೀರಿ. ನಿಮ್ಮ ಕನ್ನಡ ಆಸಕ್ತಿ ಅಭಿಮಾನಗಳನ್ನು ನಾನೇ ಕಂಡಿದ್ದೇನೆ. ಪರಿಷತ್ತಿನ ಚಟುವಟಿಕೆಗಳಲ್ಲಿ ಅದಕ್ಕಿಂತ ಹೆಚ್ಚಾಗಿ ನಮ್ಮ ಬಸವಾರಾಧ್ಯರು ನಿಮ್ಮ ಬಗ್ಗೆ ಹೇಳಿದ್ದಾರೆ. ಅವರು ನನ್ನ ಪ್ರಾಣ ಶಿಷ್ಯ, ಅವರ ಮಾತಿನ ಮುಂದೆ ಬೇರಾವ ಸರ್ಟಿಫಿಕೇಟ್ ಅಗತ್ಯವಿಲ್ಲ. ಬಸವಾರಾಧ್ಯರು ಸುಳ್ಳು ಹೇಳೊಲ್ಲ ನಾಬಲ್ಲೆ. ಸಂದರ್ಶನಕ್ಕೆ ಬನ್ನಿ ನೋಡೋಣ ಅಂದರು. ಸಂದರ್ಶನದಲ್ಲಿ ಸಮಿತಿಯಲ್ಲಿದ್ದ ಇನ್ನೊಬ್ಬ ಚಿಕ್ಕ ಮನಸ್ಸಿನ ದೊಡ್ಡ ವಿದ್ವಾಂಸರು ನನ್ನ ಆಯ್ಕೆಗೆ ಕಲ್ಲು ಹಾಕಿದರು. ಉಳಿದವರು ಅಸಹಾಯಕರಾಗಿ ನಾನು ಆಯ್ಕೆ ಆಗಲಿಲ್ಲ. ಆಗ ಬಸವಾರಾಧ್ಯರು ಹೇಳಿದರು. ನಿಮ್ಮ ನಶೀಬ್ ಚೆನ್ನಾಗಿಲ್ಲ ಅಶ್ವತ್ಥ್‌ನಾರಾಯಣ್. ಸಜ್ಜನರು, ಪ್ರಾಮಾಣಿಕರು, ಸಹೃದಯರು ಹತ್ತಾರು ಮಂದಿ ಇದ್ದರೂ ಒಬ್ಬ ಪೂರ್ವಾಗ್ರಹಪೀಡಿತ ಚಿಕ್ಕಮನಸ್ಸಿನವರು ಇದ್ದಾರೆ. ಗಡಿಗೆಹಾಲಿಗೆ ತೊಟ್ಟು ಹುಳಿ ಹಿಂಡಿದಂತೆ ಆಗುತ್ತದೆ ಎಂದು ಸೂಚ್ಯವಾಗಿ ಹೇಳಿದರು. ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬಸವಾರಾಧ್ಯರ ವ್ಯಕ್ತಿತ್ವ ಗುರುಭಕ್ತಿಯ ಹಿರಿಮೆ ನನ್ನ ಅನುಭವಕ್ಕೆ ಬಂದಿದೆ.

ಬಿ. ಶಿವಮೂರ್ತಿಶಾಸ್ತ್ರಿಗಳ ಬಗ್ಗೆ ಪ್ರತಿಷ್ಠಾನ ಸ್ಥಾಪಿಸಿದಾಗ ಅದರ ಮೊದಲ ಉಪನ್ಯಾಸವನ್ನು ನನ್ನಿಂದಲೇ ಬಸವಾರಾಧ್ಯರು ಏರ್ಪಡಿಸಿದ್ದರು. ಆಗ ನಾನು ಶಿವಮೂರ್ತಿಶಾಸ್ತ್ರಿಗಳ ವಿರುದ್ಧ (ತಾತ್ವಿಕವಾಗಿ) ಹೋರಾಡಿದವರು ನನ್ನನ್ನು ಕರೆಯುತ್ತಿದ್ದೀರಲ್ಲ ಎಂದೆ. ಅದಕ್ಕವರು ಹೇಳಿದರು- "ನೋಡಿ, ಸಂಘ ಸಂಸ್ಥೆಗಳಲ್ಲಿ ಪ್ರಾಮಾಣಿಕರಾದವರು ನಿಷ್ಠುರವಾಗಿ ವರ್ತಿಸುತ್ತಾರೆ, ಮಾತನಾಡುತ್ತಾರೆ, ಸಂಸ್ಥೆಯ ಹಿತ ಅವರಿಗೆ ಮುಖ್ಯವಾಗಿರುತ್ತೆ. ಶಾಸ್ತ್ರಿಗಳ ಕಾರ್ಯಧೋರಣೆ ನೀವು ಒಪ್ಪದಿದ್ದ ಮಾತ್ರಕ್ಕೆ ನೀವು ಅವರ ದ್ವೇಷಿಗಳೆಂದು ಭಾವಿಸಬೇಕಿಲ್ಲ. ನೀವು ಶಾಸ್ತ್ರಿಗಳನ್ನು ಅರ್ಥಮಾಡಿಕೊಂಡಷ್ಟು ಉಳಿದವರು ಅರ್ಥಮಾಡಿಕೊಂಡಿಲ್ಲ. ನಾನು ನಮ್ಮ ಮಿತ್ರರು ಶಾಸ್ತ್ರಿಗಳ ಅನೇಕ ಸದ್ಗುಣಗಳನ್ನು ಇತರರಿಗಿಂತ ಚೆನ್ನಾಗಿ ಅರಿತಿದ್ದೆವು, ಮೆಚ್ಚಿದ್ದೆವು. ಅವರ ಕನ್ನಡಾಭಿಮಾನ, ಸಾಹಿತ್ಯ ಪರಿಷತ್ತಿಗಾಗಿ ಅವರು ಶ್ರಮಿಸಿದ್ದು, ಅವರ ಕಾರ್ಯದರ್ಶಿಗಳೇ ಆ ಹುಡುಗ ನಮ್ಮ ವಿರುದ್ಧ ವಾದಿಸುತ್ತಾನೆ. ಅವನು ಪ್ರಬಂಧ ಚೆನ್ನಾಗಿ ಬರೆದಿರಬಹುದು ಆದರೆ ದತ್ತಿ ಬಹುಮಾನ ಕೊಡುವುದು ಬೇಡ" ಎಂದಾಗ, ನೋಡಿ ಪರಿಷತ್ತು ಸಾರ್ವಜನಿಕರ ಸಂಸ್ಥೆ. ಇಲ್ಲಿ ನಾವು ಕೆಲಸ ಮಾಡುವಾಗ ನಮ್ಮ ದೃಷ್ಟಿಯಲ್ಲಿ ಸರಿ ಎಂದು ಕಂಡಿದ್ದು ಉಳಿದ ಕೆಲವರ ದೃಷ್ಟಿಯಲ್ಲಿ ಬೇರೆ ಕಂಡರೆ ಅದಕ್ಕೆ ಕಾರಣವಿರುತ್ತೆ. ಉಳಿದವರ ಮೇಲೆ ನಮ್ಮ ಬಗ್ಗೆ ಮೆಚ್ಚುಗೆ ತೋರಿಸಿ ಹಿಂದೆ ಆಡಿಕೊಳ್ಳುತ್ತಾರೆ. ಈತ ನೇರವಾಗಿ ತನ್ನ ಅಭಿಪ್ರಾಯವನ್ನು ಹೇಳುತ್ತಾನೆ, ಅದು ನಮಗೆ ಹಿತವಾಗದಿರಬಹುದು. ಆ ಮಾತು ಬೇರೆ ಆತ ಪರಿಷತ್ ಅಭಿಮಾನಿ, ಕನ್ನಡ ಅಭಿಮಾನಿ, ಬುದ್ಧಿವಂತ ಕೊಡಿ ಬಹುಮಾನ ಎಂದು ತೀರ್ಮಾನಿಸಿದರು.

ಅನಂತರ ಈಚೆ ಬಂದು ನನಗೆ ಈ ಸಂಗತಿಯನ್ನು ಶಾಸ್ತ್ರಿಗಳೇ ಹೇಳಿದರು. "ಸಮಿತಿಯಲ್ಲಿ ನಿಮಗೆ ಉಳಿದವರು ವಿರೋಧಿಸಿದರು. ಆದರೆ ನಾನು ನಿಮ್ಮನ್ನು ಮೆಚ್ಚಿಕೊಂಡವನು, ನಿಮಗೆ ಕೊಡಿಸಿದ್ದೇನೆ" ಎಂದರು. ಈ ಸಂಗತಿ ನೆನಪಿಟ್ಟುಕೊಂಡ ಬಸವಾರಾಧ್ಯರು ಶಾಸ್ತ್ರಿಗಳು ನಿಮ್ಮನ್ನು ಮೆಚ್ಚಿಕೊಂಡಿದ್ದರು, ಅದಕ್ಕೇ ನೀವೇ ಮಾತಾಡಬೇಕು ಎಂದರು. ಒಬ್ಬ ವ್ಯಕ್ತಿಯ ಅಂತರಂಗದಲ್ಲಿರುವ ಸಹೃದಯತೆಯನ್ನು ಗುರುತಿಸಬಲ್ಲ ಗುಣಜ್ಞರು ಬಸವಾರಾಧ್ಯರು.

ಪರಿಷತ್ತಿನಲ್ಲಿ ಪ್ರಾರಂಭಿಸಿದ ಭಾಷಣ ಕಲಾ ತರಗತಿಗಳಲ್ಲಿ ನಾನು ವಿದ್ಯಾರ್ಥಿಯಾಗಿದ್ದೆ. ಆಗ ಹೆಮ್ಮಿಗೆ ದೇಶಿಕಾಚಾರ್ಯರು ತರಗತಿ ತೆಗೆದುಕೊಳ್ಳುತ್ತಿದ್ದರು. ಅವರ ಕನ್ನಡ, ಸಂಸ್ಕೃತ ಪಾಂಡಿತ್ಯ ಅಗಾಧ. ನಾನು ಅವರ ಪಾಠ ಕೇಳಿದ ಮೇಲೆ ಸಂಸ್ಕೃತ ವಿದ್ವಾಂಸರಾದ ಅವರಿಗೆ ಹಳಗನ್ನಡ ಪಾಂಡಿತ್ಯ ಎಷ್ಟು ಅಗಾಧವಾಗಿದೆ ಅಚ್ಚರಿ ಆಗುತ್ತದೆ ಎಂದಾಗ ಬಸವಾರಾಧ್ಯರು ನಮಗಾರಿಗೂ ಅವರ ಪಾಂಡಿತ್ಯ ಇಲ್ಲ. ಅವರು ನಮ್ಮ ಗುರುಗಳು ಹೇಳುವ ಹಾಗೆ ಹೆಮ್ಮಿಗೆ ದೇಶಿಕಾಚಾರ್ಯರು, ಅಲ್ಲಿ ನಮ್ಮೆಲ್ಲರ ಹೆಮ್ಮೆಗೆ ದೇಶಿಕಾಚಾರ್ಯರು ಎಂದಿದ್ದರು. ನಾವಿನ್ನು ನಾಲ್ಕುಜನ್ಮ ಎತ್ತಿದರೂ ಅವರ ಪಾಂಡಿತ್ಯ ನಮಗೆ ಬಾರದು ಎಂದಿದ್ದರು. ಸ್ವತಃ ತಾವೇ ವಿದ್ವಾಂಸರಾದರೂ ಬಸವಾರಾಧ್ಯರು ಅಂದು ಆಡಿದ ಮಾತು ನಿಜವಾದ ವಿದ್ವಾಂಸ ಇನ್ನೊಬ್ಬ ಶ್ರೇಷ್ಠ ವಿದ್ವಾಂಸನನ್ನು ಹೇಗೆ ಗೌರವಿಸುತ್ತಾರೆ, ತಮ್ಮ ವಿನಯವನ್ನು ಮೆರೆಯುತ್ತಾರೆ ಎಂಬುದನ್ನು ಅರಿತೆ.

ಬಸವಾರಾಧ್ಯರಲ್ಲಿ ನಾನು ಕಂಡ ಮತ್ತೊಂದು ಅಪರೂಪದ ಗುಣ ಎಂದರೆ ಇತರರ ಯೋಗ್ಯತೆಯನ್ನು ಗುರುತಿಸಿ ಅವರಿಗೆ ಅವಕಾಶಗಳನ್ನು ಕಲ್ಪಿಸುವುದು. ನಮ್ಮಲ್ಲಿ ಅನೇಕ ಸಾಹಿತಿಗಳ, ವಿದ್ವಾಂಸರ ಸ್ವಭಾವವನ್ನು ನಾನು ಬಲ್ಲೆ. ಯಾರಾದರೂ ಉಪನ್ಯಾಸಕ್ಕೆ ಅಥವಾ ಇನ್ನಾವುದೋ ಕಾರ್ಯಕ್ರಮಕ್ಕೆ ಆಹ್ವಾನಿಸಿದರೆ ತಾವು ಬರಲಾಗದಿದ್ದರೆ, ಅಥವಾ ತಮಗಿಂತ ಹೆಚ್ಚಿನ ಅರ್ಹತೆ ಇದ್ದವರಿದ್ದರೆ ಅವರ ಹೆಸರನ್ನು ಸೂಚಿಸುವುದಿಲ್ಲ. ನಾನೇ ಇನ್ನೊಂದು ದಿನ ಬರುತ್ತೇನೆ, ನಿಮ್ಮ ಕಾರ್ಯಕ್ರಮವನ್ನೇ ಆ ದಿನಕ್ಕೆ ಮುಂದೂಡಿ ಎನ್ನುತ್ತಾರೆ. ಬಸವಾರಾಧ್ಯರು ಎಂದೂ ಈ ರೀತಿ ವರ್ತಿಸಿದವರಲ್ಲ. ಅವರು ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾಗ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಅವರನ್ನು ಕಾರ್ಯಕ್ರಮಗಳಿಗೆ ಆಹ್ವಾನಿಸಲು ಬರುತ್ತಿದ್ದವರಿಗೆ ಹೇಳುತ್ತಿದ್ದ ಮಾತಿದು. "ನೋಡಿ ಈ ವಿಷಯದಲ್ಲಿ ನನಗಿಂತ ಅವರು ಹೆಚ್ಚು ತಿಳಿದವರು, ನಿಮ್ಮ ಕಾರ್ಯಕ್ರಮಕ್ಕೆ ಅವರನ್ನು ಕರೆಸಿದರೆ ಶೋಭೆ ಬರುತ್ತದೆ. ಬೇಕಾದರೆ ನಾನೇ ಅವರಿಗೆ ಒಂದು ಮಾತುಹೇಳಿ ನಿಮಗೆ ಒಪ್ಪಿಸಿಕೊಡುತ್ತೇನೆ" ಎನ್ನುತ್ತಿದ್ದರು. ತಕ್ಷಣ ಸಂಬಂಧಪಟ್ಟವರಿಗೆ ಫೋನ್‌ಮಾಡಿ ಒಪ್ಪಿಸುತ್ತಿದ್ದರು. ಕಾರ್ಯಕ್ರಮ ನಡೆಸುವವರಿಗೆ ತೊಂದರೆ ಆಗಬಾರದು ಎಂದು ಕಾಳಜಿ ವಹಿಸುತ್ತಿದ್ದರು. ಎಷ್ಟೋ ಬಾರಿ ನನಗೆ ಫೋನ್‌ಮಾಡಿ ಇಂಥವರಿಗೆ ನಿಮ್ಮ ಹೆಸರು ಹೇಳಿದ್ದೀನಿ ದಯವಿಟ್ಟು ಒಪ್ಪಿಕೊಳ್ಳಿ. ನನಗಿಂತ ನೀವು ಸಮರ್ಥರು. ಅದಕ್ಕೆ ನಾನೇ ನಿಮ್ಮನ್ನು ಸೂಚಿಸಿದ್ದೇನೆ ಎಂದು ಹೇಳುತ್ತಿದ್ದರು. ತಮ್ಮ ಇತಿಮಿತಿ ತಿಳಿದ ವಿದ್ವಾಂಸರು ಮತ್ತು ಇತರರ ಪ್ರತಿಭಾ ಸಾಮರ್ಥ್ಯಗಳನ್ನು ಪ್ರೋತ್ಸಾಹಿಸಬೇಕು ಎನ್ನುವ ವಿದ್ವಾಂಸರು ಈ ಕಾಲದಲ್ಲಿ ಅತ್ಯಲ್ಪ ಮಂದಿ. ಆ ಪೈಕಿ ಬಸವಾರಾಧ್ಯರು ಒಬ್ಬರು.

ಪರಿಷತ್ತಿನ ಕನ್ನಡ ನಿಘಂಟು ರಚನೆಯಲ್ಲಿ ಪ್ರಾರಂಭದಿಂದ ಕೊನೆಯವರೆಗೆ ಸೇವೆಸಲ್ಲಿಸಿದ ಏಕೈಕ ವಿದ್ವಾಂಸರು. ಕೇವಲ ಕಚೇರಿ ವೇಳೆಯಲ್ಲಿ ಮಾತ್ರ ಕೆಲಸಮಾಡದೆ ಪೆಟ್ರೋಲ್‌ಬಂಕ್ ಸರ್ವೀಸ್‌ನಂತೆ ಹಗಲೂ ರಾತ್ರಿ ದುಡಿದವರು, ಮನೆಯೂ ಅವರಿಗೆ ಕಚೇರಿ ಆಗಿತ್ತು. ನಿಘಂಟಿನ ಕೆಲಸವನ್ನು ಮನೆಯಲ್ಲಿಯೂ ಮಾಡುತ್ತಿದ್ದರು. ನಿಘಂಟು ಆಫೀಸು ಉಳಿದವನ ಪಾಲಿಗೆ ಒಂದು ನಿಮಗೇ ಎರಡು, ಪರಿಷತ್ತಿನಲ್ಲೊಂದು ಮನೆಯಲ್ಲೊಂದು. ಕೆಲಸ ಎರಡು ಸಂಬಳ ಒಂದು ಎನ್ನುತ್ತಿದ್ದೆ. ಅದಕ್ಕೆ ಅವರು ಹೇಳುತ್ತಿದ್ದ ಉತ್ತರ ನನಗೆ ಚೆನ್ನಾಗಿ ನೆನಪಿದೆ. ಅಯ್ಯೋ! ನಾವೇನು ಕೆಲಸಮಾಡ್ತೀವೆ. ಕೆಲಸ ಹೇಗೆ ಮಾಡಬೇಕು ಅನ್ನೋದನ್ನ ಎಆರ್‌ಕೃ, ಡಿಎಲ್‌ಎನ್, ತೀನಂಶ್ರೀ ಅವರಿಂದ ಕಲೀಬೇಕು. ಅವರ ಮುಂದೆ ನಾವೆಲ್ಲ ಬಚ್ಚಾಗಳು ಅನ್ನುತ್ತಿದ್ದರು. ನೋಡಿ ಡಿಎಲ್‌ಎನ್ ಅವರು ನಿಘಂಟು ಸಭೆಗೆ ಮೈಸೂರಿಂದ ಬರಬೇಕಾದರೆ ರೈಲಲ್ಲಿ ರಾತ್ರಿ ಗಾಡೀಲಿ ಬರುತ್ತಿದ್ದರು (ಅಕಾಲಕ್ಕೆ ರಾತ್ರಿ ರೈಲಿನಲ್ಲಿ ಅಷ್ಟು ಜನಸಂದಣಿ ಇರುತ್ತಿರಲಿಲ್ಲ) ಏಕೆಂದರೆ ನಿಘಂಟು ಕರಡುಗಳನ್ನು ತಿದ್ದಲು ಅನುಕೂಲವಾಗಿರುತ್ತಿತ್ತು ಪ್ರಯಾಣ, ಆ ರೀತಿ ದುಡಿಯುತ್ತಿದ್ದರು. ನಾನೇ ಕಂಡ ಹಾಗೆ ನಿಘಂಟು ಸಭೆ ಇದೆ ಎಂದರೆ ಸಭೆಗಾಗಿ ಕರಡು ಪ್ರತಿಗಳನ್ನು ಪರಿಶೀಲಿಸಿ ಮುಂದಿಡಲು ಹಿಂದಿನ ದಿನ ರಾತ್ರಿ ೯-೧೦ರವರೆಗೆ, ಮತ್ತೆ ಬೆಳಿಗ್ಗೆ ೭-ಆಕ್ಕೆಲ್ಲಾ ನಿಘಂಟು ಕಚೇರಿಗೆ ಹಾಜರಾಗಿ ಸಿದ್ಧತಾ ಕಾರ್ಯಗಳನ್ನು ನಡೆಸುತ್ತಿದ್ದರು. ಬಸವಾರಾಧ್ಯರಿಗೆ ದೊರೆತ ಮಾರ್ಗದರ್ಶನ ಹಾಗಿತ್ತು. ಸಭೆಗಳಿಗೆ ನಿಯತ ಕಾಲಕ್ಕೆ

ಹಾಜರಿರುವುದನ್ನು ಡಿ.ಸಿ. ಸುಬ್ಬರಾಯಪ್ಪನವರಿಂದ, ಮರಿವಿಶ್ವೇಶ್ವರಯ್ಯನವರಿಂದ ಕಲಿಯಬೇಕು ಕಣ್ರೀ. ಸರ್ಕಾರದಿಂದ ಪ್ರತಿನಿಧಿಗಳಾಗಿ ನಿಘಂಟು ಸಭೆಗೆ ಅವರು ನಿಯೋಜಿತರಾಗಿದ್ದರು. ಅವರು ಬರಲೇ ಬೇಕು ಇರಲೇಬೇಕು ಎಂಬ ನಿರ್ಬಂಧವಿರಲಿಲ್ಲ. ಆದರೂ ಅವರು ಸಕಾಲಕ್ಕೆ ಬಂದು ಇಡೀ ದಿನ ಕೊನೇಗಳಿಗೆವರೆಗೆ ಸಭೆಯಲ್ಲಿ ಇರುತ್ತಿದ್ದ ಸದಸ್ಯರು ಅವರೊಬ್ಬರೇ ಆಗಿದ್ದರು. ಊಟ, ತಿಂಡಿ, ನಿದ್ರೆಗಳನ್ನು ಕಡೆಗಣಿಸಿ ಹಗಲೂ ರಾತ್ರಿ ನಿಘಂಟಿಗಾಗಿ ದುಡಿದ ಕೆಲವೇ ವ್ಯಕ್ತಿಗಳಲ್ಲಿ ಅವರೊಬ್ಬರೇ. ಅವರ ಕಾರ್ಯ ಶ್ರದ್ಧೆಯನ್ನು ಕಣ್ಣಾರೆ ಕಂಡಿರುವ ನನಗೆ ಅದೊಂದು ಪಾಠ. ಕೃಷ್ಣಶಾಸ್ತ್ರಿಗಳು ಅಚ್ಚುಕಟ್ಟು, ಕಟ್ಟುನಿಟ್ಟು. ಕೆಲಸದಲ್ಲಿ ದ್ರೋಣಾಚಾರ್ಯರು, ಮಾತಿನಲ್ಲಿ ದೊಣ್ಣೆ ಆಚಾರ್ಯರು. ಆದರೆ ಹೃದಯದಲ್ಲಿ ಕುಸುಮಕೋಮಲರು. ತಿಂಡಿ ತೀರ್ಥಗಳ ರುಚಿ ಕಾಣಬೇಕಾದರೆ ಅದು ಕೃಷ್ಣಶಾಸ್ತ್ರಿಗಳಿಂದ ಸರ್ಭೆಯಲ್ಲಿ ಎನ್ನುತ್ತಿದ್ದರು. ನಾನು ಅವರ ಗರಡಿಯಲ್ಲಿ ನಿಘಂಟು ಕೆಲಸದಲ್ಲಿ ಕಲಿತ ಪಾಠ ಬಹಳ ಎನ್ನುತ್ತಿದ್ದರು. ಡಿಎಲ್‌ಎನ್, ತೀನಂಶ್ರೀ ಅಂತು ಬಸವಾರಾಧ್ಯರಿಗೆ ಅಂತರಂಗಪ್ರಾಣ. ವಿರುದ್ಧನಿಯೇ ಇಲ್ಲದ, ಬದಲಾವಣೆ ಇಲ್ಲದ ವೇಷಭೂಷಣದ ಆಪ್ತಮಿತ್ರ ವರ್ಗದಲ್ಲಿ ಮಾತ್ರ ಸಿಗರೇಟು ಸೇವಿಸುವ ಕಾಫಿಯಂತು ಇದ್ದದ್ದೆ. ಬಸವಾರಾಧ್ಯರು ನ್ಯಾಯನಿಷ್ಠುರಿಗಳು ಅನ್ಯಾಯ ಸಹಿಸದವರು. ಎಷ್ಟೋ ಸಂದರ್ಭಗಳಲ್ಲಿ ಸೌಮ್ಯವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದ ಅವರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅವರ ಸ್ಥಾನಕ್ಕೆ ಅನ್ಯಾಯವಾದಾಗ ನ್ಯಾಯಕ್ಕಾಗಿ ಹೋರಾಡಿದವರು. ಯಾವತ್ತೂ ಹೋರಾಟಕ್ಕೆ ಇಳಿಯದವರು ಈ ವಿಷಯದಲ್ಲಿ ಹೋಗ್ಲಿಬಿಡಿ ನೀತಿ ಅನುಸರಿಸಲಿಲ್ಲವಲ್ಲಾ ಎಂದು ಕೇಳಿದ್ದಕ್ಕೆ ಅವರು ಹೇಳಿದ ಮಾತು "ಮನುಷ್ಯನ ಸಹನೆಗೂ ಮಿತಿ ಇರುತ್ತೆ ಅಶ್ವತ್ಥ್‌ನಾರಾಯಣ್, ತೀರಾ ಅನ್ಯಾಯವಾದಾಗ ಸುಮ್ಮನೆ ಕೂಡಬಾರದು. ಏಕೆಂದರೆ ನಾಳೆ ಇವರ ಅನ್ಯಾಯಕೃತ್ಯದಿಂದ ಉಳಿದವರಿಗೆ ಅನ್ಯಾಯ ಆಗಬಾರದು ಎಂಬ ಕಾರಣಕ್ಕೆ ಹೋರಾಟಕ್ಕೆ ಇಳಿದೆ. ದುರಭಿಮಾನ ಇರಬಾರದು ಆದರೆ ಆತ್ಮಾಭಿಮಾನ ಕಳೆದುಕೊಳ್ಳಬಾರದು ಅಲ್ಲವೇ ಅದಕ್ಕಾಗಿ ಹೋರಾಡಿದೆ" ಎಂದರು. ಅವರು ಆ ಹೋರಾಟದಲ್ಲಿ ಯಶಸ್ವಿ ಆದರು. ಅವರಿಗಾದ ಜಯ ಸತ್ಯಕ್ಕೆ ದೊರೆತ ಜಯವಾಗಿತ್ತು.

ಕೆಲವೊಮ್ಮೆ ಅವರು ಕಟುವಾಗಿ ಮಾತಾಡಬೇಕಿತ್ತು, ಗಟ್ಟಿ ನಿರ್ಧಾರ ಕೈಗೊಳ್ಳಬೇಕಿತ್ತು ಅಂತ ನನಗನ್ನಿಸಿದೆ. ನಾನು ಆ ಮಾತು ಹೇಳಿದಾಗ ಈ ವಿಷಯದಲ್ಲಿ ನೀವು ಜೋರಾಗಿ ಇರಬೇಕಿತ್ತು ಸಾರ್ ಎಂದಾಗ ಅವರು ಹೇಳಿದ ಮಾತು "ನಾನು ಅಧ್ಯಕ್ಷನಾಗಿ ಜಬರ್ದಸ್ತಿನಿಂದ ಜೋರಾಗಿ ವರ್ತಿಸುವುದು, ಕಟುವಾಗಿ ಮಾತಾಡಿ ಕೆಲಸಮಾಡಿಸುವುದು ದೊಡ್ಡದಲ್ಲ. ಆದರೆ ಸಂಸ್ಥೆಯ ಅಧ್ಯಕ್ಷನಾದವನು ಇಂದೇನು ಕೆಲಸ ಮಾಡಿದ ಎಂಬುದು ಮುಖ್ಯವಲ್ಲ. ಈವತ್ತು ಮಾಡಿದ ಕೆಲಸ, ನಡೆದುಕೊಂಡ ರೀತಿ ನಾಳೆ ಉಳಿದವರಿಗೆ ಮಾದರಿ ಆಗಬೇಕು, ಆಡಿಕೊಳ್ಳುವಂತೆ ಆಗಬಾರದು, ಕೆಟ್ಟ ನಿದರ್ಶನವಾಗಬಾರದು ಎನ್ನುತ್ತಿದ್ದರು. ಈ ರೀತಿ ಧೋರಣೆಯಿಂದಲೇ ಅವರು ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸದ್ದಿಲ್ಲದೆ ಕೆಲಸ ಮಾಡಿ ಕೈಲಾದಷ್ಟು ಸೇವೆಸಲ್ಲಿಸಿ ಸಂಸ್ಥೆ ಸಾಕಷ್ಟು ಪ್ರಗತಿ ಹೊಂದಲು ನೆರವಾದರು. ಯಾವುದೇ ಪ್ರಶಸ್ತಿಗಳಿಗೆ ಬಾಯಿಬಿಡದೆ ಕೇವಲ ಸಾಹಿತಿಗಳನ್ನು, ವಿದ್ವಾಂಸರನ್ನು ಗೌರವಿಸಿ ಅವರ ಪ್ರೀತಿಪಾತ್ರರಾದ ಬಸವಾರಾಧ್ಯರು ಈವತ್ತು ನಮ್ಮಲ್ಲಿ ಅನೇಕರಿಗೆ ಆತ್ಮೀಯರಾಗಿದ್ದಾರೆ, ಆದರ್ಶವಾಗಿದ್ದಾರೆ. ನೆನೆದವರ ಮನಕ್ಕೆ ಸಂತೋಷ ತರುವವರಾಗಿದ್ದಾರೆ. ಸದಾ ಸಂಶೋಧನೆಯಲ್ಲಿ ತೊಡಗಿರುವ ಅವರಿಂದ ಹಲವಾರು ಕೃತಿಗಳು ಅಪೂರ್ಣವಾದವು ಪೂರ್ಣವಾಗಿ ಹೊರಬರಲಿ. ಎಲ್ಲಕ್ಕಿಂತ ಹೆಚ್ಚಾಗಿ ಅವರ ಲೇಖನಗಳ ಸಂಗ್ರಹ ಸಂಘಟನೆ ಕನ್ನಡಕ್ಕೆ ಒಳ್ಳೆಯ ಕೊಡುಗೆ ಆಗುತ್ತಿದೆ. ಆ ಕಾರ್ಯ ಶೀಘ್ರವಾಗಿ ಆಗಲಿ. ಹಳಗನ್ನಡ ನಿಘಂಟುಗಳು ಮರುಮುದ್ರಣವಾಗಬೇಕು, ಕನ್ನಡಕ್ಕೆ ವಿಶಿಷ್ಟ ಕೊಡುಗೆ ಆಗಿದೆ ಆ ಗ್ರಂಥ.

ವೇಷಭೂಷಣ, ಮಾತುಕತೆ, ಸ್ವಭಾವ, ನಡತೆ, ಸಹಾಯ ಮನೋಭಾವ, ಸ್ನೇಹಿತರಲ್ಲಿ ಪರಿಚಯಸ್ಥರಲ್ಲಿ ಒಂದೇ ರೀತಿಯ ಆತ್ಮೀಯ ವರ್ತನೆ, ಸರಳ ನಡೆನುಡಿಯನ್ನು ಅರ್ಧಶತಮಾನವಾದರೂ ಕಿಂಚಿತ್ತು ಬದಲಾಗದ ಅಪರೂಪದ ವಿನಯಶೀಲ ವಿದ್ವಾಂಸ ಬಸವಾರಾಧ್ಯರು. ಅವರ ಸ್ನೇಹಭಾಗ್ಯ ನೆನೆದಾಗಲೆಲ್ಲ ನಾನು ಧನ್ಯ ಎಂದುಕೊಳ್ಳುತ್ತೇನೆ.

XXX

ಸರಸ ಮಾತುಗಳ ಸೂಜಿಗಲ್ಲು

-ಡಾ. ಸೋಮಶೇಖರಗೌಡ

ಪ್ರೊ. ಎನ್. ಬಸವಾರಾಧ್ಯ ಅವರನ್ನು ನಾನು ಕಂಡ ಬಗೆ ನೆನಪಿನಲ್ಲಿ ದಾಖಲಾಗಿಲ್ಲ. ೧೯೭೧ರಲ್ಲಿ ಸ್ನಾತಕೋತ್ತರ ಭಾಷಾ ವಿಜ್ಞಾನ ವಿದ್ಯಾರ್ಥಿಯಾಗಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವೇಶ ಪಡೆದೆ. ಆಗ ಹಾಮಾನಾ ಅದರ ನಿರ್ದೇಶಕರು. ಪ್ರತಿದಿನವೂ ತರಗತಿಗೆ ಹೋಗುವಾಗ ಇನ್ನೊಬ್ಬ ನಿರ್ದೇಶಕರ ನಾಮಫಲಕ ನನಗೆ ಎದುರಾಗುತ್ತಿತ್ತು. ಅದು ಉಪ ನಿರ್ದೇಶಕರದು. ಬಸವಾರಾಧ್ಯ ಅವರು ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿದ್ದರು. ದಿನವೂ ಅವರ ಹೆಸರನ್ನು ಓದುತ್ತಿದ್ದ ನನಗೆ ಅವರ ಪರಿಚಯವೇ ಆಗಲಿಲ್ಲ ಎಂ.ಎ. ಮುಗಿಸುವವರೆಗೂ. ಏಕೆಂದರೆ, ಆಗ ಅವರು ಸಂಸ್ಥೆಯ ವೇದಿಕೆಯ ಮೇಲೆ ಭಾಷಾಣಕಾರರಾಗಿ ವಿಜೃಂಭಿಸಿದ್ದಿಲ್ಲ. ಇನ್ನೂ ಹೇಳಬೇಕೆಂದರೆ, ಸದಾ ತೆರೆದಿರುತ್ತಿದ್ದ ಅವರ ಕೊಠಡಿಯಲ್ಲಿ ಅವರ ಮುಖ ಮಾತ್ರ ಕಂಡಿದ್ದಿಲ್ಲ. ಆಗೊಮ್ಮೆ ಈಗೊಮ್ಮೆ ಅವರ ದನಿ, ನಗು ಕೇಳಿಸುತ್ತಿದ್ದದ್ದು ಉಂಟು. ಬಹಳ ಜನ ಅವರ ಕೊಠಡಿಗೆ ಹೋಗಿ ಬರುತ್ತಿದ್ದುದನ್ನು ನಾನು ನೋಡುತ್ತಿದ್ದೆ. ಅವರನ್ನೆಲ್ಲ ಹಾರ್ದಿಕವಾಗಿ ಅವರು ನಡೆಸಿಕೊಳ್ಳುತ್ತಿದ್ದರು. ವಿದ್ಯಾರ್ಥಿಯಾದ ನನಗೆ ಮಾತ್ರ ಅಂತಹ ಅವಕಾಶ ಕಲ್ಪಿತವಾಗಲೇ ಇಲ್ಲ.

೧೯೭೩ರಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಸಂಸ್ಥೆಯಲ್ಲಿ ಮರುಪ್ರವೇಶ ಪಡೆದೆ. ಆಗ ನನಗೆ ಕೂರಲು ಸಂಪಾದನಾ ವಿಭಾಗಕ್ಕೆ ಸೇರಿದ ಕೊಠಡಿಯೊಂದರಲ್ಲಿ ಸ್ಥಳಾವಕಾಶವಾಯಿತು. ನನ್ನೊಡನೆ ಮಿತ್ರ ಕೆ.ಜಿ. ನಾರಾಯಣ ಪ್ರಸಾದ್ ಕೂಡ ಇದ್ದರು. ಒಂದು ದಿನ ತಮ್ಮ ವಿಭಾಗ ಸಹೋದ್ಯೋಗಿಯೊಬ್ಬರ ಬಳಿಗೆ ಕಾರ್ಯಕಾರಣ ನಿಮಿತ್ತ ಬಂದ ಆರಾಧ್ಯರು ಅವರ ವಿಭಾಗದ ಕೊಠಡಿಯಲ್ಲಿ ಕುಳಿತಿದ್ದ ನಮ್ಮಿಬ್ಬರನ್ನು ನೋಡಿ ಹುಬ್ಬೇರಿಸಿದರು. ಜೊತೆಗೆ ಪ್ರೀತಿಯಿಂದ ವಿಚಾರಿಸಿದರು. ಬಹುಶಃ ಅವರೊಡನೆ ಮಾತನಾಡಿದ ಮೊದಲ ಸಂದರ್ಭ ಅದೇ ಆಗಿರಬಹುದು. ಅಲ್ಲಿಂದ ಮುಂದೆ ಆಗಾಗ ಅವರನ್ನು ನೋಡುವುದು, ಮಾತಾಡಿಸುವುದು ನನಗೆ ಸಾಧ್ಯವಾಯಿತು. ಹ.ಕ. ರಾಜೇಗೌಡರು, ಜಿ.ಜಿ. ಮಂಜುನಾಥನ್ ಅವರು, ಕೆ.ಆರ್. ಶೇಷಗಿರಿ

ಅವರು ನಮ್ಮ ಕೊಠಡಿಯ ಆಜುಬಾಜುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಅವರೊಡನೆ ಸಂಪಾದನಾ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲು, ಮಾರ್ಗದರ್ಶನ ನೀಡಲು, ಸೂಚನೆ ಕೊಡಲು ಆಗಾಗ ಅವರೇ ತಮ್ಮ ಕೊಠಡಿಯಿಂದ ಎದ್ದು ಬರುತ್ತಿದ್ದರು. ಆಗೆಲ್ಲ ಅನಾಯಾಸವಾಗಿ ಅವರ ದರ್ಶನ ನನಗಾಗುತ್ತಿತ್ತು.

ನನ್ನ ಮಡದಿ ಡಾ. ಪದ್ಮಾಶೇಖರ್ ಕಾರಣದಿಂದಾಗಿ ಬಸವಾರಾಧ್ಯರು ನನಗೆ ಹೆಚ್ಚು ಆಪ್ತರಾದರು. ನನ್ನವಳನ್ನು ಕಂಡಕೂಡಲೆ ತೆಲುಗಿನಲ್ಲಿ ಕುಶಲೋಪರಿ ಆರಂಭಿಸುತ್ತಿದ್ದ ಆರಾಧ್ಯರು ತಮ್ಮ ಮಾತುಗಳಲ್ಲಿ ಒಂದು ಬಗೆಯ ನಿಷ್ಕಪಟ ಕಕ್ಕುಲತೆಯನ್ನು ವ್ಯಕ್ತಪಡಿಸುತ್ತಿದ್ದರು. ಬದುಕಿನಲ್ಲಿ ಭದ್ರನೆಲೆ ಕಾಣದೆ ಬಳಲುತ್ತಿದ್ದ ಸಂದರ್ಭದಲ್ಲಿ ಬಸವಾರಾಧ್ಯ ಅವರ ಭರವಸೆ ತುಂಬುವ ಮಾತುಗಳು ಜೊತೆಗೆ ನೀಡಿದ ಪ್ರೋತ್ಸಾಹ ನೆನಪಿಸಿಕೊಳ್ಳುವಂಥವು. ಆ ಕಾಲದಲ್ಲಿ ಅಧ್ಯಯನ ಸಂಸ್ಥೆಯ ಎಲ್ಲ ಹಿರಿಯರಲ್ಲಿ ಒಂದು ಬಗೆಯ ಶಿಸ್ತು, ಪ್ರಾಮಾಣಿಕತೆ, ಕೆಲಸದಲ್ಲಿ ಶ್ರದ್ಧೆ, ನಡೆನುಡಿಗಳಲ್ಲಿ ಸ್ನಿಗ್ಧತೆ ಎದ್ದು ಕಾಣುತ್ತಿತ್ತು. ಬಸವಾರಾಧ್ಯರು ಕೂಡ ಇದಕ್ಕೆ ಹೊರತಾಗಿರಲಿಲ್ಲ. ಹಾಮಾನಾ ಕೂಡ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಊಟಕ್ಕೆಂದು ಮನೆಗೆ ಹೋಗಿ ಬರುತ್ತಿದ್ದರು. ಆದರೆ ಆರಾಧ್ಯರು ಬರುವಾಗಲೇ ಬುತ್ತಿ ತರುತ್ತಿದ್ದರು. ಇಲ್ಲವೇ ಅವರಲ್ಲಿಗೇ ಮಧ್ಯಾಹ್ನದ ಸುಗ್ರಾಸ ಭೋಜನ ಆಗಮಿಸುತ್ತಿತ್ತು. ಅದಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಿಕೊಂಡಿದ್ದರು. ಅಂತಹ ಎಷ್ಟೋ ಊಟದ ಬುತ್ತಿಯನ್ನು ನಾವೂ ಸವಿದಿದ್ದೇವೆ. ಅದರಲ್ಲೂ ಅವರು ತರಿಸುತ್ತಿದ್ದ ನೀರುಮಜ್ಜಿಗೆಗೆ ಅದರದೇ ಆದ ಗತ್ತು ಮತ್ತು ಗಮ್ಮತ್ತು ಇರುತ್ತಿತ್ತು. ನಾವು ಅವರ ಊಟದಲ್ಲಿ ಭಾಗಿಗಳಾಗದಿದ್ದಾಗಲೂ ನೀರುಮಜ್ಜಿಗೆಯ ಸಮಾರಾಧನೆ ನಮಗೆ ಇದ್ದೇ ಇರುತ್ತಿತ್ತು.

ಸನ್ಮಾನ್ಯ ಬಸವಾರಾಧ್ಯರನ್ನು ಅನೇಕ ಬಗೆಯ ಉಡುಗೆ ತೊಡುಗೆಗಳಲ್ಲಿ ನಾನು ನೋಡಿದ್ದೇನೆ. ಸೂಟ್ ಧರಿಸುವುದಿರಲಿ, ಟ್ರೆಡಿಷನಲ್ ಜುಬ್ಬ ಕಚ್ಚೆ ಹಾಕಿಕೊಳ್ಳುವುದಿರಲಿ, ಎಲ್ಲದರಲ್ಲೂ ಅವರದು ಒಪ್ಪ ಓರಣ. ಸದಾ ಶೇವ್‌ಮಾಡಿದ ಮಿರಿ ಮಿರಿ ಮಿಂಚುವ ಮುಖ, ತಿದ್ದಿ ತೀಡಿದ ಕ್ರಾಪು, ಪುಟ್ಟ ಚುರುಕು ಕಣ್ಣುಗಳು, ನೀಳ ನಾಸಿಕ, ಚಾಪ್ಲಿನ್ ಮೀಸೆ. ಇವೆಲ್ಲಕ್ಕಾಗಿ ಮೀರಿದ ಭೂಷಣ ಪ್ರಾಯವಾದ ಸರಸ ಮಾತುಗಾರಿಕೆ ಎಂಥವರನ್ನು ಅವರ ಕಡೆಗೆ ಸೂಜಿಗಲ್ಲಿನಂತೆ ಸೆಳೆದು ಬಿಡುತ್ತಿದ್ದವು. ಅದ್ಭುತ ಭಾಷಣಕಾರರಾಗಿಯೇನೂ ಹೆಸರು ಮಾಡಿದವರಲ್ಲ ಆರಾಧ್ಯರು. ಆದರೆ ಅವರ ಮಾತುಗಾರಿಕೆಯಲ್ಲಿ ಇರುತ್ತಿದ್ದ ಮೊನಚು, ವ್ಯಂಗ್ಯ, ಧ್ವನಿ, ಸತ್ಯ, ವಸ್ತುನಿಷ್ಠತೆ ಇವುಗಳು ಮಾತ್ರ ಕೇಳುಗರಿಗೆಲ್ಲ ಇಷ್ಟವಾಗುತ್ತಿದ್ದವು. ಒಮ್ಮೆ ಹೀಗಾಯಿತು. ಹಿರಿಯ ಲೇಖಕಿಯೊಬ್ಬರು ಸ್ತ್ರೀಪರ ಕಾಳಜಿಯನ್ನು ವ್ಯಕ್ತಪಡಿಸಿ ಸೊಗಸಾಗಿ ವೇದಿಕೆಯ ಭಾಷಣ ಮಾಡಿದರು. ಅದರ ಅಧ್ಯಕ್ಷತೆಯನ್ನು ಸನ್ಮಾನ್ಯರಾದ ಬಸವಾರಾಧ್ಯರು ವಹಿಸಿದ್ದರು. ಅಧ್ಯಕ್ಷರ ಭಾಷಣದಲ್ಲಿ ಆ ಲೇಖಕಿ ಪ್ರಸ್ತಾಪಿಸಿದ್ದ ಎಲ್ಲ ವಿಷಯಗಳನ್ನು ಆರಾಧ್ಯರು ಕೂಲಂಕಷವಾಗಿ ವಿವೇಚಿಸಿದರು. ಸ್ತ್ರೀವಾದದ ಪ್ರಸ್ತುತತೆ ಮತ್ತು ಅದು ಚಲಿಸಬೇಕಾದ ದಿಕ್ಕನ್ನು ಬೆರಳು ಮಾಡಿ ತೋರಿಸಿದರು. ಪ್ರಸಕ್ತ ಸಂದರ್ಭದಲ್ಲಿ ಸಾಮಾಜಿಕವಾಗಿ ವಿಜೃಂಭಿಸುತ್ತಿರುವ ಸಮಸ್ಯೆಗಳತ್ತ ಗಮನಹರಿಸಲು ಹೇಳಿ, ಇನ್ನಾದರೂ ಸ್ತ್ರೀವಾದಿಗಳು ಸೀತೆ, ದ್ರೌಪದಿಯರ ಬೆನ್ನುಹತ್ತುವುದನ್ನು ನಿಲ್ಲಿಸಿ ಎಂದು ತಿಳಿಯ ಹೇಳಿದರು. ಇದು ಆರಾಧ್ಯರ ನಿಷ್ಠುರ ನಿಷ್ಪಕ್ಷಪಾತ ಧೋರಣೆಗೆ ಸಾಕ್ಷಿ.

ಬಸವಾರಾಧ್ಯರು ಸಂಭಾಷಣೆಯಲ್ಲಾಗಲಿ, ಭಾಷಣದಲ್ಲಾಗಲೀ ಎಂದೂ ತಮ್ಮ ಸ್ವೋಪಜ್ಞತೆಯನ್ನು ಬಿಟ್ಟುಕೊಟ್ಟವರಲ್ಲ. ಎಷ್ಟೋ ವೇಳೆ ಅವರ ಮಾತುಗಳು ವಸ್ತು ಸ್ಥಿತಿಗೆ ಕನ್ನಡಿ ಹಿಡಿದಂತಹವಾಗಿರುತ್ತವೆ. ಅದೊಂದು ಪ್ರಶಸ್ತಿ ಪ್ರದಾನ ಸಮಾರಂಭ. ಹಿರಿಯ ಲೇಖಕರೊಬ್ಬರಿಗೆ ಶಾಲುಹೊದಿಸಿ ಸನ್ಮಾನ ಮಾಡಿ ಗೌರವಿಸಿದವರು ಬಸವಾರಾಧ್ಯರೇ. ಸಮಾರಂಭ ಮುಗಿದು ಎಲ್ಲರೂ ಉಪಾಹಾರದತ್ತ ಧಾವಿಸಿದ್ದರು. ಸ್ವಲ್ಪ ಆರೋಗ್ಯ ಸರಿಇರದಿದ್ದ ನಾನು ಆ ಕಡೆ ಹೋಗದೆ ಒಬ್ಬರೇ ನಿಂತು ಸಿಗರೇಟು ಹಚ್ಚಿದ್ದ ಬಸವಾರಾಧ್ಯರ ಬಳಿ ಹೋಗಿ "ಸರ್. ಬಹಳ ಒಳ್ಳೆ ಕೆಲಸ ಮಾಡಿದಿರಿ. ಪಾಪ ಎಷ್ಟೊಂದು ಕೆಲಸಮಾಡಿರುವ ಈ ಲೇಖಕರನ್ನು ಯಾರೂ ಗುರುತಿಸಿ ಸನ್ಮಾನಿಸಿರಲಿಲ್ಲ. ನಿಮಗೆ ಇವರು ಕೃತಜ್ಞರಾಗಿರಬೇಕು" ಎಂದೆ. ಅದಕ್ಕೆ ಕೂಡಲೇ ಆರಾಧ್ಯರು "ಅವರಲ್ಲರೀ, ನಾವು ಅವರಿಗೆ ಕೃತಜ್ಞರಾಗಿರಬೇಕು" ಎಂದರು. ನನಗೆ ಆಶ್ಚರ್ಯವಾಯಿತು. ನನ್ನ ಮುಖದ ಚಹರೆ ಗಮನಿಸಿ ಅವರೇ ಮಾತು ಮುಂದುವರಿಸುತ್ತ "ನೋಡಿ, ನಾವು ಇಂದು ಕೊಟ್ಟ ಈ ಪ್ರಶಸ್ತಿಯನ್ನು ಅವರು ಒಪ್ಪಿ ಸ್ವೀಕರಿಸಿದರಲ್ಲ ಅದರಿಂದ ನಾವು ಕೃತಾರ್ಥರಾಗಿದ್ದೇವೆ. ಇಲ್ಲದೇ ಹೋಗಿದ್ದರೆ, ಈಗಾಗಲೇ ನಾಲ್ಕಾರು ಜನ ತಿರಸ್ಕರಿಸಿದ್ದ ಈ ಬರೀ ಪ್ರಶಸ್ತಿಯನ್ನು, ದುಡ್ಡಿಲ್ಲ ಕಾಸಿಲ್ಲ, ಯಾರ ತಲೆಗೆ ಕಟ್ಟುವುದು ಎಂಬುದೇ ನಮಗೆ ದೊಡ್ಡ ಸಮಸ್ಯೆಯಾಗಿತ್ತು.

ಕೊನೆಗೂ ಅರ್ಹರೊಬ್ಬರು ಸಿಕ್ಕು ಸ್ವೀಕರಿಸಿದ್ದು ದೊಡ್ಡ ಸಮಾಧಾನದ ಸಂಗತಿ" ಎಂದರು. ಇದು ಬಸವಾರಾಧ್ಯರು ಅನೌಪಚಾರಿಕ ಮಾತುಗಳಲ್ಲಿ ಕೂಡ ಅನುರಣಿಸುವ ವಸ್ತುಸ್ಥಿತಿ ವಿಡಂಬನೆ.

ಪ್ರೊ. ಬಸವಾರಾಧ್ಯರಲ್ಲಿ ನಾನು ಮೆಚ್ಚುವ ಅತ್ಯಂತ ಪ್ರಮುಖ ಗುಣ ಎಂದರೆ ಅವರ ನಿರ್ಲಿಪ್ತತೆ. ಪರಿಷತ್ತಿನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ, ಎಂತೆಂತಹ ಗೌಜು ಗದ್ದಲಗಳನ್ನು ಅವರು ಸುಲಲಿತವಾಗಿ ನಿಭಾಯಿಸಲು ಸಾಧ್ಯವಾದದ್ದು ಈ ಗುಣದಿಂದಲೆ. 'ನಾವು ಇಲ್ಲದಿದ್ರೆ ಪ್ರಪಂಚ ಏನೂ ಮುಳುಗಿ ಹೋಗೋದಿಲ್ಲ' ಎನ್ನುವ ಅವರ ಧೋರಣೆ ಅನುಕರಣೀಯವಾದುದು. ಎಲ್ಲದಕ್ಕೂ ನಾನು, ನನ್ನದು ಎನ್ನುವವರ ನಡುವೆ ಆರಾಧ್ಯರು ತಮ್ಮ ನಿರ್ಲಿಪ್ತತೆಯಿಂದ ಆಪ್ತರಾಗುತ್ತಾರೆ. ಅಗತ್ಯ ಔಚಿತ್ಯ ಅರಿತು ಆರಾಧ್ಯರು ನೆರವಿಗೆ ಮುಂದಾಗುತ್ತಾರೆ. ತಮ್ಮಿಂದಾಗುವ ಸಹಾಯಕ್ಕೆ ಅವರೆಂದೂ ಮೀನ ಮೇಷ ಎಣಿಸುವವರಲ್ಲ. ಕಾನೂನು ಕಟ್ಟಲೆಗಳಿಗೆ ಸೊಪ್ಪು ಹಾಕುವವರಲ್ಲ. ಸೋಮಾರಿಗಳನೆಂದೂ ಸಹಿಸದ ಇವರು ಅಂತಹವರನ್ನು ತಿದ್ದಲು ಕಟುವಾದ ಮಾರ್ಗಗಳನ್ನು ಅನುಸರಿಸಿದ್ದು, ವಿವರಣೆ ಕೇಳಿದ್ದು, ನೋಟೀಸು ಜಾರಿಮಾಡಿದ್ದು ಇಂಥ ಪ್ರಸಂಗಗಳು ಅವರ ಸೇವಾವಧಿಯಲ್ಲಿ ಜರುಗಿವೆ. ಹಾಗೆಯೇ ಸಹೋದ್ಯೋಗಿಗಳನ್ನು ಸಂರಕ್ಷಿಸುವಲ್ಲೂ ಅವರು ಎದೆಸೆಟಸಿ ನಿಂತಿದ್ದಾರೆ. ಜಾತಿ, ವರ್ಗ, ವರ್ಣ, ಲಿಂಗ ತಾರತಮ್ಯಗಳನ್ನೆಂದೂ ಪೋಷಿಸದ ಆರಾಧ್ಯರು ಸದಾ ಗುಣಗ್ರಾಹಿಗಳು. ಅವರ ಸ್ನೇಹ ಅಕಳಂಕ ಪ್ರೀತಿಯಿಂದ ಕೂಡಿದ್ದು. ಪ್ರೊ. ಎಚ್.ಆರ್. ದಾಸೇಗೌಡರು, ದಿವಂಗತ ಪ್ರೊ. ಕೆ.ಎಸ್. ಬೋರೇಗೌಡರು ಮತ್ತು ಆರಾಧ್ಯರ ಸ್ನೇಹದ ಗಾಢತೆ ಉಲ್ಲೇಖಿಸಲೇ ಬೇಕಾದ್ದು.

ಇನ್ನು ಬಸವಾರಾಧ್ಯರ ಸಾಹಿತ್ಯಕ ಸೇವೆ ವಿದ್ವತ್ ಪ್ರಪಂಚದ ಎಲ್ಲರಿಗೂ ಪರಿಚಿತ. ನಮ್ಮ ನಡುವಣ ಹಳೆಯ ತಲೆಮಾರಿನ ಪ್ರಮುಖ ಸ್ನೇಹಸೇತು ಇವರು. ಹಳಗನ್ನಡ ಕೃತಿಗಳನ್ನು ಸಂಪಾದಿಸುವ ಪರಿಯನ್ನು ಪರಿಚಯಿಸಿದ ರೂಪಶಿಲ್ಪಿ ಇವರು. ನಿಘಂಟುರಚನಾ ಕ್ಷೇತ್ರದ ಧ್ರುವತಾರೆ. ಸದಾ ನಿಘಂಟುಗಳ ನಡುವೆ ಹುದುಗಿ ಹೋಗುತ್ತಿದ್ದ ಇವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಿರಿಗೆ ಸ್ಪರ್ಧಾಳು ಎಂದಾಗ ನಾನು ನಂಬಲೇ ಇಲ್ಲ. ಆ ಸಂಬಂಧದಲ್ಲಿ ನಮ್ಮ ಮನೆಗೇ ಅವರು ಬಂದಾಗ ಅದು ಖಾತರಿಯಾಯಿತು. ಸ್ಪರ್ಧೆಯಲ್ಲಿ ಜಯಶೀಲರಾಗುವ ಮೂಲಕ ಏಕಕಾಲಕ್ಕೆ ಅವರು ತಮ್ಮ ಜನಪ್ರಿಯತೆ ಮತ್ತು ಕರ್ತೃತ್ವಶಕ್ತಿಯನ್ನು ಸಾಬೀತು ಪಡಿಸಿದರು. ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ ಬಗೆ ಈಗಾಗಲೇ ಸಾಹಿತ್ಯ ಪರಿಷತ್ತಿನ ಇತಿಹಾಸದ ಒಂದು ಭಾಗವಾಗಿದೆ.

ಅನೇಕ ಸಂಘಸಂಸ್ಥೆಗಳಲ್ಲಿ, ಸಾಂಸ್ಕೃತಿಕ ಸಂಘಟನೆಗಳಲ್ಲಿ, ಪ್ರತಿಷ್ಠಾನಗಳಲ್ಲಿ ತಮ್ಮನ್ನು ಇಂದಿಗೂ ತೊಡಗಿಸಿಕೊಂಡಿರುವ ಆರಾಧ್ಯರು ತಮ್ಮ ಸಾಮಾಜಿಕ ಬದ್ಧತೆಗೆ, ಕಳಕಳಿಗೆ ಹೆಸರಾಗಿದ್ದಾರೆ. ಇವರ ಪ್ರಾಮಾಣಿಕತೆ, ದಕ್ಷತೆ, ಮಾನವೀಯತೆ ಮತ್ತು ಕಾರ್ಯತತ್ಪರತೆಗಳು ಸಂಘಟನಾ ಚಟುವಟಿಕೆಗಳಲ್ಲಿ ನಿರಂತರ ಪ್ರಕಟಗೊಳ್ಳುತ್ತಲೇ ಇವೆ. ಹೀಗಾಗಿ ಬೆಲ್ಲಕ್ಕೆ ಮುತ್ತುವ ಇರುವೆಯಂತೆ ಎಲ್ಲ ವರ್ಗಗಳ ಜನರು ಬಸವಾರಾಧ್ಯರ ಬಳಿಗೆ ಬರುತ್ತಾರೆ.

ಪ್ರೊ. ಬಸವಾರಾಧ್ಯರ ಸಾರ್ಥಕ ಸೇವೆಯನ್ನು ಕನ್ನಡಿಗರು, ಕರ್ನಾಟಕ ಸರಕಾರ ಹಾಗೂ ಸಂಘಸಂಸ್ಥೆಗಳು ಅಭಿಮಾನದಿಂದ ಕಂಡು ಪ್ರಶಸ್ತಿ, ಬಹುಮಾನಗಳನ್ನಿತ್ತು ಸನ್ಮಾನಿಸಿವೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದೇವರಾಜ ಬಹದ್ದೂರ್ ಸಾಹಿತ್ಯ ಪ್ರಶಸ್ತಿ, ಸಂಶೋಧಕ ಶಿವರತ್ನ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಮುಂತಾದುವುಗಳಿಂದ ಮಾನ್ಯರಾಗಿದ್ದಾರೆ. ಇಂತಹ ಒಬ್ಬ ಸುಸಂಸ್ಕೃತ, ಸಜ್ಜನ, ಬಹುಮುಖ ಪ್ರತಿಭೆಯ ಅಪರೂಪ ವ್ಯಕ್ತಿತ್ವದ ಪ್ರೊ. ಎನ್. ಬಸವಾರಾಧ್ಯ ಅವರನ್ನು, ಅವರಿಗೆ ೭೫ ವಸಂತಗಳು ತುಂಬುವ ಸಂದರ್ಭದಲ್ಲಿ ಅಭಿನಂದಿಸಲು, ಗೌರವಿಸಲು, ಸನ್ಮಾನಿಸಲು ತೀರ್ಮಾನಿಸಿ ಕಾರ್ಯೋನ್ಮುಖರಾಗಿರುವ ಅಭಿನಂದಿನ ಸಮಿತಿಯ ಗೌರವಾಧ್ಯಕ್ಷರಾದ ಪ್ರೊ. ಎಚ್.ಆರ್. ದಾಸೇಗೌಡರಿಗೆ ಮತ್ತು ಅವರ ಎಲ್ಲ ಒಡನಾಡಿಗಳಿಗೆ ಕನ್ನಡಿಗರು ಋಣಿಗಳು. ಪ್ರೊ. ಬಸವಾರಾಧ್ಯರು ಶತಾಯುಷಿಗಳಾಗಿ ಕನ್ನಡ ನಾಡು-ನುಡಿಗೆ ನಿರಂತರ ಅವರ ಸೇವೆ ಸಲ್ಲುವಂತಾಗಲಿ ಎಂಬುದು ನನ್ನ ಮನದಾಳದ ಆಸೆ ಹಾಗೂ ಹಾರೈಕೆ.

XXX

ಇಲ್ಲಿ ಸಲ್ಲುವವರು

-ಶಂ.ಗು. ಬಿರಾದಾರ

"ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ" ಅಣ್ಣನವರ ಈ ನುಡಿಯಲ್ಲಿ ಅಡಕವಾದ ಅರ್ಥವೇನು? ಈ ಬದುಕಿನಲ್ಲಿ, ಎಲ್ಲರಿಗೂ ಪ್ರಿಯರಾದವರು-ಬೇಕಾದವರು ಸ್ವರ್ಗದ ನಿವಾಸಿಗಳಿಗೂ-ದೇವತೆಗಳಿಗೂ ಬೇಕಾದವರಾಗುವರು ಎಂಬ ಅರ್ಥವೆ? ಅಲ್ಲಿ ಎಂದರೆ ಎಲ್ಲಿ? ಸ್ವರ್ಗವೆ? ದೇವಲೋಕವೆ? ಯಾವುದು?

ದೇವಲೋಕ ಮರ್ತ್ಯಲೋಕವೆಂಬವು
ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ
ದೇವಲೋಕ ಮಿಥ್ಯವ ನುಡಿವುದೇ
ಮರ್ತ್ಯಲೋಕ ಆಚಾರವೇ ಸ್ವರ್ಗ
ಅನಾಚಾರವೇ ನರಕ...........

ನಾಶ ನಾಶಲೋಕಗಳು ಬೇರೆ ಬೇರೆ ಕಡೆಗಿಲ್ಲ. ಈ ಲೋಕದಲ್ಲಿಯೇ ಇವೆ ಎಂದು ದೇವಲೋಕದ ಅಸ್ತಿತ್ವವನ್ನೇ ಅಲ್ಲಗಳೆದ ಅಣ್ಣ ಅಲ್ಲಿ ಎಂದರೆ ಸ್ವರ್ಗವೆಂದು ಹೇಳಿರಲಾರ. ಹಾಗಾದರೆ ಅಲ್ಲಿ ಎಂದರೆ ಏನರ್ಥ? ಸೂಕ್ಷ್ಮವಾಗಿ ವಿಚಾರಿಸಿದಾಗ ಅಲ್ಲಿ ಎಂದರೆ ಮುಂದಿನ ಜನಾಂಗಕ್ಕೂ ಸಲ್ಲುವರು ಎಂಬ ಅರ್ಥ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ ಮುಂತಾದ ಮಹಾನುಭಾವರು ಅಂದಿನ-ಇಂದಿನ ಜನಾಂಗಕ್ಕೆ ಬೇಕಾದವರು, ಮುಂದಿನ ಜನಾಂಗಕ್ಕೂ ಪ್ರಿಯರಾಗುವವರು. ಇಂಥವರು ಎಲ್ಲ ಕಾಲಕ್ಕೂ ಸಲ್ಲುವರು ಎಂಬರ್ಥವಿರಬಹುದಲ್ಲದೆ? ಅವರ ಬಾಳಿನ ರೀತಿ-ನೀತಿಗಳೇ ಇದಕ್ಕೆ ಕಾರಣವೆಂದು ಹೇಳಬೇಕಾದುದಿಲ್ಲ.

ಹಾಗಾದರೆ ಇಲ್ಲಿ ಸಲ್ಲುವಂತಾಗುವುದು ಹೇಗೆ? ಅಪಾರ ಹಣಗಳಿಸಿ ಶ್ರೀಮಂತನಾಗಿ ಮೆರೆಯುವುದೆ? ಏನಾದರೂ ಮಾಡಿ ಮಂತ್ರಿ ಪದ ಗಿಟ್ಟಿಸಿ ಜನರಿಂದ ಹೊಗಳಿಸಿಕೊಳ್ಳುವುದೆ? ಸನ್ಯಾಸಿಯಾಗಿ ಗುರುಪೀಠ ಅಲಂಕರಿಸಿ ಜನರ ಗಮನ ಸೆಳೆಯುವುದೆ? ಇವಾವವೂ ಇಲ್ಲಿ ಸಲ್ಲುವ ಕಾರ್ಯಗಳಲ್ಲ. ಅಣ್ಣನವರು ಹೇಳಿದಂತೆ ಆಚಾರವಂತರಾಗಿ ಸತ್ಯ ಶುದ್ಧ ಜೀವನ ನಡೆಸುವುದೇ ಇಲ್ಲಿ ಸಲ್ಲುವ

ಕ್ರಿಯೆಗೆ ಸಾಧನ. ಉದಾರ ಮನೋಭಾವ, ಕ್ರಿಯಾಶೀಲತೆ, ತ್ಯಾಗ, ಪರಹಿತಚಿಂತನೆ, ಮುಂತಾದ ಸದ್ಗುಣಗಳಿಂದ ಮಾತ್ರ ಇಲ್ಲಿ ಸಲ್ಲುವಂತವರಾಗಲು ಸಾಧ್ಯ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ-ದುರ್ಬಲರಿಂಗೆ
ಎಲ್ಲರೊಳಗೊಂದಾಗು-ಮಂಕುತಿಮ್ಮ

ದಾರ್ಶನಿಕ ಕವಿ 'ಡಿವಿಜಿ' ಯವರು ಎಲ್ಲರೊಳಗೊಂದಾಗಿ ಎಲ್ಲರಿಗೂ ಬೇಕಾಗುವ ಕ್ರಿಯೆಯನ್ನೂ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಇದನ್ನು ಸಾಧಿಸುವುದು ಸುಲಭ ಸಾಧ್ಯವೆ? ಯಾಕೆಂದರೆ ಬದುಕು ಆಸೆ-ಆಮಿಷಗಳ ಜಾಲ. ಈ ಜಾಲದಿಂದ ಪಾರಾಗುವುದು ಸುಲಭ ಸಾಧ್ಯವಲ್ಲ. "ಬಾಲ್ಯ ಜೀವನ-ಭಾವನೆಯ ಕಾರಂಜಿ, ಯೌವ್ವನ ಪ್ರೀತಿ-ಪ್ರೇಮಗಳ ಸುಂದರ ಕನಸಿನ ಹಂದರ, ಗೃಹಸ್ಥ-ಆಸೆ-ಆಮಿಷಗಳ ಮೃಗಜಲ. ಮುಪ್ಪು-ಕತ್ತಲೆಯಲ್ಲಿ ಆಸರೆಗಾಗಿ ತಡಕಾಡುವ, ಕಾಣದ ದೇವನ ಕಾರುಣ್ಯಕ್ಕಾಗಿ ಹಂಬಲಿಸುವ ತವಕ. ಹುಟ್ಟಿನಿಂದ ಸಾವಿನವರೆಗಿನ ಈ ಬಗೆಯ ಹೋರಾಟವೇ ಜೀವನ" ಇಂಥ ಹೋರಾಟದ ಬದುಕಿನಲ್ಲಿ ಇಲ್ಲಿ ಸಲ್ಲುವ ಕ್ರಿಯೆಗೆ ಎಷ್ಟೊಂದು ಆತಂಕಗಳು! ಎಷ್ಟೊಂದು ತೊಂದರೆಗಳು!

ಸಂಸಾರ ತೊರೆದು ಸನ್ಯಾಸಿಯಾದರು
ಸ್ತ್ರೀವ್ಯಾಮೋಹ ಗೆದ್ದರು
ಧನ ಕನಕವನ್ನೊದ್ದರು
ಕಡೆಗೆ ಕೀರ್ತಿಶನಿಯ ಬಲೆಗೆಬಿದ್ದರು

ಎಂಬಂತೆ ಹಣದಾಶೆ, ಸ್ತ್ರೀವ್ಯಾಮೋಹ, ಏನೆಲ್ಲಗೆದ್ದರೂ ಕೊನೆಗೆ ಕೀರ್ತಿಶನಿಯ ಬಲೆಗೆ ಬೀಳುವವರೇ ಬಹಳ. "ಹೊಗಳು ಭಟ್ಟರ ನಡುವೆ ಕುಳಿತು ಸ್ತುತಿ ಕೇಳುತಿರೆ ಹಸಿದವನ ಎದುರಿನೊಳು ಹೊಯ್ದಂತೆ-ದೋಸೆ" ಎಂಬಂತೆ ಎಂಥ ತ್ಯಾಗಿಯಲ್ಲಿ ಕೂಡ ಆಸೆ ಚಿಗುರೊಡೆಯದೆ ಇರದು-

ತಂಗುಳುಣಿಸಾದೊಡಂ ಸಾಕೆನುವನುಪವಾಸಿ
ಸಿಂಗಾರ ಸಂಗಾತಿ ಬೇರುಂಡ ಬಳಿಕ
ಬಂಗಾರ ಪದವಿ ಪ್ರತಿಷ್ಠೆ ಬೇಕಾಬಳಿಕ
ಹಿಂಗದಾ ಎದೆ ಚಿಲುಮೆ ಮಂಕುತಿಮ್ಮ

'ಡಿವಿಜಿ' ಯವರು ಹೇಳಿದಹಾಗೆ ಆಸೆಗೆ ಕೊನೆಯಲ್ಲಿ? ಆಸೆಗೆ ಮಿತಿಬೇಕು. ಅತಿಯಾದರೆ ಅವನತಿಯೇ ಗತಿ. ಆಸೆಯೇ ಎಲ್ಲ ದುಃಖಕ್ಕೇ ಮೂಲವಾದುದರಿಂದ ಅದಕ್ಕೆ ಕಡಿವಾಣ ಹಾಕಬೇಕು. ಹೀಗೆಂದಾಕ್ಷಣ ಆಸೆಯೇ ಬೇಡವೆಂದರ್ಥವಲ್ಲ. ಹಾಗಾದಾಗ ನಾವು ಜೀವನಕ್ಕೆ ವಿಮುಖರಾಗುತ್ತೇವೆ. ಬದುಕಿನ ಉದ್ದೇಶವನ್ನೇ ಕಳೆದುಕೊಳ್ಳುತ್ತೇವೆ. ನಾವು ಕ್ರಿಯಾಶೀಲರಾಗಿ ದುಡಿದು ಗಳಿಸಿ. ಇತರರಿಗೂ ನೆರವಾಗಿ ಅವರ ಕಷ್ಟ-ಸುಖಗಳಲ್ಲಿ ಪಾಲುಗಾರರಾಗಿ ನೆಮ್ಮದಿಯ ಜೀವನ ನಡೆಸಬೇಕಾದುದು ಧರ್ಮ. ಆದರೆ ಹೊಗಳಿಕೆಗಾಗಿ ಜನರನ್ನು ಮೆಚ್ಚಿಸುವುದಕ್ಕಾಗಿ ಕಾರ್ಯಮಾಡುವುದೂ ಯೋಗ್ಯವಲ್ಲ.

ಬಡವಂಗೆ ಮಜ್ಜಿಗೆ ನೀಡದವರು
ಲಿಂಗಕ್ಕೆ ಕ್ಷೀರವನೆರೆದೊಡೇನಹುದಯ್ಯ!
ಹಸಿದವನಿಗೆ ಅನ್ನವನ್ನಿಕ್ಕದವರು
ಹೆಸರಿಗಾಗಿ ಹೊನ್ನವನ್ನಿಕ್ಕಿದೊಡೇನಹುದಯ್ಯ!
ಗುರುತನಯ ಶ್ರೀ ಶಂಕರಪ್ರಿಯ ದೇವಾ
ಜೀವಿಯ ತಣಿಸದೆ ಜಡತನಕಿಡುತಿಹ
ಕುರುಡು ಭಕ್ತಿಗೇನೆಂಬೆನಯ್ಯ!

ಹೀಗೆ ಆತ್ಮವಂಚನೆಯ ದಾನ-ಧರ್ಮಗಳಿಂದ ಪ್ರಯೋಜನವಿಲ್ಲ. ಇತರರ ಮೆಚ್ಚುಗೆಗಾಗಿಯೇ ಡಂಭಾಚಾರದ ಮಾರ್ಗ ಹಿಡಿಯುವುದು ವಿಹಿತವಲ್ಲ. ಇಂಥ ಪೂಜೆ-ಜಪ-ತಪಗಳಿಂದಲೂ ನಾವು ಏನನ್ನೂ ಸಾಧಿಸಲಿಕ್ಕಾಗದು. ವಂಚನೆಯ ಘನ ಪೂಜೆಯನ್ನು ಹರಿದಾಸರೂ ಖಂಡಿಸಿರುವುದನ್ನು ನಾವು ಗಮನಿಸಬೇಕು.

ಚಂದ್ರ-ಮಂಗಳ ಲೋಕಕೆ
ಹೋಗುವ ತವಕ
ನಮಗೆ ಗೊತ್ತಿಲ್ಲ
ನೆರೆಮನೆಯರವರ ಹೆಸರು
ಇನ್ನೂತನಕ

ನೆರೆಮನೆಯವರ ಕಷ್ಟ-ಸುಖಗಳನ್ನರಿಯದ ನಾವು ಲೋಕೋದ್ಧಾರ ಮಾಡಲು ಹೊರಟಿದ್ದೇವೆ. ನಮ್ಮ ಸುತ್ತಲಿನ ಜನರ ನೋವು-ನಲಿವುಗಳಲ್ಲಿ ಪಾಲುಗೊಂಡಾಗ ನಾವು ಜನರಿಗೆ ಸಲ್ಲುತ್ತೇವೆ. ಇದಾವುದರ ಕಡೆಗೆ ಗಮನ ಕೊಡದೆ-ಚಂದ್ರ-ಮಂಗಳ ಲೋಕದಡೆ ಮುಖ ಮಾಡಿದರೆ' ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲಲಾರೆವು!

ಮುಖ್ಯವಾಗಿ ನಮ್ಮನ್ನು ನಾವು ತಿದ್ದಿಕೊಂಡು ಒಳಹೊರಗೆ ಒಂದಾದ ರೀತಿಯಲ್ಲಿ ಜೀವನ ಸಾಗಿಸುವುದು ವಿಹಿತ. ನಾವು ಬರಿ ಬುದ್ಧಿವಂತರಾದರೆ ಸಾಲದು, ಹೃದಯವಂತರಾಗಬೇಕು. ದಯೆ ಕರುಣೆ ಪರೋಪಕಾರಗಳು ಧರ್ಮದ ಬೇರುಗಳು. ಇವು ನಮ್ಮ ಬದುಕಿನಲ್ಲಿ ಬೇರೂರಬೇಕು, 'ಪ್ರೀತಿಯಂತಹವಸ್ತು ಬೇರೆಲ್ಲೂ ಇಲ್ಲ' ಎಂಬುದನ್ನರಿಯಬೇಕು. ಎಳೆಯರನ್ನು ಪ್ರೋತ್ಸಾಹಿಸುವ, ಸ್ನೇಹಿತರನ್ನು ಪ್ರೀತಿಸುವ, ಹಿರಿಯರನ್ನು ಗೌರವಿಸುವ, ಗುರುಗಳನ್ನು ಆರಾಧಿಸುವ, ಹೃದಯ ನಮ್ಮದಾಗಬೇಕು. ಹಾಗಾದಾಗ ಇಲ್ಲಿ ಸಲ್ಲುವ ಕ್ರಿಯೆಗೆ ನಾವು ಪಾತ್ರರಾಗುತ್ತೇವೆ.

ನಾವು ಅರವಿಂದ, ವಿವೇಕಾನಂದ, ಮದರ ಥರೇಸಾ ಮೊದಲಾದ ಮಹಾನುಭಾವರಂತಾಗದಿದ್ದರೂ ಇದ್ದ ಬದುಕಿನಲ್ಲಿಯೇ ಶುದ್ಧ ಜೀವನ ನಡೆಸಿ ನಮ್ಮ ಸುತ್ತಲಿನ ಜನರಿಗಾದರೂ ಬೆಲ್ಲ-ಸಕ್ಕರೆಯಾದರೆ ಸಾಕು, ಕೆಲಕಾಲವಾದರೂ ಜನತೆಗೆ ಸಲ್ಲುವೆವು.

XXX

ನನ್ನ ಹಿತೈಷಿಗಳಾದ ಪ್ರೊ|| ಎನ್. ಬಸವಾರಾಧ್ಯರು

-ಷಣ್ಮುಖಯ್ಯ ಅಕ್ಕೂರಮಠ

ಪ್ರೊ. ಎನ್. ಬಸವಾರಾಧ್ಯರು ಕನ್ನಡ ನಾಡಿನ ವಿರಳ ವಿದ್ವಾಂಸರಲ್ಲಿ ಒಬ್ಬರು. ಕಿಟಲ್, ಕುವೆಂಪು, ಡಿ.ಎಲ್.ಎನ್., ಎ.ಆರ್.ಕೃ., ತೀ.ನಂ.ಶ್ರೀ., ಕ.ವೆಂ. ರಾಘವಾಚಾರ್ಯ, ಆ.ನೆ. ಉಪಾಧ್ಯೆ ಇಂತಹ ಹಿರಿಯ ವಿದ್ವಾಂಸರ ಪರಂಪರೆಗೆ ಸೇರಿದವರು. ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ಸಂಪಾದಕರಾಗಿ, ನಿಘಂಟು ರಚನಾಕಾರರಾಗಿ, ಕನ್ನಡ ನುಡಿಗೆ ಸಲ್ಲಿಸಿದ ಸೇವೆ ಅನನ್ಯ. ಶ್ರೀಯುತರು ಕನ್ನಡ, ಸಂಸ್ಕೃತ, ತೆಲಗು, ಹಿಂದಿ ಹಾಗೂ ತಮಿಳು ಭಾಷೆಯನ್ನು ಬಲ್ಲ ಬಹುಭಾಷಾ ವಿಶಾರದರು. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ, ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಸ್ಮರಣೀಯವಾದುದು. ತಮ್ಮ ಬದುಕಿನ ಹೆಚ್ಚು ಸಮಯವನ್ನು ಗ್ರಂಥ ಸಂಪಾದನೆ, ಸಂಶೋಧನೆ ಹಾಗೂ ನಿಘಂಟು ರಚನೆಗೆ ಮುಡಿಪಾಗಿಟ್ಟ ಅಪರೂಪದ ವಿದ್ವಾಂಸರು. ಶ್ರೀಯುತರು ಓದು-ಬರಹಕ್ಕಾಗಿ ತಮ್ಮ ಜೀವನವನ್ನು ಕಳೆದವರಲ್ಲ; 'ಯಸ್ತ್ರಕ್ರಿಯಾವಾನ್ ಪುರುಷಃ ಸಃ ವಿದ್ವಾನ್' ಎನ್ನುವ ಮಾತಿನಂತೆ ಕ್ರಿಯಾಶೀಲರಾಗಿ ಜನಸಮುದಾಯದ ಸಾಂಸ್ಕೃತಿಕ ಸಂವರ್ಧನೆಗಾಗಿ ಶ್ರಮಿಸಿದ್ದಾರೆ. ಅದಕ್ಕಾಗಿ ಬಿ. ಶಿವಮೂರ್ತಿಶಾಸ್ತ್ರೀ ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನ, ಗೋಖಲೆ ಸಾರ್ವಜನಿಕ ಸಂಸ್ಥೆ, ವೀರಶೈವ ಅನುಸಂಧಾನ ಸಂಸ್ಥೆಗಳ ಅಭಿವೃದ್ಧಿಗೆ , ಮಾರ್ಗದರ್ಶಕರೂ ಆಗಿ ಕಾರ್ಯನಿರ್ವಹಿಸಿದ್ದಾರೆ. ಒಂದು ಅರ್ಥದಲ್ಲಿ ಶ್ರೀಯುತರು ನಮ್ಮ ನಾಡಿನ, ಸಾಹಿತ್ಯ-ಸಂಸ್ಕೃತಿ, ಸಂಶೋಧನೆಗಳ ರಾಯಭಾರಿ-ಗಳಾಗಿದ್ದಾರೆ. ಇವರ ವಿದ್ವತ್ತು, ಸಾಹಿತ್ಯ ಸಾಧನೆಯನ್ನು ಗುರುತಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದೇವರಾಜ ಬಹದ್ದೂರ ಪ್ರಶಸ್ತಿಯು ಲಭಿಸಿವೆ. ಕೋಲಾರ ಜಿಲ್ಲೆ ನಾರಸಿಂಹನಹಳ್ಳಿಯಲ್ಲಿ ಜನಿಸಿದ ಆರಾಧ್ಯರು ಬಡತನದ ಹಿನ್ನೆಲೆಯಲ್ಲಿ

ಅರಳಿದ ಕುಸುಮ. ಧನಬಲ, ಜನಬಲ, ಅಧಿಕಾರದ ಬಲ -ಹೀಗೆ ಯಾವುದೇ ಬಲವಿಲ್ಲದ ಕುಟುಂಬದ ಹಿನ್ನೆಲೆಯಲ್ಲಿ ಬಂದವರು- ತಮ್ಮ ಸ್ವಂತ ಶಕ್ತಿ-ಪರಿಶ್ರಮಗಳಿಂದ ಮುಂದೆ ಬಂದವರು. ನಾರಸಿಂಹನಹಳ್ಳಿಯಿಂದ ಮೈಸೂರು ನಗರಕ್ಕೆ ಬಂದದ್ದು, ಅವರ ಜೀವನ ಸಾಧನೆಯಲ್ಲಿ ಒಂದು ಮಹತ್ವಪೂರ್ಣ ಅಧ್ಯಾಯ. ಅವರು ಮೈಸೂರಿನಲ್ಲಿ ಮಾಡಿದ ಅಧ್ಯಯನ, ಪಡೆದ ಸ್ಥಾನ-ಮಾನಗಳು ಅವರ ಸತತ ವಿದ್ವತ್ ಪರಿಶ್ರಮದ ಫಲಗಳು.

ಎತ್ತರದ ನಿಲುವು, ನೀಟಾಗಿ ಬಾಚಿದ ತಲೆ, ಕೋಲುಮುಖ, ಹೊಳೆವ ಕಣ್ಣು, ಅಚ್ಚುಕಟ್ಟಾದ ಸೂಟು-ಬೂಟಿನ ವೇಷ, ಹೆಗಲ ಮೇಲೊಂದು ಬಿಳಿಯ ಶಾಲು, ಶ್ಯಾಮಲಗೆಂಪು, ಕೈಯ್ಯಲ್ಲಿ ಒಂದು ಸೂಟುಕೇಸ್, ಅಪರೂಪಕ್ಕೆ ಕೈಯ್ಯಲೊಂದು ಸಿಗರೇಟ್, ಶಿಸ್ತಿನ ಸಿಪಾಯಿಯಂತೆ ಕಾಣುವ ಉಡುಪು. ಪರಿಚಿತರು ಎದುರುದಾರೆ ಸಾಕು, ಆತ್ಮೀಯ ಮಾತುಕತೆ, ಮಾತಿನ ಮಧ್ಯೆ ನವಿರು ಹಾಸ್ಯ, ಘನ ವಿದ್ವತ್ತಿದ್ದರೂ ಹಮ್ಮು-ಬಿಮ್ಮುಗಳಿಲ್ಲದ ಸರಸ ಸಜ್ಜನಿಕೆ. ಅಹಮಿಕೆಯಿಂದ ಬೀಗದ ತುಂಬುವ್ಯಕ್ತಿ ಶ್ರೀ ಆರಾಧ್ಯರು. ನೀತಿಯ ನಡವಳಿಕೆ, ಪ್ರೀತಿಯ ದಿನಬಳಕೆ, ಇವರ ಜೀವನ ಸೂತ್ರ ಹಾಗೂ ಬದುಕಿನ ಪಾತ್ರ.

ಇವರು ಸಂಪಾದಿಸಿದ ವೀರಶೈವಾಮೃತ ಮಹಾಪುರಾಣ, 'ಆರಾಧ್ಯ ಚಾರಿತ್ರ', 'ಚತುರಾಚಾರ್ಯ ಪುರಾಣ', 'ದೇವಲಾಪುರದ ನಂಜುಂಡ' ಈ ಬೃಹತ್ ಗ್ರಂಥಗಳ ಸಂಪಾದನೆ, ಇವರು ಗ್ರಂಥ ಸಂಪಾದನಾ ಕ್ಷೇತ್ರಕ್ಕೆ ಸಲ್ಲಿಸಿದ ಶಿಖರ ಸದೃಶ ಕೊಡುಗೆಗಳು. ಈ ಗ್ರಂಥಗಳ ಸಂಪಾದನೆಯಲ್ಲಿ ಇವರ ಬಹುಶ್ರುತ ಪಾಂಡಿತ್ಯ, ನಿಶಿತ ವಿಮರ್ಶೆ, ತಲಸ್ಪರ್ಶಿ ನಿರೂಪಣೆ ಹಾಗೂ ಅಸಂದಿಗ್ಧ ಶಾಸ್ತ್ರ ಪರಿಣತಿಯನ್ನು ಗುರುತಿಸಬಹುದಾಗಿದೆ. ಕನ್ನಡ ನಿಘಂಟು ಸಂಪಾದನೆಯಲ್ಲಿ, ಇದರ ಶ್ರಮ ಹಾಗೂ ಸಾಧನೆ ಗಮನಾರ್ಹವಾಗಿವೆ. ನಿಘಂಟು ರಚನೆಯಲ್ಲಿ ಶಬ್ದಸಾಗರವನ್ನೇ ಈಜಿ ಬಂದಿದ್ದಾರೆ. ಈ ದೃಷ್ಟಿಯಲ್ಲಿ ಇವರು ನಿಘಂಟು ನಿಧಿ, ಶಬ್ದವಾರಿಧಿ ಎನ್ನುವ ಗೌರವಕ್ಕೆ ಪಾತ್ರರಾಗಿದ್ದಾರೆ. ಸಂದರ್ಭಾನುಸಾರವಾಗಿ ಬರೆದ ಇವರ ವಿದ್ವತ್‌ಪೂರ್ಣ ಹಾಗೂ ಸಂಶೋಧನಾತ್ಮಕ ಬರಹಗಳು ಅಭ್ಯಾಸಯೋಗ್ಯವಾಗಿದೆ.

ಶ್ರೀ ಬಸವಾರಾಧ್ಯರಿಗೆ ಈಗ ೮೦ ವರ್ಷವೆಂದರೆ ನಂಬುವುದೇ ಕಷ್ಟ. ಅವರಿಗೆ ಈಗ ಸನ್ಮಾನದ ಸಮಾರಂಭದ ಸಂಭ್ರಮ ಈ ಶ್ರೇಷ್ಠ ವಿದ್ವಾಂಸರು ನಾಡು-ನುಡಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸುವ ಸುದಿನ. ಶ್ರೀಯುತರು ೮೦ ವರ್ಷಗಳನ್ನು ಕಂಡರೂ ಇನ್ನೂ ಬಾಗದ ಮೈ, ಅಲುಗದ ಶಿರ, ಯುವಕರನ್ನು ನಾಚಿಸುವ ಉತ್ಸಾಹ. ದೈಹಿಕವಾಗಿ ವಯಸ್ಸಾಗಿದ್ದರೂ, ಮಾನಸಿಕವಾಗಿ ಇನ್ನೂ ತರುಣರಾಗಿದ್ದಾರೆ. ಸಾರ್ವಜನಿಕ, ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ತೊಡಗಿಕೊಂಡಿರುವ ಕ್ರಿಯಾಶೀಲ ಬದುಕು ಅವರದು.

ನನಗೆ, ಕಳೆದ 'ಕಾಲು' ಶತಮಾನದಿಂದ ಶ್ರೀಯುತರ ನಿಕಟ ಪರಿಚಯವಿದೆ. ಅವರು ನನ್ನ ಹಿತೈಷಿ ಹಿರಿಯರಲ್ಲಿ ಒಬ್ಬರು. ನನ್ನ 'ಸಮಾಯೋಗ', 'ಮತಿಗೆ ಮಂಗಳ' ಪುಸ್ತಕಗಳಿಗೆ ಪ್ರೀತಿಯಿಂದ ಮುನ್ನುಡಿ ನುಡಿದು ಪ್ರೋತ್ಸಾಹಿಸಿದ್ದಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನನ್ನ ಪುಸ್ತಕ 'ಭಾರತೀಯ ಭಕ್ತಿ ಚಳವಳಿಗಳು' ಎಂಬುದನ್ನು ಪರಿಷತ್ತಿನ ಮೂಲಕ ಪ್ರಕಟಿಸಿ, ಬೆಳಕಿಗೆ ತಂದಿದ್ದಾರೆ. ಹೀಗೆ ನನ್ನ ಸಾಹಿತ್ಯ ಕೃಷಿಗೆ, ಪ್ರೇರಕರೂ, ಸಹಾಯಕರೂ ಆಗಿದ್ದಾರೆ. ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರ ಸಂಸ್ಮರಣ ಸಂಪುಟ 'ಅಮರವಾಣಿ' ಕೃತಿಗೆ, ನಾನು ಸಹಸಂಪಾದಕನಾಗಿ ಅವರೊಂದಿಗೆ ಕೆಲಸ ಮಾಡುವ ಸುಯೋಗ ಒದಗಿಬಂದಿತ್ತು. ಅಂತಹ ಹಿರಿಯ ವಿದ್ವಾಂಸರೂ, ಸಹೃದಯರೊಂದಿಗೆ ಒಟ್ಟಿಗೆ ಕಲೆತು ಕೆಲಸ ಮಾಡುವುದು ಒಂದು ಅನಿರ್ವಚನೀಯ, ಆನಂದದ ಅನುಭವ. ಶ್ರೀಯುತರೊಂದಿಗೆ ಬೆಳ್ಳಾವಿಯ ಬಿ.ಎಂ.ಶ್ರೀ. ಪ್ರತಿಷ್ಠಾನದ ವಾಚನಾಲಯದ ಉದ್ಘಾಟನಾ ಸಮಾರಂಭಕ್ಕೆ, ಕಳೆದ ವರ್ಷ ಧಾರವಾಡದ ಒಂದು ಧಾರ್ಮಿಕ ವಿಚಾರ ಸಂಕಿರಣಕ್ಕೆ ಪ್ರವಾಸ ಮಾಡಿದ ಅನುಭವದ ನೆನಪು ಇನ್ನೂ ಹಚ್ಚಹಸಿರಾಗಿದೆ. ಅವರೊಂದಿಗೆ ಪ್ರವಾಸ ಮಾಡುವುದೇ ಒಂದು ಸಂತೋಷದ ಸಂಗತಿ. ಪ್ರಯಾಣದ ಹಾದಿಯಲ್ಲಿ ಸಕಾಲಕ್ಕೆ ತಿಂಡಿ, ತೀರ್ಥ, ದುಡ್ಡು ಅವರೇ ಕೊಡಬೇಕು. ಬೇರೆಯವರು ಕೊಡಲು ಬಿಡುತ್ತಿರಲಿಲ್ಲ. ದಾರಿಯುದ್ದಕ್ಕೂ ಹಾಸ್ಯಭರಿತ ರಸಾವೇಶದ ಸಂಭಾಷಣೆಯಿಂದ ನಮಗೆ ಪ್ರವಾಸದ ಆಯಾಸ ಪರಿಹಾರವಾಗುತ್ತಿತ್ತು. ಸಮಯ ಕಳೆದದ್ದು ಗೊತ್ತಾಗುತ್ತಿರಲಿಲ್ಲ.

ಆರಾಧ್ಯರನ್ನು ಕಾಣಲು ಮನೆಗೆ ಹೋದವರಿಗೆ ಪ್ರೀತಿಯ ಆದರದ ಆತಿಥ್ಯ ಇದ್ದೇ ಇರುತ್ತದೆ. ಪರಿಚಿತರನ್ನು ಕಂಡರೆ ಸಾಕು ಅವರ ಹಾಗೂ ಕುಟುಂಬ ವರ್ಗದವರ ಯೋಗಕ್ಷೇಮವನ್ನು ವಿಚಾರಿಸುತ್ತಾರೆ. ನೊಂದವರಿಗೆ ಸಾಂತ್ವನ ಹೇಳುತ್ತಾರೆ. ಕಷ್ಟದಲ್ಲಿದ್ದವರಿಗೆ ತಮ್ಮ ಕೈಲಾದಮಟ್ಟಿಗೆ ನೆರವು ನೀಡುತ್ತಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆ ಆದಾಗ ಅವರ ಮನೆಯ ಮೇಲು ಮಹಡಿ ಕಟ್ಟಡದ ಕೆಲಸ ನಡೆದಿತ್ತು. ಆ ಸಂದರ್ಭದಲ್ಲಿ ನಾನು ಅವರ ಮನೆಗೆ ಹೋದಾಗ ತಮಾಷೆಗಾಗಿ "ಏನು ಸಾರ್ ಮೊನ್ನೆ ತಾನೇ ಅಧ್ಯಕ್ಷರಾಗಿ ಪರಿಷತ್ತಿಗೆ ಆಯ್ಕೆ ಆಗಿದ್ದೀರಿ ಈಗಾಗಲೇ ಮನೆ ಕಟ್ಟಿಸಲು ಶುರು ಮಾಡಿದ್ದೀರಿ ಎಂದೆ." ನನ್ನ ಮಾತಿನ ಇಂಗಿತವನ್ನು ಗ್ರಹಿಸಿ ನಗುತ್ತಾ ಹೇಳಿದರು: "ಪರಿಷತ್ತಿನಿಂದ ದೊಡ್ಡ ಮೊತ್ತ ಸಿಕ್ಕಿದೆ ಅದಕ್ಕಾಗಿ ಕಟ್ಟಿಸುತ್ತಿದ್ದೇನೆ" ಎಂದು. ಪರಿಷತ್ತಿನ ಅಧ್ಯಕ್ಷರಾಗಿದ್ದಾಗ, ಅವರ ಸಮಯ ನಿಯಮಪ್ರಜ್ಞೆ, ಪ್ರಾಮಾಣಿಕ ಕಾರ್ಯನಿರ್ವಹಣೆಯನ್ನು ಹತ್ತಿರದಿಂದ ಕಂಡಿದ್ದೇನೆ. ಅವರನ್ನು ಕಾಣಲು ಪರಿಷತ್ತಿಗೆ ಬಂದವರಿಗೆ, ಪ್ರೀತಿ-ವಿಶ್ವಾಸಗಳಿಂದ ಮಾತನಾಡಿಸಿ ಅವರ ಸಮಸ್ಯೆಗಳಿಗೆ ಸಮಾಧಾನದಿಂದ ವಿಚಾರಿಸಿ ಕಳಿಸುತ್ತಿದ್ದರು. ಒಂದೊಂದು ಸಲ ಬಂದವರಿಗೆ ಕಾಫಿ-ಟೀ ಉಪಚಾರವೂ ನಡೆಯುತ್ತಿತ್ತು. ಕಳೆದ ವರ್ಷ ನನ್ನ ನಿಡುಗಾಲದ ಸ್ನೇಹಿತರೊಬ್ಬರು ನಿಧನರಾದ ವಿಷಯವನ್ನು ದೂರವಾಣಿಯ ಮೂಲಕ ನನಗೆ ತಿಳಿಸುತ್ತಾ "ನಿನ್ನ ಸ್ನೇಹಿತ ಹೊರಟು ಹೋದ, ನಿನ್ನ ಸಂಸಾರದ ಜವಾಬುದಾರಿಯನ್ನು ಬೇಗ ಮುಗಿಸು. ನಿನಗೂ ಸರದಿ ಬರುತ್ತದೆ" ಎಂದು. ನನ್ನ ಕರ್ತವ್ಯವನ್ನು ನೆನಪಿಸಿದರು ಹಾಗೂ 'ವಿದ್ಯುಚ್ಚಲಂ ಜೀವಂತ' ಎನ್ನುವಂತೆ ಜೀವನ ಮಿಂಚಿನಂತೆ ಕ್ಷಣಿಕ ಎನ್ನುವ ವಿಚಾರವನ್ನು ಜ್ಞಾಪಿಸಿದರು. ಒಂದು ದೃಷ್ಟಿಯಲ್ಲಿ ಆರಾಧ್ಯರು ನನ್ನ ಬದುಕಿನ ಎಚ್ಚರಿಕೆಯ ಗಂಟೆಯಾಗಿದ್ದಾರೆ. ನಿಡುಗಾಲದ ಬದುಕಿನ ಏರಿಳಿತಗಳನ್ನು, ನೋವು-ನಲಿವುಗಳನ್ನು, ಉದ್ದಕ್ಕೂ ಕಂಡ, ಆರಾಧ್ಯರು ಸಮಚಿತ್ತರು. ಯಾರ ಮನಸ್ಸನ್ನೂ ನೋಯಿಸದ, ಯಾರನ್ನು ವಿನಾಕಾರಣ ಟೀಕಿಸದ, ಮನೋಧರ್ಮ ಅವರದು. ಪರರ ಉತ್ಕರ್ಷವನ್ನು ಕಂಡು ಹಿಗ್ಗುವ ಸಂಸ್ಕೃತಿ ಅವರದು. ಜೀವನದಲ್ಲಿ ಸಂಘ ಸಂಸ್ಥೆಗಳಲ್ಲಿ ಉನ್ನತ ಸ್ಥಾನಮಾನ ಪಡೆದಾಗಲೂ, ಆಸೆ-ಆಮಿಷಗಳಿಗೆ ಬಲಿಯಾಗದೆ; ಕೆಸರಿನ ಕಮಲದಂತೆ, ಅಂಟಿಯೂ ಅಂಟದಂತೆ ನಿಸ್ಪೃಹ ಸೇವಾಭಾವನೆಯಿಂದ ಕೆಲಸ ಮಾಡಿದ ಶ್ರೇಯಸ್ಸು ಇವರದು. ನಗರದಲ್ಲೂ ಕರ್ನಾಟಕದ ಉದ್ದಗಲಕ್ಕೂ ಆರಾಧ್ಯರ ಅಭಿಮಾನಿಗಳ ಬಳಗವಿದೆ; ಶ್ರೇಷ್ಠ ವಿದ್ವಾಂಸರಾಗಿ, ಸದ್ಗೃಹಸ್ಥರಾಗಿ, ಸಾರ್ವಜನಿಕರ ಮಧ್ಯೆ ಪ್ರಾಮಾಣಿಕರಾಗಿ, ಸಜ್ಜನರಾಗಿ, ಸಾರ್ಥಕ ಬದುಕನ್ನು ಕಳೆದಿದ್ದಾರೆ. ಇಂತಹ ಸಹೃದಯ ವಿದ್ವಾಂಸರು ನನ್ನಂಥವರಿಗೆ ಮಾರ್ಗದರ್ಶಕರಾಗಿ ಇನ್ನೂ ಹೆಚ್ಚು ಕಾಲ ಬಾಳಲಿ ಎಂದು ನನ್ನ ಹಾರೈಕೆ.

XXX

ವೃದ್ಧಾಪ್ಯದಲ್ಲೂ ಚಿರ ಯೌವ್ವನದ ಸೊಗಸುಳ್ಳವರು

-ಪ್ರೊ. ಸಿ.ಹೆಚ್. ಮರಿದೇವರು

ಶ್ರೀಮಾನ್ ಎನ್. ಬಸವಾರಾಧ್ಯ ಅವರು ವೃದ್ಧಾಪ್ಯದಲ್ಲೂ ಚಿರ ಯೌವ್ವನದ ಸೊಗಸುಳ್ಳವರು. ಅತ್ಯಂತ ಸ್ನೇಹಪರ ಜೀವಿ. ಹೃದಯದ ತುಂಬ ಪ್ರೀತಿಯ ಸೆಲೆಯನ್ನೆ ತುಂಬಿಕೊಂಡಿರುವವರು. ಎಂದಿಗೂ ಬತ್ತದಿಹ ಉತ್ಸಾಹಶಾಲಿಗಳು. ನಗುನಗುತ್ತ ಹಾಸ್ಯ ಪ್ರವೃತ್ತಿಯಿಂದ ಮಾತನಾಡಿಸುವ ಅತ್ಯಂತ ಸರಳ ಜೀವಿ, ನಿಗರ್ವಿ.

ಬಸವಾರಾಧ್ಯರು ಕನ್ನಡ ಸಾರಸ್ವತ ಲೋಕದ ಕಣಜಕ್ಕೆ ಅನೇಕ ರೀತಿಯ ದವಸಧಾನ್ಯಗಳನ್ನು ಹೆಕ್ಕಿ ತೆಗೆದು ಗಟ್ಟಿಕಾಳುಗಳನ್ನಾಯ್ದು ತುಂಬಿ ಅದನ್ನು ಶ್ರೀಮಂತವಾದುದನ್ನಾಗಿಸಿದ್ದಾರೆ. ಅವರು ಪ್ರಕಟಿಸಿರುವ ಮುವ್ವತ್ತೆರಡು ಕೃತಿಗಳ ಪಟ್ಟಿಯನ್ನು ನೋಡಿದರೆ ಈ ಬಡಕಲು ಶರೀರದಿಂದ ಇಷ್ಟೊಂದು ಗಟ್ಟಿಕಾಳುಗಳನ್ನು ಹೆಕ್ಕಿ ತೆಗೆಯಲು ಸಾಧ್ಯವಾಯಿತೆ ಎಂಬ ವಿಸ್ಮಯ ತಲೆದೋರುತ್ತದೆ. ಆದರೆ ಅವೆಲ್ಲ ಅಂಗೈಯ್ಯ ನೆಲ್ಲಿಯಷ್ಟು ಸತ್ಯವಾಗಿರುವಾಗ ಭಲೆ ಎಂದು ಅಭಿಮಾನ ಕನ್ನಡಿಗರೆದೆಗಳಲ್ಲಿ ಮಾರ್ದನಿಗೊಳ್ಳುತ್ತದೆ. ಆ ದೃಷ್ಟಿಯಿಂದ ಶ್ರೀಮಾನ್ ಬಸವಾರಾಧ್ಯರು ನಿಜಕ್ಕೂ ಅಭಿನಂದನಾರ್ಹರು. ಅವರ ಸಂಪಾದಿತ ಕೃತಿಗಳ ಮೊತ್ತ ನೋಡಿಯೇ ಎಂತಹವರೂ ಮೂಕವಿಸ್ಮಯ-ರಾಗುತ್ತಾರೆ. ಅವೆಲ್ಲವೂ ಬಸವಾರಾಧ್ಯರ ಶ್ರಮಶಕ್ತಿಯ ಪ್ರತೀಕ.

ಬಸವಾರಾಧ್ಯರ ಸಾಹಿತ್ಯ ಕ್ಷಿತಿಜ ಸಂಪಾದನಾಲೋಕಕ್ಕಷ್ಟೇ ಸೀಮಿತವಾಗದೆ ಹಲವು ಸಂಭಾವನಾ ಗ್ರಂಥಗಳ ಕ್ಷೇತ್ರಕ್ಕೂ ವಿಸ್ತೃತಗೊಂಡುದಾಗಿದೆ. ಕನ್ನಡ ಸಾರಸ್ವತ ಲೋಕದಲ್ಲಿ ನಡೆದಾಡುವ ಶಬ್ದಕೋಶ ಎಂದೇ ಹೆಸರಾಗಿದ್ದ ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರಿಗೆ ಹೊರತಂದಿರುವ "ಉಪಾಯನಾ" ಸಂಭಾವನಾ ಗ್ರಂಥ, ಕೀರ್ತನಕೇಸರಿ ಹರಿಕಥಾ ವಿದ್ವಾನ್ ಶಬ್ದಗಾರುಡಿಗರೆಂದೇ ಪ್ರಸಿದ್ಧರಾಗಿದ್ದ ಡಾ. ಬಿ. ಶಿವಮೂರ್ತಿ ಶಾಸ್ತ್ರಿಗಳವರಿಗೆ ಹೊರತಂದ "ದೇವಗಂಗೆ" ಎಂಬ ಸಂಭಾವನಾ ಗ್ರಂಥ ಹಾಗೂ ಆಸ್ಥಾನ ವಿದ್ವಾನ್

ಎಂ.ಜಿ. ನಂಜುಂಡಾರಾಧ್ಯ ಅವರಿಗೆ ಹೊರತಂದ 'ಅಮರವಾಣಿ' ಎಂಬ ಸಂಭಾವನಾ ಗ್ರಂಥಗಳು ಕನ್ನಡ ಸಾರಸ್ವತಲೋಕವನ್ನು ಶ್ರೀಮಂತಗೊಳಿಸಿರುವುದಲ್ಲದೆ ಮುಂಬರುವ ಜನಾಂಗಕ್ಕೆ ಅವು ತೋರ್ಗಂಬಗಳಾಗಿ ನಿಲ್ಲುತ್ತವೆ.

ಸಂಪಾದಿತ ಕೃತಿಯಿರಲಿ, ಸಂಭಾವನಾ ಗ್ರಂಥಗಳಾಗಿರಲಿ ಅವೆಲ್ಲವೂ ಪುಸ್ತಕಗಳೇ ಹೌದು. ಎಲ್ಲ ಪುಸ್ತಕಗಳೂ ಈ ಜಗದ ಯುಗಯುಗದ ಜ್ಞಾನಧಾರೆಯೆಲ್ಲವನು ತನ್ನೊಳಗೆ ಅಡಗಿಸಿಕೊಂಡಿರುವ ಕೊಡಪಾನಗಳು. ಜ್ಞಾನದೇವತೆಯ ದಿವ್ಯದೇಗುಲಗಳು, ನಿಜದ ಅಕ್ಷಯಪಾತ್ರೆಗಳು, ಜ್ಞಾನದ ಜೇಂಗೊಡಗಳು, ಜ್ಞಾನ ರಸವಾಹಿನಿಯ ದಿವ್ಯಮೌನ ಮಹಾಚೇತನಗಳು. ಜ್ಞಾನದೇವತೆಯನ್ನು ಹೊತ್ತಮೊಂದೇರುಗಳು, ಬುದ್ಧಿಭಾವಗಳನ್ನು ವಿಕಾಸಗೊಳಿಸುವ ದಿವ್ಯಕಾರಂಜಿಗಳು. ಬಸವಾರಾಧ್ಯರ ಎಲ್ಲ ಸಂಪಾದಿತ ಕೃತಿಗಳಿಗೆ ಮತ್ತು ಸಂಭಾವನಾ ಗ್ರಂಥಗಳಿಗೆ ಮೇಲಿನ ಮಾತುಗಳೆಲ್ಲವೂ ಅನ್ವಯವಾಗುತ್ತವೆ ಮತ್ತು ಅನ್ವರ್ಥವಾಗುತ್ತವೆ. ಎಲ್ಲ ಪುಸ್ತಕಗಳೂ ಮನುಕುಲಕ್ಕೆ ಮಾರ್ಗಸೂಚಿಯಾಗಿ ನಿಂತ ತೋರ್ಗಂಬಗಳಾಗುತ್ತವೆ. ಜೀವನದ ಕಗ್ಗಾಡ ಕತ್ತಲಲ್ಲಿ, ಬೆಳಕೀವ ದಾರಿ ದೀವಟಿಗೆಗಳಾಗುತ್ತವೆ ಎನ್ನುವುದರಲ್ಲಿ ಯಾರೂ ಸಂಶಯಪಡಬೇಕಾದ ಅವಶ್ಯಕತೆಯಿಲ್ಲ.

ಬಸವಾರಾಧ್ಯರು ಮೇಲ್ಕಂಡ ಪುಸ್ತಕಗಳನ್ನು ಪ್ರಕಟಗೊಳಿಸುವುದರ ಜತೆಗೆ ಕನ್ನಡ ವಿಶ್ವಕೋಶಕ್ಕೆ, ಕನ್ನಡ ಸಾಹಿತ್ಯ ಚರಿತ್ರೆ, ಪ್ರಬುದ್ಧ ಕರ್ಣಾಟಕ, ಕನ್ನಡ ನುಡಿ ಇತ್ಯಾದಿ ಪ್ರತಿಕೆಗಳಲ್ಲಿ ಪ್ರಕಟಿಸಿರುವ ವಿದ್ವತ್ಪೂರ್ಣ ಲೇಖನಗಳೂ ಸಹ ಗ್ರಂಥಸ್ಥವಾಗುವ ಕಸುವುಳ್ಳವುಗಳಾಗಿವೆ.

ಬಸವಾರಾಧ್ಯರು ತಮ್ಮ ಸಾಹಿತ್ಯಲೋಕದ ಕೃಷಿಗೆ ತಕ್ಕ ಪ್ರಶಸ್ತಿಗಳನ್ನು ಗಳಿಸಿಕೊಂಡವರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಅತ್ಯಂತ ಪ್ರಮುಖವಾದವುಗಳಾಗಿವೆ.

ಬಸವಾರಾಧ್ಯರದು ಬಹುಮುಖ ಪ್ರತಿಭೆ. ಅವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ನಾನಾ ವಿಧವಾದ ಸಮಿತಿಗಳಲ್ಲಿ ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ದುಡಿದ ಕೀರ್ತಿ ಇವರ ಪಾಲಿಗುಳಿದಿದೆ. ಹೀಗೆ ಬಸವಾರಾಧ್ಯರದ್ದು ಒಂದು ವಿಶಿಷ್ಟ ಪ್ರತಿಭೆ.

ಸ್ವಯಂಪೂರ್ಣ

-ಕೆ.ಎಸ್. ಚಂದ್ರಶೇಖರಾರಾಧ್ಯ ವಳಗೆರೆ

"ಸಜ್ಜನ ಹೃದಯೇ ಸದಾಕ್ಷಾಂತಿಃ" ಸದಾ ಶಾಂತಿ ನೆಲೆಸಿರುವುದು ಸಜ್ಜನರ ಮನಸ್ಸಿನಲ್ಲಿ ಎಂದು ಒಂದು ಸುಭಾಷಿತದಲ್ಲಿ ಹೇಳಿದೆ. ಈ ಹೇಳಿಕೆ ಪ್ರೊ. ಎನ್. ಬಸವಾರಾಧ್ಯರನ್ನೇ ನೋಡಿ ಹೇಳಿದಂತಿದೆ. ಶ್ರೀಯುತರು ಸ್ನೇಹಿತರಲ್ಲಿ ತೋರುವ ಆತ್ಮೀಯತೆ ಎಂಥವರನ್ನು ಮರಳು ಮಾಡಿಬಿಡುತ್ತದೆ. ಅವರೊಡನೆ ಕುಳಿತರೆ ಸಮಸ್ಯೆಗಳೆಲ್ಲಾ ಮಾಯವಾಗುತ್ತವೆ. ಎಂಥ ಜಟಿಲ ಸಮಸ್ಯೆಯನ್ನಾದರೂ ಮಿಂಚಿನ ವೇಗದಲ್ಲಿ ಪರಿಹರಿಸಿ ಬಿಡುತ್ತಾರೆ. ಇವರು ನಿರಹಂಕಾರಿ, ಸದ್ಗುಣಿ, ಸಜ್ಜನರು. ಕೇಳಿತೋ ಇಲ್ಲವೋ ಎಂಬಷ್ಟು ಮಿದುಮಾತು. ಮೇಲಾಗಿ ಮಿತಭಾಷಿಗಳು. ಎಲ್ಲರಲ್ಲೂ ಆತ್ಮೀಯತೆ, ಪ್ರೀತಿವಾತ್ಸಲ್ಯಗಳು ಅವರ ಹುಟ್ಟುಗುಣ. "ನಿಂದಿಸಿ ನುಡಿಯದಿರಾರನು" ಎಂಬ ನಿಜಗಣರ ಮಾತನ್ನು ಅಕ್ಷರಶಃ ಪಾಲಿಸುತ್ತಿರುವವರು. ಇವರು ಗಾಂಧಿ ತತ್ವವನ್ನು ಪಾಲಿಸುತ್ತಿರುವವರು. ಆಡಂಬರವಿಲ್ಲದ ಸರಳಜೀವನ ನಡೆಸುತ್ತಿರುವವರು. ಸರಳ ಉಡಿಗೆ, ನೇರನಡಿಗೆ. ಪುರಾಣಕಾಲದಲ್ಲಿ ಧರ್ಮರಾಜನನ್ನು "ಅಜಾತಶತ್ರು" ಎಂಬ ವರ್ಣನೆ ಇದೆ. ಆ ಮಾತು ಶ್ರೀ ಆರಾಧ್ಯರಿಗೂ ಅನ್ವಯವಾಗುತ್ತದೆ.

ಶ್ರೀಯುತರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆಸಲ್ಲಿಸಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಉಪನಿರ್ದೇಶಕರಾಗಿದ್ದಾಗ ಆ ಸಂಸ್ಥೆಯ ಕಿರಿಯ ಕಾರ್ಯಕರ್ತರಿಗೆ ಸಂಶೋಧನೆಗೆ ನೆರವಾಗಿ ಉತ್ತೇಜ ನೀಡಿ ಉತ್ತಮವಾದ ಸಂಶೋಧನಾ ಗ್ರಂಥಗಳನ್ನು ಹೊರತಂದಿದ್ದಾರೆ. ಸಂಶೋಧನೆ ಮಾಡುವ ವಿದ್ಯಾರ್ಥಿಗಳು ಆರಾಧ್ಯರ ಮಾರ್ಗದರ್ಶನ ಪಡೆದುಕೊಂಡು ಪಿ.ಎಚ್.ಡಿ ಪದವಿ ಪಡೆದಿದ್ದಾರೆ. ಅವರುಗಳ ಮಾರ್ಗದರ್ಶಕರು ಬೇರೆ ಬೇರೆಯವರಾದರೂ ಇವರು ವಿದ್ಯಾರ್ಥಿಗಳಿಗೆ ನೆರವಾಗಲೆಂದು ಮಾರ್ಗದರ್ಶನ ನೀಡುತ್ತಿದ್ದರು. ಕ.ಅ.ಸಂ.ಯ ಉಪನಿರ್ದೇಶಕರಾಗಿದ್ದಾಗ ಪ್ರಧಾನಸಂಪಾದಕರಾಗಿ ಮಹತ್ವದ ಅನೇಕ ಪ್ರಕಟಣೆಗಳನ್ನು ಹೊರತಂದಿದ್ದಾರೆ.

ಮಾನ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಲ್ಲಿ ಅನೇಕ ಸುಧಾರಣೆಗಳನ್ನು ತಂದು ಒಳ್ಳೆಯ ಹೆಸರುಗಳಿಸಿದ್ದಾರೆಂದು ಕೇಳಿದ್ದೇನೆ. ಅಲ್ಲದೆ ಇನ್ನೂ ಅನೇಕ ಸಂಘಸಂಸ್ಥೆಗಳಲ್ಲಿ ಅಧ್ಯಕ್ಷರಾಗಿದ್ದು ಉತ್ತಮ ಸೇವೆ ಸಲ್ಲಿಸಿರುವುದನ್ನೂ ಸಹ ಕಂಡಿದ್ದೇನೆ. ಇವರು ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ, ವಿಚಾರ ಗೋಷ್ಠಿಗಳಲ್ಲಿ, ಕವಿಗೋಷ್ಠಿಗಳಲ್ಲಿ ಭಾಗವಹಿಸಿ ಕಿರಿಯರಿಗೆ ಮಾರ್ಗದರ್ಶನ ನೀಡಿದ್ದಾರೆ.

ಅವರ ನನ್ನ ಪರಿಚಯ ಸುಮಾರು ಇಪ್ಪತ್ತು ವರ್ಷದ್ದು. ಅವರೊಡನೆ ಮಾತನಾಡುವುದೆಂದರೆ ತುಂಬ ಖುಷಿ. ಅವರ ತೂಕ ತಪ್ಪದ ಮಾತಿನಿಂದ ಅವರ ಬಳಿ ಹೋದವರ ಹೃನ್ಮನಗಳನ್ನು ಗೆಲ್ಲುತ್ತಾರೆ. ಅವರ ಮಾತು ಮಿತ, ತಿಳಿಸಬೇಕಾದುದನ್ನು ನಿಷ್ಪೃಷ್ಟವಾಗಿ, ಖಚಿತವಾಗಿ ತಿಳಿಯ ಹೇಳುತ್ತಾರೆ. ಇಂತಹ ಸ್ವಯಂಪೂರ್ಣ ಪ್ರತಿಭಾವಂತರು ನನ್ನ ಸ್ನೇಹಿತರಾಗಿರುವುದು ನನಗೆ ಹೆಮ್ಮೆ ಎನಿಸುತ್ತದೆ.

ಶ್ರೀಯುತರು ತಮ್ಮ ಪರಿಶುದ್ಧ ಕಾಯಕದಲ್ಲಿ ನಿತ್ಯನಿರತರಾಗಿ, ಮತ್ತೊಂದು ಕಡೆ ಗಮನ ಹರಿಸದೆ ಕಾಯಕತತ್ವಕ್ಕೆ ಮಹತ್ವ ನೀಡಿದವರು. ಬೇಕು ಬೇಕೆಂಬುದನ್ನು ತ್ಯಜಿಸಿ, ಸಾಕು ಸಾಕೆಂದು ಬಾಳುತ್ತಿರುವವರು ಸಕಲ ಜೀವಾತ್ಮರಿಗೂ ಲೇಸ ಬಯಸುತ್ತ, ಲೇಸನೆಸಗುತ್ತಾ, ಲೇಸೆನಿಸಿಕೊಂಡು ಬದುಕುತ್ತಿದ್ದಾರೆ. ಇವರು ಅನೇಕ ಗುಣಾದರ್ಶನಗಳನ್ನು ಹೊಂದಿದವರಾಗಿ, ಮಾನವತೆಯಿಂದ ಅತಿಮಾನವತಾಪಥದತ್ತ ದಾಪುಗಾಲು ಹಾಕುತ್ತಿದ್ದಾರೆ.

ನನಗೆ ತಾ ೧೩-೬-೨೦೦೪ರಂದು ಒಂದು ಪತ್ರ ಬಂತು. ಪ್ರೊ. ಎಸ್. ಬಸವಾರಾಧ್ಯರವರಿಗೆ ಒಂದು ಅಭಿನಂದನ ಗ್ರಂಥ ಒಂದನ್ನು ಅರ್ಪಿಸಲಿದ್ದೇವೆ. ಆರಾಧ್ಯರ ಚಿರಪರಿಚಯವಿರುವ ತಾವು ಒಂದು ಲೇಖನವನ್ನು ಕಳಿಸಿರೆಂದು. ತುಂಬಾ ಸಂತೋಷವಾಯಿತು. ಆದರೆ ಆ ಕೃತಿಯಲ್ಲಿ ಪ್ರಕಟವಾಗುವಷ್ಟು, ಉತ್ತಮ ಲೇಖನವನ್ನು ಬರೆಯಲಾಗದಿದ್ದರು, ಅವರ ಮೇಲಿನ ಪ್ರೀತಿ ವಿಶ್ವಾಸಕ್ಕಾಗಿ ನನಗೆ ತಿಳಿದಷ್ಟನ್ನು ಮನಬಂದತೆ ಬರೆದಿದ್ದೇನೆ. ಸುತ್ತಿ ಬಳಸಿದ ವಾಕ್ಯಗಳನ್ನು ಸರಳವೂ ನೇರವೂ ಆಗುವಂತೆ ಮಾಡುವ ಸಂದರ್ಭಕ್ಕನುಗುಣವಾಗಿ ಶಬ್ದಗಳನ್ನು ಹೊಂದಿಸುವ ಕಲೆ ನನಗಿಲ್ಲವಾದುದರಿಂದ ತೋಚಿದಂತ ಗೀಚಿದ್ದೇನೆ.

ಆ-ಗಮಾರ್ಥಾನುಸಂಧಾನಿ
ರಾ-ಗದ್ವೇಷ ವಿಭಂಜನ
ಧ್ಯಾ-ನ ಜ್ಞಾನ ಸಮಾಯುಕ್ತ
ಆರಾಧ್ಯಮಿತಿ ಲಕ್ಷಣಂ.

ಈ ಅರ್ಥದಲ್ಲಿ ಆರಾಧ್ಯರು ಅನ್ವರ್ಥನಾಮರು. ಎಪ್ಪತ್ತೈದು ಚಾತುರ್ಮಾಸಗಳನ್ನು ದಾಟುತ್ತಿರುವ ಪ್ರೊ. ಎಸ್. ಬಸವಾರಾಧ್ಯರಿಗೆ ತಾವುಗಳು ಈ ಸಂದರ್ಭದಲ್ಲಿ ಇಂತಹ ವಿದ್ವಾಂಸರನ್ನು ಸಂಭಾವಿಸಿ; ಗೌರವಿಸುವುದು ಅಭಿನಂದಿಸುವುದು ಅಗತ್ಯವಾಗಿ ನಡೆಯಬೇಕಾದ ಕೆಲಸ. ಶ್ರೀ ಆರಾಧ್ಯರು ನೂರು ವರುಷಗಳ ಕಾಲಬದುಕಿ ನಾಡ ನುಡಿಯ ಸೇವೆ ಮಾಡಲು ದೇವರು ಕೃಪೆ ಮಾಡಲೆಂದು ಆಶಿಸುತ್ತೇನೆ.

ನಿಘಂಟು ಕ್ಷೇತ್ರದ ಅಪೂರ್ವ ನಿಧಿ

-ಟಿ.ಆರ್. ಮಹಾದೇವಯ್ಯ

ಪ್ರಾಚ್ಯಕಾವ್ಯಸಂಪಾದನೆ, ನಿಘಂಟು ರಚನೆ -ಇವೆರಡೂ ಹೆಚ್ಚಿನ ವಿದ್ವತ್ತನ್ನು, ಸಂಶೋಧನ ಪ್ರವೃತ್ತಿಯನ್ನು ಭಾಷಾ ಪಾಂಡಿತ್ಯ ಹಾಗೂ ವ್ಯುತ್ಪತ್ತಿ ಜ್ಞಾನವನ್ನು ಬಯಸುವ ಕ್ಷೇತ್ರಗಳು. ಇವಕ್ಕೆ ಒಲಿದವರು ತೀರಾ ಕಡಿಮೆ. ಇಂಥ ಕನ್ನೆನೆಲದಲ್ಲಿ ಕೃಷಿ ಕೆಲವರದು ಮಾತ್ರ. ಉತ್ತರ ಕರ್ನಾಟಕದಲ್ಲಿ ಶಿ.ಶಿ. ಬಸವನಾಳ, ಸಂ.ಶಿ. ಭೂಸನೂರಮಠ, ಆರ್.ಸಿ.ಹಿರೇಮಠ ಮೊದಲಾದವರು, ದಕ್ಷಿಣ ಕರ್ನಾಟಕದಲ್ಲಿ ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಎಲ್. ಬಸವರಾಜು, ಹೆಚ್. ದೇವೀರಪ್ಪ. ಈ ಪಟ್ಟಿಯಲ್ಲಿ ಸೇರಿದ ಇನ್ನೊಂದು ಹೆಸರೇ ಪ್ರೊ. ಎನ್. ಬಸವಾರಾಧ್ಯ.

ಗ್ರಂಥ ಸಂಪಾದನೆ ಹಸ್ತಪ್ರತಿ ಶಾಸ್ತ್ರದಲ್ಲಿ ಅವರದು ದೊಡ್ಡ ಹೆಸರು. ಅದರಂತೆಯೇ ಅವರದು ನಿಘಂಟು ಕ್ಷೇತ್ರದಲ್ಲಿ ನಿಸ್ಸೀಮ ದುಡಿಮೆ. ಕಳೆದ ನಾಲ್ಕು ದಶಕಗಳಿಂದ ಅವರು ಈ ಎರಡೂ ಕ್ಷೇತ್ರಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಅದರ ಫಲವಾಗಿ ಕತ್ತಲೆಯಲ್ಲಿದ್ದ ಅನೇಕ ಪ್ರಾಚಿನ ಕಾವ್ಯಗಳು ಶಾಸ್ತ್ರೀಯವಾಗಿ ಸಂಪಾದನೆಗೊಂಡು ಉಚಿತವಾದ ಪ್ರಸ್ತಾವನೆ ಹಾಗೂ ಅನುಬಂಧಗಳೊಡನೆ ಅಚ್ಚಾಗಿ ಬಂದಿದೆ. ಅವರು ತಮ್ಮ ಅಪಾರ ಕ್ಷೇತ್ರಕಾರ್ಯ ಹಾಗೂ ವಿಶೇಷ ಅನುಭವಗಳಿಂದ ಆ ನಿಟ್ಟಿನಲ್ಲಿ ಕೆಲಸ ಮಾಡಬೇಕೆನ್ನುವವರಿಗೆ ಮಾರ್ಗದರ್ಶಕರಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಸಂಪಾದನಾ ವಿಭಾಗದಲ್ಲಿ ಉಪನಿರ್ದೇಶಕರಾಗಿದ್ದು ನಿವೃತ್ತರಾದ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಕೊನೆಯ ಸಂಪುಟಗಳ ಪ್ರಧಾನ ಸಂಪಾದಕರಾಗಿ ಅವನ್ನು ಪೂರ್ಣಗೊಳಿಸಿದರು. ಈ ಎರಡೂ ಕ್ಷೇತ್ರಗಳಲ್ಲಿ ತಾವು ನಿಸ್ಪೃಹತೆಯಿಂದ ದುಡಿದಿದ್ದರ ಜೊತೆಗೆ ಅನೇಕ ಯುವ ವಿದ್ವಾಂಸರನ್ನು ತಯಾರು ಮಾಡಿದರು. ಇದೂ ಸಹ ಅವರ ಮಹತ್ವದ ಸಾಧನೆ.

ಬಸವಾರಾಧ್ಯರು ಕೋಲಾರ ಜಿಲ್ಲೆ, ನಾರಸಿಂಹನಹಳ್ಳಿಯ ನಂಜುಂಡಾರಾಧ್ಯ - ಗಿರಿಜಮ್ಮ ದಂಪತಿಗಳಿಗೆ ೨೦-೨-೧೯೨೬ ರಂದು ಜನಿಸಿದರು. ಬಡತನದ ಮಧ್ಯೆ ಉಚಿತ ವಿದ್ಯಾರ್ಥಿ ನಿಲಯಗಳಲ್ಲಿದ್ದುಕೊಂಡು ಓದಿ ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೫೦ರಲ್ಲಿ ಎಂ.ಎ. ಪದವಿ ಪಡೆದು, ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸ್ನಾತಕ ವಿಶೇಷ ತಜ್ಞರೆಂದು ವೃತ್ತಿ ಜೀವನವನ್ನು ಆರಂಭಿಸಿದರು. ಸುದೈವದಿಂದ ಅವರ ಗುರುಗಳಾದ ಡಿ.ಎಲ್.ಎನ್., ತೀನಂಶ್ರೀ ಮೊದಲಾದವರ ಕಣ್ಣರಿಕೆಯಲ್ಲಿ ಕೆಲಸ ಮಾಡುವ ಅವಕಾಶ ದೊರಕಿತು. ಆಳವಾದ ಅಧ್ಯಯನ, ನಿಖರವಾದ ಬರವಣಿಗೆ, ಕರ್ತವ್ಯಪ್ರಜ್ಞೆ, ಸಮಯ ಪಾಲನೆ ಹಾಗೂ ನಿರ್ವಹಣಾ ಸಾಮರ್ಥ್ಯದಿಂದ ಅವರು ಹಿರಿಯರ ಮೆಚ್ಚುಗೆ ಗಳಿಸಿದರು.

ಆಗಲೇ ಅವರು ಕನ್ನಡ - ಕನ್ನಡ ನಿಘಂಟು ಯೋಜನೆಯಡಿ ಕೆಲಸ ಮಾಡಲು ಮೈಸೂರಿನಿಂದ ಡಿಎಲ್ಎನ್ ಅವರೊಡನೆ ಬಂದರು. ಸ್ನಾತಕ ಸಹಾಯಕರಾಗಿ, ಉಪಸಂಪಾದಕರಾಗಿ, ಕೊನೆಗೆ ಸಂಪಾದಕರಾಗಿ ಒಂದೂವರೆ ದಶಕಗಳ ಕಾಲ ದುಡಿದರು. ಮತ್ತೆ ಮೈಸೂರು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿ ಅಲ್ಲಿ ತಮ್ಮ ಸೇವೆಯನ್ನು ಮುಂದುವರಿಸಿ ನಿವೃತ್ತರಾದರು.

ಅನಂತರ ಅವರು 'ವೀರಶೈವಾಮೃತ ಮಹಾಪುರಾಣ' ಗ್ರಂಥ ಸಂಪಾದನೆಗೆ ಯುಜಿಸಿ ವಿದ್ವಾಂಸರಾಗಿ ನೇಮಕಗೊಂಡರು. ಜೊತೆಗೆ ಅವರು ಭಾಷಾಂತರ ಸರಳೀಕರಣ ಸಮಿತಿ, ಇಂಗ್ಲೀಷ್, ಕನ್ನಡ ಪರಿಷ್ಕರಣ ಸಮಿತಿ, ಪಠ್ಯಪುಸ್ತಕ ಸಮಿತಿ, ಕನ್ನಡ ನಿಘಂಟು ಸಂಪಾದಕ ಸಮಿತಿ ಮೊದಲಾದ ಅನೇಕ ಸಮಿತಿಗಳಲ್ಲಿ ಕೆಲಸ ಮಾಡಿದರು. ಕನ್ನಡ ನಿಘಂಟು ಯೋಜನೆಯ ಕೊನೆಯ ಹಂತದಲ್ಲಂತೂ ಅವರು ಸಂಪಾದಕ ಸಮಿತಿಯ ಅಧ್ಯಕ್ಷರೂ ಹಾಗೂ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಬೇಕಾಯಿತು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೂ ಸಹ ಕನ್ನಡ ನಿಘಂಟಿನ ಪರಿಷ್ಕರಣ ಕಾರ್ಯ ಅವರ ನೇತೃತ್ವದಲ್ಲೇ ಜರುಗಿತು.

ಪ್ರೊ. ಬಸವಾರಾಧ್ಯ ಮೂವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಸಂಪಾದಿಸಿದ್ದಾರೆ. ಆರಾಧ್ಯಚಾರಿತ್ರ, ಚತುರಾಚಾರ್ಯ ಪುರಾಣ, ತೊರವೆರಾಮಾಯಣ, ಹರಿಶ್ಚಂದ್ರ ಕಾವ್ಯ ಮೊದಲಾದುವನ್ನು ಹೆಸರಿಸಬಹುದು. ಅನೇಕ ಕೃತಿಗಳಿಗೆ ಬಹುಮಾನ, ಪ್ರಶಸ್ತಿಗಳು, ಸಂದಾಯವಾಗಿವೆ. ಅವರ 'ಹಳಗನ್ನಡ ನಿಘಂಟು' ನಿಘಂಟು ಹಾಗೂ ಸಂಪಾದನ ಕ್ಷೇತ್ರಗಳಿಗೆ ಅಪೂರ್ವ ಕೊಡುಗೆ. ಅವರು ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ವಿದ್ವತ್ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವರ ನೂರಾರು ಸಂಶೋಧನಾತ್ಮಕ ಹಾಗೂ ವೈಚಾರಿಕ ಲೇಖನಗಳು ನಾಡಿನ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಗೊಂಡು ಜನರ ಗಮನ ಸೆಳೆದಿವೆ.

ಇಷ್ಟೆಲ್ಲ ಕೆಲಸಗಳ ನಡುವೆಯೂ ಅವರು ಕೆಲವು ಸಾಂಸ್ಕೃತಿಕ ಸಂಘಟನೆಗಳ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದಾರೆ. ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿದ್ದು ಹಸ್ತಪ್ರತಿಶಾಸ್ತ್ರ ತರಗತಿಗಳು, ವಿಶೇಷೋಪನ್ಯಾಸಗಳು, ಕಮ್ಮಟಗಳನ್ನು ನಡೆಸಿದರು. ಅನೇಕ ಉಪಯುಕ್ತ ಗ್ರಂಥಗಳನ್ನು ಹೊರತಂದರು. ಅವರ ಬಹುಮುಖಿ ಸೇವೆಯನ್ನು ಪರಿಗಣಿಸಿ ಸಂಘ - ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು 'ಶ್ರೇಷ್ಠ ಸಾಹಿತಿ' ಎಂದು ಗೌರವಿಸಿದ್ದಲ್ಲದೆ ಅವರ ಜೀವನಸಾಧನೆ ಕುರಿತಂತೆ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಅವರೆಂದೂ ಪ್ರಸಿದ್ಧಿಯನ್ನು ಬಯಸಲಿಲ್ಲ. ಎಲೆಮರೆಯ ಕಾಯಂತೆ ವಿದ್ವತ್ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತು ೬೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಸನ್ಮಾನಿಸಿತು. ಈಚೆಗೆ ತಾನೆ ಕರ್ನಾಟಕ ಸಾಹಿತ್ಯ ಅಕಾಡಮಿಯು ಅವರಿಗೆ ೧೯೫೮ರ ಗೌರವ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿತು. ಅಂತೆಯೇ ಅವರ ಆತ್ಮೀಯರು ೧೧.೫.೯೬ರಂದು ಬೆಂಗಳೂರಿನಲ್ಲಿ ಸನ್ಮಾನಿಸಿದರು. ಅವರು ಕ.ಸಾ.ಪ. ಅಧ್ಯಕ್ಷರಾಗಿ ಮಾಡಿದ-ನಾಡು ನುಡಿ ಸೇವೆಯನ್ನು ಪ್ರತ್ಯೇಕವಾಗಿ ಹೇಳಬೇಕು.

ಒಂದು ಕಡೆ ಅಪರೂಪ ಕನ್ನಡವ ದಿಗ್ಗಜಗಳೆನಿಸಿದ ಹಿರಿಯ-ವಿದ್ವಾಂಸ ಪರಂಪರೆ, ಇನ್ನೊಂದು ಕಡೆ ವಿರಳವೆನಿಸುವ ಯುವ ವಿದ್ವಾಂಸರು - ಇವರ ನಡುವೆ ಶ್ರೀ ಬಸವಾರಾಧ್ಯರು ಸ್ನೇಹಪೂರ್ಣ ಸಂಪರ್ಕಕೊಂಡಿಯಂತಿದ್ದಾರೆ. ತಮ್ಮ ಸರಳ ಸಜ್ಜನಿಕೆ, ಹಾಸ್ಯಪ್ರಜ್ಞೆ, ನಿರ್ಮಲವಾದ ಅಂತಃಕರಣ, ಎಲ್ಲರೊಡನೆ ಬೆರೆಯುವ ನಿಷ್ಕಾಮ ಸ್ನೇಹಪರತೆಗಳಿಂದ ಅವರು ಎಲ್ಲರಿಗೂ ಬೇಕಾದವರಾಗಿದ್ದಾರೆ. ನೂರಾರು ಜನರಿಗೆ ಸ್ಫೂರ್ತಿ ನೀಡಿದ್ದಾರೆ. ತಮ್ಮ ಸೌಜನ್ಯಪೂರ್ಣ ಮಾರ್ಗದರ್ಶನದಿಂದ ಅನೇಕ ಯುವಜನರನ್ನು ವಿದ್ವತ್‌ಕಾರ್ಯದಲ್ಲಿ ತೊಡಗಿಸಿದ್ದಾರೆ. ವಿದ್ವಾಂಸರ ಸಂಖ್ಯೆ ಕುಗ್ಗುತ್ತಿದೆ ಎಂಬ ಅಳಲು ಕೇಳಿ ಬರುತ್ತಿರುವ ಆಧುನಿಕ ಸಂದರ್ಭದಲ್ಲಿ ಬಸವಾರಾಧ್ಯರ ಪರಿಪಕ್ವ ಜ್ಞಾನಾನುಭವಗಳನ್ನು ಯುವಜನ ಹೆಚ್ಚು ಹೆಚ್ಚು ಪಡೆಯುವಂತಾಗಲಿ ಎಂಬುದೇ ಎಲ್ಲರ ಆಶಯ.

ಸಾಹಿತ್ಯ ಸಂಶೋಧನೆಯ ನಿಷ್ಕಲ್ಮಷ ಪುರುಷ ಪ್ರೊ|| ಎನ್. ಬಸವಾರಾಧ್ಯರು

-ಎಂ.ಜಿ. ನಾಗರಾಜ್

ಶಬ್ದಾರ್ಥಗಳ ಸಂಶೋಧನೆಯಲ್ಲಿ ತನ್ಮಯಗೊಂಡ ಪ್ರೊ|| ಆರಾಧ್ಯರು ಸಾಹಿತ್ಯ ಲೋಕಕ್ಕೆ ಸಂಶೋಧನವಲಯಕ್ಕೆ ವಿನಮ್ರವಾಗಿ ಅರ್ಪಿಸಿದ ಕಾಣಿಕೆ ಎಂದರೆ ತಮ್ಮ ಸಂಪಾದಕತ್ವದ್ದ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ-ಕನ್ನಡ ನಿಘಂಟುಗಳಾಗಿವೆ. ಅವರೊಡನೆ ಮಾತಿಗೆ ತೊಡಗಿಕೊಂಡರೆ ತೊಟ್ಟಿಕ್ಕುವುದು ನಿಘಂಟಿನಂಥ ಶಬ್ದ ಅರ್ಥ ವಿವರಣೆಯ ಚಿಂತನೆಗಳು ಹಿತನುಡಿಗಳು. ಅವರ ಸಂಪರ್ಕದಲ್ಲಿ ಅನುಭವಕ್ಕೆ ಬರುವುದು ಅವರ ಹಿರಿಯತನದ ಗಾಂಭಿರ್ಯ ನಿರ್ಲಿಪ್ತ ನಿರಂಜನ ದೃಷ್ಟಿ, ಅನುಭವಗಳ ಮಹಾಪೂರ, ಸರಸ, ಸರಳ ಕಚಗುಳಿಯ ಹಾಸ್ಯ. ಅವರೊಡನೆ ನನಗೆ ಹೆಚ್ಚಿನ ಆತ್ಮೀಯ ಸಂಪರ್ಕ ಬೆಳೆದದ್ದು ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ನಿಘಂಟು ಸಭೆಗಳಲ್ಲಿ ನಡೆಯುತ್ತಿದ್ದ ಶಬ್ದಾರ್ಥಗಳ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದಾಗ.

ಸುಮಾರು ೫೦ ವರ್ಷಗಳ ಕಾಲದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕನ್ನಡ ನಿಘಂಟುಗಳ ಬೃಹತ್ ಸಂಪುಟಗಳನ್ನೂ ರೂಪುಗೊಳಿಸುವಲ್ಲಿ ಅವರ ಪಾತ್ರ ವಿವಿಧ ಪದೋನ್ನತಿಗಳಲ್ಲಿ ಕೂಡಿ ಬಂದಿವೆ. ೧೯೯೫ರಲ್ಲಿ ಬಿಡುಗಡೆಗೊಂಡ ನಿಘಂಟುವಿನ ೮ನೇ ಸಂಪುಟಕ್ಕೆ ಪ್ರಧಾನ ಸಂಪಾದಕರಾಗಿ, ಅವರು ತೋರಿದ ಪರಿಶ್ರಮ, ಶಬ್ದ ವಿವೇಚನೆ, ಶಿಸ್ತು ಬದ್ಧತೆ, ಸಹ ವಿದ್ವಾಂಸರೊಡನೆ ಸಮಂಜಸ-ಸಾಫಲ್ಯ ತರ್ಕ, ತೀರ್ಮಾನದ ನಿಕಷ ಹಾಗೂ ಸಹಾಯಕ ಉಪ ಸಂಪಾದಕರಿಗೆ ನೀಡುತ್ತಿದ್ದ ನಿರ್ದೇಶನ, ಉತ್ತೇಜನ, ಇವೆಲ್ಲಕ್ಕೂ ನೇರ ಸಾಕ್ಷಿಯಾಗಿ ಸಭೆಯಲ್ಲಿ ನಾನಿರುತ್ತಿದ್ದೆ.

ಅದೊಂದು ವಿಶಿಷ್ಟ ಸಭೆ. ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಡಾ. ಕೆ.ವಿ. ರಮೇಶ್, ಡಾ. ಕೆ. ಕೃಷ್ಣಮೂರ್ತಿ ಮುಂತಾದ ಸಾಹಿತಿ ವಿದ್ವಾಂಸರು ಇದ್ದ ಸಭೆ. 'ಸಿರಿಯಕ್ಕ' ಎಂಬ ಶಬ್ದದ ಪ್ರಯೋಗ, ಅರ್ಥ ಚರ್ಚೆಗೆ ಬಂತು. ಮೊದಲೇ ವಿದ್ವತ್ ಸಭೆ, ವಿದ್ವಾಂಸರು ಆ ಶಬ್ದದ ಅರ್ಥದ ವಿವಿಧ

ಆಯಾಮಗಳನ್ನೆಲ್ಲ ವಿವೇಚಿಸಿದರು; ವಾದಿಸಿದರು; ಮತ್ತೆ ಸಭೆ ಕೂಡಿದರು. ಇವರೆಲ್ಲರ ಅಭಿಪ್ರಾಯಗಳನ್ನು ಮಾನ್ಯ ಮಾಡುತ್ತ ಪ್ರೊ॥ ಎಸ್. ಬಸವಾರಾಧ್ಯರು, 'ಸಿರಿಯಕ್ಕ' ಎಂಬ ಶಬ್ದ 'ಜೇಷ್ಠಾದೇವಿ ಲಕ್ಷ್ಮಿಯ ಅಕ್ಕ', ಎಂಬ ಅರ್ಥಕ್ಕೆ ಹೊಂದಿಕೊಳ್ಳುವಂಥದ್ದು ಎಂದಿಟ್ಟುಕೊಂಡರೆ ಸೂಕ್ತವಾದೀತು ಎಂದು ವಿದ್ವತ್ಪೂರ್ಣ ತರ್ಕಗಳನ್ನಿಟ್ಟರು. ಅದು ಅಲ್ಲಿದ್ದ ವಿದ್ವಾಂಸರ ಸಮ್ಮತಿ ಪಡೆಯಿತು. ಹೀಗೆ ಪ್ರಧಾನ ಸಂಪಾದಕನಿಗಿರ ಬೇಕಾದ ವ್ಯುತ್ಪತ್ತಿ, ಪ್ರತಿಭೆ, ಶಾಸ್ತ್ರಜ್ಞಾನ, ಪಾಂಡಿತ್ಯ, ಸಮ್ಮತಿ, ಸಂವಹನ ಶಕ್ತಿ, ತಾರ್ಕಿಕ ಸಾಮಂಜಸ್ಯ ಈ ಎಲ್ಲವುಗಳ ಪ್ರತೀಕವಾಗಿ ಪ್ರೊ॥ ಆರಾಧ್ಯರು ನನಗೆ ಅಂದು ಎದ್ದು ಕಂಡರು. ಆ ನಿಘಂಟು ಬಿಡುಗಡೆಯಾಗಲು ನಿಗದಿತ ದಿನಾಂಕದಂದು ಎಲ್ಲ ಬಗೆಯಿಂದಲೂ ವ್ಯವಸ್ಥೆಗೆ ಮುಂದಾಗಿದ್ದರು ; ಸತತ ಕ್ರಿಯಾಶೀಲರಾಗಿದ್ದರು. ಇಂದಿಗೂ ಹಾಗೆಯೇ. ಇಂದಿಗೆ ಸುಮಾರು ೮೦ರ ಹತ್ತಿರಕ್ಕೆ ಬರುತ್ತಿರುವ ಅವರು ತಮ್ಮ ಹುಟ್ಟೂರು ನಾರಸಿಂಹನಹಳ್ಳಿಯ ಬಳಿಯ ಮನೆದೇವರು ಹೊಸೂರು ವೀರಭದ್ರನ ವಾರ್ಷಿಕ ಸ್ಮರಣೆಯನ್ನು ಬಿಟ್ಟಿಲ್ಲ. ಕಾರಣ ಅವರಿಗೆ ಧೈರ್ಯ ಪ್ರೇರಣೆ ನೀಡಿದವನು, ಬದುಕಿನ ಸವಾಲನ್ನು ಎದುರಿಸಲು ವ್ಯಕ್ತಿತ್ವ ದರ್ಶಕ ಎನಿಸಿದವನು 'ವಿಜಯಸ್ತಂಭರೋದಸಿ' ಎಂಬ ಯಗ್ವೇದೋಕ್ತ ವೀರಭದ್ರನೆ ; ಹಾಗೂ ಅವನ ವ್ಯಕ್ತಿತ್ವದ ಹಾಸುಹೊಕ್ಕು ಶ್ರೀ ಬಸವಾರಾಧ್ಯರಲ್ಲಿದೆ. ಎಲ್ಲಿಯೂ ತೊಡಗಿಸಿಕೊಂಡು ಸೋಲರಿಯದ, ಜೀವ ಅವರದು. ಈಚೆಗೆ ಅವರೊಡನೆ ಹೊಸೂರಿನ ವೀರಭದ್ರನ ದರ್ಶನಕ್ಕೆ ಹೋದಾಗ, ನನ್ನ ಪ್ರವೃತ್ತಿಯನ್ನೂ ತಿಳಿದಿದ್ದ ಅವರು, ಅಲ್ಲಿನ ಇತಿಹಾಸ, ಸ್ಥಳ ಜಾನಪದ, ಪುರಾಣ ಸಾಹಿತ್ಯಕ ಸ್ಪರ್ಶಿಗಳ, ಊರಿನ ಶಾಲೆಯ ಆಧುನಿಕ ವೈಜ್ಞಾನಿಕ ಶಿಕ್ಷಣದ ಪ್ರಗತಿ, ವೀರಗಲ್ಲು ಶಿಲ್ಪ-ಶಾಸನಗಳ ಅಧ್ಯಯನಕ್ಕೆ ವ್ಯವಸ್ಥೆ ಮಾಡಿ, ತಮ್ಮ ವಿದ್ವತ್ ಪ್ರೀತಿ ವಾತ್ಸಲ್ಯ ತೋರಿದರು. ಇದರ ಜೊತೆಗೆ ಸನಿಹದ ಅಲಕಾಪುರಿಯ ಚನ್ನ ಸೋಮೇಶ್ವರ ಗುಡಿಯ ವೀರಭದ್ರ ಶಿಲ್ಪವನ್ನೂ ನೋಡ ಹೋದಾಗ ಅಲ್ಲಿದ್ದ ಕ್ರಿ.ಶ. ೫ನೇ ಶತಮಾನದ ಶಿವಪರಂಪರೆಯ ವಾಕಾಟಕ ಅರಸರ ಪೂರ್ವಜರಾದ ಭಾರಶಿವರ ಪಾಣಿಪಟ್ಟ ರಹಿತವಾದ ಶಿವಲಿಂಗ ಶೈಲಿಯ ಪೂಜಾ ಶಿಲ್ಪ ಫಲಕವೊಂದರ ಅವಶೇಷವನ್ನೂ ನಾನು ಅಧ್ಯಯನ ಮಾಡಲು ಅನೂಕೂಲವಾಯಿತು. ಅವರ ವಿದ್ವತ್ ಸಹವಾಸದಲ್ಲಿ ನನಗೆ ದೊರಕಿದ ಲಾಭ ಇದು. ಸರಳ ಬದುಕಿನ ಅಂಗಳದಲ್ಲಿಯೂ ದೈನಂದಿನ ಚಟುವಟಿಕೆಗಳ ಸನ್ನಿವೇಶದಲ್ಲಿಯೂ ಸಂಶೋಧನೆಯ ಉಣಿಸು ಬೇಕೆನ್ನುವವರಿಗೆ ಬಡಿಸುವ ಪರಿ ಇದು, ಪ್ರೊ॥ ಬಸವಾರಾಧ್ಯರದು. ಆದರೆ ಅವರ ಜೊತೆಗಿದ್ದಾಗ ಅನಗತ್ಯ ಹರಟೆಗೆ ಅವಕಾಶವಿಲ್ಲ. ಬದಲು ಸರಸ ಹಾಸ್ಯ, ಅರ್ಥಪೂರ್ಣ ಮಾತಿಗೆ ಅವರು ಮೇಳ.

ಮೂವತ್ತಕ್ಕೂ ಮಿರಿದ ಅವರ ಸಂಪಾದಿತ ಕೃತಿಗಳು, ನೂರಕ್ಕೂ ಮಿರಿದ ಸಂಶೋಧನ ಲೇಖನಗಳನ್ನು ಪ್ರಕಟಿಸಿರುವ ಅವರ ಆಸಕ್ತಿಯ ಪ್ರಕಾರವಾದ ಶಾಸ್ತ್ರೀಯ ಸಂಪಾದನ-ಗ್ರಂಥ ಸಂಪಾದನೆ, ಪ್ರಾಚೀನ ಕನ್ನಡ ಕಾವ್ಯಗಳನ್ನು ಆ ಕಾರಣ ಪ್ರಕಟಿಸಿರುವ ಅವರೊಡನೆ ಅನೇಕ ವೇಳೆ ಸಂವಾದಕ್ಕಿಳಿದುದುಂಟು. ಆ ಸಂದರ್ಭದಲ್ಲಿ ಅವರು ವ್ಯಕ್ತಪಡಿಸಿದ ಭಾವನೆಗಳು ನನಗೆ ತುಂಬ ಖುಷಿ ಕೊಡುವಂಥದ್ದಾಗಿದ್ದು ಅವು ಹೀಗಿವೆ:

ಡಿ.ಎಲ್.ಎನ್., ತೀ.ನಂ.ಶ್ರೀ, ಜಿ.ಪಿ. ರಾಜರತ್ನಂ ಅವರ ಶಿಷ್ಯತ್ವದಲ್ಲಿ ಬೆಳೆದು ಬಂದ ಅವರಿಗೆ ತರಗತಿಯಲ್ಲಿ ಪಡೆದ ವಿದ್ಯೆ, 'ಹರಿಶ್ಚಂದ್ರ ಕಾವ್ಯ ಸಂಗ್ರಹ' ಬೋಧಿಸುತ್ತಿದ್ದ ತೀ.ನಂ.ಶ್ರೀ ಅವರೊಡನೆ 'ಎಳೆಹೂಟೆ' ಶಬ್ದಾರ್ಥವನ್ನು ಬಿಡಿಸಿದ್ದು, ಅದನ್ನು ಆ ಗುರುಗಳು ಮಾನಿಸಿ ಗುರುತು ಮಾಡಿಕೊಂಡದ್ದು, ಇವನ್ನೆಲ್ಲ ಹೇಳುವಾಗ ತಮ್ಮ ಗುರುಗಳ ಮೇಲಿನ ಅವರ ಅನನ್ಯ ಭಕ್ತಿಯ ಅವತರಣ ಭಾಷೆಯಾಗಿ ನನಗೆ ಕಾಣಿಸುತ್ತಿತ್ತು, ಈ ಸಂದರ್ಭದಲ್ಲಿ ಸುತ್ತೂರು ಮಠದ ಜ॥ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಕನ್ನಡ ಎಂ.ಎ. ಮಾಡಲು ಪಟ್ಟುಹಿಡಿದ ಕೈಗಂಬವಾದದ್ದು, ಡಿ.ಎಲ್.ಎನ್. ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಮಣಿಹಕ್ಕೆ ಬಂದು ಎ.ಆರ್.ಕೃ. ಅವರ ಅಧ್ಯಕ್ಷತೆಯಲ್ಲಿ ಪ್ರಧಾನ ಸಂಪಾದಕರಾಗಿ ಅದಕ್ಕೇ ಅರ್ಪಿಸಿಕೊಂಡದ್ದು ಇವನ್ನೆಲ್ಲಾ ಹೇಳುವಾಗ ಅವರ ಎದೆಯಭಾವ, ಮೆದುಳ ಬುದ್ಧಿ ವಿನೀತ ಗೌರವ, ಗುರುಸ್ಮರಣೆಯೊಡನೆ ಮಂಡಿತವಾಗಿ ಬಿಡುತ್ತವೆ. ಹಳ್ಳಿಯ ಪ್ರಾಣ ರಾಜಧಾನಿಯಲ್ಲಿ ಚೈತನ್ಯ ದಲೆಗಳಲ್ಲಿ ದಿಳ್ಳಿಯ ಪಾಂಡಿತ್ಯವನ್ನೂ ಪಡೆದ ಪರಿಶ್ರಮದ ಹಾದಿ ಇದು. ಇಲ್ಲಿಂದ ಸಂಶೋಧನ ಲೇಖನಗಳ ಪ್ರಾಚೀನ ಕಾವ್ಯ ಸಂಪಾದನೆ, ಪ್ರಕಟನೆಯಲ್ಲಿ ಹಿಂತಿರುಗಿ ಅವರು ನೋಡಲಿಲ್ಲ. ಮುಂದಿನ ಪಥವೆಲ್ಲ, ನಿಘಂಟು, ಸಂಶೋಧನೆ, ಶಾಸ್ತ್ರ ವಿಮರ್ಶೆ, ವಿವೇಚನೆಯ ಪಥವಾಯಿತು. ಈ ದಿಸೆಯಲ್ಲಿ ಅವರ ಪ್ರಾಚೀನ ಕಾವ್ಯದ ಸಂಪಾದನೆಯ ನಿಶಿತಮತಿಯ ಒಂದೆರಡು ಉದಾಹರಣೆಗಳು (ಅವರೇ ಹೇಳಿರುವಂತೆ) ಹೀಗಿವೆ:

ಚತುರಾಚಾರ್ಯ ಚಾರಿತ್ರ ಸಂಪಾದನೆಯ ಕಾಲದಲ್ಲಿ ಗಮನಿಸಿದ ಸಾಲು 'ತೆರಳ್ಗಿದ ಪುಲಿಯಂತೆ ಘುಡು ಘುಡುಸಿಯೂ.....' ಎಂಬಲ್ಲಿ 'ತೆರಳ್ದಿದ' ಎಂಬುದಕ್ಕೆ ಅರ್ಥ ಸಾಮಂಜಸ್ಯ ಇಲ್ಲ, ಹಾಗೂ ಛಂದೋಭಂಗವಿದೆ ಎಂದು 'ಕೆರಳ್ದಿದ ಪುಲಿಯಂತೆ' ಎಂದು ತಿದ್ದಿದಾಗ ಎರಡೂ ಕೂಡಿಬಂತು. ಹೀಗೆಯೇ ಜಗನ್ನಾಥ ದಾಸರ ಕೀರ್ತನೆಯ 'ಕಮಲಾಕ್ಷ ಮೊರೆಯಿಟ್ಟ ದ್ರೌಪದಿಯ....' ಎಂಬುದನ್ನು 'ಕಮಲಾಕ್ಷೆ ಮೊರೆಯಿಟ್ಟ ದ್ರೌಪದಿಯ....' ಎಂದು ತಿದ್ದಿದಾಗ ಅರ್ಥ ಪುಷ್ಟಿಯಿತ್ತು ಎಂದಿದ್ದಾರೆ.

ಕ್ರಿ.ಶ. ೧೪೨೫ರ ನೀಲಕಂಠಾಚಾರ್ಯನ 'ಆರಾಧ್ಯ ಚಾರಿತ್ರ' ವನ್ನು ಪ್ರೊ॥ ಬಸವಾರಾಧ್ಯರು ಸಂಪಾದಿಸಿದ್ದು ಅದನ್ನು ೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿದೆ. ಇದನ್ನೂ ಬಹಳ ಶಾಸ್ತ್ರೀಯವಾಗಿ ಸಂಪಾದಿಸಿ ತಮ್ಮ ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆಯನ್ನೂ ಎರಕ ಹೊಯ್ದಿದ್ದಾರೆ. ಈ ಕೃತಿಗೆ ಬರೆದಿರುವ ಅವರ ಪೀಠಿಕೆಯಂತೂ ಶಾಸ್ತ್ರ ಸ್ವಾದಿಷ್ಟವಾಗಿದೆ. ಕವಿಕಾಲ ವಿಚಾರ ಹೇಳುವಲ್ಲಿ ಶಾಸನಗಳನ್ನೂ ಗಮನಿಸಿ ಆಕರ ಗ್ರಂಥ ತೆಲುಗಿನ ಪಂಡಿತಾರಾಧ್ಯ ಚರಿತ್ರೆಯನ್ನೂ ತೌಲನಿಕ ವಿವೇಚನೆಗಿಟ್ಟು, ಇತರ ಆಕರ ಸಂಸ್ಕೃತ ಭಾಷಾಕೃತಿಗಳ ಅಲಭ್ಯತೆಯನ್ನು ಹೇಳಿ, ಕಥಾಸಾರದಲ್ಲಿ ಪ್ರಕರಣಗಳನ್ನು ತತ್ತ್ವ ಮತ್ತು ಆಚರಣೆಗಳನ್ನು ವಿವರಿಸಿ, ಗ್ರಂಥ ಸಂಪಾದನೆಗೆ ಬಳಸಿಕೊಂಡ ಓಲೆ ಪ್ರತಿಗಳನ್ನು ಉಲ್ಲೇಖಿಸಿದ್ದಾರೆ. ಯಾವುದೇ ಗ್ರಂಥ ಸಂಪಾದನೆಗೆ ಇದೊಂದು ಮಾದರಿ ಎನ್ನುವಂತಿದೆ. ಪದ್ಯ ಅಕಾರಾದಿ, ವಿಶಿಷ್ಟ ಪದಸೂಚಿ, ಶಬ್ದಾರ್ಥಕೋಶ, ಆಧಾರಗ್ರಂಥಗಳ ವಿವರ ಎಲ್ಲ ನೀಡಿ ಶಾಸ್ತ್ರೀಯ ಗ್ರಂಥ ಸಂಪಾದನೆಯ ಚೌಕಟ್ಟನ್ನು ಮುಂದಿಟ್ಟಿದ್ದಾರೆ. ಈ ಸಂಪಾದಿತ ಕೃತಿ ಅವರ ಅಚ್ಚು ಮೆಚ್ಚಿನದೂ ಆಗಿದೆ. ನಾನು ಗ್ರಂಥ ಸಂಪಾದನೆಯ ಬಗ್ಗೆ ಸಂಪಾದಿಸಿ ತೊಡಗಿದಾಗ ಮೌನವಾಗಿ ಈ ಕೃತಿಯನ್ನು ನನ್ನ ಕೈಗಿಟ್ಟರು. ಅದರಲ್ಲಿ ಇದನ್ನೆಲ್ಲ ಗಮನಿಸಿ, ಪ್ರೊ॥ ಬಸವಾರಾಧ್ಯರ ಶಾಸ್ತ್ರೀಯ ಪ್ರತಿಭೆಗೆ ಮಾರು ಹೋದೆ.

ಪ್ರೊ॥ ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಬಂದರು. ಅವರ ಅವಧಿಯಲ್ಲೂ, ಡಾ. ಸಾ.ಶಿ. ಮರುಳಯ್ಯ ಅವರ ಅವಧಿಯಲ್ಲಿದ್ದಂತೆ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕರಾಗಿ ನಾನು ಮತ್ತು ಪ್ರೊ॥ ಎಸ್. ಶ್ರೀನಿವಾಸನ್ ನೇಮಿತಗೊಂಡೆವು. ನಾವು ಪರಿಷತ್ಪತ್ರಿಕೆಯ ಘನತೆಯನ್ನು ನಿರ್ವಹಿಸಿಕೊಂಡು ಹೋಗಲು ಪ್ರೊ॥ ಬಸವಾರಾಧ್ಯರು ಸಂಪಾದಕ ಮಂಡಲಿಯ ಅಧ್ಯಕ್ಷರಾಗಿ, ತಮ್ಮ ಸಂಪೂರ್ಣ ಬೆಂಬಲ ನೀಡಿದರು. ತಮ್ಮ ಅಧ್ಯಕ್ಷ ನುಡಿಯಲ್ಲಿ ನಮ್ಮ ಕಾರ್ಯವನ್ನು ಬಹಳ ಮೆಚ್ಚಿಕೊಂಡು ಪ್ರೋತ್ಸಾಹಿಸಿದರು, ಬಿ.ಎಂ.ಶ್ರೀ. ಪ್ರತಿಷ್ಠಾನ ಪದ್ಮಶ್ರೀ ಪಂಡಿತರತ್ನಂ ಡಾ. ಬಿ. ಶಿವಮೂರ್ತಿಶಾಸ್ತ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ ಕ್ರಿಯಾಶೀಲ ಶಿಸ್ತು ಬದ್ಧ ಕಾರ್ಯಕ್ರಮ ನಡೆಸಿದರು.

ಡಾ. ಸೂರ್ಯನಾಥ್ ಕಾಮತರ ಅಭಿನಂದನಾ ಸಮಾರಂಭದಲ್ಲಿ. ಅಭಿನಂದನಾ ಗ್ರಂಥವಾದ 'ಸೂರ್ಯಕೀರ್ತಿ'ಯನ್ನು ಬಿಡುಗಡೆ ಮಾಡಿ ಆ ಕೃತಿಯನ್ನು ವಿಶ್ಲೇಷಿಸುತ್ತ, ಕಾರ್ಯಾಧ್ಯಕ್ಷನಾಗಿದ್ದ ನನ್ನ ಪರಿಶ್ರಮವನ್ನೂ ಮೆಚ್ಚಿ ಉಭಯ ಸಂವಹನ ಮಾಡಿದ ಅವರ ವೈಶಾಲ್ಯತೆ ನಿಜಕ್ಕೂ ಘನವಾಗಿತ್ತು ; ನಮ್ಮ ರಾಮನಗರದ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಿತಿಯ ವಾರ್ಷಿಕ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಆಹ್ವಾನಿಸಿದ್ದ ಸಂದರ್ಭದಲ್ಲಿ ಆಡಿದ ಮಾತು 'ಕನ್ನಡ ನನ್ನದು ಎಂಬ ಛಲ ನಮಗಿದ್ದರೆ, ಯಾವುದೇ ರಂಗದಲ್ಲಿ ಕನ್ನಡ ನಳನಳಿಸುತ್ತದೆ. ರಾಮನಗರದ ಈ ಕನ್ನಡ ಸಮಿತಿ ಇಂಥ ಛಲ ಹೊತ್ತು ಕೆಲಸ ಮಾಡುತ್ತಿರುವುದು ಶ್ಲಾಘನೀಯ'ಎಂದು ಬೆನ್ನು ತಟ್ಟಿದ್ದರು. ಸಮಿತಿಯ ಕಾರ್ಯ ಕರ್ತರಿಗೆಲ್ಲ ಅದೊಂದು ಮುಂದದ ಸನ್ನಿವೇಶ ವಾಗಿತ್ತು. ಡಾ.ಶ್ರೀ ಜಚನಿ ಅವರ ಕುರಿತ ದತ್ತಿ ಉಪನ್ಯಾಸವನ್ನೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅವರಿಂದ ಏರ್ಪಡಿಸಿದಾಗ, ಅದಕ್ಕಾಗಿ ಕೇವಲ ಅನುಭವದ ಮಾತನಾಡದೆ ಶ್ರೀ ಜಚನಿ ಅವರ ಕೃತಿಗಳನ್ನು ಅಧ್ಯಯನ ಮಾಡಿ, ತಮ್ಮ ಹಿರಿಯ ವಯಸ್ಸಿನಲ್ಲೂ ಅಪರಿಮಿತ ಶ್ರದ್ಧೆಯಿಂದ, ಉಪನ್ಯಾಸ ನೀಡಿದ ಅವರನ್ನು ಕಂಡರೆ, ನಮಗೊಂದು ಪಕ್ವ ಮಾದರಿ ಎನಿಸುತ್ತದೆ.

ಪುಸಕ್ತ ಪ್ರಕಟನೆಯ ಸಂದರ್ಭಗಳು, ಪರಿಷತ್ತಿನಿಂದಾಗಲಿ, ಅನ್ಯಗಣ್ಯ ಮೂಲಗಳಿಂದಾಗಲಿ ಆಹ್ವಾನಬಂದಾಗ, ಅದಕ್ಕೆ ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಯಾವುದೇ ವಿದ್ವಾಂಸರ ಹೆಸರನ್ನು ಗುಣೈಕ ದೃಷ್ಟಿಯಿಂದ ಶಿಫಾರಸು ಮಾಡಿ ಉತ್ತೇಜಿಸುವ ಪರಿಪಾಠ ಅವರದು. ಇಂಥ ಆರೋಗ್ಯಕರ ಮನಸ್ಸನ್ನು ಉಳಿಸಿಕೊಂಡು ಬಂದಿರುವ ಪ್ರೊ॥ ಎನ್. ಬಸವಾರಾಧ್ಯರು ಆರೋಗ್ಯ ಪೂರ್ಣ ಶತಾಯುಷಿಗಳಾಗಲಿ ಎಂಬ ಹರಕೆ ನನ್ನದು.

ವಿಶಾಲ ಮನಸ್ಸಿನಲ್ಲಿ ಬೆಳೆಯುತ್ತ ಬಂದು ವಿಶಾಲವಾಗಿಯೆ ಇಂದು ತಮ್ಮ ಸರಳನೇರ, ಪ್ರಾಮಾಣಿಕ ವ್ಯಕ್ತಿತ್ವದಿಂದ ನಮ್ಮ ನಡುವೆ ಬಾಳುತ್ತಿರುವ ಅವರ ಬಾಳು ನಮಗೊಂದು ನಿಷ್ಕಲ್ಮಷ ಮಾದರಿಯ ಅಸ್ತಿತ್ವ ; ಐಡೆಂಟಿಟಿಯ ಘನ ವ್ಯಕ್ತಿತ್ವ.

xxx

ಶಿಷ್ಯವತ್ಸಲ

-ಹೆಚ್.ವಿ. ವೀರಭದ್ರಯ್ಯ

ನನಗೆ ಚೆನ್ನಾಗಿ ನೆನಪಿದೆ. ದಿನಾಂಕ ೧೯.೮.೨೦೦೧ರಂದು ಹರ್ತಿಕೋಟೆಯಲ್ಲಿ ಒಂದು ಅವಿಸ್ಮರಣೀಯ ಸಮಾರಂಭ. ಹರ್ತಿಕೋಟೆ (ಹಿರಿಯೂರು ತಾಲ್ಲೂಕು, ಚಿತ್ರದುರ್ಗಜಿಲ್ಲೆ) ಪ್ರತಿಭಾವಂತರಿಗೆ ಜನ್ಮವಿತ್ತ ಪುಣ್ಯಗ್ರಾಮ. ನಾಡಿನ ಹೆಸರಾಂತ ಚಿತ್ರಕಲಾವಿದರಾದ ದಿವಂಗತ ಶ್ರೀ.ಪಿ.ಅರ್.ತಿಪ್ಪೇಸ್ವಾಮಿಯವರ ಸ್ಮರಣಾರ್ಥ-ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಾಯೋಜಿಸಿದ್ದ ಕೋಲಾಟಮೇಳದ ಸಮ್ಮೇಳನ. ಪಿ.ಅರ್. ತಿಪ್ಪೇಸ್ವಾಮಿಯವರು ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಮೂಲ್ಯವಾದುದು. ಮೈಸೂರು ವಿಶ್ವವಿದ್ಯಾಲಯದಲ್ಲಿ ಶ್ರೀಯುತರು ರೂಪಿಸಿದ ಜಾನಪದ ವಸ್ತು ಸಂಗ್ರಹಾಲಯ ಅನನ್ಯಮಾತ್ರವಲ್ಲ ಸಂಸ್ಕೃತಿಯನ್ನು ನೆನಪಿನಾಳದಿಂದ ಪುನರ್ ನಿರ್ಮಾಣಮಾಡಿದ ಅಪೂರ್ವಲೋಕ. ಧರ್ಮಸ್ಥಳದ 'ಮಂಜೂಷ'ವೂ ತಿಪ್ಪೇಸ್ವಾಮಿಯವರ ಶ್ರಮಸಾಮರ್ಥ್ಯದ ಜೀವಂತ ಸಾಕ್ಷಿ.

ಡಾ. ಹಿ.ಶಿ. ರಾಮಚಂದ್ರೇಗೌಡರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಅಧ್ಯಕ್ಷರಾಗಿ ಅಕಾಡೆಮಿಯ ವತಿಯಿಂದ ತಿಪ್ಪೇಸ್ವಾಮಿಯವರಿಗೆ ಸಲ್ಲಿಸಿದ ಗೌರವ ಸಮಾರಂಭವಾಗಿತ್ತು ಅದು. ಸಮಾರಂಭವನ್ನು ಉದ್ಘಾಟಿಸಿದವರು ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಹೆಚ್.ಜೆ. ಲಕ್ಕಪ್ಪಗೌಡರು. ಅಧ್ಯಕ್ಷತೆ ಸಚಿವರಾದ ಶ್ರೀ ವಿಶ್ವನಾಥ್ ಅವರದಾಗಿತ್ತು. ಮುಖ್ಯಅತಿಥಿಗಳಾಗಿ ಆಗಮಿಸಿದ್ದವರು ಪ್ರೊ. ಎನ್. ಬಸವಾರಾಧ್ಯರು. ಬಿಸ್ಕತ್ ಕಲರಿನ ಪ್ಯಾಂಟು, ಅದೇ ಬಣ್ಣದ ಕ್ಲೋಸ್ ಕಾಲರ್ ಕೋಟು, ಅದರ ಮೇಲೊಂದು ಬಿಳಿ ಬಣ್ಣದ ಶಾಲು ಹೆಗಲ ಮೇಲೆ ಅಲಂಕರಿಸಿತ್ತು. ಕೋಟಿನ ಮೇಲಿನ ಮೂರು ಗುಂಡಿಗಳನ್ನು ಹಾಕಿರಲಿಲ್ಲ. ಕೆಳಗಿನ ಗುಂಡಿಗಳನ್ನು ಹಾಕಿದ್ದರು, ಅದರಿಂದಾಗಿ ಎದೆ ತೆರೆದಿತ್ತು. ಬಸವಾರಾಧ್ಯರು ತೆರೆದೆದೆಯವರು ತಮ್ಮ

ನುಡಿ-ನಡೆ-ಚಿಂತನೆಗಳಲ್ಲಿ ಎಂಬುದನ್ನು ತೋರಿಸುವಂತಿತ್ತು. ಅದು ಅವರ ಮಾಮೂಲಿ ವೇಷಭೂಷಣ. ಅಂದಿನ ಸಮಾರಂಭ ಎರಡು ಅಧಿವೇಶನಗಳಲ್ಲಿ ನಡೆಯಿತು. ಶ್ರೀ ಹೆಚ್.ಎಂ. ಪರಮೇಶ್ವರಯ್ಯ ಎರಡೂ ಅಧಿವೇಶನಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಪರಮೇಶ್ ಹರ್ತಿಕೋಟೆಯವರು. ನಾನು ಹರ್ತಿಕೋಟೆಯವನೇ. ಈ ಸಮಾನಲಕ್ಷಣ ನಮ್ಮಿಬ್ಬರನ್ನು ಒಂದೆಡೆಗೆ ಸಮಾವೇಶಿಸಿತ್ತು. ಡಾ. ರಾಮಚಂದ್ರೇಗೌಡರು ನಾನು ಹರ್ತಿಕೋಟೆಯವನೆಂದು ತಿಳಿದು ಅಂದಿನ ಸಮ್ಮೇಳನದ ಸಂಚಾಲಕತ್ವವನ್ನು ನನ್ನಗಾಗಿಸಿದ್ದು ಅವರ ಅಭಿಮಾನವಾಗಿತ್ತು. ಆದರೆ ಎಲ್ಲ ಕಾರ್ಯಭಾರವನ್ನು ನಿರ್ವಹಿಸಿದವರು ಶ್ರೀ ಪರಮೇಶ್ ಮಾತ್ರ. ನಾನು ಅಲಂಕಾರಿಕ ಸಂಚಾಲಕನಾಗಿ ಭಾಗವಹಿಸಿದೆನಷ್ಟೆ ಹೌದು. ಪ್ರೊ. ಬಸವಾರಾಧ್ಯರು ಶ್ರೀ ಪರಮೇಶ್ ಅವರ ಪ್ರೀತಿಯ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರು, ಕನ್ನಡಸಾರಸ್ವತಲೋಕ ಕಂಡ ವಿನಯಶೀಲ ಸಂಭಾವಿತ ಸಂಶೋಧಕರು. ನನಗೆ ವಿಸ್ಮಯ ತಂದದ್ದು ಏನೆಂದರೆ ಸಾಮಾನ್ಯವಾಗಿ ಸಭೆ ಸಮಾರಂಭಗಳಲ್ಲಿ ಸಹೃದಯಿಗಳು ಪ್ರೀತಿ, ವಿಶ್ವಾಸ, ಅಭಿಮಾನಗಳಿಂದ ಸಾಹಿತಿಗಳನ್ನು , ವಿದ್ವದ್ ಬಂಧುಗಳನ್ನು ಸಮಾಜಕ್ಕೆ ಸೇವೆಸಲ್ಲಿಸಿದವರನ್ನು ಶಾಲುಹೊದಿಸಿ, ಹಾರಹಾಕಿ, ಫಲತಾಂಬೂಲ ನೀಡಿ ಸನ್ಮಾನಿಸುವುದು ರೂಢಿ, ಅದೊಂದು ಸುಸಂಸ್ಕೃತಿಯ ಲಕ್ಷಣ. ಆದರಂದು ಹರ್ತಿಕೋಟೆಯ ದಿವಂಗತ ಶ್ರೀ.ಪಿ.ಆರ್,ತಿಪ್ಪೇಸ್ವಾಮಿಯವರ ಸ್ಮರಣಾರ್ಥ ಏರ್ಪಡಿಸಿದ್ದ ಸಮಾರಂಭದಲ್ಲಿ ನಡೆದದ್ದೇ ಬೇರೆ. ಅದೊಂದು ವಿನೂತನ ವಿಶಿಷ್ಟ ಕಾರ್ಯಕ್ರಮವೆನಿಸಿತು. ಶ್ರೀ ಬಸವಾರಾಧ್ಯರು ಅದಕ್ಕೇ ಕಾರಣರಾದವರು. ಅವರದು ಮಾಗಿದ ಮನಸ್ಸು ಸಂಶೋಧನೆಯಿಂದ ಬಾಗಿದ ಬುದ್ಧಿ, ನಿಗರ್ವಕ್ಕೆ ಸಾಕ್ಷಿಯಾದ ಅಪರೂಪದ ದೃಶ್ಯ. ಕಾರ್ಯಸೂಚಿಯಂತೆ ಶ್ರೀ ಪರಮೇಶ್ ಶ್ರೀ ಅರಾಧ್ಯರು ಉಪನ್ಯಾಸಮಾಡುವಂತೆ ವಿನಂತಿಸಿಕೊಂಡರು. ಸಭೆಯೆಲ್ಲ ಕಣ್ಣಾಗಿ, ಕಿವಿಗೊಟ್ಟು ಆರಾಧ್ಯರ ಮಾತನ್ನಾಲಿಸಲು ಸಜ್ಜಾಯಿತು. ಆದರೆ ಶ್ರೀ ಆರಾಧ್ಯರು ತಾವು ತಂದಿದ್ದ ಶಾಲುಗಳನ್ನು ಹೊರತೆಗೆದರು. ಒಂದನ್ನು ಡಾ. ರಾಮಚಂದ್ರೇಗೌಡರಿಗೆ, ಮತ್ತೊಂದನ್ನು ಶ್ರೀ ಪರಮೇಶ್ ಅವರಿಗೆ ಹೊದಿಸಿ ಗಂಧದ ಹಾರಹಾಕಿ ಮಾತಿಗೆ ಪ್ರಾರಂಭಿಸಿದರು. "ನನ್ನ ಇಬ್ಬರು ವಿದ್ಯಾರ್ಥಿಮಿತ್ರರು ಇಲ್ಲಿ ನಡೆಸಿರುವ ಸಮ್ಮೇಳನವನ್ನು ಕಂಡು ನನಗೆ ತುಂಬ ಸಂತೋಷವಾಗಿದೆ. ದಿವಂಗತ ತಿಪ್ಪೇಸ್ವಾಮಿಯವರನ್ನು ನಾನು ಬಹಳ ವರ್ಷಗಳಿಂದ ಕಂಡವನು. ಅವರೊಂದಿಗೆ ಒಡನಾಡಿದವನು. ಅವರೊಂದು ಸುಸಂಸ್ಕೃತ ಚೇತನ. ಪ್ರಬುದ್ಧ ಕಲಾವಿದ. ಜಾನಪದಕ್ಕೆ ಅವರು ಸಲ್ಲಿಸಿದ ಸೇವೆ ಬಹುಕಾಲ ನಿಲ್ಲುವಂಥದು. ಅಂತಹ ಕಲಾವಿದರನ್ನು ಜನಮಾನಸದಿಂದ ಮರೆಯಾಗದ ರೀತಿಯಲ್ಲಿ ನನ್ನಿಬ್ಬರು ಆತ್ಮೀಯ ಶಿಷ್ಯರಲ್ಲಿ ನಡೆಸಿರುವ ಸೇವೆ ಅನುಕರಣೀಯವಾದುದು ಎಂಬ ನುಡಿಗಳ ಮೂಲಕ ಶಿಷ್ಯರನ್ನು ಹರಸಿದರು, ಅಭಿಮಾನದ ಮಾತುಗಳನ್ನಾಡಿದರು. ಆ ಮಾತುಗಳು ಔಪಚಾರಿಕವಾದುವುಗಳಾಗಿರಲಿಲ್ಲ. ನೈಜತೆಗೆ ನುಡಿರೂಪ ತಾಳಿದ ಶಿಷ್ಯವಾತ್ಸಲ್ಯದ ಪ್ರತೀಕವಾಗಿದ್ದವು. ಶ್ರೀಯುತರು ಜಾನಪದದಲ್ಲಿ ಮರೆಯಾಗುತ್ತಿರುವ ಸಾವಿರಾರು ಪ್ರಾದೇಶಿಕ 'ನುಡಿ'ಗಳನ್ನು ಸಂಗ್ರಹಿಸುವ ಅಗತ್ಯವನ್ನು ಒತ್ತಿ ಹೇಳಿದರು. ಗುರುಬಾಗಿ ಶಿಷ್ಯನ ಮಸ್ತಕದ ಮೇಲೆ ಪ್ರೀತಿಯ ಹಸ್ತವನ್ನಿಟ್ಟು ಆಶೀರ್ವದಿಸುವ ಕ್ರಿಯೆಯನ್ನು ಹಸ್ತಮಸ್ತಕ ಸಂಯೋಗವೆನ್ನುತ್ತಾರೆ. ಶ್ರೀ ಬಸವಾರಾಧ್ಯರು ಅತಿಥಿಯಾಗಿ ಆಗಮಿಸಿ ತಮ್ಮ ಪ್ರೀತಿಯ ವಿದ್ಯಾರ್ಥಿಗಳಿಗೆ ಸಾರ್ವಜನಿಕರೆದುರಿನಲ್ಲಿ ಗೌರವಿಸಿದ್ದು ನನಗೆ ನಿಜಕ್ಕೂ ಸಂತೋಷವನ್ನುಂಟುಮಾಡಿತು. ಪ್ರಾಧ್ಯಾಪಕನ ಪ್ರಾಂಜಲ ಮನಸ್ಸಿನ ದರ್ಶನವಾಯಿತು. ಕಣ್ಣಲ್ಲಿ ಹನಿಯಾಡಿದುವು- ಈ ಪ್ರಸಂಗವನ್ನು ನಾನು ವೈಭವೀಕರಿಸುತ್ತಿಲ್ಲ. ಇದೊಂದು ಅಪರೂಪದ ಸನ್ನಿವೇಶವೆಂದೇ ಭಾವಿಸಿದ್ದೇನೆ.

ಇನ್ನೊಂದು ಪ್ರಸಂಗದಲ್ಲಿ ನಾನು ಕಂಡ ಶ್ರೀ ಬಸವಾರಾಧ್ಯರು ಹೀಗಿದ್ದಾರೆ-ಶ್ರೀ ಸಿದ್ಧಗಂಗಾ ಮಠದ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಜನ್ಮದಿನಾಚರಣೆ ಗುರುವಂದನ ಸಮಾರಂಭದಲ್ಲಿ ನಾಡಿನ ಶ್ರೇಷ್ಠಗಣ್ಯರನ್ನು ಸನ್ಮಾನಿಸುವ ಸತ್ಸಂಪ್ರದಾಯವನ್ನು ಅನುಸರಿಸಲಾಗುತ್ತದೆ. ದಿನಾಂಕ ೪.೪.೨೦೦೪ರಂದು ಭಾನುವಾರ ಪೂಜ್ಯಶ್ರೀಗಳವರ ೯೭ನೇ ಜನ್ಮದಿನಾಚರಣೆಯಂದು ಪ್ರೊ. ಎನ್. ಬಸವಾರಾಧ್ಯರನ್ನು- "ಸಂಶೋಧಕ ಶಿವರತ್ನ" ರೆಂದು ಗೌರವಿಸಿ ಸನ್ಮಾನಿಸಿದ ಸಂದರ್ಭ. ಶ್ರೀಯುತರನ್ನು ಕುರಿತು ಲೇಖನವನ್ನು ಸಿದ್ಧಪಡಿಸಿದ ಮಿತ್ರ ಪ್ರೊ. ಎಂ. ಪ್ರಸನ್ನಕುಮಾರ್ ಅಂದು ನಡೆದುಕೊಂಡ

ಸನ್ಮಾರ್ಗ ನನಗೆ ಅಚ್ಚರಿಯನ್ನುಂಟುಮಾಡಿತು. ತಾವು ಯಾವ ವಿಶೇಷ ಉಪಚಾರವನ್ನೂ, ಆತಿಥ್ಯವನ್ನು ಅಪೇಕ್ಷಿಸದೆ ಶ್ರೀ ಪ್ರಸನ್ನಕುಮಾರ್ ಅವರ ಜೊತೆಯಲ್ಲಿ ಲಕ್ಷಾಂತರ ಭಕ್ತಾದಿಗಳಲ್ಲಿ ಒಬ್ಬರಾಗಿ ಭಾಗವಹಿಸಿದ್ದು ಅಸಮಾನ್ಯವಾಗಿತ್ತು. ಸಾಮಾನ್ಯವಾಗಿ ಗಣ್ಯಮಾನ್ಯ ಅತಿಥಿಗಳಾಗಿ, ಅದರಲ್ಲಿಯೂ ಸನ್ಮಾನ ಸ್ವೀಕಾರಕ್ಕೆ ಬಂದವರು ವಿಶೇಷ ಉಪಚಾರ, ಆತಿಥ್ಯಗಳನ್ನೇ ಬಯಸುವುದನ್ನು ಕಂಡುಂಡ ನನಗೆ ಶ್ರೀ ಆರಾಧ್ಯರ ರೀತಿನೀತಿಗಳು ಹೊಸದೆನಿಸಿದುವು. ಗಣ್ಯಮಾನ್ಯರ ಜೊತೆಗೆ ಬಂದವರೇ ವಿಶೇಷ ಗೌರವಾದರಗಳನ್ನು ನಿರೀಕ್ಷಿಸುವ ಇಂದಿನ ದಿನ-ಮಾನಗಳಲ್ಲಿ ಶ್ರೀ ಆರಾಧ್ಯರಂದು ಪೂಜ್ಯ ಶ್ರೀಗಳವರ ಸಮಾರಂಭದಲ್ಲಿ ನಡೆದು ಕೊಂಡದ್ದು "ಮರದ ನೆರಳಲ್ಲಿದ್ದು ತನ್ನ ನೆರಳನರಸಬಹುದೆ?"ಎಂಬಂತಿತ್ತು. ಆರು ಭಾಷೆಗಳಲ್ಲಿ ಪ್ರಬುದ್ಧ ಪಂಡಿತರಾಗಿದ್ದು, ಕನ್ನಡ ವಿದ್ವದ್‌ಲೋಕದ ದಿಗ್ಗಜಗಳ ಅಭಿಮಾನಕ್ಕೆ ಪಾತ್ರರಾಗಿದ್ದು, ಕನ್ನಡ ನಿಘಂಟಿನ ಶ್ರಮಶಿಲ್ಪಿಯಾಗಿದ್ದು, ಪ್ರತಿಷ್ಠಿತ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕೃತರಾಗಿದ್ದು, ಶ್ರೇಷ್ಠಗ್ರಂಥಗಳ ಸಂಪಾದಕರಾಗಿದ್ದು, "ಸಮಯಪಾಲನೆ, ಕರ್ತವ್ಯಪ್ರಜ್ಞೆ, ಅಚ್ಚುಕಟ್ಟುತನಕ್ಕೆ ಹೆಸರಾಗಿ, ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ, ಗುರುಪೂಜ್ಯರಲ್ಲಿ ಶ್ರದ್ಧಾನ್ವಿತಭಕ್ತಿ, ಸಜ್ಜನಿಕೆಯ ಸರಳತನ, ಹಾಸ್ಯದ ಲಾಸ್ಯ, ಸ್ನೇಹಪರತೆ, ನಿರ್ಮಲ ಅಂತಃಕರಣ, ಪ್ರಾಮಾಣಿಕತೆಯ ಪಾಂಡಿತ್ಯ, ಪರಿಶ್ರಮ ಮಂತ್ರದ ಶ್ರೀ ಬಸವಾರಾಧ್ಯರು 'ಗುರುವಂದನ' ಸಮಾರಂಭದಲ್ಲಿ ಎಲೆಯ ಮರೆಯ ಹೂ ಪರಿಮಳವಾದದ್ದೊಂದು ವಿಶೇಷ. ಪರಮಪೂಜ್ಯ ಸಿದ್ಧಗಂಗಾ ಶ್ರೀಗಳವರ ಬಗ್ಗೆ ಶ್ರೀಯುತರು ಅಂದಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ವ್ಯಕ್ತಪಡಿಸಿದ ಮಾತುಗಳು ನನ್ನಂಥವನಿಗೆ ಮಾರ್ಗದರ್ಶಕವಾದುವು.

ಮತ್ತೊಂದು ಸಂದರ್ಭ ಬೆಂಗಳೂರಿನ ರಾಜಾಜಿನಗರದ ಬಸವೇಶ್ವರ ಸಂಘದಲ್ಲಿ ಉಪನ್ಯಾಸಕನಾಗಿ ನಾನು ಭಾಗವಹಿಸಿದ್ದೆ ವೇಳೆಗೆ ಸರಿಯಾಗಿ ಸಭಾಸ್ಥಳಕ್ಕೆ ಹೋದೆ. ಅಲ್ಲಿನ್ನೂ ಸಭೆಗೆ ಜನ ಬಂದಿರಲಿಲ್ಲ. ಕಾರ್ಯಕರ್ತರು ಸಮಾಧಾನದ ಮಾತುಗಳನ್ನಾಡುತ್ತಿದ್ದರು. ಆ ವೇಳೆಗೆ ಶ್ರೀ ಬಸವಾರಾಧ್ಯರು ಅಲ್ಲಿಗೆ ಆಗಮಿಸಿದರು. ಪರಿಸ್ಥಿತಿಯನ್ನು ಬೇಗ ಗ್ರಹಿಸಿದರು. ತಕ್ಷಣ 'ಕಾಫಿ ಕುಡಿದು ಬರೋಣವೆ?' ಎಂದು ನನ್ನನ್ನು ಬಿಡದೆ ಕೈಹಿಡಿದು ಕರೆದುಕೊಂಡು ಸಮೀಪದಲ್ಲೇ ಇದ್ದ ಹೋಟೆಲ್‌ಗೆ ಕರೆದೊಯ್ದರು. 'ಸಾರ್, ನಾನು ಕಾಫಿ, ಟೀ ಕುಡಿಯೋಲ್ಲ ಎಂದು ನಾನಂದದಕ್ಕೆ ಪ್ರತಿಯಾಗಿ ಶ್ರೀಯುತರು 'ಹಾಲಾಗಬಹುದೇ?" ಎಂದು ಹೋಟೆಲ್ ಮಾಣಿಗೆ ಹಾಲೊಂದು, ಕಾಫಿ ಎರಡು ತಾ ಎಂದರು- ನಾನು ಇದೇನು ಇವರು ಎರಡು ಕಾಫಿ ಕುಡಿಯುತ್ತಾರೆಯೇ ಎಂದುಕೊಳ್ಳುತ್ತಿರುವಷ್ಟರಲ್ಲಿ ಶ್ರೀಯುತರು ದೂರದಲ್ಲಿ ಬರುತ್ತಿದ್ದ ಮಿತ್ರರನ್ನು ಕಂಡು ಆದೇಶಿಸಿದ್ದು ಅನಂತರ ತಿಳಿಯಿತು. ಇವೆಲ್ಲ ಸಾಮಾನ್ಯ ಸಂಗತಿಗಳೇ ಹೌದು. ಆದರೆ, ಇಂತಹ ಸಂದರ್ಭಗಳಲ್ಲಿಯೇ ವ್ಯಕ್ತಿಯೇನು? ಎಂಥವನು? ಎಂಬುದರಿವಾಗುವುದು. ಶ್ರೀ ಆರಾಧ್ಯರು ದೊಡ್ಡವಿದ್ವಾಂಸರು, ಸಂಶೋಧಕರು, ಆದರೆ ಅದೆಲ್ಲಕ್ಕಿಂತ ಅವರು ದೊಡ್ಡಮನುಷ್ಯರು, ದೊಡ್ಡಗುಣವುಳ್ಳ ಹಿರಿಯರು.

***

ನನ್ನ ದೃಷ್ಟಿಯಲ್ಲಿ ಎನ್. ಬಸವಾರಾಧ್ಯರು

-ಜಿ.ಎ. ಶಿವಲಿಂಗಯ್ಯ

ಸುಮಾರು ೧೯೬೦ರ ದಶಕದ ಮಧ್ಯಾವಧಿ ಇರಬಹುದು, ಆಗ ನನಗೆ ೨೩ ವರ್ಷದ ಹರೆಯ. ಮಧ್ಯಕಾಲೀನ ಹಾಗೂ ಆಧುನಿಕ ಸಾಹಿತ್ಯಾಭ್ಯಾಸ ಮತ್ತು ಅಂಧಾನುಕರಣೆಯ ಸಂಗೀತ ಎಂದರೆ ಕೊಳಲು ನುಡಿಸುವ ಚಟಕ್ಕೆ ಒಳಗಾಗಿ ಆಗಿನ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಗೋತಾ ಹೊಡೆದು ಗೃಹಸ್ಥನಾಗಿ ಕಾಲಹರಣ ಮಾಡುತ್ತಿದ್ದ ಕಾಲ. ಹರಿಶ್ಚಂದ್ರ ಕಾವ್ಯ ಸಂಗ್ರಹವನ್ನು ನೂರಾರು ಸಾರಿ ಓದಿ ಮನದ ಹಸಿವನ್ನು ಇಂಗಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ. ರಾಘವಾಂಕನ ಕವಿ ಚಮತ್ಕಾರಕ್ಕೆ ಮಾರುಹೋಗಿ ಮೂಲ ಕಾವ್ಯವನ್ನು ಓದುವ ಬಯಕೆಯಿಂದ ಅದನ್ನು ಅರಸುತ್ತಿದ್ದೆ. ನಾನಿದ್ದ ಪರಿಸರದಲ್ಲಿ ಮೂಲಕೃತಿಯು ನನಗೆ ಲಭ್ಯವಾಗಲಿಲ್ಲ. ಅದರ ಮೊದಲ ಸಂಪಾದಕರಾಗಿದ್ದ ಶ್ರೀ ಮ.ಅಂ. ರಾಮಾನುಜ ಅಯ್ಯಂಗಾರ್ ಅವರನ್ನು ಮನೆಯಲ್ಲಿಯೇ ಕಂಡು ಹರಿಶ್ಚಂದ್ರಕಾವ್ಯಕ್ಕಾಗಿ ಅಂಗಲಾಚಿದೆ. ಪಾಪ, ಅವರು ಮುದ್ರಣವಾದ ಈ ಕೃತಿಯು ಮುಗಿದು ಹೋಗಿ ಎಷ್ಟೋ ವರ್ಷಗಳಾಯಿತು. ಪುನರ್ಮುದ್ರಣ ಮಾಡಿಸುವ ಶಕ್ತಿ ಈಗ ನನ್ನಲ್ಲಿ ಇಲ್ಲವೆಂದು ತಿಳಿಸಿದರು. ಆಗಲೇ ಹಣ್ಣು ಹಣ್ಣು ಮುದುಕರಾಗಿದ್ದರು ರಾಮಾನುಜ ಅಯ್ಯಂಗಾರ್ಯರು. ನನ್ನ ಅಭಿಲಾಷೆಯನ್ನು ಕಂಡು ಮರುಗಿದರು. ನಿರಾಶೆಯಿಂದ ಹಿಂತಿರುಗಿದೆ. ನಾನಿದ್ದುದು ಮಂಡ್ಯ ನಗರಕ್ಕೆ ಬಹಳ ಹತ್ತಿರವಲ್ಲಿನ ಒಂದು ಹಳ್ಳಿಯಲ್ಲಿ. ಮೈಸೂರಿನಲ್ಲಿದ್ದ ವಿದ್ವಾಂಸರುಗಳ ಪರಿಚಯವಿರಲಿಲ್ಲ. ಆದರೂ ಅವರುಗಳ ಹೆಸರು ಮಾತ್ರ ಪರಿಚಿತವಾಗಿತ್ತು,

ಆ ಸಂದರ್ಭದಲ್ಲಿ ನಾನು ಒಂದು ಗ್ರಂಥಾಲಯ ಮತ್ತು ವಾಚನಾಲಯವನ್ನು ನಮ್ಮೂರಿನ ಯುವಕ ಸ್ನೇಹಿತರಿಂದ ಸಹಾಯವನ್ನು ಪಡೆದು ನಡೆಸುತ್ತಿದ್ದೆ. ವಾಚನಾಲಯಕ್ಕೆ "ಪ್ರಜಾವಾಣಿ" ಪತ್ರಿಕೆಯು ತಪ್ಪದೇ ಬರುತ್ತಿತ್ತು. ಭಾನುವಾರದ ವಿಶೇಷಾಂಕದಲ್ಲಿ ಆಯಾಯಾ ಕಾಲದಲ್ಲಿ ಪ್ರಕಟವಾಗುತ್ತಿದ್ದ ಹೊಸ ಹೊಸ ಪುಸ್ತಕಗಳನ್ನು

ತಿಳಿಸುವ ಕಾಲಂಅನ್ನು ಗಮನಿಸುವುದು ನನ್ನ ಚಾಳಿಯಾಗಿತ್ತು. ಸುಮಾರು ೧೯೫೫ರ ಮೇ ಅಥವಾ ಜೂನ್ ತಿಂಗಳು ಇರಬೇಕು, ಭಾನುವಾರದ ಸಾಹಿತ್ಯ ಕೃತಿಗಳ ಪುಟವನ್ನು ನೋಡುತ್ತಿರುವಾಗ ಹೊಸ ಪುಸ್ತಕಗಳ ಪ್ರಕಟಣೆಯ ಪಟ್ಟಿಯಲ್ಲಿ 'ಹರಿಶ್ಚಂದ್ರ ಕಾವ್ಯ'ವು ಪ್ರಕಟವಾಗಿದ್ದುದು ನನ್ನ ಕಣ್ಣಿಗೆ ಬಿತ್ತು. ಅದರ ಸಂಪಾದಕರು ಎನ್. ಬಸವಾರಾಧ್ಯರು ಮತ್ತು ಎಸ್. ಬಸಪ್ಪ, ಎಂದೂ, ಪ್ರಾಚ್ಯಕಾವ್ಯ ಪ್ರಕಾಶನ ಮಂದಿರ ಮೈಸೂರು ಎಂಬುದನ್ನು ನೋಡಿದೆ. ಆನಂದದ ಮೇಲೆ ಆನಂದ, ಏನೋ ಅಪೂರ್ವವಾದ ವಸ್ತು ಲಭ್ಯವಾಗಿ ಹೋಯಿತು ಎಂಬಂತೆ ಓಲಾಡಿದೆ, ಓಡಾಡಿದೆ. ತಕ್ಷಣವೇ ಆ ಕೃತಿಯು ನನಗೆ ಬೇಕೆಂದು ಪತ್ರಿಕೆಯಲ್ಲಿ ತಿಳಿಸಿದ್ದ ಪ್ರಕಾಶನಕ್ಕೆ ವಿ.ಪಿ.ಪಿ. ಮೂಲಕ ಕಳುಹಿಸಬೇಕೆಂದು ಪ್ರಾರ್ಥನಾಪತ್ರವನ್ನು ಅಂಚೆಯಲ್ಲಿ ರವಾನಿಸಿದೆ. ನಿರುದ್ಯೋಗಿಯಾಗಿದ್ದ ನಾನು ಕಷ್ಟಪಟ್ಟು ವಿ.ಪಿ.ಪಿ. ತಗಲುವ ಹಣವನ್ನು ಸಂಗ್ರಹಿಸಿ ಹರಿಶ್ಚಂದ್ರ ಕಾವ್ಯವನ್ನು ಪಡೆದುಕೊಂಡೆ. ಏನೋ ಮಹತ್ಸಾಧನೆಯನ್ನು ಮಾಡಿದೆನೆಂಬ ಸುಹಂಕಾರದಲ್ಲಿ ಹಿಗ್ಗುತ್ತಲೇ ಇದ್ದೆ. ಪಂಡಿತ ಎಸ್. ಬಸಪ್ಪನವರು ವಚನಗಳ ವಾಚನವನ್ನು ಬಹಳ ಸೊಗಸಾಗಿ ನಡೆಸುತ್ತಿದ್ದರು. ಅದನ್ನು ಕೇಳಿದ್ದ ಸಂಪಾದಕದ್ವಯರಲ್ಲಿ ಇದ್ದ ಎಸ್. ಬಸಪ್ಪನವರು ನಾನು ನೋಡಿದ್ದವರೋ ಅಲ್ಲವೋ ಎಂಬ ಅನುಮಾನ ಒಂದು ಕಡೆ, ಮತ್ತು ಈ ಎನ್. ಬಸವಾರಾಧ್ಯರು ಯಾರಿರಬಹುದು. ಒಮ್ಮೆ ನೋಡಬೇಕು ಎಂದು ಆಗ್ಗಾಗ್ಗೆ ಅಂದುಕೊಳ್ಳುತ್ತಿದ್ದೆ.

೧೯೬೬ರಲ್ಲಿ ನಾನು ಬಿ.ಎ. ಮುಗಿಸಿಕೊಂಡು ಮರಿಮಲ್ಲಪ್ಪನವರ ವಿದ್ಯಾಸಂಸ್ಥೆಯ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕನಾಗಿ ನೌಕರಿಗೆ ಸೇರಿಕೊಂಡ ಮೇಲೆ ವಿರಾಮದ ದಿನಗಳಲ್ಲಿ ಪ್ರಾಚ್ಯವಿದ್ಯಾಸಂಶೋಧನಾಲಯಕ್ಕೆ (ORI) ಹೋಗಿಬರುತ್ತಿದ್ದೆ. ಅಲ್ಲಿ ಪಂಡಿತ ಎಸ್. ಬಸಪ್ಪನವರನ್ನು ಕಂಡು ನನ್ನ ನಮಸ್ಕಾರಗಳನ್ನು ಅರ್ಪಿಸಿದೆ. ಆದರೆ ಶ್ರೀ ಬಸವಾರಾಧ್ಯರನ್ನು ಕಾಣಲಿಲ್ಲ, ಪ್ರೊ. ಎಸ್. ಬಸಪ್ಪನವರು ಕಂಡು ಅವರ ವೇಷಭೂಷಣಗಳನ್ನು ಗಮನಿಸಿದ್ದ ನಾನು ಎನ್. ಬಸವಾರಾಧ್ಯರೂ ಸಹ ಕಚ್ಚೆಪಂಚೆ ಜುಬ್ಬ ಜುಟ್ಟುಗಳಿಂದ ಕೂಡಿದ ಸಂಪ್ರದಾಯ ಭೂಷಣದವರಾಗಿರುವರೆಂದು ಭಾವಿಸಿದ್ದೆ.

ಆ ವೇಳೆಗಾಗಲೇ ನಾನು ಕೆಲವಾರು ಹಸ್ತಪ್ರತಿಗಳನ್ನು ಸಂಗ್ರಹಿಸಿಕೊಂಡಿದ್ದು ಅಪೂರ್ವಕೃತಿಗಳ ಬಗ್ಗೆ ಪರಿಚಯ ಲೇಖನಗಳನ್ನು ಬರೆಯುವ ಹವ್ಯಾಸವನ್ನು ಅಪೂರ್ವಕೃತಿಗಳ ಬಗ್ಗೆ ಪರಿಚಯ ಲೇಖನಗಳನ್ನು ಬರೆಯುವ ಹವ್ಯಾಸವನ್ನು ಬೆಳೆಸಿಕೊಂದಿದ್ದೆ. ಈ ನನ್ನ ಸಾಹಿತ್ಯ ಸೇವೆಯನ್ನು ಗಮನಿಸಿದ್ದ ಬೆಂಗಳೂರಿನ ಶ್ರೀಯುತ ಎಸ್. ಶಿವಣ್ಣನವರು (ಮೈಸೂರಿನಲ್ಲಿ ಕನ್ನಡ ಸ್ನಾತಕ ಪದವಿ ಪಡೆದುಕೊಂಡು ಪಿಹೆಚ್.ಡಿ. ಪಡೆಯುವ ಸಲುವಾಗಿ ಮೈಸೂರಿನಲ್ಲಿದ್ದರು) ನನ್ನನ್ನು ಬಹಳ ವಿಶ್ವಾಸದಿಂದ ಕಾಣುತ್ತಿದ್ದರು.

ಕನ್ನಡ ನಾಡಿನ ಪ್ರಖ್ಯಾತ ಸಾಹಿತಿಗಳಾಗಿದ್ದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರಿಗೆ ಸಂಭಾವನಾ ಗ್ರಂಥ-ದೇವಗಂಗೆಯನ್ನು ಪ್ರಕಟಿಸಿ ಅವರಿಗೆ ಅರ್ಪಿಸುವ ಯೋಜನೆಯೊಂದು ಸಿದ್ಧವಾಗಿತ್ತು. ಅದಕ್ಕೆ ಎನ್. ಬಸವಾರಾಧ್ಯರೇ ಯೋಜಕರು ಹಾಗೂ ಸಂಪಾದಕರಾಗಿದ್ದರು. ಈ ಅಭಿನಂದನ ಗ್ರಂಥಕ್ಕೆ ಒಂದು ಲೇಖನವನ್ನು ಕೊಡಬೇಕೆಂದು ಎಸ್. ಶಿವಣ್ಣನವರು ತಿಳಿಸಿದರು. ಅವರ ಇಚ್ಛೆಯಂತೆ ಒಂದು ಅಪರೂಪದ ಕೃತಿಯಾದ 'ಕಲ್ಯಾಣಶತಕ' ಎಂಬುದರ ಬಗೆಗೆ ಒಂದು ಲೇಖನವನ್ನು ಸಿದ್ಧಮಾಡಿಕೊಂಡು ಮಿತ್ರರಾದ ಶಿವಣ್ಣನವರಿಗೆ ತಿಳಿಸಿದೆ. ಆಗ ಶಿವಣ್ಣನವರು ನೇರವಾಗಿ ನನ್ನನ್ನು ಎನ್. ಬಸವಾರಾಧ್ಯರ ಬಳಿಗೇ ಕರೆದುಕೊಂಡು ಹೋದರು. ಬಸವಾರಾಧ್ಯರ ಬಳಿಗೆ ಹೋಗಿ ಅವರನ್ನು ಪ್ರತ್ಯಕ್ಷವಾಗಿ ನೋಡಲಾಗಿ ನನಗೆ ಭ್ರಮೆ ನಿರಸನವಾಯಿತು. ನಾನು ಕಲ್ಪಿಸಿಕೊಂಡಿದ್ದ ಬಸವಾರಾಧ್ಯರೇ ಬೇರೆ, ಈಗ ಕಾಣುತ್ತಿರುವ ಬಸವಾರಾಧ್ಯರೇ ಬೇರೆ. ಸೊಗಸಾಗಿ ಟೈ ಕಟ್ಟಿದ್ದ ಕಂಠ, ತಿದ್ದಿಬಾಚಿದ್ದ ಕ್ರಾಪು, ಅಚ್ಚುಕಟ್ಟಾಗಿ ಇಸ್ತ್ರಿಮಾಡಿ ಧರಿಸಿದ್ಧ ಉಲ್ಲನ್ ಸೂಟುಧಾರಿ. ಸಂಪ್ರದಾಯದ ಉಡುಗೆಯಲ್ಲಿ ಇರುತ್ತಾರೆಂದು ಭಾವಿಸಿದ್ದ ನನಗೆ ಕೊಂಚ ವಿಸ್ಮಯವಾಯಿತು, ಈ ಭಾವನೆಯನ್ನು ತೋರಗೊಡದೆ ನನ್ನ ಲೇಖನವನ್ನು ಅವರಿಗೆ ಕೊಟ್ಟದ್ದೂ ಆಯಿತು. ಪ್ರಾಸ್ತವಿಕ ಸಂಭಾಷಣೆ, ಪರಸ್ಪರ ಪರಿಚಯವಾದ ನಂತರ ಅವರು ಹೇಳಿದ ಆತ್ಮೀಯವಾದ ಮಾತುಗಳು ಇನ್ನು ನನ್ನ ನೆನಪಿನಲ್ಲಿವೆ, "ಶಿವಲಿಂಗಯ್ಯನವರೇ, ನೀವು ಅಪರೂಪದ ಕೃತಿಗಳನ್ನು ಚೊಕ್ಕಟವಾಗಿ ಸಂಪಾದಿಸಿ

ಪ್ರಕಟಿಸುವ ಪ್ರಯತ್ನ ಮಾಡಬೇಕು. ಆ ಕೃತಿಗಳು ಸಣ್ಣವಿರಲಿ, ದೊಡ್ಡವಿರಲಿ ಆ ಬಗ್ಗೆ ಯೋಚಿಸಬೇಡಿ. ಕೆಲವು ವೇಳೆ ಪ್ರಸಿದ್ಧ ಕವಿಗಳ ಚಿಕ್ಕ ಕೃತಿಗಳ ಉದಾಸೀನತೆಗೆ ಒಳಗಾಗಿ ಪ್ರಕಟವಾಗಲು ಸಾಧ್ಯವಾಗುವುದಿಲ್ಲ. ಜೊತೆ ಜೊತೆಗೆ ಸಂಶೋಧನ ಲೇಖನಗಳನ್ನು ಬರೆಯಲು ಪ್ರವೃತ್ತಿರಾಗಿ" ಎಂದು ಬೋಧಿಸಿದರು. ಅವರ ಮಾತಿಗೆ ಸಮ್ಮತಿಸಿದೆ. ಬೇಡವೆಂದರೂ ಕಾಫಿ ತರಿಸಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು, ಇದು ಅವರನ್ನು ಕಂಡ ಮೊದಲ ಸಂದರ್ಭ.

ನಂತರ ಅವರನ್ನು ಹಲವುಬಾರಿ ಕಂಡು ನನ್ನ ವ್ಯವಸಾಯಕ್ಕೆ ಅನುಕೂಲವಾದ ಸಲಹೆಗಳನ್ನು ಕೇಳಿ ಪಡೆದುಕೊಳ್ಳುತ್ತಿದ್ದೆ. ಬಸವಾರಾಧ್ಯರು ಒಬ್ಬ ಸಮರ್ಥ ವಿದ್ವಾಂಸರಾದರೂ ನಿರಾಡಂಬರದಿಂದ ಕೂಡಿದವರೂ, ನಿರಹಂಕಾರಿಗಳೂ, ವಾತ್ಸಲ್ಯಮಯ ನುಡಿಯವರೂ, ಕಿರಿಯ ಲೇಖಕರಿಗೆ ಉತ್ತೇಜನ ಕೊಡುವ ಹಾಗೂ ಧೈರ್ಯವನ್ನು ಕೊಡುವಂತಹ ವ್ಯಕ್ತಿತ್ವ ಉಳ್ಳವರಾಗಿದ್ದರು. ಅವರು ನನಗೆ ಹೇಳಿದ್ದ ಮಾತಿನ ಮೇರೆಗೆ ಭೀಮಕವಿಯ ಷಡಕ್ಷರ ರಗಳೆಯನ್ನು ಮೂರು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿ ಪ್ರಕಟಿಸಿದೆ. ಹಸ್ತಪ್ರತಿಗಳಲ್ಲಿ ಈ ಕೃತಿಗೆ ಭೀಮಕವೀಶ್ವರ ರಗಳೆ ಎಂದೇ ನಮೂದಾಗಿತ್ತು, ಈ ಕೃತಿಯ ಹಸ್ತಪ್ರತಿಗಳು ಹಲವಾರು ಕಡೆ ಕಂಡುಬಂದಿದ್ದರೂ ಇದನ್ನು ಪ್ರಕಟಿಸುವ ಸಂಕಲ್ಪವನ್ನು ಯಾರೂ ಮಾಡಿರಲಿಲ್ಲ. ಕಾರಣ ಇದೊಂದು ಅತ್ಯಂತ ಚಿಕ್ಕದಾದ ಕೃತಿ "ಭೀಮಕವೀಶ್ವರ ರಗಳೆ' ಎಂದರೆ ಯಾವ ಭೀಮನೋ ಎಂಬ ಉದಾಸೀನತೆಗೆ ಕಾರಣವಿತ್ತೆಂದು ಕಾಣುತ್ತದೆ. ಅಂತು ಈ ಒಂದು ಪುಟ್ಟ ಕೃತಿಗಳನ್ನು ಸಂಪಾದಿಸಿ, ಪ್ರಕಟಿಸಿ ಎನ್. ಬಸವಾರಾಧ್ಯರಿಗೆ ಕೊಟ್ಟಾಗ ಒಂದು ಮಹಾಕಾವ್ಯವನ್ನು ಸಂಪಾದಿಸಿದರೆ ಎಷ್ಟು ಸಂತೋಷಪಡಬಹುದೋ ಅಷ್ಟೇ ಸಂಭ್ರಮದಿಂದ ನನ್ನ ಬೆನ್ನೂ ತಟ್ಟಿದರು. ಈ ಭೀಮಕವಿ ಇನ್ನಾರು ಅಲ್ಲ. ಪ್ರಸಿದ್ಧವಾದ ಬಸವಪುರಾಣವನ್ನು ರಚಿಸಿದ ಜನಪ್ರಿಯಕವಿ ಎಂದು ತಿಳಿಸಿದರು.

ಶ್ರೀಯುತ ಎನ್. ಬಸವಾರಾಧ್ಯರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ (ಈಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಎಂದು ಬದಲಾಯಿಸಿದೆ) ವಿಭಾಗದ ಸಂಪಾದಕರಾಗಿ ಸಹಾಯಕ ಸಂಶೋಧಕರಿಗೂ, ಹಿರಿಯ ಸಂಶೋಧಕರಿಗೂ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ವಿಭಾಗದ ಸಂಪಾದಕರಾಗಿದ್ದರೂ ಹಲವಾರು ಕೃತಿಗಳನ್ನು ಸಂಪಾದಿಸಿ ಕನ್ನಡ ಸಾಹಿತ್ಯಕ್ಕೆ ಅಪಾರವಾಗಿ ಸೇವೆ ಸಲ್ಲಿಸಿರುತ್ತಾರೆ. ಹಾಗೂ ಕನ್ನಡನಾಡಿನ ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ. ಸುಮಾರು ೩೧ಕ್ಕೂ ಹೆಚ್ಚಿನ ಕೃತಿಗಳನ್ನು ಪರಿಷ್ಕರಿಸಿ ಸಮರ್ಥವಾದ ರೀತಿಯಲ್ಲಿ ಸಂಪಾದನೆ ಮಾಡಿರುತ್ತಾರೆ.

ಸಾಹಿತ್ಯದೇವಿಗೆ ಅವಳಿ ಮಕ್ಕಳಿದ್ದಾರೆ ಎನ್ನಬಹುದು. ಒಬ್ಬ ಕವಿ, ಇನ್ನೊಬ್ಬ ಸಮರ್ಥ ಸಂಪಾದಕ. ಈರ್ವರೂ ಸಮನಾದವರೆ. ಕವಿಯು ಕಾವ್ಯವನ್ನು ರಚಿಸಿದರೆ, ಸಂಪಾದಕನು ಆ ಕಾವ್ಯವನ್ನು ಊರ್ಜಿತಗೊಳಿಸುತ್ತಾನೆ. ಗ್ರಂಥಸಂಪಾದಕನಿಗೆ ತಾನು ಪರಿಷ್ಕರಿಸುವ ಕೃತಿ ಯಾವುದೇ ಧರ್ಮಕ್ಕೆ ಸೇರಿದ್ದರೂ ಅದರ ಬಗೆಗೆ ಭೇದಭಾವನೆ ಇರಬಾರದು. ನನ್ನದೇ ಅತ್ಯುತ್ತಮ ಗ್ರಂಥಸಂಪಾದನೆ ಎಂಬ ಹಮ್ಮು ಇರಬಾರದು. ಒಬ್ಬ ಸಂಪಾದಕ ನಿಜಕ್ಕೂ ಒಬ್ಬ ಕವಿಗೆ (ಯಾವ ಧರ್ಮದವನೇ ಆಗಿರಲಿ) ಸರಿ ಸಮಾನನಾಗಿರುತ್ತಾನೆ. ಒಂದು ಕೃತಿಯನ್ನು ಸಂಪಾದಿಸಲು ತೊಡಗಿದರೆ ಅದಕ್ಕೆ ಸಂಬಂಧಿಸಿದ ಧರ್ಮವನ್ನು ಅರಿತು ತನ್ನದಾಗಿ ಮಾಡಿಕೊಳ್ಳುತ್ತಾನೆ. ಅಷ್ಟೇ ಏಕೆ, ಆ ಸಂದರ್ಭದಲ್ಲಿ ಸಂಪಾದಕನು ಆ ಧರ್ಮದ ತೀರ್ಥದಲ್ಲಿ ಮಿಾಯುತ್ತಿರುತ್ತಾನೆ. ಇಂತಹ ಅಮೂಲ್ಯವಾದ ಗುಣಗಳನ್ನು ಶ್ರೀಮಾನ್ ಎನ್. ಬಸವಾರಾಧ್ಯರಲ್ಲಿ ಕಾಣಬಹುದು.

ಎನ್. ಬಸವಾರಾಧ್ಯರು ೩೧ ಕೃತಿಗಳನ್ನು ಸಂಪಾದಿಸಿದ್ದಾರೆ. ಇವುಗಳಲ್ಲಿ ವೈದಿಕಧರ್ಮದವರ ಕೃತಿಗಳಿವೆ, ವೀರಶೈವ ಧರ್ಮದವರ ಕೃತಿಗಳಿವೆ, ಜೈನ ಧರ್ಮದವರ ಕೃತಿಗಳಿವೆ. ಇವೆಲ್ಲವುಗಳನ್ನು ಸಮಾನ ದೃಷ್ಟಿಯಿಂದ ನೋಡಿ ಸಂಪಾದಿಸಿದ್ದಾರೆ. ಉದಾಹರಣೆಗೆ: ತೊರವೆ ರಾಮಾಯಣ, ಶತಕ ಸಾಂಗತ್ಯಗಳು ಬ್ರಾಹ್ಮಣ ಸಾಹಿತ್ಯ; ಆರಾಧ್ಯ ಚಾರಿತ್ರ, ಚತುರಾಚಾರ್ಯ ಚಾರಿತ್ರ, ಇತ್ಯಾದಿಗಳು ವೀರಶೈವ ಸಾಹಿತ್ಯ; ಧರ್ಮನಾಥ ಪುರಾಣ, ಉದ್ಯೋಗಸಾರ ಜೈನಧರ್ಮದ ಕೃತಿಗಳು. ಈ ಕೃತಿಗಳಲ್ಲಿ ಶ್ರೀಯುತ ಬಸವಾರಾಧ್ಯರು ಬರೆದಿರುವ ಪೀಠಿಕೆಯನ್ನು ಗಮನಿಸಿದರೆ ಇವರ ಆಳವಾದ ಪಾಂಡಿತ್ಯ ಸಂಶೋಧನಾತ್ಮಕ

ನಿರೂಪಣೆಗಳು ಕಂಡುಬರುತ್ತವೆ. ಒಬ್ಬ ರಾಜನನ್ನು ಶಾಸನಗಳಲ್ಲಿ ವರ್ಣಿಸುವಾಗ "ಅವನನ್ನು ಸರ್ವಧರ್ಮ ಸಮನ್ವಯ" ಎಂದು ಕಂಡರಣೆ ಮಾಡಿರುತ್ತಾರೆ. ಈ ಹೇಳಿಕೆ ಸತ್ಯವಾಗಿಯೂ ಎನ್. ಬಸವಾರಾಧ್ಯರಿಗೂ ಸಲ್ಲುತ್ತದೆ. ಇವರಿಗಿರುವ ಪ್ರಗಲ್ಭತೆಯನ್ನು ಇವರ ಪೀಠಿಕೆಗಳನ್ನು ಓದಿದಾಗಲೇ ತಿಳಿಯಬಹುದು.

ಸುಮಾರು ೧೯೭೯ನೇ ವರ್ಷವಿರಬಹುದು. ನನ್ನ ಓಲೆಗರಿ ಸಂಗ್ರಹದಲ್ಲಿ ನೀಲಕಂಠಾಚಾರ್ಯನ ಆರಾಧ್ಯ ಚಾರಿತ್ರವೂ ಇತ್ತು. ಆ ವರ್ಷದ ಸಂದರ್ಭದಲ್ಲಿ ಶ್ರೀಯುತ ಎನ್. ಬಸವಾರಾಧ್ಯರು ಈ ಕೃತಿಯನ್ನು ಸಂಪಾದಿಸುತ್ತಿದ್ದರು. ಈ ವಿಷಯ ನನಗೆ ತಿಳಿದಿರಲಿಲ್ಲ. ಎಸ್. ಶಿವಣ್ಣನವರ ಮೂಲಕ ನನ್ನಲ್ಲಿರುವ ಆರಾಧ್ಯಚಾರಿತ್ರದ ಹಸ್ತಪ್ರತಿಯ ವಿಚಾರ ಆರಾಧ್ಯರಿಗೆ ತಿಳಿದುಹೋಯಿತು. ನನ್ನ ವಿಳಾಸವನ್ನು ಹೇಗೋ ಪತ್ತೆ ಮಾಡಿ, ನನಗೆ ಪತ್ರ ಬರೆದರು. ನೀವು ನನ್ನಲ್ಲಿಗೆ ಬರಲು ಸಾಧ್ಯವಿಲ್ಲದಿದ್ದರೆ ನಾನೇ ಬಂದು ಹಸ್ತಪ್ರತಿಯನ್ನು ಪಡೆದುಕೊಳ್ಳುವುದಾಗಿ ಪತ್ರದಲ್ಲಿ ತಿಳಿಸಿದ್ದರು. ಆ ಸಮಯದಲ್ಲಿ ನಾನು ಅನಾರೋಗ್ಯ ಪೀಡಿತನಾಗಿದ್ದೆ. ಆದರೂ ಅವರ ಸಂಪಾದನಾ ಕಾರ್ಯಕ್ಕೆ ಇನ್ನೂ ಅನೂಕೂಲವಾಗಲೆಂದು ನಾನೇ ಅವರ ಬಳಿಗೆ ಹೋಗಿ ಹಸ್ತ ಪ್ರತಿಯನ್ನು ಕೊಟ್ಟು ಬಂದೆನು. ನನ್ನ ಸ್ಥಿತಿಯನ್ನು ಗಮನಿಸಿದ ಆರಾಧ್ಯರು ಬಹಳ ನೊಂದುಕೊಂಡರು. ನಾನೇ ಬರುತ್ತಿದ್ದೆನಲ್ಲ ನಿಮ್ಮ ಮನೆಯನ್ನು ಒಮ್ಮೆ ನೋಡಿದ ಹಾಗೆ ಆಗುತ್ತಿತ್ತು. ಈ ಕಾರಣದಿಂದ ಎಂದು ಹೇಳಿ ನನಗೆ ಆರೋಗ್ಯವನ್ನು ಕೋರಿದರು. ಇದು ಅವರ ಸೌಜನ್ಯಕ್ಕೆ ಒಂದು ಉದಾಹರಣೆ ಅಷ್ಟೆ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರೂ ಅದೇ ಉಡುಗೆ ತೊಡುಗೆ, ಅದೇ ಸೌಜನ್ಯದ ಮಾತು, ಅಷ್ಟೇ ವಿಶ್ವಾಸ. ಆರಾಧ್ಯರು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಮಗೆ ಮಿತ್ರರಾಗಿರಲಿಲ್ಲ. ನಮ್ಮ ಕುಟುಂಬದ ಕಷ್ಟನಷ್ಟಗಳನ್ನು ಕೇಳಿ ಮನಮರುಗಿ ಸಾಂತ್ವನ ಹೇಳುವ ಅಕ್ಕರೆಯ ಹಿರಿಯ ಸಹೋದರನಂತೆಯೂ ನನಗೆ ಕಂಡುಬಂದಿದ್ದಾರೆ. ಎಷ್ಟೋ ಸಲ ಕಷ್ಟಕೋಟಲೆಗಳಿಂದ ದಿಕ್ಕುತೋಚದಂತೆ ಇದ್ದಾಗ ಧೈರ್ಯವನ್ನು ತುಂಬಿ ನನ್ನನ್ನು ಮುನ್ನಡೆಸಿದ್ದಾರೆ, ಆರಾಧ್ಯರು ಜೀವನ ಎಂದರೇನು ಎಂಬುದನ್ನು ಚೆನ್ನಾಗಿ ಅರಿತವರು. ಜೀವನದ ಹಲವು ಮುಖಗಳನ್ನು ಕಂಡವರು. ಇಂತಹ ಒಬ್ಬ ವಿದ್ವಾಂಸರು ನಮಗೆ ಮಿತ್ರರಾಗಿರುವುದು ನಮ್ಮ ಪುರಾಕೃತ ಪುಣ್ಯವಲ್ಲದೆ ಮತ್ತೇನು?

ವೇದಮೂರ್ತಿ ನಾರಸಿಂಹನಹಳ್ಳಿ ನಂಜುಂಡಾರಾಧ್ಯ ಬಸವಾರಾಧ್ಯ

-ಡಾ॥ ಬಿ. ನಂಜುಂಡಸ್ವಾಮಿ

ತುಮಕೂರು ಜಿಲ್ಲೆ ಗುಬ್ಬಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ೧೯೭೪ರಲ್ಲಿ ವಿದ್ಯಾಭ್ಯಾಸ ಮಾಡುವಾಗ, ಕನ್ನಡ ನಿಘಂಟುವಿನ ಉಪಯೋಗದ ಬಗ್ಗೆ ಬಹಳ ತಿಳಿ ಹೇಳಿದವರು ಕನ್ನಡ ಪಂಡಿತರು, ಸಹೃದಯರು ಆದ ಡಿ॥ ಓ.ಆರ್. ರಾಮಣ್ಣನವರು ಮತ್ತು ನಮಗೆ ವಿಶೇಷವಾಗಿ ಪಾಠ ಮಾಡುತ್ತಾ ಇದ್ದ ಪದವಿಪೂರ್ವ ಕಾಲೇಜ ಅಧ್ಯಾಪಕರಾದ ಶ್ರೀ ಬಿ.ಎಂ. ಶ್ರೀಕಂಠೇಗೌಡರು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ಸಂಕ್ಷಿಪ್ತ ಕನ್ನಡ ನಿಘಂಟು (ಕನ್ನಡ-ಕನ್ನಡ) ಬಿಡುಗಡೆಯಾಗುತ್ತಾ ಇದೆ. ಸುಮಾರು ಸಾವಿರ ಪುಟದ ಪುಸ್ತಕದ ಬೆಲೆ ಕೇವಲ ಐದು ರೂ ಎಂದು, ವಿದ್ಯಾರ್ಥಿಗಳಿಗೆ ಕೊಂಡು ಕೊಳ್ಳಲು ಹೇಳಿದರು. ನನ್ನ ತಂದೆ ತಾಯಿಗಳಿಗೆ ಹೇಳಿ ಅವರಿಂದ ಐದು ರೂ ಪಡೆದು ನಿಘಂಟುವನ್ನು ತರಿಸಿಕೊಂಡೆ. ಆ ನಿಘಂಟುವಿನ ಅರಿಕೆ ಮಾತು, ಮುನ್ನುಡಿಯನ್ನು ಅದೆಷ್ಟು ಸಾರಿ ಓದಿದೆನೋ, ಅಂದಿನ ದಿನಮಾನದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ದೇಶಹಳ್ಳಿ ಜಿ. ನಾರಾಯಣ ಅವರ ಅರಿಕೆ ಮಾತಿನಲ್ಲಿ ಶ್ರೀ ಎನ್. ಬಸವಾರಾಧ್ಯರ ಹೆಸರು ಪ್ರಸ್ತಾಪವಾಗಿತ್ತು. ಅದೇ ಮೊದಲಬಾರಿಗೆ ಶ್ರೀ ಎನ್. ಬಸವಾರಾಧ್ಯರ ಹೆಸರು ಕೇಳಿದ್ದು. ನನ್ನ ತಂದೆತಾಯಿ ಅತಿ ಮಮತೆಯಿಂದ ಕೊಡಿಸಿದ ಆ ನಿಘಂಟು ಈಗಲೂ ನನ್ನ ಹತ್ತಿರ ಇದೆ. ೧೯೮೫-೮೯ರಲ್ಲಿ ಬೆಂಗಳೂರು ಶ್ರೀ ಜಯಚಾಮರಾಜೇಂದ್ರ ಆಯುರ್ವೇದ ಮಹಾ ವಿದ್ಯಾಲಯದಲ್ಲಿ ಆಯುರ್ವೇದ ವೈದ್ಯನಾಗಿ ವಿಶೇಷ ತರಬೇತಿ ಪಡೆಯುವಾಗ ಹತ್ತಾರುಸಾರಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಗಿದ್ದೆ. ಆ ಸಮಯದಲ್ಲಿ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಹಂ.ಪ. ನಾಗರಾಜ್ಯಯನವರನ್ನು ಮಾತನಾಡಿಸಿ ಕೊಂಡು ಬಂದಿದ್ದೆ. ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಅನೇಕ ಹಿರಿಯ ವಿದ್ವಾಂಸರ ದರ್ಶನ ಭಾಗ್ಯ ಅವಕಾಶವಾದರೂ ಪ್ರೊ॥ ಎನ್.

ಬಸವಾರಾಧ್ಯರ ದರ್ಶನವಾಗಲಿ, ಪರಿಚಯವಾಗಲಿ ಆಗಲೆ ಇಲ್ಲ. ನಾನು ಹುಟ್ಟಿ ಬೆಳೆದದ್ದು ಗುಬ್ಬಿ ನಗರದಲ್ಲಿ, ಗುಬ್ಬಿಯ ಪ್ರಾಚೀನ ಕವಿಗಳ ಬಗ್ಗೆ ಬಹಳ ಕುತೂಹಲ. ನಂ. ಶಿವಪ್ಪ ಶಾಸ್ತ್ರಿಗಳು ಸಂಪಾದಿಸಿದ ವೀರಶೈವಾಮೃತ ಪುರಾಣ ಮುದ್ರಿತ ಪುಸ್ತಕ ನೋಡುವುದಕ್ಕೂ ಸಾಧ್ಯವಾಗಿರಲಿಲ್ಲ. ಬೆಂಗಳೂರು ನಗರದಲ್ಲಿ ೧೯೮೮ ಸೆಪ್ಟಂಬರ್ ೧೧ರಂದು ನಿಜಗುಣ ಮಠದಲ್ಲಿ ನಡೆದ "ಎರಡನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ, ಹಿರಿಯ ಹಸ್ತ ಪ್ರತಿ ತಜ್ಞರಾದ ಎಸ್. ಶಿವಣ್ಣನವರ ಪರಿಚಯವಾಯಿತು. "ವೀರಶೈವಾಮೃತ ಪುರಾಣವನ್ನು" ಬಸವಾರಾಧ್ಯರು ಹಲವು ಹಸ್ತಪತ್ರಿಕೆಗಳನ್ನು ಇಟ್ಟುಕೊಂಡು ಸಂಪಾದಿಸುತ್ತಾ ಇದ್ದಾರೆ ಎಂದು ತಿಳಿಸಿದರು. ಅಂದಿನಿಂದ ಬಸವಾರಾಧ್ಯರ ಹತ್ತಿರ ಮಾತನಾಡಿ ಆ ಕೃತಿಯ ಬಗ್ಗೆ ಜೊತೆ ಚರ್ಚೆ ಮಾಡಬೇಕು ಅನ್ನುವ ಅವಕಾಶಕ್ಕೆ ಕಾಯುತ್ತಾ ಇದ್ದೆ. ಪ್ರತಿನಿತ್ಯ ಗುಬ್ಬಿಯಿಂದ ತುಮಕೂರಿಗೆ ಬಂದು ಚಿಕಿತ್ಸಾಲಯದಲ್ಲಿ ನನ್ನ ವೃತ್ತಿ ಮುಗಿಸಿ ಗುಬ್ಬಿಗೆ ಹೋಗಬೇಕಾಗಿತ್ತು. ವೃತ್ತಿ ಜೀವನ ಇನ್ನು ಹೊಸತು, ಭಾನುವಾರ ಬಿಟ್ಟರೆ ಬೇರೆ ದಿನ ಅವಕಾಶವಾಗುತ್ತಾ ಇರಲಿಲ್ಲ. ಈ ಎಲ್ಲಾ ಕಾರಣಗಳಿಂದ ಬಸವಾರಾಧ್ಯರ ಭೇಟಿ ಮುಂದೆ ಮುಂದಕ್ಕೆ ಹೋಗುತ್ತಾ ಇತ್ತು.

೧೯೯೦ರ ಸುಮಾರಿನಲ್ಲಿ ನನ್ನ ಜೀವನದ ಬದುಕಿನ ಮೇಲೆ ಬಹು ದೊಡ್ಡ ಕಾರ್ಮೋಡ ಮುಸುಕಿ ಬಹಳ ನೋವನ್ನು ಅನುಭವಿಸುತ್ತಾ ಇದ್ದೆ. ಅಂತಹ ಕಷ್ಟ ದಿನಗಳಲ್ಲಿ ನನ್ನ ಸ್ನೇಹಿತರುಗಳು ಬಲವಂತ ಮಾಡಿ ಹೊಸಪೇಟೆ ನಗರದಲ್ಲಿ ನಡೆಯುತ್ತಿದ್ದ ಅಖಿಲಭಾರತ ತೃತೀಯ ಶರಣ ಸಾಹಿತ್ಯ ಸಮ್ಮೇಳನಕ್ಕೆ (೧೯೯೦ ನೇ ಜುಲೈ ೧೩, ೧೪, ೧೫) ಕಳುಹಿಸಿದರು. ಆ ದಿನವೇ ವೀರಶೈವ ಸಾಹಿತ್ಯ ಸೇವೆ ಮಾಡುತ್ತಾ ಇದ್ದ ಹತ್ತಾರು ಜನ ವಿದ್ವಾಂಸರನ್ನು ಒಟ್ಟಿಗೆ ನೋಡಿದ್ದು. ಆ ಸಮ್ಮೇಳನಕ್ಕೆ ಬೆಂಗಳೂರಿನಿಂದ ಎರಡು ಬಸ್ ಬಂದಿತ್ತು. ಬೆಂಗಳೂರು ನಗರದಲ್ಲಿ ನೆಲೆಸಿರುವ ಎಲ್ಲಾ ಹಿರಿಯ ಕಿರಿಯ ವಿದ್ವಾಂಸರನ್ನು ಈ ಸಮ್ಮೇಳನದಲ್ಲಿ ಭಾಗವಹಿಸಲು ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಲಿಂ॥ ಚೆನ್ನಪ್ಪ ಎರೆಸೀಮೆ, ಲಿಂ.ಜಿ.ವಿ. ಶಿವಸ್ವಾಮಿ, ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ, ಶ್ರೀ ಷಣ್ಮುಖಯ್ಯ ಅಕ್ಕೂರಮಠ, ಎಸ್. ಶಿವಣ್ಣ, ಡಾ॥ ಎಸ್. ವಿದ್ಯಾಶಂಕರ್, ಪ್ರೊ॥ ಎನ್. ಬಸವಾರಾಧ್ಯ, ಶ್ರೀ ಟಿ.ಆರ್. ಮಹದೇವಯ್ಯ, ಮೈಸೂರಿನ ಜಿ.ಎ. ಶಿವಲಿಂಗಯ್ಯ, ಬೆಂಗಳೂರಿನ ವಿವಿಧ ಕಾಲೇ ಜುಗಳಲ್ಲಿ ಕೆಲಸ ಮಾಡುವ ಕನ್ನಡ ಅಧ್ಯಾಪಕರುಗಳು, ಹೀಗೆ ಸಭಾಂಗಣ ರಾತ್ರಿ ವಿದ್ವಾಂಸರಿಂದ ಕಿಕ್ಕಿರಿದಿತ್ತು. ಮಧ್ಯಾಹ್ನ ಈ ವಿದ್ವಾಂಸರುಗಳ ಜೊತೆ ಪ್ರಸಾದ ಸ್ವೀಕರಿಸಿದೆ. ರಾತ್ರಿ ಹೊಸಪೇಟೆಯಿಂದ ಬೆಂಗಳೂರಿಗೆ ಹೊರಟ ವಿದ್ವಾಂಸರ ಬಸ್‌ನಲ್ಲಿ ನಾನು ತುಮಕೂರಿಗೆ ಹೊರಟೆ. ಹೀಗೆ ಪ್ರಪ್ರಥಮವಾಗಿ ಪ್ರೊ॥ ಎನ್. ಬಸವಾರಾಧ್ಯರ ಜೊತೆ ಮಾತನಾಡುವ ಅವಕಾಶ ಲಭ್ಯವಾಯಿತು.

ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ೧೦೦೮ ಜಗದ್ಗುರು ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಬಾಳೆ ಹೊನ್ನೂರು ಪೀಠಾಧಿಪತಿಗಳಾಗಿ, ಅಧಿಕಾರ ಸ್ವೀಕಾರ ಮಾಡುವ ಮೊದಲು ಶಿವಗಂಗೆ ಮೇಲಣಗವಿ ಮಠದಲ್ಲಿ ವೀರಸಿಂಹಾಸನಾಧಿಪತಿಗಳಾಗಿದ್ದರು. ಶಿವಗಂಗೆ ಬೆಟ್ಟದ ಮಧ್ಯದಲ್ಲಿ ಇರುವ ಮೇಲಣಗವಿ ಮಠದಲ್ಲಿ ಪ್ರತಿ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಚಿಂತನಾಗೋಷ್ಠಿ, ದಾಸೋಹ ಏರ್ಪಡಿಸುತ್ತಾ ಇದ್ದರು. ಸಾಧ್ಯವಾದಷ್ಟು ಅಮಾವಾಸ್ಯೆ ಪೂಜೆಗಳಲ್ಲಿ ಚಿಂತನ ಗೋಷ್ಠಿಗಳಲ್ಲಿ ಭಾಗವಹಿಸುತ್ತಾ ಇದ್ದೆ. ಗುಬ್ಬಿ ಮಲ್ಲಣ್ಣಾರ್ಯನ ವೀರಶೈವಾಮೃತ ಪುರಾಣ ಬರೆದದ್ದು, ಶಿವಗಂಗೆ ಮೇಲಣಗವಿ ಮಠದಲ್ಲಿ. ಆದ್ದರಿಂದ ಒಂದು ವಿಶೇಷ ಕಾರ್ಯಕ್ರಮ ಮಾಡುವ ಬಗ್ಗೆ ಪೂಜ್ಯರಲ್ಲಿ ಮೇಲಿಂದ ಮೇಲೆ ವಿನಂತಿ ಮಾಡಿಕೊಳ್ಳುತ್ತಾ ಇದ್ದೆ. ಆ ಬಗ್ಗೆ ಸಂಪೂರ್ಣ ವ್ಯವಸ್ಥೆ ಮಾಡಲು ನನಗೆ ಹೇಳಿದರು. ಒಂದು ಭಾನುವಾರ ಬೆಳಿಗ್ಗೆ ಬಸವಾರಾಧ್ಯರ ಮನೆಗೆ ಹೋದೆ. ಅವರು ಮನೆಯಲ್ಲಿ ಇರಲಿಲ್ಲ, ಆ ದಿನ ಶೇಷಾದ್ರಿ ಪುರಂನಲ್ಲಿ ತುಮಕೂರು ಹುಲಿಕುಂಟೇಮಠದ ದಯಾನಂದ್ ಅವರ ಮನೆಯಲ್ಲಿ ಬಸವಾರಾಧ್ಯರ ಮಗನ ನಿಶ್ಚಿತಾರ್ಥ ಎಂದು ಗೊತ್ತಾಯಿತು. ಅಲ್ಲಿಗೆ ಹೋದೆ ಬಸವಾರಾಧ್ಯರು ಅಲ್ಲಿಯೂ ಇರಲಿಲ್ಲ, ಅವರ ಮಗಳ ಮಾವ ಶಿವೈಕ್ಯರಾಗಿದ್ದರು ಎಂದು ಅಲ್ಲಿಗೆ ಹೋಗಿದ್ದರು.

ಪದ್ಮಶ್ರೀ ಆಸ್ಥಾನವಿದ್ವಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳ ಹಿರಿಯ ಪುತ್ರ ಹೆಚ್.ಎಚ್. ರೇಣುಕ ಪ್ರಸಾದ್‌ರವರು ಅಲ್ಲಿ ಭೇಟಿಯಾದರು ಉದ್ಘಾಟನೆಗೆ ಕರೆದೆ ಸಂತೋಷದಿಂದ ಒಪ್ಪಿಕೊಂಡರು. ಅದೇ ದಿನ ರಾತ್ರಿ ಮತ್ತೆ ಬಸವಾರಾಧ್ಯರ ಮನೆಗೆ ಹೋದೆ ಬೀಗರ ಅಂತ್ಯೇಷ್ಠಿ ವಿಧಿಯನ್ನು ಮುಗಿಸಿ ಸ್ನಾನ, ಶಿವಪೂಜೆ ಮುಗಿಸಿ ಕುಳಿತಿದ್ದರು, ಶಿವಗಂಗೆ ಕಾರ್ಯಕ್ರಮದ ಬಗ್ಗೆ ವಿವರಿಸಿದೆ. ನೀವು ಮುಂದಿನ ಭಾನುವಾರ ಬನ್ನಿ ವ್ಯವಸ್ಥೆ ಮಾಡಿರುತ್ತೇನೆ ಎಂದು ಹೇಳಿದರು. ಅದರಂತೆ ಮುಂದಿನವಾರ ಅವರ ಮನೆಗೆ ಹೋದೆ. ಆ ದಿನ ಅವರ ಮನೆಯಲ್ಲಿ ಪಕ್ಷ, ಬೆಂಗಳೂರಿನಲ್ಲಿರುವ ನರಗುಂದದೇವರ ಮಠದ ಸ್ವಾಮಿಗಳ ಶಿವಪೂಜೆ ಇತ್ತು. ನನ್ನನ್ನು ಒತ್ತಾಯವಾಗಿ ಉಳಿಸಿಕೊಂಡು ಪೂಜೆಯಲ್ಲಿ ಭಾಗವಹಿಸುವಂತೆ ಮಾಡಿದರು. ಬೆಂಗಳೂರಿನಲ್ಲಿ ನೆಲೆಸಿರುವ ಗುಬ್ಬಿತಾಲ್ಲೂಕ್ ತಿಪ್ಪೂರಿನ ಶ್ರೀ ಟಿ.ಆರ್. ಮಹದೇವಯ್ಯನವರನ್ನು ಶಿವಗಂಗೆಯಲ್ಲಿ ಉಪನ್ಯಾಸ ಮಾಡಲು ಒಪ್ಪಿಸಿ, ನಾನು ಇನ್ನೊಂದು ಸಾರಿ ಬರುತ್ತೇನೆ ಎಂದು, ಬೆನ್ನುತಟ್ಟಿ ವಿಶೇಷ ಪ್ರಸಾದವನ್ನು ಉಣಬಡಿಸಿ ಕಳುಹಿಸಿ ಕೊಟ್ಟರು. ಆ ನಂತರ ಬೆಂಗಳೂರಿಗೆ ಹೋದಾಗ ಸಾಹಿತ್ಯ ಪರಿಷತ್ತಿನ ನಿಘಂಟು ಕಛೇರಿಯಲ್ಲಿ ಅಥವಾ ಅವರ ಮನೆಯಲ್ಲಿ ಭೇಟಿಯಾಗುತ್ತಾ ಇದ್ದೆ. ದಾವಣಗೆರೆ ಸಾಹಿತ್ಯ ಸಮ್ಮೇಳನದಲ್ಲಿ ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪ್ರೊ।। ಜಿ.ಎಸ್. ಸಿದ್ಧಲಿಂಗಯ್ಯನವರು ಸಮಾರೋಪ ಸಮಾರಂಭದಲ್ಲಿ ವಿದ್ವತ್ ಸನ್ಮಾನ ಏರ್ಪಡಿಸಿದ್ದರು. ಆ ದಿನ ಬಸವಾರಾಧ್ಯರ ಪರಿಚಯ ಮಾಡಿ ಕೊಡುತ್ತಾ, ಅವರ ಕೋಟಿನ ಜೇಬಿನಲ್ಲಿ ನಾನಾಬಣ್ಣದ ಹತ್ತಾರು ಪೆನ್ನುಗಳು ಇವೆ, ಹಾವಾಡಿಗ ಹಾವಿನ ಬುಟ್ಟಿಯಲ್ಲಿ ಹಾವುಗಳನ್ನು ತೆಗೆದಂತೆ, ಬಣ್ಣಬಣ್ಣದ ಪೆನ್ನುಗಳನ್ನು ತೆಗೆಯುತ್ತಾರೆ ಎಂದು. ನನ್ನ ವಿದ್ಯಾರ್ಥಿ ಜೀವನದ ನಂತರ ವೃತ್ತಿಜೀವನದಲ್ಲಿ ಪರಿಚಯವಾದ ಡಾ।। ಸಿ. ನಾಗಭೂಷಣರ ಮದುವೆಗೆ ೧.೩.೧೯೬೨ನೇ ಭಾನುವಾರ ಹೋಗಿದ್ದೆ. ಮದುವೆಗೆ ಬಸವಾರಾಧ್ಯರು ಬಂದಿದ್ದರು. ದಿ।। ಪ್ರೊ।। ಡಿ.ಎಲ್. ನರಸಿಂಹಾಚಾರ್ಯರ ಬಗ್ಗೆ ಈ ಮುಂಚೆ ಹತ್ತಾರು ಪ್ರಶ್ನೆಗಳನ್ನು ಕೇಳಿದ್ದೆ. ಆ ಎಲ್ಲಾ ಪ್ರಶ್ನೆಗೆ ಮಿತ್ರರಾದ ಡಾ।। ಬಿ. ನಂಜುಡಸ್ವಾಮಿ ಅವರಿಗೆ" ಎಂದು ವಿಶ್ವಾಸಪೂರ್ವಕವಾಗಿ ಬರೆದು ಕೊಟ್ಟು ಆಶೀರ್ವದಿಸಿದರು.

ಡಾ।। ಬಿ.ಎಂ. ಶ್ರೀಕಂಠಯ್ಯನವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಮೇಲೆ ವಿಶೇಷ ಉಪನ್ಯಾಸ ಮಾಲಿಕೆ ಪ್ರಾರಂಭ ಮಾಡಿದರು. ಈ ಮೊಲೆಯಲ್ಲಿ ಆಸ್ಥಾನ ಮಹಾವಿದ್ವಾನ್ ಕರ್ಣಾಟಕ ಭಾಷಾರತ್ನಂ ಪಿ.ಆರ್. ಕರಿಬಸವ ಶಾಸ್ತ್ರಿಗಳು, ಆಸ್ಥಾನ ವಿದ್ವಾನ್ ಎನ್.ಆರ್. ಕರಿಬಸವಶಾಸ್ತ್ರಿಗಳ ಬಗ್ಗೆ ಉಪನ್ಯಾಸ ಮಾಡಿದೆ. ಈ ಎರಡು ಉಪನ್ಯಾಸಗಳಿಗೂ ದಿ।। ನಿಟ್ಟೂರು ಶ್ರೀನಿವಾಸರಾದಿಯವರು ಅಧ್ಯಕ್ಷತೆ ವಹಿಸಿದ್ದರು. ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ನಿಂತಾಗ ತುಮಕೂರಿನ ನನ್ನ ಸ್ನೇಹಿತರ ಸಹಾಯದಿಂದ ಸಾಕಷ್ಟು ಸಹಕಾರವನ್ನು ನೀಡಿ ಅವರು ಮಾಡಿರುವ ಸಾಹಿತ್ಯ ಸೇವೆ ಬಗ್ಗೆ ಪ್ರಚಾರ ಮಾಡಿದೆವು. ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಪಾಲಿನ ಸೇವೆ ಸಲ್ಲಿಸಿದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ, ಪ್ರತಿಷ್ಠಾನದ ಸ್ವಂತ ಕಟ್ಟಡ ಕಟ್ಟಲು ಹತ್ತಾರು ಜನ ದಾನಿಗಳನ್ನು ಪ್ರೊ।। ಹೆಚ್.ಆರ್. ದಾಸೇಗೌಡರ ಜೊತೆ ಸಂಪರ್ಕಿಸಿ, ಸುಭದ್ರವಾದ ಕಟ್ಟಡವನ್ನು ಒಂದು ಸ್ಥಿತಿಗೆ ತಂದ ಕೀರ್ತಿ ಆರಾಧ್ಯರದು. ಕೀರ್ತನ ಕೇಸರಿ ಆಸ್ಥಾನ ವಿದ್ವಾನ್ ಪದ್ಮಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಇದ್ದಾರೆ.

ನಾಡುನುಡಿಗೆ ದುಡಿದ ಹಿರಿಯ ವಿದ್ವಾಂಸರನ್ನು ಗುರುತಿಸುವ ಕೆಲಸದಲ್ಲಿ ಏರುಪೇರಾದರೂ ತಕ್ಷಣ ಪ್ರತಿಕ್ರಿಯಿಸಿ ಸಂಬಂಧ ಪಟ್ಟವರ ಜೊತೆ ಮಾತನಾಡುತ್ತಾರೆ. ಜೊತೆಯಲ್ಲಿ ಕೆಲಸ ಮಾಡುತ್ತಾ ಇದ್ದ ಯಾರಿಗೆ ಏನೋ ತೊಂದರೆ ಆದರೂ ಮೊದಲು ಸ್ಪಂದಿಸುವವರು ಆರಾಧ್ಯರು ಅಂದರೆ ತಪ್ಪಾಗಲಾರದು. ಅವರನ್ನು ನೋಡಲು ಯಾರೆ ಅವರ ಮನೆಗೆ ಬರಲಿ ಮೊದಲು ಕೇಳುವುದು, ಬನ್ನಿ ಊಟ ಮಾಡಿ, ತಿಂಡಿ ತಿನ್ನಿ, ಕಾಫಿ ತೆಗೆದುಕೊಳ್ಳಿ, ಯಾಕೆ ಬೇಡ ಎಂದೆಲ್ಲಾ ವಿಚಾರಿಸುತ್ತಾರೆ.

ವಿದ್ವತ್‌ಲೋಕದಲ್ಲಿ ಯಾವುದು ಅಭಾವವೋ ಅದು ಆರಾಧ್ಯರಲ್ಲಿ ಮಡುಗಟ್ಟಿದೆ ದಾಸೋಹಗುಣ ಅವರ ರಕ್ತಗತವಾಗಿದೆ. ಸದಾ ಒಂದಲ್ಲ ಒಂದು ಸೇವೆ ಬಗ್ಗೆ ಅವರ ಮನಸ್ಸು ಚಿಂತಿಸುತ್ತಾ ಇರುತ್ತದೆ.

ನಿಘಂಟು ಕಛೇರಿಯಲ್ಲಿ ಹಿರಿಯ ಶಾಸನ ತಜ್ಞರಾದ ಡಾ॥ ಜಿ.ಎಸ್. ಗಾಯಿ ಅವರನ್ನು ಪರಿಚಯ ಮಾಡಿಕೊಟ್ಟಿದ್ದು ಇಂದು ಸಹ ನಾನು ಸಹ ಮೆಲಕು ಹಾಕುತ್ತಾ ಇರುತ್ತೇನೆ. ತುಮಕೂರಿನಲ್ಲಿ ನಡೆದ ಒಂದು ಸಾಹಿತ್ಯ ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ತೊಡಗಿಸಿ ಕೊಂಡಿದ್ದನ್ನು ನೋಡಿ, ನಿಮ್ಮ ಚಿಕಿತ್ಸಾಲಯದ ಗತಿ ಏನೊ? ಎಂದು ನನ್ನ ಚಿಕಿತ್ಸಾಲಯಕ್ಕೆ ಬಂದು ನಮ್ಮ ಮನೆಯವರಿಗೆ ಹೊಟ್ಟೆ ಹಸಿಯುವುದಕ್ಕೆ ಔಷಧಿ ಕೊಡಿ ಎಂದು ಔಷಧಿ ತೆಗೆದು ಕೊಂಡು ನೂರು ರೂ ಕೊಟ್ಟರು, ಬೇಡ ಎಂದರೂ ಕೇಳಲಿಲ್ಲ. ಹೀಗೆ ಎಲ್ಲರ ಬದುಕಿನ ಬಗ್ಗೆ ವಿಶೇಷವಾದ ಕಾಳಜಿ. ಲಿಂ॥ ಪ್ರೊ॥ ಬಿ. ವೀರಭದ್ರಯ್ಯನವರಿಗೆ ಹೃದಯ ಶಸ್ತ್ರ ಚಿಕಿತ್ಸೆ ಆದಮೇಲೆ ಅವರನ್ನು ಮೇಲಿಂದ ಮೇಲೆ ಮಾತನಾಡಿಸಿ ಅವರ ಮನಸ್ಸಿಗೆ ಸಮಾಧಾನ ಉಂಟು ಮಾಡಿದರು. ಅವರು ಶಿವೈಕ್ಯರಾದಾಗ ಎಸ್. ಶಿವಣ್ಣನವರ ಜೊತೆ ಅಂತ್ಯೇಷ್ಠಿ ವಿಧಿಯಲ್ಲಿ ಭಾಗವಹಿಸಿದರು, ಅವರ ಶಿವಗಣಾರಾಧನೆಗೂ ಬಂದಿದ್ದರು.

ನನ್ನ ತಂದೆಯವರನ್ನು ಬೆಂಗಳೂರಿನ ಆಸ್ಪತ್ರೆಗೆ ಸೇರಿಸಿದಾಗ ಮೇಲಿಂದ ಮೇಲೆ ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಾ ಇದ್ದರು. ಅವರ ಶಿವಗಣಾರಾಧನೆಗೆ ಗುಬ್ಬಿಯ ತನಕ ಡಾ.ಎಸ್. ವಿದ್ಯಾಶಂಕರ್, ಪ್ರೊ॥ ಎಂ. ಪ್ರಸನ್ನ ಕುಮಾರ್, ಪ್ರೊ॥ ಹೆಚ್.ಆರ್. ದಾಸೇಗೌಡರ ಜೊತೆ ಬಂದು ನಮ್ಮ ಮನೆಯ ಎಲ್ಲರಿಗೂ ಸ್ವಾಂತನ ಹೇಳಿದ್ದು ಮರೆಯುವಂತೆ ಇಲ್ಲ.

ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಜನ್ಮದಿನೋತ್ಸವದ ಸಂದರ್ಭದಲ್ಲಿ ೨೦೦೪ರಲ್ಲಿ ವಿಶೇಷ ಸನ್ಮಾನ ಮಾಡಿ ಸತ್ಕರಿಸಲಾಯಿತು. ಇದೇ ವರ್ಷ ಆಗಸ್ಟ್ ೮ರಂದು ಮತ್ತೆ ಬಸವಾರಾಧ್ಯರನ್ನು ತುಮಕೂರಿನ ಶ್ರೀ ಟಿ.ಎಸ್. ರೇವಣ್ಣ, ಶ್ರೀಮತಿ ರೇವಮ್ಮಧರ್ಮದತ್ತಿ ಸಂಸ್ಥೆಯವರು ಸನ್ಮಾನಿಸಿ ಸತ್ಕರಿಸಿದರು. ನಾಡಿನ ನೂರಾರು ಮಠಮಾನ್ಯಗಳಿಂದ ಸನ್ಮಾನ ಸ್ವೀಕರಿಸಿರುವ ಬಸವಾರಾಧ್ಯರನ್ನು ಕಂಡರೆ ಅವರ ಗುರುಗಳಾದ ಡಾ॥ ಡಿ.ಎಲ್. ನರಸಿಂಹಾಚಾರ್, ಡಾ॥ ತೀ.ನಂ. ಶ್ರೀಕಂಠಯ್ಯ, ದಿ॥ ಕ.ವೆಂ. ರಾಘವಾಚಾರ್‌ರವರಿಗೆ ಬಹಳ ಅಭಿಮಾನ. ಈ ಮೂರು ಜನ ಹಿರಿಯ ಗುರುಗಳು ತುಮಕೂರು ಜಿಲ್ಲೆಯವರು. ಆ ದೃಷ್ಟಿಯಿಂದಲೂ ತುಮಕೂರು ಜಿಲ್ಲೆ ಮೇಲೆ ವಿಶೇಷವಾದ ಪ್ರೀತಿ ಆರಾಧ್ಯರಿಗೆ. ತಾವು ಸಂಪಾದಿಸಬೇಕು ಎಂದು ಕೊಂಡಿರುವ ವೀರಶೈವಾಮೃತ ಪುರಾಣ, ಹೊನ್ನವಳ್ಳಿ ಕರಿಸಿದ್ಧೇಶ್ವರರ ಕೃತಿ ಪ್ರಭೋದಚಂದ್ರೋದಯ ಸಂಪಾದಿಸಬೇಕು. ತಾವು ಸಂಪಾದಿಸಬೇಕು ಎಂದು ಕೊಂಡಿರುವ ಎಲ್ಲಾ ಕೃತಿಗಳು ಸಮರ್ಥವಾಗಿ ಸಂಪಾದನೆಗೊಂಡು ಕನ್ನಡಮ್ಮನ ಮಡಿಲು ತುಂಬಲಿ ಎಂಬುದೆ ನಮ್ಮೆಲ್ಲರ ಆಸೆ.

XXX

'ಸಾಧನಾ ಜೀವಿ' ಅಥವಾ 'ಸಂಶೋಧನಾ ತಪಸ್ವಿ' ಪ್ರೊ. ಎನ್. ಬಸವಾರಾಧ್ಯರು

-ಡಾ. ಎಸ್. ಶಿವರಾಜಪ್ಪ

'ಸರ್ಕಾರಿ ಕೆಲಸ ದೇವರ ಕೆಲಸ' ಎಂಬ ಹಿರಿಯ ವಾಣಿಯಂತೆ ಸರ್ಕಾರಿ ಕೆಲಸ ನಿರ್ವಹಿಸುವವರು ಅದು ತಮ್ಮ ಕರ್ತವ್ಯವೆಂದು ತಿಳಿದು ಪ್ರಾಮಾಣಿಕವಾಗಿ ಕೆಲಸ ಮಾಡುವವರು ಹಲವಾರು ಮಂದಿ ಇದ್ದಾರೆ. ಸರ್ಕಾರಿ ಕೆಲಸ ತಾನೆ? ಎಂದು ತಾತ್ಸರ ಉಳ್ಳವವರೂ ಇದ್ದಾರೆ. ಬಂದವರಿಗೆ ಏನಾದರೂ ಒಳ್ಳೆಯ ಸಹಾಯವಾಗುವ ಕೆಲಸ ಮಾಡಿಕೊಡಬೇಕೆಂಬ ಉದಾರ ಮನಸ್ಸುಳ್ಳವರೂ ಇದ್ದಾರೆ. ತಮ್ಮ ಜೊತೆ ಇದ್ದವರಿಗೆ ಅವರ ಸಾಮರ್ಥ್ಯಕ್ಕನುಗುಣವಾಗಿ ಹುರಿದುಂಬಿಸುತ್ತಾ ಉನ್ನತಿಗೆ ಕರೆದೊಯ್ಯುವವರೂ ಇದ್ದಾರೆ. ತಾವು ಬೆಳೆಯುವುದರ ಜೊತೆಗೆ ಬೇರೆಯವರನ್ನು ಬೆಳೆಸುವ ಔದಾರ್ಯ ಗುಣವುಳ್ಳವರು ನಾಡಿನ ಹಿರಿಯ ಸಂಶೋಧಕರಾದ ಪ್ರೊ. ಎನ್. ಬಸವಾರಾಧ್ಯರು, 'ಎಲೆ ಮರೆಯ ಕಾಯಿಯಂತೆ' ಅಧಿಕಾರದ ದಾಹವಿಲ್ಲದೆ ಪ್ರಾಮಾಣಿಕತೆಗೆ ಮತ್ತು ನಿಷ್ಠೆಗೆ ಹೆಸರಾದ ಶ್ರೀಯುತರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಪಾದನ ವಿಭಾಗದ ಉಪ ನಿರ್ದೇಶಕರಾಗಿದ್ದಾಗ ಅವರ ಕಾರ್ಯವೈಖರಿಯನ್ನೇ ವೈಯಕ್ತಿಕವಾಗಿ ನೋಡಿದ್ದೇನೆ. ಅವರ ಆದರ್ಶ ವ್ಯಕ್ತಿತ್ವವನ್ನು ನನ್ನ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದೇನೆ.

ಬಾಲ್ಯದಲ್ಲಿ ಅನುಭವಿಸಿದ ಸುಖದುಃಖಗಳನ್ನು, ನೊಂದವರು ಮತ್ತು ಕಷ್ಟದಲ್ಲಿರುವವರು ಎದುರಾದಾಗ ನೆನೆಯುತ್ತಾ ಭಾವುಕರಾಗುತ್ತಿದ್ದರು. ಶ್ರಮಜೀವಿಗಳನ್ನೇ ಪ್ರಶಂಸಿಸುತ್ತಿದ್ದರು, ಸೋಮಾರಿಗಳನ್ನು ಚುರುಕುಗೊಳಿಸಿ ಹಿರಿಯರ ಅನುಪಮ ಸೇವೆಯನ್ನೇ ಅವರಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪನಿರ್ದೇಶಕರಾಗಿದ್ದಾಗ ಸಮಯಪ್ರಜ್ಞೆ, ಶಿಸ್ತುಪರಿಪಾಲನೆ ಮತ್ತು ಕಾರ್ಯದಕ್ಷತೆಯನ್ನು ಅವರ

ಜೊತೆಯಲ್ಲಿ ಕೆಲಸ ಮಾಡಿದವರು ಇಂದಿಗೂ ಸ್ಮರಿಸುತ್ತಾರೆ. ಯಾರಾದರೂ ಆಂಗ್ಲಭಾಷೆಯಲ್ಲಿ ಮಾತನಾಡಿದರೆ 'ಕನ್ನಡ ಬರಲ್ವೆ' ಎಂದು ಹುಸನ್ಮುಖಿಗಳಾಗಿ ಅವರಿಗೆ ಕನ್ನಡ ಅಭಿಮಾನವನ್ನು ಬೆಳೆಸುತ್ತಿದ್ದರು. ಕನ್ನಡ ಬಲ್ಲವರಿಗೆ ಕನ್ನಡದಲ್ಲಿ ಮಾತನಾಡಿ, ಕನ್ನಡ ಬಾರದವರಿಗೆ ಕನ್ನಡ ಕಲಿಸಿ ಎಂದು ತಿಳಿಹೇಳಿ 'ಕನ್ನಡ' ನಮ್ಮ ಹೆತ್ತ ತಾಯಿ, ಅವಳನ್ನೇ ಮರೆತರೆ ನಮ್ಮ ಕರ್ನಾಟಕ ಸಂಸ್ಕೃತಿ ಉಳಿದೀತೆ? ಎನ್ನುತ್ತಾ ಕನ್ನಡದಲ್ಲಿಯೇ ಶಿಕ್ಷಣ ನೀಡಬೇಕೆಂದು ಭರವಸೆಯ ಮೂಲಕ ಸರ್ಕಾರವನ್ನು ಸಾರ್ವಜನಿಕರನ್ನು ಆಗಾಗ್ಗೆ ಎಚ್ಚರಿಸುತ್ತಿದ್ದರು.

ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದಾಗ ಸಂಪಾದನಾ ವಿಭಾಗಕ್ಕೆ ಒಂದು ಹೊಸ ಆಯಾಮವನ್ನೇ ತಂದುಕೊಟ್ಟು ಕನ್ನಡ ಅಧ್ಯಯನ ಸಂಸ್ಥೆಗೆ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೀರ್ತಿ ತಂದಿದ್ದಾರೆ. ಕನ್ನಡ, ಆಂಗ್ಲ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಪ್ರಭುತ್ವ ಪಡೆದುಕೊಂಡಿದ್ದ ಆರಾಧ್ಯರು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸುವುದರ ಮೂಲಕ ಭಾರತೀಯ ಸಂಸ್ಕೃತಿಯನ್ನೇ ವಿಶ್ವಸಮುದಾಯಕ್ಕೆ ಪರಿಚಯಿಸಿದ್ದಾರೆ.

ಬಸವಾರಾಧ್ಯರು ಕೋಲಾರ ಜಿಲ್ಲೆಯ ನಾರಸಿಂಹನ ಹಳ್ಳಿಯಲ್ಲಿ ದಿನಾಂಕ ೨೦-೨-೧೯೨೬ರಲ್ಲಿ ಜನಿಸಿದರು. ಗೌರಿಬಿದನೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮುಗಿಸಿ ಬೆಂಗಳೂರಿನಲ್ಲಿ ಇಂಟರ್ ಮೀಡಿಯಟ್ ಮಾಡಿ ನಂತರ ಮೈಸೂರಿನಲ್ಲಿ ಎಂ.ಎ. ಪದವಿ ಗಳಿಸಿದರು. ಶ್ರೀಯುತರ ವಿಶೇಷ ಆಸಕ್ತಿಯ ವಿಭಾಗ ಸಂಪಾದನಾ ವಿಭಾಗ. ಸುಮಾರು ೫೦ಕ್ಕಿಂತ ಹೆಚ್ಚಿನ ಕೃತಿಗಳನ್ನು, ನೂರಾರು ಸಂಶೋಧನಾ ಲೇಖನಗಳನ್ನು ಬರೆದು ಸಂಶೋಧನಾ ತಪಸ್ವಿಗಳಾಗಿದ್ದಾರೆ. ವಿವಿಧ ಪ್ರಕಟಣೆಗೆ ಸಮಿತಿಗಳ ಸದಸ್ಯರಾಗಿ, ಅಧ್ಯಕ್ಷರಾಗಿ ಪ್ರಕಟಣೆಗೆ ಹೊಸ ಆಯಾಮವನ್ನೇ ನೀಡಿದ್ದಾರೆ.

೧೯೯೮ರಲ್ಲಿ ಕರ್ನಾಟಕದ ಪ್ರತಿಷ್ಠಿತ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆಡಳಿತದಲ್ಲಿ ಕನ್ನಡ ವ್ಯಾಪಕವಾಗಿ ಬಳಕೆಯಾಗಬೇಕೆಂದು ಆಗ್ರಹಿಸಿದ ದಿಟ್ಟದನಿ ಬಸವಾರಾಧ್ಯರು. ಅವರ ಕನ್ನಡ ಪ್ರೇಮವನ್ನೇ ಕನ್ನಡಿಗರಾದ ನಾವು ಎಂದೆಂದಿಗೂ ಮರೆಯುವಂತಿಲ್ಲ. ಹಲವಾರು ಸಂಘ ಸಂಸ್ಥೆಗಳ ಒಡನಾಡಿಯಾಗಿ ಉತ್ತಮ ಬಾಂಧವ್ಯವನ್ನು ಹೊಂದಿದವರಾಗಿದ್ದಾರೆ. ಉನ್ನತ ಸ್ಥಾನವನ್ನೇ ಗಳಿಸಿದ್ದರೂ ಕಿಂಚಿತ್ತು ಹಮ್ಮುಬಿಮ್ಮುಗಳಿಲ್ಲದೆ ಸರಳ, ಸಜ್ಜನಿಕೆಯ ಗಾಂಭೀರ್ಯದ ಸಮತೋಲನ ವ್ಯಕ್ತಿತ್ವ ಉಳ್ಳವರಾಗಿದ್ದಾರೆ.

ಶ್ರೀಯುತರ ಕಾಲದಲ್ಲಿ ಪರಿಷತ್ತಿನಿಂದ ನೂರಾರು ಮೌಲಿಕ ಕೃತಿಗಳು ಪ್ರಕಟಣೆಗೊಂಡಿವೆ. ಇಂಥ ಶ್ರೇಷ್ಠ ವಿದ್ವಾಂಸರಿಗೆ ೭೫ ಸಂವತ್ಸರಗಳು ತುಂಬುತ್ತಿರುವ ಸಂದರ್ಭದಲ್ಲಿ ನಾಡಿನ ಹೆಸರಾಂತ ಚಿಂತಕರೂ, ಪ್ರಾಧ್ಯಾಪಕರೂ ಆದ ಡಾ. ಎಸ್. ವಿದ್ಯಾಶಂಕರ, ಮತ್ತು ಡಾ. ಸಿ. ಶಿವಕುಮಾರ ಸ್ವಾಮಿ ಹಾಗೂ ಹಿತೈಷಿಗಳು ಒಟ್ಟುಗೂಡಿ ಅಭಿನಂದನಾ ಗ್ರಂಥ ಪ್ರಕಟಿಸುತ್ತಿರುವುದು ನನಗೆ ಮಾತ್ರವಲ್ಲದೆ, ಇಡೀ ಕನ್ನಡ ಕುಲಕೋಟಿಗೆ ಸಂತಸ ತಂದಿರುವ ವಿಷಯವಾಗಿದೆ. 'ವ್ಯಕ್ತಿ ಎಷ್ಟು ವರ್ಷ ಬದುಕಿದ ಎನ್ನುವುದು ಮುಖ್ಯವಲ್ಲ ತನ್ನ ಜೀವಿತದಾವಧಿಯಲ್ಲಿ ಏನು ಸಾಧನೆಮಾಡಿದ' ಎನ್ನುವುದು ಮುಖ್ಯ. ಪ್ರೊ. ಆರಾಧ್ಯರು ನೆರಳಿನಂತೆ ಬದುಕಿನುದ್ದಕ್ಕೂ ಸಾಧನೆ ಮಾಡಿದವರು. ನೊಂದವರಿಗೆ ಸಹಾಯ ಹಸ್ತ ಮಾಡಿದವರು. ಶ್ರೀಯುತರ ಅಭಿನಂದನಾ ಗ್ರಂಥ ಸಾಧನೆಯ ಸಂಗ್ರಹವಾಗಬೇಕೆಂಬುದು ನನ್ನ ಮಹದಾಸೆ.

ಒಟ್ಟಿನಲ್ಲಿ ಪ್ರೊ. ಎಸ್. ಬಸವಾರಾಧ್ಯರ ಸರಳ ಸಜ್ಜನಿಕೆ ವ್ಯಕ್ತಿತ್ವವನ್ನು, ಪಾಂಡಿತ್ಯವನ್ನು ಸಮಸ್ತ ಕನ್ನಡಿಗರು ಮೆಚ್ಚಿ ಹತ್ತಾರು ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಿದ್ದಾರೆ. ೭೫ ವಸಂತಗಳನ್ನು ಕಳೆಯುತ್ತಿರುವ ಆರಾಧ್ಯರು ನೂರ್ಕಾಲ ಬಾಳಿ ಬದುಕಲಿ ಎಂಬುದು ಸಮಸ್ತ ಕನ್ನಡಿಗರಾದ ನಮ್ಮೆಲ್ಲರ ಹಾರೈಕೆ. ಕನ್ನಡದ ಉದ್ಧಾಮ ವಿದ್ವಾಂಸರ ಬಗ್ಗೆ ಅಪಾರ ಪ್ರೀತಿತೋರಿಸಿ, ಅಭಿನಂದನಾ ಗ್ರಂಥ ಪ್ರಕಟಿಸುತ್ತಿರುವ ಸಂಪಾದಕರಿಗೆ ನನ್ನ ಅಭಿನಂದನೆಗಳು.

ಎನ್. ಬಸವಾರಾಧ್ಯರನ್ನು ಕುರಿತು

-ಬಿ. ಸಿದ್ಧಗಂಗಯ್ಯ

ಪ್ರೊ|| ಎನ್. ಬಸವಾರಾಧ್ಯರ ಜೊತೆ ಮಾತೆಂದರೆ ಹಳೆ ಏಕತಾರಿಯೊಂದನ್ನು ಮಿಡಿದಂತೆ, ಇಂಥ ಬಣ್ಣಗೆಟ್ಟ ಸಾಧನದಲ್ಲಿ ಈ ಪರಿಯ ಝೇಂಕಾರ ಹೊರಟದ್ದಕ್ಕೆ ಅಚ್ಚರಿ ಪಡುವುದು ರೂಢಿಯಿರದವರಿಗೆ ಹೊಸತಾದ ಅನುಭವದ ಮಾತು ಎಂಥದ್ದೇ ಇರಲಿ. ಎಷ್ಟೇ ಪ್ರಚಲಿತವಿರಲಿ, ಹರಿಯುವುದು ಪ್ರಾಚೀನ ಕನ್ನಡ ಕಾವ್ಯದತ್ತಲೇ, ಹಾಗೆಂದು ನವ್ಯದ ಬಗ್ಗೆ ಅನಾದರಣೆ ಎಂದಲ್ಲ ಅವರು ಚನ್ನಾಗಿ ಮನಬಿಚ್ಚಿ ಮಾತನಾಡುವುದು ನವ-ಯುವ-ಕವಿಗಳೊಟ್ಟಿಗೇ ಹೆಚ್ಚು.

ಹಳೆ ತಲೆಮಾರಿನ ಓಲೆ-ಗರಿಕಾವ್ಯದ ಕಟ್ಟು, ಕಡತ ದೊರೆತಾಗ ಅವರಿಗಾಗುವ ಸಂಭ್ರಮ ಹೋಲಿಕೆಗೆ ನಿಲುಕದ್ದು, ಯುವಕರಿಗೆ ಪ್ರೇಮಾನುರಾಗ ಪ್ರಾಪ್ತಗೊಳಿಸುವ ಸುಂದರಿ ದೊರೆತಷ್ಟೇ ರೋಮಾಂಚನ. ಗ್ರಹಚಾರ ಬಲದಿಂದ ಆ ಕಾವ್ಯ ಇದು ತನಕ ಸಂಪಾದಿತವಾಗಿ ಪ್ರಕಟವಾಗದೇ ಧೂಳು ಹಿಡಿದು, ಹುಳು ಕಡಿದು ಜರಾಜೀರ್ಣವಾಗಿದ್ದರಂತೂ ಬಸವಾರಾಧ್ಯರಿಗೆ, ಇಪ್ಪತ್ತರ ಚೈತನ್ಯ ಮುಖದಲ್ಲಿ ಹರಿದಾಡುತ್ತದೆ. ಯಾರಾದರೂ ಆತುರ ಸ್ವಭಾವದ ಗ್ರಂಥ ಸಂಪಾದಕರು ಸಂತೆಗೊಂದು ಮೊಳನೇಯ್ದು, ಕವಿಪಾಠ, ಸ್ಖಾಲಿತ್ಯ, ಛಂದೋಬಂಧ, ಆದಿಪ್ರಾಸ, ಗಣ-ಮಾತ್ರೆಗಳ ಲೆಕ್ಕಾಚಾರ, ಪಾಠಾಂತರಗಳ ಬಗ್ಗೆ ತಿಳಿಗೇಡಿಗಳಂತೆ ವರ್ತಿಸಿರುವುದು ಕಣ್ಣಿಗೆ ಬಿದ್ದರೆ; ಮುಖದ ಸಾಮ್ನ ಕಳೆಕಂಡ-ಮಂಡಲದಂತೆ ಉರಿಯ ತೊಡುಗುತ್ತದೆ. "ಛೇ ಎಂಥ ದೊಡ್ಡ ವಿದ್ವಾಂಸರು ಸಣ್ಣ ಪುಟ್ಟ ದೋಷಗಳಿಂದ ಮೊದಲುಗೊಂಡು ದೊಡ್ಡ ದೊಡ್ಡ ದೋಷಗಳ ಬಗ್ಗೆಯು ವಿವೇಚನೆ ಮಾಡಿಲ್ಲವಲ್ಲ. ಇವರು ಮಾಡಿದ್ದನ್ನೇ ನಾವೆಲ್ಲ ಒಪ್ಪಬೇಕಾದ ದುಸ್ಥಿತಿ ಬಂದಿದೆ: ಕನ್ನಡ ಪ್ರಾಚೀನ ಕಾವ್ಯಗಳು ಬೆಳಕು ಕಾಣುವುದೇ ಅಪರೂಪ, ಅಂಥದ್ದರಲ್ಲಿ ದೋಷ ಪೂರಿತವಾಗಿ ಸಂಪಾದಿಸಿ ತಟ್ಟಕ್ಕನೆ ಮುದ್ರಣ ಮಾಡಿಸಿದರೆ ಏನು ಪ್ರಯೋಜನ. ಈ ಕವಿ-ಕೃತಿಗಳು ಶತಮಾನಗಳಷ್ಟೇ ಕಾಯ್ದು ಕುಳಿರುತಿರುತ್ತಾವೆ.

"ಒಂದೆರೆಡು ವರ್ಷ ತಡವಾದರೇನಂತೆ ನಷ್ಟವೇನು" ಎಂಬಿತ್ಯಾದಿ ಆಕ್ಷೇಪಗಳನ್ನು ಕೇಳಲು ನಮಗೆ ಧೈರ್ಯವಿರಬೇಕು ಜೊತೆಗೆ ಪ್ರಾಚೀನ ಕಾವ್ಯಗಳ ಕೊಂಚ ಪರಿಚಯವಾದರೂ ಬೇಕು. ಎರಡೂ ಇಲ್ಲದಿದ್ದಾರೆ ಪಿಳ-ಪಿಳನೆ ಅವರ ಮಾತನ್ನು ಕಣ್ಣು ಮಿಟುಕಿಸದೆ ನೋಡಬೇಕಾಗುತ್ತದೆ, ಕೇಳಿಸಿಕೊಳ್ಳಲು ಕೊಂಚ ಕಷ್ಟವಾಗಬಹುದು. ವಿದ್ವಾಂಸರ ಸಂಪಾದನಾ ಲೋಪಗಳು ವಿದ್ವಾಂಸರಿಗೇ ಗೊತ್ತು. ಆ ವಿಷಯದಲ್ಲಿ ವಿದ್ವಾಂಸರಿಗೂ ಇವರು ವಿದ್ವಾಂಸರು.

ಇಳಿ ವಯಸ್ಸಿನ ಬಸವಾರಾಧ್ಯರನ್ನು ನೋಡಿದಾಗ ನಾನು ಹೊಟ್ಟೆಯುರಿ ಪಟ್ಟಿದ್ದೇನೆ. ಈ ಜನ ಈ ಮಟ್ಟಿಗಿನ ಚಟುವಟಿಕೆಯನ್ನು ಎಲ್ಲಿಂದ ಕೊಂಡು ತಂದರು. ಬದುಕಿನ ಒತ್ತಡಗಳನ್ನೊಂದಿಗೂ ತೋಡಿ ಕೊಂಡುವರಲ್ಲವಲ್ಲ. ಹಾಗಿರುವುದಕ್ಕೆ ಇರಬೇಕು ನಾಗರಿಕ ಜಗತ್ತಿನ ಖಾಯಿಲೆಗಳು ಇವರ ಹತ್ತಿರ ಸೂಳಿಯಲೂ ಹೆದರಿವೆ. ಕನ್ನಡ ಪ್ರಾಚೀನ ಕವಿ-ಕಾವ್ಯಗಳಲ್ಲದೆ ಇವರಾರ ಸಂಗಡವೂ ಸ್ನೇಹ ಬೆಳೆಸಿರಲಾರರೇ? ಯಾವಾಗ ಹೋದರೂ ಯಾವುದಾದರೊಂದು ಹಳೆಯ ತಾಳೆಗರಿ ಕಟ್ಟನ್ನು ಹಿಡಿದೇ ಹಿಡಿದಿರುತ್ತಾರಲ್ಲ. ಇವರಿಗೆ ಬೇರೆ ಆಸಕ್ತಿಗಳೇ ಇಲ್ಲವೇ ಎಂಬ ಗುಮಾನಿ ಬಂದದ್ದು ಹಲವು ಸಲ.

ಒಂದು ಸಲ ವೀರಶೈವಾಮೃತ ಮಹಾಪುರಾಣದ ಬಗ್ಗೆ ಮಾತು ಬಂತು. ಗುಬ್ಬಿಮಲ್ಲಣಾರ್ಯ ವೀರಶೈವ ಸಾಹಿತ್ಯದ ಮಹಾಕವಿ. ಆತನ ಮಹಾಪುರಾಣ ವೀರಶೈವ ಧರ್ಮದ ವಿಶ್ವಕೋಶವಿದ್ದಂತೆ ಎಂಬ ವ್ಯಾಖ್ಯಾನಕ್ಕೆ ತೊಡಗಿದರು. ಈಚೆಗೆ ಅದು ಸಂಪಾದಿತವಾಗಿರುವ ಬಗ್ಗೆ ಪ್ರಸ್ತಾಪ ಮಾಡಿ 'ದೊಡ್ಡ ವಿದ್ವಾಂಸರು ಗ್ರಂಥ ಸಂಪಾದನೆ ಒಂದು ಶಾಸ್ತ್ರವೆಂದು ಗೊತ್ತಿದ್ದೂ ಅದನ್ನು ಪಾಲಿಸಿಲ್ಲ ಎಂದು ಛಟೀರನೆ ಹೇಳಿಬಿಟ್ಟರು. ಗ್ರಂಥ ಸಂಪಾದನೆಯನ್ನು ರಕ್ತಗತಗೊಳಿಸಿಕೊಂಡ ಒಂಟಿ ಕೈ ಬೆರಳಿನಷ್ಟೇ ಜನರಲ್ಲಿ ಬಸವಾರಾಧ್ಯರು ತೋರು ಬೆರಳು. ಈ ಥರದ ತಲೆಮಾರಿನವರು ಹಲವರು ಹೋಗಿ ಬಿಟ್ಟಿದ್ದಾರೆ, ಇನ್ನೂ ಕೆಲವರು ಹೋಗುವ ತಯಾರಿ ನಡೆಸಿದ್ದಾರೆ. ಇವರ ನಂತರದ ಪೀಳಿಗೆಯಲ್ಲಿ ವಿದ್ವಾಂಸರನ್ನು ಕೆದಕಿ-ಹುಡುಕಿ ನೋಡಬೇಕಾಗಬಹುದು.

ಬೆಂಗಳೂರು ಮುಕ್ತ ವಿಶ್ವವಿದ್ಯಾಲಯದವರು ಕನ್ನಡ ಎಂ.ಎ. ತರಗತಿಗೆ 'ಸಾಂಗತ್ಯ' ಕೃತಿಗಳ ಬಗ್ಗೆ ಪಾಠಗಳನ್ನು ಬರೆದು ಕೊಡುವಂತೆ ಕೇಳಿದ್ದರು. ಸಾಂಗತ್ಯ ಕೃತಿಗಳಲ್ಲಿ ಮೊಟ್ಟ ಮೊದಲ ಗ್ರಂಥ ಶಿಶುಮಾಯಣನ 'ತ್ರಿಪದಿ ದಹನ ಸಾಂಗತ್ಯ' ಪಠ್ಯವಾಗಿತ್ತು. ಅದರ ಸಂಪಾದಕರು ಎನ್. ಬಸವಾರಾಧ್ಯರು ಅದೊಂದು ಜೈನ ಧರ್ಮದ ಕೃತಿ. ಸುರಾ-ಸುರಾ ಯುದ್ಧಗಳು ಮಾನವರ ಸದ್ಗುಣ-ದುರ್ಗುಣಗಳಿಗೆ ಸಂಕೇತವಾಗಿವೆ ಎಂಬ ಆಶಯವಿರುವ ಅದರೊಳಗಿನ ಸಂಗೀತ ಕುಂದಿಲ ಲಯ ಮುಂದಿನ ಅನೇಕ ಸಾಂಗತ್ಯ ಕವಿಗಳಿಗೆ ಮಾದರಿಯಾಗಿರುವುದು-ಕೇಳಿ-ಕಂಡಷ್ಟೇ ಸತ್ಯ. ಕೃತಿಯ ಸಂಪಾದನೆಯಲ್ಲಿ ಬಸವಾರಾಧ್ಯರು ತೋರಿರುವ ಶ್ರದ್ಧೆ, ಪಾಂಡಿತ್ಯ ಆಗಿನ ಅವರ ವಯಸ್ಸಿಗೆ ಮೀರಿದ್ದು. ಜೈನ ಧರ್ಮದ ಒಳತಿರುಳನ್ನು ರುಚಿ ನೋಡದೆ ಅದರ ಸವಿಯನ್ನು ಹೇಳಲು ಯಾರಿಗೂ ಸಾಧ್ಯವಾಗದು. ಅಷ್ಟರ ಮಟ್ಟಿಗೆ ಬಸವಾರಾಧ್ಯರು ಪರಿಣತರು ಪಾಠಾಂತರಗಳ ಆಯ್ಕೆಯಲ್ಲಿ ಅವರು ತೋರಿರುವ 'ಆಸ್ಥೆ' ಮುಂಬರುವ ವಿದ್ವಾಂಸರಿಗ ಅನ್ವಯಿಸುವ ಪಾಠ.

ಬಸವಾರಾಧ್ಯರ ಬಗ್ಗೆ ನನಗೆ ತೀವ್ರ ಕುತೂಹಲವಾದದ್ದು ಎಪ್ಪತ್ತರ ದಶಕದಲ್ಲಿ ಆಗವರು ಬೆಂಗಳೂರಿನಲ್ಲಿ ವಾಸವಿರಲಿಲ್ಲ. ರಾಜಾಜಿ ನಗರದ ಎರಡನೇ ಬ್ಲಾಕಿನ ಇ.ಎಸ್.ಐ. ಆಸ್ಪತ್ರೆಯ ಸನಿಹ ಒಂದು ಮನೆ ಕೌಂಪೌಂಡಿನ ಮೇಲೆ ಎನ್. ಬಸವಾರಾಧ್ಯ ಎಂಬ ಹೆಸರಿತ್ತು. ಅದರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದ ಮುಖ್ಯಸ್ಥ ಎಸ್. ಶಿವಣ್ಣನವರು ವಾಸವಿದ್ದರು. ಅವರೊಟ್ಟಿಗೆ ಮನೆಗೆ ಹೋದಾಗ ಆ ಮನೆ ಪ್ರೊ|| ಎನ್. ಬಸವಾರಾಧ್ಯರದೆಂದೂ ಶಿವಣ್ಣನನವರಿಗೆ ವಾಸಕ್ಕೆ ಕೊಟ್ಟಿರುವರೆಂದೂ ತಿಳಿಯಿತು. ಬಾಡಿಗೆ ಮಾತು ಕೇಳಬೇಡಿರೆಂದು ಆ ವಿಷಯಕ್ಕೆ ತೆರಳಿದರು. ಎಸ್. ಶಿವಣ್ಣನವರು ಬಸವಾರಾಧ್ಯರ ಸಂಪಾದಿತ ಒಂದೆರಡು ಕೃತಿಗಳನ್ನು ಕೊಟ್ಟರು. ಅದರಲ್ಲಿ ಹರಿಶ್ಚಂದ್ರ ಕಾವ್ಯ ಸಂಗ್ರಹವೂ ಒಂದು. ಆ ತನಕ ಹರಿಶ್ಚಂದ್ರ ಕಾವ್ಯದ ಕೆಲಭಾಗಗಳನ್ನು ತಿಳಿದಿದ್ದ ನನಗೆ ಸಮಗ್ರ ಓದಿನ ಅವಕಾಶವಾಯ್ತು. ಬಸವಾರಾಧ್ಯರು ಪ್ರಸ್ತಾವನೆಯ ಭಾಗದಲ್ಲಿ ಬರೆದಿದ್ದ ವಿಷಯಗಳು ನನ್ನ ಕುತೂಹಲ ಕೆರಳಿಸಿದ್ದವು. ನನ್ನ ಒಳಗಿದ್ದ ನಾಟಕಕಾರನನ್ನು ಅಲ್ಲಾಡಿಸಿ ಉಬ್ಬಿಸಿತೆಂದೇ ನನ್ನ ನಂಬುಗೆ. 'ಸ್ವರ್ಗಸ್ಥ, ಶುನಶ್ಯೇಪ' ಎಂಬೆರಡು ನಾಟಕಗಳಿಗೆ ವಸ್ತುಗಳು ಆ ಕಾವ್ಯದಿಂದಲೇ ದೊರೆತದ್ದು. ಆ ಎರಡು ನಾಟಕಗಳು ಬೆಳೆಸಿಕೊಟ್ಟ ನಾನಾ ರೀತಿಯ ಫಸಲು ಕಡಿಮೆಯೇನಲ್ಲ. ಹೆಸರಿರಬಹುದು, ಪ್ರಶಸ್ತಿಗಳಿರಬಹುದು, ಕೊಂಚ ಹಣವೂ ಸೇರಿರಬಹುದು.

೧೯೫೫ರಲ್ಲಿ ಸಂಪಾದಿತವಾದ ಈ ಕೃತಿ ಮೂರು-ಮರು ಮುದ್ರಣಗಳನ್ನು ಕಂಡಿದೆ. ಕಾವ್ಯಾಸಕ್ತ ಕನ್ನಡಿಗರು ರಾಘವಾಂಕನನ್ನು ಓದಿಕೊಳ್ಳುವಂತಹ ಪುಣ್ಯ ಶಾಲಿಗಳಾದದ್ದು ಬಸವಾರಾಧ್ಯರಿಂದ. ಹರಿಶ್ಚಂದ್ರ ಕಾವ್ಯದ ಪ್ರಸ್ತಾವನೆ ಎಲ್ಲ ವಿದ್ವಾಂಸರೂ ಬರೆವಂಥದ್ದಲ್ಲ. ಬಸವಾರಾಧ್ಯರಂಥ ವಿರಳ ಶ್ರೇಣಿಯ ಪಂಡಿತರು ಮಾತ್ರವೇ ಬರೆವಂಥದ್ದು. ಹರಿಶ್ಚಂದ್ರನ ಪೂರ್ವಜರ ಬಗ್ಗೆ ರಾಘವಾಂಕನ ಜೀವನ ವೃತ್ತಾಂತಗಳ ಬಗ್ಗೆ ಇರುವ ಆ ಲೇಖನ ಅನನ್ಯವಾದುದು.

ಪ್ರಾಚೀನ ಕಾವ್ಯಗಳ ಸಂಪಾದನಾ ಕಾರ್ಯದಲ್ಲಿ ಹೆಜ್ಜೆ ಹೆಜ್ಜೆಗೆ ಎದುರಾಗುವುದು ಪಾಠಾಂತರ ಸಮಸ್ಯೆ. ನೂರಾರು ವರ್ಷಗಳಿಂದ ಹಿಂದೆ ಕವಿಗಳಿಂದ ರಚಿಸಲ್ಪಟ್ಟು ಕಾಲದಿಂದ ಕಾಲಕ್ಕೆ ಪ್ರತಿಯಿಂದ ಪ್ರತಿಯಾಗಿ ರೂಪು ತಳೆಯುತ್ತಾ ಇರುವಾಗ ಪ್ರತಿ ಮಾಡುವವರು ಕವಿ ಪಾಠವನ್ನು ತಮ್ಮ ಅಭಿರುಚಿ ಮತ್ತು ಗ್ರಹಿಕೆಗೆ ತಕ್ಕಂತೆ ತಿದ್ದಬಹುದು. ಶಬ್ದದ ಅರ್ಥದ ಬಗ್ಗೆ ಗೊಂದಲಗೊಂಡು ತನಗೆ ಪರಿಚಯವಿರುವ ಶಬ್ದವನ್ನು ಹಾಕಬಹುದು. ಪ್ರತಿಕಾರನಿಗೆ ಅಕ್ಷರಗಳು ಕೈ ತಪ್ಪಿ 'ಸ್ಖಾಲಿತ್ಯ'ಗಳು ಕಾಗುಣಿತದ ತಪ್ಪುಗಳು ಉಂಟಾಗಬಹುದು. ಅನೇಕಾನೇಕ ದೋಷಪೂರಿತ ಶಬ್ದಗಳಲ್ಲಿ ಕವಿ ಪಾಠ ಯಾವುದು ಎಂಬುದನ್ನು ನಿರ್ಧರಿಸುವುದು ನಾನು ತಿಳಿದಂತೆ ಸಾಮಾನ್ಯ ಕೆಲಸವಲ್ಲ.

ಒಮ್ಮೆ ನಾನು, ಪ್ರಾಚೀನ ಕಾವ್ಯಗಳ ಸಂಪಾದನೆ ಎಂದರೆ ಯಾಥಾವತ್ತಾಗಿ ಪ್ರತಿಮಾಡುವುದು ಎಂದು ತಿಳಿದಿದ್ದೆ. ಪ್ರತಿ ಮಾಡುವ ತಾಳ್ಮೆಯೊಂದಿದ್ದರೆ ಸಾಕು ಇದಕ್ಕಾಗಿ ಪಾಂಡಿತ್ಯವೇನೂ ಬೇಕಾಗಿಲ್ಲವೆಂದುಕೊಂಡಿದ್ದೆ. ತುಮಕೂರು ನಂಜುಂಡ ಶಿವಯೋಗಿಗಳ ಸಮಗ್ರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವಾಗ ನನಗಾದ ಅನುಭವ-ಹತಾಷೆ, ಹೇಳತೀರದು. ಪ್ರತಿ ಮಾಡುವವರು ನಾನಾ ಕಾರಣಕ್ಕೆ ಮಾಡಿದ ತಪ್ಪುಗಳಲ್ಲಿ ಸರಿಯಾದ ಪಾಠ ಯಾವುದು ಎಂದು ಗ್ರಹಿಸುವುದು ಕಾವ್ಯರಚನೆಯಷ್ಟು ಸರಳವಲ್ಲ, ಸಂಶೋಧನೆಯ ತೀವ್ರ ಸಂಧಾನಕ್ಕೆ; ಮಾಡುವ ತರ್ಕಕ್ಕೆ ಮಿತಿಯಿಲ್ಲ.

ಹರಿಶ್ಚಂದ್ರ ಕಾವ್ಯದಲ್ಲಿ ಪದ್ಯವೊಂದರ ಪಾಠಾಂತರ ಗೊಂದಲವೊಂದನ್ನು ಇಲ್ಲಿ ಹೇಳ ಬೇಕೆನಿಸುತ್ತದೆ.

> ಬಡವರ ಮನೆಯ ಸೊಡರು ಕುಂದುವುದೆ 'ಗುಡ್ಡಿಹಸು'
> ಬಿಡೆ ಕರೆದ ಹಾಲು ಕಹಿಯಪ್ಪುದೇ ಎನ್ನ ಕೃತಿ
> ಪೊಡವಿಯೊಳು ಸಲುವುದಿದಕೇಕೆ ಸಂಶಯವೆಲ್ಲವೋ ನಂಬು ನೀಡಿದೆ ಕೈಯನು॥

ಈ ಅರ್ಧ ಪದ್ಯದಲ್ಲಿ ಪ್ರಮುಖ ಪಾಠಾಂತರವೊಂದಿವೆ "ಗುಡ್ಡಿಹಸು" ಇವುಗಳಲ್ಲಿ ಯಾವುದು ಸರಿಪಾಠ, ನಮ್ಮ ತರ್ಕದ ಕುದುರೆಯ ಲಗಾಮನ್ನು ಸಡಿಲ ಬಿಡದಿದ್ದರೆ ಸಂಪಾದನಾ ಮಾರ್ಗ ಕ್ರಮಿಸುವುದೇ ಇಲ್ಲ. ಪ್ರತಿಕಾರನ ಗ್ರಹಿಕೆಯಿಂದ 'ಗಿಡ್ಡಹಸು' 'ಗೊಡ್ಡಿಹಸು' ಎಂಬೆರಡು ಪಾಠಗಳು ಸೇರಿಬಿಟ್ಟಿವೆ. 'ಗುಡ್ಡಿಹಸು' ಬಿಡದೆ ಕರೆದರೆ ಹಾಲು ವಿಷವಾಗುವುದಿಲ್ಲ ಎಂಬಲ್ಲಿ ತರ್ಕಸರಿಯಾಗಲು ಗೊಡ್ಡ ಹಸು ಕರೆಯುವುದಿಲ್ಲ ಎಂಬುದು ಲೋಕ ಸತ್ಯ. ಇದು ಇಲ್ಲ ಪಶುಪಾಲಕರ ಅನುಭವಕ್ಕೆ ಬಂದ ಸತ್ಯ. ಇನ್ನು 'ಗಿಡ್ಡ ಹಸು' ಎಂಬ ಪಾಠದ ವಿಷಯ, ಪ್ರತಿಕಾರನು ಹಾಕಿದ ಊಹಾ ಪಾಠ ಇವೆರಡೂ ಕವಿಪಾಠಗಳು ಗುಡ್ಡಿಹಸು, ಹೀಗೆ ಪ್ರತಿಯೊಂದು ತರ್ಕ ಜಾಲದಲ್ಲಿ ತೊಡರಿಕೊಂಡು ಬಿಡಿಸಿಕೊಳ್ಳುವುದು ಸರಳವೇನೂ ಅಲ್ಲ. ಇಂಥ ಸಾವಿರಾರು ಪಾಠಗಳನ್ನು ನಿರ್ಧರಿಸುವುದು ಬಸವಾರಾಧ್ಯರಿಗೆ ಕರಗತವಾದುದು ಮಂತ್ರಶಕ್ತಿಯಿಂದ್ದದಲ್ಲ. ಸತತ ಅಧ್ಯಯನ, ಸಂಶೋಧನೆ, ಪಾಂಡಿತ್ಯದಿಂದ ಮಾತ್ರವೇ ಸಾಧ್ಯ.

ಗ್ರಂಥ ಸಂಪಾದನಾಕಾರರಿಗೆ ಕಾವ್ಯಾನುಭವ ಬೆಟ್ಟದಷ್ಟಿದ್ದರೂ ಸಾಲದು ಪರ್ವತದಷ್ಟಿರಬೇಕು. ಕವಿ ಹೃದಯವಿದ್ದವರು ಮಾತ್ರವೇ ಇಂಥ ಕಾರ್ಯದಲ್ಲಿ ಯಶಸ್ಸು ಕಾಣಬಲ್ಲರು.

ಎನ್. ಬಸವಾರಾಧ್ಯರಿಗಿರುವ ತಾಳ್ಮೆ ಅವರ ಪಾಂಡಿತ್ಯಕ್ಕಿಂತ ಗುಲಗಂಜಿ ತೂಕ ಹೆಚ್ಚೆನ್ನಬಹುದು. ಅದನ್ನಳೆಯುವುದು ಬಹು ಸರಳ; ತಕ್ಕಡಿಯ ಬಲಕ್ಕೆ ಕನ್ನಡ ನಿಘಂಟುಗಳನ್ನಿಟ್ಟು ತೂಗಬಹುದು. ಸಂಪಾದಿತ ಕೃತಿಗಳ ಪಾಠಾಂತರಗಳನ್ನು ಇಟ್ಟು ತೂಗಬಹುದು. ಪ್ರಾಚೀನ ಕಾವ್ಯಗಳಲ್ಲಿ ಬರುವ ಕಠಿಣ ಶಬ್ದಗಳ ಅರ್ಥಕೋಶವನ್ನು ಇರಿಸಿ ತೂಗಬಹುದು; ಒಟ್ಟಿನಲ್ಲಿ ಅವರ ತಾಳ್ಮೆ ಅವರ ಶರೀರದ ತೂಕಕ್ಕಿಂತ ಹೆಚ್ಚೆಂದು ಮಾಗದೇ ಹೇಳಿಬಿಡಬಹುದು.

ಎದೆ ಮುಚ್ಚಿದ ಕೋಟು, ದೊಗಲೆ ಪ್ಯಾಂಟು ಧರಿಸಿದ ಬಸವಾರಾಧ್ಯರು ಕೊಂಚ ದಡೂತಿಯಾಗಿ ಕಾಣಬಹುದು, ತೂಕದ ವ್ಯಕ್ತಿಯೆಂದೂ ಅನ್ನಿಸಬಹುದು. ಅವರ ಅಧ್ಯಯನದ ಕೊಠಡಿಯ ಗ್ರಂಥರಾಶಿಯ ನಡುವೆ ಅವರನ್ನು ಥಟ್ಟನೆ

ಗುರುತಿಸಲು ನಮ್ಮ ಕಣ್ಣು ಚುರುಕಾಗಿರಬೇಕು. ಅವರ ಸಣಕು ಶರೀರವನ್ನು ಕಂಡು ಖಾಯಿಲೆ ಮನುಷ್ಯನಿರಬಹುದೆಂದು ಅನುಮಾನಪಟ್ಟು ನನ್ನಂತೆ ಬೇಸ್ತು ಬಿದ್ದಿರಲೂ ಸಾಕು. ನಾನೊಮ್ಮೆ 'ಸಾರ್ ನಿಮ್ಮ ಆರೋಗ್ಯ ಹೇಗಿದೆ, ನಿಮ್ಮ ಕಾಲದ ವಿದ್ವಾಂಸರು ಕೆಲವೇ ಜನರಿದ್ದಾರೆ ಎಂದು ಪರಿಹಾಸ್ಯದ ಪ್ರಶ್ನೆ ಕೇಳಿದೆ. ಬಾಯಿ ತುಂಬಾ ಸ್ವಂತ ತುಂಬಿಕೊಂಡು ನನ್ನನ್ನು ಕೆಣಕುವಂತೆ ನನಗೆ ಹಲ್ಲು ಬಿದ್ದು ಹೋಗಿಲ್ಲ. ಈ ಕಾಲದ ಯಾವ ರೋಗವೂ ಈ ನನ್ನ ಸ್ನೇಹ ಬೆಳೆಸಲು ಮುಂದಾಗಿಲ್ಲ. ಚನ್ನಾಗಿ ಊಟ ಮಾಡುತ್ತೇನೆ. ನನ್ನದು ಅಮ್ಮನವರು ಮಾಡುವ ಊಟ. ಕೊಂಚ ಪ್ರಮಾಣ ಹೆಚ್ಚು ಬೆಳಿಗ್ಗೆ ನಿಯಿಮಿತ ದೂರದ ದಾರಿ ನಡೆದು ತಿರುಗಾಡಿ ಬರುತ್ತೇನೆ. ಸಭೆ ಸಮಾರಂಭಗಳಿಗೆ ಹೋಗಿ ಬರುತ್ತೇನೆ. ಓದುವುದು ಬರೆಯುವುದು ಕಣ್ಣು-ಕೈಗಳ ಸಹಕಾರವಿರುವ ತನಕ ನಡೆಯುತ್ತದೆ. ಇದ್ದಕ್ಕಿಂತ ಬೇರೆ ಆರೋಗ್ಯವಿದ್ದರೆ ಹೇಳಿ ಕೊಂಡು ಬೇಕಾದರೂ ತಂದು ಕಾಪಾಡಿ ಕೊಳ್ಳುತ್ತೇನೆಂದು ಬಿಟ್ಟರು. ಐವತ್ತೈದಕ್ಕೆ ಹಲ್ಲು ಕಳೆದು ಕೊಂಡು ಸಕ್ಕರೆಖಾಯಿಲೆ, ರಕ್ತದೊತ್ತಡ ಮುಂತಾದ ಕೊಲೆಗಾರ ಸಂಗಾತಿಗಳನ್ನು ಪಡೆದ ನಾನು ಆರಾಧ್ಯರಿಗಿಂತ ಬಹಳ ಚಿಕ್ಕವನು. ಮುಖಕ್ಕೆ ನೀರೆರೆಚಿಕೊಂಡಂತೆ ನಾಚಿಕೊಂಡೆ. ಆರೋಗ್ಯವಂತರ ಬಗ್ಗೆ ಅಸೂಯೆ ಪಡುವಷ್ಟು ಗೌರವ ಮನಸ್ಸಿನಲ್ಲಿ ತುಂಬಿಕೊಂಡಿತ್ತು.

ಬಸವಾರಾಧ್ಯರ ಸಾಲಿನಲ್ಲಿ ನಿಲ್ಲುವ ವಿರಳ ವಿದ್ವಾಂಸರೆಲ್ಲ ಸಭೆ ಸಮಾರಂಭಗಳಿಗೆ ಕರೆದರೆ ಸಾರಾ ಸಗಟಾಗಿ ನಿರಾಕರಿಸುತ್ತಾರೆ. ಪ್ರಸಿದ್ಧ ಪಡೆದ ಕಿರಿಯ ಕವಿಗಳೂ ಕೂಡ ಹೃದಯದ ಭಯದಿಂದ ಕರೆದಲ್ಲಿಗೆ ಹೋಗಲು ಹಿಂಜರಿಯುತ್ತಾರೆ. ಆದರೆ ಒಳಗೊಳಗೇ ಸಭೆ ಸಮಾರಂಭಗಳ ಆಯ್ಕೆ ನಡೆಸುತ್ತಾರೆ. ರಾಜಕಾರಿಣಿಗಳು ಯಾರೂ ಯಾವ ಮಟ್ಟದ ಸಮಾರಂಭ ಎಂದೆಲ್ಲ ಲೆಕ್ಕಾಚಾರ ಹಾಕುವವರೇ ಹೆಚ್ಚು. ಬಸವಾರಾಧ್ಯರು ಬಿಡುವಾಗಿದ್ದು ಬೇರೊಂದು ಕಾರ್ಯಕ್ರಮವಿರದಿದ್ದರೆ ಕರೆದವರ ಹಿಂದೆ ಹೋಗಿ ಬಿಡುತ್ತಾರೆ. ರಾಜ್ಯೋತ್ಸವವಿರಲಿ, ವಿಚಾರ ಸಂಕಿರಣವಿರಲಿ, ದೊಡ್ಡದಿರಲಿ, ಚಿಕ್ಕದಿರಲಿ; ತಾವು ಸರಿಯಿರುವ ಸಾಹಿತ್ಯವನ್ನು ಭಾಷಿಸಿ ಬರುತ್ತಾರೆ. ಈ ಸದ್ಗುಣದಿಂದ ಬಹು ಜನ ಪ್ರೇಮವನ್ನು ಪಡೆದಿದ್ದಾರೆ. ಪಾಮರರೊಟ್ಟಿಗೆ ಬೆರೆಯುವ ಬಹು ವಿರಳ ಪಂಡಿತರಿವರು.

ಬಸವಾರಾಧ್ಯರ ಪಾಂಡಿತ್ಯದ ಪರಿಚಯವಿಲ್ಲದವರು ಇವರು ಕನ್ನಡಸಾಹಿತ್ಯ ಪರಿಷತ್ತಿನ ಚುನಾಯಿತ ಅಧ್ಯಕ್ಷರಾಗಿದ್ದರು ಎಂಬ ಕಾರಣಕ್ಕೆ ಗೌರವ ಭಾವ ಹೊಂದುವುದು ಸಹಜ. ನಾನು ಮಾತ್ರ ಆ ಕಾರಣಕ್ಕೆ ಯಾವತ್ತು ಭಾವಭರಿತನಾಗಿಲ್ಲ. ಸಾಹಿತ್ಯ ಪರಿಷತ್ತಿನ ಮತದಾರರು ಪೂರ್ವಾಗ್ರಹದಿಂದಲೂ, ಅದಿಲ್ಲದೆಯೂ ಮಾತ ಹಾಕಿಬಿಟ್ಟರೆ ಸಾಹಿತ್ಯದ ಸುರಧೇನುಗಳು ಅಥವಾ ಅರಣ್ಯದ ಹುಲಿ-ನರಿ ಚಿರತೆಗಳೂ ಕೂಡ ಅಧ್ಯಕ್ಷರಾಗಿ ಚುನಾಯಿತರಾಗಬಹುದು. ಎಷ್ಟೇ ಹಿರಿಯ ಹಾಗೂ ಪ್ರಸಿದ್ಧ ಕವಿಗಳು ಪರಿಷತ್ತಿಗೆ ಸದಸ್ಯರೂ ಆಗಿಲ್ಲ, ಅಧ್ಯಕ್ಷಗಿರಿಯನ್ನು ಮಾನದಂಡವೆಂದು ಕೆಲವರನ್ನು ಗೌರವಿಸುವೆವು ಸರಿಯಲ್ಲ ಈ ವಿಷಯಕ್ಕೆ ಇಷ್ಟು ಮಾತೇ ಸಾಕು.

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ನಾರಸಿಂಹನಹಳ್ಳಿ ಎನ್. ಬಸವಾರಾಧ್ಯರ ಪೂರ್ವಿಕರ ಸ್ಥಳ. ಆ ಕಾರಣಕ್ಕೆ ಅವರು ಹೆಸರ ಮುಂದೆ 'ಎನ್' ಎಂಬ ಸಂಕೇತ ನಾಮ. ಹಳ್ಳಿಯ ಹಳೆ ಮನೆ ಮುಳಿಗೆ ಕೂಸಿನ ಹಂತ ಮಟ್ಟಿಗೆ, ಅಕ್ಕ ಪಕ್ಕದಲ್ಲಿ ದಾಯಾದಿಬಂಧುಗಳಿದ್ದಾರೆ. ಇದ್ದ ಜಮೀನು ಪರಭಾರೆಯಾಗಿದೆ. ಏನಾದರೂ ಆಗಲಿ ನಾರಸಿಂಹನಹಳ್ಳಿ ಎಂಬ ಕುಗ್ರಾಮದ ಹೆಸರು ಅರಿವಿಗೆ ಬಿದ್ದರೆ ಬಸವಾರಾಧ್ಯರು ಮನಸ್ಸಿನಲ್ಲಿ ತಟಕ್ಕನೆ ಮಾಡುತ್ತಾರೆ. ದಾಯಾದಿ ವರ್ಗದವರೇ ಯಾರೂ ಬಸವಾರಾಧ್ಯರ ಸ್ಫೂರ್ತಿಯಿಂದ ವಿದ್ವಾಂಸರಾಗಲಿಲ್ಲ. ಎಲ್ಲರೂ ಕೃಷಿ ಕಾಯಕದವರು. ಹಸಿರು ಗೊಂದಲ ಪುರವಾದ ನಾರಸಿಂಹನಹಳ್ಳಿ ಇಂಥ ವಿದ್ವಾಂಸರನ್ನು ನಾಡಿಗೆ ಕೊಡುಗೆ ನೀಡುತ್ತದೆ ಎಂದು ಯಾವ ಹೋರಾರತ್ನಗಳೂ ಭವಿಷ್ಯ ಹೇಳಿರಲಿಲ್ಲ. ಇಂಥ ಹಸುರಿನ ಗಿಡದಲ್ಲಿ ಎಂದು ಮಾಡಿತು ಬೆಳ್ಳಗೆ' ಎಂಬ ಕೌತುಕ ಇವರಿಗೂ ಇವರೊಂದಿಗೂ ಇರುವ ಹಿನ್ನೆಲೆ, ಎನ್. ಬಸವಾರಾಧ್ಯರು 'ಜೀನಿಯಸ್' ಆಗಿ ಯಶಸ್ಸು ಪಡೆದದ್ದು ಪದಾರ್ಥ ಚಿಂತಾಮಣಿಯಾದ ನಿಘಂಟುವಿನಲ್ಲಿ. ಪ್ರಾಚೀನ ಕಾವ್ಯಗಳ ಸಂಪಾದನೆಯಲ್ಲಿ, ಸಂಶೋಧನೆಯಲ್ಲಿ, ಅವರ ಹಳೆಯ ಕಾಲದ ಆಸಕ್ತಿಗೆ ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆ ಆಶ್ರಮ ಕೊಟ್ಟಿತು. ಅವರ ಸಾಹಿತ್ಯ ಪ್ರತಿಭೆ ಅಷ್ಟಕ್ಕೇ ಮಿತಿ ಗೊಂಡದ್ದು ಕನ್ನಡದ ಪುಣ್ಯ, ಇಲ್ಲದಿದ್ದರೆ ಅದೆಷ್ಟು ಪ್ರಾಚೀನ ಕೃತಿಗಳು ಸಂಪಾದನೆಗೊಂಡು ಸಾರಸ್ವತ ಲೊಕದ ಆಸ್ತಿಯಾಗುರುತ್ತಿರಲಿಲ್ಲ. ಜರಾಜೀರ್ಣ ಕಾವ್ಯ ದೇಗುಲ ಗಳ ಪುನುರುತ್ಥಾನ ವಿಮರ್ಶೆ ನಡೆಸಿ ಕನ್ನಡ ಕಾವ್ಯದೇಪಿಗೆ ಕೈ ಜೋಡಿಸಿದ್ದಾರ.

ಬಸವಾರಾಧ್ಯರು ಸಂಶೋಧನೆಯ ಹಾದಿಯಲ್ಲಿ ಅದೆಷ್ಟೋ ಕಿರು ಭಾಷಣಗಳನ್ನು ನೀಡಿದ್ದರು. ಅವಾವನ್ನು ಜೋಪಾನ ಮಾಡಲಿಲ್ಲ, ಕಳೆದು ಹೋಗಿವೆ. ಕನ್ನಡದಲ್ಲಿ ಒಂದೆರಡು ನಾಣ್ಣುಡಿಗಳಿವೆ 'ಹೆಚ್ಚಾದದ್ದು ಹುಚ್ಚಾಗುತ್ತದೆ, ಉಕ್ಕದ್ದು ಒಲೆ ಪಾಲಾಗುತ್ತದೆ' ಅವನ್ನೆಲ್ಲ ಸುಳ್ಳಾಗಿಸಿದರು. ಪಾಂಡಿತ್ಯ ಹೆಚ್ಚಾದದ್ದು ಹುಚ್ಚಿಗೆ ಎಡೆಗೊಡಲಿಲ್ಲ. ಉಕ್ಕಿ ಹರಿದದ್ದು ಒಲೆ ಪಾಲಾಗದೇ ಇಲ್ಲ, ಬಸವಾರಾಧ್ಯರು ಪೂರ್ವಸಿದ್ಧತೆಯಿಲ್ಲದೆ ಯಾವ ಭಾಷಣಕ್ಕೂ ಹೋಗುವವರಲ್ಲ. ಭಾಷಣ ಮೊದಲು ಹೂ ತಳೆಯುವುದು ಪ್ರಬಂಧವಾಗಿ ಇಂಥ ಬದ್ಧತೆ ಹೊಂದಿದ ವಿದ್ವಾಂಸರು ಮರಳುಗಾಡಿನ 'ಓಯಸಿಸ್'ನಂತೆ ವಿರಳಾತಿ ವಿರಳ.

'ಬಸವ' ಎಂಬುದು ವೃಷಭದ ಪರ್ಯಾಯ ಶಬ್ದ. ಇದರರ್ಥ ಬಲಶಾಲಿ ಎಂದು. ಶಾರೀರಿಕವಾಗಿ ಹೇಗೇ ಇರಲಿ ಬೌದ್ಧಿಕವಾಗಿ 'ವೃಷಭ'ನಕ್ಷೆ ಸದೃಡ ವ್ಯಕ್ತಿತ್ವ ಇವರದ್ದು. ಇವರ ಊರ ಹೆಸರು ನಾರಸಿಂಹನಹಳ್ಳಿ. ಬಸವನಿಗೆ ಕೊಂಚವೂ ಹೊಂದಾಣಿಕೆಯಿಲ್ಲ. ಅದೂ ಹೋಗಲಿ ಬಸವನಿಗೂ ಆರಾಧ್ಯರಿಗೂ ಈಗೀಗ ಅಷ್ಟಕ್ಕಷ್ಟೇ ವಿಭಿನ್ನತೆಯಲ್ಲಿ ತಕ್ಕಂತೆ ಸಾಧಿಸುವ ಸದ್ಗುಣ ಬಸವಾರಾಧ್ಯರಿಗಿರುವುದರಿಂದಲೇ ಈ ವಿರೋಧಾಭಾಸಗಳು ಬಿದ್ದು ಹೋಗುತ್ತವೆ. ಇವರ ಸಾಹಿತ್ಯವೇ ಆತ್ಮವಾಗುಳ್ಳ ಹಲವು ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆಚಾರ್ಯ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಾಧ್ಯಕ್ಷರಾಗಿ, ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಗಳ ಪ್ರತಿಷ್ಠಾನ ಅಧ್ಯಕ್ಷ ಹೀಗೆ ಪಟ್ಟಿ ಬೆಳೆದಿದೆ. ಪಾಂಡಿತ್ಯದ ಝುಂಝಾವಾತವಿದ್ದೆಡೆ ಇವರ ವಿಹಾರ ಸಂಬಂಧವಿರುತ್ತದೆ. ಮೂಲ ಯಾವುದಾದರೂ ಸರಿಯೇ ಅದನ್ನವರು ಸ್ವಾಗತಿಸುತ್ತಾರೆ ಗೌರವಿಸುತ್ತಾರೆ.

ಕೆಲವರ್ಷಗಳ ಹಿಂದೆ ಬಸವಾರಾಧ್ಯರ ಧರ್ಮಪತ್ನಿ ಲಿಂಗೈಕ್ಯರಾದರು. ಸುದ್ದಿ ತಿಳಿದ ನನ್ನ ಹೆಂಡತಿ ಇಡೀ ದಿನ ಗುಣದಾನ ಮಾಡಿದಳು ಪುಣ್ಯವಂತೆ, ಮುತ್ತೈದೆ ಸಾವು ಯಾರಿಗುಂಟು ಯಾರಿಗಿಲ್ಲ ಎಂದೆಲ್ಲಾ ಹೇಳಿದಳು. ಏನೋ ಓದುತ್ತಿದ್ದ ನಾನು "ನೋಡೇ! ಬಸವಾರಾಧ್ಯರು ಪತ್ನಿವಿಯೋಗದಿಂದ ದು:ಖಿತರಾದರು. ಗಾದೆಯೇ ಇದೆಯಲ್ಲಾ ಚಿಕ್ಕಂದಿನಲ್ಲಿ ತಾಯಿ ಸಾಯಬಾರದು, ಮುಪ್ಪಿನಲ್ಲಿ ಹೆಂಡತಿ ಸಾಯಬಾರದು" ಉದ್ಗಾರದ ಹೊಳೆ ಹರಿಸಿದೆ.

ಇತಿಹಾಸ ಪ್ರಾಧ್ಯಾಪಕರಾದ ಎಂ.ವಿ. ಶ್ರೀನಿವಾಸರೊಂದಿಗೆ ಬಸವಾರಾಧ್ಯರನ್ನು ಮಾತಾಡಿಸಿ ಬರಲು ಜೊತೆಯಾದೆ, ಅವರ ಮನೆ ಸೂತಕದ ಮನೆಯಾಗಿರಲಿಲ್ಲ. ಸರಸ್ವತಿಯ ದೇಗುಲದಂತಿತ್ತು. ಬಸವಾರಾಧ್ಯರು ಅಧ್ಯಯನದಲ್ಲಿ ತೊಡಗಿದ್ದರು, ಮಗ್ನರಾಗಿದ್ದರು ಸಮಾಧಾನದ ಸಂತಾಪ ನುಡಿಗಳಾಗಲೀ. ಸಂಪ್ರದಾಯದ ಮಾತುಗಳಾಲೀ ನಮಗೆ ಹೊಳೆಯಲೇ ಇಲ್ಲ. ಅವರು ಪತ್ನಿ ವಿಯೋಗವನ್ನು ಅಧ್ಯಯನದಿಂದಲೇ ಪರಿಹರಿಸಿಕೊಂಡರು. ಒಂದಷ್ಟು ಸಾಹಿತ್ಯದ ಚರ್ಚೆ ನಡೆಸಿ ಹೊರಬಂದೆವು. ಸಾಹಿತ್ಯ ಸಂಶೋಧನೆಗಳ ಸವಿಯುಂಡವರಿಗೆ ಬಾಳಿನ ಯಾವ ಕಹಿಯೂ ಧೃತಿಗೆಡಿಸಲಾರದೇನೋ. ಪಾಂಡಿತ್ಯದಿಂದ ಸಮಸ್ಥಿತಿ ದೊರಕಿಸಿಕೊಳ್ಳಲು ಶ್ರಮವಾಗುವುದಿಲ್ಲ. ಅಷ್ಟರ ಮಟ್ಟಿಗೆ ಆರಾಧ್ಯರು ಸಂಶೋಧನಾಶೀಲರು.

ಆರಾಧ್ಯರ ಪ್ರಾಚೀನ ಆಂದ್ರದ ಓರಂಗಲ್ಲು, ಸೀಮೆಯಲ್ಲಿದ್ದರಂತೆ. ಪಂಡಿತಾರಾಧ್ಯ ಚರಿತೆಯು ಆರಾಧ್ಯ ಮತಸಾರ ಬಗ್ಗೆ ಹೇಳುವ ಪ್ರಾಚೀನ ಕಾವ್ಯ. ಪಾಲ್ಕುರಿಕೆ ಸೋಮನಾಥ ಇದೇ ಒಳಮತದಿಂದ ಬಂದ ವೀರಶೈವ ಕವಿ. ವೀರಶೈವರಲ್ಲಿ ಆರಾಧ್ಯರು ಎಂದರೆ ಕೊಂಚ ಮೇಲ್ದರ್ಜೆಯ ಜನರೆಂದೇ ವಾಡಿಕೆ. ಇವಾವ ಮೆಲರಿಮೆಗಳು ಬಸವಾರಾಧ್ಯರ ಮನಸ್ಸನ್ನು ಸಂಕುಚಿತಗೊಳಿಸಿಲ್ಲ. ಇವರು ಲಿಂಗಾಯಿತರೊಡನೆ ಗುರುತಿಸಿಕೊಳ್ಳುವ ರೂಢಿಯನ್ನೇ ಮರೆತವರು. ಸಾಹಿತ್ಯ-ಪಾಂಡಿತ್ಯ-ಸಹೃದಯತೆ ಇದ್ದವರ ಜೊತೆ ಇವರೂ ಇರುತ್ತಾರೆ. ಅಧ್ಯಯನ ಶೀಲತೆಯೇ ಇವರ ಜಾತಿ-ಕುಲ-ಮತ-ಧರ್ಮ ಇತ್ಯಾದಿ. ಸಾಹಿತ್ಯ ಕ್ಷೇತ್ರವನ್ನು ಜಾಲಾಡಿದರೆ ಬಸವಾರಾಧ್ಯರಂತಹ ಸಂಶೋಧಕರು ಕೆಲವರಾದರೂ ಸಿಕ್ಕಬಹುದು, ಗ್ರಂಥ ಸಂಪಾದಕರೂ ದೊರಕಿಯಾರು. ಪಾಂಡಿತ್ಯ ರಸ ಋಷಿಗಳೂ ಕಾಣಿಸಿಯಾರು. ಆದರೆ ಇವರಂಥ ಸರಳ-ಸಜ್ಜನಿಕೆಯ ಸಂಭಾವಿತ-ವಿದ್ವಾಂಸರು ಸಿಗುವುದು ದುರ್ಲಭ. ಈ ವಿಷಯದಲ್ಲಿ ಬಸವಾರಾಧ್ಯರಿಗೆ ಬಸವಾರಾಧ್ಯರೇ ಉದಾಹರಣೆ.

XXX

ನಿಷ್ಠೆ, ಪ್ರಾಮಾಣಿಕತೆ, ಸ್ನೇಹಗಳ ಸಾಕಾರಮೂರ್ತಿ

-ಎಸ್. ರಾಮಪ್ರಸಾದ್

ಹತ್ತಿರ ಹತ್ತಿರ ಆರು ಅಡಿ ಎತ್ತರದ, ಎಣ್ಣೆ ಕಂದುಗೆಂಪು ಮುಖದ, ಎರಡೂ ಕಪಾಳಗಳೂ ಕುಳಿಬಿದ್ದಿರುವ, ತೀಕ್ಷ್ಣವೆನಿಸುವ ಕಣ್ಣುಗಳ, ಸದಾ ಮುಚ್ಚಿದ ಕೋಟು ಮತ್ತು ನಾಜೂಕಾಗಿ ಇಸ್ತ್ರಿಮಾಡಿದ ಪ್ಯಾಂಟನ್ನು ಧರಿಸಿದ, ಹೊಳೆಯುವ ಬೂಡ್ಸುಗಳನ್ನು ಮೆಟ್ಟಿಕೊಂಡಿರುವ, ಕೆಲವೊಮ್ಮೆ ಕತ್ತಿನ ಸುತ್ತಲೂ ಮೊಫ್ಲರನ್ನು ಸುತ್ತಿಕೊಳ್ಳುವ, ಸೌಜನ್ಯಭರಿತ ವ್ಯಕ್ತಿ. ವಿದಿತ ಕೆಲಸವೇ ತನ್ನ ಕಾಯಕ ಎಂದು ಭಾವಿಸಿದ, ಪಾಂಡಿತ್ಯದ ಪ್ರಭೆಯನ್ನು ತಮ್ಮ ಕೃತಿಗಳಲ್ಲಿ ಹೊರಹೊಮ್ಮಿಸಿದ, ಜ್ಞಾನದಬುತ್ತಿ ಬರಿದಾಗದಿರಲಿ ಎಂಬಂತೆ ಆ ಹಣತೆಗೆ ಆಗಾಗ್ಗೆ ಧೂಮಪಾನದ ನೈವೇದ್ಯ ಮಾಡುತ್ತ, ಮಾತಿನ ಮೋಡಿಯಿಂದ ಸ್ನೇಹಿತರನ್ನು ಆಕರ್ಷಿಸುವ ವ್ಯಕ್ತಿ ಎಸ್. ಬಸವಾರಾಧ್ಯರಲ್ಲದೆ ಬೇರೆ ಯಾರು ತಾನೇ ಆಗಲು ಸಾಧ್ಯ? ಈ ಎಲ್ಲ ಗುಣವಿಶೇಷಣಗಳಿಗೆ ಪಾತ್ರರಾಗುವವರು ಅವರೇ ಎಂಬುದು ಅವರನ್ನು ಬಲ್ಲ ಎಲ್ಲರ ಒಕ್ಕೊರಲು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ (ಆಗ ಇದ್ದದ್ದು ಅದೇ ಹೆಸರು) ಶ್ರೀಯುತರ ಪರಿಚಯ ನನಗಾದದ್ದು ೧೯೭೧ರಲ್ಲಿ. ಆಗ ನಾನು ಅದೇ ಸಂಸ್ಥೆಯ ಕನ್ನಡ ವಿಶ್ವಕೋಶ ವಿಭಾಗದಲ್ಲಿ ವಿಜ್ಞಾನ ಉಪಸಂಪಾದಕನಾಗಿದ್ದೆ. ಅಂದಿನಿಂದಲೂ ೧೯೮೬ರ ತನಕವೂ ಶ್ರೀಯುತರಿಗೂ ನನಗೂ ಇದ್ದ ಪರಿಚಯ-ಸಂಪರ್ಕಗಳು ಅವ್ಯಾಹತವಾಗಿ ನಡೆದುಕೊಂಡು ಬಂದಿತ್ತು. ಈಗಲೂ ಅದು ನಡೆದುಕೊಂಡೇ ಬಂದಿದೆಯೆನ್ನಿ. ನಮ್ಮ ವಿಭಾಗದ್ದು ಕನ್ನಡ ವಿಶ್ವಕೋಶಕ್ಕಾಗಿ ತರಿಸಿದ್ದ ಲೇಖನಗಳ ಸಂಪಾದನ ಕಾರ್ಯ. ಬಸವಾರಾಧ್ಯರ ವಿಭಾಗದ್ದೋ ಪ್ರಾಚೀನ ಕನ್ನಡ ಸಾಹಿತ್ಯಕೃತಿಗಳ ಹಾಗೂ ಓಲೆಗರಿಗಳ ವಸ್ತುನಿಷ್ಠ ಸಂಪಾದನ ಕಾರ್ಯ. ಈ ಕಾರ್ಯದಲ್ಲಿ ನೆಲೆಗೊಂಡಿದ್ದ ವಿಧಿ-ವಿಧಾನಗಳು ಬೇರೆ ಬೇರೆಯಾಗಿದ್ದರೂ ಈರ್ವರ ನಡುವೆ ವ್ಯಾಪಿಸಿಕೊಂಡಿದ್ದ ಪ್ರೀತಿ-ವಿಶ್ವಾಸಗಳ ಪರಿ ಮಾತ್ರ ಒಂದೇ ಆಗಿತ್ತು.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಪ್ರಾಚ್ಯವಿದ್ಯಾ ಸಂಶೋಧನಾಲಯದ (ಹಿಂದಿನ ಓರಿಯಂಟಲ್ ಲೈಬ್ರರಿ) ಕನ್ನಡ ವಿಭಾಗವನ್ನು ಪ್ರತ್ಯೇಕಿಸಿ ೧೯೬೮ರಲ್ಲಿ ಅದನ್ನು ಕನ್ನಡ ಅಧ್ಯಯನ ಸಂಸ್ಥೆಯೊಡನೆ ವಿಲೀನಗೊಳಿಸಲಾಯಿತು. ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕರಾಗಿದ್ದ ಎಚ್. ದೇವೀರಪ್ಪನವರು ತಮ್ಮ ಕಾರ್ಯಭಾರವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲೇ ನಿರ್ವಹಿಸುತ್ತಿದ್ದರು. ಪ್ರೊ. ದೇ. ಜವರೇಗೌಡ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ನೇಮಕಗೊಂಡಿದ್ದರು. ದೇವೀರಪ್ಪನವರು ಸಂಸ್ಥೆಯ ಸಂಪಾದನಾ ವಿಭಾಗಕ್ಕೆ ಸೇರಿದವರಾಗಿದ್ದು ಅದರ ನಿರ್ದೇಶಕತ್ವವನ್ನು ವಹಿಸಿಕೊಂಡಿದ್ದರೆ, ಪ್ರೊ. ಜವರೇಗೌಡ ಅವರು ಸಮಗ್ರ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕತ್ವದ ಹೊಣೆಗಾರಿಕೆ ಹೊತ್ತಿದ್ದರು. ಕಾಲಕ್ರಮೇಣ ದೇವಿರಪ್ಪನವರು ವಿಶ್ವವಿದ್ಯಾಲಯದ ಸೇವೆಯಿಂದ ೧೯೭೧ರಲ್ಲಿ ನಿವೃತ್ತರಾದ ಬಳಿಕ ಆ ಸ್ಥಾನವನ್ನು ಶ್ರೀಯುತ ಬಸವಾರಾಧ್ಯರೇ ಉಪನಿರ್ದೇಶಕರಾಗಿ (ಸಂಪಾದನ ವಿಭಾಗ) ಅಲಂಕರಿಸಿದರು. ನಾನು ೧೯೬೮ ಸೆಪ್ಟೆಂಬರ್ ತಿಂಗಳಲ್ಲಿ ಕನ್ನಡ ವಿಶ್ವಕೋಶ ವಿಭಾಗದಲ್ಲಿ ಉಪಸಂಪಾದಕನಾಗಿ ಸೇರಿದಾಗ ಶ್ರೀ ಬಸವಾರಾಧ್ಯರು ಕನ್ನಡ ಅಧ್ಯಯನ ಸಂಸ್ಥೆಯನ್ನು ಪ್ರವೇಶಿಸಿರಲಿಲ್ಲ. ಅವರು ಬೆಂಗಳೂರಿನಲ್ಲಿಯ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಛೇರಿಯಲ್ಲಿ ಹಿರಿಯ ಸಂಪಾದಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಸದಾ ಎನ್ನಲಾಗದಿದ್ದರೂ ಬಹುವೇಳೆ ಹಸನ್ಮುಖದಿಂದ ಇರುತ್ತಿದ್ದ ಠಾಕುಠೀಕಿನ, ನೆಟ್ಟ ನಿಲುವಿನ ಶಿಸ್ತಿನ ಸಿಪಾಯಿಯಂತಿದ್ದ ಬಸವಾರಾಧ್ಯರ ಭೇಟಿ ನನಗಾದದ್ದು ೧೯೭೧ರಲ್ಲಿ ಮಾತ್ರ.

ಅವರು ಇದ್ದ ಚಿಕ್ಕ ಕೋಣೆಯಲ್ಲಾಗಲಿ, ಮುಂದೆ ಅವರು ಇರುತ್ತಿದ್ದ ವಿಶಾಲಕೋಣೆಯಲ್ಲಾಗಲಿ ನಾನು ಕಾಣುತ್ತಿದ್ದುದು ಗ್ರಂಥಗಳನ್ನು ಓರಣವಾಗಿರಿಸಿದ್ದ ಬೀರುಗಳನ್ನೇ. ಮೇಲಾಗಿ ಅವರ ಕೆಲಸದ ಮೇಜಿನ ಮೇಲೆ, ಬರೆಯುವ ಜಾಗವೊಂದನ್ನು ಹೊರತುಪಡಿಸಿ, ಸುತ್ತಲೂ ಬಗೆ ಬಗೆಯ ಪರಾಮರ್ಶನಗ್ರಂಥಗಳು, ವಿವಿಧ ಬಗೆಯ ನಿಘಂಟುಗಳು, ಬಣ್ಣಬಣ್ಣದ ಪೆನ್ನುಗಳು, ಓರಿಯಂಟಲ್ ಸಂಸ್ಥೆಯಿಂದ ತಂದಿಟ್ಟುಕೊಂಡಿದ್ದ ತಿರುಗಿಸುವ ಹಳೆಯ ಕರೆಗಂಟೆ ಇತ್ಯಾದಿಗಳು ವಿಜೃಂಭಿಸುತ್ತಿದ್ದವು. ಗ್ರಂಥ ಸಂಪಾದನೆಯ ಕೆಲಸ ಮಾಡುವಾತನಿಗೆ ಇವೆಲ್ಲದರ ಅಗತ್ಯ ಇರುವುದನ್ನು ಶ್ರೀ ಬಸವಾರಾಧ್ಯರು ಮನಗಂಡಿದ್ದರು. ಅವರ ಮೇಜು ಒಂದು ವಿಧದಲ್ಲಿ ಏರೋಪ್ಲೇನಿನ ಕಾಕ್‌ಪಿಟ್ ಇದ್ದಂತೆ ಇತ್ತು. ಪೆನ್ನುಗಳು, ಡಾಟ್‌ಪೆನ್ನುಗಳು ಎಂದರೆ ಬಸವಾರಾಧ್ಯರಿಗೆ ಜಿಲೇಬಿ, ಜಾಮೂನುಗಳು ಇದ್ದಂತೆ. ಅವರ ವಿವಿಧ ಬಗೆಯ ಬಣ್ಣಬಣ್ಣದ ಡಾಟ್‌ಪೆನ್ನುಗಳು, ಚಿಹ್ನೆಗಳು ಸಂಪಾದನಾಕಾರ್ಯದಲ್ಲಿ ಬಗೆಬಗೆಯಾಗಿ ಮೈದಳೆಯುತ್ತಿದ್ದುವು. ವಿದೇಶೀ ಪೆನ್ನುಗಳ ಬಗ್ಗೆ ಆರಾಧ್ಯರಿಗೆ ವಿಶೇಷ ಒಲವು. ನಾನೂ ಕೆಲವೊಮ್ಮೆ ನನ್ನ ಬಳಿಯಿದ್ದ ವಿದೇಶೀ ಪೆನ್ನುಗಳನ್ನು ಅವರಿಗೆ ತೋರಿಸಿ ಅವರ ಪೆನ್‌ಚಪಲವನ್ನು ವೃದ್ಧಿಪಡಿಸುತ್ತಿದ್ದೆ. ಶೈಕ್ಷಣಿಕ ಕೆಲಸವನ್ನು ಮಾಡುವವನಿಗೆ ಸಂದೇಹಗಳು ಬರುವುದು, ಅದರಲ್ಲೂ ಪದವೊಂದರ ಕಾಗುಣಿತ, ರೂಪ, ಅರ್ಥವಿಶೇಷಗಳು ಇತ್ಯಾದಿಗಳು ಸಹಜವೇ. ಆದ್ದರಿಂದ ಬಗೆಬಗೆಯ ವಿವಿಧ ಭಾಷೆಯ (ಇಂಗ್ಲಿಷ್, ಸಂಸ್ಕೃತ, ಹಿಂದಿ ಇತ್ಯಾದಿ) ನಿಘಂಟುಗಳನ್ನು ಅವರು ಕೈಪಕ್ಕದಲ್ಲೇ ಮೇಜಿನ ಮೇಲೆ ಇರಿಸಿಕೊಂಡಿದ್ದರು. "ನಿಘಂಟುಗಳನ್ನು ಬಳಸದೆಯೇ ಸಂಪಾದನ ಕಾರ್ಯ ಹೇಗೆ ತಾನೇ ಸಾಗುತ್ತದೆ; ಸಂದೇಹ ಎನ್ನುವುದು ಅಜ್ಞಾನದ ದ್ಯೋತಕ ಅಲ್ಲ; ಪರಾಮರ್ಶನ ಜ್ಞಾನದ ವಿಕಾಸಕ್ಕೆ ಒಗ್ಗರಣೆ ಹಾಕುವಂತಿರುವಂಥದ್ದು" ಎಂಬ ಮಾತುಗಳ ಸರದಾರರಾಗಿರುವವರು ಬಸವಾರಾಧ್ಯರು. ಅಂತೆಯೇ ಅವರ ಕಾರ್ಯವೈಖರಿ, ನಿಷ್ಠೆ, ಪ್ರಾಮಾಣಿಕತೆಗಳ ಪರಿ.

ಕಛೇರಿಯಲ್ಲಿ ಅವರು ಕೆಲಸಮಾಡುತ್ತಿದ್ದ ಪರಿಯಾದರೋ ಇತರ ಎಲ್ಲರಿಗೂ ಆದರ್ಶಪ್ರಾಯವಾಗಿತ್ತು. ಠಾಕುಠೀಕಿನ ಉಡುಪನ್ನು ಧರಿಸಿ, ಫಳಫಳನೆ ಹೊಳೆಯುವ ಚರ್ಮದ ಹ್ಯಾಂಡ್‌ಬ್ಯಾಗನ್ನು ಕೈಯಲ್ಲಿ ಹಿಡಿದು (ನೋಡುವವರ ಕಣ್ಣಿಗೆ ಯಾವುದೋ ಮೆಡಿಕಲ್ ರೆಪ್ರೆಸೆಂಟಿಟಿವ್‌ನಂತೆ ಕಾಣಿಸುವಂತೆಯೋ ಯಾವುದೋ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್‌ನಂತೆ ಕಾಣಿಸುವಂತೆಯೋ) ಸಂಸ್ಥೆಯೊಳಕ್ಕೆ ಬರುತ್ತಿದ್ದ ಅವರನ್ನು ಎಲ್ಲರೂ 'ನಮಸ್ಕಾರಾ ಸಾರ್' ಎಂದು ಆತ್ಮೀಯತೆಯಿಂದ ನೋಡುತ್ತಿದ್ದರು. ಬಂದ ಒಡನೆಯೇ, ಸೇವಕ ಕೊಠಡಿಯ ಬಾಗಿಲ ತೆರೆಯುವುದನ್ನು ಕಾಯದೆ ತಾವೇ ಬಾಗಿಲನ್ನು ತೆರೆದುಕೊಂಡು ಒಳಹೋಗುತ್ತಿದ್ದರು. ಕೊಠಡಿಯೊಳಗಿನ ಘಮಟುವಾಯು ಹೊರಹೋಗಲೆಂದು ಕಿಟಕಿಬಾಗಿಲುಗಳನ್ನು ತೆರೆದು, ಘಮಘಮಿಸುವ ಉತ್ಕೃಷ್ಟಬಗೆಯ ಸುವಾಸನೆಯುಳ್ಳ ಗಂಧದ ಕಡ್ಡಿಯನ್ನು ಹಚ್ಚಿಡುತ್ತಿದ್ದರು. ಅವರು ಬಂದು ಕುಳಿತು, ತಮ್ಮ ಬಳಿಯಲ್ಲಿದ್ದ ಬ್ಯಾಗಿನಿಂದ ಲಕೋಟೆಯನ್ನು ಹೊರತೆಗೆದು ಅದರಲ್ಲಿದ್ದ ಬಗೆಬಗೆಯ ಪೆನ್ನುಗಳನ್ನು ಮೇಜಿನ ಮೇಲೆ ಇಡುವ ಸಂದರ್ಭ.

ಆ ಹೊತ್ತಿಗಾಗಲೇ ಅವರ ಬಳಿ, ಅವರೆದುರು ಬಂದು ಕುಳಿತುಕೊಳ್ಳುತ್ತಿದ್ದ ಶ್ರೀಮತಿ ಲಕ್ಷ್ಮೀನರಸಮ್ಮನಾಗಲಿ (ಸಂಸ್ಥೆಯ ಶೀಘ್ರಲಿಪಿಗಾರ್ತಿ), ಪ್ರೊ. ಜಿ. ಬ್ರಹ್ಮಪ್ಪನವರಾಗಲೀ (ಜೈನಾಲಜಿಯ ಪ್ರಾಧ್ಯಾಪಕರು), ಶ್ರೀ ಟಿ.ಎಚ್. ಹೊನ್ನಗಂಗಪ್ಪನವರಾಗಲಿ (ಕನ್ನಡ ವಿಶ್ವಕೋಶದ ಸಂಪಾದಕರು) ಕೊನೆಗೆ ನನ್ನನ್ನಾಗಲಿ ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದರು. ಲಕ್ಷ್ಮೀನರಸಮ್ಮನವರು ಶ್ರೀಯುತರಿಗೆ ಸಂಬಂಧಿಸಿದ ಕಾಗದಪತ್ರಗಳನ್ನು ತಂದುಕೊಡುವ, ಸೇವಕ ಅವರಿಗೂ ಅವರ ಬಳಿ ಕುಳುತಿರುವವರಿಗೂ ಕಾಫಿಯನ್ನೋ ಚಹಾವನ್ನೋ ತಂದುಕೊಡುವ ಏರ್ಪಾಡನ್ನು ಮಾಡಿದ್ದರು ಬಸವಾರಾಧ್ಯರು. ಇವೆಲ್ಲ ಕೇವಲ ಹತ್ತು-ಹದಿನೈದು ನಿಮಿಷಗಳ ಒಳಗಾಗಿಯೇ ಮುಗಿದುಹೋಗುವ ಏರ್ಪಾಡು. ಬಂದವರೊಡನೆ ಲೋಕಾಭಿರಾಮವಾಗಿ ಒಂದೆರಡು ಪ್ರೀತಿ ವಿಶ್ವಾಸದ ಮಾತುಗಳು, ನಗೆಯ ಕಡಲಿನ ಮೇಲೆ ಪಯಣ. ಬಳಿಕ ಎಲ್ಲರೂ ಅವರವರ ಕೋಣೆಗಳಿಗೆ ಹೋದ ಬಳಿಕ, ಬಸವಾರಾಧ್ಯರು ತಮ್ಮ ಕಾಯಕದಲ್ಲಿ ಪಟ್ಟಾಗಿ ತೊಡಗಿಸಿಕೊಳ್ಳುವಿಕೆ. ಅಧಿಕೃತ ಕಾಗದ ಪತ್ರಗಳ ಪರಿಶೀಲನೆ, ಒಪ್ಪಿಗೆ ಸಹಿ ಇತ್ಯಾದಿಗಳು ಜರುಗುತ್ತಿದ್ದವು. ಗ್ರಂಥಸಂಪಾದನೆಯ ಕಾರ್ಯದಲ್ಲಿ ನಿರತರಾದರು ಅಂದರೆ, ಶೌಚಗೃಹಕ್ಕೆ ಒಂದೆರಡು ಸಲ ಹೋಗುವುದನ್ನು ಹೊರತುಪಡಿಸಿ, ತಮ್ಮ ಕುರ್ಚಿಗೆ ಅಂಟಿಕೊಂಡೇ ಕೆಲಸಮಾಡುವ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದರು. ಯಾರೇ ಅವರವರ ಕೊಠಡಿಯಲ್ಲಿ ಇರದಿದ್ದರೂ ಬಸವಾರಾಧ್ಯರು ಮಾತ್ರ ಕೆಲಸದ ಅವಧಿಯಲ್ಲಿ ತಮ್ಮ ಕೋಣೆ ಬಿಟ್ಟು ಕದಲುತ್ತಿರಲಿಲ್ಲ. ಕಾರ್ಯತತ್ಪರತೆ, ಕಾರ್ಯವೈಖರಿ, ಕಾರ್ಯಾನಂದ ಮುಂತಾದವುಗಳಿಗೆಲ್ಲ ಬಸವಾರಾಧ್ಯರು ಅನ್ವರ್ಥವಾಗಿದ್ದರು.

ಪ್ರೊ. ಜಿ. ಬ್ರಹ್ಮಪ್ಪನವರು ಆಗಾಗ್ಗೆ ಬಸವಾರಾಧ್ಯರ ಕೊಠಡಿಗೆ ಬಂದು ಕುಳಿತು, ಚಹಾಕುಡಿದು, ಮಾತನಾಡಿ ಹೋಗುವುದಿತ್ತು. ಅಂಥ ಒಂದು ಸನ್ನಿವೇಶದಲ್ಲಿ ನಾನು ಬಸವಾರಾಧ್ಯರ ಜೊತೆ ಮಾತನಾಡುತ್ತಿದ್ದೆ. ಬ್ರಹ್ಮಪ್ಪನವರಿಗೆ ನನ್ನ ಪರಿಚಯವನ್ನು ಮಾಡಿಸಿ, "ನೀವೂ ಬ್ರಹ್ಮಪ್ಪನವರಿಂದ ಜ್ಯೋತಿಷ್ಯ ವಿವರಗಳನ್ನು ಪಡೆದುಕೊಳ್ಳಿ" ಎಂದು ನನಗೆ ಹೇಳಿದರು. ಜ್ಯೋತಿಷ್ಯದಲ್ಲಿ ನಂಬಿಕೆಯನ್ನು ತಾಳದಿರುವ ನಾನು ವಿಧಿಯಿಲ್ಲದೆ ಒಪ್ಪಿಕೊಂಡೆ. "ಒಂದು ನೂರು ರೂಪಾಯಿಯನ್ನು ಅವರಿಗೆ ಕೊಟ್ಟುಬಿಡಿ; ಚೆನ್ನಾಗಿ ಬರೆದುಕೊಡುತ್ತಾರೆ" ಎಂದರು ಬಸವಾರಾಧ್ಯರು. ಎಷ್ಟಾದರೂ ನಾನು ಹಳೇ ಮೈಸೂರಿನವನು ತಾನೇ? ಚೌಕಾಶಿ ಎಂಬುದು ನನ್ನ ರಕ್ತದಲ್ಲಿ ಇರುವಂಥದು. ಕೊನೆಗೆ ಹಾಗೂ ಹೀಗೂ 'ದಕ್ಷಿಣೆ' ನಲವತ್ತು ರೂಪಾಯಿಗಳಿಗೆ ಇಳಿಯಿತು. 'ಯತ್ಕಿಂಚಿತ್ ದಕ್ಷಿಣಾ' ಎಂದು ಹೇಳಿ ಬ್ರಹ್ಮಪ್ಪನವರಿಗೆ ಆ ಹಣ ಕೊಟ್ಟೆ. ಅವರು ನನ್ನಿಂದ ಕೆಲವೊಂದು ಮೂಲಭೂತ ಮಾಹಿತಿಗಳನ್ನು ಪಡೆದು, ಕೆಲವು ದಿವಸಗಳಾದ ಬಳಿಕ ನನ್ನ ಭೂತ, ವರ್ತಮಾನ, ಭವಿಷ್ಯಗಳ ವಿವರಗಳಿದ್ದ ಎಕ್ಸರ್‌ಸೈಜನ್ನು ನನಗೆ ತಲುಪಿಸಿದರು. ಒಟ್ಟಾರೆ ಬ್ರಹ್ಮಪ್ಪನವರಿಗೆ ನನ್ನಂಥ ಗಿರಾಕಿಯನ್ನು ಹುಡುಕಿಕೊಡುವುವರಲ್ಲೂ ಸಿದ್ಧಹಸ್ತರಾಗಿದ್ದರು ಬಸವಾರಾಧ್ಯರು. ನನ್ನಂಥ ಅದೆಷ್ಟು ಮಂದಿ ಗಿರಾಕಿಗಳನ್ನು ಬ್ರಹ್ಮಪ್ಪನವರಿಗೆ ಒದಗಿಸಿಕೊಟ್ಟಿದ್ದಾರೋ ಆ ಉರಿವವನೇ ಬಲ್ಲ!

ಬಸವಾರಾದ್ಯರು ಕಛೇರಿ ಪ್ರಾರಂಭವಾಗುವುದಕ್ಕೆ ಹತ್ತು ಹದಿನೈದು ನಿಮಿಷ ಮೊದಲೇ ತಮ್ಮ ಕೋಣೆಗೆ ಬಂದು ಕುಳಿತಿರುತ್ತಿದ್ದರು. ಏಕೆಂದರೆ, ಕೋಣೆಯಲ್ಲಿನ ದೈನಂದಿನ ಕೆಲಸಗಳು (ಕಿಟಕಿ ಬಾಗಿಲು ತೆರೆಯುವುದು, ಪಂಖ ಹಾಕುವುದು, ಗಂಧದಕಡ್ಡಿ ಹಚ್ಚುವುದು, ಲೇಖನ ಸಾಮಗ್ರಿಗಳ ಸಿದ್ಧತೆ, ಗ್ರಂಥ, ಓಲೆಗರಿ, ಹಸ್ತಪ್ರತಿಗಳನ್ನು ಸಂಪಾದಿಸಲು ಏರ್ಪಾಡು, ಪಠ್ಯತನ್ಮಯತೆ, ಅನುಷಂಗಿಕ ಗ್ರಂಥಾವಲೋಕನ, ಟಿಪ್ಪಣಿ ಕಾರ್ಯ) ಮುಂತಾದವೆಲ್ಲ ನಡೆಯಲೇಬೇಕಾದ ಪ್ರಕ್ರಿಯೆಗಳಾಗಿದ್ದವು. ಕೆಲಸದ ವೇಳೆಯಲ್ಲಿ ಯಾರಾದರೂ ಇವರನ್ನು ನೋಡಬೇಕೆಂದು ಬಂದವರನ್ನು ಆತ್ಮೀಯವಾಗಿ ಕರೆದು ಕುಳ್ಳಿರಿಸಿ, ಕಾಫಿಯನ್ನೋ, ಚಹಾವನ್ನೋ ತರಿಸಿಕೊಟ್ಟು ವಿಶ್ವಾಸವಾಗಿ ಮಾತನಾಡಿಸುವ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದರು. ನಾನು ಅವರನ್ನು ಭೇಟಿ ಆದಾಗಲೆಲ್ಲಾ "ಎನ್ನಾಂಗೋ ಸಾಪಾಟ್ ಆಚಾ" ಎಂದು ಅವರದೇ ಆದ ತಮಿಳಿನ ಧಾಟಿಯಲ್ಲಿ ಮಾತನಾಡಿಸಿ ಆತ್ಮೀಯವಾಗಿ ಬರಮಾಡಿಕೊಳ್ಳುತ್ತಿದ್ದರು. ವಿನಯವಂತಿಕೆ, ಆತ್ಮೀಯತೆ, ವಾಕ್ಚಾತುರ್ಯ, ಕಾರ್ಯನಿಷ್ಠೆ, ಪರಿಣಾಮ ಮೂಡಿಸುವ ಸಾಮರ್ಥ್ಯ, ಸಮಯಪ್ರಜ್ಞೆ ಮುಂತಾದವನ್ನೆಲ್ಲಾ ಮೈಗೂಡಿಸಿಕೊಂಡ ಸಂಪಾದನಾಚತುರರು ಬಸವಾರಾಧ್ಯರು.

ಕನ್ನಡ ಭಾಷೆ, ಸಾಹಿತ್ಯಗಳಿಗೆ ತಮ್ಮ ತನುಮನಗಳನ್ನು ಧಾರೆಯೆರೆದು ಮೆರೆದ ರೆವರೆಂಡ್ ಕಿಟ್ಟೆಲ್, ಕುವೆಂಪು, ಡಿ.ಎಲ್. ನರಸಿಂಹಾಚಾರ್ಯ, ಎ.ಆರ್. ಕೃಷ್ಣಶಾಸ್ತ್ರೀ, ತೀ.ನಂ. ಶ್ರೀಕಂಠಯ್ಯ, ಕ.ವೆಂ, ರಾಘವಾಚಾರ್ ಮೊದಲಾದವರ ವಿದ್ವತ್ ಪರಂಪರೆಯಲ್ಲಿ ಬಂದು ತಮ್ಮ ಕಾರ್ಯರಥವನ್ನು ಮುಂದೋಡಿಸಿಕೊಂಡು ಬಂದವರು ಬಸವಾರಾಧ್ಯರು. ಹಳಗನ್ನಡ

ಸಾಹಿತ್ಯ ಕೃತಿಗಳ ಸಂಪಾದನ ಕಾರ್ಯವಾಗಲಿ, ನಿಘಂಟುವಿನ ರಚನೆಯಾಗಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಯ ಗುರುತರ ಹೊಣೆಗಾರಿಕೆಯಾಗಲಿ ಯಾವುದೇ ಆಗಲಿ ಅದನ್ನು ಪಂಥಾಹ್ವಾನವೆಂದು ಪರಿಗಣಿಸಿ ನಿಸ್ಪೃಹತೆಯಿಂದ ನಿಭಾಯಿಸಿದವರು. ವಿದ್ವತ್ತು, ನಿಷ್ಠೆ, ಪ್ರಾಮಾಣಿಕತೆಗಳನ್ನು ಗುರುತಿಸಿಯೇ ರಾಜ್ಯದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ದೇವರಾಜ್ ಬಹದ್ದೂರ್ ಸಾಹಿತ್ಯ ಪ್ರಶಸ್ತಿ ಮುಂತಾದವೆಲ್ಲ ಶ್ರೀಯುತರನ್ನು ಬೆನ್ನುಹತ್ತಿಕೊಂಡು ಬಂದಿವೆ. ಅವರಿಗೆ ಸಂದಿರುವ "ಸಂಶೋಧಕ ಶಿವರತ್ನ" ಬಿರುದು ನೂರಕ್ಕೆ ನೂರು ಪಾಲು ಯುಕ್ತವೂ ಉಚಿತವೂ ಅಲ್ಲದೆ ಮತ್ತೇನು? ವೃತ್ತಿಗೂ ಪ್ರವೃತ್ತಿಗೂ ಇರುವ ಅಂತರವನ್ನು ಕಡಿಮೆ ಮಾಡಿಕೊಳ್ಳುವ ಸಂದರ್ಭದಲ್ಲಿ ಶ್ರೀಯುತರು ವಿಶ್ವವಿದ್ಯಾನಿಲಯದ ಅಧಿಕೃತ ಕೆಲಸದಿಂದ ನಿವೃತ್ತರಾದರೂ ಬಿ. ಶಿವಮೂರ್ತಿಶಾಸ್ತ್ರೀ ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನ, ಗೋಖಲೆ ಇನ್‌ಸ್ಟಿಟ್ಯೂಟ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಮುಂತಾದ ಸಂಸ್ಥೆಗಳಲ್ಲಿ ತಮ್ಮ ಕಾರ್ಯಪ್ರವೃತ್ತಿಯನ್ನೇ ಬೆಳಗಿ ಅಲ್ಲೆಲ್ಲ ನಿಷ್ಠೆ, ಪ್ರಾಮಾಣಿಕತೆಗಳ ಛಾಪನ್ನು ಮೂಡಿಸಿದ್ದಾರೆ. ನಿಘಂಟುಶಾಸ್ತ್ರ ಮತ್ತು ಸಂಶೋಧನಾಕ್ಷೇತ್ರಗಳನ್ನು ತಮ್ಮ ಎರಡು ಶ್ವಾಸಕೋಶಗಳೆಂದೇ ಬಗೆದಿರುವವರು ಬಸವಾರಾಧ್ಯರು. ಅವರ ಸಂಪಾದಿತ ಕೃತಿಗಳಾಗಲೀ, ಲೇಖನಗಳಾಗಲಿ ಅವರ ಕಾರ್ಯತತ್ಪರತೆಯ ಜೀವಂತಸಾಕ್ಷ್ಯಗಳಾಗಿ ನಿಂತಿವೆ. ಅವರ ಮನಸ್ಸಿನಲ್ಲಿ ಧನ್ಯತೆಯ ಭಾವವನ್ನು ಅಚ್ಚೊತ್ತಿಸಿವೆ.

ಒಮ್ಮೆ ನಾವೊಂದು ಐದಾರು ಮಂದಿ ಬಿಳಿಗಿರಿರಂಗನಬೆಟ್ಟದ ಪ್ರವಾಸಕ್ಕೆಂದು ಕಾರಿನಲ್ಲಿ ಹೋಗಿದ್ದಂಥ ಸಂದರ್ಭ, ಆ ತಂಡದಲ್ಲಿ ಬಸವಾರಾಧ್ಯರು, ನಾನು, ಪ್ರಹ್ಲಾದರಾಯರು, ಸದಾನಂದರು, ನಾಗೇಂದ್ರ, ಲಕ್ಷ್ಮೀನಾರಾಯಣ ಅರೋರಾ ಮತ್ತೆ ಇನ್ನೊಂದಿಬ್ಬರು ಇದ್ದೆವು. ಬಿಳಿಗಿರಿರಂಗನಾಥನ ದರ್ಶನ ಮಾಡಿಕೊಂಡು ಅಲ್ಲಿಯೇ ಹತ್ತಿರದಲ್ಲಿರುವ ದೊಡ್ಡ ಸಂಪಿಗೆ ಮರದ ಸ್ಥಳಕ್ಕೆ ಹೋಗುವ ಏರ್ಪಾಡಿತ್ತು. ನಮ್ಮ ವಾಹನ ಆ ಸ್ಥಳವನ್ನು ತಲುಪುವುದಕ್ಕೆ ಮುಂಚಿತವಾಗಿ, ಮಾರ್ಗಮಧ್ಯದಲ್ಲಿ ಕಾಣಿಸಿಕೊಂಡ ಕಾಡಾನೆಯ ನಿಮಿತ್ತ ಕೊಂಚ ಹೊತ್ತು ನಿಲ್ಲಬೇಕಾಗಿ ಬಂತು. ನನಗೂ ಸದಾನಂದರಿಗೂ ಕಾಡಾನೆಯನ್ನು ಫೋಟೋ ತೆಗೆಯುವ ಹುಚ್ಚು. ನಾವಿಬ್ಬರೂ ವಾಹನದಿಂದ ಇಳಿದೆವು. ನಾವಿಳಿಯುವುದನ್ನು ನೋಡಿ ಇತರರೂ ಬಸವಾರಾಧ್ಯರೂ ಕೆಳಗೆ ಇಳಿದರು. ಕಾಡಾನೆಯಾದರೂ ಸಾಕಷ್ಟು ದೂರದಲ್ಲಿತ್ತು. ಆಚೆಕಡೆ ಮುಖ ತಿರುಗಿಸಿತ್ತು. ಅದು ನಮ್ಮತ್ತ ತಿರುಗಿ ನೋಡಿದ್ದೇ ತಡಾ ನಮ್ಮೊಡನಿದ್ದ ಬಸವಾರಾಧ್ಯರು ದಿಢೀರನೆ ಓಡಿಹೋಗಿ ವಾಹನದೊಳಕ್ಕೆ ಕುಳಿತುಕೊಂಡುಬಿಟ್ಟರು. ಅಷ್ಟೇ ಅಲ್ಲದೆ, "ಬಂದ್ಬಿಡ್ರೀ, ಬಂದ್ಬಿಡ್ರೀ" ಎಂದು ಕೂಗನ್ನೂ ಹಾಕಿದರು. ಪ್ರಮಾದವಶಾತ್ ಯಾರಿಗೂ ಏನೂ ಆಗಲಿಲ್ಲ. ಸುರಕ್ಷಿತವಾಗಿ ನಾವು ಹಿಂದಿರುಗಿದೆವು. ಅವರನ್ನು ಉಳಿದು ನಮಗಾದರೋ ಕಾಡುಪ್ರಾಣಿಗಳನ್ನು ನೋಡುವ, ಕ್ಲಿಕ್ಕಿಸುವ ತವಕ; ಬಸವಾರಾಧ್ಯರಿಗಾದರೋ ಆದದ್ದು ಹೆದರಿಕೆಯಿಂದ ಬಡಬಡ ಬಡಿದುಕೊಂಡ ಅವರ ಹೃದಯ ಮಧುರಸ್ವನ ಗಾನ. ಮೃದುಹೃದಯದ ವ್ಯಕ್ತಿಗೆ ನಿಷ್ಠೆ ಪ್ರಾಮಾಣಿಕತೆಗಳಿಗಿಂತ ಇನ್ನೇನು ತಾನೇ ಇದ್ದೀತು. ಹೀಗೆ ನಡೆದಿತ್ತು ಒಂದು ಸಂದರ್ಭ.

ಆತ್ಮೀಯರೂ, ವಿನಯಸಂಪನ್ನರೂ, ಸ್ನೇಹಮಯಿಯೂ ಆದ ಬಸವಾರಾಧ್ಯರಿಗೆ ೭೫ ಸಂವತ್ಸರಗಳು ತುಂಬರುವ ಸಂದರ್ಭ ಮತ್ತು ತದಂಗವಾಗಿ ಹೊರತರಲು ಉದ್ದೇಶಿಸಿರುವ ಅಭಿನಂದನಗ್ರಂಥಕ್ಕೆ ಅವರನ್ನು ಕುರಿತ ಲೇಖನಗಳು ಶ್ರೀಯುತರ ದಿವ್ಯಪ್ರಭೆಯು ಎಂಥಹುದು ಎಂಬುದನ್ನು ಪ್ರಕಾಶಪಡಿಸುವ ಹೊಂಗಿರಣಗಳಾಗುವುದರಲ್ಲಿ ಕಿಂಚಿತ್ತೂ ಸಂದೇಹವಿಲ್ಲ. ಶ್ರೀಯುತ ಬಸವಾರಾಧ್ಯರು ಇನ್ನೂ ಹಲವಾರು ವಸಂತಗಳ ಗಾನಕೋಗಿಲೆಯ ಇಂಚರವನ್ನು ಆಲಿಸುವ ಸೌಭಾಗ್ಯವನ್ನು ಪಡೆಯಲಿ; ಅವರ ನಿಷ್ಠೆ, ಪ್ರಾಮಾಣಿಕತೆಗಳ ಮಾರ್ಗದರ್ಶನದ ತೇಜಃಪುಂಜದ ಪರಿಣಾಮ ಮುಂದಿನ ಸಂಶೋಧಕರ ಮೇಲೆ ಹೊಮ್ಮುವಂತಾಗಲಿ ಎಂದು ಆಶಿಸೋಣ. ಶ್ರೀಯುತರಿಗೆ ವಾಗ್ದೇವಿಯೂ, ವಿಘ್ನೇಶ್ವರನಾದ ವಿದ್ಯಾಗಣಪತಿಯೂ, ಸರ್ವೇಶ್ವರನಾದ ಪರಮಾತ್ಮನೂ ಆಯುರಾರೋಗ್ಯಗಳನ್ನು ಮತ್ತಷ್ಟು ಭಾಗ್ಯಶಾಲಿಯಾಗುವಂತೆ ಅನುಗ್ರಹಿಸಲಿ.

XXX

ಗ್ರಂಥಸಂಪಾದನಾ ಲೋಕದ ಮಿನುಗುವ ನಕ್ಷತ್ರ ಪ್ರೊ. ಎನ್.ಬಿ.

-ಡಾ. ಡಿ.ಎನ್. ಯೋಗೀಶ್

ಸಜ್ಜನರ ಸಹವಾಸವಿಲ್ಲದೆ ವಿವೇಕೋದಯವಾಗುವುದಿಲ್ಲ; ಹಾಗೊಂದು ವೇಳೆ ಅಂತಹ ಸಜ್ಜನರ ಸಹವಾಸ ದೊರಕಬೇಕಾದರೆ ಅದಕ್ಕೆ ಭಗವಂತನ ಕೃಪೆಯಾಗಬೇಕು. ನನ್ನ ಹಿರಿಯ ಸ್ನೇಹಿತರೂ, ಮಾರ್ಗದರ್ಶಿಗಳೂ ಆದ ಪ್ರೊ. ಎನ್. ಬಸವಾರಾಧ್ಯರ ಬಗ್ಗೆ ಈ ಮಾತು ಅಕ್ಷರಶಃ ಸತ್ಯ. ಅವರ ಸಂಪರ್ಕ ನನಗೆ ವೈಯಕ್ತಿಕವಾಗಿ ಖುಷಿ ನೀಡಿದೆ. ಅವರ ವಯಸ್ಸು ನಮ್ಮ ಸ್ನೇಹಕ್ಕೆ ಅಡ್ಡಿಯಾಗಿರಬೇಕಾಗಿತ್ತು. ಆದರೆ ಅವರಿಗೆ ಕೇವಲ ವಯಸ್ಸಿನ ಬಗ್ಗೆ ನಂಬಿಕೆ ಇಲ್ಲ, ಇಂದಿಗೂ ಜಾತಿ ಕೇಂದ್ರಿತ, ವ್ಯವಹಾರ ಕೇಂದ್ರಿತ, ಸ್ವಾರ್ಥ ಪ್ರೇರಿತ, ಇತ್ಯಾದಿ ಸ್ನೇಹಗಳೇ ಜನಪ್ರಿಯವಾಗಿರುವಾಗ ಆಪ್ತತೆ ಮತ್ತು ಅಭಿರುಚಿಕೇಂದ್ರಿತ ಸ್ನೇಹಕ್ಕೆ ಬೆಲೆಕೊಟ್ಟು ನನ್ನನ್ನು ನನ್ನಂಥಹ ಆನೇಕ ಯುವಕರನ್ನು ತಮ್ಮ ಸ್ನೇಹ ವಲಯಕ್ಕೆ ಬಿಟ್ಟುಕೊಂಡಿದ್ದಾರೆ. ಅಷ್ಟೇ ಅಲ್ಲ ಬರೆಯುವ ಅದರಂತೆ ಬದುಕುತ್ತಾ ನಿರಾಳವಾಗಿ ಸಾಗುವ ಚೈತನ್ಯ ತುಂಬಿದ್ದಾರೆ. ನನ್ನ ಮತ್ತು ಅವರ ಒಡನಾಟಕ್ಕೆ ಎಂಟು ವರ್ಷಗಳು ತುಂಬಿವೆ. ಆದರೆ ಅದಕ್ಕಿಂತ ಮೊದಲು ನಾನು ಬಸವಾರಾಧ್ಯರನ್ನು ಕೃತಿಗಳ ಮುಖಾಂತರ ಪರಿಚಯಿಸಿಕೊಂಡಿದ್ದೆನು. ೧೯೯೮ರ ಮೇನಲ್ಲಿ ಅವರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ವರ್ಧಿಸುವಾಗ ಪ್ರೊ. ಹೆಚ್.ಆರ್. ದಾಸೇಗೌಡರು ಮತ್ತು ಡಾ. ಬಿ. ನಂಜುಂಡಸ್ವಾಮಿಯವರು ಪರಿಚಯಿಸಿದ್ದರು. ಅಂದು ಅವರ ಜೊತೆ ತುಮಕೂರಿನ ಹೋಟೆಲೊಂದರಲ್ಲಿ ಕುಳಿತು ಊಟ ಮಾಡುವಾಗ ನನ್ನ ಸಂಶೋಧನೆಯ ಬಗೆಗೆ ವಿಚಾರಿಸುತ್ತಾ ಅನೇಕ ಉಪಯುಕ್ತ ಸಲಹೆಗಳನ್ನು ನೀಡಿ ನನಗೆ ಆಪ್ತರಾದರು. ಅಂದಿನಿಂದ ಇಂದಿನವರೆಗೂ ನನ್ನ ಬಗ್ಗೆ ಅದೇ ಆತ್ಮೀಯತೆಯನ್ನು ಇಟ್ಟುಕೊಂಡಿರುವ ಮಹಾವ್ಯಕ್ತಿತ್ವ ಅವರದು.

ನಾನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷನಾಗಿದ್ದಾಗ ಅವರನ್ನು ತುಮಕೂರಿಗೆ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರ ಸಮಾವೇಷಕ್ಕೆ ಆಹ್ವಾನಿಸಿದಾಗ, ಆಗಿನ ಅಧ್ಯಕ್ಷರಿಗೆ ಕಠಿಣ ಮಾತುಗಳಲ್ಲಿ ನೇರವಾಗಿ ಸಲಹೆಗಳನ್ನು ನೀಡಿ ಪತ್ರಕರ್ತರನ್ನೂ ಸೇರಿದಂತೆ ಎಲ್ಲರನ್ನು ಸಮಾರಂಭದಲ್ಲಿ ದಂಗು ಬಡಿಸಿದರು. ಇದು ಎಲ್ಲರಿಗೂ ಸಾಧ್ಯವಿಲ್ಲ. ಅಂತರಂಗ ಬಹಿರಂಗ ಶುದ್ಧವಿರುವವರಿಗೆ ಮಾತ್ರ ಸಾಧ್ಯ. ಅಂತಹ ವ್ಯಕ್ತಿತ್ವ ಇವರದು.

'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ಶರಣರ ನುಡಿಯಂತೆ ನಾನು ವಯಸ್ಸಿನಲ್ಲಿ ಅವರಿಗಿಂತ ಅತ್ಯಂತ ಚಿಕ್ಕವನಿದ್ದರೂ ಅವರು ನನ್ನನ್ನು ನಡೆಸಿಕೊಂಡ ರೀತಿ ವರ್ಣಿಸಲಸದಳ. ಯಾರನ್ನೇ ಆಗಲಿ ನಗುಮೊಗದಿಂದ ಆಹ್ವಾನಿಸಿ ವಿಚಾರ ವಿನಿಮಯ ಮಾಡಿಕೊಳ್ಳುವ ಹೃದಯಶ್ರೀಮಂತಿಕೆ ಅವರದು. ನನ್ನಂತಹ ಕಿರಿಯರೆಲ್ಲರಿಗೆ ಒಂದು ಮಹಾಸ್ಫೂರ್ತಿ, ಉತ್ಸಾಹದ ಗಣಿ. ಬಸವಾರಾಧ್ಯರು ತಮ್ಮನ್ನು ಯಾವುದೇ ಕೆಲಸದಲ್ಲಿ ತೊಡಗಿಸಿಕೊಂಡರೂ ಅದರಲ್ಲಿ ಅಚ್ಚುಕಟ್ಟು, ಶಿಸ್ತು, ಸಂಯಮ ಆದರ್ಶವಿರುತ್ತದೆ. ಅದನ್ನು ಮಾಡಿಯೇ ತೀರುವಂತಹ ಕಳಕಳಿಯ ಮೇರುವ್ಯಕ್ತಿತ್ವ. ನಾನು ಎಲ್ಲಿಯೇ ಸಿಗಲಿ ಅವರು ನನ್ನನ್ನು ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳ ಬಗೆಗೆ, ಐತಿಹಾಸಿಕ ಸಂಶೋಧನೆ ಬಗೆಗೆ ವಿಚಾರಿಸಿ ಬೆನ್ನ ತಟ್ಟಿ ಪ್ರೋತ್ಸಾಹದ ಮಾತುಗಳನ್ನಾಡುವರು. ಅವರ ಪ್ರೋತ್ಸಾಹದ ಮಾತುಗಳೇ ನನಗೆ ದಾರಿ ದೀಪವಾಗಿದೆ.

ಸಾಹಿತ್ಯ ಮತ್ತು ಸಂಘಟನೆಯನ್ನು ತಮ್ಮ ಕಾರ್ಯಕ್ಷೇತ್ರವಾಗಿಸಿ ಕೊಂಡಿರುವ ಪ್ರೊ. ಎಸ್. ಬಸವಾರಾಧ್ಯರು ಅದಕ್ಕೆ ತಮ್ಮ ಜೀವನವನ್ನೇ ಸವೆಸಿದ್ದಾರೆ. ಇವರು ಬದುಕನ್ನು ಸದಾಕಾಲ ಅನುಭವಿಸುವವರು. ಕೆಲವರು ಒಂದು ಕೆಲಸವಾದರೆ ಸುಸ್ತು ಎನ್ನುತ್ತಾರೆ ಮತ್ತೆ ಕೆಲವರು ಕೆಲಸ ಮಾಡುತ್ತಾ ಮಾಡುತ್ತಲೇ ಬೇಸರವೆನ್ನುತ್ತಾರೆ. ಕೆಲವರಂತೂ ಕೆಲಸದ ಬಗೆಗೆ ಕಿಂಚಿತ್ತೂ ಜವಾಬ್ದಾರಿಯಿಲ್ಲದೆ ಉಡಾಫೆಯಾಗಿ ಕಾಲಕಳೆಯುತ್ತಾರೆ ಮತ್ತೆ ಕೆಲವರು ಒಪ್ಪಿಕೊಂಡ ಕೆಲಸವನ್ನು ಮಾಡದೆ ದಿನ ನೂಕಿ ನಿರ್ದಿಷ್ಟ ಸಮಯ ಬಂದಾಗ ಕೈಎತ್ತಿ ಏನೂ ಆಗಿಲ್ಲವೆಂಬಂತೆ ಇದ್ದು ಬಿಡುವ ಹೊಣೆಗೇಡಿಗಳು. ಆದರೆ ಪ್ರೊ. ಎಸ್.ಬಿ. ತಮ್ಮ ಕಾಯಕಕ್ಕೆ ನಿಷ್ಠೆ ಹೊಂದಿದವರು, ಕಾಲಕ್ಕೆ ಸದಾ ಬದ್ಧರಾಗಿ ಬದುಕನ್ನು ಗೌರವಿಸುವವರು. ಸುಸ್ತು ಎಂಬ ಮಾತು ಅವರ ನಿಘಂಟುವಿನಲ್ಲಿಲ್ಲ. ಅವರು ಮೈಮನಸ್ಸುಗಳನ್ನು ರೋಗಗ್ರಸ್ತವಾಗದಂತೆ ಸದಾ ಚುರುಕಾಗಿಟ್ಟುಕೊಂಡು ತಮ್ಮ ಕಾಯಕದಲ್ಲೇ ತೊಡಗುತ್ತಾರೆ. ಆದುದರಿಂದಲೇ ಅವರಿಗೆ ನಿಘಂಟುವಿನಂತಹ ದೊಡ್ಡ ಯೋಜನೆ ಮತ್ತು ಹಲವಾರು ಪ್ರಾಚೀನ ಗ್ರಂಥಗಳ ಸಂಪಾದನೆ ಮಾಡಿ ಮುಗಿಸಲು ಸಾಧ್ಯವಾಗಿದೆ.

ಪ್ರೊ. ಎಸ್. ಬಸವಾರಾಧ್ಯರು ತಮ್ಮ ವ್ಯಕ್ತಿತ್ವವನ್ನು ಎಚ್ಚರಿಕೆಯಿಂದ ರೂಪಿಸಿಕೊಂಡವರು. ಇವರು "ಮೌನ ಮತ್ತು ಮಾತು" ಎರಡನ್ನೂ ಸಮಾನವಾಗಿ ಸಮರ್ಥವಾಗಿ ಬಳಸುತ್ತಾ ತಮ್ಮ ಸುತ್ತ ಇವೆರಡರಿಂದಲೂ ಒಡಗೂಡಿದ ಪರಿವೇಷ ಕಲ್ಪಿಸಿಕೊಂಡಿದ್ದಾರೆ. ಕೇವಲ ಮೌನವಹಿಸಿ ನಿಷ್ಕ್ರಿಯತೆಗೆ ದಾರಿ ಮಾಡಿಕೊಡುವುದು ಇವರ ಸ್ವಭಾವವಲ್ಲ. ಮೌನ ಮುರಿದು ಮಾತಿಗೆ ವಿಶೇಷ ಅರ್ಥ ನೀಡಬಲ್ಲರು.

ಅನೇಕ ಬಾರಿ ಗಂಭೀರವಾದ ವಿಷಯಗಳಿಗೆ ತಮಾಷೆಯ ಲೇಪನ ಮಾಡಿ ಲೇವಡಿ ಮಾಡಬಲ್ಲರು. ಒಂದು ಬಾರಿ ತುಮಕೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೊಬ್ಬರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಸವರಾಧ್ಯರು ನೀಡಿರುವ ಸಲಹೆಗಳನ್ನು ಗಂಟುಮೂಟೆ ಕಟ್ಟಿ ಮೂಲೆಯಲ್ಲಿಡುತ್ತೇನೆ ಎಂದು ಹೇಳಿ ಸುದ್ದಿ ಮಾಡಿದಾಗ ತುಮಕೂರಿಗೊಮ್ಮೆ ಬಸವಾರಾಧ್ಯರು ಬಂದಿದ್ದಾಗ ಪತ್ರಕರ್ತರೊಬ್ಬರು ಇಂತಹ ಗಂಭೀರ ವಿಷಯದ ಬಗೆಗೆ ಪ್ರಶ್ನೆ ಮಾಡಿದರು. ಆಗ ಅದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಹಾಸ್ಯದ ಲೇಪನದ ಮೂಲಕ ಅದನ್ನು ಲೇವಡಿ ಮಾಡಿದ್ದು ಇತಿಹಾಸದ ಸಂಗತಿಯಾಗಿದೆ. ಇಂತಹ ಅಗಾಧವಾದ ಸಹನೆ, ಸರಳತೆ ಹಾಗೂ ಸಜ್ಜನಿಕೆಯ ಮೂರ್ತಿವೆತ್ತ ಶ್ರೀಯುತರ ವ್ಯಕ್ತಿತ್ವ ಅನುಕರಣೀಯ. ಇವರ

ಕೊಟ್ಟು ಪಡೆಯುವ ಗೌರವ ಎಲ್ಲರಿಗೂ ಮಾದರಿ. ಸದಾ ಕ್ರಿಯಾಶೀಲರಾಗಿ ಅನೇಕ ಕಾರ್ಯಭಾರಗಳ ಒತ್ತಡಗಳನ್ನು ಹೇರಿಕೊಂಡು ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಬಲ್ಲ ಚಾಕಚಕ್ಯತೆ ಇವರಲ್ಲಿದೆ. ಕನಕಪುರದಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಗಿದ್ದ ಕಾರ್ಯದರ್ಶಿಯವರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದ ಗುಂಪು. ಬಸವಾರಾಧ್ಯರನ್ನು ಸುತ್ತುವರಿದು ಗಲಾಟೆ ಮಾಡಿದಾಗ ಅವರು ತಾಳ್ಮೆಯಿಂದ ಅವರ ಮಾತನ್ನು ಆಲಿಸಿ ಸಮಸ್ಯೆಯನ್ನು ತಮ್ಮ ಮಾತಿನ ಮುಖಾಂತರವೇ ತಿಳಿಗೊಳಿಸಿದಾಗ ನಿಜಕ್ಕೂ ಬಸವಾರಾಧ್ಯರ ಬಗ್ಗೆ ಕನ್ನಡಿಗರಿಗೆ ಎಂತಹ ಗೌರವವಿದೆ ಎನ್ನುವುದು ಕಂಡು ಬರುತ್ತದೆ. ಬೆಟ್ಟದಂತಹ ಸಮಸ್ಯೆ ಬಂದರೂ ಅದನ್ನು ಮಂಜಿನಂತೆ ಕರಗಿಸುವ ಸಾಮರ್ಥ್ಯ ಅವರಲ್ಲಿದೆ.

ನೀಳವಾದ ಶರೀರ, ಸಣ್ಣ ಅಥವಾ ದಪ್ಪ ಎಂದು ಹೇಳಲಾಗದ ಮೈಕಟ್ಟು, ಶುಭ್ರವಾದ ಸರಳ ಉಡುಪು, ಹಿತಮಿತವಾದ ಅವರದೇ ಶೈಲಿಯ ಮಾತಿನ ಪ್ರೊ. ಎನ್. ಬಸವಾರಾಧ್ಯ ಕನ್ನಡನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಒಬ್ಬ ಕಿಂದರಿಜೋಗಿ. ಕಾವ್ಯದ ಮೌಲ್ಯಮಾಪನವನ್ನು ಗ್ರಂಥಸಂಪಾದನೆಯಲ್ಲಿ ಅನುಸರಿಸುತ್ತಿರುವ ಪ್ರೊ. ಎನ್.ಬಿ. ಯವರು ತಾವು ಸಂಪಾದಿಸುತ್ತಿರುವ ಕಾವ್ಯ ಕಥಾಪರಂಪರೆಯನ್ನು ವಿಶದವಾಗಿ ತಿಳಿಸುವ ಪದ್ಧತಿಯನ್ನು ಅಳವಡಿಸಿಕೊಂಡು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಮಿನುಗುವ ತಾರೆಯಾಗಿದ್ದಾರೆ. ಆಕರ್ಷಕ ಭಾಷಣಕಾರರಲ್ಲ, ಆದರೆ ಆಕರ್ಷಕ ಬರಹಗಾರರಾಗಿದ್ದಾರೆ.

ನೆನಪಿನ ಆಳದಿಂದ -ಪ್ರೊ. ಎನ್. ಬಸವಾರಾಧ್ಯ

-ಪ್ರೊ. ಶ್ರೀಕೃಷ್ಣಭಟ್ ಅರ್ತಿಕಜೆ

ಪ್ರೊ. ಎನ್. ಬಸವಾರಾಧ್ಯರು ಕನ್ನಡದ ಹಿರಿಯ ಪರಂಪರೆಯ ವಿದ್ವಾಂಸರಲ್ಲಿ ಒಬ್ಬರು. ಕನ್ನಡದ ಮೇಧಾವಿಗಳಲ್ಲಿ ಪ್ರಮುಖರು. ನಿಘಂಟುಕಾರರಾಗಿ, ಗ್ರಂಥ ಸಂಪಾದಕರಾಗಿ, ಸಂಶೋಧಕರಾಗಿ, ಸಾಹಿತಿಯಾಗಿ, ಆಡಳಿತಗಾರರಾಗಿ ಅವರು ಸಲ್ಲಿಸಿದ ಸೇವೆ ಅನುಪಮವಾದುದು. ಅವರಲ್ಲಿ ಮನೆಮಾಡಿದ್ದ ನಿಯತ್ತು, ಪ್ರಾಮಾಣಿಕತೆ, ಸರಳತೆ, ಸಜ್ಜನಿಕೆ, ಸ್ನೇಹಪರತೆ, ಆತ್ಮೀಯತೆ, ಪ್ರೀತಿ, ವಿಶ್ವಾಸ, ವಿಶಾಲ ಮನೋಭಾವ, ಹಾಸ್ಯ ಪ್ರಿಯ ಮನೋವೃತ್ತಿ ಮುಂತಾದ ಮಾನವೀಯ ಗುಣಗಳು ವಿಶಿಷ್ಟವಾದುವು. ಹಿರಿಯರು ಕಿರಿಯರು ಎಂಬ ಭೇದವಿಲ್ಲದೆ ಎಲ್ಲರನ್ನೂ ಸಮಾನ ರೀತಿಯಿಂದ ಕಾಣುವ ಸಮತಾಭಾವದ ಅವರ ದೃಷ್ಟಿಕೋನ ಮಹತ್ವಪೂರ್ಣವಾದುದು. ಜಾತಿ ನೀತಿ ಭೇದಗಳಿಗೆ ಅವರಲ್ಲಿ ಅವಕಾಶವಿಲ್ಲ. ವಿದ್ವತ್ತಿಗೆ ಸದಾ ಬೆಲೆ ಕೊಡುವುದು ಅವರ ಜಾಯಮಾನ. ಸರಳ ನಡವಳಿಕೆಯ, ಮೃದುಮಾತಿನ, ನಗುಮುಖದ ಪ್ರೊ. ಬಸವಾರಾಧ್ಯರು ಎಲ್ಲರಿಗೂ ಬೇಕಾದವರು. ಅವರಿಗೆ ಯಾರಲ್ಲೂ ವಿರೋಧವಿಲ್ಲ. ಅವರು ಎಂದೂ ಯಾರಲ್ಲೂ ಸಿಟ್ಟಾದವರಲ್ಲ. ಒಂದು ರೀತಿಯಲ್ಲಿ ಅವರನ್ನು ಅಜಾತಶತ್ರುವೆಂದು ಕರೆದರೆ ತಪ್ಪಿಲ್ಲ, ನಿಘಂಟುಕ್ಷೇತ್ರ, ಗ್ರಂಥಸಂಪಾದನೆ, ಹಳಗನ್ನಡ ಸಾಹಿತ್ಯ ಹಾಗೂ ಹಸ್ತಪ್ರತಿ ಶಾಸ್ತ್ರದಲ್ಲಿ ಅವರಿಗಿರುವ ಜ್ಞಾನ-ಅನುಭವ ಅಪಾರ. ಅವರು ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡಿ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅನೇಕ ಕೃತಿಗಳನ್ನು ಕ್ರಮಬದ್ಧವಾಗಿ ಮತ್ತು ಸಮರ್ಪಕವಾಗಿ ಸಂಪಾದಿಸಿ ಉಪಯುಕ್ತ ಪೀಠಿಕೆ ಅಥವಾ ಮುನ್ನುಡಿಯೊಂದಿಗೆ ಪ್ರಕಟಿಸಿದ್ದಾರೆ. ಯಾವ ಕೆಲಸವನ್ನೇ ಆಗಲಿ ಅಚ್ಚುಕಟ್ಟಾಗಿ ಮಾಡುವುದು ಅವರ ಗುಣ. ತಮಗಿಂತ ಹಿರಿಯ ವಿದ್ವಾಂಸರ ಮೇಲೆ ಅವರಿಗೆ ವಿಶೇಷ ಗೌರವವಿತ್ತು. ಅಂತೆಯೇ ಕಿರಿಯರ ಮೇಲೆ ಅವರಿಗೆ ಅಪೂರ್ವವಾದ ಪ್ರೀತಿ ವಿಶ್ವಾಸವಿತ್ತು, ಅವರು ಯಾರನ್ನೂ ಕಡೆಗಣಿಸಿದವರಲ್ಲ. ಕಿರಿಯ ವಿದ್ವಾಂಸರ ಬೆನ್ನು ತಟ್ಟಿ ಸದಾ ಪ್ರೋತ್ಸಾಹ ನೀಡುತ್ತಾರೆ. ಇದು ಅವರ ವಿಶಾಲ

ಮನೋಭಾವಕ್ಕೆ, ವಿದ್ವತ್ತಿನ ವೈಶಾಲ್ಯಕ್ಕೆ ನಿದರ್ಶನ. 'ತುಂಬಿದ ಕೊಡ ತುಳುಕದು' ಎಂಬ ಗಾದೆಯಂತೆ ಉದ್ದಾಮ ಪಂಡಿತರಾದ ಬಸವಾರಾಧ್ಯರು ಎಂದೂ 'ಅಹಂ'ಗೆ ಒಳಗಾದವರಲ್ಲ. ಅಂತಹ ಅಪೂರ್ವವಾದ ವಿಶಿಷ್ಟ ಗುಣಗಳಿಂದ ಕೂಡಿದ ವಿದ್ವನ್ಮಣಿ ಅವರು.

ನನಗೆ ಪ್ರೊ. ಬಸವಾರಾಧ್ಯರ ಪರಿಚಯವಾದುದು ೧೯೭೬ರಲ್ಲಿ. ಆಗ ಅವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿದ್ದರು. 'ಕನ್ನಡದಲ್ಲಿ ಶತಕ ಸಾಹಿತ್ಯ' ವೆಂಬ ನನ್ನ ಪಿ.ಎಚ್.ಡಿ. ವಿಷಯದ ಬಗ್ಗೆ ಮಾಹಿತಿ ಸಂಗ್ರಹಕ್ಕಾಗಿ ನಾನು ೧೯೭೬ರ ಬೇಸಿಗೆ ರಜದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಹೋಗಿದ್ದೆ. ನಿರ್ದೇಶಕರಾದ ಡಾ. ಹಾ.ಮಾ. ನಾಯಕರನ್ನು ಭೇಟಿಮಾಡಿ ಚರ್ಚಿಸಿದ ಬಳಿಕ ಹಸ್ತ ಪ್ರತಿಗಳನ್ನು ನೋಡುವ ಸಲುವಾಗಿ ಉಪನಿರ್ದೇಶಕರಾದ ಪ್ರೊ. ಎಸ್. ಬಸವಾರಾಧ್ಯರ ಭೇಟಿ ಮಾಡಿದೆ. ಅವರು ಬಹಳ ಆತ್ಮೀಯತೆಯಿಂದ ಬರಮಾಡಿಕೊಂಡು ಆಗ ತಾನೇ ನನ್ನ ಪರಿಚಯ ಅವರಿಗಾಗಿದ್ದರೂ ತಮ್ಮಲ್ಲಿದ್ದ ಶತಕ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ನನಗೆ ಕೊಟ್ಟು ಉಪಯೋಗಿಸಿ ಹಿಂತಿರುಗಿಸಲು ಹೇಳಿದರು. ಅಧ್ಯಯನ ಸಂಸ್ಥೆಯಲ್ಲಿದ್ದ ಶತಕ ಕೃತಿಗಳ ಹಸ್ತ ಪ್ರತಿಗಳನ್ನು ಪ್ರತಿ ಮಾಡಿಕೊಳ್ಳಲು ಅನುಮತಿ ನೀಡಿದರು. ೧೯೭೬, ೭೭, ೭೮ ಹಾಗೂ ೭೯ ಈ ನಾಲ್ಕು ವರ್ಷ ನನಗೆ ಅವರು ನೀಡಿದ ಸಹಕಾರ, ಪ್ರೋತ್ಸಾಹದಿಂದ ನನ್ನ ಪಿ.ಎಚ್.ಡಿ. ಅಧ್ಯಯನಕ್ಕೆ ತುಂಬಾ ಅನುಕೂಲವಾಯಿತು.

ಆಗಾಗ ಭೇಟಿಯಾದಾಗಲೆಲ್ಲ 'ಭಟ್ಟರೆ ಎಲ್ಲಿಗೆ ಬಂತು ನಿಮ್ಮ ಸಂಶೋಧನೆ? ಯಾವಾಗ ಪ್ರಬಂಧವನ್ನು ಸಾದರಪಡಿಸುತ್ತೀರಿ?' ಎಂದು ವಿಚಾರಿಸುತ್ತಿದ್ದರು. ನನಗೆ ಎಲ್ಲಿಯೂ ದೊರೆಯದಿದ್ದ ಕನ್ನಡದ ಮೊದಲ ಶತಕ ಕೃತಿ ಚಂದ್ರ ಚಂಡಾಮಣಿ ಶತಕವನ್ನು ಅವರು ನನಗೆ ಒದಗಿಸಿಕೊಟ್ಟರು. ಅವರು ನನ್ನ ಮೇಲೆ ಇಟ್ಟ ಪ್ರೀತಿ ವಿಶ್ವಾಸ, ನೀಡಿದ ಪ್ರೋತ್ಸಾಹ ಮತ್ತು ಸಹಕಾರ ಮರೆಯಲಾರದ್ದು, ೧೯೮೮ರಲ್ಲಿ "ಕನ್ನಡದಲ್ಲಿ ಶತಕ ಸಾಹಿತ್ಯ" ಎಂಬ ಮಹಾಪ್ರಬಂಧಕ್ಕೆ ಮದರಾಸು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿ ಬಂದಾಗ ಬಸವಾರಾಧ್ಯರು ಹೆಚ್ಚು ಸಂತೋಷಪಟ್ಟರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿ ಅವರು ಕನ್ನಡ ಕೃತಿಗಳ ಸಂಪಾದನೆ ಹಾಗೂ ಸಂಶೋಧನ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅನುಪಮವಾದುದು. ಅವರು ಉಪನಿರ್ದೇಶಕರಾಗಿದ್ದಾಗ ಹಳಗನ್ನಡದ ಅನೇಕ ಉಪಯುಕ್ತ ಕೃತಿಗಳು ಸಂಪಾದಿತವಾಗಿ ಪ್ರಕಟವಾದುವು. 'ಹಳಗನ್ನಡ ನಿಘಂಟು' ಅವರ ಅಪೂರ್ವ ಕೃತಿ. ಅದು ಅವರ ಸಂಪಾದನೆ ಹಾಗೂ ಸಂಶೋಧನಾ ಸಾಮರ್ಥ್ಯಕ್ಕೆ ಒಳ್ಳೆಯ ನಿದರ್ಶನ. ಗಂಭೀರವಾದ ಶಾಸ್ತ್ರ ವಿಷಯಗಳಲ್ಲಿ ಬಸವಾರಾಧ್ಯರಿಗಿರುವ ಆಸಕ್ತಿ ವಿಶಿಷ್ಟವಾದುದು. ಗ್ರಂಥ ಸಂಪಾದಕರಿಗೆ, ನಿಘಂಟುಕಾರರಿಗೆ ಬಸವಾರಾಧ್ಯರು ಉತ್ತಮ ಮಾದರಿಯಾಗಿರುವರು.

ಬಸವಾರಾಧ್ಯರು ಒಬ್ಬ ಉತ್ತಮ ಆಡಳಿತಗಾರರೂ ಹೌದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ, ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪನಿರ್ದೇಶಕರಾಗಿ ಆಡಳಿತದಲ್ಲಿ ಅಪಾರ ಅನುಭವ ಪಡೆದಿದ್ದ ಅವರು ಎಲ್ಲರಿಗೂ ಬೇಕಾದವರಾಗಿ ಎಲ್ಲರೂ ಮೆಚ್ಚುವಂತೆ ಕೆಲಸ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಿದರು. ಬಸವಾರಾಧ್ಯರು ಕರ್ನಾಟಕ ಸರಕಾರದ ಕನ್ನಡ ಸರಳೀಕರಣ ಸಮಿತಿಯ ಸದಸ್ಯರೂ ಆಗಿದ್ದರು. ಕೆಲವು ವರ್ಷಗಳ ಹಿಂದೆ, ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮದರಾಸಿನ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಲಾಯಿತು. ಅವರು ಸಾಹಿತ್ಯ, ಸಂಶೋಧನೆ, ಗ್ರಂಥ ಸಂಪಾದನೆ ಹಾಗೂ ನಿಘಂಟು ಕ್ಷೇತ್ರಕ್ಕೆ ಸಲ್ಲಿಸಿದ ಅಪೂರ್ವ ಸೇವೆಗಾಗಿ ಅವರಿಗೆ ಈ ಸನ್ಮಾನ ಸಂದಿತ್ತು. ಆಗ ಅವರು ಕನ್ನಡ ವಿಭಾಗಕ್ಕೆ ಭೇಟಿನೀಡಿ ವಿಶೇಷ ಉಪನ್ಯಾಸ ನೀಡಿದ್ದರು. ಅಂತಹ ವಿಶಿಷ್ಟ ಸಂದರ್ಭಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಬಹುಮುಖ ವ್ಯಕ್ತಿತ್ವದ ಬಸವಾರಾಧ್ಯರು ಹಿರಿಯ ತಲೆಮಾರಿನ ವಿದ್ವಾಂಸರಲ್ಲಿ ಪ್ರಮುಖರು, ಅವರನ್ನು ಮೆಚ್ಚದವರಿಲ್ಲ, ಗೌರವಿಸದವರಿಲ್ಲ.

XXX

ಸೃಹದಯಿ ಶ್ರೀ ಎನ್. ಬಸವಾರಾಧ್ಯರು

-ಪ್ರೊ॥ ಎಸ್. ಉಮಾಪತಿ

ಸನ್ಮಿತ್ರನಾದವನ ಒಂದು ಉತ್ತಮ ಗುಣವೆಂದರೆ ಆತನು ಪರೋಪಕಾಗಿಯಾಗಿರುತ್ತಾನೆ. ಇಲ್ಲಿ ಲಾಭಾಲಾಭ ಮುಖ್ಯವಲ್ಲ. ಉತ್ತಮ ಮಾರ್ಗದರ್ಶನ ನೀಡಿ ಸ್ನೇಹಿತನು-ಇತರರ ಬಾಳನ್ನು ಸರಿದಾರಿಯಲ್ಲಿ ಅಭಿವೃದ್ಧಿ ದಿಶೆಯಲ್ಲಿ ಸಾಗುವಂತೆ ಪ್ರೇರೇಪಿಸುತ್ತಾನೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತನ್ನ ಕೈಲಾದ ಸಹಾಯವನ್ನು ನೀಡಿ ಪ್ರೋತ್ಸಾಹಿಸುತ್ತಾನೆ. ಇಂತಹ ಸಹೃದಯಿ ಶ್ರೀ ಎನ್. ಬಸವಾರಾಧ್ಯರು ಎನ್ನಬಹುದು. ಇದು ಅವರಲ್ಲಿ ನಾನು ಕಂಡ ವಿಶೇಷ ಗುಣ. ಅವರನ್ನು ನಾನು ಮೊದಲು ಕಂಡು ಪರಿಚಯಿಸಿ ಕೊಂಡಾಗ ಹೇಗಿದ್ದರೋ ಈಗಲೂ ೫೦ ವರ್ಷಗಳ ಕಾಲ ಈ ನಡುವೆ ಸರಿದು ಹೋಗಿದ್ದರೂ ಹಾಗೆಯೇ ಇದ್ದಾರೆ. ನಮ್ಮಿಬ್ಬರಲ್ಲಿ ವಯಸ್ಸು ಮಾತ್ರ ಸವೆಕಲು ಕಂಡು ವೃದ್ಧಾಪ್ಯದ ಹೊಸ್ತಿಲಲ್ಲಿ ನಿಂತಿದ್ದರೂ ನಮ್ಮ ಮಿತ್ರತ್ವಕ್ಕೆ ಮಾತ್ರ ಯಾವ ಮುಪ್ಪು ಆವರಿಸಿಲ್ಲ. ಅದು ಗೆದ್ದು ನಮ್ಮಿಬ್ಬರ ಮಧ್ಯೆ ನಿಂತಿದೆ ಎನ್ನಬಹುದು. ಲೋಕ ರೂಢಿ ಸುಖ ದು:ಖ ಯಾವುದೇ ಇರಲಿ ಯಾವ ಭೇದವೂ ಇಲ್ಲದೆ ಒಂದೇ ರೀತಿ ಶ್ರೀ ಎನ್. ಬಸವಾರಾಧ್ಯರು ನನ್ನೊಡನೆ ವ್ಯವಹರಿಸುತ್ತಾ ಬಂದಿದ್ದಾರೆ. ಇದೊಂದು ಅವರ ದೊಡ್ಡ ಗುಣ.

ನನ್ನ ಅವರ ಪರಿಚಯ ಸಾಹಿತ್ಯಾಭ್ಯಾಸದಿಂದ ಪ್ರಾರಂಭವಾಗಿ ಸಂಶೋಧನೆಯಲ್ಲಿ ಮುಂದುವರಿಯುತ್ತಾ ಬಂದಿದೆ. ನಾನು ೧೯೪೯ರಲ್ಲಿ ಮೈಸೂರು ಮಹಾರಾಜಾ ಕಾಲೇಜಿಗೆ ಕನ್ನಡ ಮೊದಲ ಆನರ್ಸ್ ತರಗತಿಗೆ ಸೇರಿ ಕೊಂಡಾಗ ಮೊದಲ ಗಂಟೆಯಲ್ಲಿಯೇ ನನ್ನ ಅಂದಿನ ಉಪಾಧ್ಯಾಯರು ಪಕ್ಕದ ಪ್ರಾಚ್ಯ ವಸ್ತು ಸಂಶೋಧನಾ ಕೇಂದ್ರದಲ್ಲಿ ಕನ್ನಡದ ಉತ್ತಮ ಗ್ರಂಥಾಲಯವಿದೆ. ಅದರ ಉಪಯೋಗವನ್ನು ನೀವು ಪಡೆಯಿರಿ ಎಂದು ಹೇಳಿದರು. ಅಂದಿನ ಕಾಲದಲ್ಲಿ ಈಗಿನಂತೆ ಸಾಹಿತ್ಯ ಗ್ರಂಥಗಳು ಹಣ ಕೊಟ್ಟರೂ ದೊರಕುತ್ತಿರಲಿಲ್ಲ. ಗ್ರಂಥಾಲಯಗಳಲ್ಲಿ ಒಂದೊಂದು ಪ್ರತಿಗಳು

ಲಭ್ಯವಿರುತ್ತಿದ್ದವು. ಅವಗಳನ್ನೆ ಕನ್ನಡ ವಿದ್ಯಾರ್ಥಿಗಳು ಸರದಿಯ ಮೇಲೆ ಪಡೆದು ಉಪಯೋಗಿಸಿಕೊಳ್ಳುತ್ತಿದ್ದ ಕಾಲ ಅದು. ಆಗ ನಾನು ಮೊದಲ ಬಾರಿಗೆ ಆ ಪ್ರಾಚ್ಯ ಸಂಶೋಧನಾ ಕೇಂದ್ರಕ್ಕೆ ಹೋಗಿ ಒಳಗೆಲ್ಲ ದೃಷ್ಟಿ ಹಾಯಿಸಿದಾಗ, ಆ ಕೇಂದ್ರದ ಮುಖ್ಯಸ್ಥರ ಕೊಠಡಿಗೆ ದೂರದಲ್ಲಿಯೇ ಶ್ರೀಯುತರು ಯಾವುದೇ ಒಂದು ತಾಡಯೋಲೆ ಪ್ರತಿಯನ್ನು ಪರಿಶೀಲಿಸಿ ಪ್ರತಿ ಮಾಡುತ್ತಿದ್ದುದನ್ನು ಗಮನಿಸಿದೆನು. ಕೆಲವು ದಿನಗಳು ಕಳೆದ ನಂತರ ನಮ್ಮ ಉಪಾಧ್ಯಾಯರೊಬ್ಬರು ಕನ್ನಡ ವಿದ್ಯಾರ್ಥಿಗಳು ತಾಡಯೋಲೆ ಪ್ರತಿಗಳನ್ನು ನೋಡುವ ಅಭ್ಯಾಸವನ್ನು ಪಡೆಯುವುದು ಒಳ್ಳೆಯದೆಂದು ಹೇಳಿದಾಗ ಮತ್ತೊಮ್ಮೆ ಆ ಕೇಂದ್ರಕ್ಕೆ ಹೋದಾಗ ಶ್ರೀ ಎಸ್. ಬಸವಾರಾಧ್ಯರಿಗೆ ನಮಸ್ಕಾರ ಮಾಡಿ ನನ್ನ ಪರಿಚಯವನ್ನು ಮಾಡಿಕೊಂಡು ಅವರ ಮೇಜಿನ ಪಕ್ಕದ ಕುರ್ಚಿಯಲ್ಲಿ ಕುಳಿತುಕೊಂಡು ಅವರು ಸಿದ್ಧ ಪಡಿಸುತ್ತಿದ್ದ ಹಸ್ತ ಪ್ರತಿಯನ್ನು ಗಮನಿಸಿದೆನು. ಅವರ ದೃಷ್ಟಿಯಾಗುವಂತಹ ಮುದ್ದಾದ ಮೋಹಕವಾದ ಬರವಣಿಗೆ ನನ್ನನ್ನು ಆಕರ್ಷಿಸಿತು. ಶ್ರೇಷ್ಠ ಮನಸ್ಸು ಶ್ರೇಷ್ಠ ಬರವಣಿಯನ್ನು ಹೊಂದಿರುತ್ತದೆ ಎಂಬ ಮಹಾತ್ಮ ಗಾಂಧೀಯವರ ಮಾತು ನೆನಪಿಗೆ ಸಮದಲ್ಲಿಯೇ ಸಂತಸ ಅನುಭವಿಸಿದೆನು. ಮುಖ ಮುದ್ರೆ ಮನದಾಳದ ಪ್ರತಿಬಿಂಬ ಎಂಬಂತೆ ಅವರ ಅವರ ಮುಖ ಮುದ್ರೆ ಅವರ ವ್ಯಕ್ತಿತ್ವವನ್ನು ಬಿಂಬಿಸುತ್ತಿತ್ತು. ಅದು ಅವರ ಮುತ್ತು ಪೋಣಿಸಿದಂತಹ ಬರವಣಿಯಲ್ಲಿಯೂ ಎದ್ದುಕಾಣುತ್ತಿತ್ತು. ಶಾಸ್ತ್ರ ಪ್ರತಿಕಾರನಿಗೆ ಇರಬೇಕಾದ ಪ್ರಥಮ ಲಕ್ಷಣ ಅವರಲ್ಲಿ ಯಥೇಚ್ಛವಾಗಿ ಅವರ ವೃತ್ತಿ ಆರಂಭದ ದಿನಗಳಲ್ಲಿಯೇ ಇತ್ತು. ಇದೊಂದು ಅವರ ವಿಶೇಷ, ಅದೇ ತಾನೆ ಅವರು ಸಂಶೋಧನಾ ಕೇಂದ್ರಕ್ಕೆ ಸಹಾಯಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದ ಕಾಲ.

ಇವರದು ಶಿಸ್ತಿನ ಕಾಯಕ ಸಂಸ್ಕೃತಿ. ಶಿಸ್ತಿನ ದಿನಚರಿ ಪರಿಶ್ರಮದ ಬದುಕು ಎಂದೂ ಅವರ ಕುರ್ಚಿ ಕೆಲಸದವೇಳೆ ಖಾಲಿ ಇದ್ದುದು ಕಂಡು ಬರಲಿಲ್ಲ. ಅಧ್ಯಯನ ಸ್ವಭಾವ ಅವರ ನೈಜ ಗುಣ, ಧರ್ಮ ಸಂಸ್ಕೃತಿ ಸಾಹಿತ್ಯದ ಬಗೆಗೆ ವಿಶೇಷ ಒಲವು. ಅನೇಕ ಗ್ರಂಥಗಳನ್ನು ಪರಿಶೀಲಿಸಿ ಸಂಪಾದಿಸಿ ತೀವ್ರ ಸೇವೆ ಸಲ್ಲಿಸುತ್ತಿದ್ದ ಸಂಸ್ಥೆ ಕೇಂದ್ರಗಳಿಗೆ ಕೊಟ್ಟಿದ್ದಾರೆ. ಇದು ಅವರ ಶ್ರದ್ಧಾವಂತ ಬದುಕಿಗೆ ಇಂದಿಗೂ ಸಾಕ್ಷಿ ನುಡಿಯುತ್ತಿವೆ. ತಾವು ಎಂದೂ ಇಲ್ಲದುದಕ್ಕೆ ಹಾತೊರೆದವರಲ್ಲ, ಇದ್ದು ದರಲ್ಲಿಯೇ, ಒಂದು ದರದಲ್ಲಿಯೇ ಸಂತೋಷ ಸಂತೃಪ್ತಿ ಶಾಂತಿ ಸಮಾಧಾನ ಸಂಯಮ ಜೀವನ ಬಾಳಿದವರು ಉನ್ನತ ಚಿಂತನೆ ಶುದ್ಧ ಮನಸ್ಸಿನಿಂದ ಕೂಡಿದ ಸರಳ ಜೀವನ, ಮಿತ ಭಾಷೆ ಯಾವ ಮುಚ್ಚು ಮರೆಯೂ ಇಲ್ಲದ ನೇರ ನಡೆನೇರ ನುಡಿಯುಳ್ಳವರು.

ಗ್ರಂಥ ಸಂಪಾದನೆಗೆ ಬೇಕಾದ ನಿಧಾನ ಗತಿ, ಸಾವಧಾನಮತಿ, ಇವರಲ್ಲಿ ತುಂಬಿ ತುಳುಕುತ್ತಿದೆ. ಆದುದರಿಂದಲೇ "ವೀರಶೈವಾಮೃತ ಮಹಾ ಪುರಾಣ"ದಂತಹ ಮಹತ್ವ ಬೃಹತ್ತಿನಿಂದ ಕೂಡಿದ ಮಹಾ ಗ್ರಂಥವನ್ನು ಖಾಸಗಿಯಾಗಿ, ಏಕಾಂಗಿಯಾಗಿ ಸಂಪಾದಿಸಲು ಇವರಿಗೆ ಸಾಧ್ಯವಾಗಿದೆ. ಈ ಕಾರ್ಯವನ್ನು ಯಾರಾದರೂ ಮೆಚ್ಚ ತಕ್ಕಂತಹದು. ಆದರೆ ದೂರದೃಷ್ಟಿವಶಾತ್ ಈ ಗ್ರಂಥ ಇದುವರೆಗೆ ಬೆಳಕು ಕಾಣದೆ ಅವರ ಮನೆಯ ಕತ್ತಲು ಕೋಣೆಯಲ್ಲಿ ಬೆಳಕಿಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದೆ, ಮತ್ತು ಕಳೆದ ಕೆಲವು ವರ್ಷಗಳಿಂದ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಎಂ.ಎ. ಪದವಿ ತರಗತಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರುತ್ತಿರುವುದನ್ನು ಗಮನಿಸಿದ ಶ್ರೀಯುತರು, ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ಸಂಪಾದಿಸಿ ಬ್ಯಾಂಕ್ ಸಾಲ ಪಡೆದು ಪ್ರಕಟಿಸಿ ಪುಸ್ತಕವಾಗಿಯೂ ಸಾಕಷ್ಟು ಪ್ರತಿಗಳು ಮಾರಾಟವಾಗದೆ ಹಾಗೆಯೇ ಉಳಿದಾಗ ಸಹಜವಾಗಿ ಯಾರಿಗಾದರೂ ಗಾಬರಿ ಅಸಮಾಧಾನ ಉಂಟಾಗುವುದು ಸಹಜ. ಉರಿಬರಲಿ ಸಿರಿಬರಲಿ ಬೇಕು ಬೇಡೆನ್ನೆನು ಎಂಬ ಸಂಸ್ಕೃತಿಗೆ ಅಂಟಿಕೊಂಡಿರುವ ಇವರು ಈ ವಿಷಯಕ್ಕೆ ತಲೆ ಕೆಡಿಸಿಕೊಂಡು ಧೈರ್ಯಗೆಡದೆ ಪರಿಸ್ಥಿತಿಯನ್ನು ಸಂಯಮ ಸಮತಾ ಗುಣದಿಂದ ಸಮದಾತುವಾಗಿಯೇ ಇದ್ದು ನಿಬಾಯಿಸಿದ ಗುಣ ಇವರದು. ಇಂಥಹವರು ಅಪೂರ್ವವೆಂದೇ ನನ್ನ ಅನಿಸಿಕೆ.

ಮುಂದೆ ಎಚ್. ದೇವೀರಪ್ಪನವರನ್ನು ಕುರಿತು ಇವರು ರಚಿಸಿರುವ ಪುಟ್ಟ ಪುಸ್ತಕಯೊಂದು ಇವರ ಸೃಜನಾತ್ಮಕ ಲೇಖನಕ್ಕೆ ವಿರಳ ಉದಾಹರಣೆಯಾಗಿ ನಿಂತಿದೆ. ಲಿಂಗೈಕ್ಯ ಶ್ರೀಶೈಲ ಜಗದ್ಗುರುಗಳು ತಮ್ಮಲಿದ್ದ ಒಂದು ಹಸ್ತಪ್ರತಿಯನ್ನು ಪರಿಷ್ಕರಿಸಿ ಸಂಪಾದಿಸಿ ಕೊಡಲು ಶ್ರೀಯುತರಲ್ಲಿ ಪ್ರಸ್ತಾಪಿಸಿದಾಗ ಅವರು ದಾವಣಗೆರೆಯಲ್ಲಿಯೆ ಇರುವ ನನ್ನ ಕಡೆ ಬೆರಳು ಮಾಡಿ ತೋರಿಸಿ ನಿಮ್ಮ ಕೆಲಸಕ್ಕೆ ಅವರು ಯೋಗ್ಯರೆಂದು ತಿಳಿಸಿದುದು ಅವರ ಸಹೃದಯತೆಯನ್ನು ತೋರುತ್ತದೆ.

ಕೆಲವು ಕಾಲ ವಿದ್ವಾಂಸರಿಂದ ದೂರವಾಗಿ ಅಧ್ಯಾಪಕನಾದ ಮೇಲೆ ಮತ್ತೆ ಅವರ ಸಂಪರ್ಕವನ್ನು ಪಡೆದು ಕೆಲವು ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ ಮೇಲೆ ಉತ್ತರ ದೇಶದ ಬಸವಲಿಂಗನ ಕೃತಿಗಳನ್ನು ಸಂಪಾದಿಸಿ ಪ್ರಕಟಣೆಗೆಂದು ಅನೇಕ ಮಠ ಮಾನ್ಯಗಳನ್ನು ಸಂಪರ್ಕಿಸಿದಾಗ ನನಗೆ ದೊರೆತದ್ದು ನಿರಾತ್ಸಾಹದ ಉತ್ತರಗಳೆ. ಆಗ ನಾನು ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಮೈಸೂರಿಗೆ ಹೋಗಿದ್ದಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಹೋದಾಗ ಅಲ್ಲಿ ಉಪನಿರ್ದೇಶಕರಾಗಿ ಶ್ರೀ ಎನ್. ಬಸವಾರಾಧ್ಯರನ್ನು ನೋಡಿ ಉತ್ಸಾಹ ಆನಂದ ಉಕ್ಕೇರಿ ಬಂದು ಅವರೊಡನೆ ನನ್ನ ಕೃತಿಯಾದ (ಸಂಪಾದಿತ) ಬಸವ ಪುರಾಣದ ಕಥಾಸಾಗರದ ಪ್ರಕಟಣೆಯ ಬಗೆಗೆ ಪ್ರಸ್ತಾಪಿಸಿದೆನು. ಅದಕ್ಕೆ ಅವರು ತಕ್ಷಣವೇ ಒಪ್ಪಿ ಹಸ್ತ ಪ್ರತಿಯನ್ನು ತಂದು ಕೊಡಲು ತಿಳಿಸಿದಾಗ ನನಗೆ ಸ್ವರ್ಗ ಮೂರೇಗೇಣಾಗಿತ್ತು. ನಂತರ ಅವರ ಸೂಚನೆಯಂತೆ ಸಂಸ್ಥೆಯ ಇನ್ನೊಂದು ಪ್ರತಿಯನ್ನು ಪಡೆದು ರೇಫವ ಬಳಕೆಯನ್ನು ಪರಿಶೀಲಿಸಿ ಪರಿಷ್ಕರಿಸಿ ಕೊಟ್ಟಾಗ ಆ ಕೃತಿ ಬೆಳಕು ಕಾಣಲು ಮುಂದೆ ಹೆಚ್ಚು ಕಾಲ ಉಳಿಯಲಿಲ್ಲ. ಹೇಗೆ ಆಪದ್ಬಾಂಧವರಾಗಿ ಬಂದು ತಮ್ಮ ಸಹಕಾರವನ್ನು ನನಗೆ ನೀಡಿ ನನ್ನ ಸಾಹಿತ್ಯದ ಚಟುವಟಿಕೆಗಳಿಗೆ ಪ್ರೋತ್ಸಾಹವಿತ್ತಿದ್ದಾರೆ. ಅಲ್ಲದೆ ಅಭವಕಂದದಹಸ್ತ ಪ್ರತಿಯನ್ನು ಅವರಿಗೆ ಪರಿಶೀಲನೆಗೆ ಕಳಿಸಿ ಕೊಟ್ಟಾಗ ಅತಿ ಕ್ಷಿಪ್ರಗತಿಯಲ್ಲಿ ಅದನ್ನು ಪರಿಶೀಲಿಸಿ ನನಗೆ ಹಿಂದಕ್ಕೆ ಕಳಿಸಿ ಕೊಟ್ಟರು. ಇದು ಅವರ ಸಮಯ ಪಾಲನೆಯ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತದೆ.

ಮುಂದೆ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ನಿಘಂಟುವಿನ ಸಂಪಾದನಾ ಸಮಿತಿಯಲ್ಲಿ ಕೆಲಸ ಮಾಡುತ್ತಿರುವಾಗ, ನಾನು ಬೆಂಗಳೂರಿಗೆ ಹೋದಾಗಲೆಲ್ಲ ಶ್ರೀಯುತರನ್ನು ಕಂಡು ಬರುತ್ತಿದ್ದೆನು. ಅದಕ್ಕೆ ಮುನ್ನ ನಾನು ಪರಿಷತ್ತಿಗೆ ದುರ್ಗಸಿಂಹನ ಪಂಚತಂತ್ರ ಮುದ್ರಿತ ಪ್ರತಿಯನ್ನು ಸಂಪಾದಕ ಮಂಡಳಿಯ ಕೋರಿಕೆಯ ಮೇರೆಗೆ ಕಳಿಸಿ ಕೊಟ್ಟಿದ್ದೆನು. ನಂತರ ಕಾರ್ಯ ಮುಗಿದ ಮೇಲೆ ಒಮ್ಮೆ ಪರಿಷತ್ತಿಗೆ ಹೋದಾಗ ಶ್ರೀ ಎನ್. ಬಸವಾರಾಧ್ಯರನ್ನು ಈ ವಿಷಯವಾಗಿ ಸಂಪರ್ಕಿಸಿದಾಗ ಆ ಕೂಡಲೆ ಆ ನನ್ನ ಪುಸ್ತಕವನ್ನು ಹುಡುಕಿಸಿ ನನ್ನ ಕೈಗೆ ಕೊಟ್ಟರು. ಹೀಗೆ ವಿಷಯ ಯಾವುದೇ ಇರಲಿ, ತಾರತಮ್ಯವಿಲ್ಲದೆ ಗಮನ ಹರಿಸುವ ಒಳ್ಳೆಯ ಗುಣ ಇವರಲ್ಲಿದೆ.

ಇವರಿಗೆ ದಿನಾಂಕ ೮-೧-೨೦೦೫ರಂದು "ಶಿವಕಮಲ" ಪ್ರಶಸ್ತಿ ದೊರೆತುದು ಅವರ ವಿದ್ವತಿಗೆ, ಶ್ರದ್ಧೆಗೆ ಸಂದ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿ ಎಲ್ಲರಿಗೂ ಸಂತಸ ತಂದಿದೆ. ಹೀಗೆ ಶ್ರೀ ಎನ್. ಬಸವಾರಾಧ್ಯರು ಸರ್ವತೋಮುಖವಾದ ಸಕಲ ಸದ್ಗುಣ ಸಂಪನ್ನ ಸೌಜನ್ಯ ಪೂರಿತ ವಿದ್ವಾಂಸರೆಂದು ನನ್ನ ಅನಿಸಿಕೆ.

ಸ್ನೇಹಜೀವಿ ಎನ್. ಬಸವಾರಾಧ್ಯರು

-ಡಾ. ಸಿ.ಯು. ಮಂಜುನಾಥ

ಮನುಷ್ಯ ಸಂಬಂಧಗಳನ್ನು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಹೆಸರಿಸುವುದು, ವಿವರಿಸುವುದು ಬಹು ಕಷ್ಟದ ಕೆಲಸ. ಎನ್. ಬಸವಾರಾಧ್ಯರಂಥ ಹಿರಿಯ ವ್ಯಕ್ತಿಗಳ ಜೊತೆಗಿನ ಸಂಬಂಧವನ್ನು ಅರ್ಥೈಸಿಕೊಳ್ಳುವುದು ಇನ್ನೂ ಕಷ್ಟದ ಕೆಲಸ. ಹಿರಿಯ, ಸಮಾನ, ಕಿರಿಯರೆನ್ನದೆ ಎಲ್ಲರೊಂದಿಗೆ ಸ್ನೇಹ ಆತ್ಮೀಯತೆಗಳಿಂದ ನಡೆದುಕೊಳ್ಳುವ ಶ್ರೀಯುತರು ನಾನು ಬಲ್ಲ, ಗೌರವಿಸುವ ಸ್ನೇಹಜೀವಿ. ನಿಘಂಟು ಕ್ಷೇತ್ರದಲ್ಲಿ ದೀರ್ಘಕಾಲ ದುಡಿದವರಾಗಿ, ಹಲವಾರು ಹಳಗನ್ನಡ ಗ್ರಂಥಗಳ ಸಂಪಾದಕರಾಗಿ ಶ್ರೀಯುತರ ಪರೋಕ್ಷ ಪರಿಚಯ ಮಾತ್ರವಿದ್ದಿತು. ಸಭೆ ಸಮಾರಂಭಗಳಲ್ಲಿ ದೂರದಿಂದ ನೋಡಿ ಅವರ ಮಾತುಗಳನ್ನು ಮಾತ್ರ ಕೇಳಿದ್ದೆ. ಸುಮಾರು ೨೫ ವರ್ಷಗಳ ಹಿಂದೆ ಒಂದು ಬಾರಿ ನಮ್ಮ ಗುರುಗಳಾದ ಡಾ.ಎಂ. ಚಿದಾನಂದಮೂರ್ತಿಯವರ ಮನೆಯಲ್ಲಿ ಪ್ರತ್ಯಕ್ಷ ಪರಿಚಯ ಆಯಿತು. ನನ್ನ ಸಂಶೋಧನೆ, ಆಸಕ್ತಿಗಳು ಮುಂತಾದವುಗಳನ್ನು ವಿಶ್ವಾಸದಿಂದ ವಿಚಾರಿಸಿ ಕೊಂಡರು. ಅನಂತರ ಯಾವುದೇ ಸಭೆ ಸಮಾರಂಭಗಳಲ್ಲಿ ಸಿಗಲಿ, ಮೊದಲು ಕೂಗಿ ಕರೆದು ಮಾತನಾಡಿಸುತ್ತಾರೆ. ಅಷ್ಟು ದೊಡ್ಡ ಗುರುಪರಂಪರೆಯಲ್ಲಿ ಬೆಳೆದ ಬಸವಾರಾಧ್ಯರ ಜೊತೆ ವ್ಯವಹರಿಸುವಾಗ ಮೊದ ಮೊದಲು ಸಂಕೋಚ ಉಂಟಾಗುತ್ತಿತ್ತು. ಕ್ರಮೇಣ ತಮ್ಮ ಸ್ನೇಹಮಯ, ವಿಶ್ವಾಸಪೂರ್ಣ ಗುಣದಿಂದ ನನ್ನ ಸಂಕೋಚವನ್ನು ತೊಡೆದು ಹಾಕಿದರು. ತಮ್ಮ ವಿಶ್ವಾಸವಲಯದಲ್ಲಿ ನನಗೂ ಒಂದು ಸ್ಥಾನವನ್ನು ನೀಡಿದರು.

ನಿಘಂಟು ರಚನೆ, ಗ್ರಂಥಸಂಪಾದನೆ ಅವರ ಪ್ರಿಯ ಕ್ಷೇತಗಳು. ಹಲವರ ದೃಷ್ಟಿಯಲ್ಲಿ ಅವರು ಶುಷ್ಕವೆನ್ನಬಹುದಾದ ಕ್ಷೇತ್ರದಲ್ಲಿ ಸದಾ ಕಾರ್ಯಪ್ರವೃತ್ತರಾಗಿದ್ದರೂ ತಮ್ಮ ಸಹಜ ಚೇತೋಹಾರಿ ವ್ಯಕ್ತಿತ್ವದಿಂದ, ಹಾಸ್ಯಮನೋಭಾವದಿಂದ, ಚುರುಕು ಮನಸ್ಸು ಮಾತುಗಳಿಂದ ನವಚೈತನ್ಯ ಮೂಡಿಸಿ ಹಲವು ಬಾರಿ ಏಕತಾನತೆಯ ಗಂಭೀರ ವಿದ್ವತ್ ಮೌನದಿಂದ ಎಲ್ಲರನ್ನು ಹೊರಹಾಕಿಬಿಡುತ್ತಾರೆ. ಈ ರೀತಿಯಲ್ಲಿ ಆ ತಲೆಮಾರಿನ ವಿದ್ವಾಂಸರು ಕಿರಿಯರೊಂದಿಗೆ ನಡೆದುಕೊಳ್ಳುವುದು ನನಗೆ ಅನೇಕಬಾರಿ ಅಚ್ಚರಿ ಮೂಡಿಸಿದೆ. ಕಿರಿಯರನ್ನು

ಪ್ರೋತ್ಸಾಹಿಸುವುದರಲ್ಲಿ ಅವರು ಎತ್ತಿದ ಕೈ. ಒಂದು ಸಂಭಾವನಾ ಸಂಪುಟಕ್ಕಾಗಲಿ, ಸ್ಮರಣಸಂಚಿಕೆಗಾಗಲಿ, ಅಭಿನಂದನಾ ಸಂಪುಟವಾಗಲಿ, ಒಂದು ಉಪನ್ಯಾಸವಾಗಲಿ, ವಿಚಾರ ಸಂಕಿರಣವಾಗಿರಲಿ -ಈ ಕಾರ್ಯವನ್ನು ಇಂಥವರು ಸಮರ್ಥವಾಗಿ ವಿಶ್ವಾಸದಿಂದ ಆ ಕಾರ್ಯವನ್ನು ಅವರಿಂದ ಮಾಡಿಸಿ ಬಿಡುತ್ತಾರೆ. ಒಂದು ಸಾರಿ ಯಾರದೇ ವಿಷಯದಲ್ಲಿ ವಿಶ್ವಾಸ ಮೂಡಿತೆಂದರೆ ಮುಗಿಯಿತು. ಅವರನ್ನು ಯಾವುದೇ ಕಾರಣಕ್ಕೂ ಬಿಡದೆ ಅವರಿಂದ ಕಾರ್ಯಮಾಡಿಸುವ ದೊಡ್ಡಗುಣ ಶ್ರೀಯುತರಲ್ಲಿ ಮನೆಮಾಡಿದೆ.

ಬಸವಾರಾಧ್ಯರ ಜೊತೆ ದೂರವಾಣಿಯಲ್ಲಿ ಸಂಭಾಷಿಸುವುದು ಒಂದು ಆನಂದದಾಯಕ ಅನುಭವ. ಯಾವುದಾದರೂ ಲೇಖನ, ವಿಚಾರ, ಪುಸ್ತಕ ವಿವರಗಳಿಗೆ, ವ್ಯಕ್ತಿ ವಿಚಾರಗಳಿಗೆ ಅವರೊಂದಿಗೆ ಮಾತನಾಡುವುದು ಒಂದು ವಿಶಿಷ್ಟ ಅನುಭವ. ಹಲವಾರು ಸಾರಿ ಕಷ್ಟ, ಸುಖ, ಬೇಸರ, ಕೋಪ ತೋಡಿಕೊಳ್ಳಲು ಶ್ರೀಯುತರು ದೂರವಾಣಿ ಮಾಡುವುದುಂಟು. ಇತ್ತೀಚಿನ ಎರಡು ವರ್ಷಗಳಲ್ಲಿ ಸೋಮಾರಿತನದಿಂದ ಅವರು (ಕಾರ್ಯಬಾಹುಳ್ಯದ ಆರೋಪದ ರಕ್ಷಣೆ ಮಾಡಿಕೊಂಡು) ಕೇಳಿದ ಒಂದು ಲೇಖನವನ್ನು ನಾನು ಬರೆಯಲು ಆಗಲೇ ಇಲ್ಲ. ಅಂಥ ಹಿರಿಯರು ಕೇಳಿದ ಒಂದು ಲೇಖನ ಬರೆಯಲಾಗಲಿಲ್ಲ ಎಂಬ ಅಪರಾಧಿ ಮನೋಭಾವ ನನ್ನನ್ನು ಕುಗ್ಗಿಸಿರುವುದೂ ಉಂಟು. ಆದರೆ ಅವರು ಮತ್ತೆ ಸಿಕ್ಕಾಗ ಹಿಂದಿನ ಸ್ನೇಹಕ್ಕೆ ಚ್ಯುತಿ ಇಲ್ಲದಂತೆ ನಡೆದುಕೊಂಡಿದ್ದಾರೆ; ಇದು ಅವರ ದೊಡ್ಡತನ. ಶ್ರೀಯುತರ ಒತ್ತಾಯದಿಂದ ನಾನು ಹಲವು ಲೇಖನಗಳನ್ನು ಬರೆದಿದ್ದೇನೆ, ವಿಚಾರ ಸಂಕಿರಣಗಳನ್ನು ಭಾಗವಹಿಸಿದ್ದೇನೆ, ಸಂಶೋಧನೆ ಉಪನ್ಯಾಸಗಳನ್ನು ನೀಡಿದ್ದೇನೆ -ಎಂದರೆ ಉತ್ಪ್ರೇಕ್ಷೆಯಲ್ಲ. ಅವರ ಸ್ನೇಹ ಕಟ್ಟಿಹಾಕಿ ಕೆಲಸ ಮಾಡಿಸುತ್ತದೆ.

ಆತ್ಮೀಯತೆ ಬಸವಾರಾಧ್ಯರ ವ್ಯಕ್ತಿತ್ವದ ಹೆಗ್ಗುರುತು. ಹಾಗೆಂದು ದಾಕ್ಷಿಣ್ಯಕ್ಕೆ ಸದಾ ಸಿಲುಕಿ ಇಷ್ಟವಾಗದ ಕೆಲಸವನ್ನು ಸಹಿಸಿಕೊಂಡು ಮಾಡುವವರಲ್ಲ. ಹಲವಾರು ಸಭೆ, ಗೋಷ್ಠಿಗಳಲ್ಲಿ ತಮಗೆ ಅನಿಸಿದ್ದನ್ನು ನೇರವಾಗಿ, ನಿಷ್ಠುರವಾಗಿ ಹೇಳುವುದನ್ನು ನೋಡಿದ್ದೇನೆ. ತೀರಾ ಸರಿಹೋಗದಿದ್ದರೆ, ಇರುವ ವಸ್ತುಸ್ಥಿತಿ ವಿವರಿಸಿ ಆ ಸ್ಥಾನ, ಸ್ಥಳ ಮತ್ತು ಸಂಸ್ಥೆಯಿಂದ ಮನಸ್ಸನ್ನು ಕಹಿಮಾಡಿಕೊಳ್ಳದೆ ಇತರ ಮನಸ್ಸನ್ನು ಕಹಿಮಾಡಲೂ ಅವಕಾಶ ಕೊಡದೆ ಘನತೆಯಿಂದ ನಿರ್ಗಮಿಸುವ ನಿಷ್ಠುರ ವ್ಯಕ್ತಿತ್ವ ಬೆಳೆಸಿಕೊಂಡಿದ್ದಾರೆ. ಇಷ್ಟವಿಲ್ಲದ ಕಾರ್ಯದಲ್ಲಿ ತೊಡಗಿಕೊಂಡು ಸುಮ್ಮನೆ ಮುಲಾಜಿಗೆ ಹೊಂದಾಣಿಕೆ ಮಾಡಿಕೊಂಡು ಅವರು ಕೊರಗುವುದಿಲ್ಲ; ಅದು ಅವರು ಜಾಯಮಾನವೂ ಅಲ್ಲ.

ಪ್ರಾಚ್ಯವಿದ್ಯಾಸಂಶೋಧಾನಾಲಯದಲ್ಲಿ ಸೇವಾರಂಭ ಮಾಡಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಪಾದನಾ ವಿಭಾಗದಲ್ಲಿ ಅಪಾರ ಅನುಭವ ಪಡೆದು, ನಿಘಂಟು ಕಾರ್ಯಾಲಯ, ಸಾಹಿತ್ಯ ಪರಿಷತ್ತು, ಬಿ.ಎಂ. ಶ್ರೀ ಪ್ರತಿಷ್ಠಾನಗಳಲ್ಲಿ ಅಧ್ಯಕ್ಷರಾಗಿ ಇನ್ನೂ ಹತ್ತಾರು ಸಂಸ್ಥೆಗಳಲ್ಲಿ ಅವಿರತವಾಗಿ ದಕ್ಷತೆಯಿಂದ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಶುದ್ಧ ಹಸ್ತರಾಗಿ ಹೊರಹೊಮ್ಮಿದ್ದಾರೆ. ಇಷ್ಟೊಂದು ಸಂಸ್ಥೆಗಳಲ್ಲಿ ಒಳಹೊಕ್ಕು ಯಶಸ್ವಿಯಾಗಿ ಹೊರಬರುವುದು ಸಾಧಾರಣ ಕೆಲಸವೇನಲ್ಲ. ಇದು ಹಿರಿಯ ಪರಂಪರೆಯ ಕೊಂಡಿಯಾಗಿರುವುದರಿಂದ ಸಾಧ್ಯವಾಗಿದೆ. ಎಲ್ಲೋ ಒಂದು ಕಡೆ ಹಣ, ಅಂತಸ್ತು, ಅಧಿಕಾರಗಳ ವಿಷಯದಲ್ಲಿ ಅವರು ಬೆಳೆಸಿಕ್ಕೊಂಡಿರುವ ದಿವ್ಯ ನಿರ್ಲಕ್ಷ್ಯ ಮನೋಭಾವ ಅವುಗಳಿಗೆ ಅಂಟದೆ, ಅವುಗಳ ಆಮಿಷಕ್ಕೆ ಒಳಗಾಗದೆ ಹೇಗೆ ಒಳ ಪ್ರವೇಶಿಸಿದರೋ ಹಾಗೆಯೇ ಶುದ್ಧಹಸ್ತಗಾಗಿ ಹೊರಹೊಮ್ಮಿಸಲು ಸಾಧ್ಯವಾಗಿಸಿದೆ.

ಅವರ ಸಾಧನೆಗಳನ್ನು ಗಮನಿಸಿ ಸಂಘ ಸಂಸ್ಥೆಗಳು, ಸರಕಾರ, ಮಠ ಮಾನ್ಯಗಳು ಹಲವು ಪ್ರಶಸ್ತಿಗಳನ್ನು ನೀಡಿದ್ದರೂ ಅವರ ಬಹುದೊಡ್ಡ ಪ್ರಶಸ್ತಿ ಅವರ ಬಹುದೊಡ್ಡ ಆತ್ಮೀಯ ಬಳಗ. ಹಿರಿಯ ತಲೆಮಾರಿನ ವಿದ್ವಾಂಸರಾಗಿರಬಹುದು ಕಿರಿಯ ತಲೆಮಾರಿನ ವಿದ್ವಾಂಸರಾಗಿರಬಹುದು-ಅವರೊಂದಿಗೆ ಅವರು ಬೆರೆಯುವ ರೀತಿ ಏಕಪ್ರಕಾರವಾಗಿರುತ್ತದೆ. ವಿದ್ವತ್‌ವಲಯದಿಂದ ಆಚೆ ಬೆಚ್ಚನೆಯ ಹೃದಯಶ್ರೀಮಂತಿಕೆಯಿಂದ ಎಲ್ಲರನ್ನು ಗೆದ್ದು ಬಿಡುತ್ತಾರೆ. ಇಂಥ ಹಿರಿಯರಿಗೆ ಗೌರವ ಸಲ್ಲಿಸುವ ಶುಭಸಮಾರಂಭವನ್ನು ಏರ್ಪಡಿಸುವುದು ನಾಡಿನ ಸಂಸ್ಕೃತಿಯನ್ನು ಪ್ರೀತಿಸುವ ಎಲ್ಲ ಸಮಾನಮನಸ್ಕರ ಕರ್ತವ್ಯ ಹಾಗೂ ಜವಬ್ದಾರಿಯಾಗಿವೆ. ಇಂಥ ಸಂದರ್ಭದಲ್ಲಿ ನುಡಿ ಸಲ್ಲಿಸಲು ಅವಕಾಶ ಒದಗಿ ಬಂದದ್ದಕಾಗಿ ತುಂಬ ಸಂತೋಷವಾಗುತ್ತದೆ. ಸ್ನೇಹಜೀವಿಗೆ ನಮನ.

XXX

ಮುಕ್ತ ಮನದ ಪ್ರೊ. ಎನ್. ಬಸವಾರಾಧ್ಯರು

-ಡಾ|| ಎಸ್. ಪ್ರಭುಲಿಂಗದೇವರು

ಪ್ರೊ. ಎನ್. ಬಸವಾರಾಧ್ಯರು ಕನ್ನಡದ ಪ್ರಸಿದ್ಧ ವಿದ್ವಾಂಸರಲೊಬ್ಬರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ಶಬ್ದಕೋಶಗಳಲ್ಲದೇ ಅಂಥ ನೂರಾರು ಅಮೂಲ್ಯ ಕೃತಿಗಳನ್ನು ರಚಿಸಿದ್ದಾರೆ, ಸಂಪಾದಿಸಿದ್ದಾರೆ. ಸೂತ್ತೂರಿನ ಲಿಂಗೈಕ್ಯ ಜಗದ್ಗುರು ಡಾ|| ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಸಮರ್ಪಿಸಿದ ಅಭಿನಂದನಾ ಗ್ರಂಥ 'ಅರ್ಚನಾ' -ಎಂಬುದೂ ಇಂಥ ಗ್ರಂಥಗಳಲ್ಲಿ ಒಂದು. ನನಗೆ ಅವರ ಪರಿಚಯವಾದದ್ದು ೧೯೮ರ ನಂತರ.

ಕನ್ನಡ ಸಾಹಿತ್ಯ ಪರಿಷತ್ತಿನ ಎದುರುಗಡೆ ಇರುವುದೇ ಸರ್ಕಾರಿ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು. ಈ ಎರಡೂ ಸಂಸ್ಥೆಗಳೂ, ಪರಸ್ಪರ ಎದುರು ಬದರಾಗಿರುವುದರಿಂದಲೋ ಏನೋ ಎಂಬಂತೆ, ಬಹಳಷ್ಟು ಜನ ಸಂಸ್ಕೃತ ಹಾಗೂ ಕನ್ನಡ ವಿದ್ವಾಂಸರಿಗೆ ಒಳಗೊಳಗೇ ಮುನಿಸು ಇದೆ. ೨೦೦೦ರಲ್ಲಿ ಪ್ರೊ. ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವೊಂದರ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಸಭೆಯಲ್ಲಿ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಿರುವ ಮಧುರ ಬಾಂಧ್ವವನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಎಲ್ಲರಂತಿರದ ಅವರ ವಿಚಾರಧಾರೆ ವಾಸ್ತವಿಕವಾಗಿತ್ತು, ಕನ್ನಡದ ಕಣ್ವ ಶ್ರೀ ಬಿ.ಎಂ. ಶ್ರೀಕಂಠಯ್ಯನವರ ಅಭಿಪ್ರಾಯವೂ ಇದೇ ಆಗಿತ್ತು. ಬಹುತೇಕ ವೀರಶೈವ ಸಾಹಿತಿಗಳು ಸಂಸ್ಕೃತಕ್ಕೆ ಅಷ್ಟಾಗಿ ಒತ್ತು ನೀಡುವುದಿಲ್ಲ, ಆದರೆ ಪ್ರೊ. ಬಸವಾರಾಧ್ಯರು ಇದಕ್ಕೆ ಹೊರತಾದವರು.

ಶ್ರೀ ಸಿದ್ಧಾರೂಢ ಸ್ವಾಮಿಗಳು ಕನ್ನಡ ನಾಡಿನ ಹಿರಿಯ ದಾರ್ಶನಿಕರು, ಸರ್ವಧರ್ಮ ಸಮನ್ವಯದ ಹರಿಕಾರರು. ಭಾರತ ಸ್ವಾತಂತ್ರ್ಯ ಸಂಗ್ರಾಮದ ನೇತಾರರು. ೨೦೦೧ರಲ್ಲಿ ಬೆಂಗಳೂರಿನಲ್ಲಿ ಶ್ರೀ ಸಿದ್ಧರೂಢ ಸ್ವಾಮಿಗಳ ೧೬೪ನೇ ಜಯಂತ್ಯುತ್ಸವವನ್ನು ಬೃಹತ್ಪಮಾಣದಲ್ಲಿ ಆಚರಿಸಲು ಶ್ರೀ ಸಿದ್ಧಾರೂಢಮಿಷನ್

ಕಾರ್ಯಪ್ರವೃತ್ತವಾಯಿತು. ನಾನು ಶ್ರೀ ಬಸವಾರಾಧ್ಯರನ್ನು ಕಂಡು ಈ ಸಂಸ್ಥೆಗೆ ಮಾರ್ಗದರ್ಶಕರಾಗಿರಬೇಕೆಂದು ಕೇಳಿಕೊಂಡೆ. "ಇದು ಆಗಬೇಕಾದ ಕಾರ್ಯ. ಖಂಡಿತ ನಾನು ನಿಮ್ಮೊಂದಿಗೆ ಇರುತ್ತೇನೆ, ಚೆನ್ನಾಗಿ ಮಡೋಣ" ಎಂದರು. ನಂತರ ನಡೆದ ಬಹುತೇಕ ಎಲ್ಲ ಸಭೆಗಳಿಗೂ ಹಾಜರಾದರಲ್ಲದೇ, ಹಲವು ಬಾರಿ ಮಾರ್ಗದರ್ಶಕ ಸಮಿತಿಯ ಮುಖ್ಯಸ್ಥರಾಗಿದ್ದ ದಿ। ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾವ್ ಅವರನ್ನು ಸ್ವತಃ ತಾವೇ ಕರೆದುಕೊಂಡು ಬರುತ್ತಿದ್ದರು.

೨-೪-೨೦೦೧ರಂದು ನಗರದ ಅಂಬ್ಕೇಡರ್ ಭವನದಲ್ಲಿ ನಡೆದ ಶ್ರೀ ಸಿದ್ಧಾರೂಢ ಸ್ವಾಮಿಗಳ ೧೬೪ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ಸಿದ್ಧಾರೂಡ ಸ್ವಾಮಿಗಳ ವ್ಯಕ್ತಿತ್ವ ಹಾಗೂ ವಿಚಾರಧಾರೆಗಳನ್ನು ಮನಮುಟ್ಟುವಂತೆ ಜನತೆಗೆ ತಿಳಿಯಪಡಿಸಿದರು. ಕಾರ್ಯಕ್ರಮದ ನಂತರ, ೫-೫-೨೦೦೧ರಂದು ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, "ಶ್ರೀ ಸಿದ್ಧಾರೂಡ ಸ್ವಾಮಿಗಳ ಬಗೆಗಿನ ಸಾಹಿತ್ಯವನ್ನು ನಾಡಿನಾದ್ಯಂತ ತಲುಪಿಸುವ ಪ್ರಯತ್ನ ನಡೆಯಬೇಕು. ರಾಜ್ಯದ ಪ್ರತಿಯೊಂದು ಗ್ರಂಥಾಲಯಕ್ಕೂ ಅವರ ಸಾಹಿತ್ಯ ಸೇರ್ಪಡೆಯಾಗಬೇಕು" ಎಂದರು.

ಬೆಂಗಳೂರು ನಗರದ ವೃತ್ತವೊಂದಕ್ಕೆ ಶ್ರೀ ಸಿದ್ಧಾರೂಢ ಸ್ವಾಮಿಗಳ ಹೆಸರನ್ನಿಡಿಸಬೇಕೆಂದು ಪ್ರಯತ್ನಿಸಲಾಯಿತು. ಬಸವಾರಾಧ್ಯರು ಬಹಳ ಉತ್ಸಾಹ ತೋರಿಸಿದರು. ಪ್ರೊ. ಅ.ರಾ. ಮಿತ್ರ ಮೊದಲಾದ ಹಲವಾರು ಸಾಹಿತಿಗಳಿಗೆ ದೂರವಾಣಿ ಕರೆಮಾಡಿ, ಈ ಕುರಿತ ಮನವಿಗೆ ಸಹಿಹಾಕಲು ಕೋರಿದರು. ರಾಜಾಜಿನಗರದ ಶ್ರೀ ಎಂ. ಮಲ್ಲೇಗೌಡ, ದಾನಚಿಂತಾಮಣಿ ದಿ। ಶ್ರೀ ಬಿ.ಎಸ್. ಶಿವಪ್ಪಶೆಟ್ಟರು ಮೊದಲಾದವರ ಮನೆಗೆ ನನ್ನೊಂದಿಗೆ ನಡೆದುಕೊಂಡೇ ಬಂದರು.

ಶ್ರೀ ಸಿದ್ಧಾರೂಢ ಸ್ವಾಮಿಗಳ ಬಗೆಗಿನ ಕಾರ್ಯ ಚಟುವಟಿಕೆಗಳ ಬಗ್ಗೆ ಅವರಿಗೆ ತುಂಬ ಪ್ರೀತಿ. ಇದಕ್ಕಾಗಿ ನನ್ನ ಮೇಲೆ ಅವರಿಗೆ ತುಂಬಾ ಅಭಿಮಾನ. ಎದುರುಗಡೆ ಯಾರಾದರೂ ಇದ್ದರೆ, ಅವರಿಗೆ ನನ್ನನ್ನು ತೋರಿಸಿ. "ನೋಡ್ರೀ ಇವರು ಒಬ್ಬರೇ ಎಂಥ ಕೆಲಸಮಾಡ್ತಾರೆ!" ಎಂದು ಸಂತೋಷದಿಂದ ಹೇಳುವರು.

ನಾನು ಶ್ರೀ ಸಿದ್ಧಾರೂಢಮಿಷನ್‌ಗೆ, ಯಾವುದೇ ಸಂದರ್ಭದಲ್ಲಿ ಏನೇ ಮಾರ್ಗದರ್ಶನ ಕೇಳಿದರೂ ಅವರು ಎಂದಿಗೂ ಬೇಸರ ಮಾಡಿಕೊಂಡಿಲ್ಲ. ಥಟ್ಟನೇ ಉಚಿತ ಸಲಹೆಯನ್ನು ನೀಡುವರು. ಇದು ನನ್ನದೇ ಸಂಸ್ಥೆ ಎಂಬ ಕಳಕಳಿ ಅವರಿಗಿದೆ. ಕೆಲವು ಬಾರಿ ಅವರಿಗೆ ಪ್ರಯಾಣಭತ್ಯಯನ್ನು ನೀಡಲು ಹೋದಾಗ ನಯವಾಗಿ ನಿರಾಕರಿಸಿದ್ದಾರಲ್ಲದೇ ಹಲವು ಬಾರಿ "ನೀನೊಬ್ಬನೇ ಜೇಬಿನಿಂದ ಹೆಚ್ಚು ಹಣವನ್ನು ಖರ್ಚು ಮಾಡಬೇಡಪ್ಪ" ಎಂದು ಸಲಹೆ ಇತ್ತಿದ್ದಾರೆ.

ಅತ್ಯಲ್ಪ ಕಾಲದಲ್ಲಿಯೇ ನನ್ನನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿರುವ ಪ್ರೊ. ಎನ್. ಬಸವಾರಾಧ್ಯರು ೭೫ ಸಂವತ್ಸರಗಳನ್ನು ಕಳೆದು ನಮ್ಮೊಂದಿಗಿರುವುದು ನಮ್ಮ ಸೌಭಾಗ್ಯ. ಈ ಸಂಭ್ರಮದ ಸವಿನೆನಪಿಗಾಗಿ ಕಾರ್ಯಕ್ರಮವೊಂದನ್ನು ಆಯೋಜಿಸಿ ಅಭಿನಂದನಾ ಗ್ರಂಥಗಳನ್ನರ್ಪಿಸುವ ಮೂಲಕ ಅವರನ್ನು ಗೌರವಿಸುತ್ತಿರುವುದು ಸಂತಸದ ಸಂಗತಿ. ಈ ಶುಭ ಸಂದರ್ಭದಲ್ಲಿ ಶ್ರೀ ಸಿದ್ಧಾರೂಢಮಿಷನ್ ಪರವಾಗಿ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಅವರು ನೂರ್ಕಾಲ ನಮ್ಮೊಂದಿಗೆ ಬದುಕಿ, ನಮ್ಮ ಸಂಸ್ಥೆಗೆ ಹಾಗೂ ನಾಡಿಗೆ ಮಾರ್ಗದರ್ಶನ ನೀಡಲೆಂದು ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳಲ್ಲಿ ಪ್ರಾರ್ಥಿಸುತ್ತೇನೆ.

"ವಿದ್ವಾನ್ ಸರ್ವತ್ರ ಪೂಜ್ಯತೆ"

-ಡಾ. ಕೆ.ಬಿ. ಬ್ಯಾಳಿ

ಹಿರಿಯ ಜೀವಿ, ವಿದ್ವಾನ್ ಬಸವಾರಾಧ್ಯರನ್ನು ನೋಡಿದಾಗ-ಅವರೊಡನೆ ಒಡನಾಡಿದಾಗ ಆಗುವ ಅನುಭವ-ಅನುಭಾವ ಅದ್ಭುತವಾದದ್ದು. ಅವರೊಂದಿಗಿನ ಮೂರು ವರ್ಷದ ಸಂಪರ್ಕ, ಆತ್ಮೀಯತೆ ಮೂವತ್ತು ವರ್ಷದ ಆತ್ಮೀಯತೆಯಷ್ಟು ಗಾಢವಾಯಿತು. ಅದಕ್ಕೆ ಕಾರಣ ಅವರ ವಿಶಾಲ ಮನಸ್ಸು, ವಿದ್ವತ್ ಭರಿತ ಕೊಡ. "ತುಂಬಿದ ಕೊಡ ತುಳುಕುವುದಿಲ್ಲ" ಎನ್ನುವ ಗಾದೆಯಂತೆ ಪ್ರೊ. ಬಸವಾರಾಧ್ಯರು ತುಂಬಿದ ಕೊಡವಾಗಿ ನನಗೆ ಕಂಡರು. ನಗುತ ಸ್ವಾಗತ, ನಗುತ ಮಾತು, ಮತ್ತೊಬ್ಬರಿಗೆ ನೋವಾಗದ ನಡತೆ; ನವಿರಾದ ವಿದ್ವತ್ಪೂರ್ಣಹಾಸ್ಯ ಇವು ಯಾರಿಗೂ ಬೇಸರ ತರಿಸುತ್ತಿದ್ದಿಲ್ಲ. ಇತರರ ಮನಸ್ಸು ನೋಯದಂತೆ ಕಾಳಜಿವಹಿಸುವ ಅವರ ದೊಡ್ಡಗುಣ ಅವರನ್ನು ದೊಡ್ಡವರನ್ನಾಗಿಸಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಅವರು ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರು. ಜಿಲ್ಲಾಧ್ಯಕ್ಷನಾದ ನಾನು ಮತ್ತು ವಿಶೇಷವಾಗಿ ಸ್ನೇಹಿತ ಬಳಗ ಗುಲ್ಬರ್ಗಾ, ಬೆಳಗಾಂವ, ಬಿಜಾಪುರ, ಗದಗದವರು ಕಂಡರೆ ಅವರಿಗೆ ಎಲ್ಲಿಲ್ಲದ ಪ್ರೀತಿ; ಬಹುಶಃ ಇಷ್ಟು ಆತ್ಮೀಯತೆ ಆಶ್ಚರ್ಯ ತರುವಂತದು. ಇವರ ಈ ಆತ್ಮೀಯತೆ ನಮ್ಮೆಲ್ಲರ ಆತ್ಮೀಯ ಬಂಧನಕ್ಕೆ ಕಾರಣವಾಯಿತು. ಅಂತಲೇ ಇತ್ತೀಚಿಗೆ ಫೋನಿನಲ್ಲಿ ಮಾತಾಡಿದ ಮತ್ತೊಬ್ಬ ಆತ್ಮೀಯ, ಆಗಿನ ಕಾರ್ಯದರ್ಶಿ ಪ್ರೊ. ಚಂದ್ರಣ್ಣಗೌಡರು ಹೇಳಿದ ಮಾತು, 'ಬೇಳೆಯವರೆ ಆ ನೆನಪು, ಆತ್ಮೀಯತೆ. ಈಗಿಲ್ಲ ನೋಡಿ'. ಇದು ಬಸವಾರಾಧ್ಯರ ಸಹವಾಸದ ಫಲ. ಸರ್ವಜ್ಞನ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು "ಸಜ್ಜನರ ಸಂಗದವರು ಹೆಜ್ಜೇನು ಸವಿದಂತೆ" ನಿಜವಾಗಿಯೂ ಇವರು ಹೆಜ್ಜೇನು.

ಕನ್ನಡ ಸಾಹಿತ್ಯ ಪರಿಷತ್ತಿಗೆ ಅವರ ಕೊಡುಗೆ ಅಪಾರ. ಇದರೊಂದಿಗೆ ಅವರ ಮೂರು ವರ್ಷದ ಅಧ್ಯಕ್ಷರಾಗಿ ಮಾಡಿದ

ಕನ್ನಡ ಸೇವೆ ಅಪಾರವಾದುದು. ಅವರ ಕಾಲದ ಸಮ್ಮೇಳನಗಳು ಅದ್ಭುತವಾದ ಹೊಸಮಾರ್ಗ ಸೃಷ್ಟಿಸಿದವು. ಕನಕಪುರ, ಬಾಗಲಕೋಟೆ ಸಮ್ಮೇಳನಗಳು 'ನ ಭೂತೋ ನ ಭವಿಷ್ಯತಿ!' ಎನ್ನುವಂತಾದವು. ಎಲ್ಲಾ ಅಧ್ಯಕ್ಷರಿಗೆ ಅವರ ಬಗ್ಗೆ ಅಪಾರ ಗೌರವವಿತ್ತು. ಅವರಿಗೂ ಎಲ್ಲರಲ್ಲಿ ಅಷ್ಟೇ ಆದರ, ಆತ್ಮೀಯತೆ ಇದ್ದುದು ಕಂಡುಬಂದಿತು! ಎಲ್ಲಿ ಹೋದಲ್ಲಿ ಅವರಿಗೆ ಗೌರವ, ಆದರೆ ಅವರಿಗಿದು ಗೌಣ.

'ಸದುವಿನಯವೇ ಸದಾಶಿವನೊಲಿಮೆಯಯ್ಯಾ" ಎನ್ನುವ ಶರಣವಾಣಿ ಅವರ ಜೀವನಕ್ಕೆ ಹೊಂದಿಕೊಂಡದ್ದು ಎನಿಸುತ್ತದೆ. ವಿನಯಸಂಪನ್ನರೂ, ವಿದ್ವನ್ಮಣಿಗಳೂ, ಆತ್ಮೀಯ ಗುಣವುಳ್ಳವರೂ, ಪ್ರೀತಿ-ತೋರುವವರೂ ಹೆಚ್ಚುಕಾಲ ಬದುಕಿದ್ದಷ್ಟು ಸಮಾಜಕ್ಕೆ ಜನತೆಗೆ ಒಳಿತಲ್ಲವೇ. ಕಾರಣ, ಹಿರಿಯರಾದ ಪ್ರೊ. ಎನ್. ಬಸವಾರಾಧ್ಯರು ನೂರು ನೂರು ಕಾಲ ಬಾಳಲಿ. ದೇವರು ಆಯುಷ್ಯ-ಆರೋಗ್ಯ-ಆತ್ಮಬಲ ಅವರಿಗೆ ಕರುಣಿಸಲಿ ಎಂದು ಪ್ರಾರ್ಥಿಸುವೆ.

ಎಷ್ಟು ಬಾಳಿದರೇನು
ಬಹುಗುಣವಿಲ್ಲದಿರೆ
ಎಷ್ಟು ಆಳಿದರೇನು
ಆದರ್ಶವಿಲ್ಲದೊಡೆ
ಎಷ್ಟು ಅತ್ತರೇನು
ಕಣ್ಣೀರಿಲ್ಲದೊಡೆ
ಬಾಳಿ ಬೆಳಗುವಂತೆ-
ಕರುಣಿಸು ಶ್ರೀಗುರುವೆ.

XXX

ವಿದ್ವತ್‌ಕಾಯಕ

-ಪ್ರೊ. ಜೆ.ಆರ್. ನಂಜುಂಡೇಗೌಡ

ನಾನು ತಿಳಿದಂತೆ, ವಿದ್ವಾಂಸರಲ್ಲಿ ಎರಡು ರೀತಿಯ ಸ್ವಭಾವದವರಿದ್ದಾರೆ. ಒಂದನೆಯ ಗುಂಪಿನವರು, ತಾನಾಯಿತು ತನ್ನ ವಿದ್ವತ್ ಕ್ಷೇತ್ರವಾಯಿತು ಎನ್ನುವವರು. ಎರಡನೆ ಗುಂಪಿನವರು ತಮ್ಮ ಕಾರ್ಯದ ಜೊತೆಗೆ ಬೇರೆ ಕ್ಷೇತ್ರದ ಜನರ ಜೊತೆ ಸಂಪರ್ಕವಿಟ್ಟುಕೊಂಡು, ಅವರ ಸ್ನೇಹ, ವಿಶ್ವಾಸ ಪಡೆದು, ತಮ್ಮ ಕ್ಷೇತ್ರವನ್ನು ವಿಸ್ತಾರಪಡಿಸಿಕೊಳ್ಳುವವರು. ಪ್ರೊ. ಎಸ್. ಬಸವಾರಾಧ್ಯರು ಈ ಎರಡನೆಯ ಗುಂಪಿಗೆ ಸೇರಿದವರು.

ಪ್ರೊ. ಎಸ್. ಬಸವಾರಾಧ್ಯರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಪಾದನಾ ವಿಭಾಗದ ಉಪ ನಿರ್ದೇಶಕರಾಗಿದ್ದಾಗ ನಾನು ವಿಶ್ವವಿದ್ಯಾನಿಲಯದ ಕಾರ್ಯ ಸೌಧದಲ್ಲಿ ಉಪಕುಲ ಸಚಿವನಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ಪ್ರೊ. ಬಸವಾರಾಧ್ಯರಿಗೆ ಅತಿ ನಿಕಟವಾಗಿದ್ದ ವಿಶ್ವವಿದ್ಯಾನಿಲಯದ ಅನೇಕ ಅಧಿಕಾರಿಗಳು, ಬೋಧನಾ ವಿಭಾಗದ ಪ್ರಾಧ್ಯಾಪಕರು ಮತ್ತು ಇತರೆ ವಿಭಾಗಗಳ ಜನರು ನನಗೆ ಗೊತ್ತಿದ್ದರು. ಎಂದರೆ ಬಸವಾರಾಧ್ಯರು ತಮ್ಮ ಕೆಲಸಕ್ಕೆ ಸಂಬಂಧಿಸಿದವರ ಜೊತೆ ಹೇಗೋ ಹಾಗೆ ಸಂಬಂಧಿಸದವರ ಜೊತೆಯೂ ಅವರು ನಿಕಟ ಸ್ನೇಹ, ವಿಶ್ವಾಸವಿಟ್ಟುಕೊಂಡಿದ್ದರು. ವಾಸ್ತವಿಕವಾಗಿ ನಾನು ವಿಶ್ವವಿದ್ಯಾನಿಲಯದ ಅಧಿಕಾರಿಯಾಗಿದ್ದರೂ ಬಸವಾರಾಧ್ಯರ ಕ್ಷೇತ್ರಕ್ಕೆ ಯಾವ ಸಂಬಂಧವೂ ಇರಲಿಲ್ಲ. ನಾನು ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಶೋಧನೆಗೆ ಅವಶ್ಯಕವಾದ ಸಹಾಯ ಧನಕ್ಕೆ ಸಂಬಂಧಿಸಿದ ಆಡಳಿತವನ್ನು ನೋಡಿಕೊಳ್ಳುತ್ತಿದ್ದೆ. ಆದ್ದರಿಂದ ಬಸವಾರಾಧ್ಯರಿಗೆ ಎಂದೂ ಪರಿಚಯವಾಗುವ ಸಂದರ್ಭಗಳಿರಲಿಲ್ಲ. ಆದರೆ ನಾನು ಮೊದಲು ಹೇಳಿದಂತೆ, ಬಸವಾರಾಧ್ಯರು ಯಾವ ಮೇರೆಯೂ ಇಲ್ಲದ ಸ್ನೇಹಪರರು. ಅವರು ಆಕಸ್ಮಿಕವಾಗಿ ಪರಿಚಯವಾದಾರೂ ಅತಿ ನಿಕಟವಾದ ವಿಶ್ವಾಸವನ್ನು ಬೆಳೆಸಿಕೊಳ್ಳುತ್ತಿದ್ದರು. ನನ್ನ ನಿಕಟ ಸ್ನೇಹಿತರಿಂದ ಪರಿಚಯವಾದ ಬಸವಾರಾಧ್ಯರು ನಿರಂತರ ವಿಶ್ವಾಸದವರಾಗಿ ಇಂದಿಗೂ ಉಳಿದಿದ್ದಾರೆ.

ಪ್ರೊ. ಬಸವಾರಾಧ್ಯರು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯ ಕಡೆ ಬಂದಾಗಲೆಲ್ಲ ನನ್ನ ಕಛೇರಿಗೂ ಭೇಟಿ ಕೊಡುತ್ತಿದ್ದರು. ನನ್ನಿಂದ ಅವರಿಗೆ ಒಂದು ಚಿಕ್ಕಾಸಿನ ಕೆಲಸವಿಲ್ಲದಿದ್ದರೂ, ನನ್ನ ಹತ್ತಿರ ಕೆಲ ಸಮಯ ಕಳೆಯದೆ ಅವರು ಹೋಗುತ್ತಿರಲಿಲ್ಲ. ಪ್ರೊ. ಬಸವಾರಾಧ್ಯರು ನನ್ನ ಕಛೇರಿಗೆ ಬಂದಾಗಲೆಲ್ಲ ಅವರೂ ನಾನು ಯಾವ ಕೃತಕ ಸಂಪ್ರದಾಯವನ್ನು ಪಾಲಿಸದೆ, ಬಹಳ ಲಘುವಾಗಿ ಮಾತನಾಡುತ್ತ ಹರಟುತ್ತಿದ್ದೆವು. ಬಸವಾರಾಧ್ಯರು ನನಗಿಂತ ಬಹಳ ಹಿರಿಯರಾಗಿದ್ದರೂ ಮಾತುಕತೆಗಳಲ್ಲಿ, ನಡವಳಿಕೆಯಲ್ಲಿ ಸಮಾನತೆಯನ್ನು ಬಿಟ್ಟು ವರ್ತಿಸುತ್ತಿರಲಿಲ್ಲ.

ನಮ್ಮಿಬ್ಬರ ಪರಸ್ಪರ ಭೇಟಿ ಕಾಫೀ ಮತ್ತು ಸಿಗರೇಟು ಸೇವನೆಯಿಂದ ಪ್ರಾರಂಭವಾಗಿ ದೀರ್ಘವಾಗಿಯೇ ಮುಂದುವರಿಯುತ್ತಿತ್ತು. ಅವರು ನನ್ನ ಕಛೇರಿಗೆ ಪ್ರವೇಶಿಸಿದ ಕೂಡಲೆ ಜೇಬಿನಿಂದ ಸಿಗರೇಟು ಪ್ಯಾಕು ತೆರೆದು, "ತೆಗೆದುಕೊಳ್ಳಿ, ಸಿಗರೇಟು ಸೇದಿ" ಎಂದು ಮಾತು ಪ್ರಾರಂಭಿಸಿ ನನ್ನ ಕಡೆ ಸಿಗರೇಟು ಪ್ಯಾಕು ಇಡುತ್ತಿದ್ದರು. ನಾನು ಧೂಮಪಾನದ ಚಟದವನಲ್ಲದಿದ್ದರೂ, ಸ್ನೇಹಿತರು ಬಂದಾಗ ಕಂಪನಿಗಾಗಿ ಸಿಗರೇಟು ಸೇದುತ್ತಿದ್ದೆ. ಹೀಗೆ ನನಗೆ ಸಿಗರೇಟು ನೀಡುತ್ತಿದ್ದ ಮತ್ತೊಬ್ಬ ಹಿರಿಯರು, ನನ್ನ ಗುರುಗಳಾದ ಡಾ॥ ಎಲ್. ಬಸವಾರಾಜು ಅವರು. ನಾನು ಮಾಡಿಕೊಟ್ಟ ಒಂದು ಸಣ್ಣ ಕೆಲಸದಿಂದ ಪ್ರಾರಂಭವಾದ ಸಿಗರೇಟು ಸೇವನೆ, ಅವರೂ ನಾನೂ ಸಂಧಿಸಿದಾಗ ಇಂದಿಗೂ ನಡೆಯುತ್ತಿದೆ. ಗುರು-ಶಿಷ್ಯರ ಈ "ಕಾರ್ಯಕ್ಕೆ" ಅವರ ಆದೇಶವೇ ಕಾರಣವಾಗಿತ್ತು. ಬಸವಾರಾಧ್ಯರು ಈ ರೀತಿ ಸಿಗರೇಟು ನೀಡಿದಾಗ ನಾನು ಕಾಫೀ ತರಿಸಿಕೊಟ್ಟು ಋಣಭಾರವನ್ನು ಕಳೆದುಕೊಳ್ಳುತ್ತಿದ್ದೆ.

ನಮ್ಮಿಬ್ಬರ ಹರಟೆಯ ಮಾತುಗಳ ಸಮಯದಲ್ಲಿ ಎಂದೂ ನಮ್ಮಿಬ್ಬರ ಕಾರ್ಯಕ್ಷೇತ್ರದ ವಿಷಯಗಳು ಪ್ರಸ್ತಾಪವಾಗುತ್ತಿರಲಿಲ್ಲ. ವಿಶ್ವವಿದ್ಯಾನಿಲಯದ ಚಟುವಟಿಕೆಗಳೂ ತಲೆಹಾಕುತ್ತಿರಲಿಲ್ಲ. ಆದರೆ ಬಸವಾರಾಧ್ಯರು ಘನ ವಿದ್ವಾಂಸರಾದ್ದರಿಂದ, ಅವರು ತಮ್ಮ ಮಾತಿನ ಸಮರ್ಥನೆಗಾಗಿ ಅನೇಕ ಹಳೆಗನ್ನಡ ಕಾವ್ಯಗಳ ಮನನೀಯವಾದ ಸಾಲುಗಳನ್ನು ಉದ್ಧರಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಅವರ ಮಾತಿಗೂ ಅವರು ಉದಾಹರಿಸಿದ ಕಾವ್ಯದ ಸಾಲುಗಳಿಗೂ ಇದ್ದ ಸಮರ್ಥನೀಯ ಶಕ್ತಿಯನ್ನು ಕಂಡು, "ಹೌದೇ? ಹೀಗೆ ಹೇಳಿದ್ದಾನೆಯೆ!" ಎಂದು ನಾನು ಅಚ್ಚರಿಪಡುತ್ತಿದ್ದೆ. ಅಂಥ ಅನೇಕ ಸಾಲುಗಳು ನನಗೆ ಈಗಲೂ ನೆನಪಿನಲ್ಲಿದ್ದರೂ ಅವುಗಳನ್ನು ಇಲ್ಲಿ ದಾಖಲಿಸಲಾರೆ. ಈ ಮಾತುಗಳನ್ನು ನಿಕಟವರ್ತಿಗಳ ಜೊತೆ ಮಾತಿನಲ್ಲಿ ಮಾತ್ರ ಹಂಚಿಕೊಳ್ಳುತ್ತೇನೆ.

ಪ್ರೊ. ಬಸವಾರಾಧ್ಯರು ನನ್ನ ಜೊತೆ ಅಪಾರ ಸಲುಗೆಯಿಂದ ಇದ್ದರು (ಮೈಸೂರಿನಲ್ಲಿರುವಾಗ), ಇದ್ದಾರೆ ಎಂದರೆ, ನಾವು ಕಛೇರಿಯಿಂದ ಹೊರಗೆ ಸಿಕ್ಕಿದಾಗಲೂ ಕೈ ಕೈ ಅಲ್ಲಾಡಿಸಿಯಾಗಲಿ, ಹಲೋ ಎಂದಾಗಲಿ, ನಮಸ್ಕಾರ ಎಂದಾಗಲಿ ಒಂದೇ ಮಾತಿನಲ್ಲಿ ಮುಗಿಸುವ ಭೇಟಿಯಾಗಿರದೆ, ಸಿಕ್ಕಿದಾಗ ನಿಂತೊ, ಕುಳಿತೋ ಸಿಗರೇಟು-ಕಾಫೀ ಸೇವಿಸಿ, ಹರಟೆಸಿ, ಸ್ವಲ್ಪ ಕಾಲ ಕಳೆಯುವ ವಿಶ್ವಾಸದ ಸ್ನೇಹವಾಗಿತ್ತು.

ಪ್ರೊ. ಬಸವಾರಾಧ್ಯರು ನಿವೃತ್ತರಾದ ಮೇಲೆ ಸ್ವಲ್ಪ ಕಾಲ ಮೈಸೂರಿನಲ್ಲೇ ಇದ್ದರು. ಅವರ ವಿಶ್ವವಿದ್ಯಾನಿಲಯದ ಸೇವೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಒಂದು ಕಟ್ಟಳೆ ನಡೆಯುತ್ತಿತ್ತು. ಆ ಸಮಯದಲ್ಲಿ ನಾವು ಆಗಾಗ ಮಾಮೂಲಿನಂತೆ ನನ್ನ ಕಛೇರಿಯಲ್ಲಿ ಭೇಟಿಯಾಗುತ್ತಿದ್ದೆವು. ಆಗಲ್ಲ ಅದೇ 'ಸೇವನೆ' ಅದೇ ಹರಟೆ! ಆದರೆ ಅವರು ಎಂದೂ ತಮ್ಮ ನ್ಯಾಯಾಲಯದ ವಿಷಯ ಪ್ರಸ್ತಾಪಿಸುತ್ತಿರಲಿಲ್ಲ. ಅದರ ಬದಲು ನಿವೃತ್ತರಾಗಿದ್ದುದರಿಂದ ಹೆಚ್ಚು ಸಮಯ ನನ್ನ ಜೊತೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು.

ಪ್ರೊ. ಬಸವಾರಾಧ್ಯರು ಮೈಸೂರು ಬಿಟ್ಟು ಬೆಂಗಳೂರಿಗೆ ಹೋಗಿ ನೆಲೆಸಿದ ಮೇಲೆ ಅವರು ಅನೇಕ ಸಂಘ, ಸಂಸ್ಥೆಗಳ ಜೊತೆ ಸಂಬಂಧವಿಟ್ಟು ಕೊಂಡು, ನಿವೃತ್ತ ಜೀವನ ಸಾಗಿಸುವುದರ ಜೊತೆಗೆ ಸಾಹಿತ್ಯ-ಸಂಸ್ಕೃತಿಗಳ ಸೇವೆ ಮಾಡಲಾರಂಭಿಸಿದರು.

ಅವರ ಸ್ನೇಹಪರ ಪ್ರವೃತ್ತಿ ಅವರಿಗೆ ಅಪಾರ ಸಂಖ್ಯೆಯ ಸ್ನೇಹಿತರನ್ನು ತಂದು ಕೊಟ್ಟದ್ದರಿಂದ ನೀರಸ ನಿವೃತ್ತ ಜೀವನದಲ್ಲಿ ಅನೇಕ ಸೇವಾ ಜವಾಬ್ದಾರಿಗಳು ಬರತೊಡಗಿದವು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದಾಗ ಆಗಾಗ ಮೈಸೂರಿನಂತೆ ಬಂದಾಗ ಹಳೆಯ ಸ್ನೇಹಿತರನ್ನು ಬರಮಾಡಿಕೊಂಡು, ಮಾಮೂಲಿನಂತೆ ಕಾಲ ಕಳೆಯುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಅವರು ಎಂದೂ ಹಮ್ಮುಬಿಮ್ಮುಗಳನ್ನು ಇಟ್ಟುಕೊಂಡವರಲ್ಲ.

ಪ್ರೊ. ಎನ್. ಬಸವಾರಾಧ್ಯರು ಮೂಲಭೂತವಾಗಿ ಸಾಹಿತ್ಯ ಕ್ಷೇತ್ರಕ್ಕೆ ಸೇರಿದವರು. ಅವರು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಅಪಾರವಾಗಿ ಶ್ರಮಿಸಿ, ಹಳೆಯ ಸಾಹಿತ್ಯವನ್ನು ಸಂಶೋಧಿಸಿ, ಪ್ರಕಟಿಸಿದ್ದಾರೆ. ಇಂಥ ಸಂಶೋಧನೆಯಿಂದ ನಮ್ಮ ಹಳೆಯ ಕನ್ನಡ ಕಾವ್ಯಗಳು, ಶಾಸ್ತ್ರ ಗ್ರಂಥಗಳು ಬೆಳಕು ಕಂಡಿವೆ. ಅವರಿಗೆ ಅನೇಕ ಪ್ರಶಸ್ತಿಗಳನ್ನು ತಂದು ಕೊಟ್ಟಿವೆ-ಅನೇಕ ಸಂಘ ಸಂಸ್ಥೆಗಳು ಅವರ ತನ್ಮಯ ಸೇವಾ ಕಾರ್ಯವನ್ನು ಗುರುತಿಸಿ, ಅಭಿನಂದಿಸಿವೆ.

ಸೌಜನ್ಯದ ಮೂರ್ತಿಯಂತಿರುವ ಪ್ರೊ. ಬಸವಾರಾಧ್ಯರ ಸ್ನೇಹ, ವಿಶ್ವಾಸ, ಕಾರ್ಯ ನಿಷ್ಠೆಗಳನ್ನು ಗುರುತಿಸಿ ಅವರಿಗೆ ಅನೇಕ ಸಾಹಿತ್ಯ, ಸಾಂಸ್ಕೃತಿಕ ಸಂಘಗಳು ಗೌರವದ ಹೊಣೆಗಾರಿಕೆಯನ್ನು ನೀಡಿವೆ. ಅವುಗಳ ಜವಾಬ್ದಾರಿಯನ್ನು ನಿರ್ವಹಿಸಿ, ನಿಗದಿತ ಸೇವೆಯನ್ನು ಎಸಗಿದ್ದಾರೆ. ಅವರ ನಿರಹಂಕಾರಿ, ನಿಗರ್ವಿ ವ್ಯಕ್ತಿತ್ವವನ್ನು ಗುರುತಿಸಿ ಅವರನ್ನು ಅಭಿನಂದಿಸುವುದು, ಗೌರವಿಸುವುದು ಎಲ್ಲ ಸಜ್ಜನರ ಕರ್ತವ್ಯವಾಗಿದೆ.

ಅಪ್ಪಟ ಸ್ನೇಹಜೀವಿ

-ಡಾ. ಕೆ.ಎಚ್. ಮುಕ್ಕಣ್ಣನವರ

ಪ್ರೊ. ಎನ್. ಬಸವಾರಾಧ್ಯ ಅವರು ಬಿಂಕ ಬಿಗುಮಾನಗಳಿಂದ ದೂರ ಸಿಡಿದು ನಿಂತು ಸರಳ ಸಜ್ಜನ ನಿಷ್ಕಲ್ಮಷ ಹೃದಯಿಗಳು. ಇದ್ದುದನ್ನು ಇದ್ದಂತೆ ಹೇಳುವ ನಿಷ್ಠುರ ಸ್ವಭಾವದ ಒಬ್ಬ ಅಪ್ಪಟ ಸಾಹಿತಿ.

ನಾನು ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದಂದಿನಿಂದ ನನ್ನ ಒಡನಾಟಕ್ಕೆ ಬಂದ ಒಬ್ಬ ಸಭ್ಯವ್ಯಕ್ತಿ ಪ್ರೊ. ಎನ್. ಬಸವಾರಾಧ್ಯರು. ವಯಸ್ಸಿಗೆ ಮೀರಿದ ಚಟುವಟಿಕೆ, ಸದಾ ಏನಾದರೊಂದು ಉತ್ತಮ ಕಾರ್ಯ ಮಾಡಬೇಕೆಂಬ ಹಂಬಲವಿದ್ದವರು. ಯಾವ ಕೆಲಸವನ್ನೇ ಕೈಗೊಳ್ಳಲಿ ಅದು ಪೂರ್ಣವಾಗುವವರೆಗೆ ಸಮಾಧಾನವಿಲ್ಲ. ನಾನು ಅವರ ವ್ಯಕ್ತಿತ್ವಕ್ಕೆ ಮಾರುಹೋದೆನೊ ಅವರು ನನ್ನ ಸ್ವಭವವನ್ನು ಮೆಚ್ಚಿಕೊಂಡರೊ ನನಗೆ ಇದುವರೆಗೂ ಅರ್ಥವಾಗಿಲ್ಲ.

ಪ್ರತಿದಿನ ರಾತ್ರಿ ೯ ಹೊಡೆದು ಹತ್ತು ನಿಮಿಷವಾಗುತ್ತಿದ್ದಂತೆ ನನಗೆ ಫೋನಿನ ಕರೆ: "ಏನಪಾ ಮುಕ್ಕಣ್ಣ ಊಟ ಆಯ್ತಾ? ಏನು ಮಾಡ್ತಾ ಇದೀಯ? ಯಾವ ಕಾರ್ಯಕ್ರಮ ಹಮ್ಮಿಕೊಂಡಿದಿಯಾ? ಇದೆಲ್ಲ ಇರೋದೆ ಮಾರಾಯ, ಮನೆ ಮಾತ್ರ ಮರಿಬೇಡ. ಮನೆಯವರೆಲ್ಲ ಚೆನ್ನಾಗಿದ್ದಾರಾ? ಚನ್ನಾಗಿಟ್ಟಿದಿಯಾ? ಏನು ಊಟಮಾಡಿಸಿದೆ ಮಾರಾಯಾ, ನನಗೆ ನಿನ್ನ ಮನೆ ಊಟಾ ಮರೆಯೋಕೇ ಆಗ್ತಾ ಇಲ್ಲ. ಆ ದಾರಿಯಲ್ಲಿ ಬಂದಾಗಲೊಮ್ಮೆ ನಿನ್ನ ಮನೆಯ ಊಟ ಮಾಡಿಕೊಂಡೇ ಮುಂದೆ ಹೋಗೋದು. ನೀನು ಮನೆಯಲ್ಲಿ ಇರ್ಲಿ ಬಿಡ್ಲಿ ನಾನಂತೂ ಮಗಳಮನೆಗೆ ಬರುವವನೇ" ಅಂತಾ ತಡೆಬಿಟ್ಟ ಪ್ರವಾಹದಂತೆ ಮಾತಾಡಿದ್ದೆ ಮಾತಾಡಿದ್ದು.

ನೀವು ಬನ್ನಿ ಸರ್, ಮನೇನೇ ನಿಮ್ಮದಾಗಿರುವಾಗ ನನ್ನನ್ನು ಕೇಳೋದೇನಿದೆ. ಧಾರಾಳವಾಗಿ ಬನ್ನಿ ಸರ್. ನಮ್ಮ ಆತಿಥ್ಯಸ್ವೀಕರಿಸಿ ನಮ್ಮ ಬೇಸರ ಕಳೆಯಿರಿ ಎಂದು ನಾನು ಹೇಳಿದ್ದೇ ಹೇಳಿದ್ದು.

ಇದು ಯಾವಾಗಲೋ ಒಂದು ದಿನದ ಸಂಭಾಷಣೆಯಲ್ಲ. ದಿನ ದಿನವೂ ಇದ್ದದ್ದೇ. ಯಾವಾಗಲಾದರೊಮ್ಮೆ ಫೋನ್ ಬರದಿದ್ದರೆ ಬಸವಾರಾಧ್ಯ ಸರ್ ಊರಲ್ಲಿ ಇಲ್ಲ ಅಂತಾ ಕಾಣುತ್ತೆ. ಇವತ್ತು ಫೋನು ಬರ್‍ಲಿಲ್ಲ ಅಪ್ಪಾಜಿ! ಎಂದು ಮಕ್ಕಳ ನೆನಪು.

ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಲ್ಲಿ ನನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡುದರಿಂದಲೇನೋ ಅವರು ನನ್ನ ನಿರಂತರ ಚಟುವಟಿಕೆಗಳಿಗೆ ಮಾರುಹೋದುದರಿಂದಲೇನೋ ಶ್ರೀಯುತರು ನನಗೆ ಬಹಳ ಹತ್ತಿರದವರಾಗಿಬಿಟ್ಟಿದ್ದರು. ಅದೆಂಥ ಆತ್ಮೀಯತೆ ನಿರ್ವ್ಯಾಜ ಪ್ರೀತಿ! ಇಂಥ ಸಂಬಂಧ ನನ್ನ ಮತ್ತು ಪ್ರೊ. ಬಸವಾರಾಧ್ಯರ ನಡುವಿತ್ತು. ಇದನ್ನು ಹೇಗೆ ತಾನೇ ಮರೆಯಲಿಕ್ಕೆ ಸಾಧ್ಯ?

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಯುತ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರೂ ಅದರ ಅಹಂಕಾರ ತೋರಿದವರಲ್ಲ. ಸದಾ ಹಸನ್ಮುಖಿ. ಹೊಳಪು ಕಂಗಳು, ಹರಯದವರೂ ನಾಚಿಕೆ ಪಡುವಂಥ ಚಟುವಟಿಕೆ ಕ್ರಿಯಾಶೀಲತ್ವ. 'ಏನಾದರೂ ಮಾಡುತಿರು ಜಗ ನಿನ್ನ ನೋಡುವುದು' ಎಂಬ ತತ್ವಕ್ಕೆ ಅಕ್ಷರಶಃ ಅಂಟಿಕೊಂಡ ಜೀವಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕುರ್ಚಿ ಅವರಿಂದ ಅಲಂಕೃತಗೊಂಡಿತ್ತೋ, ಕುರ್ಚಿಯಿಂದ ಅವರು ಅಲಂಕೃತಗೊಂಡಿದ್ದರೋ ತಿಳಿಯದು. ಅಂತೂ ತಾವು ಕುಳಿತ ಕುರ್ಚಿಗೆ ಗೌರವ ತಂದುಕೊಟ್ಟ ಸನ್ಮಾನ್ಯರವರು.

ಕನ್ನಡ ಸಾಹಿತ್ಯ ಪರಿಷತ್ತು ಸಕಲ ಸದಸ್ಯರ ಸಭೆ ನಮ್ಮ ರಾಣೇಬೆನ್ನೂರಿನಲ್ಲಿಯೇ ನಡೆಸಿಕೊಡಬೇಕೆಂಬ ನನ್ನ ಹಠಕ್ಕೆ ಹಸಿರು ನಿಶಾನೆ ತೋರಿಸಿ, ಅದನ್ನು ಯಶಸ್ವಿಯಾಗುವಲ್ಲಿ ಅವರು ನನಗೆ ತುಂಬಿದ ಪ್ರೋತ್ಸಾಹ, ನೀಡಿದ ಸಹಕಾರ ಇಂದಿಗೂ ಇಲ್ಲಿಯ ಜನರ ಮನದಾಳದಿಂದ ಮರೆಯಾಗಿಲ್ಲ.

ರಾಣೇಬೆನ್ನೂರು ಹಾಗೂ ಹಾವೇರಿಯಲ್ಲಿ ನಡೆಸಿದ ಎರಡು ಜಿಲ್ಲಾ ಸಾಹಿತ್ಯ ಸಮ್ಮೇಳನಗಳಿಗೆ ಅವರು ತೋರಿದ ಪ್ರೋತ್ಸಾಹವೇ ನನಗ ದೊಡ್ಡ ಬಂಡವಾಳ. ಸಮ್ಮೇಳನದ ಕಾರ್ಯವನ್ನು ಕೈಗೆತ್ತಿಕೊಂಡಂದಿನಿಂದ ಅದು ಮುಗಿಯುವವರೆಗೆ ಅದರ ಪ್ರಗತಿಯನ್ನು ಕುರಿತು ಕೇಳಿದ್ದೇ ಕೇಳಿದ್ದು. ನಾನು ಸಂಘಟಿಸಿದ್ದ ಜಿಲ್ಲಾ ಸಮ್ಮೇಳನಗಳ ಖ್ಯಾತಿ-ಕೀರ್ತಿಗಳೆರಡೂ ಅವರಿಗೆ ಸಲ್ಲತಕ್ಕದ್ದು.

ನಾನು ಅದ್ದೂರಿಯಾಗಿ ಅಷ್ಟೇ ಅರ್ಥಪೂರ್ಣವಾಗಿ ಸಂಘಟಿಸಿದ ಜಿಲ್ಲಾ ಸಮ್ಮೇಳನಗಳು ಯಶಸ್ಸನ್ನು ಕಣ್ಣಾರೆಕಂಡು ಮುಂದಿನ ಹಾವೇರಿ ಜಿಲ್ಲಾ ಅಧ್ಯಕ್ಷ ನೀನೇ ಆಗಬೇಕು. ಜಿಲ್ಲೆಗೆ ಮರೆಯಲಾಗದಂತಹ ಕೊಡುಗೆ ನಿನ್ನಿಂದ ಬರಬೇಕು. ಧೈರ್ಯದಿಂದ ಮುನ್ನುಗ್ಗು, ನಿನ್ನ ಹಿಂದೆ ನಾನಿದ್ದೇನೆ ಎಂದು ಹೆಮ್ಮೆಯಿಂದ ಹರಸಿ ನನ್ನನ್ನು ಮುನ್ನುಗ್ಗುವಂತೆ ಮಾಡಿದವರು. ನಾನು ೨೦೦೧ ರ ಅವಧಿಯ ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ಮರು ಆಯ್ಕೆಬಯಸಿ ಚುನಾವಣೆ ಎದುರಿಸಿದೆ. ಆದರೆ ನನ್ನ ಹಿತಶತ್ರುಗಳ ಕುತಂತ್ರಕ್ಕೆ ನಾನು ಬಲಿಯಾಗಿ ಅಲ್ಪ ಮತಗಳ ಅಂತರದಲ್ಲಿ ಅಪಜಯ ಹೊಂದಿದಾಗ ನೊಂದುಕೊಂಡು ಸಾಂತ್ವನಿಸಿದರು. ಅಂಥ ನಿಷ್ಕಪಟ ನಿಷ್ಕಲ್ಮಷ ಅಪ್ಪಟ ಸ್ನೇಹಜೀವಿ ಇಂದಿಗೂ ನನಗೆ ಆದರ್ಶವಾಗಿದ್ದಾರೆ. ಸನ್ಮಾನ್ಯರು ನೂರು ವಸಂತಗಳನ್ನು ಕಾಣಲಿ.

ಅವರ ಬಹುಮುಖಿಯಾದ ಸಾಹಿತ್ಯ ಸೇವೆ ಹೀಗೆಯೇ ಮುಂದುವರಿಯಲಿ. ಜನಮನದಲ್ಲಿ ಅಚ್ಚಳಿಯದೆ ನಿಲ್ಲುವಂಥ ಕೃತಿಗಳು ಅವರಿಂದ ಹೊರಹೊಮ್ಮಲಿ. ಕನ್ನಡ ಸಾಹಿತ್ಯ ಶಾರದೆಯ ಹೆಮ್ಮೆಯ ಪುತ್ರ ಅವರಾಗಲಿ ಎಂಬುದೇ ಆ ಭಗವಂತನಲ್ಲಿ ನನ್ನ ಪ್ರಾರ್ಥನೆ.

XXX

ಸೌಜನ್ಯಮೂರ್ತಿ ಪ್ರೊ. ಎನ್. ಬಸವಾರಾಧ್ಯ

–ಡಾ. ಬಿ.ಎಸ್. ಸ್ವಾಮಿ

ಪ್ರೊ. ಎನ್. ಬಸವಾರಾಧ್ಯರ ಪರಿಚಯ ನನಗೆ ೨೦-೩೦ ವರ್ಷಗಳಷ್ಟು ಹಳೆಯದು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನೆಯ ವಿಭಾಗದ ಉಪನಿರ್ದೇಶಕರಾಗಿದ್ದಾಗ ನಾನು ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಮಾಡಬೇಕೆಂದು ಹೋದೆ. ಆಗ ಅವರು ಡಾ. ಎಲ್. ಬಸವರಾಜು, ಜೀ.ಶಂ. ಪರಮಶಿವಯ್ಯ, ಟಿ.ವಿ. ವೆಂಕಟಾಚಲ ಶಾಸ್ತ್ರಿಗಳೇ ಮೊದಲಾದ ವಿದ್ವಾಂಸರಿಗೆ ನನ್ನನ್ನು ಪರಿಚಯಿಸಿ ಮಾರ್ಗದರ್ಶಕರಾಗುವಲ್ಲಿ ನೆರವಾದರು. ಬಸವಾರಾಧ್ಯರದು ಸರಳ, ಸೌಜನ್ಯದ ವ್ಯಕ್ತಿತ್ವ. ಉಪಕಾರ, ಪ್ರೋತ್ಸಾಹ ಮನೋಭಾವ ಅವರದು. ನಾನು ಮೈಸೂರಿಗೆ ಹೋದಾಗಲೆಲ್ಲಾ ಮಾತನಾಡಿಸಿಕೊಂಡು ಅವರ ಸಲಹೆ ಸೂಚನೆಗಳನ್ನು ಅನುಸರಿಸುತ್ತಾ ಬಂದೆ.

ಆರಾಧ್ಯರು ನಿವೃತ್ತಿ ಹೊಂದಿದ ಮೇಲೆ ಅವರು ಬೆಂಗಳೂರಿಗೆ ಬಂದು ನೆಲೆಸಿದರು. ಆಗ ನಾನು ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೆ. ಒಮ್ಮೆ ಅವರಿಗೆ ಫೋನ್ ಮಾಡಿ "ಸಾರ್... ಚಿಂತನ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿರುವೆ ಅದಕ್ಕೆ ತಮ್ಮ ಸಮ್ಮತಿಯೇ?" ಎಂದು ಕೇಳಲು ಅವರು ಮೈಸೂರು ಆಕಾಶವಾಣಿಯಲ್ಲಿ ಕಹಿ ಅನುಭವಗಳನ್ನು ತಿಳಿಸಿದರು. ನಾನು "ಹಳೆಯ ಕಹಿಯನ್ನು ಮರೆಯಬೇಕು" ಎಂದೆ. "ಬೇಡಿ ನನ್ನನ್ನು ಬಿಟ್ಟುಬಿಡಿ" ಎಂದರು. ನಾನು ಬಿಡಲಿಲ್ಲ. "ಅಲ್ಲಾ ಸಾರ್ ಈಗ ನಾನಿದ್ದೇನೆ. ನಿಮ್ಮನ್ನು ಗೌರವದಿಂದ ನಡೆಸಿಕೊಳ್ಳುವೆ. ಅದಕ್ಕೇಕೆ ಹಿಂಜರಿಯುತ್ತೀರಿ?" ಎಂದು ಒಪ್ಪಿಸಿದೆ. ಅವರು ಚಿಂತನ, ಭಾಷಣ, ಸಂದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅಲ್ಲದೆ ನಾನು ಆಕಾಶವಾಣಿಯಲ್ಲಿ ಇರುವವರೆಗೂ ಕೆಲವು ಹೊಸ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ವಿಷಯಗಳು ಹಾಗೂ ಲೇಖಕರ ಹೆಸರುಗಳನ್ನು ಸೂಚಿಸಿದರು.

ಆಸ್ಥಾನ ವಿದ್ವಾನ್ ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರೀಗಳೊಡನೆ ಅವರ ಒಡನಾಟ ಬಹಳವಾಗಿತ್ತು. ಆಗ ನಾನು ಹೈಸ್ಕೂಲಿನ ಉಪಾಧ್ಯಾಯನಾಗಿದ್ದೆ. ಆಗಾಗ ಬೆಂಗಳೂರಿಗೆ ಬಂದು ಬಿ. ಶಿವಮೂರ್ತಿ ಶಾಸ್ತ್ರೀಗಳನ್ನು ಕಂಡು ಅವರ ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದೆ. ಆಗ ಬಸವಾರಾಧ್ಯರು ಅವರ ಮನೆಗೆ ಬರುತ್ತಿದ್ದರು. ಆಗ ನನಗೆ ಅವರ ಪರಿಚಯವಿರಲಿಲ್ಲ. ಅವರು ಬಿ. ಶಿವಮೂರ್ತಿಶಾಸ್ತ್ರೀಗಳವರ ಸಂಭಾವನಾ ಗ್ರಂಥ "ದೇವಗಂಗೆ"ಗಾಗಿ ಕೆಲಸ ಮಾಡುತ್ತಿದ್ದರು. ಶಿವಮೂರ್ತಿ ಶಾಸ್ತ್ರಿಗಳು ತೀರಿಕೊಂಡ ಮೇಲೂ ಅವರ ಬಗೆಗೆ ಎಷ್ಟು ಅಭಿಮಾನ ಇಟ್ಟುಕೊಂಡಿದ್ದರು ಎಂಬುದಕ್ಕೆ "ಬಿ. ಶಿವಮೂರ್ತಿ ಶಾಸ್ತ್ರೀ ಪ್ರತಿಷ್ಠಾನ" ಎಂದು ಆರಂಭಿಸಿ, ಅನೇಕ ತರುಣ ಉತ್ಸಾಹಿ ಲೇಖಕರನ್ನು ಸೇರಿಸಿ ಕೆಲಸ ಮಾಡಿದರು. ಆದರೆ ಜನರಿಂದ ಸಾಕಷ್ಟು ಪ್ರೋತ್ಸಾಹ ಸಿಗದೆ ಅದು ನಿಂತೇಹೋಯಿತು. ಆದರೂ ಅವರು ಬಹಳ ಪ್ರಯತ್ನಮಾಡಿ ಸರ್ಕಾರದ ವತಿಯಿಂದ, ಬಸವ ಸಮಿತಿಯಲ್ಲಿ ಅವರ ಶತಮಾನೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಿಶೇಷ ಆಹ್ವಾನಿತನಾಗಿ ನನ್ನನ್ನು ಕರೆಸಿದರು. ಇವರು ಆಗಾಗ ತಮ್ಮ ಸಂಪಾದಕತ್ವದಲ್ಲಿನ ಸಂಸ್ಮರಣ ಗ್ರಂಥಗಳಿಗೆ ಲೇಖನ ಬರೆದುಕೊಡುವಂತೆ ಆಹ್ವಾನ ನೀಡಿದರು.

ಎಂಬತ್ತು ವರ್ಷವಾದರೂ ನಿಲ್ಲದ ಉತ್ಸಾಹ, ಸಭೆ-ಸಮಾರಂಭಗಳಲ್ಲಿ ಭಾಗವಹಿಸುವುದು, ಸಲಹೆ ಸೂಚನೆಗಳನ್ನು ನೀಡುವುದು, ಯಾವಾಗಲೂ ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾ ಹುಮ್ಮಸ್ಸಿನಿಂದ ಕಾರ್ಯವನ್ನು ನಿರ್ವಹಿಸುವರು. ಯುವಕರಿಗೆ ಪ್ರೋತ್ಸಾಹ ಕೊಟ್ಟು ಅವರು ಮೇಲೆ ಬರಲು ಕಾರಣಕರ್ತರಾಗಿದ್ದಾರೆ. ಮೂರು ವರ್ಷಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಪುಸ್ತಕಗಳ ಪ್ರಕಟಣೆ, ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಬಸವಾರಾಧ್ಯರು "ಆರಕ್ಕೆ ಹೋದವರಲ್ಲ, ಮೂರಕ್ಕೆ ಬಂದವರಲ್ಲ" ಎಂಬ ಗಾದೆಯಂತೆ ತಾವಾಯಿತು, ತಮ್ಮ ಕೆಲಸವಾಯಿತು. ಯಾವ ರಾಜಕೀಯಕ್ಕೂ ತಲೆ ಹಾಕುವವರಲ್ಲ. ಏನಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ದುಡಿಮೆ. ಪ್ರೊ. ಡಿ.ಎಲ್.ಎನ್., ಕುವೆಂಪು, ತೀ.ನಂ.ಶ್ರೀ., ತ.ಸು. ಶಾಮರಾಯರು ಮುಂತಾದವರ ಶಿಷ್ಯರಾಗಿ ರೂಪುಗೊಂಡವರು. ಇವರು ಯಾರ ಮನಸ್ಸನ್ನೂ ನೋಯಿಸಿದವರಲ್ಲ. ಎಲ್ಲರಿಗೂ ಒಳ್ಳೆಯದನ್ನು ಬಯಸುವವರು. ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ, ತಮಿಳು ಭಾಷೆಗಳಲ್ಲಿ ಪರಿಣತರು. ಸದಾಕಾಲ ಜನರ ಮನದಲ್ಲಿ ಬೇರೂರಿ ನಿಲ್ಲುವಂತ ನಿಘಂಟಿನ ಸಂಪಾದಕತ್ವ ಮತ್ತು ಹಳೆಗನ್ನಡ ಕೃತಿಗಳ ಸಂಪಾದನೆಯ ಕೆಲಸದಲ್ಲಿ ಎಲ್ಲರೂ ಬೆರಳು ಮಾಡಿ ತೋರಿಸುವಂತೆ ಆದರ್ಶರಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ನಿಘಂಟಿನ ಸಂಪಾದಕತ್ವ, ಅನೇಕ ಹಳೆಗನ್ನಡ ಕಾವ್ಯಗಳ ಸಂಪಾದನೆಯನ್ನು ಶ್ರದ್ಧೆ ನಿಷ್ಠೆಗಳಿಂದ ಮಾಡಿ ಮೈಸೂರು ವಿಶ್ವವಿದ್ಯಾಲಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಸರು ತಂದಿದ್ದಾರೆ. ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾಸಂಶೋಧನಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾಗಿ ದುಡಿದಿದ್ದಾರೆ. ಕರ್ನಾಟಕ ಸರ್ಕಾರದ ವಯಸ್ಕರ ಶಿಕ್ಷಣ ಸಮಿತಿಯ ಪಠ್ಯಪುಸ್ತಕ ಸಮಿತಿಯಲ್ಲಿ ಕೆಲಸ ಮಾಡಿದ್ದಾರೆ. ಉಪಾಯನ (ಡಿ.ಎಲ್. ನರಸಿಂಹಾಚಾರ್ ಅವರ ಸಂಭಾವನಾ ಗ್ರಂಥ), ದೇವಗಂಗೆ (ಶಿವಮೂರ್ತಿ ಶಾಸ್ತ್ರಿಗಳ ಸಂಭಾವನಾ ಗ್ರಂಥ), ಅಮರವಾಣಿ (ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರ ಸಂಭಾವನಾ ಗ್ರಂಥ), ಇತ್ತೀಚೆಗೆ ದೇಗುಲಮಠವು ಹೊರತಂದಿರುವ "ನಿರ್ವಾಣಶ್ರೀ" ಸಂಸ್ಮರಣಾ ಗ್ರಂಥಗಳ ಸಂಪಾದಕರಾಗಿ ಇವರು ದುಡಿದಿದ್ದಾರೆ.

ಮೂವತ್ತಕ್ಕೂ ಹೆಚ್ಚು ಸಂಪಾದಿತ ಕೃತಿಗಳು ಹಾಗೂ ವಿವಿಧ ವಿಷಯಗಳನ್ನು ಕುರಿತು ನೂರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಕನ್ನಡ ವಿಶ್ವಕೋಶ, ಕನ್ನಡ ಸಾಹಿತ್ಯ ಚರಿತ್ರೆ, ಪ್ರಬುದ್ಧ ಕರ್ನಾಟಕ, ಕನ್ನಡ ನುಡಿ ಹಾಗೂ ಅನೇಕ ಸಂಸ್ಮರಣಾ ಗ್ರಂಥಗಳಲ್ಲಿ ವಿದ್ವತ್ಪೂರ್ಣ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಇಂಗ್ಲೀಷ್-ಕನ್ನಡ ನಿಘಂಟು, ಪರಿಷ್ಕರಣೆಯ ಯೋಜನೆಯಲ್ಲಿ ಸಂಪಾದಕ ಸಮಿತಿ, ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ಸರ್ಕಾರದ "ಕನ್ನಡದಲ್ಲಿ ಕಛೇರಿ ಕೈಪಿಡಿ" ತಯಾರಿಕೆ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಸಮಿತಿಗಳಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿರುವರು. ಅನೇಕ ಸಂಘ, ಸಂಸ್ಥೆಗಳಲ್ಲಿನ ಸಮ್ಮೇಳನಗಳು, ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಿ ತಮ್ಮ ಪ್ರಬಂಧಗಳನ್ನು ಮಂಡಿಸಿ ಮೆಚ್ಚುಗೆ ಪಡೆದಿದ್ದಾರೆ.

೧೯೯೫ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ೧೯೯೭ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಸುತ್ತೂರು ಮಠದಿಂದ ವೀರಶೈವ ಸಾಹಿತ್ಯ ಶ್ರೇಷ್ಠ ಕೃತಿ ಪ್ರಶಸ್ತಿ, ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಳನ ಭಾರತ ಭಾಷಾ ಭೂಷಣ ಪ್ರಶಸ್ತಿಯನ್ನು ೧೯೯೯ರಲ್ಲಿ ನೀಡಿ ಗೌರವಿಸಿದೆ. ಶಿವಕಮಲ ಪ್ರಶಸ್ತಿ ಮುಂತಾದುವುಗಳು ಇವರ ಪಾಲಿಗೆ ಬಂದಿವೆ.

ಆರಾಧ್ಯರು ಮಾಡಿದ ಸಾಹಿತ್ಯ ಕ್ಷೇತ್ರದಲ್ಲಿನ ಹಳೆಯ ಕೃತಿಗಳ ಸಂಪಾದನೆ ಹಾಗೂ ನಿಘಂಟು ಸಂಪಾದಕತ್ವ ಕೆಲಸವನ್ನು ಯಾರೂ ಮರೆಯುವಂತಿಲ್ಲ. ಪ್ರೊ. ಬಸವಾರಾಧ್ಯರ ಕೆಲಸ ಸಾಹಿತ್ಯ ಕ್ಷೇತ್ರದಲ್ಲಿ ಗಟ್ಟಿಕಾಳಿನಂತೆ ಸರ್ವಕಾಲಕ್ಕೂ ಉಳಿಯುವಂಥವು, ಅಳಿಯುವಂಥವಲ್ಲ. ಇವರ ಸಂಪಾದನೆಯ ಕೆಲಸ ಸೃಜನಶೀಲ ಸಾಹಿತ್ಯ ರಚನೆಗೇನೂ ಕಡಿಮೆ ಇಲ್ಲ. ಇತ್ತೀಚೆಗಂತೂ ಹಳಗನ್ನಡ ಪದ್ಯ ಕೃತಿಗಳನ್ನು ಅರ್ಥಮಾಡಿಕೊಂಡು ಪಾಠ ಹೇಳುವ ಉಪಾಧ್ಯಾಯರು ಕಡಿಮೆಯಾಗಿದ್ದಾರೆ. ಈ ಸಂಗ್ರಹ-ಸಂಪಾದನೆ ಕೆಲಸ ಮಾಡುವ ತಾಳ್ಮೆಯನ್ನೂ ಕಳೆದುಕೊಂಡಿದ್ದಾರೆ. ಆದರೆ ಆರಾಧ್ಯರು ತಮ್ಮ ಜೀವನದ ಬಹುಭಾಗವನ್ನು ಈ ಕೆಲಸದಲ್ಲೇ ತೊಡಗಿಸಿಕೊಂಡು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಅವರ ವಿದ್ವತ್ತಿನ ಬಗ್ಗೆ ಎರಡು ಮಾತಿಲ್ಲ.

ನಾ ಕಂಡಂತೆ - ಶ್ರೀ ಬಸವಾರಾಧ್ಯರು

-ಜಯದೇವಪ್ಪ ಜೈನಕೇರಿ

ಸರಳ ಸಜ್ಜನ ಪ್ರೊ. ಬಸವಾರಾಧ್ಯರನ್ನು ಸುಮಾರು ಇಪ್ಪತ್ತು ವರ್ಷಗಳಿಂದ ಬಲ್ಲೆನಾದರೂ ಅವರ ಆತ್ಮೀಯ ವಲಯವನ್ನು ಪ್ರವೇಶಿಸಲು ಸಾಧ್ಯವಾಗಿದ್ದು ಸುಮಾರು ೮ ವರ್ಷಗಳ ಕೆಳಗೆ ಎನ್ನಬಹುದು. ಭಾಷಾವಿಜ್ಞಾನಿಯಾಗಿ, ಕನ್ನಡ ನಿಘಂಟು ಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಸುಮಾರು ಐದು ದಶಕಗಳ ನಿಕಟ ಸಂಪರ್ಕ ಹೊಂದಿದವರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಹುದ್ದೆಗಳನ್ನು ನಿರ್ವಹಿಸುತ್ತಾ ಮೂರುವರ್ಷ ಅಧ್ಯಕ್ಷರಾಗಿ ಅಪೂರ್ವವಾದ ಸೇವೆ ಸಲ್ಲಿಸಿದ್ದಾರೆ. ಎತ್ತರ ನಿಲುವಿನ ೭೮ರ ಇಳಿವಯಸ್ಸಿನಲ್ಲಿ ನಡುಭಾಗದ ಸಪೂರ ಮೈಕಟ್ಟಿನ ಪ್ರೊ. ಬಸವಾರಾಧ್ಯರೊಂದಿಗೆ ಮಾತನಾಡುವುದೇ ಒಂದು ಸಂತಸದ ಅನುಭವ. ಅಪಾರ ಪಾಂಡಿತ್ಯ ಹೊಂದಿದ ವಿದ್ವಾಂಸರಾದರೂ ಸರಳವಾಗಿ ಎಲ್ಲರೊಂದಿಗೆ ಬೆರೆಯುವ ಅವರ ರೀತಿ ಅನನ್ಯವಾದದ್ದು. ಪ್ರಾಚೀನ ಹಸ್ತಪ್ರತಿ ಇರಲಿ, ನಿಘಂಟುವಿರಲಿ ಅದರ ಮೂಲವನ್ನು ಶೋಧಿಸುವುದರಲ್ಲಿ ಪ್ರೊ. ಬಸವಾರಾಧ್ಯರದು ಎತ್ತಿದ ಕೈ.

ನಾನು ಸುಮಾರು ೮ ವರ್ಷಗಳ ಕೆಳಗೆ ಅವರಿಗೊಂದು ಪತ್ರ ಬರೆದು ನ್ಯಾಮತಿ ಜೈನಕೇರಿ ಪ್ರಭಣ್ಣನವರು ರಚಿಸಿದ ಅಪೂರ್ವವಾದ ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತಿನ ಕತ್ತಲು ಕೋಣೆಯಲ್ಲಿದೆ. ದಯವಿಟ್ಟು ಕ.ಸಾ.ಪ. ಅದನ್ನು ಪರಿಷ್ಕರಿಸಿ ಪ್ರಕಟಿಸಿ ಪ್ರಭಣ್ಣನವರ ಹೆಸರನ್ನು ಉಳಿಸಬೇಕೆಂದು ಪ್ರಾರ್ಥಿಸಿ ವಿವರಗಳನ್ನು ಕಳಿಸಿದ್ದೆನು. ತಕ್ಷಣವೇ ಅವರಿಂದ ಉತ್ತರ ಬಂದಿತು. ಜೈನಕೇರಿ ಪ್ರಭಣ್ಣನವರು ಪ್ರಕಾಂಡ ಪಂಡಿತರು, ಅವರು ರಚಿಸಿದ ನಿಘಂಟನ್ನು ಪುನರ್ ಪ್ರತಿ ಮಾಡಿಸಿದ್ದೇನೆ. ಅದರಲ್ಲಿ ಬಹುಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ-ಕನ್ನಡ ನಿಘಂಟಿನಲ್ಲಿ ಬಳಸಿಕೊಂಡಿದ್ದೇವೆ. ಅವರ ಹೆಸರನ್ನು ಕೃತಿಯಲ್ಲಿ ಸ್ಮರಿಸಿದ್ದೇವೆ ಎಂದೂ, ಯಾರಾದರೂ ಪ್ರತ್ಯೇಕವಾಗಿ ಪ್ರಕಟಿಸಲು ಮುಂದೆ ಬಂದರೆ ಕ.ಸಾ.ಪ. ಯಾವುದೇ

ಪ್ರತಿಫಲಾಪೇಕ್ಷೆ ಇಲ್ಲದೆ ಒಪ್ಪಿಗೆ ಕೊಡಿಸುವುದಾಗಿ ತಿಳಿಸಿದರು. ಇದು ಅವರ ಸಹೃದಯತೆಗೆ ಸಾಕ್ಷಿಯಾಗಿ ನನ್ನ ಮನಸ್ಸಿನಲ್ಲಿ ಇನ್ನೂ ಉಳಿದಿದೆ. ಹಳೆಯ ಮತ್ತು ಹೊಸ ತಲೆಮಾರಿನ ಕೊಂಡಿಯಂತಿರುವ ಪ್ರೊ. ಬಸವಾರಾಧ್ಯರು ಕಳೆದ ವರ್ಷ ೨೪-೫-೨೦-೦೩ ರಂದು ಶಿವಮೊಗ್ಗ ಕರ್ನಾಟಕ ಸಂಘವು ಏರ್ಪಡಿಸಿದ್ದ ಪಂಡಿತ ಬಿ. ಶಿವಮೂರ್ತಿ ಶಾಸ್ತ್ರಿಗಳವರ ನೂರರ ನೆನಪು ಕಾರ್ಯಕ್ರಮಕ್ಕೆ ನಮ್ಮ ಆಹ್ವಾನವನ್ನು ಒಪ್ಪಿ ಆಗಮಿಸಿದರು. ಬಿ. ಶಿವಮೂರ್ತಿಶಾಸ್ತ್ರಿ ಪ್ರತಿಷ್ಠಾನದ ಅಧ್ಯಕ್ಷರೂ ಆಗಿರುವ ಶ್ರೀಯುತರು ದಿ. ಶಿವಮೂರ್ತಿ ಶಾಸ್ತ್ರಿಗಳ ಜೀವನ-ಸಾಧನೆ ಕುರಿತು ಅತ್ಯಂತ ಉಪಯುಕ್ತವಾದ ಉಪನ್ಯಾಸ ನೀಡದರು. ಆ ಸಮಾರಂಭಕ್ಕೆ ಪಂಡಿತ ಬಿ. ಶಿವಮೂರ್ತಿಶಾಸ್ತ್ರಿಗಳ ಸೊಸೆ ಮಾಜಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದರನ್ನೂ ಕರೆತಂದು ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಿಕೊಟ್ಟದ್ದು ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ. ಈ ಸಂದರ್ಭದಲ್ಲಿ ಶ್ರಿಯುತರ ಹತ್ತಿರದ ಪರಿಚಯವಾಗಿ ಅವರನ್ನು ಸತ್ಕರಿಸುವ ಅವಕಾಶ ದೊರಕಿದ್ದು ನನ್ನ ಭಾಗ್ಯ. ಶ್ರೀಯುತರ ಪಾಂಡಿತ್ಯದ ಪರಿಚಯ, ಸರಳತೆ, ಹಮ್ಮುಬಿಮ್ಮುಗಳಿಲ್ಲದ ವಿಶ್ವಾಸದ ಮಾತುಗಳು ಅವರ ಬಗ್ಗೆ ಗೌರವ ಇಮ್ಮಡಿಸಲು ಸಹಕಾರಿಯಾಯಿತು. ಅಂದಿನ ಉಪನ್ಯಾಸದಲ್ಲಿ ಪ್ರೊ. ಬಸವಾರಾಧ್ಯರು ಹಿಂದೆ ನಾನು ಜೈನಕೇರಿ ಪ್ರಭಣ್ಣನವರ ಕುರಿತು ಬರೆದ ಪತ್ರವನ್ನೂ ಅದಕ್ಕೆ ಅವರು ಬರೆದ ಉತ್ತರದ ಪ್ರತಿಯನ್ನೂ ತಂದು ಪ್ರಸ್ತಾಪಿಸಿದ್ದು ನನಗೆ ವಿಸ್ಮಯವನ್ನುಂಟುಮಾಡಿತು. ಸುಮಾರು ೭-೮ ವರ್ಷಗಳ ಕೆಳಗೆ ನಡೆದ ಪತ್ರ ವ್ಯವಹಾರದ ಪ್ರತಿಗಳನ್ನು ಅಚ್ಚುಕಟ್ಟಾಗಿ ತಂದು ಉದಾಹರಿಸಿದ್ದು ನೋಡಿ ಅವರ ಕಾರ್ಯದ ಶಿಸ್ತು ಮತ್ತು ಆಸಕ್ತಿಗಳ ಪ್ರತ್ಯಕ್ಷ ದರ್ಶನ ನನಗಾಯಿತು.

ಪ್ರೊ. ಬಸವಾರಾಧ್ಯರನ್ನು ೨೯-೧೦-೨೦೦೩ರಂದು ಮತ್ತೊಮ್ಮೆ ಶಿವಮೊಗ್ಗಕ್ಕೆ ಕರೆಸಿಕೊಳ್ಳುವ ಅವಕಾಶವಾಗಿದ್ದು ಪ್ರತಿವರ್ಷ ಕರ್ನಾಟಕ ಸಂಘ ನೀಡುವ ಕನ್ನಡ ನಾಡಿನ ಶ್ರೇಷ್ಠ ಭಾಷಾವಿಜ್ಞಾನಿ ಡಾ. ಶಂ.ಬಾ. ಜೋಶಿ ಪ್ರಶಸ್ತಿಯನ್ನು ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ೨೦೦೩ನೇ ಸಾಲಿಗೆ ಪ್ರೊ. ಬಸವಾರಾಧ್ಯರಿಗೆ ಸರ್ವಾನುಮತದಿಂದ ಕೊಡಲು ತೀರ್ಮಾನಿಸಿ ದೂರವಾಣಿಯಲ್ಲಿ ಅವರ ಒಪ್ಪಿಗೆಯನ್ನು ಕೇಳಿದೆ. ಅದಕ್ಕೆ ಶ್ರೀಯುತರು ಬಹಳ ಸಂಕೋಚದಿಂದ, ಸೌಜನ್ಯದಿಂದ, ಗೌರವದಿಂದ ಡಾ. ಶಂ.ಬಾ. ಜೋಶಿ ಪ್ರಶಸ್ತಿ ಮತ್ತು ನಗದು ಪುರಸ್ಕಾರ ಸ್ವೀಕರಿಸಲು ಒಪ್ಪಿ ಶಿವಮೊಗ್ಗಕ್ಕೆ ಬಂದರು. ಕರ್ನಾಟಕ ಸಂಘದ ಆತಿಥ್ಯವನ್ನೂ ಪ್ರಶಸ್ತಿಯನ್ನೂ ಸ್ವೀಕರಿಸಿ, ಅವರು ಮಾಡಿದ ಭಾಷಣ ಅತ್ಯಂತ ಮನೋಜ್ಞವಾಗಿತ್ತು. ಡಾ. ಶಂ.ಬಾ. ಅವರ ಕುರಿತು, ಅವರ ಭಾಷಾ ಸಂಶೋಧನೆ ಕುರಿತು, ಅಪೂರ್ವವಾದ ಮಾಹಿತಿಗಳನ್ನು ನೀಡಿದರು. ಈ ಸಮಾರಂಭದ ಮೂಲಕ ಪ್ರೊ. ಬಸವಾರಾಧ್ಯರನ್ನು ಇನ್ನೂ ಹತ್ತಿರದಿಂದ ಅರಿಯಲು ಅವಕಾಶವಾಗಿದ್ದು ನನ್ನ ಪಾಲಿನ ಹೆಮ್ಮೆ ಎಂದೆ ಭಾವಿಸುತ್ತೇನೆ.

ಸುಮಾರು ಆರು ದಶಕಗಳಿಂದಲೂ ಅಧ್ಯಯನ ಮಾಡುತ್ತ, ಬರೆಯುತ್ತಾ ಭಾಷಾ ಸಂಶೋಧನೆ ನಡೆಸುತ್ತಾ, ನಿಘಂಟು ಪರಿಷ್ಕರಣ, ಹೊಸ ಅರ್ಥ ಪ್ರಯೋಗಗಳನ್ನು ನಡೆಸುತ್ತಲೇ ಸೃಜನಶೀಲ ಸಾಹಿತ್ಯವನ್ನು ನಿರಂತರವಾಗಿ ಸೃಷ್ಟಿಸುತ್ತಾ ಬಂದಿರುವ ಪ್ರತಿಭಾವಂತರು ಪ್ರೊ. ಬಸವಾರಾಧ್ಯರು. ಭಾಷೆ, ನಿಘಂಟು, ಸಂಶೋಧನೆ ಸಮೃದ್ಧವಾಗಿ, ವೈವಿಧ್ಯಮಯವಾಗಿ ಪ್ರಯೋಗಶೀಲತೆಯನ್ನು ಇವರಂತೆ ಕಾಯ್ದುಕೊಂಡು ಬಂದಿರುವ ಕೆಲವೇ ವಿದ್ವಾಂಸರು ಕನ್ನಡ ಸಂದರ್ಭದಲ್ಲಿ ಕಂಡುಬರುತ್ತಾರೆ.

ಪ್ರೊ. ಬಸವಾರಾಧ್ಯರ ವಿಶೇಷತೆ ಎಂದರೆ ಅವರು ಪರಂಪರೆಯೊಂದಿಗೆ ನಡೆಸುವ ನಿರಂತರ ಸಂವಾದ ಮತ್ತು ಅನುಸಂಧಾನಗಳು. ನಿಜವಾದ ಭಾಷಾ ಸಂಶೋಧಕ ಮತ್ತೆ ಮತ್ತೆ ಪ್ರಾಚೀನತೆಯ ಕಡೆಗೆ ಹೊರಳುವುದು ಅತ್ಯಂತ ಅಗತ್ಯವಾಗಿದೆ. ಅವರ ಸಮಕಾಲೀನರಾದ ಎಷ್ಟೋ ಸಂಶೋಧಕರು, ಸಂಶೋಧನೆಯಂತಹ ನೀರಸ ಕಾರ್ಯದಲ್ಲಿ ಆಸಕ್ತಿ ಕಳೆದುಕೊಂಡಿರುವ ಸತ್ಯ ನಮ್ಮ ಮುಂದಿದೆ. ನಾವು ಯಾವ ಭಾಷಾ ಸಾಹಿತ್ಯ ಸಂದರ್ಭದಲ್ಲಿ ಬರೆಯುತ್ತಿದ್ದೇವೆಯೋ ಆ ಭಾಷಾ ಸಾಹಿತ್ಯ ಪರಂಪರೆಯ ಪ್ರಜ್ಞೆ ಇದ್ದಾಗ ಮಾತ್ರ ನಮ್ಮ ಬರಹಕ್ಕೆ ನಿಜವಾದ ಮೌಲ್ಯ ಬರುತ್ತದೆ ಎಂದು ನಂಬಿದವರು ಪ್ರೊ. ಬಸವಾರಾಧ್ಯರು. ತಮ್ಮ ಸಮಕಾಲೀನತೆಯನ್ನು ಮೀರಿ ಮತ್ತೆ ಮತ್ತೆ ಪ್ರಾಚೀನತೆಯ ಕಡೆ ಹೊರಳಿ ಮಹತ್ವದ ಮನಸ್ಸುಗಳೊಂದಿಗೆ ಭಾಷೆಯೊಂದಿಗೆ

ಸಂವಹನ ನಡೆಸುತ್ತಾ ಬಂದಿದ್ದಾರೆ. ಪ್ರಾಚೀನ ಕವಿಗಳಾದ ಕಾಳಿದಾಸ, ವಾಲ್ಮೀಕಿ, ವ್ಯಾಸ, ಪಂಪ, ಕುಮಾರವ್ಯಾಸರೊಂದಿಗೆ ಆಯಾ ಕಾಲದ ಭಾಷಾ ಚಳುವಳಿಗಳಿಂದ ಹುಟ್ಟಿದ ಭಾಷಾ ವೈವಿಧ್ಯದೊಂದಿಗೆ ಸಂವಾದ ನಡೆಸುತ್ತಲೇ ಅರ್ಥ ವೈವಿಧ್ಯವನ್ನು ಗುರುತಿಸುತ್ತಾ ಬಂದಿದ್ದಾರೆ. ಪ್ರೊ. ಬಸವಾರಾಧ್ಯರು ಕನ್ನಡ ಭಾಷಾ ಸಂಪತ್ತಿಗೆ ಅಗತ್ಯವಾದದ್ದನ್ನು ತಮ್ಮೊಳಗೆ ಅರಗಿಸಿಕೊಳ್ಳುತ್ತಲೇ ಪರಂಪರೆಯ ಮತ್ತು ಸಮಕಾಲೀನ ಸಾಹಿತ್ಯ, ವಿಮರ್ಶೆಯನ್ನು ವಿವೇಚನೆಯಿಂದ ಬಳಸುತ್ತಾ ಪ್ರತಿಕ್ರಿಯಿಸುತ್ತಾ ಬಂದಿದ್ದಾರೆ. ಅವರು ಕನ್ನಡ ಸಾರಸ್ವತ ಲೋಕವನ್ನು ಪ್ರವೇಶಿಸಿದ್ದು ನವೋದಯದ ಉತ್ಕರ್ಷದ ಕಾಲದಲ್ಲಾದರೂ ಆರಿಸಿಕೊಂಡದ್ದು ಭಾಷಾ ಸಾಹಿತ್ಯ, ನಿಘಂಟು, ಕನ್ನಡದ ಮೂಲ ಚೂಲಗಳನ್ನು ಹುಡುಕುವತ್ತ.

ಕೋಲಾರ ಜಿಲ್ಲೆ, ಗೌರಿಬಿದನೂರು(ತಾ) ನಾರಸಿಂಹನಹಳ್ಳಿಯಂತಹ ಗ್ರಾಮೀಣ ಪರಿಸರದಲ್ಲಿ ಶ್ರೀಮತಿ ಗಿರಿಜಮ್ಮ-ಶ್ರೀ ನಂಜುಂಡಾರಾಧ್ಯರ ಪುತ್ರರಾಗಿ ೨೦-೨-೧೯೨೬ ರಂದು ಜನಿಸಿದ ಬಸವಾರಾಧ್ಯರು ಹುಟ್ಟಿದ ಪರಿಸರದ ದಟ್ಟವಾದ ಅನುಭವ, ನೆನಪುಗಳೊಂದಿಗೆ ಬೆಂಗಳೂರು ನಗರ ಪ್ರವೇಶಿಸಿ ನಗರ ಕೇಂದ್ರಿತ ಜೀವನದಲ್ಲಿ ಕಳೆದುಹೋಗದೆ ತಮ್ಮ ಪಾಂಡಿತ್ಯದ ಮೂಲಕ ಕನ್ನಡ ನಾಡಿಗೆ ಚಿರಪರಿಚಿತರಾಗಿ ಬೆಳೆದದ್ದು ಇತಿಹಾಸ. ಅಭಿಜಾತ ಕಾವ್ಯ ಪರಂಪರೆಯ ಸಂಸ್ಕಾರಗಳಿಂದ ರೂಪುಗೊಂಡ ಶ್ರೀ ಬಸವಾರಾಧ್ಯರು ಸ್ವಭಾವತಃ ಯಾವುದೇ ಅಬ್ಬರ ಪ್ರಚಾರಗಳಿಂದ ದೂರ ಉಳಿದವರು. ಪ್ರಶಾಂತ ಮನಸ್ಥಿತಿಯನ್ನು ಕಾಯ್ದುಕೊಂಡು ಬಂದವರು. ಪ್ರಾಚೀನ ಕಾವ್ಯಗಳನ್ನು ಕಾವ್ಯಕೌಶಲ್ಯಗಳನ್ನು ಆಧುನಿಕ ಮನಸ್ಸುಗಳಿಗೆ ಸಮ್ಮತವಾಗುವಂತೆ ವ್ಯಾಖ್ಯಾನಿಸುವ, ಪುನಾರಚಿಸುವ ಅವರ ರೀತಿ ಅನನ್ಯವಾದದ್ದು.

ಭಾಷಾ ಸಂಶೋಧನೆ, ನಿಘಂಟು ಕಾರ್ಯಗಳನ್ನು ಸುಮಾರು ಐದು ದಶಕಗಳಿಂದ ಅದೊಂದು ಗಂಭೀರವಾದ ಕಲೆಗಾರಿಕೆ ಎಂಬ ಶ್ರದ್ಧೆಯಿಂದ ನಡೆಸಿಕೊಂಡು ಬಂದಿರುವ ಪ್ರೊ. ಬಸವಾರಾಧ್ಯರು ಸಂಕಲ್ಪ ಶಕ್ತಿಯನ್ನು ಅಭಿನಂದಿಸಬೇಕಾದ್ದು ಎಲ್ಲ ಕನ್ನಡಗರ ಕರ್ತವ್ಯವೂ ಹೌದು. ೭೮ ಪಾಂಡಿತ್ಯಪೂರ್ಣ ವಸಂತಗಳನ್ನು ಕಂಡಿರುವ ಶ್ರೀ ಬಸವಾರಾಧ್ಯರು ನೂರ್ಕಾಲ ಬಾಳಲಿ ಎಂದು ಆಶಿಸುತ್ತೇನೆ.

ಹಿರಿಯ ವಿದ್ವಾಂಸರಾದರೂ, ನಾನು ಇಳಿವಯಸ್ಸಿನಲ್ಲಿ ರಚಿಸಿದ ನನ್ನ ಐದನೇ ಕೃತಿ 'ಸಾಹಿತ್ಯ ಸೌರಭ' ಪ್ರಬಂಧ ಸಂಕಲನವನ್ನು ಸಮಗ್ರವಾಗಿ ಓದಿ ಮೌಲಿಕವಾದ ವಿಮರ್ಶೆಯನ್ನು ಬರೆದು 'ಸ್ವಪ್ನ ಲೋಕ' ಮಾಸ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಅವರ ಹೃದಯ ವೈಶಾಲ್ಯತೆಯನ್ನೂ, ನನ್ನ ಬಗೆಗಿನ ಪ್ರೀತಿಯನ್ನೂ ವ್ಯಕ್ತಪಡಿಸುತ್ತದೆ. ಅವರ ಸಹೃದಯತೆಗೆ ಕೃತಜ್ಞತೆಯ ನುಡಿನಮನಗಳು.

ಪ್ರೊ ಎನ್. ಬಸವಾರಾಧ್ಯ ಮತ್ತು ನಾನು

-ಡಾ. ಕೆ.ವಿ. ಚಂದ್ರಣ್ಣಗೌಡ

ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಬಸವಾರಾಧ್ಯರು ನನಗೆ ಪರಿಚಯ. ಈ ಪರಿಚಯ ಸಾವಿರದ ಒಂಬೈನೂರ ತೊಂಬತ್ತರಿಂದ ಗಾಢವಾಯಿತು. ಕನ್ನಡಿಗರ ಸಾರ್ವಭೌಮ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಾನು ಸ್ಪರ್ಧಿಯಾಗಿ ನಿಂತಾಗ; ಇವರ ಬೆಂಬಲ ಮತ್ತು ಆಶೀರ್ವಾದ ಕೇಳಿದೆ. 'ಯುವಕ ನೀನೇ ಉತ್ತಮ ಸೇವೆ ಮಾಡುವುದಾದರೆ, ನನ್ನ ಬೆಂಬಲ-ಆಶೀರ್ವಾದ ನಿನಗೇ' ಎಂದು ಅಭಯವಿತ್ತರು. ಅಧ್ಯಕ್ಷನಾಗಿ ಗೆದ್ದ ನಂತರ ನನಗೆ ಸಲಹೆ-ಸೂಚನೆ-ಮಾರ್ಗದರ್ಶನ ನೀಡಿದರು. ಅಂದಿನಿಂದ ಇಂದಿನವರೆವಿಗೂ ನನಗೂ ಮತ್ತು ಬಸವಾರಾಧ್ಯರಿಗೂ ನಿಕಟ ಪ್ರೀತಿ-ವಿಶ್ವಾಸ ಸಂಬಂಧ ಬೆಸೆದುಕೊಂಡಿದೆ.

'ನಡೆದಾಡುವ ನಿಘಂಟು' ಎಂದೇ ಖ್ಯಾತರಾಗಿರುವ ಶ್ರೀಯುತರು ಸ್ನೇಹಪ್ರಿಯರು. ತಮ್ಮ ವಯೋಮಾನವನ್ನು ಮರೆತು ಎಲ್ಲರೊಂದಿಗೆ ಬೆರೆಯುವ ನಿಗರ್ವಿಗಳು. ಯಾರ ಮನಸ್ಸಿಗೂ ನೋವುಂಟು ಮಾಡಬಾರದೆಂಬ ಸದ್ಭಾವದ ಸಮತಾವಾದಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿಯೂ ತುಂಬು ಸಂಕೋಚದಿಂದಲೇ ಸ್ಪರ್ಧೆಗೆ ಇಳಿದ ಸಹೃದಯಿ. 'ನನ್ನನ್ನು ಚುನಾವಣೆಗೆ ಎಳೆತಂದು, ಏನೋ ಮಾಡುವಿರಿ' ಎಂದು ಸದಾ ನಮ್ಮೊಂದಿಗೆ ಮುನಿಸಿ ಮಾತನಾಡುತ್ತಿದ್ದ ಮುಗ್ಧತೆ. ಇವೆಲ್ಲವೂ ಬಸವಾರಾಧ್ಯರಲ್ಲಿರುವ ತುಂಬಾ ದೊಡ್ಡ ಗುಣಗಳು.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾದ ಮೇಲೆ; ಪ್ರವಾಹದ ದಿವಸಗಳನ್ನು ಹೊರತುಪಡಿಸಿದರೆ, ಉಳಿದಂತೆ ಪ್ರತಿನಿತ್ಯ ಶಿಸ್ತಾಗಿ ಕಛೇರಿಗೆ ಹಾಜರಾಗುವಂತೆ ತಪ್ಪದೆ ಬಂದು ಕೆಲಸ-ಕಾರ್ಯಗಳಲ್ಲಿ ಮಗ್ನವಾಗುತ್ತಿದ್ದ ಶಿಸ್ತಿನ ಸಿಪಾಯಿ. ಒಂದು ವೇಳೆ ಗೌರವ ಕಾರ್ಯದರ್ಶಿಯಾದ ನಾನು, ಕೆಲಸದ ನಿಮಿತ್ತ ತಡವಾಗಿ ಪರಿಷತ್ತಿಗೆ ಹೋಗುವುದರೊಳಗೆ, 'ಎಲ್ಲಿ? ಕಾರ್ಯದರ್ಶಿಯವರು ಇನ್ನೂ ಬರಲೇ

ಇಲ್ಲವಲ್ಲ'ವೆಂದು ದೂರವಾಣಿ ಮಾಡುತ್ತಿದ್ದ ಮಗುವಿನಂತಹ ಮನಸ್ಸು. ಅಂದು ಪರಿಷತ್ತಿಗೆ ಬರುವವರೊಂದಿಗೆ, ನಗುನಗುತ್ತ ಮಾತನಾಡಿ- 'ನಿಮಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ, ಮಹಡಿಯ ಮೇಲಿದ್ದಾರೆ ನೋಡಿ, ಕಾರ್ಯದರ್ಶಿಗಳು ಅವರೊಂದಿಗೆ ಮಾತನಾಡಿ' ಎಂದು ಅವರನ್ನು ಸಾಗಿ ಹಾಕುತ್ತಿದ್ದ ಅಧ್ಯಕ್ಷರಾಗಿದ್ದರು. ಹಲವಾರು ಬಾರಿ ಕ್ಲಿಷ್ಟ ಸಮಸ್ಯೆಗಳು ಮುಂದಾದಾಗ; ನಮ್ಮೊಡನೆ ಚರ್ಚೆ ಮಾಡಿ, ಪರಿಷತ್ತಿನ ಹಿತಚಿಂತಕರೊಂದಿಗೆ ಚರ್ಚಿಸಿ, ತೀರ್ಮಾನ ಕೈಗೊಳ್ಳುತ್ತಿದ್ದರು. ಊಟ-ತಿಂಡಿಗಳ ಬಗೆಗೆ ಚಿಂತಿಸದೆ, ಸಮಯ ಸಿಕ್ಕರೆ ಇಡ್ಲಿ-ರವೆ ಇಡ್ಲಿಗಳೊಂದಿಗೆ ಸುಮಾರು ಮೂರು ವರ್ಷಗಳ ಕಾಲ, ನಮ್ಮೊಂದಿಗೆ ಅವರೂ ಕೂಡ ಕಾಲ ಹಾಕಿರುವರೆಂದರೆ ಅತಿಶಯೋಕ್ತಿಯ ಮಾತಲ್ಲ.

'ಎಲ್ಲರೊಂದಿಗೂ ನಗು ನಗುತ್ತಾ ಮಾತನಾಡಿ, ಬಂದವರಿಗೆ ಸರಿಯಾದ ಮಾಹಿತಿ ನೀಡಿ, ಆಗ ನಿಮ್ಮ ಆರೋಗ್ಯವೂ ಸರಿಯಾಗಿರುತ್ತದೆ ಬಂದವರ ಆರೋಗ್ಯವೂ ಹೆಚ್ಚುತ್ತದೆ' ಎಂದು ಹೇಳುತ್ತಿದ್ದ ಆರೋಗ್ಯವಂತ ಮನಸ್ಸು. ಬೇಡದ ವಿಷಯಗಳೊಂದಿಗೆ ಎಂದೂ ಚರ್ಚೆಗೆ ಇಳಿಯದ; ಯಾರಿಗೆ ಏನೋ ಆದರೆ 'ಹಮಾರ ಕ್ಯಾ ಜಾತ' ಎಂದು ಹಾಸ್ಯವಾಗಿ ಹೇಳುತ್ತಿದ್ದ ಮಾತು ಸದಾ ನೆನಪಿಗೆ ಬಾರದಿರದು. ಇವರ ಅವಧಿಯಲ್ಲಿ ಹಲವಾರು ಕೃತಿಗಳು ಮರುಮುದ್ರಣವಾದವು. ಸುಮಾರು ನಾಲ್ಕು ನೂರರಿಂದ ಐದುನೂರು ಪುಸ್ತಕಗಳು ಹೊರಬಂದವು. ಅಖಿಲ ಭಾರತ ಅರವತ್ತೇಳು ಮತ್ತು ಅರವತ್ತೆಂಟನೇ ಕನ್ನಡ ಸಾಹಿತ್ಯ ಸಮ್ಮೇಳನಗಳು - ಕನಕಪುರ ಮತ್ತು ಬಾಗಲಕೋಟೆಗಳಲ್ಲಿ ನಡೆದು ಇತಿಹಾಸದ ದಾಖಲೆಗಳಾಗಿ ನಿಂತಿವೆ.

'ನ ಭೂತೋ ನ ಭವಿಷ್ಯತಿ' ಎಂಬ ಮಾತಿನಂತೆ ಅಖಿಲ ಭಾರತ ಅರವತ್ತೇಳನೆ ಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರು ಗ್ರಾಮಾಂತರದ ಕನಕಪುರದಲ್ಲಿ ನಡೆದಿರುವುದು; ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳ ಪೈಕಿ ತುಂಬ ಅವಿಸ್ಮರಣೀಯವಾಗಿದೆ. ಈ ಸಂದರ್ಭದಲ್ಲಿ ಅಂದಿನ ಮತ್ತು ಇಂದಿನ ಕರ್ನಾಟಕ ಸರ್ಕಾರದ ಸಚಿವರಾದ ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯ ಅವರನ್ನು ನೆನೆಯಲೇ ಬೇಕು. ತುಂಬುಶ್ರಮದಿಂದ ಕನ್ನಡದ ಮೇಲಿನ ಅತೀವ ಪ್ರೀತಿ-ಪ್ರೇಮ-ಶ್ರದ್ಧೆಗಳಿಂದ ಹಲವು ವಿರೋಧಗಳ ನಡುವೆಯೇ ಸಮ್ಮೇಳನ ಅತೀವ ಯಶಸ್ಸು ಪಡೆಯಲು ಕಾರಣೀಭೂತರಾಗಿದ್ದಾರೆ. ಸಮ್ಮೇಳನದ ಹೆಸರಿನಲ್ಲಿ ಕನಕಪುರಕ್ಕೆ ಅನೇಕ ಸಾಮಾಜಿಕ, ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳು ದೊರೆತ ವಿಚಾರ 'ಕಲ್ಲೊಳಿಟ್ಟ ಅಕ್ಷರ''ಗಳಾಗಿ ಶಾಶ್ವತವಾಗಿವೆ. ಇದೇ ಸಂದರ್ಭದಲ್ಲಿ - ಅರವತ್ತೇಳು ಮಹತ್ವದ ಗ್ರಂಥಗಳನ್ನು ಹೊರತರುವಲ್ಲಿ - ಅಧ್ಯಕ್ಷ ಬಸವಾರಾಧ್ಯರ ಪರಿಶ್ರಮವು ತುಂಬ ಅಗಾಧವಾದದ್ದೇ ಸರಿ.

ಅಧ್ಯಕ್ಷ ಬಸವಾರಾಧ್ಯರ ಅವಧಿಯಲ್ಲಿ ತಮ್ಮ ಅಚ್ಚು-ಮೆಚ್ಚಿನ ಗುರುಗಳ ಪೈಕಿ ಒಬ್ಬರಾದ ಬಿ.ಎಂ.ಶ್ರೀ. ಅವರ ಹೆಸರಿನ ಅಚ್ಚುಕೂಟವನ್ನು ಆಧುನಿಕವಾಗಿ ನವೀಕರಿಸಿ; 'ಆಫ್‌ಸೆಟ್' ಮುದ್ರಣ ವ್ಯವಸ್ಥೆ ತಂದದ್ದು ಕೂಡ ಇತಿಹಾಸದ ದಾಖಲೆಯಾಗಿದೆ. ಹಳೆಯದಾದ ಎಲ್ಲ ವಿಚಾರಗಳಿಗೂ ಹೊಸ ಹೈಟೆಕ್ ಮೆರುಗನ್ನು ಪರಿಷತ್ತಿಗೆ ನೀಡುವಲ್ಲಿ ಬಸವಾರಾಧ್ಯ ಮತ್ತು ಅವರ ಬಳಗ ತುಂಬು ಶ್ರಮಿಸಿದೆ ಎಂಬುದನ್ನು ನಾವು ನೆನೆಯಬೇಕಿದೆ. ಕನ್ನಡ ಸಾಹಿತ್ಯ ಪರಿಷತ್ತು ತನ್ನ ಕಾಲ ಮೇಲೆ ತಾವೇ ಸ್ವತಃ ನಿಲ್ಲುವಂತಾಗಬೇಕು ಎಂಬುದು ಬಹುದಿವಸಗಳಿಂದ ಕೇಳಿಬರುತ್ತಿರುವ ಮಾತು. ಈ ಮಾತಿಗೆ ಅನುಸಾರವಾಗಿ ಪರಿಷತ್ತಿಗೆ ತನ್ನದೆಯಾದ ಮೂಲದಿಂದ ಹಣಕಾಸಿನ ಸೌಲಭ್ಯ ದೊರೆಯಬೇಕು ಎಂಬುದನ್ನು ಸ್ಥಿರಗೊಳಿಸುವ ಪ್ರಯತ್ನ ನಡೆಸಲಾಯಿತು. ಅಂತೆಯೇ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ವಿಸ್ತಾರವಾಗಿದ್ದ ಸ್ಥಳವನ್ನು ರಸ್ತೆಗೆ ಹೊಂದಿಕೊಂಡಂತೆ ಇದ್ದ ಆ ಸ್ಥಳವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಒಂದಾದ 'ಸಿಂಡಿಕೇಟ್ ಬ್ಯಾಂಕ್'ಗೆ ಬಾಡಿಗೆಗಾಗಿ ನೀಡಲಾಯಿತು. ಇದರಿಂದ ಪರಿಷತ್ತಿಗೆ ಪ್ರತಿ ತಿಂಗಳು ಬಾಡಿಗೆ ಬರುವಂತೆ ಮಾಡಿದ ಕೀರ್ತಿ ಅಧ್ಯಕ್ಷ, ಗೌರವ ಕಾರ್ಯದರ್ಶಿ, ಕೋಶಾಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿಗೆ ಸಲ್ಲಬೇಕಿದೆ. ಹೀಗೆ 'ಹಳೆ ಬೇರು - ಹೊಸ ಚಿಗುರು'ಗಳ ಮಿಲನದ ಕಾರ್ಯಕ್ರಮಗಳು ನಮ್ಮೀ ಅವಧಿಯ ಸಂದರ್ಭದಲ್ಲಿ ನಡೆದು ಹೊಸ ಹೆಜ್ಜೆ ಗುರುತುಗಳು ಮೂಡಿವೆ.

ಉತ್ತರ ಕರ್ನಾಟಕ ಭಾಗದ ಬಾಗಲಕೋಟದಲ್ಲಿ ಅಖಿಲ ಭಾರತ ಅರವತ್ತೆಂಟನೆ ಕನ್ನಡ ಸಾಹಿತ್ಯ ಸಮ್ಮೇಳನ ನಮ್ಮೀ ಅವಧಿಯಲ್ಲಿ ನಡೆದು ಅನೇಕ ಹೊಸ ದಾಖಲೆಗಳಿಗೆ ನಾಂದಿ ಹಾಡಿದೆ. ಮುಳುಗಡೆಗೆ ಒಳಗಾಗಲಿದ್ದ ಸದರಿ ಬಾಗಲಕೋಟದಲ್ಲಿ ನಡೆದ ಸಮ್ಮೇಳನ ಹೊಸ ಆಲೋಚನೆಗಳನ್ನು ನಡೆಸಲು; ನವ ಬಾಗಲಕೋಟ ನಿರ್ಮಾಣ ಮಾಡುವಲ್ಲಿ ತುಂಬು ಯಶಸ್ಸು ಪಡೆದಿದೆ ಎಂದರೆ ತಪ್ಪಾಗಲಾರದು. ನವ ಬಾಗಲಕೋಟೆಗೆ ಬೇಕಾದ ಸಾಮಾಜಿಕ ಕಾರ್ಯಗಳು ಹಾಗೂ ಮೂಲಭೂತ ಸೌಲಭ್ಯದ ಕಡೆಗೆ ಸರ್ಕಾರ ಗಮನ ಹರಿಸಲು ಕಣ್ತೆರೆಸಿದ ಮಹತ್ವದ ಹೆಜ್ಜೆ ಗುರುತುಗಳು ಮೂಡಿಬರಲು ಸಾಧ್ಯತೆ ಮಾಡಿಕೊಟ್ಟಿತು ನಮ್ಮೀ ಅರವತ್ತೆಂಟನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ.

ತಮ್ಮ ಬದುಕಿನ ಬಹುತೇಕ ವರ್ಷಗಳು ನಿಘಂಟು ಕೆಲಸವನ್ನು ತಪ್ಪದೆ ಮಾಡಿಕೊಂಡು ಬಂದ ಮಾನ್ಯ ಬಸವಾರಾಧ್ಯರು, ನಿಘಂಟುಗಳ ಪರಿಷ್ಕೃತ ಮುದ್ರಣಗಳನ್ನು ಹೊರತರಬೇಕೆಂಬ ದಿಟ್ಟಿಯಿಂದ ಮಹತ್ವದ ಕೆಲಸಗಳಿಗೆ ಕೈಯಿತ್ತರು. ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು -ಇವುಗಳನ್ನು ಪರಿಷ್ಕೃತಗೊಳಿಸಿ, ನಮ್ಮ 'ಆಫ್‌ಸೆಟ್' ಮುದ್ರಣದಲ್ಲಿಯೇ ಮುದ್ರಿಸಿದರು. ನಂತರ ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟುವಿನ ಮೊದಲ ಸಂಪುಟವನ್ನು ತುಂಬು ಪರಿಶ್ರಮದಿಂದ ಹೊರ ತರುವ ಹೊಣೆಗಾರಿಕೆಯನ್ನು ಹೊತ್ತರು. ಇವೆಲ್ಲವೂ ಬಸವಾರಾಧ್ಯರ ಅವಧಿಯಲ್ಲಿ ನಡೆದು ಬಂದು ಆಗುಮಾಡಿದ ಕಾರ್ಯಗಳಾಗಿವೆ.

ನಾಡಿನಾದ್ಯಂತ ತಮ್ಮ ಕಾರ್ಯದರ್ಶಿಗಳೊಂದಿಗೆ ಪ್ರವಾಸ ಮಾಡಿರುವ ಬಸವಾರಾಧ್ಯರು, ವಯಸ್ಸಿನ ಪರಿವೆ ಲೆಕ್ಕಿಸದೆ ಯುವಕರೊಂದಿಗೆ ಯುವಕರಾಗಿ ಪ್ರವಾಸ ಮಾಡಿದರು. ರಾಜ್ಯಾದ್ಯಂತ ಕರೆದ ಕಡೆಗೆ ಹೋಗಿ, ಕನ್ನಡದ ಕೆಲಸಗಳನ್ನು ಮಾಡಿಕೊಂಡು ಬಂದಿರುವ 'ನಿತ್ಯ ಕಿಂಕರರು' ನಮ್ಮೀ ಬಸವಾರಾಧ್ಯರು. ನಾನು-ನನ್ನದು ಎನ್ನಗೆ ನಾವು-ನಮ್ಮದು ಎಂದು ಸದಾ ಕನ್ನಡದ ಕೆಲಸಗಳನ್ನು ಎಲ್ಲರೊಂದಿಗೂ ಬೆರೆತು ಹಸ್ಮುಖಿಯಾಗಿರುವ ಬಸವಾರಾಧ್ಯರು- ಕನ್ನಡದ 'ಬಸವರಾಜ'ರಾಗಿ ನೂರ್ಕಾಲ-ಆಯುರಾರೋಗ್ಯದಿಂದ ಬಾಳಲಿ -ಎಂದು ನಿತ್ಯ ಆಶಿಸುವ ಅವರ ಪ್ರೀತಿಯ ಚಂದ್ರಣ್ಣಗೌಡ ಮತ್ತು ಕುಟುಂಬದವರು.

ಸಾತ್ವಿಕ ವಿದ್ವನ್‌ಮಣಿ

-ವಿದ್ಯಾವಾಚಸ್ಪತಿ ಕವಿತಾಕೃಷ್ಣ

ಕನ್ನಡನಾಡು ಕಂಡ ಸಾತ್ವಿಕ ವಿದ್ವನ್ ಮಣಿಗಳ ಗಣದಲ್ಲಿ ಸನ್ಮಾನ್ಯ ಎನ್. ಬಸವಾರಾಧ್ಯರದು ಎದ್ದುಕಾಣುವ ವ್ಯಕ್ತಿತ್ವ. ಸರಳವಾದ ನಡೆ, ಅಷ್ಟೇ ಸರಳವಾದ ನುಡಿ. ನಯ ವಿನಯಭಾವ ಸಂಪನ್ನರು. ಉನ್ನತ ಸ್ತರವೇರಿದ ಪ್ರಕಾಂಡ ಪಂಡಿತರು. ಪೊಳ್ಳು ಮಾತು ಆಡಿದವರಲ್ಲ, ಜೊಳ್ಳು ಕೃತಿ ಬರೆದವರಲ್ಲ. ಮಹತ್ವದ ಸ್ಥಾನಗಳನ್ನು ಅಲಂಕರಿಸಿದ್ದರೂ 'ಅಹಂ' ನಿಂದ ಮೆರೆದವರಲ್ಲ. ಬೀಗಿ ಮೆರೆವ ಲೋಕದಲ್ಲಿ ಬಾಗಿ ನಡೆದ ಸಜ್ಜನರು. ಹಿರಿಯರಿರಲಿ ಕಿರಿಯರಿರಲಿ ಎಲ್ಲರನ್ನು ಸಮಾನವಾಗಿ ಕಾಣುವ, ಎಲ್ಲರೊಡಗುಡಿ ಬಾಳುವ ಜಾಯಮಾನದವರು. ಕನ್ನಡ ಸಾರಸ್ವತಲೋಕಕ್ಕೆ ಶ್ರೀಯುತರು ನೀಡಿದ ಕೊಡುಗೆ ಅಸದಳವಾದುದು. ಹಿಡಿದ ಕಾರ್ಯವನ್ನು ಅಸಾಧ್ಯವೆಂದು ಹಿಂಜರಿಯದ ಧೀರವ್ಯಕ್ತಿತ್ವದವರು ನಮ್ಮ ಬಸವಾರಾಧ್ಯರು.

ನಂಜುಂಡಾರಾಧ್ಯ ಬಸವಾರಾಧ್ಯರು ನಡೆದು ಬಂದ ದಾರಿ ಗಮನಾರ್ಹವಾದುದು. ಬಾಲ್ಯದಿಂದಲೂ ಸಾಹಿತ್ಯಾಸಕ್ತರು. ಅಪ್ಪಟ ಕನ್ನಡ ಪ್ರೇಮಿಗಳು. ಏಕೆ? ಹೇಗೆ? ಎಂದು ಬೆದಕಿ, ವಿಷಯದ ಆಳಕ್ಕೆ ಇಳಿಯುವ ಗುಣಧರ್ಮದವರು; ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ 'ಸಂಪಾದನಾ ವಿಭಾಗಕ್ಕೆ' ಜೀವಂತಿಕೆ ತಂದಿತ್ತವರು. ಅವರು ಆ ವಿಭಾಗದ ನಿರ್ದೇಶಕರಾಗಿ ಸಂದಾಯ ಮಾಡಿದ ಸೇವೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು. ಅವರ ಆಳವಾದ ಚಿಂತನೆ, ವಿಷಯದ ಎಲ್ಲಾ ಮಗ್ಗುಲುಗಳನ್ನು ಸಮಗ್ರವಾಗಿ ಅರಿಯುವ ಹಂಬಲ, ಆ ಕಾರ್ಯದಲ್ಲಿ ಅವರು ತಮ್ಮನ್ನು ತಾವು ಸಮರ್ಪಿಸಿಕೊಂಡು ತಾಳ್ಮೆಯಿಂದ ವೃತ್ತಿಗೆ ಗೌರವ ತಂದ ಆಚಾರ್ಯ ಪುರುಷರಾಗಿದ್ದಾರೆ.

'ಗ್ರಂಥಸಂಪಾದನೆ ಒಂದು ಕಲೆ' ಎಂಬುದನ್ನು ಬದುಕಿನಲ್ಲಿ ಆಡಿ ತೋರದೆ ಮಾಡಿ ತೋರಿದವರು. ಅವರ ಸಂಶೋಧನಾ ಗುಣಧರ್ಮ ಅವರ ವಿಚಕ್ಷಣ ಪ್ರತಿಭೆಗೆ ಕನ್ನಡಿ ಹಿಡಿಯುವಂತದ್ದು.

ಅವರು ಸಂಶೋಧನೆಯಲ್ಲಿ ತೊಡಗಿ ಕನ್ನಡ ಸಾರಸ್ವತ ಸಂಪತನ್ನು ಶ್ರೀಮಂತಗೊಳಿಸಿದರು. ಹಗಲು-ಇರುಳಿನ ಲೆಕ್ಕವಿಲ್ಲ, ಊರು- ಕಾಡು-ಮೇಡೆಂಬ ಭೇದವಿಲ್ಲ. ಸಂಪಾದನೆ- ಸಂಶೋಧನೆಗಳಲ್ಲಿ ತಮ್ಮ ಬದುಕಿನ ಕಾಲವನ್ನು ಮುಕ್ಕಾಲುಪಾಲು ಮೀಸಲಿಟ್ಟವರು. ಕನ್ನಡದ ಎಲ್ಲಾ ಪ್ರಕಾರಗಳನ್ನು ಅಧ್ಯಯನ ಮಾಡಿ ಅರಗಿಸಿಕೊಂಡವರು, ಪೂರ್ವದ ಹಳಗನ್ನಡ - ಹಳಗನ್ನಡ - ನಡುಗನ್ನಡ - ಆಧುನಿಕ ಕನ್ನಡ ಪ್ರಕಾರಗಳ ಬಗ್ಗೆ ಅಧ್ಯಯನ ಮಾಡಿದ ಸೃಜನಶೀಲರು. ಗದ್ಯ- ಪದ್ಯ-ನಾಟಕ-ಲಲಿತ ಪ್ರಬಂಧ-ಶಾಸ್ತ್ರ ಕೃತಿಗಳ ಬಗ್ಗೆ ತಿಳಿದವರು. ಆಡದಲೆ ಮಾಡುವ ಗುಣಧರ್ಮದವರಾದ ಇವರು ೪೦ಕ್ಕೂ ಹೆಚ್ಚಿನ ಕೃತಿಗಳನ್ನು ನೀಡಿದ್ದಾರೆ. ತೊರವೆ ರಾಮಾಯಣ, ತ್ರಿಪುರದಹನ ಸಾಂಗತ್ಯ, ಚಂದ್ರ ಹಾಸನ ಕಥೆ, ಕನ್ನಡ ಗದ್ಯ ವಿಕಾಸ, ಅಬ್ಬಲೂರು ಚರಿತೆ, ಉದ್ಯೋಗ ಸಾರ -ಹೀಗೆ ಅನೇಕಾನೇಕ ಅಮೂಲ್ಯ ಕೃತಿರತ್ನಗಳನ್ನು ನೀಡಿ, ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ಇವರ ವಿಪುಲವಾದ ಪ್ರತಿಭಾಸಿರಿವಂತಿಕೆ ಕಂಡಾಗ ಸರ್ವಜ್ಞ ಕವಿಯ 'ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳವಿಲ್ಲ. ಬಲ್ಲವರಿಗೆ ಬಲವಿಲ್ಲ. ಸಾಹಿತ್ಯವೆಲ್ಲರಿಗು ಇಲ್ಲ' ಎಂಬ ಮಾತು ಅದೇಕೋ ನೆನಪಾಗುತ್ತದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಸದಭಿರುಚಿಯುಳ್ಳ, ನಿರಂತರ ಅಧ್ಯಯನಶೀಲರಾದ, ಸದ್ದುಗದ್ದಲವಿಲ್ಲದೆ ಕಾಯಕ ಮಾಡುವ, ಜ್ಞಾನಪಿಪಾಸುಗಳಿಗೆ ಸಾಹಿತ್ಯದ ದಾಸೋಹ ಮಾಡುವ ಎನ್. ಬಸವಾರಾಧ್ಯರಿಗೆ ಸಿಕ್ಕಬೇಕಾದ ಗೌರವಗಳು ಸಂದಾಯವಾಗಲಿಲ್ಲ ಎಂದೆನಿಸುವುದು ಸತ್ಯ. ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ದೊರಕಿರುವುದು. ಹಾಗೆಯೇ ದೇವರಾಜ ಬಹದ್ದೂರ್ ಪುರಸ್ಕಾರ ದೊರಕಿರುವುದು ಒಂದಿಷ್ಟು ನೆಮ್ಮದಿಯ ಸಂಗತಿ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆಯನ್ನು ಸಂದಾಯ ಮಾಡಿದ ಶ್ರೀಯುತರು ಐದುಕೋಟಿ ಕನ್ನಡಿಗರ ಮಾತೃ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಗೌರವತಂದವರಾಗಿದ್ದಾರೆ. ಯಾವುದೇ ಸಭೆ ಸಮಾರಂಭಗಳಿರಲಿ ಸಭಾ ಮರ್ಯಾದೆಯನ್ನು ಕಾಪಾಡುವ ಜಾಯಮಾನ ಇವರದಾಗಿದೆ. ಆಳವಾದ ಅರಿವಿನ ಇವರ ಉಪನ್ಯಾಸ ಮೆಲ್ಲುಲಿಯುವಂತದ್ದು. ಎಲ್ಲೂ ತಮ್ಮ ಬಗ್ಗೆ ತಾವು ಮೆಚ್ಚುಗೆ ಮಾತು ಆಡಿದವರಲ್ಲ. ತಮ್ಮನ್ನು, ತಮ್ಮ ಸೇವೆಯನ್ನು ವೈಭವೀಕರಿಸಿಕೊಂಡವರಲ್ಲ. ತುಂಬಿದ ಜೇಂಗೂಡದಂತಿರುವ ಪೂಜ್ಯರಾದ ಬಸವಾರಾಧ್ಯರು ಎಲ್ಲರ ಪ್ರೀತಿಗೆ ಪಾತ್ರರಾದ ಅಪೂರ್ವ ಸಾಹಿತಿಗಳಾಗಿದ್ದಾರೆ. ಸಂಶೋಧಕರೂ, ಸಂಪಾದಕರೂ ಆದ ಈ ಸಾತ್ವಿಕ ಶಾಸ್ತ್ರಜ್ಞರು ಇಂಗ್ಲಿಷ್-ಕನ್ನಡ ನಿಘಂಟಿನ ಸಂಪಾದಕ ಮಂಡಲಿಯಲ್ಲಿ ಸಂದಾಯ ಮಾಡಿದ ಸೇವೆ ಶ್ಲಾಘನೀಯ ಮಾತ್ರವಲ್ಲ; ಅನುಕರಣನೀಯವೂ ಅಹುದು.

ಎತ್ತರದ ನಿಲುವು ಸಾತ್ವಿಕ ಸಿರಿತನದ ಚಲುವು
ಉಂಡಿದ್ದು ಬೇವು ನೀಡಿದ್ದು ಪರಿಪಳಿಸುವ ಹೂವು
ನಡೆದದ್ದೆ ದಾರಿ ಕಾವ್ಯ ಶಾಸ್ತ್ರಗಳ ಹೆದ್ದಾರಿ
ನಿನಗೆಲ್ಲವೂ ಸಾಧ್ಯ ಚಿರಕಾಲಬಾಳ್ಗಿ ಬಸವಾರಾಧ್ಯ

XXX

ಶಬ್ದಬ್ರಹ್ಮ ಬಸವಾರಾಧ್ಯರು

-ಹೆಚ್. ನಂಜೇಗೌಡ

ಬಸವಾರಾಧ್ಯರು ಕನ್ನಡ ವಿದ್ವಾಂಸರಲ್ಲಿ ಅಪರೂಪದ ವಿದ್ವಾಂಸರು. ಕನ್ನಡ ಸಾಹಿತ್ಯದಲ್ಲಿ ಆರಿಸಿಕೊಂಡ ಕ್ಷೇತ್ರ ಇದು ಎಲ್ಲರಿಗೂ ದಕ್ಕುವಂತ ಕ್ಷೇತ್ರವಲ್ಲ. ಈ ಕ್ಷೇತ್ರದಲ್ಲಿ ಕೆಲಸಮಾಡಿ ಸೈ ಎನಿಸಿಕೊಂಡಿರುವವರು ಬೆರಳೆಣಿಕೆಯಷ್ಟು ಜನ. ಇವರ ಜೊತೆಗೆ ದಿವಂಗತ ಡಿ.ಎಲ್. ನರಸಿಂಹಾಚಾರ್ಯರು, ಜಿ. ವೆಂಕಟ ಸುಬ್ಬಯ್ಯನವರು ಅಪರೂಪಕ್ಕೆ ಶ್ರೀ ಟಿ.ಆರ್. ಮಹದೇವಯ್ಯನವರು ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಶ್ರೀ ಜಿ.ಟಿ. ನಾರಾಯಣರಾವ್ ಇವರನ್ನು ಬಿಟ್ಟರೆ ನನ್ನ ಗಮನಕ್ಕೆ ಬಂದಂತೆ ಮತ್ತೊಂದು ಹೆಸರನ್ನು ಹುಡುಕಬೇಕು.

ಬಸವಾರಾಧ್ಯರು ನನಗೆ ಪರಿಚಯವಾದದ್ದು ೧೯೭೧ರಲ್ಲಿ. ನಾನು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿದ್ದಾಗ ನಮಗೆ ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳು ಪಠ್ಯ ಪುಸ್ತಕಗಳಾಗಿದ್ದವು. ಕಠಿಣ ಪದಗಳ ಅರ್ಥ ಮತ್ತು ಕೆಲವು ಪದಗಳ ನಿಷ್ಪತ್ತಿ ತಿಳಿಯುತ್ತಿರಲಿಲ್ಲ. ನನಗೆ ವ್ಯಾಕರಣದಲ್ಲಿ ಹೆಚ್ಚು ಆಸಕ್ತಿ . ಆದುದರಿಂದ ಪದಗಳ ನಿಷ್ಪತ್ತಿ ತಿಳಿಯಲು ಹೆಚ್ಚು ಆಸಕ್ತಿ. ತಿಳಿಸಿಕೊಡುವವರಾರು, ಇದೊಂದು ದೊಡ್ಡ ಸಮಸ್ಯೆಯಾಯಿತು. ವಿಶ್ವಕೋಶದ ಸಂಪಾದಕರಾಗಿದ್ದ ನನ್ನ ಆತ್ಮೀಯ ಮಿತ್ರರಾದ ಶ್ರೀ ಕೆ.ಟಿ. ವೀರಪ್ಪನವರನ್ನು ಕೇಳಿದೆ. ಇಲ್ಲಿ ಒಂದು ದೊಡ್ಡ ಗಣಿಯೇ ಇದೆ. ಭಾಷಾಶಾಸ್ತ್ರದ ಬಗ್ಗೆ ಅವರಲ್ಲಿಗೆ ಹೋಗಿ ಅವನು ನಿಮ್ಮ ಸಮಸ್ಯೆಗಳಿಗೆ ಉತ್ತರ ಹೇಳುತ್ತಾರೆ, ಬನ್ನಿ ಅವರನ್ನು ಪರಿಚಯ ಮಾಡಿಸುತ್ತೇನೆಂದು, ಸಂಶೋಧನಾ ಸಹಾಯಕರಾಗಿದ್ದ ಶ್ರೀ ಬಸವಾರಾಧ್ಯರ ಬಳಿಗೆ ಕರೆದುಕೊಂಡು ಹೋಗಿ ಪರಿಚಯಿಸಿದರು. ಅಯ್ಯೋ ನಂಜೇಗೌಡರು ಪರೋಕ್ಷವಾಗಿ ತುಂಬ ಪರಿಚಯಸ್ತರು. ಅವರು ಸಂಪಾದಿಸಿರುವ ಶಬ್ದಮಣಿದರ್ಪಣವನ್ನು ನೋಡಿದ್ದೇನೆ. ಈವರೆಗೆ ಯಾರೂ ಮಾಡದಷ್ಟು ವಿವರವಾಗಿ ಉಪಯುಕ್ತ ಮಾಹಿತಿಗಳೊಂದಿಗೆ ಸಂಪಾದಿಸಿದ್ದಾರೆ. ಉಪಾಧ್ಯಾಯರ ಸಹಾಯವಿಲ್ಲದೆ ವಿದ್ಯಾರ್ಥಿಗಳೇ ಓದಿಕೊಳ್ಳಬಹುದು, ಯಾವಾಗ ಬೇಕಾದರೂ ಬನ್ನಿ, ನಿಮಗೆ ಸ್ವಾಗತ. ನಿಮ್ಮ ಸಮಸ್ಯೆಗಳನ್ನು ನನ್ನ

ಕೈಲಾಸ ಮಟ್ಟಿಗೆ ಪರಿಹರಿಸುತ್ತೇನೆ ಎಂದರು. ಎರಡು ದಿವಸ ಅವರ ರೂಮಿನ ಕಡೆ ಹೋದೆ. ಕಿಟಕಿಯಿಂದ ನೋಡಿದಾಗ ಐದಾರು ಜನ ವಿದ್ವಾಂಸರ ಜೊತೆ ಯಾವುದೋ ವಿಚಾರವಾಗಿ ಚರ್ಚಿಸುತ್ತಿದ್ದರು. ಮಧ್ಯೆ ಹೋಗಬಾರದೆಂದು ವಾಪಸು ಬಂದೆ. ಎರಡು ದಿವಸವೂ ಹೀಗೇ ಆಯಿತು. ಮೂರನೆಯ ದಿನ ನಾನು ಕಿಟಕಿ ಹತ್ತಿರ ನಿಂತಿರುವುದನ್ನು ಗಮನಿಸಿ ಒಳಕ್ಕೆ ಕರೆದರು. ಒಳಗಡೆ ಹೋದೆ. ಬಂದಿದ್ದ ವಿದ್ವಾಂಸರೂ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬಂದಿದ್ದವರು. ಬಸವಾರಾಧ್ಯರ ವಿದ್ವತ್ತನ್ನು ನೋಡಿ ಆಶ್ಚರ್ಯಗೊಂಡೆ. ನನಗೆ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯದಲ್ಲಿ ಹೆಚ್ಚು ಪರಿಣತಿ ಪಡೆದ ಯುವ ಹಂಬಲವಿತ್ತು. ನನ್ನ ಅಭಿಲಾಷೆಯನ್ನು ಅವರಿಗೆ ನೆಳಿಸಿದೆ, ತುಂಬ ಸಂತೋಷಪಟ್ಟರು. ಸಾಮಾನ್ಯವಾಗಿ ೩ ಗಂಟೆ ಮೇಲೆ ಯಾರೂ ಬರುವುದಿಲ್ಲ, ಆ ವೇಳೆಗೆ ಬನ್ನಿ ನನ್ನ ಕೈಲಾದ ಸಹಾಯ ಮಾಡುತ್ತೇನೆ. ನಾನೇನು ದೊಡ್ಡ ವಿದ್ವಾಂಸನಲ್ಲ ಎಂದರು. ಮೂರನೆಯ ದಿವಸದಿಂದ ಆದಿಪುರಾಣ ಹಿಡಿದು ಹೊರಟೆ. ಕೇಳಿದ ಕ್ಲಿಷ್ಟ ಪದಗಳಿಗೆ ನಿರರ್ಗಳವಾಗಿ ಅರ್ಥ ಹೇಳಿ, ಕೆಲವು ಪದಗಳಿಗೆ ನಿಷ್ಪತ್ತಿಯನ್ನು ಹೇಳುತ್ತಿದ್ದರು. ಜೊತೆಗೆ ಕೆಲವು ಪ್ರಾಚೀನ ಗ್ರಂಥಗಳಿಂದ ಉದಾಹರಣೆಗಳನ್ನು ಹೇಳುತ್ತಿದ್ದರು.

ಅವರಿಗೆ ಊಟ ತಿಂಡಿಯೆಲ್ಲ ಅರ್ಧಗಂಟೆಗೊಮ್ಮೆ ಅರ್ಧಕಪ್ ಕಾಫಿ, ಒಂದು ಸಿಗರೇಟು. ಒಂದು ಗುಟುಕು ಕಾಫಿಗುಲಿಕರಿಸಿ ಆ ಕಡೆ ಈ ಕಡೆ ನೋಡಿ, ಇದಕ್ಕೆ ಉದಾಹರಣೆ ಇಂತಹ ಗ್ರಂಥದಲ್ಲಿದೆ ನೋಡಿ ಎಂದು ತಕ್ಷಣ ಲಭ್ಯವಿರುವ ಗ್ರಂಥ ತೆಗೆದು ಉದಾಹರಣೆ ತೋರಿಸುತ್ತಿದ್ದರು. ಮತ್ತೊಮ್ಮೆ ಬಂದು ದಂ ಸಿಗರೇಟು ಎಳೆದು ಉದಾಹರಣೆ ತೋರಿಸಿ ಅರ್ಥ ಹೇಳುತ್ತಿದ್ದರು. ಅದೆಷ್ಟೊಂದು ಪ್ರಾಚೀನ ಗ್ರಂಥಗಳನ್ನು ಅಧ್ಯಯನ ಮಾಡಿದ್ದರೋ ತಿಳಿಯದು. ಒಂದು ಗುಟುಕು ಕಾಫಿ, ಒಂದು ದಂ ಸಿಗರೇಟು ಎಳೆದು ನೂರಾರು ಪ್ರಾಚೀನ ಗ್ರಂಥಗಳ ಹೆಸರು ಹೇಳಿಬಿಡುತ್ತಿದ್ದರು. ಅವರ ಟೇಬಲ್ಲಿನ ಮೇಲೆ ಒಂದು ಕಪ್‌ಕಾಫಿ, ಬೆರಳಲ್ಲಿ ಒಂದು ಸಿಗರೇಟು ಇರಲೇಬೇಕು, ಅದೇ ಅವರಿಗೆ ಸ್ಫೂರ್ತಿ.

ನಾನು ಎರಡು ವರ್ಷ ಅವರಲ್ಲಿ ಶಿಷ್ಯನಾಗಿದ್ದೆ. ಈ ಎರಡು ವರ್ಷದಲ್ಲಿ ಸರಿಸುಮಾರು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯವನ್ನು ಸಮರ್ಥವಾಗಿ ಪಾಠ ಹೇಳುವಂತೆ ತಯಾರು ಮಾಡಿದರು. ಅಲ್ಲಿಂದ ಅವರ ನನ್ನ ಸಂಬಂಧ ಭದ್ರವಾಯಿತು. ಸ್ವಂತವಾಗಿ ಯಾವ ಗ್ರಂಥವನ್ನು ಅವರು ರಚಿಸಲಿಲ್ಲ. ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ, ಅವುಗಳಿಗೆ ವಿಸ್ತೃತವಾದ ಪ್ರಸ್ತಾವನೆಯನ್ನು ಬರೆದರು. ಪಾಠಾಂತರಗಳನ್ನು ಇದಮಿತ್ಥಂ ಎನ್ನುವಂತೆ ಪರಿಷ್ಕರಿಸಿ ನೂರಾರು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸಿದರು. ಅನಂತರ ಮೈಸೂರಿನಿಂದ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋದರು. ಇಲ್ಲಿ ಆರಾಧ್ಯರು ಮಾಡಿದ ಸೇವೆ ಅಮೋಘವಾದದ್ದು. ಎಂಟು ಬೃಹತ್ ಸಂಪುಟಗಳಲ್ಲಿ ಕನ್ನಡ ನಿಘಂಟನ್ನು ಪ್ರಕಟಿಸಿದರು. ಕನ್ನಡ ನಿಘಂಟು ಕನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು. ೮ ಸಂಪುಟಗಳಲ್ಲಿ ನಿಘಂಟು ತಯಾರಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇದಕ್ಕೆ ತಾಳ್ಮೆ, ಏಕಾಗ್ರತೆ, ಆಸಕ್ತಿ, ನಿಷ್ಠೆ ಇವೆಲ್ಲವು ಅಗತ್ಯ. ಆರಾಧ್ಯರು ಇದನ್ನೆಲ್ಲ ಮೈಗೂಡಿಸಿಕೊಂಡಿದ್ದಾರೆ. ಬಂದವರ ಜೊತೆ ಮಾತನಾಡುತ್ತಾರೆ. ಮಾತನಾಡುತ್ತಲೇ ಅವರು ಬಳಸುವ ಮಾತಿನಲ್ಲಿ ಯಾವುದಾದರೂ ಒಂದು ವಿಶಿಷ್ಟವಾದ ಶಬ್ದ ಕಂಡು ಬಂದರೆ ಅದನ್ನು ಅಲ್ಲಿ ದಾಖಲಿಸಿಕೊಳ್ಳುತ್ತಾರೆ. ಕೆಲವು ಉದಾಹರಣೆಗಳನ್ನು ಕೊಡ ಬಯಸುತ್ತೇನೆ. ಸಾಂಪ್ರದಾಯಕವಾಗಿ ಮಾತನಾಡುತ್ತ ಗ್ರಾಮೀಣ ಭಾಷೆಯಲ್ಲಿ ಮಾತನಾಡಲು ಆರಂಭಿಸಿದರು. ನಾನು ನಮ್ಮ ಹುಡುಗಿ ಮೈ ನೀರು ಬಿಡಾಕೆ ಹೋಗವಳೆ. ಸೊಸೆ ಮೈಯಾರಿಗಿ ಆರುವಾರ ಆಯಿತು. ಇನ್ನೊಬ್ಬ ಮಗಳು ಮೊನ್ನೆ ತಾನೇ ನೀರಾಕೊಂಡದೆ. ಹೊಲದ ಕಡೆಹೋಗವರೆ. ಇಂತಹ ವಿಷಯಗಳನ್ನೇ ಮಾತನಾಡುತ್ತ, ನಂಜೇಗೌಡರೇ ನಿಮ್ಮಿಂದ ತುಂಬ ವಿಷಯ ಸಂಗ್ರಹಣೆಯಾಯಿತು. ನಮ್ಮ ಗ್ರಾಮೀಣ ಶಬ್ದಗಳು ಮರತೇ ಹೋಗಿವೆ. ನಿಮ್ಮಂತಹವರು ಬಂದಾಗ ಇಂತಹ ಗ್ರಾಮೀಣ ಶಬ್ದಗಳು ನನಗೆ ನಿಘಂಟಿನಲ್ಲಿ ದಾಖಲಿಸಲು ಅನೂಕೂಲವಾಗುತ್ತದೆ. ಹೀಗೆಯೇ ಬೇರೆ ಬೇರೆ ಪ್ರದೇಶಗಳಿಂದ ಬಂದ ಸ್ನೇಹಿತರನ್ನು ಮಾತನಾಡಿಸುತ್ತ ಶಬ್ದಸಂಗ್ರಹ ಮಾಡುತ್ತೇನೆ. ನಿಮ್ಮೊಡನೆ ಮಾತನಾಡಿದಂತೆಯೂ ಆಯಿತು, ನಾನು ನಿಘಂಟುವಿಗೆ ಶಬ್ದಸಂಗ್ರಹ ಮಾಡುವುದರ ಮೂಲಕ ನನ್ನ ಕರ್ತವ್ಯಕ್ಕೆ ಲೋಪ ಬರದಂತೆ ಕೆಲಸ ಮಾಡಿದಂತೆಯೂ ಆಯಿತು.

ನೋಡಿ, ನಿಮ್ಮಿಂದ ಎಷ್ಟು ಶಬ್ದ ಸಂಗ್ರಹವಾದಂತಾಯಿತು. 'ಮೈನೀರು' 'ಮೂರ್ತವಿಸರ್ಜನೆ', 'ಮೈಯ್ಯಾರಾಗು' 'ಹೆರಿಗೆಯಾಗು', 'ಬಾಣಂತಿ', 'ನೀರು ಹಾಕಿಕೊ', 'ಋತುಮತಿ'ಯಾಗು ಇದು ಬಸವಾರಾಧ್ಯರ ಕಾರ್ಯ ವೈಖರಿ. ಒಂದು ಕಥೆ ಪುಸ್ತಕ ಬರೆಯ ಬಹುದು, ಪದ್ಯ ಬರೆಯಬಹುದು, ವ್ಯಾಖ್ಯಾನ ಬರೆಯಬಹುದು ಅದು ಬೇಸರ ತರುವುದಿಲ್ಲ. ಆದರೆ ಒಂದು ಗ್ರಂಥದಲ್ಲಿ ಬಳಕೆಯಾಗಿರುವ ಪದಗಳನ್ನು ಸಂದರ್ಭವನ್ನು ಗಮನಿಸಿ ಕವಿಯ ಮನೋಭಾವವನ್ನು ಅರ್ಥೈಸಿಕೊಂಡು ಆ ಪದಕ್ಕೆ ಅರ್ಥಬರೆಯುವುದು, ಸಂದರ್ಭಾನುಸಾರ ಆ ಪದಗಳು ಯಾವ ಮೂಲದ್ದು ಎಂಬುದನ್ನು ಹುಡುಕಿ ಹೇಳುವುದು ಕಷ್ಟ. ಒಂದು ಸಂದರ್ಭದಲ್ಲಿ 'ಹಿತ್ತಲು' ಎಂಬ ಪದ ಯಾವ ಮೂಲದ್ದು ಇದರ ಅರ್ಥವೇನು ಎಂದು ಆರಾಧ್ಯರನ್ನು ಕೇಳಿದೆ. ಏನು ನಂಜೇಗೌಡರೇ, ವ್ಯಾಕರಣ ಭಾಷಾಶಾಸ್ತ್ರ ಓದಿರುವ ನಿಮಗೆ ಈ ಸಂಶಯ ಏಕೆ ಬಂತು. ನೋಡಿ ಪಂಚದ್ರಾವಿಡ ಭಾಷೆಗಳಲ್ಲಿ ತಮಿಳು ಒಂದಲ್ಲವೆ. ತಮಿಳಿನಲ್ಲಿ 'ಇಲ್' ಎಂದರೆ ಮನೆ. ಇದಕ್ಕೆ ಕನ್ನಡ ಹಿಂದೆ 'ಎಂಬದು ಸೇರಿ' ಇಲ್ಲಿನ ಹಿಂದೆ' 'ಪಿತ್ತಲ್' ಇಂಬಾಗಿಲು ಎಂದಾಗಿದೆ. ಕ್ರಮೇಣ ಹುಲ್ಲು ಸೊಪ್ಪು ಹಾಕಿಕೊಳ್ಳುವ ಜಾಗಕ್ಕೆ' 'ಹಿತ್ತಲು' ಎಂದು ಬಳಕೆಯಾಯಿತು ಎಂದರು. ಈ ಪದಕ್ಕೆ ನಿಘಂಟಿನಲ್ಲಿ ಅರ್ಥಬರೆದು ಅದೇ ಪದ ಯಾವ ಯಾವ ಗ್ರಂಥಗಳಲ್ಲಿ ಬಳಕೆಯಾಗಿದೆ ಎಂಬುದನ್ನು ಅಡಿಟಿಪ್ಪಣಿಗಳಲ್ಲಿ ದಾಖಲಿಸಿ, ವಾಕ್ಯಗಳನ್ನು ಕೊಟ್ಟು ಪುಟಗಳನ್ನು ಸೂಚಿಸಿದ್ದಾರೆ. ಸಾವಿರಾರು ಗ್ರಂಥಗಳನ್ನು ಅವಲೋಕಿಸಿ ಇಂತಹ ಪದಗಳನ್ನು ಎಕ್ಕಿ ತೆಗೆದಿದ್ದಾರೆ. ನಾನು ಆಗಲೇ ಹೇಳಿದಂತೆ ಇದಕ್ಕೆ ಸ್ಫೂರ್ತಿ ಒಂದು ಕಪ್ ಕಾಫಿ ಕೈಲೊಂದು ಸಿಗರೇಟು. ಅವರ ಟೇಬಲ್ಲಿನ ಮೇಲೆ ಪುಸ್ತಕಗಳ ರಾಶಿಯೇ ಇರುತ್ತದೆ. ಅವುಗಳಲ್ಲಿ ಪದಗಳನ್ನು ತೆಗೆದು ಪಟ್ಟಿಮಾಡತ್ತಿರುತ್ತಾರೆ. ಇಂತಹ ದೊಡ್ಡ ವಿದ್ವಾಂಸರು ನೂರಾರು ಗ್ರಂಥಗಳನ್ನು ಪರಿಷ್ಕರಿಸಿ ಪಾಠಾಂತರಗಳನ್ನು ಗುರುತಿಸಿ ಆ ಗ್ರಂಥದ ಪೂರ್ಣ ಪರಿಚಯವನ್ನು ಪ್ರಸ್ತಾವನೆಯಲ್ಲಿ ಕೊಟ್ಟು ಪ್ರಕಟಿಸುವುದರ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡಗೆಯನ್ನು ಕೊಟ್ಟಿದ್ದಾರೆ.

ನನ್ನ ಅದೃಷ್ಟವೋ ಎಂಬಂತೆ ಮೂರುವರ್ಷಗಳ ಕಾಲ ಅವರೊಡನೆ ನಿಘಂಟುವಿನ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಅದು ನನ್ನ ಪುಣ್ಯ. ಜಾನಪದ ವಿದ್ವಾಂಸ ಶ್ರೀ ಎಚ್.ಎಲ್. ನಾಗೇಗೌಡರು ಒಂದು ಜಾನಪದ ನಿಘಂಟು ತಯಾರಿಸುವ ಯೋಜನೆಯನ್ನು ಹಾಕಿ ಅದರಲ್ಲಿ ಕೆಲಸ ಕೊಡುವ ಅವಕಾಶವನ್ನು ನನಗೆ ಒದಗಿಸಿಕೊಟ್ಟರು. ನನ್ನ ಜೊತೆಯಲ್ಲಿ ಬಸವಾರಾಧ್ಯರು ಇದ್ದರು. ಆ ನಿಘಂಟು ನಾಗೇಗೌಡರ ಪುಸ್ತಕಗಳಲ್ಲಿರುವ ಪದಗಳಿಗೆ ಮಾತ್ರ ಸೀಮಿತವಾಗಿತ್ತು. ಸಮಿತಿಯಲ್ಲಿ ಆರು ಜನ ಸಂಪಾದಕರಿದ್ದರು. ಪ್ರತಿಯೊಬ್ಬರಿಗೂ ಇಷ್ಟಿಷ್ಟು ಪುಸ್ತಕ ಕೊಟ್ಟಿದ್ದರು. ಅದರಲ್ಲಿ ಬರುವ ಜಾನಪದ ಪದಗಳನ್ನು ಗುರುತು ಹಾಕಿಕೊಂಡು ಆಯಾಯಾ ಪ್ರದೇಶಗಳಲ್ಲಿ ಆ ಪದಕ್ಕೆ ಇರುವ ಅರ್ಥ, ಆದು ಯಾವುದಾದರೂ ಹಬ್ಬ, ಆಚರಣೆ, ಸಂಪ್ರದಾಯಗಳಿಗೆ ಸಂಬಂಧಿಸಿದ್ದಾಗಿದ್ದರೆ ಅದರ ಅರ್ಥ ಬರೆದು ಅದನ್ನು ಯಾವ ಯಾವ ಪ್ರದೇಶಗಳಲ್ಲಿ ಹೇಗೆ ಆಚರಿಸುತ್ತಾರೆ ಎಂಬುದನ್ನು ಬರೆಯ ಬೇಕಾಗಿತ್ತು. ವಾರಕ್ಕೊಮ್ಮೆ ಸೇರುವ ಸಭೆಯಲ್ಲಿ ಅವರವರು ಬರೆದು ತಂದ ವಿಷಯವಾಗಿ ಓದಿ ಚರ್ಚಿಸಿ ತಿರ್ಮಾನಿಸಲಾಗುತ್ತಿತ್ತು. ಇಲ್ಲಿ ನಾಗೇಗೌಡರು ಮತ್ತು ಆರಾಧ್ಯರದೇ ಪ್ರಧಾನ ಪಾತ್ರ. ಕುಳ್ಳ, ಕಡ್ಡಿ, ಮುಂತಾದ ಪದಗಳು ಸಂಸ್ಕೃತದ ತದ್ಭವ ರೂಪಗಳೆಂದು ಕೆಲವು ಸಂಸ್ಕೃತ ಪಂಡಿತರ ಅಭಿಪ್ರಾಯವಾದರೆ ಆರಾಧ್ಯರು ಇವು ಪ್ರಾಕೃತದಿಂದ ಕನ್ನಡ ಭಾಷೆಗೆ ನೇರವಾಗಿ ಬಂದಿರುವ ಶಬ್ದಗಳೆಂದು ಹೇಳುತ್ತಾರೆ. ಅವರ ಜೊತೆಯಲ್ಲಿ ಕೆಲಸ ಮಾಡುವುದೇ ಒಂದು ರೀತಿಯ ಖುಷಿ. ಸಹ ಸಂಪಾದಕರುಗಳನ್ನು ನಗಿಸುತ್ತಲೇ ನಮ್ಮ ತಪ್ಪುಗಳನ್ನು ತಿದ್ದುತ್ತಿದ್ದರು. ಈ ಕೋಶದಲ್ಲಿ ಬಂದಿರುವ ಪದಗಳು, ಆಚರಣೆಗಳು, ಸಂಪ್ರದಾಯಗಳು ಆಗಲೇ ಪರಿಷತ್ತಿನ ನಿಘಂಟುಗಳಲ್ಲಿ ಉಲ್ಲೇಖಗೊಂಡಿವೆ. ಅವುಗಳನ್ನು ಇಷ್ಟನೇ ಸಂಪುಟದಲ್ಲಿ ಬಂದಿವೆಯೆಂದು ಹೇಳಿ ತೋರಿಸುತ್ತಿದ್ದರು. ಅಲ್ಲಿ ಬಂದಿರುವ ಅರ್ಥಕ್ಕಿಂತ ಬೇರೆ ಅರ್ಥವನ್ನೇನಾದರೂ ಬೇರೆ ಸಹ ಸಂಪಾದಕರು ತೋರಿಸಿದರೆ ಚರ್ಚಿಸಿ ಒಪ್ಪಿಕೊಳ್ಳುತ್ತಿದ್ದರು. ನನ್ನದೇ ಸರಿ, ನಾನೇ ಬುದ್ಧಿವಂತ ಎಂದು ಹೇಳುತ್ತಿರಲಿಲ್ಲ. ಈ ಪದಗಳನ್ನು ಮುಂದೆ ಪರಿಷತ್ತಿನ ನಿಘಂಟಿನಲ್ಲಿ ಸೇರಿಸಿಕೊಳ್ಳಬೇಕು ಎಂದು ತಾವು ದಾಖಲಿಸಿಕೊಳ್ಳುತ್ತಿದ್ದರು. ಒಂದು ಶಬ್ದದ ಅರ್ಥದಲ್ಲಿ ಸಂಪಾದಕ ಮಂಡಲಿಯಲ್ಲಿ ಜಿಜ್ಞಾಸೆ ಎದ್ದಾಗ, ತಕ್ಷಣ ಟಿ.ಆರ್. ಮಹದೇವಯ್ಯನವರು ನಯವಾಗಿ

ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶದ ಒಂದು ಸಂಪುಟವನ್ನು ತೆಗೆದು ತೋರಿಸಿ ಇಲ್ಲಿದೆ ನೋಡಿ ಅದಕ್ಕೆ ಆಧಾರ ಎಂದು ಹೇಳಿ ನಗುತ್ತಲೇ ಚರ್ಚೆಗೆ ತೆರೆ ಎಳೆದುಬಿಡುತ್ತಿದ್ದರು. ಅವರು ಯಾವಾಗಲೂ ಸಮಿತಿಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಎಲ್ಲ ಸದಸ್ಯರ ಹತ್ತಿರ ನಿಂತು ಅವರ ಬರವಣಿಗೆ ನೋಡುತ್ತ ಚರ್ಚೆ ವಿಷಯಕ್ಕೆ ಯೋಚಿಸುತ್ತಾ ಇರುತ್ತಿದ್ದು, ತಟ್ಟನೆ ಸಮಾಧಾನ ಹೇಳಿ ಒಮ್ಮೆ ನಕ್ಕು ಬಿಡುತ್ತಿದ್ದರು.

ಮೂರು ವರ್ಷಗಳ ಕಾಲ ಆರಾಧ್ಯರ ಜೊತೆಯಲ್ಲಿ ಕೆಲಸ ಮಾಡಿದ್ದು ಮೂರು ದಿನಗಳನ್ನು ಕಳೆದಂತಾಯಿತು. ಮಧ್ಯಾಹ್ನ ಹೋಟಲಿಗೆ ಹೋಗುತ್ತಿದ್ದಾಗಲೂ ಊಟಮಾಡುವಾಗಲೂ ತಿಳಿಹಾಸದೊಂದಿಗೆ ಏನಾದರೊಂದು ವಿಷಯ ಪ್ರಸ್ತಾಪಿಸುತ್ತಿದ್ದರು.

ಮೂರು ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕೆಲಸ ಮಾಡಿದರು. ಅಲ್ಲಿಯೂ ಸಂಶೋಧನೆಯ ಕೆಲಸವೇ. ಪರಿಷತ್ತಿನ ಪುಸ್ತಕಭಂಡಾರವನ್ನು ಸಕ್ರಿಯವಾಗಿ ಬಳಸಿಕೊಂಡು ಅನೇಕ ಪ್ರಾಚೀನ ಗ್ರಂಥಗಳನ್ನು ಪಾಠಾಂತರ ಸಹಿತವಾಗಿ ಸಂಶೋಧನೆ ನಡೆಸಿ ಅವುಗಳಿಗೆ ವಿಸ್ತಾರವಾದ ಪ್ರಸ್ತಾವನೆ ಬರೆದು ಪ್ರಕಟಿಸಿದರು.

ಆರಾಧ್ಯರು ಕೋಲಾರ ಜಿಲ್ಲೆಯವರೆಂದು ಕೇಳಿದ್ದೇನೆ. ಅಲ್ಲಿಯ ಜನ ಭೂಮಿಯನ್ನು ಅಗೆದು ಚಿನ್ನವನ್ನು ತೆಗೆಯುತ್ತಾರೆ. ಮಣ್ಣಿನ ಗುಣ ಅಂತ ಕಾಣುತ್ತದೆ. ಆರಾಧ್ಯರದೂ ಅಗೆಯುವ ಕೆಲಸವೇ. ಕನ್ನಡ ಸಾಹಿತ್ಯದ ಗಣಿಯಲ್ಲಿ ಅಗೆದು ಅಮೂಲ್ಯ ಪದಸಂಪತ್ತನ್ನು ತೆಗೆಯುವುದೇ ಅವರ ಕೆಲಸ. ಅವರ ಶಬ್ದ ಭಂಡಾರದಲ್ಲಿ ಈವರೆಗೆ ಪ್ರಕಟವಾಗದ ಎಷ್ಟೋ ಅಮೂಲ್ಯ ಸಂಪತ್ತಿದೆ. ಅದನ್ನು ಯಾವಾಗ ಕನ್ನಡಿಗರು ಬಳಸಿಕೊಳ್ಳುತ್ತಾರೆಯೋ ಕಾದುನೋಡಬೇಕು.

ತಮ್ಮಲ್ಲಿ ಪ್ರಕಟವಾಗದೆ ಉಳಿದಿರುವ ಶಬ್ದಭಂಡಾರದ ಒಂದು ಸ್ವತಂತ್ರ ನಿಘಂಟನ್ನು ನೀವೇ ಪ್ರಕಟಿಸಿ ಎಂದು ಸಲಹೆ ಮಾಡಿದೆ. ನನ್ನ ಸ್ವಂತದ್ದು ಅಂತ ಏನೂ ಇರಬಾರದು ಗೌಡರೇ, ಕೊಡಬೇಕಾದುದ್ದನ್ನು ಕೊಟ್ಟಿದ್ದೇನೆ, ಅದೇ ಸಾಕು ಎಂದು ಹೇಳುತ್ತಾರೆ.

ಒಂದು ವಿಷಾದದ ಸಂಗತಿ ಎಂದರೆ ಮೈಸೂರು ವಿಶ್ವವಿದ್ಯಾನಿಲಯವಾಗಲಿ, ಕನ್ನಡ ಸಾಹಿತ್ಯ ಪರಿಷತ್ತಾಗಲಿ, ಕನ್ನಡ ಸಾಹಿತ್ಯ ಸಂಸ್ಥೆಗಳಾಗಲಿ, ಸರ್ಕಾರವಾಗಲೀ ಇವರನ್ನು ಗುರುತಿಸಿ ಸೂಕ್ತವಾಗಿ ಅವರಿಗೆ ಯಾವುದೇ ಗೌರವ ಸಲ್ಲಿಸಲಿಲ್ಲ. ಒಂದು ಕಥೆಪುಸ್ತಕ ಬರೆದವರಿಗೂ ಅರ್ಥವಾಗದ, ಓದಿದವರಿಗೂ ಅರ್ಥವಾಗದ ಹತ್ತು ಕವನಗಳನ್ನು ಬರೆದು ಅದಕ್ಕೊಂದು ಆಕರ್ಷಣೆ ಹೆಸರಿಟ್ಟು ಯಾರನ್ನೋ ಆಶ್ರಯಿಸಿ ಹಲ್ಲುಗಿಂಜಿ ಪ್ರಶಸ್ತಿಗಳನ್ನು ಪಡೆದು ಕೊಂಡವರು, ಪಡೆದು ಕೊಳ್ಳುತ್ತಿರುವವರು ಎಷ್ಟೋ ಜನ. ಆದರೆ ನಮ್ಮ ಈ ಅಪರೂಪದ ವಿದ್ವಾಂಸ ಯಾರ ಕಣ್ಣಿಗೆ ಬೀಳದಿರುವುದು ಆಶ್ಚರ್ಯ. ಆ ಪದವಿಗಳಿಗೆ ಆಸೆಪಡುವವರಲ್ಲ. ಆರಾಧ್ಯರು ಯಾರ ಬಳಿಯೂ ಕೈಕಟ್ಟಿ ನಿಲ್ಲುವುದಾಗಲೀ ಅವರ ಮನೆಯ ಬಾಗಿಲನ್ನು ಕಾಯ್ದು ಯಾವುದಾದರೂ ಒಂದು ಪದವಿಗಿಟ್ಟಿಸುವುದಕ್ಕೆ ಪ್ರಯತ್ನಿಸುವುದಾಗಲಿ ನಮ್ಮ ಆರಾಧ್ಯರ ಜಾಯಮಾನಕ್ಕೆ ಒಗ್ಗಿದ್ದಲ್ಲ.

ಅವರು ಹೇಳುವುದು ಒಂದೇ ಮಾತು. ಗೌಡರೇ ಕನ್ನಡನಾಡು ವಿಶಾಲವಾಗಿದೆ. ಐದು ಕೋಟಿ ಕನ್ನಡಿಗರಿದ್ದಾರೆ. ಅವರಿಗೆ ಅಗತ್ಯವಾಗಿ ಬೇಕಾದ ಶಬ್ದಭಂಡಾರವನ್ನು ಕೊಟ್ಟಿದ್ದೇನೆ. ಅವರು ಗುರುತಿಸಿಕೊಂಡರೆ ಸಾಕು. ಅದಕ್ಕಿಂತ ನನಗೆ ಯಾವ ಪ್ರಶಸ್ತಿ ಬೇಕು ಬಿಡಿ ಎಂದರು. ಶ್ರೀ ಬಸವಾರಾಧ್ಯರು ಕನ್ನಡದ ಅನರ್ಘ್ಯರತ್ನ. ಈ ರತ್ನವನ್ನು ಕನ್ನಡಿಗರು ಜೋಪಾನ ಮಾಡಬೇಕಾದುದು ಕನ್ನಡಿಗರ ಆದ್ಯಕರ್ತವ್ಯ. ಇದರ ಗರ್ಭದಲ್ಲಿ ಅನೇಕ ರತ್ನಗಳು ತುಂಬಿಕೊಂಡಿವೆ. ಅವು ಯಾವಾಗ ಹೊರ ಬೀಳುತ್ತವೆಯೋ ಕಾದು ನೋಡಬೇಕು. ದಯಾಮಯನಾದ ಪರಶಿವನು ಆರಾಧ್ಯರಿಗೆ ತುಂಬು ಆರೋಗ್ಯ ಆಯಸ್ಸು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ.

XXX

ವಿವಾದಾತೀತ ವ್ಯಕ್ತಿತ್ವದ ಪ್ರೊ. ಎನ್. ಬಸವಾರಾಧ್ಯರು

-ಕೆ.ಎಸ್. ಪಾಟೀಲ

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ಪ್ರೊ. ಎನ್. ಬಸವಾರಾಧ್ಯರು (೧೯೮೮ರಲ್ಲಿ) ಸ್ಪರ್ಧಿಸಿದ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯ ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಮ್ಮ ಧರ್ಮಪತ್ನಿ ಶ್ರೀಮತಿ ಭಾರತಿಪಾಟೀಲ ಅವರು ಸ್ಪರ್ಧಿಸಿದ್ದರು. ಇಬ್ಬರ ಚುನಾವಣೆಯ ಪ್ರಚಾರ ದಿ॥ ಪ್ರೊ. ಬಿ.ಟಿ. ಸಾಸನೂರ ಅವರ ಮಾರ್ಗದರ್ಶನದಲ್ಲಿ ಶ್ರೀ ಮಹಾಂತ ಗುಲಗಂಜಿ ಅವರ ವ್ಯವಸ್ಥಿತ ಸಾರಥ್ಯದಲ್ಲಿ ನಡೆದು ಇಬ್ಬರೂ ಆಯ್ಕೆಯಾದರು. ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಯಾದ ಭಾರತಿಪಾಟೀಲರು ಹೆಗ್ಗಳಿಕೆಗೆ ಪಾತ್ರರಾದ ಮಾತು ಬಸವಾರಾಧ್ಯರ ಮನಸ್ಸಿನಿಂದಲೇ ಬಂದದ್ದು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಸಭೆಗೆ ಭಾರತಿಪಾಟೀಲರ ಜೊತೆಗೆ ಬೆಂಗಳೂರಿಗೆ ಹೋದಾಗ ಅಧ್ಯಕ್ಷರನ್ನು ಅವರ ಕೋಣೆಯಲ್ಲಿ ಕಂಡು ಶುಭಾಶಯಗಳನ್ನು ತಿಳಿಸಿದೆವು. ನಿಮ್ಮ ಭಾಗಕ್ಕೆ ಚುನಾವಣಾ ಸಂದರ್ಭದಲ್ಲಿ ಬರಲಿಕ್ಕಾಗಲಿಲ್ಲ. ಆದರೂ ಅತ್ಯಂತ ಉತ್ಸಾಹದಿಂದ ನನ್ನ ಚುನಾವಣೆ ಮಾಡಿ ಆರಿಸಿತಂದಿರಿ ಎಂದು ಹೇಳುವಾಗ ಕೃತಜ್ಞತಾಭಾವವಿತ್ತು. ಅವರ ವ್ಯಕ್ತಿನೋಟಕ್ಕಿಂತಲೂ ವ್ಯಕ್ತಿತ್ವ ಎಷ್ಟೊಂದು ಪ್ರಭಾವಬೀರಿತು ಎಂದು ಮನಸ್ಸಿನಲ್ಲಿ ವಿಚಾರಿಸಿದೆ.

ಶಿಸ್ತುಕಟ್ಟಾದ ಕೃಶ ಶರೀರದ ಪ್ರೊ. ಎನ್. ಬಸವಾರಾಧ್ಯರ ವಯಸ್ಸು ಎಪ್ಪತ್ತೈದು. ಇನ್ನೂ ಪತ್ರಿಕೆಯನ್ನಾಗಲೀ, ಮತ್ತಾವುದೇ ಕಾಗದವನ್ನಾಗಲೀ ಕನ್ನಡಕದ ಸಹಾಯವಿಲ್ಲದೆ ಓದುವುದನ್ನು ನೋಡಿದಾಗ ಆಶ್ಚರ್ಯವೆನಿಸಿತು.

ಸಮಯ ಪಾಲನೆಯಲ್ಲಿ ಕಿಂಚಿತ್ತೂ ಹಿಂದೆ ಮುಂದೆ ಸರಿದವರಲ್ಲ. ಬೆಳಿಗ್ಗೆ ಹತ್ತುಗಂಟೆಗೆ ಆಫೀಸಿನಲ್ಲಿ ಹಾಜರಿದ್ದು ಸಾಯಂಕಾಲವೇ ಮನೆಗೆ ತೆರಳುವ ರೂಢಿಯನ್ನು ಬೆಳೆಸಿಕೊಂಡವರು. ಎಂದೂ ಯಾವುದಕ್ಕೂ ಕೋಪಿಸಿಕೊಂಡವರಲ್ಲ. ಸಮಚಿತ್ತದಿಂದ ಎಲ್ಲವನ್ನೂ ಆಲಿಸಿ ಯೋಚಿಸಿ ನಿರ್ಣಯಿಸುವಂಥವರು.

'ನನಗೆ ನಾನೇ ಮಾದರಿ' ಎಂಬುದು ಪ್ರೊ. ಎನ್. ಬಸವಾರಾಧ್ಯರ ಬದುಕಿನ ರೀತಿ. ಹತ್ತಿರದಿಂದ ನೋಡಿದ ನನಗೆ ಅವರ ಬದುಕಿನ ಅಂತರಂಗ ಹಾಗೂ ಬಹಿರಂಗಗಳೆರಡರ ಸರಳತೆ, ನಿರ್ಮಲತೆ ಎದ್ದು ಕಾಣುತ್ತದೆ. ಯಾವುದೇ ವಿಷಯವನ್ನು ಚಿಂತನೆ ಮಾಡುವಾಗ ಆ ಚಿಂತನವನ್ನು ಅತೀ ಸರಳತೆಯಿಂದ ಅರ್ಥೈಸಿಕೊಳ್ಳುತ್ತಿದ್ದುದು ಅವರ ವಿಶೇಷಗುಣ. ಬದುಕಿನ ಪ್ರತಿಯೊಂದು ದಿನವೂ ಕಲಿಯುವಿಕೆಯ ಮತ್ತೊಂದು ಹೆಜ್ಜೆ ಅನ್ನುವ ತತ್ತ್ವ ಅವರದು. ಅವರು ಓದುವಾಗ ಯಾವುದೇ ಒಂದು ಸಣ್ಣ ಶಬ್ದ ತೊಡಕಾದರೆ ಆ ಕ್ಷಣವೇ ನಿಘಂಟಿನ ಒಳಹೊಕ್ಕು ಆ ಶಬ್ದವನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳುತ್ತಿದ್ದರು. ಮನೆಯಲ್ಲಿ ಫಲಂಗದ ಮೇಲೆ ಕುಳಿತಾಗ ಸುತ್ತಲೂ ಪುಸ್ತಕಗಳ ರಾಶಿ. ದುಡುಕಿ ಮಾತನಾಡದ ವಿಶೇಷಗುಣ. ತನ್ನ ಮಾತಿನಿಂದ ಆಲಿಸುವವರಿಗೆ ಎಲ್ಲಿ ನೋವಾಗುವುದೋ ಎಂಬ ಸೂಕ್ಷ್ಮ ಮನೋಭಾವ. ಕಷ್ಟದಲ್ಲಿರುವವರಿಗೆ ಪರಿಹಾರವನ್ನು ಒದಗಿಸುವ, ಸಾಂತ್ವನ ಹೇಳುವ ತ್ಯಾಗಮನೋಭಾವ ಅವರದು.

ಸರಳ-ಸಜ್ಜನಿಕೆಯ ಸಾಕಾರಮೂರ್ತಿ. ಮಾತಿನಲ್ಲಿ ನಯ-ವಿನಯ. ಯಾರ ಜೊತೆಗೂ ಕಠೋರವಾಗಿ ಮಾತನಾಡಿದವರಲ್ಲ. ಅವರೊಂದಿಗೆ ನನ್ನ ಒಡನಾಟ ಯಾವಾಗಲೂ ಆತ್ಮೀಯತೆಯಿಂದ ಪ್ರೀತಿ-ವಿಶ್ವಾಸದಿಂದ ಕೂಡಿರುತ್ತಿತ್ತು. ಸಭೆ ಮುಗಿದ ನಂತರ, ನನ್ನನ್ನು ನನ್ನ ಜೊತೆಗೆ ಭಾರತಿ, ಡಾ. ಎಂ.ಎಸ್. ಪಾಟೀಲ (ಗುಲಬರ್ಗಾ), ಪ್ರೊ. ಸಿ.ವಿ. ಜ್ಯೋತಿ (ಬೆಳಗಾಂವ) ಹಾಗೂ ಬ್ಯಾಳಿ (ಕೊಪ್ಪಳ) ಅವರನ್ನು ಕರೆದುಕೊಂಡು ಮನೆಗೆ ಹೋಗುತ್ತಿದ್ದರು. ಭಾರತೀ, ನೀನು ಒಳಗೆ ಊಟಮಾಡು ಎಂದು ಹೇಳುತ್ತಾ ನಮ್ಮೊಂದಿಗೆ ಹರಟೆ, ಮಾತು ನಡೆಸುತ್ತಿದ್ದರು. ಮಗಳು ಮತ್ತು ಅಳಿಯನ ರೀತಿಯಲ್ಲಿ ಕಂಡ ಅವರ ಮನಸ್ಸು ಬಹಳ ನಿರ್ಮಲ, ಕಲ್ಮಷರಹಿತವಾದದ್ದು. ಭಾರತಿಯ ಅಧ್ಯಕ್ಷ ಪದವಿಯ ಅವಧಿ ಮುಗಿದನಂತರವೂ ನಾಲ್ಕೈದು ಸಲ ಅವರ ಮನೆಗೆ ಹೋದಾಗ ಮೊದಲಿದ್ದ ಪ್ರೀತಿ-ವಿಶ್ವಾಸ ಅವರಲ್ಲಿ ಕಾಣುತ್ತಿತ್ತು.

ಪ್ರೊ. ಎನ್. ಬಸವಾರಾಧ್ಯರು ಅಧ್ಯಕ್ಷರಾಗಿದ್ದ ಅವಧಿಯಲ್ಲಿಯೇ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿ-ಸಂಘದ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟಕರಾಗಿ ಭಾಗವಹಿಸಿದ್ದರು. ಡಾ|| ಎಂ.ಜಿ. ಬಿರಾದಾರ, ಗುಲಬರ್ಗಾ ಅವರು ಮುಖ್ಯ-ಅತಿಥಿಗಳಾಗಿ ಆಗಮಿಸಿದ್ದರು. ಸಾಯಂಕಾಲ 'ಲಂಕೇಶ-ಸ್ಮರಣೆ' ವಿಚಾರ-ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ಇಡೀ ದಿವಸದ ಕಾರ್ಯಕ್ರಮಗಳಲ್ಲಿ ಅತ್ಯಂತ ಸಹನೆಯಿಂದ ಪಾಲ್ಗೊಂಡಿದ್ದರು. ನಮ್ಮ ಮನೆಯಲ್ಲಿಯ ಪ್ರೀತಿ-ಭೋಜನವನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಅವರ ಸ್ಮರಣಶಕ್ತಿ ಅಗಾಧವಾದದ್ದು. ಅದೇ ಸಂದರ್ಭದಲ್ಲಿ ಕನ್ನಡದ ಖ್ಯಾತಕವಿ ಶ್ರೀ ಶಂ.ಗು.ಬಿರಾದಾರ ಅವರ 'ಅಭಿನಂದನಾ' ಸಮಾರಂಭದಲ್ಲಿ ಮುಖ್ಯ-ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರ ವಿದ್ವತ್‌ಪೂರ್ಣ ಮಾತುಗಳು ಕೇಳುಗರ ಹೃದಯ ತಟ್ಟಿದವು.

ಕನ್ನಡ, ಕರ್ನಾಟಕದ ವಿಷಯದಲ್ಲಿ ಅಪಾರ ಕಾಳಜಿಯುಳ್ಳವರು. ಅವರ ಭೇಟಿ ಬಯಸಿ ಬರುವವರಿಗೆ ಮುಕ್ತ ಅವಕಾಶ. ಯಾವ ನಿರ್ಬಂಧವೂ ಇಲ್ಲ. ಒಮ್ಮೆ ಅಧ್ಯಕ್ಷರ ಕೊಠಡಿಯಲ್ಲಿ ಕ್ಷೌರಿಕ ಆಲ್ಬಮ್ ಹಿಡಿದುಕೊಂಡು ಬಂದು ತೋರಿಸುತ್ತಾ ಇಂಥಿಂತವರು ನನ್ನ ಸಲೂನಕ್ಕೆ ಭೇಟಿ ಕೊಟ್ಟಿದ್ದಾರೆ ಅಂತಾ ಹೇಳಿದಾಗ ನಾನು ಕೂಡಾ ಬರುತ್ತೇನೆ ಅಂತಾ ಭರವಸೆಕೊಟ್ಟು ಕಳಿಸಿದರು. ಯಾರೇ ಬಂದರೂ ಪ್ರೋತ್ಸಾಹಿಸುವ ಗುಣ ಅವರದು.

"Do What you believe in and believe What you do in" ಎಂಬ ಉಕ್ತಿಯಂತೆ ನಡೆದುಕೊಳ್ಳುವವರು. ನಂಬಿ-ನೆಚ್ಚಿನ ಕೆಲಸಗಳನ್ನೇ ಮಾಡುವವರು ಮತ್ತು ಮಾಡುವ ಕೆಲಸದಲ್ಲಿ ಅಪಾರ ಶ್ರದ್ಧೆ, ನಂಬಿಕೆ ಇಡುವಂಥವರು.

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ 'Great men are great because they never think they are great, little men are little because they never think they are little'.

ಪ್ರೊ. ಎನ್. ಬಸವಾರಾಧ್ಯರ ವ್ಯಕ್ತಿತ್ವ ಬಹು ಎತ್ತರದ್ದು. ನಡೆ-ನುಡಿಯಲ್ಲಿ ಸಾತ್ವಿಕ ಸ್ವಭಾವದವರು. ಹೇಳಿದ-ಕೇಳಿದ ವಿಷಯವನ್ನು ಕೂಡಲೇ ಗ್ರಹಿಸುವ ಸಾಮರ್ಥ್ಯವುಳ್ಳವರು. ಸುಳ್ಳು-ಪೊಳ್ಳು ಮಾತುಗಳಾಡುವವರ ಬಗ್ಗೆ ಮಾನ್ಯತೆ ಕೊಡುತ್ತಿರಲಿಲ್ಲ. ಯಾವ ವಾದ-ವಿವಾದಗಳಲ್ಲಿ ಸಿಕ್ಕುಬೀಳುವವರಲ್ಲ. ಎಂತಹ ಸಮಸ್ಯೆ ಎದುರಾದರೂ ಸುಲಿದ ಬಾಳೆಹಣ್ಣಿನಂದದಿ ಸಲಿಸಾಗಿ ಬಿಡಿಸಿಕೊಳ್ಳುವಂಥವರು.

ಆರಾಧ್ಯರೊಂದಿಗೆ ಎರಡು ದಿನ

-ಸಾ.ಮ. ಹುಂಡೇಕಾರ

ಪ್ರೊ. ಎನ್. ಬಸವಾರಾಧ್ಯ- ಹೆಮ್ಮೆಯ ಈ ಕನ್ನಡ ಪುತ್ರನಿಗೆ ಎಪ್ಪತ್ತೈದು ಸಂವತ್ಸರಗಳು ತುಂಬಿದ ಸವಿನೆನಪಿಗಾಗಿ ಅಭಿನಂದನ ಗ್ರಂಥವೊಂದನ್ನು ಸಮರ್ಪಿಸುತ್ತಿರುವುದು ಸ್ತುತ್ಯ ಮತ್ತು ಯಥೋಚಿತ ಕಾರ್ಯವಾಗಿದೆ. ಕನ್ನಡ ಸಾಹಿತ್ಯದ ದಿಗ್ಗಜರೆನಿಸಿದ, ಕನ್ನಡದ ಕಂಪನ್ನು ಎಲ್ಲೆಡೆ ಹರಡಿದ, ಅಸಾಧಾರಣ ಕರ್ತೃತ್ವಶಕ್ತಿಯ, ಅನುಪಮ ಯೋಗ್ಯತೆಯ, ಅಪೂರ್ವಸಾಧಕರಾದ ಇವರನ್ನು ಅಭಿನಂದಿಸುವುದು ಸಮಸ್ತ ಕನ್ನಡಿಗರ ಕರ್ತವ್ಯವಾಗಿದೆ.

ನಾನು ವೃತ್ತಿಯಿಂದ ಕರಸಲಹೆಗಾರನಾಗಿದ್ದರಿಂದ ಪ್ರೊ. ಬಸವಾರಾಧ್ಯರ ಸಾಹಿತ್ಯ ಕುರಿತು ನನಗೆ ಹೆಚ್ಚು ಅಭ್ಯಾಸಮಾಡುವ ಯೋಗ ನನಗೆ ಬರಲಿಲ್ಲ. ಆದರೆ ಕಳೆದ ಮೂವತ್ತು ವರ್ಷಗಳಿಂದ ಅಖಂಡವಾಗಿ ಬಿಜಾಪುರ ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘದ ಅಧ್ಯಕ್ಷನಾಗಿ ಸಾಹಿತ್ಯ, ಕಲೆ, ಸಂಸ್ಕೃತಿ-ಸೇವಾಕಾರ್ಯದಲ್ಲಿ ತೊಡಗಿಕೊಂಡಿರುವ ನನಗೆ ನಾಡಿನ ವಿದ್ವನ್ಮಣಿಗಳ ಸ್ನೇಹಸಂಪರ್ಕವುಂಟಾಗಿ ಸಹಜವಾಗಿಯೆ ನಾನು ಆ ಬಳಗದಲ್ಲಿ ಬೆರೆತನಾದ್ದರಿಂದ ಪ್ರೊ. ಬಸವಾರಾಧ್ಯರನ್ನೊಳಗೊಂಡು ಅವರೆಲ್ಲರ ಸಾಹಿತ್ಯಕೃಷಿಯನ್ನು ಅಲ್ಪಸ್ವಲ್ಪವಾದರೂ ಕಂಡುಂಡು ಅನುಭವಿಸಿದವನಾಗಿದ್ದೇನೆ. ಈ ಸಂದರ್ಭದಲ್ಲಿ ಅಭಿನಂದನಗ್ರಂಥ ಸಮಿತಿಯವರು ಪ್ರಕಟಿಸಿದ ಪ್ರೊ. ಬಸವಾರಾಧ್ಯರ ಪರಿಚಯಪತ್ರ ಸಂಕ್ಷಿಪ್ತವಾಗಿದ್ದರೂ ಕೂಡ ಅವರ ಘನ ವ್ಯಕ್ತಿತ್ವದ ಬಗ್ಗೆ, ಅವರ ಪಾಂಡಿತ್ಯದ ಬಗ್ಗೆ ನನಗೆ ಇನ್ನೂ ಹೆಚ್ಚು ಪರಿಚಯವಾಯಿತು.

ನನಗೆ ಬಸವಾರಾಧ್ಯರ ನಿಕಟ ಸಂಬಂಧಬಂದದ್ದು ೧೯೬೮ರಲ್ಲಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನದ ಚುನಾವಣೆಗೆ ಸಂಬಂಧಿಸಿ ಅವರು ಬಿಜಾಪುರಕ್ಕೆ ಬಂದಾಗಿನ ಸಂದರ್ಭದಲ್ಲಿ ಅವರ ಪ್ರೀತಿ, ಗೌರವದವರಾದ ಪ್ರೊ. ಬಿ.ಟಿ. ಸಾಸನೂರ ಅವರ ಮುಖಾಂತರ. ನಾನೂ ಪ್ರೊ. ಸಾಸನೂರವರ ಶಿಷ್ಯ- ಸ್ನೇಹವಲಯದಲ್ಲಿಯವನೇ.

ಪ್ರೊ. ಬಸವಾರಾಧ್ಯರು ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದರು. ಕನ್ನಡ ಭಾಷಾ ಪ್ರಾಧ್ಯಾಪಕರಾದ ಈ ಉಭಯತರು ಅನೇಕ ಸಂದರ್ಭಗಳಲ್ಲಿ ಜೊತೆಯಾಗಿ ಕನ್ನಡ ಕೈಂಕರ್ಯಕೈಕೊಂಡವರು. ಅದರಲ್ಲೂ ಕರ್ನಾಟಕ ಸರ್ಕಾರದ ಕನ್ನಡ ಆಡಳಿತಭಾಷಾ ಸಮಿತಿಯಲ್ಲಿ ಪ್ರೊ. ಸಾಸನೂರರವರು ಅಧ್ಯಕ್ಷರು, ಪ್ರೊ. ಬಸವಾರಾಧ್ಯರು ಕಾರ್ಯದರ್ಶಿಗಳು. ಈ ಸಂದರ್ಭ ಅವರಿಬ್ಬರನ್ನು ಹೆಚ್ಚು ಸಮೀಪದಲ್ಲಿ ತಂದು ಅವರಲ್ಲಿ ಪರಸ್ಪರ ಪ್ರೀತ್ಯಾದರಾಭಿಮಾನ ಹೆಚ್ಚಿಸಿತು.

ಇದೇ ಕಾಲಕ್ಕೆ ವಿಜಾಪುರ ಜಿಲ್ಲಾ ಸಾಹಿತ್ಯ ಪರಿಷತಿನ ಅಧ್ಯಕ್ಷಸ್ಥಾನಕ್ಕೆ ಖ್ಯಾತ ಮಕ್ಕಳಸಾಹಿತಿ ಶ್ರೀ ಶಂ.ಗು. ಬಿರಾದಾರ ಅವರ ಪುತ್ರಿ ಶ್ರೀಮತಿ ಭಾರತಿ ಪಾಟೀಲರು ಸ್ಪರ್ಧಿಸಿದ್ದರು. ಆ ಸಂದರ್ಭದಲ್ಲಿ ಅವರ ಪರವಾಗಿ ಈ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಅವರ ಯಶಸ್ಸಿಗೆ ಕಾರಣರಾದವರಲ್ಲಿ ನಾನೂ ಒಬ್ಬ. ಜೊತೆಗೆ, ಕೇಂದ್ರ ಪರಿಷತ್ತಿನ, ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದ ಪ್ರೊ. ಬಸವಾರಾಧ್ಯರವರಿಗೆ ಬಿಜಾಪುರ ಜಿಲ್ಲೆಯಿಂದ ಅತ್ಯಧಿಕ ಮತದೊರೆತು ಅವರಿಗೆ ಗೆಲವಾಗುವಂತೆ ನಾನೂ ಕಾರ್ಯಮಾಡಿದ್ದೇನೆ. ಇಂತಹ ಸುಯೋಗವೊಂದು ನನಗೆ ದೊರೆತದ್ದು ನನ್ನ ಭಾಗ್ಯವೆಂದೇ ನಾನು ಭಾವಿಸುತ್ತೇನೆ.

ಚುನಾವಣೆಯ ತರುವಾಯ ರಚಿತವಾದ ವಿಜಾಪುರ ಜಿಲ್ಲಾ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷನಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಜಿಲ್ಲಾ ಅಧ್ಯಕ್ಷೆ ಶ್ರೀಮತಿ ಭಾರತಿ ಪಾಟೀಲರು ನನಗೆ ಒದಗಿಸಿಕೊಟ್ಟದ್ದರಿಂದ ನಾನು ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಂದ ಪ್ರೊ. ಬಸವಾರಾಧ್ಯರ ಸಂಪರ್ಕದಲ್ಲಿ ಬಂದೆನು.

ಪ್ರೊ. ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಂದಿನಿಂದಲೂ ನಾಡು ನುಡಿಯ ರಕ್ಷಣೆ ಹಾಗೂ ಏಳ್ಗೆಯ ಬಗ್ಗೆ ದಿಟ್ಟ ನಿಲುಮೆಯನ್ನು ಹೊಂದಿ ಒಳ್ಳೇ ಕಾರ್ಯನಿರ್ವಹಿಸಿದ್ದಾರೆ. ಆಗ ಇವರ ವಯಸ್ಸು ಎಪ್ಪತ್ತೈದು. ಆದರೂ ಚೈತನ್ಯದ ಚಿಲುಮೆಯಾಗಿದ್ದ ಇವರು ತಮ್ಮ ನಿರಂತರ ಪ್ರೋತ್ಸಾಹ, ಪ್ರೇರಣೆಗಳಿಂದ ಪರಿಷತ್ತಿನ ಪ್ರತಿಯೊಂದು ಕಾರ್ಯವನ್ನು ಯಶಸ್ವಿಗೊಳಿಸಿದ್ದಾರೆ. ಇವರ ಅಧಿಕಾರಾವಧಿಯಲ್ಲಿ ಕನಕಪುರ, ಬಾಗಲಕೋಟೆಗಳಲ್ಲಿ ಕ್ರಮವಾಗಿ ಅಖಿಲ ಭಾರತ ೬೭ ಮತ್ತು ೬೮ನೆಯ ಸಾಹಿತ್ಯ ಸಮ್ಮೇಳನಗಳು ಒಳ್ಳೇ ವ್ಯವಸ್ಥೆಯಲ್ಲಿ ವೈಭವೋಪೇತವಾಗಿ ಸಮ್ಮೇಳನದ ಉದ್ದೇಶ ಈಡೇರುವಂತೆ ಜರುಗಿವೆ. ಒಟ್ಟಾರೆ ತಮ್ಮ ದಕ್ಷ, ಪ್ರಾಮಾಣಿಕ, ನಿಸ್ಪೃಹ ಸೇವೆಯಿಂದ ಅಪಾರ ಜನಮೆಚ್ಚುಗೆ ಪಡೆದಿದ್ದಾರೆ.

೧೮-೭-೨೦೦೦ರಂದು ವಿಜಾಪುರದಲ್ಲಿ ಜರುಗಿದ, ಖ್ಯಾತಕವಿ ಶ್ರೀ ಶಂ.ಗು. ಬಿರಾದಾರ ಅವರ 'ಹೂವಿನ ಹಂದರ' ಅಭಿನಂದನಗ್ರಂಥದ ಬಿಡುಗಡೆಗೆ ಪ್ರೊ. ಬಸವಾರಾಧ್ಯರು ಶ್ರೀ ಎಸ್. ಈಶ್ವರದೇವರು (ಈಗ ಇವರು ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಮಿತಿ ಪ್ರಧಾನ ಕಾರ್ಯದರ್ಶಿಗಳು) ಅವರೊಂದಿಗೆ ಬಂದಿದ್ದರು. ಆ ಕಾಲಕ್ಕೆ ಬಸವಾರಾಧ್ಯರವರ ಒಡನಾಟದ ಭಾಗ್ಯ ನನಗೆ ಮತ್ತೊಮ್ಮೆ ಲಭಿಸಿತು. ಮರುದಿನ ನಮ್ಮ ಮನೆಯಲ್ಲಿ ಒಂದು ಚಿಕ್ಕ ಸಮಾರಂಭವನ್ನು ಏರ್ಪಡಿಸಿ ಅವರನ್ನು ಸನ್ಮಾನಿಸಿದ ಸುವರ್ಣಾವಕಾಶವನ್ನು ನೆನಪಿಸಿಕೊಂಡರೆ ನನ್ನ ಹೃದಯ ತುಂಬಿ ಬರುತ್ತದೆ. ಅಂದಿನ ನನ್ನ ಈ ಅಲ್ಪಕಾರ್ಯಕ್ಕೆ ಅವರು ತೋರಿಸಿದ ಸೌಜನ್ಯತೆ, ಕೃತಜ್ಞತಾಭಾವ ಇಂದಿಗೂ ನನ್ನ ಕಣ್ಣು ಮುಂದೆ ನಿಂತಿವೆ.

ನನ್ನ ಷಷ್ಠಬ್ಧ ಸಮಾರಂಭದ ಸಂದರ್ಭದಲ್ಲಿ ನನ್ನ ಅಭಿಮಾನಿಗಳು, ಹಿತೈಷಿಗಳು, ಸ್ನೇಹಿತರು, ಹಿರಿಯರು, ಬಂಧು ಬಳಗದವರು ನನಗೆ ಕಾಣಿಕೆಯಾಗಿ ಅರ್ಪಿಸಿದ ನಿಧಿ ಹತ್ತುಸಾವಿರ ರೂಪಾಯಿಗಳನ್ನು, ಮುಧೋಳ ತಾಲೂಕಿನ ಸಮೀರವಾಡಿಯಲ್ಲಿ ಜರುಗಿದ ಅವಿಭಜಿತ ವಿಜಾಪುರ ಜಿಲ್ಲಾ ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷರಾದ ಡಾ. ಸಾ.ಶಿ. ಮರುಳಯ್ಯ ಅವರ ಮೂಲಕ ಸಾಹಿತ್ಯ ಪರಿಷತ್ತಿಗೆ ಕೊಟ್ಟು ಒಂದು ದತ್ತಿನಿಧಿಯನ್ನು ಸ್ಥಾಪಿಸಿದ್ದೆ. ಪ್ರೊ. ಎನ್. ಬಸವಾರಾಧ್ಯರು ಅಧ್ಯಕ್ಷರಿದ್ದ ಕಾಲದ ಈ ಸಂದರ್ಭದಲ್ಲಿಯೇ ವಿಜಾಪುರ ಕಾರ್ಯಕ್ರಮದ ಮರುದಿನ ಈ ನನ್ನ ದತ್ತಿನಿಧಿಯ ಪ್ರಥಮ ಕಾರ್ಯಕ್ರಮವನ್ನು ಸಿಂದಗಿ ಶ್ರೀ ಸಿ.ಎಂ. ಮನಗೂಳಿ

ಪದವಿ ಕಾಲೇಜವಲ್ಲಿ ಪ್ರೊ. ಬಸವಾರಾಧ್ಯರ ಅಧ್ಯಕ್ಷತೆಯಲ್ಲಿ ಜರುಗಿದ್ದು ಒಂದು ಯೋಗಾಯೋಗವೆಂದು ಭಾವಿಸಿದೆ. ಈ ಕಾರ್ಯಕ್ರಮದಲ್ಲಿ ಕಲಬುರ್ಗಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ಮ.ಗು. ಬಿರಾದಾರ, ಕಲಬುರ್ಗಿ ಅವರು ಮುಖ್ಯ ಅತಿಥಿಗಳಾಗಿ, ಶ್ರೀಮತಿ ಭಾರತೀ ಪಾಟೀಲ ಅಧ್ಯಕ್ಷರು, ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತು ಅವರು ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅಂದು ಬಸವಾರಾಧ್ಯರಿಗೆ ಬೆಂಗಳೂರಿಗೆ ಮರಳಿ ಹೋಗುವ ಅವಸರವಿದ್ದರೂ ಅವರ ಅಭಿಮಾನಿಗಳಾದ ಶ್ರೀ ಎಸ್. ವಾರದ ಅಧ್ಯಕ್ಷರು, ಅರ್ಬನ್ ಕೊ ಅಪರೇಟಿವ್ ಬ್ಯಾಂಕು, ಸಿಂದಗಿ ಇವರ ಮನೆಗೆ ಭೆಟ್ಟಿಯನ್ನಿತ್ತು ಅವರ ಆತಿಥ್ಯ ಸ್ವೀಕರಿಸಿದರು. ಶ್ರೀವಾರದ ಅವರು ಸಂತೋಷಗೊಂಡರು. ಇವೆಲ್ಲ ಸ್ಮರಣೆಗಳು ನನ್ನ ಮನದಲ್ಲಿ ಹಚ್ಚುಹಸಿರಾಗಿ ಉಳಿದುಕೊಂಡಿವೆ.

ಧೀಮಂತ ಕನ್ನಡ ಕುವರ ನಂಜುಂಡಾರಾಧ್ಯ ಬಸವಾರಾಧ್ಯರು ನಮ್ಮ ಮಧ್ಯ ಇರುವ ಹಳಗನ್ನಡ ಸಾಹಿತ್ಯದ ವಿದ್ವಾಂಸರು. ಅನೇಕ ಪ್ರಶಸ್ತಿಗಳು ಅವರನ್ನು ಹಿಂಬಾಲಿಸಿಕೊಂಡು ಬಂದಿವೆ. ಸಿದ್ಧಗಂಗಾಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳಿಂದ 'ಸಂಶೋಧಕ ಶಿವರತ್ನ' ಪ್ರಶಸ್ತಿಯನ್ನು ಪಡೆದಿದ್ದಾರೆ.

ಇವರಿಂದ ಇನ್ನೂ ವಿಶೇಷವಾಗಿ ಕನ್ನಡ ಸಂಶೋಧನ ಕ್ಷೇತ್ರಕ್ಕೂ ಒಟ್ಟಿನಲ್ಲಿ ಸಾಹಿತ್ಯ ಲೋಕಕ್ಕೂ ಸೇವೆ ಸಲ್ಲಲಿ ಮತ್ತು ಇನ್ನೂ ಹೆಚ್ಚಿನ ಪ್ರಶಸ್ತಿ ಗೌರವಗಳು ದೊರಕಲು ಇವರಿಗೆ ಆಯುರಾರೋಗ್ಯ ಪ್ರಾಪ್ತವಾಗಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

ಕನ್ನಡದ ಆರಾಧ್ಯರು

-ಎಲ್ಲೇಗೌಡ ಬೆಸಗರಹಳ್ಳಿ

ಕನ್ನಡ ಸಾಹಿತ್ಯ ಕ್ಷೇತ್ರದ ವಿದ್ವನ್ಮಣಿಗಳಲ್ಲಿ ಪ್ರೊ. ಎನ್. ಬಸವಾರಾಧ್ಯರು ವಿಶಿಷ್ಟ ವ್ಯಕ್ತಿತ್ವವುಳ್ಳವರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಯೋಜನೆಯಲ್ಲಿ ಮುಖ್ಯಸಂಪಾದಕತ್ವದಿಂದ ಪ್ರಧಾನ ಸಂಪಾದಕತ್ವದವರೆಗೆ ಕಾರ್ಯನಿರ್ವಹಿಸಿ ಕನ್ನಡಕ್ಕೊಂದು ಮಹತ್ವದ ನಿಘಂಟು ಸಂಪುಟಗಳನ್ನು ದೊರಕಿಸಿಕೊಟ್ಟವರು. ಹಳೆಗನ್ನಡ ಕಾವ್ಯಗಳನ್ನು ಸಂಪಾದಿಸಿಕೊಟ್ಟು ಕನ್ನಡ ನಾಡು-ನುಡಿಯ ಹಿರಿಸೇವೆಯನ್ನು ಕೈಗೊಂಡವರು.

ಅವರು ನಿಘಂಟು ವಿಭಾಗದಲ್ಲಿದ್ದಾಗ, ನಾನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದೆ. ಪ್ರೀತಿಯಿಂದ ಕರೆದು ಮಾತನಾಡಿಸಿ, ಕನ್ನಡ ಕಾರ್ಯಕ್ರಮಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹೇಗೆ ನಡೆಸಬೇಕು? ಗ್ರಾಮಾಂತರದಲ್ಲಿ ಸಾಹಿತ್ಯದ ಕಂಪನ್ನು ಉಳಿಸಿ ಬೆಳಸುವ ನಿಟ್ಟಿನಲ್ಲಿ ತಮ್ಮದೇ ಆದ ಸಲಹೆ-ಸೂಚನೆಗಳನ್ನು ನೀಡಿ, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಸಹಕರಿಸುತ್ತಿದ್ದರು. ನಂತರ ೧೯೯೮ರಿಂದ ೨೦೦೧ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪ್ರೊ. ಎನ್. ಬಸವಾರಾಧ್ಯರು ಪ್ರಕಟಣಾ ಕೆಲಸದಲ್ಲಿ ಹೆಚ್ಚಿನ ಆಸ್ಥೆ ವಹಿಸಿ, ಅಲಭ್ಯ ಕೃತಿಗಳನ್ನು ಮರುಮುದ್ರಣ ಮಾಡಿಸಿ, ಓದುಗರಿಗೆ ಸಿಗುವುದಕ್ಕೆ ಸಹಕರಿಸಿದರು. ಅಖಿಲಭಾರತ ಅರವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಕನಕಪುರದಲ್ಲಿ ನಡೆದಾಗ ೬೭ ಕೃತಿಗಳನ್ನು ಸಮ್ಮೇಳನದ ನೆನಪಾಗಿ ಸ್ವಾಗತ ಸಮಿತಿಯ ಸಹಕಾರದೊಂದಿಗೆ ಪರಿಷತ್ತಿನಿಂದ ಪ್ರಕಟಿಸುವ ಕೆಲಸವಂತೂ ಪರಿಷತ್ತಿಗೆ ಆರ್ಥಿಕ ಶಕ್ತಿಯನ್ನು ನೀಡುವುದಕ್ಕೆ ಪೋಷಕವೂ ಆಯಿತು. ಶ್ರೀಯುತರೊಂದಿಗೆ ಜಿಲ್ಲಾ ಕಸಾಪ ಅಧ್ಯಕ್ಷರಾಗಿ, ಅ.ಭಾ. ೬೭ನೆಯ ಕ.ಸಾ.ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸಮಾಡುವ ಅವಕಾಶ ಒದಗಿಬಂದಿತ್ತು. ಅವರ ಸರಳತನ, ಮೃದುನುಡಿಯ, ಸೌಮ್ಯವ್ಯಕ್ತಿತ್ವ, ತಿಳಿಹಾಸ್ಯ ಎಲ್ಲರನ್ನೂ ಆಕರ್ಷಿಸಿದ್ದವು.

ಬಹುಭಾಷಾಪಂಡಿತರಾದ ಆರಾಧ್ಯರು ಕನ್ನಡ ಕಾರ್ಯಕ್ರಮಗಳು ನಾಡಿನಾದ್ಯಂತ ನಡೆಯಬೇಕು. ಒಂದಲ್ಲ ಒಂದು ಕಾರ್ಯಕ್ರಮಗಳು ಕ.ಸಾ.ಪ ವತಿಯಿಂದ ಪ್ರತಿ ಜಿಲ್ಲೆಗಳಲ್ಲಿ ನಡೆಯುತ್ತಿರಬೇಕೆಂದು ಜಿಲ್ಲಾಧ್ಯಕ್ಷರನ್ನು ಹುರಿದುಂಬಿಸುತ್ತಿದ್ದರು. ಸಮಸ್ಯೆಗಳು ಎದುರಾದಾಗ ತಾಳ್ಮೆಯಿಂದ ಪರಿಹಾರ ಸೂಚಿಸುತ್ತಿದ್ದರು. ಸದಸ್ಯರ ಅಭಿಪ್ರಾಯಗಳನ್ನು ಆಲಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಜಾತೀಯತೆಯಾಗಲೀ, ಸಂಕುಚಿತ ಮನೋದೃಷ್ಟಿಯಾಗಲೀ, ಅವರ ಬಳಿ ಸುಳಿಯುತ್ತಿರಲಿಲ್ಲ. ಹೊಗಳಿಕೆಗೆ ಹಿಗ್ಗದೆ ತೆಗಳಿಕೆಗೆ ಕುಗ್ಗದೆ ನಡೆದುಕೊಳ್ಳುವ ಗುಣವಂತರು.

ಕಸಾಪ ಚುನಾವಣೆ ಸಂದರ್ಭದಲ್ಲಿ ಅವರು ತಳೆದ ನಿಲುವು ತುಂಬಾ ದೃಢವಾಗಿತ್ತು. "ನನ್ನ ಸೇವೆ ಕನ್ನಡ ಸಾಹಿತ್ಯಪರಿಷತ್ತಿಗೆ ಅಗತ್ಯವೆನ್ನಿಸಿದರೆ ಸದಸ್ಯರು ಮತನೀಡಿ ಆಯ್ಕೆ ಮಾಡಲಿ, ಇಲ್ಲವೇ ಬಿಡಲಿ, ಅದಕ್ಕೇಕೆ ಮನಸ್ಸು ಕೆಡಿಸಿಕೊಳ್ಳಬೇಕು? ಆತಂಕಗೊಳ್ಳಬೇಕು? ಬನ್ನಿರಿ" ಎನ್ನುತ್ತಿದ್ದರು. ಇಂತಹ ಮನಸ್ಸು ನಮ್ಮ ದೇಶದ ಎಲ್ಲಾ ರಂಗದ ಅಭ್ಯರ್ಥಿಗಳಲ್ಲಿ ಬಂದರೆ ದೇಶ ಒಂದು ರೀತಿಯಲ್ಲಿ ಶಾಂತಿ ಸಮಾಧಾನದಿಂದ ಇರುತ್ತದೆಂದು ಎನ್ನಿಸುತ್ತದೆ. ಶಿಸ್ತುಬದ್ಧವಾದ ಸಂಶೋಧನಾ ಕಾರ್ಯದಿಂದ ಹಿಡಿದು, ಮಹತ್ವದ ಕೃತಿಗಳ ಸಂಪಾದನೆಯವರೆಗೆ ಅವರ ಅಚ್ಚುಕಟ್ಟುತನ, ಪ್ರೌಢಿಮೆ, ಆಪ್ತವಾಗುವ ಅಭಿವ್ಯಕ್ತಿಗಳು ಚಿಂತನ ಪ್ರಧಾನವಾಗಿವೆ.

ಓದಿದ ಓದು ಬದುಕಿನಲ್ಲಿ ಅಡಿಗಡಿಗೆ ಬಳಕೆಯಾಗುತ್ತದೆ ಎಂಬುದನ್ನು ಅವರ ಒಡನಾಡಿಗಳೆಲ್ಲರೂ ಬಲ್ಲರು. ಪರಸ್ಪರ ಮಾತನಾಡುವಾಗ, ಸಂದರ್ಭಾನುಸಾರವಾಗಿ ವಿವಿಧ ಕಾವ್ಯಭಾಗದ ನುಡಿಕಟ್ಟುಗಳು ಪುಂಖಾನುಪುಂಖವಾಗಿ, ಸಹಜವಾಗಿ ಬರುವುದನ್ನು ಕಾಣಬಹುದು. ನ್ಯಾಯನಿಷ್ಠುರತೆಗೆ ಮತ್ತೊಂದು ಹೆಸರು. ಯಾರ ಮುಲಾಜಿಗೂ ಒಳಗಾಗುವ ಜಾಯಮಾನದವರಲ್ಲ. ಬಿ.ಎಂ.ಶ್ರೀ. ಪ್ರತಿಷ್ಠಾನ, ಪದ್ಮಶ್ರೀ ಡಾ. ಬಿ. ಶಿವಮೂರ್ತಿಶಾಸ್ತ್ರೀ ಪ್ರತಿಷ್ಠಾನಗಳ ಅಧ್ಯಕ್ಷರಾಗಿ ಮೌಲಿಕವಾದ ಕಾರ್ಯಕ್ರಮಗಳನ್ನು ನಡೆಸಿದ ಕೀರ್ತಿಗೆ ಭಾಜನರಾಗಿದ್ದಾರೆ. ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಅವರ ಲೇಖನಗಳು ಅತ್ಯಂತ ಮೌಲಿಕವು ಮತ್ತು ಚಿಂತನ ಪ್ರಧಾನವಾದವುಗಳಾಗಿವೆ.

ಪಂಡಿತರಿಂದ ಹಿಡಿದು ನನ್ನಂಥ ಪಾಮರರವರೆಗೂ ಅಪಾರ ಸ್ನೇಹಿತರನ್ನು, ಅಭಿಮಾನಿಗಳನ್ನು ಹೊಂದಿರುವ ಪ್ರೊ. ಬಸವಾರಾಧ್ಯರು ಕನ್ನಡಿಗರೆಲ್ಲರೂ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಸಾತ್ವಿಕ ಸಂಪನ್ನ ವ್ಯಕ್ತಿ. ನಮ್ಮ ನಡುವಿನ 'ಸಂಶೋಧಕ ಶಿವರತ್ನ'ವಾಗಿ ನೂರಾರುವರ್ಷಗಳು ಅವರಿಂದ 'ನಾಡುನುಡಿ'ಯ ಸೇವೆ ಸಲ್ಲುತ್ತಿರಲೆಂದು ಬಯಸುತ್ತಾ, ಕಿರಿಯನಾದ ನಾನು ಮನಸಾರೆ ಅಭಿನಂದಿಸುತ್ತೇನೆ.

XXX

'ನಿಘಂಟು ಬ್ರಹ್ಮ' ಶ್ರೀ ಎನ್. ಬಸವಾರಾಧ್ಯ

-ಪ್ರೊ. ಎನ್. ಚಂದ್ರಪ್ಪ

ಜ್ಞಾನವೃದ್ಧರೂ, ವಯೋವೃದ್ಧರೂ ಕನ್ನಡದ ನಿಘಂಟು ಬ್ರಹ್ಮರೆಂದೇ ಖ್ಯಾತರಾಗಿರುವ ಶ್ರೀ ಎನ್. ಬಸವಾರಾಧ್ಯರ ಸಂಪರ್ಕ ನನಗೆ ಬಹಳ ಇತ್ತೀಚಿನದು. ಅಂದರೆ ಶ್ರೀಯುತರು ರಾಜ್ಯದ ೫ ಕೋಟಿ ಕನ್ನಡಿಗರ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರಾತಿನಿಧ್ಯ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಿಂದ ಮಾತ್ರ. ಅವರ ಆಯ್ಕೆಗೆ ನಾನು ಪರಿಷತ್ತಿನ ಸದಸ್ಯನಾಗಿ ಮತ ಚಲಾವಣೆಯನ್ನು ಮಾಡಲಾಗಲಿಲ್ಲ. ಅಂದಿಗೆ ನಾನು ಪರಿಷತ್ತಿನ ಆಜೀವ ಸದಸ್ಯನಾಗಿರಲಿಲ್ಲ. ಡಾ. ನಲ್ಲೂರು ಪ್ರಸಾದ್, ಡಾ. ಕೆ.ವಿ. ಚಂದ್ರಣ್ಣಗೌಡ ಮೊದಲಾದ ಆಪ್ತರ ಸ್ನೇಹವಲಯದಲ್ಲಿದ್ದ ಕಾರಣ ಶ್ರೀರಾಮನಿಗೆ ಸೇತುವೆ ನಿರ್ಮಾಣದಲ್ಲಿ ಒದ್ದೆಯಾದ ದೇಹದ ಸಹಾಯದಿಂದ ಮರಳು ಹೊತ್ತು ಸಹಕರಿಸಿದ ಅಳಿಲಿನಂತೆ ಅವರ ಆಯ್ಕೆಯ ಸಂದರ್ಭದಲ್ಲಿ ಪರೋಕ್ಷವಾಗಿ ಸಹಕರಿಸಿದ್ದ ನೆನಪು ಮಾತ್ರ ನನ್ನದು. ಅವರು ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆಯೇ ನನಗೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಸಂಪರ್ಕ ಸಂಬಂಧಗಳು ಬೆಳೆಯುವಂತಾಯಿತು. ಮತ್ತೆ ಮತ್ತೆ ಅವರನ್ನು ಸಂಧಿಸುವ ಕನ್ನಡ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಸೌಭಾಗ್ಯ ನನಗೆ ಲಭಿಸಿತು. ನಾನು ಆಗ ಪ್ರಥಮ ಪದವಿ ತರಗತಿಗಳಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ನಮ್ಮ ಊರಿನ ರಸಿಕರು ಪಠ್ಯವನ್ನು ಪಾಠ ಮಾಡುತ್ತಿದ್ದೆ. ಈ ಕೃತಿಯಲ್ಲಿ ಶಾಲೂ ಸಾಬಿಯ ಪಾತ್ರವೊಂದು ಬರುತ್ತದೆ. ಸದಾ ಶಾಲು ಹೆಗಲ ಮೇಲೆ ಧರಿಸುತ್ತಿದ್ದುದರಿಂದಲೇ ಆ ಹೆಸರು ಸಾಬಿಗೆ ಬಂದಂತೆ ಗೊರೂರರು ಆ ಪಾತ್ರವನ್ನು ಪರಿಚಯಿಸಿದ್ದರು. ನನಗೆ ಪಾಠ ಮಾಡುವ ಸಂದರ್ಭದಲ್ಲಿ ಪರಿಷತ್ತಿನ ಅಧ್ಯಕ್ಷರು ಕಣ್ಮುಂದೆ ನಿಲ್ಲುತ್ತಿದ್ದರು. ನಾನು ವಿದ್ಯಾರ್ಥಿಗಳಿಗೆ ಶಾಲೂ ಸಾಬಿಯನ್ನು ದೈಹಿಕವಾಗಿ ನೋಡಬೇಕಾದರೆ ಚಾಮರಾಜಪೇಟೆಯ ಪಂಪ ಮಹಾಕವಿ ರಸ್ತೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಗಿ ಅಲ್ಲಿ ಅವರು ಕಾಣಸುತ್ತಾರೆ ಎಂದು ಹೇಳುತ್ತಿದ್ದೆ. ಪದವಿ ವಿದ್ಯಾರ್ಥಿಗಳು ಬುದ್ಧಿವಂತರಷ್ಟೇ ಅಲ್ಲ ತುಂಟರೂ ಸಹ. ಏನ್ ಸಾರ್ ಇಮಾಂಸಾಬಿಗೂ ಗೋಕುಲಾಷ್ಟಮಿಗೂ ಎಲ್ಲಿಯ ಸಂಬಂಧ. ಸಾಹಿತ್ಯ ಪರಿಷತ್ತಿನಲ್ಲಿ 'ಸಾಬಿ' ಹೇಗೆ ಸಿಗಲು ಸಾಧ್ಯ ಸಾರ್ ಎಂದು ಕೇಳಿಯೂ ಬಿಟ್ಟರು. ಆಗ ನಾನು ನನ್ನ ನೆನಪುಗಳ ಪುಟಗಳನ್ನು ತಿರುಗಿಸಿ 'ಸಾಬಿ'ಯೇ

ಇರಬೇಕೆಂದಿಲ್ಲಪ್ಪ, ಅಲ್ಲಿ ಒಬ್ಬರು ಅಧ್ಯಕ್ಷರಾಗಿದ್ದಾರೆ. ಸದಾ ಫುಲ್ ಕಾಲರ್ ಸೂಟ್‌ದಾರಿಗಳಾಗಿರುತ್ತಾರೆ. ನಗುನಗುತ್ತಲೇ ನಿಮ್ಮನ್ನು ಸ್ವಾಗತಿಸುತ್ತಾರೆ. ನಮ್ಮ ಸಂಜೆ ಕಾಲೇಜಿನ ಕನ್ನಡ ವಿಭಾಗದ ಡಾ. ಕೆ.ವಿ. ಚಂದ್ರಣ್ಣಗೌಡರು ಅವರ ಜೊತೆಯಲ್ಲಿ ಗೌರವ ಕಾರ್ಯದರ್ಶಿಗಳಾಗಿರುತ್ತಾರೆ. ಅವರಿಗೆ ನನ್ನ ಹೆಸರು ಹೇಳಿ, ಅವರ ಪರಿಚಯ ಮಾಡಿಕೊಡುತ್ತಾರೆ. ಅಧ್ಯಕ್ಷರ ಹೆಗಲ ಮೇಲೆ 'ಶಾಲು' ಇರುತ್ತದೆಯೋ ಇಲ್ಲವೋ ನೋಡಿ ಸಂತೋಷಪಡಿ. ಅವರ ಆಶೀರ್ವಾದ ಹಿತವಚನಗಳನ್ನು ಕೇಳಿ ಆನಂದಪಡಿ ಎಂದು ಹೇಳಿದ್ದೆ. ನನ್ನ ವಿದ್ಯಾರ್ಥಿಗಳು ಅವರನ್ನು ಭೇಟಿಯಾದರೊ ಇಲ್ಲವೋ ನನಗೆ ತಿಳಿಯದು. ಆದರೆ ಶ್ರೀ ಬಸವಾರಾಧ್ಯರ ವ್ಯಕ್ತಿತ್ವ ಮತ್ತು ವಿದ್ವತ್ತು ನನ್ನ ಮೇಲೆ ಪರಿಣಾಮವಂತೂ ಬೀರಿದೆ.

ಶ್ರೀಯುತರ ೮೦ ವಸಂತಗಳು ತುಂಬಿದ ಸಂದರ್ಭದಲ್ಲಿ ಅವರಿಗೆ ಅಭಿನಂದನ ಗ್ರಂಥ ತರುತ್ತಿದ್ದೇವೆ. ಅವರ ಬಗ್ಗೆ ಲೇಖನ ಕೊಡಿ ಎಂದು ಅಭಿನಂದನ ಸಮಿತಿಯವರು ನನ್ನನ್ನು ಕೇಳಿದಾಗ ನನಗೆ ಮುಜುಗರವಾಯಿತು. ಏನು ಬರೆಯಲಿ ಸಾರ್. ಅವರ ಬಗ್ಗೆ ನನ್ನ ತಿಳುವಳಿಕೆ ತೀರ ಅಲ್ಪವಾದುದು ಎಂದು ನನ್ನ ಮಿತಿಯನ್ನು ತೋಡಿಕೊಂಡೆ. ಕೊನೆಗೂ ಬಿಡದೆ ನಿಮ್ಮ ಒಂದೆರಡು ಅನುಭವಗಳನ್ನೇ ಬರೆದುಕೊಡಿ ಎಂದರು. ಅವರ ಪ್ರೀತಿಯ ಒತ್ತಡಕ್ಕೆ ಮಣಿದು ನನ್ನ ಮತ್ತು ಅವರ ಸಂಬಂಧದ ಒಂದೆರಡು ಮಾತುಗಳನ್ನು ಮಾತ್ರ ನಾನು ಇಲ್ಲಿ ದಾಖಲಿಸಲು ಇಷ್ಟಪಟ್ಟಿದ್ದೇನೆ. ಒಂದನ್ನು ಮೇಲೆ ನಮೂದಿಸಿದ್ದೇನೆ. ಮತ್ತೊಂದು ಅವರ ಸ್ನೇಹಪರತೆಯನ್ನು ತೋರಿಸುವಂತಹುದು. ನಾನು, ಡಾ. ಬಸವರಾಜ ಕಲ್ಗುಡಿ, ಡಾ. ನಲ್ಲೂರು ಪ್ರಸಾದ್‌ರು ಅವರ ಮನೆಯಲ್ಲಿ ಒಮ್ಮೆ ಹರಟೆಗಾಗಿ ಸೇರಿದ್ದೆವು. ಅವರು ಕಾಲ ಕಳೆಯುವ ನೆಪವಾಗಿ ಇಸ್ಪೀಟು ಆಟದಲ್ಲಿಯೂ ಬೆರೆಯುತ್ತಿದ್ದರು. ಕಾಫಿ, ತಿಂಡಿ, ಧೂಮಪಾನಗಳ ಜೊತೆಗೆ ಕನ್ನಡ ನಾಡು, ನುಡಿ, ಸಂಸ್ಕೃತಿ, ಪರಂಪರೆ, ಜೀವನಗಳ ಬಗ್ಗೆ ಸರಳವಾಗಿ ಸಹಜವಾಗಿ ಮಾತನಾಡಿ ನಮ್ಮನ್ನು ನಗೆಯ ಮಡುವಿನಲ್ಲಿ ಮುಳುಗಿಸುತ್ತಿದ್ದರು. ಇಂತಹ ಹಲವು ಸಂದರ್ಭಗಳಲ್ಲಿ ಅವರ ಸಜ್ಜನಿಕೆಯ ಮಾನವೀಯ ಔದಾರ್ಯವನ್ನು ನಾನು ಅನುಭವಿಸಿದ್ದೇನೆ. ಕನ್ನಡದ ಆದ್ಯವಚನಕಾರನಾದ ಜೇಡರ ದಾಸಿಮಯ್ಯ ಶರಣರ ಸೂಳ್ನುಡಿಗಳ ಬಗ್ಗೆ ಸೊಗಸಾದ ಒಂದು ವಚನ ಬರೆದಿದ್ದಾರೆ. ವಚನ ಸಾಹಿತ್ಯ ನನಗೆ ಬಹಳ ಪ್ರಿಯವಾದ ವಿಷಯ; ಸದಾ ಓದಿಸಿಕೊಳ್ಳುವ ಸಾಹಿತ್ಯ. ಅದರಲ್ಲಿಯೂ ಜೇಡರ ದಾಸಿಮಯ್ಯ ಹಾಗೂ ಜಗಜ್ಯೋತಿ ಬಸವಣ್ಣನ ವಚನಗಳು ನನಗೆ ಬಹಳ ಪ್ರಿಯವಾದವು. ದಾಸಿಮಯ್ಯ-

> "ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
> ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,
> ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ
> ನಿಮ್ಮನಿತ್ತೆ ಕಾಣಾ ರಾಮನಾಥಾ."

ಎಂದಿದ್ದಾನೆ.

ಶ್ರೇಷ್ಠ ವಚನಕಾರ ದಾಸಿಮಯ್ಯ ಈ ಜಗತ್ತಿನಲ್ಲಿ ಭಕ್ತ ಯಾವುದರಿಂದ ತೃಪ್ತನಾಗುತ್ತಾನೆಂಬುದನ್ನು ಈ ವಚನದಲ್ಲಿ ಸೊಗಸಾಗಿ ಮನಮುಟ್ಟುವಂತೆ ಹೇಳಿದ್ದಾನೆ. ಈ ವಚನದ ಮೊದಲೆರಡು ಸಾಲುಗಳು ಮನುಷ್ಯ ಈ ಜಗತ್ತಿನಲ್ಲಿ ಹಿರಿದೆಂದು ಬಯಸುವ ಐಶ್ವರ್ಯ, ಸಾಮ್ರಾಜ್ಯಗಳನ್ನು ಮನುಜಸಹಜವಾದ ಹೆಬ್ಬಯಕೆಗಳೆಂದು ಆಶಿಸುತ್ತಾನೆ. ಆದರೆ ಅವುಗಳನ್ನು 'ಒಲ್ಲೆ'ನೆಂದು ನಿರಾಕರಿಸುವ ದಾಸಿಮಯ್ಯ ನಿಮ್ಮ (ಶಿವನ) "ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ" ಎನ್ನುತ್ತಾನೆ. ಇವೆಲ್ಲವುಗಳಿಗೆ ಒಡೆಯನಾದ ರಾಮನಾಥನನ್ನು ತ್ಯಾಗ ಮಾಡುವ ಮನೋಭಾವ ಶರಣ ಸೂಳ್ನುಡಿ (ಹಿತವಚನ)ಗಳಲ್ಲಿ ಅಡಕವಾಗಿರುವುದೂ ಅದೂ ಒಂದು ಗಳಿಗೆ(ಕ್ಷಣ)ಯಲ್ಲಿ ಅರೆಗಳಿಗೆ fraction of a Second ಎಂದಿರುವುದು ಮಹಾನುಭಾವರ 'ಹಿತವಚನ'ಗಳಿಗಿರುವ ಶಾಶ್ವತವಾದ ಜೀವನಮೌಲ್ಯವನ್ನು ತಿಳಿಸುವಂತಹದು. ನಾನೀ ವಚನವನ್ನು ಪಾಠ ಮಾಡಿ ಆನಂದಿಸಿದ್ದೇನೆ. ಓದಿ ಆನಂದಿಸಿದ್ದೇನೆ. ಈ ಸೂಳ್ನುಡಿಯ ನೇರ ಅನುಭವ ಮತ್ತು ಪ್ರಭಾವಗಳು ನನ್ನ ಮೇಲೆ ನಿಘಂಟು ಬ್ರಹ್ಮರಾದ ಪೂಜ್ಯ ಬಸವಾರಾಧ್ಯರಿಂದಾಗಿದೆಯೆಂದರೆ, ಅದು ಅತಿಶಯೋಕ್ತಿಯಲ್ಲ ಅಥವಾ ಹೊಗಳಿಕೆಯ ಜಂಬದ ಮಾತಲ್ಲ. ಅವರೊಡನೆ ಕಳೆದಿರಬಹುದಾದ ಒಂದೊಂದು ಗಳಿಗೆಯೂ ಅಂತಹ ಅನುಭವವನ್ನು ನೀಡಿದೆಯೆಂದು ಸಂತೋಷವಾಗಿ ಹೇಳುತ್ತಾ ಶ್ರೀಯುತರು ನೂರು ವರ್ಷ ಬಾಳಿ ಕನ್ನಡಮ್ಮನ ಗೌರವ ಕೀರ್ತಿಗಳನ್ನು ಮತ್ತಷ್ಟು ಬೆಳಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ನನ್ನೀ ಅಕ್ಷರ ನಮನಗಳನ್ನು ಅವರ ಪಾದಾರವಿಂದಗಳಲ್ಲೇ ಅರ್ಪಿಸುತ್ತಾ ನನ್ನ ಮಾತು ಮುಗಿಸುತ್ತೇನೆ.

XXX

ಸರಳ ಸಜ್ಜನಿಕೆಗೆ ಹೆಸರಾದ ಘನ ವಿದ್ವಾಂಸರು ಪ್ರೊ. ಎನ್. ಬಸವಾರಾಧ್ಯರು

-ಕೆ.ಎಂ. ರುದ್ರಪ್ಪ

ರಾಜರ್ಷಿ ಎಂದು ಹೆಸರಾಗಿದ್ದ ನಾಲ್ವಡಿ ಕೃಷ್ಣ ರಾಜ ಒಡೆಯರ ಕಾಲದಲ್ಲಿ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ೧೯೧೫ರಲ್ಲಿ ಸ್ಥಾಪಿಸಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ಅನೇಕ ಕನ್ನಡ ಸಾಹಿತಿಗಳು ಸೇವೆ ಸಲ್ಲಿಸಿ ಹೆಸರು ಪಡೆದಿದ್ದಾರೆ. ಬಹು ಮುಖ್ಯವಾಗಿ ಕಾರ್ಯದರ್ಶಿಗಳಾಗಿ ಬೆಳ್ಳಾವೆ ವೆಂಕಟ ನಾರಾಯಣಪ್ಪನವರು, ಉಪಾಧ್ಯಾಕ್ಷರಾಗಿ ಪ್ರೊ. ಬಿ.ಎಂ. ಶ್ರೀಕಂಠಯ್ಯನವರು, ಡಿ.ವಿ. ಗುಂಡಪ್ಪ, ಮಾಸ್ತಿ ವೆಂಕಟೇಶ ಐಯ್ಯಂಗಾರ್ ಹಾಗೂ ಎಂ.ಆರ್. ಶ್ರೀನಿವಾಸಮೂರ್ತಿಗಳು ಪರಿಷತ್ತಿನ ಅಭ್ಯುದಯಕ್ಕೆ ಕಾರಣರಾಗಿದ್ದಾರೆ. ಮೊದಲು ಮೈಸೂರು ರಾಜ ಮನೆತನದವರೇ ಪರಿಷತ್ತಿನ ಗೌರವಾಧ್ಯಕ್ಷರಾಗಿರುತ್ತಿದ್ದ ಕಾರಣ ಉಪಾಧ್ಯಕ್ಷರಾಗಿದ್ದವರೇ ನಿಜವಾಗಿ ಈ ಪರಿಷತ್ತಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ಹೊತ್ತಿದ್ದರು. ಪ್ರಬಲ ಇಚ್ಛಾಶಕ್ತಿ ಹೊಂದಿ ಈ ಸಂಸ್ಥೆಯನ್ನು ಬಲಗೊಳಿಸುತ್ತಾ ಬಂದರು. ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರು ಮತ್ತು ಉತ್ತರ ಕರ್ನಾಟಕ ರಾಜಲಖಮ ಗೌಡರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದುಕೊಂಡು ಇದರ ಬೆಳವಣಿಗೆ ಪ್ರೋತ್ಸಾಹವಿತ್ತದ್ದನ್ನು ಮರೆಯುವಂತಿಲ್ಲ.

ಪ್ರಾರಂಭದಲ್ಲಿ ಈ ಸಂಸ್ಥೆಗೆ ಕನ್ನಡ ಸಾಹಿತಿಗಳು ಮಾತ್ರ ಸದಸ್ಯರಾಗಿರುತ್ತಿದ್ದರು, ಅವರ ಸಂಖ್ಯೆಯೂ ಜಾಸ್ತಿ ಇರಲಿಲ್ಲ. ಬೆಂಗಳೂರಿನಲ್ಲಿ ಸ್ಥಾಪಕವಾದ ಈ ಸಂಸ್ಥೆ ಪ್ರತಿ ವರ್ಷ, ಕರ್ನಾಟಕದಲ್ಲಿ ಒಂದೊಂದು ಕಡೆಸಾಹಿತ್ಯ ಸಮ್ಮೇಳನವನ್ನು ನಡೆಸುತ್ತಿತ್ತು. ಅನಂತರ ಕರ್ನಾಟಕದ ಹೊರಗಡೆ ಅಂದರೆ ಕನ್ನಡಿಗರಿರುವ ಹೊರಗಡೆಯೂ ಅಂದರೆ ಮದ್ರಾಸ್, ಬೊಂಬಾಯಿ ಮುಂತಾದ ನಗರಗಳಲ್ಲಿಯೂ ಸಮ್ಮೇಳನ ನಡೆಸುತ್ತಿತ್ತು. ಅದರ ಮುಖ ಪುಟವಾಗಿ ಕನ್ನಡನುಡಿ ಹೊರಡುತ್ತಿತ್ತು. ಇದಕ್ಕೆ ಅ.ನ. ಕೃಷ್ಣರಾಯರು ಸಂಪಾದಕರಾಗಿದ್ದನ್ನು ನಾನು ಬಲ್ಲೆ.

ಸ್ವಾತಂತ್ರ್ಯ ಪೂರ್ವ ಕನ್ನಡನಾಡು ಮೈಸೂರು, ಹೈದರಾಬಾದ್, ಕೊಲ್ಲಾಪುರ, ಸಾಂಗ್ಲಿ, ಮೀರಜ್‌ಓರಿ, ಮಿರಜ್ ರಿರಿ, ಕುರಂದವಾಡ, ಜತ್, ಜಮಖಂಡಿ, ರಾಮ ದುರ್ಗ, ಸವಣೂರು, ಅಕ್ಕಲ ಕೋಟೆ ಮುಂತಾದ ದೇಶೀಯ ಸಂಸ್ಥಾನಗಳಲ್ಲಿಯೂ ಮುಂಬೈ, ಮದರಾಸ್, ಪ್ರಾಂತಗಳಲ್ಲಿಯೂ, ಕೊಡಗು ಚೀಫ್ ಕಮಿಷನರ್ ಪ್ರಾಂತದಲ್ಲಿ ಒಟ್ಟು ೨೧ ಆಡಳಿತದಲ್ಲಿ ಹರಿದು ಹಂಚಿ ಹೋಗಿತ್ತು. ಇದನ್ನು ಭಾವನಾತ್ಮಕವಾಗಿ ಒಂದು ಗೂಡಿಸಲು ಕನ್ನಡಸಾಹಿತ್ಯ ಪರಿಷತ್ತು ಮಾಡಿದ ಕೆಲಸ ತುಂಬಾ ಯಶಸ್ವಿಯಾಯಿತು. ಕನ್ನಡ ಪ್ರಾಂತ ನಿರ್ಮಾಣಕ್ಕೆ ಕನ್ನಡ ಸಾಹಿತ್ಯ ಪರಿಷತ್ ಭದ್ರವಾದ ಬುನಾ ಹಾಕಿತು.

ಆದರೆ ಈ ಪರಿಷತ್ತು ಕೆಲವೇ ಸಾಹಿತಿಗಳ ಸೊತ್ತಾಗಿ ಬಾರದು ಇದರ ಕಾರ್ಯವ್ಯಾಪ್ತಿ ವಿಸ್ತಾರಗೊಳ್ಳಬೇಕೆಂದು ೧೯೫೨ ರಿಂದ ೧೯೫೬ನೇ ಆಗಸ್ಟ್ ೧೩ರವರೆಗೆ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ೧೯೫೬ರಲ್ಲಿ ಬಿ. ಶಿವಮೂರ್ತಿ ಶಾಸ್ತ್ರಿಗಳು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗುವಂತೆ ನೋಡಿಕೊಂಡರು. ಬಿ. ಶಿವಮೂರ್ತಿ ಶಾಸ್ತ್ರಿಗಳು ೧೯೫೬-೧೯೬೪ರವರೆಗೆ ೮ ವರ್ಷಗಳ ಕಾಲ ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಸಾಪದ ಸದಸ್ಯತ್ವವನ್ನು ಕನ್ನಡ ಸಾಹಿತ್ಯಭಿಮಾನಿಗಳಿಗೂ, ಕರ್ನಾಟಕ ಏಕೀಕರಣ ವಾದಿಗಳಿಗೂ ನೀಡಿ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಿದ್ದಲ್ಲದೆ ಇಡೀ ಕನ್ನಡ ನಾಡಿನ ಎಲ್ಲಾ ಭಾಗಗಳಲ್ಲಿಯೂ ಸುತ್ತಾಡಿ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ತುಂಬಾ ಉತ್ಸುಕತೆಯಿಂದ ಕೆಲಸ ಮಾಡುತ್ತಾ ಕಸಾಪಗೆ ಚೈತನ್ಯ ತುಂಬಿದರು. ಕಸಾಪದಲ್ಲಿ ಕನ್ನಡ-ಕನ್ನಡ ನಿಘಂಟಿನ ಉಪ ಸಂಪಾದಕರಾಗಿದ್ದ ಪ್ರೊ. ಎನ್. ಬಸವಾರಾಧ್ಯರು, ಬಿ. ಶಿವಮೂರ್ತಿಶಾಸ್ತ್ರಿಗಳ ವಿಶ್ವಾಸಕ್ಕೆ ಪಾತ್ರರಾಗಿ ಅವರ ಕೆಲಸ ಯಶಸ್ವಿಯಾಗಲು ಸಂಪೂರ್ಣ ಬೆಂಬಲವಿತ್ತರು. ಕಸಾಪದಲ್ಲಿ ಕೆಲಸ ಮಾಡುತ್ತಿದ್ದ ಸಹ್ಯೋದ್ಯೋಗಿಗಳ ಎಲ್ಲರ ಪ್ರೀತಿ ವಿಶ್ವಾಸಕ್ಕೂ ಪಾತ್ರರಾಗಿದ್ದ ಬಸವಾರಾಧ್ಯರು ಬಿ. ಶಿವಮೂರ್ತಿಶಾಸ್ತ್ರಿಗಳ ಪ್ರತಿಷ್ಠಾನದ ಅಧ್ಯಕ್ಷರಾಗಿ, ಪ್ರೊ. ಬಿ.ಎಂ. ಶ್ರೀಕಂಠಯ್ಯನವರ ಪ್ರತಿಷ್ಠಾನದ ಅಧ್ಯಕ್ಷರಾಗಿ ಅಮೋಘವಾದ ಕೆಲಸ ಮಾಡಿ ಹೆಸರುಗಳಿಸಿದರು, ಮಿಗಿಲಾಗಿ ನಿಘಂಟಿನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ, ಎಲ್ಲರ ಮೆಚ್ಚುಗೆ ಪಡೆದರು. ಹೀಗೆ ಕಸಾಪದಲ್ಲಿ ಪ್ರೊ. ಬಸವಾರಾಧ್ಯರು ನಿಗರ್ವಿಗಳಾಗಿ ಸರಳ ಸಜ್ಜನಿಕೆಯಿಂದ ಎಲ್ಲರ ಪ್ರೀತಿ ವಿಶ್ವಾಸಗಳಿಸಿ ಅಜಾತಶತ್ರುಗಳೆನಿಸಿ ಕೊಂಡರು. ಅವರ ಹೆಜ್ಜೆಯ ಗುರ್ತುಗಳು ಕಸಾಪದಲ್ಲಿ ಈಗಲೂ ಅಚ್ಚಳಿಯದೆ ಮೂಡಿಬಂದಿವೆ.

ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಗಳ ನಂತರ ಕಸಾಪದ ಅಧ್ಯಕ್ಷರಾದ ಜಿ. ನಾರಾಯಣ ಅವರು ಧೀರ್ಘಕಾಲ ಅಂದರೆ ೯ ವರ್ಷಗಳಕಾಲ ಅದರ ಅಧ್ಯಕ್ಷರಾಗಿ ಕಸಾಪದ ಕಾರ್ಯವ್ಯಾಪ್ತಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ವಿಸ್ತರಿಸಿದರು. ಇವರ ಕಾಲದಲ್ಲಿ ಕಸಾಪದ ವಿಕೇಂದ್ರಿಕರಣವಾಗಿ, ಜಿಲ್ಲಾ ಕಸಾಪ ಅಸ್ತಿತ್ವಕ್ಕೆ ಬಂದವು. ಸಮಸ್ತ ಕನ್ನಡಿಗರೂ ಇವುಗಳಲ್ಲಿ ಪಾಲ್ಗೊಳ್ಳಲು, ಆಸಕ್ತಿ ವಹಿಸಲು ಅವಕಾಶವಾಯಿತು. ಈ ಕಾರ್ಯಗಳಿಗೂ ಪ್ರೊ. ಬಸವಾರಾಧ್ಯರು ಶ್ರದ್ಧೆಯಿಂದ ಕೆಲಸ ಮಾಡಿದ್ದು ನನಗೆ ನೆನಪಿದೆ. ಪ್ರೊ॥ ಬಸವಾರಾಧ್ಯರು ಕನ್ನಡ-ಕನ್ನಡ ನಿಘಂಟಿನ ಸಂಪಾದಕರಾಗಿ ಎಸಗಿದ ಉತ್ಕೃಷ್ಟ ಸೇವೆ ತುಂಬಾ ಶ್ಲಾಘನೀಯವಾದುದು. ಉಡದ ಸ್ವಭಾವ ಹೊಂದಿ, ಇಚ್ಛಾಶಕ್ತಿ ಮಿರಿದ ಇಂಥಹ ನಿಘಂಟು ಹೊರಬರಲು ಕಾರಣರಾದ ಬಸವಾರಾಧ್ಯರು ಎಲ್ಲ ಕನ್ನಡಿಗರ ವಿಶೇಷ ಗೌರವಕ್ಕೆ ಕಾರಣರಾದದ್ದು ಸಹಜವಾಗಿದೆ. ಇದು ಕಸಾಪದ ಹೆಗ್ಗಳಿಕೆಯಾದ್ದರಿಂದ ಬಸವಾರಾಧ್ಯರ ಕೀರ್ತಿಯೂ ಹೆಚ್ಚಿದೆ.

ಕರ್ನಾಟಕ ಏಕೀಕರಣ ಹೋರಾಟ ಕಾಲದಲ್ಲಿ, ಹಾಗೂ ರಾಜ್ಯದ ಹೆಸರು ಮೈಸೂರು ಎಂಬುದರ ಬದಲು ಕರ್ನಾಟಕವೆಂದು ನಾಮಕರಣವಾಗಲು ಪ್ರೊ. ಬಸವಾರಾಧ್ಯರು ಶ್ರದ್ಧಾಭಕ್ತಿಯಿಂದ ಕೆಲಸಮಾಡಿದ್ದಾರೆ. ಆದರೆ ಪ್ರಚಾರ ಪ್ರಿಯರಲ್ಲದ ಪ್ರೊ. ಬಸವಾರಾಧ್ಯರು ಮಾಡಿದ ಅನೇಕ ಕಾರ್ಯಗಳು ಕನ್ನಡಿಗರನೇಕರಿಗೆ ತಿಳಿದೇ ಇಲ್ಲವೆಂಬುದು ನನ್ನ ಅಭಿಪ್ರಾಯ.

೧೯೯೮ರಲ್ಲಿ ಪ್ರೊ. ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ಅವರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತು. ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಹೆಚ್ಚಿಸಿಕೊಂಡು, ಕಸಾಪದ ಕಛೇರಿಯಲ್ಲಿ ಶಿಸ್ತು ಸಂಘಟನೆ ತಂದು ಅಧ್ಯಕ್ಷ ಸ್ಥಾನದ ಗೌರವವನ್ನು ಕಾಪಾಡಿಕೊಂಡು ಬರುವಲ್ಲಿ ತುಂಬಾ ಉಪಯುಕ್ತ ಕೆಲಸ ಮಾಡಿದ್ದಾರೆ. ಜಿಲ್ಲಾ ಕಸಾಪಗಳ ಆಶೋತ್ತರಗಳಿಗೆ ಸ್ಪಂಧಿಸಿ ಅವುಗಳಿಗೆ ಪ್ರೋತ್ಸಾಹ ನೀಡಿ, ಅವುಗಳು ಉತ್ತಮವಾಗಿ ಕೆಲಸಮಾಡುವಂತೆ ನೋಡಿ ಕೊಂಡಿದ್ದಾರೆ. ಉತ್ತಮ ಸಾಹಿತಿಗಳನ್ನು ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರನ್ನು ಗುರುತಿಸಿ ಅವರನ್ನು ಸನ್ಮಾನಿಸಿದ್ದಾರೆ.

ಬಹುಮುಖ್ಯವಾಗಿ ಜಟಿಲವಾದ ಸಾಹಿತ್ಯ ಸಮ್ಮೇಳನಗಳು ತಮ್ಮ ಕಾಲಾವಧಿಯಲ್ಲಿ ವಿಭ್ರಾಧಿಕವಾಗಿ, ಅರ್ಥ ಪೂರ್ಣವಾಗಿ ನಡೆಯುವಂತೆ ನೋಡಿಕೊಂಡಿದ್ದಾರೆ. ಸರ್ಕಾರದೊಡನೆ ಸೌಹಾರ್ದಯುತವಾಗಿ ವರ್ತಿಸಿ ಅಲ್ಲಿಂದ ಬರಬೇಕಾದ ಸಹಾಯ ಧನ ಪಡೆದಿದ್ದಾರೆ. ಹೀಗೆ ೧೯೯೮ರಿಂದ ೨೦೦೧ರವರೆಗೆ ಅಧ್ಯಕ್ಷರಾಗಿ ಅದನ್ನು ತುಂಬಾ ದಕ್ಷತೆಯಿಂದ ನಡೆಸಿ ಕೀರ್ತಿಭಾಜನರಾಗಿದ್ದಾರೆ. ಈಗಲೂ ಕನ್ನಡನಾಡು-ನುಡಿಯ ಪ್ರಗತಿಗೆ ಕೈಲಾದ ಎಲ್ಲಾ ಸೇವೆಸಲ್ಲಿಸುತ್ತಿದ್ದಾರೆ.

ಇಂತಹ ಬಹುಮುಖ ಪ್ರತಿಭೆಯ ಸರಳ ಸಜ್ಜನರು ಶತಾಯುಷಿಗಳಾಗಲೆಂದೂ, ಅವರ ಸೇವೆ ಕನ್ನಡನಾಡಿಗೆ ನಿರಂತರ ಸಲ್ಲಲೆಂದೂ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

XXX

ಅನ್ವರ್ಥ ನಾಮದ ಪ್ರೊ. ಎನ್. ಬಸವಾರಾಧ್ಯ

-ನಾ.ಮ. ಸಿದ್ಧರಾಮಯ್ಯ

ಕರ್ನಾಟಕದ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ನಾರಸಿಂಹನ ಹಳ್ಳಿಯ ನಂಜುಂಡಾರಾಧ್ಯ ಹಾಗೂ ಗಿರಿಜಮ್ಮ ಈ ಶರಣ ದಂಪತಿಗಳ ಸುಪುತ್ರರೇ ಪ್ರೊ. ಎನ್. ಬಸವಾರಾಧ್ಯರು. ೨೦-೨-೧೯೨೬ರಲ್ಲಿ ಜನಿಸಿದ ಬಸವಾರಾಧ್ಯರಿಗೆ ೭೫ ವಸಂತ ವರ್ಷಗಳು ತುಂಬಿರುವ ಸುಸಮಯದಲ್ಲಿ ಅವರನ್ನು ಅಭಿನಂದಿಸಲು ಅಭಿನಂದನಾ ಸಮಿತಿ ಏರ್ಪಟ್ಟಿರುವುದು ಸೂಕ್ತವೂ ಹಾಗೂ ಯೋಗ್ಯವೂ ಆಗಿದೆ. ಆದರ್ಶಪುರುಷರ ಆದರ್ಶಗಳು ಕಾಲಕಾಲಕ್ಕೆ ತಿಳಿಸುವ ರನ್ನಗನ್ನಡಿಯಂತೆ ಶೋಭಿಸುತ್ತಿವೆ.

ಮಾನವನ ಜೀವನಕ್ಕೆ ಬದುಕುವಿಕೆಯ ಎಷ್ಟು ಅವಶ್ಯವೋ ಅಷ್ಟೇ ಅವಶ್ಯವಾಗಿ ಬೆಳಕು ಬೇಕು. ಜಗತ್ತು ಸೂರ್ಯನಿಂದ ಬಾಹ್ಯದಲ್ಲಿ ಬೆಳಗಿದರೂ ಜಗತ್ತಿನಲ್ಲಿ ಬಾಳುವ ಮಾನವರಿಗೆ ಬೌದ್ಧಿಕವಾಗಿ ಅಂತರಂಗ ಬೆಳಕು ಬಹುಮುಖ್ಯವಾದದ್ದು ಬಸವಾರಾಧ್ಯರ ಜೀವನದ ಸಾಹಿತ್ಯರೂಪ ಶ್ವಾಶತವಾಗಿ ಸರ್ವೋನ್ನತವಾಗಿದೆ. ಜೀವನ ಬಡತನವಾಗಿದ್ದರೂ ಸಾಹಿತ್ಯಕ್ಕೆ ಬಡತನವಿಲ್ಲ. ಸಾಹಿತ್ಯಕ್ಕೆ ಸಾವೇ ಇಲ್ಲ. ವ್ಯಕ್ತಿಯ ಜ್ವಲಂತ ಚಟುವಟಿಕೆಗಳಿಗೆ ಸಾಹಿತ್ಯವೇ ಸಾಕ್ಷಿ! ಬಾಳಿನಲ್ಲಿ ಅನುಭಾವದ ಬೆಳಗನ್ನು ತೋರಿಸುವ ಮಾರ್ಗ ಜ್ಯೋತಿ ಸಾಹಿತ್ಯದನುಭೂತಿ ಅಪ್ರತಿಮವಾದದ್ದು. ಕನ್ನಡದಲ್ಲಿ ಎಂ.ಎ. ಪದವೀಧರರಾದ ಬಸವಾರಾಧ್ಯರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ತಮ್ಮ ವೃತ್ತಿಜೀವನ ಆರಂಭಿಸಿದರೂ ತಮ್ಮ ಬಹುಮುಖ ಪ್ರತಿಭೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಯೋಜನೆಯಲ್ಲಿ ಪ್ರಧಾನ ಸಂಪಾದಕರಾಗಿ ಸೇವೆಸಲ್ಲಿಸಿ ಕನ್ನಡ ಸಾಹಿತ್ಯಕ್ಕೆ ಮೆರಗು ಕೊಟ್ಟು ತಮ್ಮ ವ್ಯಕ್ತಿತ್ವದ ಘನತೆಯನ್ನು ಸಾಹಿತ್ಯಕ್ಕೆ ಹೆಚ್ಚಿಸಿಕೊಂಡವರಾಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿ ಸೇವೆಸಲ್ಲಿಸಿ, ನಿವೃತ್ತರಾಗಿದ್ದಾರೆ.

ಹಳೆಗನ್ನಡದ ವಿದ್ವಾಂಸರಾದ ಕಿಟ್ಟೆಲ್, ಕುವೆಂಪು, ಡಿ.ಎಲ್. ನರಸಿಂಹಾಚಾರ್ಯರು, ತೀ.ನಂ.ಶ್ರೀ -ಇವರ ಪರಂಪರೆಯಲ್ಲಿ ಇವರೂ ಒಬ್ಬರಾಗಿದ್ದಾರೆ. ಶ್ರೇಷ್ಠ ವಿದ್ವಾಂಸರಾಗಿರುವುದರಿಂದಲೇ ಹಳೆಗನ್ನಡದ ಸಾಹಿತ್ಯ ಕೃತಿಗಳ ಸಂಪಾದಕರಾಗಿ, ನಿಘಂಟು ರಚನಾಕಾರರಾಗಿ ಸೇವೆ ಸಲ್ಲಿಸಿದ್ದಾರೆ. ೧೯೯೮ ರಿಂದ ೨೦೦೧ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸರಳ ಸಜ್ಜನಿಕೆಯಿಂದ ಪ್ರಾಮಾಣಿಕ ಸೇವೆ ಸಲ್ಲಿಸಿ ಕನ್ನಡನಾಡಿನ ಅಸಂಖ್ಯ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ೧೯೯೯ನೇ ಇಸವಿ ಫೆಬ್ರವರಿ ತಿಂಗಳ ಕೊನೆಯಲ್ಲಿ ಕನಕಪುರದಲ್ಲಿ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯಿತು. ಇವುಗಳ ಸ್ಮಾರಕವಾಗಿ ೬೭ ಉಪಯುಕ್ತ ಗ್ರಂಥಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಕನ್ನಡಿಗರ ಕೈಯಲ್ಲಿ ಕೊಟ್ಟದ್ದು, ಪರಿಷತ್ತಿನ ಅಧ್ಯಕ್ಷರಾದ-ಪ್ರೊ. ಎನ್. ಬಸವಾರಾಧ್ಯರ ಮಹತ್ ಸಂಕಲ್ಪ-ಕಲ್ಪವೃಕ್ಷವಾಗಿ ಕಂಗೊಳಿಸಿದೆ. ಹಳೆಗನ್ನಡ ಮತ್ತು ನಡುಗನ್ನಡ ಕಾವ್ಯಗಳ ಗದ್ಯಾನುವಾದಗಳು, ಕನ್ನಡ ಭಾಷೆ, ಲಿಪಿ, ಸಂಸ್ಕೃತಿ ಬಗೆಗಿನ ಗ್ರಂಥಗಳು, ಕವಿಕಾವ್ಯ ವಿಚಾರ ಸಂಕಿರಣಗಳು, ಪ್ರಬಂಧಗಳು, ಜೀವನ ಚರಿತ್ರೆ, ಜಾನಪದ, ಆರೋಗ್ಯ ವಿಚಾರ ಇತ್ಯಾದಿ ವಿಶಿಷ್ಟದಿಂದ ಕೂಡಿದ ಪುಸ್ತಕಗಳು ೬೭ರ ಮಾಲಿಕೆಯಲ್ಲಿ ಸೇರುವಂತೆ ಮಾಡಿದ ಶ್ರೇಷ್ಠ ವಿದ್ವನ್ಮಣಿಗಳೇ ಬಸವಾರಾಧ್ಯರು. ಬಳ್ಳಾರಿಗೆ ಬಂದಾಗ ನನ್ನ ಆಹ್ವಾನದ ಮೇರೆಗೆ ಮುಖ್ಯಅತಿಥಿಯಾಗಿ, ಹಿರಿಯರಾಗಿ ಬಂದ ಬಸವಾರಾಧ್ಯರು ನಮ್ಮ ವೀರಭದ್ರೇಶ್ವರ ನಿಲಯದಲ್ಲಿ ಅತಿಥಿ ಸತ್ಕಾರ ಹೊಂದಿ ಆನಂದಿಸಿದ್ದಾರೆ. ನಾ ಕಂಡಂತೆ ಬಸವಾರಾಧ್ಯರು ಬಹಳ ಸರಳ ಶಿವಜೀವನಕ್ಕೆ ಹೆಸರಾದವರು. ನಿರಾಡಂಬರ ವ್ಯಕ್ತಿಗಳು ಬಸವ ಎಂದರೆ ಧರ್ಮವೆಂಬರ್ಥ, ಆರಾಧ್ಯವೆಂದರೆ ಪೂಜಿಸುವುದು. ಧರ್ಮವನ್ನು ಪೂಜ್ಯಭಾವದಿಂದ ಕಂಡು ಆರಾಧಿಸುವವರೇ ಬಸವಾರಾಧ್ಯರು. ಧರ್ಮವನ್ನು ರಕ್ಷಿಸಿದರೆ, ರಕ್ಷಿಸಿದ ವ್ಯಕ್ತಿಯನ್ನು ಧರ್ಮವು ರಕ್ಷಿಸುತ್ತದೆ ಎನ್ನುವ ಉಪನಿಷತ್ ವಾಕ್ಯವು ಋತ ಸತ್ಯವಾಗಿ, ಅನ್ವರ್ಥವಾಗಿದೆ.

ಪರಿಷದ್ ಪದದ ಮೂಲ ಅರ್ಥ, ಧಾರ್ಮಿಕ ಸಂಮಿಲನ, ಕೊಟ್ಟವೆಂಧರ್ಥ. ಪರಿಸೆ, ಪರಸೆ, ಪದಗಳಿಗೆ ಕನ್ನಡ ಭಾಷೆಯಲ್ಲಿ ಜನಸಂದಣಿ ಜಾತ್ರೆ ಎಂದು ಕರೆಯುವ ವಾಡಿಕೆ ಇದೆ. ಸಂಸ್ಥೆಗಳು ಸಂತೆಯಾಗಿ ರೂಪುಗೊಳ್ಳದಂತೆ ತಮ್ಮ ಅವಧಿಯಲ್ಲಿ ಪೂರ್ಣಜವಾಬ್ದಾರಿಯಿಂದ ದಕ್ಷತೆಯಿಂದ ಕೆಲಸ ನಿರ್ವಹಿಸಿದ ಬಸವಾರಾಧ್ಯರ ಶಿವಜೀವನವೇ ಧನ್ಯ.

XXX

ಸಂಪಾದನೆ-ಸಂಶೋಧನೆ ಕ್ಷೇತ್ರದ ಮಹಾತಜ್ಞ ಶ್ರೀ ಎನ್. ಬಸವಾರಾಧ್ಯರು

-ಡಾ॥ ವರದಾ ಶ್ರೀನಿವಾಸ

ಎತ್ತರದ ವ್ಯಕ್ತಿತ್ವ, ಗಡಸು ದನಿ, ಆದರೆ ಮನಸ್ಸು ಮೃದು. ಸಂಪಾದನೆ-ಸಂಶೋಧನಕಾರರಿಗೆ ಇರಬೇಕಾದ ಪ್ರಜ್ಞೆ, ಸೂಕ್ಷ್ಮವನ್ನು ಬಗೆಯುವ ತೀಕ್ಷ್ಣ ಕಣ್ಣುಗಳು ಎಪ್ಪತ್ತೈದು ತುಂಬಿದರೂ ಇಪ್ಪತ್ತೈದರ ಉತ್ಸಾಹ! ಮಾತು ಮಾತಲ್ಲೂ ತಿಳಿ ಹಾಸ್ಯದ ಜಿನುಗು. ತಾನು ನಕ್ಕು ಅನ್ಯರನ್ನು ನಗಿಸುವ ತಿಳಿಯಾದ ಮನಸ್ಸು. ೧೯೫೩ರಿಂದ ೧೯೯೯ರವರೆಗಿನ ೪೯ ವರ್ಷಗಳ ಅವಧಿಯಲ್ಲಿ ಸಂಪಾದಿಸಿದ ಗ್ರಂಥಗಳು ೩೧. ಅಷ್ಟೂ ಗ್ರಂಥಗಳ ಪೀಠಿಕೆಯಲ್ಲಿ ಬರುವ ಮಾಹಿತಿ ವಿಚಾರ ಅವರ ಅಧ್ಯಯನದ ಆಳವನ್ನು, ವಿಸ್ತಾರವನ್ನು ಖಚಿತಪಡಿಸುತ್ತದೆ. ಅವರೇ ಕೋಲಾರ ಜಿಲ್ಲೆಯ ಅಮೃತ ಪುತ್ರ ಶ್ರೀ ಎನ್. ಬಸವಾರಾಧ್ಯ ಅವರು.

ನಾನು ಅವರ ದನಿಯನ್ನು ಮೊದಲು ಕೇಳಿದ್ದು ನಾಲ್ಕು ವರ್ಷಗಳ ಹಿಂದೆ. ನಾನಾಗ 'ಕನ್ನಡ ನುಡಿ'ಗೆ ಸಂಪಾದಕಿಯಾಗಿದ್ದೆ. ಕನಕಪುರದಲ್ಲಿ ನಡೆಯಲಿರುವ ಸಮ್ಮೇಳನ ಸಂದರ್ಭದಲ್ಲಿ 'ಕನ್ನಡ ನುಡಿ'ಯ ವಿಶೇಷ ಸಂಚಿಕೆ ತರಬೇಕಾದ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷರುಗಳನ್ನು ಕುರಿತು ಒಂದು ಲೇಖನ ಸಿದ್ಧಪಡಿಸುವಂತೆ ಅವರನ್ನು ದೂರವಾಣಿ ಮೂಲಕ ಕೋರಿದಾಗ, ನಾನವರ ದನಿಯನ್ನು ಕೇಳಿದ್ದೆ. ಆ ದನಿಯ ಗಡಸಿಗೆ ಮೊದಲು ಆಶ್ಚರ್ಯಪಟ್ಟೆ.

ಮತ್ತೊಮ್ಮೆ ಆ ದನಿ ನನಗೆ ಕೇಳಿಸಿದ್ದು ಒಂದು ವರ್ಷದ ನಂತರ. ಅವರು ಕ.ಸಾ.ಪ.ದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ. "ನಾನು ಬಸವಾರಾಧ್ಯ ಮಾತನಾಡುತ್ತಿದ್ದೇನೆ, ನಿಮ್ಮ ಮತವನ್ನು ದಯವಿಟ್ಟು ನನಗೆ ನೀಡಿ" ನಾನು ಒಪ್ಪಿಗೆ ನೀಡಿದೆ. ಮತ ಚಲಾಯಿಸಲು ಬಂದಾಗ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಅವರನ್ನು ಕಂಡಾಗ ನಾನು ಕಲ್ಪಿಸಿಕೊಂಡ ವ್ಯಕ್ತಿಯೇ ಬೇರೆ ಇವರೇ ಬೇರೆ ಅಂತ ಅನ್ನಿಸಿತು. ಮತ್ತೆ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದಾಗ ಅವರನ್ನು ಹತ್ತಿರದಿಂದ ಮಾತನಾಡಿಸುವ ಸಂದರ್ಭ ಬಂತು. ಅವರ ಆತ್ಮೀಯ

ಮಾತು ಕಿರಿಯರನ್ನು ಪ್ರೀತಿಯಿಂದ ಮಾತನಾಡಿಸುವ ಹಿರಿಯ ಗುಣ, ಅಂಥ ಮಹಾವಿದ್ವಾಂಸರಾದರೂ ಸ್ವಲ್ಪವೂ ಅಹಂಕಾರವಿಲ್ಲದ ಸರಳ ಸಜ್ಜನಿಕೆ ತಲೆಬಾಗುವಂತೆ ಮಾಡಿತು.

ಈ ಮೂರು ವರ್ಷಗಳ ಅವಧಿಯಲ್ಲಿ ಅವರನ್ನು ಬಹಳಷ್ಟು ಸಾರಿ ಭೇಟಿ ಮಾಡುವ ಅವಕಾಶ ನನಗೆ ದೊರೆಯಿತು. ಆ ಸಾನಿಧ್ಯ ಸಾಹಚರ್ಯದಲ್ಲಿ ಅವರು ಒಬ್ಬ ಕಾವ್ಯಭ್ಯಾಸಿಯಂತೆ ನನಗೆ ಕಂಡರು. ಮಹಾಕವಿಗಳ, ಕವಿಗಳ ಕಾವ್ಯಗಳ ಸಾಲುಗಳನ್ನು ವಚನಕಾರರ ವಚನಗಳನ್ನು, ಸಾಂದರ್ಭಿಕವಾಗಿ ಉಲ್ಲೇಖಿಸುತ್ತಾ ಅವುಗಳ ಪ್ರಸ್ತುತತೆಯ ಅರ್ಥವಿವರಿಸುವ ಅವರು ತಮ್ಮ ಅಧ್ಯಯನವನ್ನು ಕೇವಲ ಸಂಪಾದನೆ, ಸಂಶೋಧನೆಗೆ ಮಾತ್ರವೇ ಮೀಸಲಿಟ್ಟವರಲ್ಲ ಎಂಬುದನ್ನು ಸಾಬೀತುಪಡಿಸುವ ರೀತಿ ಇದೆಯಲ್ಲ-ಅದು ನಿಜಕ್ಕೂ ಬೆರಗು ಹುಟ್ಟಿಸುವಂತಹುದು.

ಅವರು ಮಾತನಾಡುತ್ತಾ ಅವರ ಗುರು ಪರಂಪರೆಯನ್ನು ತಿಳಿಸಿದ್ದು ಹೀಗೆ- "ಡಿ.ಎಲ್.ಎನ್., ತೀ.ನಂ.ಶ್ರೀ., ಎ.ಆರ್.ಕೃ. -ಮುಂತಾದವರ ಶಿಷ್ಯನಾಗಿ ಶಾಸ್ತ್ರಾಧ್ಯಯನದ ಶಿಸ್ತು, ಶಿಷ್ಟಾಚಾರಗಳನ್ನು ನಾನು ಕಲಿತೆ. ಗ್ರಂಥ ಸಂಪಾದನೆ ಹಸ್ತಪ್ರತಿ ಪರಿಶೀಲನೆ, ಹಳೆಗನ್ನಡ ಸಾಹಿತ್ಯ ಸಂಪಾದನೆ, ನಿಘಂಟು ಕ್ಷೇತ್ರಗಳಲ್ಲಿ ದುಡಿಮೆ ಈ ಸಂದರ್ಭಗಳಲ್ಲಿ ಸತ್ಯಶೋಧನೆಯ ಸಾತ್ವಿಕ ದೃಷ್ಟಿಕೋನ ಬಹಳ ಮುಖ್ಯವಾದುದು. ಈ ನಾಲ್ಕು ದಶಕಗಳಲ್ಲಿ ಸಂಶೋಧನೆ, ಸಂಪಾದನೆಯಲ್ಲಿ ಸಾಕು ಎನ್ನುವಷ್ಟು ದುಡಿದಿದ್ದೇನೆ."

ಹೌದು, ಸೃಜನೆಗಿಂತ ಸಂಶೋಧನೆ, ಸಂಪಾದನೆ ಬಹಳ ಗುರುತರವಾದ ಕಾರ್ಯ. ಅದಕ್ಕೆ ಸಹನೆಯೂ ಬೇಕು. ಡಿ.ಎಲ್.ಎನ್. ಅವರ ಬಗ್ಗೆ ಆರಾಧ್ಯರ ತುಂಬು ಗೌರವದ ಈ ಹೇಳಿಕೆ ಅವರ ಸೌಜನ್ಯಕ್ಕೆ ಸಾಕ್ಷಿ- "ನನಗೆ ಗ್ರಂಥ ಸಂಪಾದನಾ ವಿಧಾನ ತಿಳಿದದ್ದೇ ಡಿ.ಎಲ್.ಎನ್. ಅವರಿಂದ. ಅವರ ನೆರವು, ನಿರಂತರ ಪ್ರೋತ್ಸಾಹಗಳಿಂದ ನಾನು ಕೆಲವು ಅಪ್ರಕಟಿತ ಕಾವ್ಯಗಳನ್ನು ಸಂಪಾದಿಸಿದೆ. ನನ್ನ ಆರಂಭದ ಕೃತಿಗಳೆಲ್ಲಾ ನನ್ನ ಗುರುಗಳ ಪರಿಶೀಲನೆಗೆ ಒಳಪಟ್ಟಿವೆ ಎಂಬುದು ನನಗೆ ಹೆಮ್ಮೆಯ ವಿಷಯ."

ಶ್ರೀ ಎನ್. ಬಸವಾರಾಧ್ಯರು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು ನಾರಸಿಂಹನ ಹಳ್ಳಿಯಲ್ಲಿ ೧೯೨೮ರ ಫೆಬ್ರವರಿ ೨೦ ರಂದು ಶ್ರೀ ನಂಜುಂಡಾರಾಧ್ಯರ-ಗಿರಿಜಮ್ಮ ದಂಪತಿಗಳ ಮಗನಾಗಿ ಜನಿಸಿದರು. ಗೌರಿಬಿದನೂರು, ಬೆಂಗಳೂರುಗಳಲ್ಲಿ ಪ್ರೌಢ ಶಿಕ್ಷಣ, ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ (ಕನ್ನಡ) ಪದವಿ (೧೯೫೦), ಡಿ.ಎಲ್.ಎನ್., ಜಿ.ಪಿ. ರಾಜರತ್ನಂ, ತೀ.ನಂ.ಶ್ರೀ., ತ.ಸು.ಶಾ., ಕ.ವೆಂ. ರಾಘವಾಚಾರ್, ವೀ.ಸೀ., ಎ.ಎಸ್. ಮೂರ್ತಿರಾವ್, ಎಸ್.ವಿ. ರಂಗಣ್ಣ, ಅನಂತರಂಗಾಚಾರ್ -ಇವರೆಲ್ಲಾ ಆರಾಧ್ಯರ ಗುರುಗಳು. ಈ ಗುರು ದಿಗ್ಗಜರ ಶಿಷ್ಯತ್ವದಿಂದ ಅವರು ಪಡೆದ ಅನುಭವ ಅಪಾರವಾದುದು.

೧೯೪೯ರಲ್ಲಿ ಪದವೀಧರ ತಜ್ಞರಾಗಿ ವೃತ್ತಿಜೀವನ ಆರಂಭಿಸಿದ್ದು ಮೈಸೂರಿನ ಪ್ರಾಚ್ಯವಿದ್ಯಾಸಂಸ್ಥೆಯಲ್ಲಿ. ತರುವಾಯ ನಿರಂತರವಾಗಿ ಕೃತಿ ಕಾವ್ಯ ಸಂಪಾದನೆಯಲ್ಲಿ ತೊಡಗಿದರು. ಮಧ್ಯೆ ಹಸ್ತಪ್ರತಿಗಳ ಹಾಗೂ ಐತಿಹಾಸಿಕ ದಾಖಲೆಗಳ ಸಂಗ್ರಹ ಅವರ ಹವ್ಯಾಸವಾಗಿತ್ತು. ೧೯೫೫ರಲ್ಲಿ ಕನ್ನಡ-ಕನ್ನಡ ನಿಘಂಟು ಯೋಜನೆಯಲ್ಲಿ ಕಾರ್ಯನಿರ್ವಹಿಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಬರುವ ಸಂದರ್ಭ ಒದಗಿ ಬಂತು. ಉಪ ಸಂಪಾದಕ, ಸಂಪಾದಕ, ಪ್ರಧಾನ ಸಂಪಾದಕರಾಗಿ ಅವರದು ಸಮರ್ಥ ಕಾರ್ಯನಿರ್ವಹಣೆ! ಏಳು-ಎಂಟನೆಯ ಸಂಪುಟಗಳಲ್ಲಿ ಅವರದು ವಿಶೇಷ ಪರಿಶ್ರಮ, ನಿಘಂಟು ಕ್ಷೇತ್ರಕ್ಕೆ ಅವರ ಸೇವೆ ಅಪಾರ.

೧೯೭೧ ರಿಂದ ೧೯೮೬ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಉಪನಿರ್ದೇಶಕರ ಹುದ್ದೆಯಲ್ಲಿ ಅವರದು ಯಶಸ್ವೀ ದುಡಿಮೆ. ತರುವಾಯ ಪರೀಕ್ಷಕರಾಗಿ, ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾಗಿ, ವಯಸ್ಕರ ಶಿಕ್ಷಣ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಣೆ, ವೀರಶೈವಾಮೃತ ಪುರಾಣದ ಸಂಪಾದನೆಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಪ್ರಿನ್ಸಿಪಲ್ ಇನ್‌ವೆಸ್ಟಿಗೇಟರ್ ಆಗಿ ನೇಮಕ ಮಾಡಿದ್ದು ಅವರ ಕಾರ್ಯಕ್ಷಮತೆ-ದಕ್ಷತೆಗೆ ಸಾಕ್ಷಿ.

ನಿವೃತ್ತಿಯ ನಂತರ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿ ಅವರದು ಸಾರ್ಥಕ ಸೇವೆ. ತಮ್ಮ ಕ್ಷೇತ್ರವಾದ ಗ್ರಂಥಪ್ರಕಟಣೆ, ಹಸ್ತಪ್ರತಿ ಸಂಗ್ರಹ, ಸಂಪಾದನೆ ಕುರಿತ ವಿಚಾರ ಸಂಕಿರಣ-ತರಬೇತಿ ಶಿಬಿರಗಳನ್ನು ಈ ಪ್ರತಿಷ್ಠಾನದ ಮೂಲಕ ಏರ್ಪಡಿಸಿ ಅದರಲ್ಲಿ ಯಶಸ್ವಿ ಆಗಿದ್ದಾರೆ.

ಸಾಧನೆ

೩೧ ಕಾವ್ಯಗಳನ್ನು ಸಂಪಾದಿಸಿದ ಶ್ರೇಯಸ್ಸು ಶ್ರೀ ಬಸವಾರಾಧ್ಯರದು. ಪ್ರತಿಭೆಯ ಜತೆಯಲ್ಲಿ ಅಧ್ಯಯನದ ಆಳ-ವಿಸ್ತಾರಗಳಿಂದ ಅವರ ಕಾರ್ಯಗಳೆಲ್ಲಾ ಸ್ತುತ್ಯವಾದುದು, ಅವರ ಪ್ರಾಂಜಲ ಮನಸ್ಸಿನ ಹೇಳಿಕೆ ಇದು- "ನಮ್ಮ ಪ್ರಾಚೀನರು ನಮಗಾಗಿ ಬಿಟ್ಟು ಹೋಗಿದ್ದ ಸಾಹಿತ್ಯವನ್ನು ಹೆಕ್ಕಿ ನೋಡಲು ನನಗೆ ತುಂಬಾ ಆಸೆಯಿತ್ತು. ಅಪಾರವಾದ ಸಾಹಿತ್ಯ ಹಾಗೇ ಉಳಿಯಬಾರದು ಅದನ್ನು ಬೆಳಕಿಗೆ ತರಬೇಕು ಎಂಬ ಇಚ್ಛೆ ನನಲ್ಲಿ ಪ್ರಬಲವಾಗಿತ್ತು. ನನ್ನ ಮೇಷ್ಟ್ರುಗಳಾದ ಡಿ .ಎಲ್.ಎನ್., ಎ.ಆರ್.ಕೃ., ತೀ.ನಂ.ಶ್ರೀ. ಕೂಡ ಈ ಕಡೆಗೆ ಒಲವು ತೋರಿದವರೇ ಆಗಿದ್ದರು. ಹೀಗಾಗಿ ನಾನು ಈ ಕಡೆಗೆ ಬಂದೆ, ನನ್ನ ಎಲ್ಲಾ ಸಮಯವನ್ನು ಇದಕ್ಕೆ ವಿನಿಯೋಗಿಸಿದೆ."

ಬಹುಶಃ ಈ ಕ್ಷೇತ್ರಕ್ಕೆ ಅವರು ಬಾರದಿರುತ್ತಿದ್ದರೆ, ಈ ಎಲ್ಲಾ ಕೃತಿಗಳು ಬೆಳಕಿಗೆ ಬಾರದೇ ಕತ್ತಲಲ್ಲೆ ಉಳಿದು ಹೋಗುತ್ತಿದ್ದವು. ಆದರೆ ಸೃಜನಶೀಲ ಸಾಹಿತ್ಯಕ್ಕೆ ಅವರು ಸಾಕಷ್ಟು ಕೊಡುಗೆ ನೀಡುತ್ತಿದ್ದರೇನೋ. ಅವರ ಬಳಿಯಲ್ಲಿ ಮಾತಿಗೆ ಕುಳಿತರೆ ಅವರ ಪ್ರತಿಭೆಯ, ಸೃಜನಶೀಲತೆಯ, ಸ್ನೇಹಸೌಹಾರ್ದಗಳ, ಹಾಸ್ಯಪ್ರಜ್ಞೆಯ, ಪ್ರೀತಿ-ಮಾನವೀಯತೆಗಳ ಅರಿವು ಆಗುತ್ತದೆ. ಅದನ್ನು ಬಲ್ಲವರೇ ಬಲ್ಲರು. ನಾನು ಅವರನ್ನು ಇತ್ತೀಚಿನ ವರ್ಷಗಳಲ್ಲಿ ಕಂಡರೂ ನನಗಾದ ಅನುಭವ-ಅಪಾರ. ಅವರು ಅಂಥ ವಿದ್ವಾಂಸರು, ಪಾಂಡಿತ್ಯವುಳ್ಳವರು. ಆದರೆ ನಮ್ಮಂಥ ಕಿರಿಯರೊಡನೆ ಎಷ್ಟು ಸರಳವಾಗಿ, ಆತ್ಮೀಯವಾಗಿ ಕ್ಷೇಮಸಮಾಚಾರದಿಂದ ತೊಡಗಿ, ಸಾಹಿತ್ಯ ಸಂವಾದಕ್ಕೆ ತೊಡಗುವ ಅವರ ಹಿರಿತನ ನಿಜಕ್ಕೂ ಶ್ಲಾಘನೀಯವಾದುದು. ಹಿರಿಯರೆಂದು ಸಂಕೋಚಪಡುವ ಕಿರಿಯರ ಸಂಕೋಚ ನಿವಾರಿಸಿ ಕೇವಲ ಕೆಲವೇ ಸಮಯದಲ್ಲಿ ತಮ್ಮ ಆತ್ಮೀಯ ವಲಯಕ್ಕೆ ಸೆಳೆದುಕೊಳ್ಳುವ ಆಕರ್ಷಣ ಶಕ್ತಿ ಎಲ್ಲ ವಿದ್ವಾಂಸರಲ್ಲಿ ಇಲ್ಲವೆಂದೇ ಹೇಳಬೇಕಾಗುತ್ತದೆ.

ಅವರ ಮೂವತ್ತೊಂದು ಸಂಪಾದನ ಗ್ರಂಥಗಳೆಲ್ಲಾ ಗಾತ್ರದಲ್ಲಿ, ಪಾತ್ರದಲ್ಲೂ ಮಹತ್ವಪೂರ್ಣವಾದವು. ಅವರ ಜವಾಬ್ದಾರಿಯ ಗುರುತ್ವ, ಕೃತಿಗಳನ್ನು ಗಮನಿಸಿದಾಗ ಮನವರಿಕೆಯಾಗುತ್ತದೆ. ಸಂಪಾದನೆ ಕಾರ್ಯದ ಹೊಣೆಗಾರಿಕೆ ಲಕ್ಷಣ-ಕರ್ತವ್ಯಗಳ ಬಗ್ಗೆ ಒಂದಲ್ಲ ಒಂದು ರೀತಿಯಲ್ಲಿ ಆಯಾ ಸಂಪಾದನೆಗಳ ಮುನ್ನುಡಿಯಲ್ಲಿ ಹೇಳಿರುವುದನ್ನು ಒಂದೆಡೆ ಕ್ರೋಡೀಕರಿಸಿದರೆ "ಸಂಪಾದನೆ" -ಕುರಿತ ಪರಿಭಾಷೆ, ವ್ಯಾಖ್ಯಾನ, ಲಕ್ಷಣಗಳು ದೃಷ್ಟಾಂತಗಳುಳ್ಳ ಒಂದು ಶಾಸ್ತ್ರೀಯ ಗ್ರಂಥವೇ ಆಗಬಹುದಿತ್ತು. ಯಾರಾದರೂ ಆ ಕಾರ್ಯ ಕೈಗೊಂಡರೆ ಶಾಸ್ತ್ರೀಯ ಸಾಹಿತ್ಯಕ್ಕೆ ನಿಜಕ್ಕೂ ಒಂದು ಅನುಪಮ ಕೊಡುಗೆ ಆಗುತ್ತದೆ.

ಶ್ರೀ ಬಸವಾರಾಧ್ಯರು ಸಂಪಾದಿಸಿರುವ ನೀಲಕಂಠಾಚಾರ್ಯ ಪಂಡಿತನ ಆರಾಧ್ಯ ಚಾರಿತ್ರ ಒಂದು ಬೃಹತ್ ಗ್ರಂಥ. ಇದನ್ನು ಆಮೂಲಾಗ್ರವಾಗಿ ಓದದಿದ್ದರೂ ಕೆಲವು ಭಾಗವನ್ನು ಓದಲು ತಮ್ಮ ಗ್ರಂಥಾಲಯದಿಂದ ಅದನ್ನು ನೀಡಿ ಸಹಕರಿಸಿದವರು ಶ್ರೀ ಆರಾಧ್ಯರು.

ಈ ಗ್ರಂಥದ ೮೯ ಪುಟಗಳ ಪೀಠಿಕೆಯಲ್ಲಿ 'ಕವಿ-ಕಾಲ-ವಿಚಾರ'ವನ್ನು ಓದಿದಾಗ ಅವರ ಅಧ್ಯಯನಶೀಲತೆ, ವಿದ್ವತ್ತು, ಊಹೆ ಅನುಮಾನಗಳ ಜಾಡಿನಲ್ಲಿ ಮುಂದುವರೆಯುತ್ತಾ ಖಚಿತತೆಯಲ್ಲಿ ಪೂರ್ಣಗೊಳ್ಳುವ ಸಂಶೋಧನ ಪ್ರಜ್ಞೆ, ಸಂಕ್ಷಿಪ್ತವಾಗಿ ಹೇಳುವ ಕಲೆ, ತೌಲನಿಕ ವಿಚಾರ, ವಿಶ್ಲೇಷಣೆ, ಹಸ್ತ ಪ್ರತಿಗಳ ಕುರಿತು ಅವರಿಗಿರುವ ಅಪಾರ ಮಾಹಿತಿ, ಗ್ರಂಥಸಂಪಾದನೆಯಲ್ಲಿ ಅಳವಡಿಸಿಕೊಳ್ಳ ಬೇಕಾದ ವಿಧಿ-ವಿಧಾನಗಳ ಬಗ್ಗೆ ಪೂರ್ಣಜ್ಞಾನ ಎಲ್ಲವೂ ಸುವ್ಯಕ್ತವಾಗುತ್ತವೆ. ಅವರ ನಿರ್ಣಾಯಕ ರೀತಿಯ ಭಾಷೆ ಹೀಗಿದೆ. (ಆರಾಧ್ಯ ಚಾರಿತ್ರ್ಯದ ಮುನ್ನುಡಿ)

"ನೀಲಕಂಠಾಚಾರ್ಯನ ಆರಾಧ್ಯ ಚಾರಿತ್ರ ಕೇವಲ ಅನುವಾದ ಗ್ರಂಥವಲ್ಲವೆಂಬುದನ್ನು ಹಿಂದೆಯೇ ಸಾದರಪಡಿಸಲಾಗಿದೆ. ವಿದ್ವತ್ಪರಂಪರೆಯಲ್ಲಿ ಜನಿಸಿದ ನೀಲಕಂಠಾಚಾರ್ಯ ಅಪಾರವಾದ ಪಾಂಡಿತ್ಯ ಪ್ರದರ್ಶಿಸಿರುವುದನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ. ಉಭಯ ಭಾಷಾಪಂಡಿತನಾದ ಈತ ಮೂಲಕಾವ್ಯಕ್ಕೆ ಯಾವ ರೀತಿಯಲ್ಲೂ ಅಪಚಾರ ಮಾಡದಂತೆ ಸಮರ್ಥವಾಗಿ ವಿಷಯ ನಿರೂಪಣೆ ಮಾಡಿದ್ದಾನೆ. ಆರಾಧ್ಯ ಚಾರಿತ್ರ ಒಂದು ಶಾಸ್ತ್ರ ಗ್ರಂಥ, ಧರ್ಮಗ್ರಂಥ, ಒಂದು ಉತ್ತಮ ಕಾವ್ಯ. ಮಿಗಿಲಾದ ಕಾವ್ಯಗುಣಗಳಿಂದಲೂ, ಉನ್ನತ ಧಾರ್ಮಿಕ ಗುಣಗಳಿಂದಲೂ ಕೂಡಿರುವ ಈ ಕೃತಿ ವೀರಶೈವರಿಗಷ್ಟೇ ಅಲ್ಲದೆ, ಇತರರಿಗೂ ಆದರಣೀಯವಾಗಬಲ್ಲದು. ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಸಂಗಮವನ್ನು ಈ ಕಾವ್ಯದಲ್ಲಿ ಕಾಣಬಹುದಾಗಿದೆ... ಕೇವಲ ಬೃಹತ್ತಿನಿಂದಷ್ಟೇ ಅಲ್ಲದೆ ಮಹತ್ತಿನಿಂದಲೂ ಇದು ಮಿಗಿಲಾದ ಕೃತಿ."

ಇದನ್ನು ೧೯೮೦ರಲ್ಲಿ ನಾಲ್ಕು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿ ಪ್ರಕಟಿಸಲಾಯಿತು. ಅನುಬಂಧದಲ್ಲಿ ಅಕಾರಾದಿ, ವಿಶಿಷ್ಟ ಪದಸೂಚಿ, ಪಾರಿಭಾಷಿಕ ಪದಕೋಶ, ಶಬ್ದಾರ್ಥಕೋಶ, ಆಧಾರ ಗ್ರಂಥಗಳನ್ನು ಕೊಟ್ಟು ಕೊನೆಯಲ್ಲಿ, "ಈ ಮಹತ್ಕೃತಿಯನ್ನು ಸಂಪಾದಿಸುವಲ್ಲಿ ನನ್ನ ಅಜ್ಞಾನ, ಅನವಧಾನ, ಅನ್ಯಥಾಜ್ಞಾನ, ಇವುಗಳಿಂದ ಎಡೆವಾಯ್ದು ಬಂದ ತಪ್ಪುಗಳನ್ನು ಕಡೆತನಕ ಸಾಧಿಸದೆ ಬಂದ ಲೇಸಿಂಗೆ ತಲೆದೂಗಬೇಕೆಂದು ಪ್ರಾಜ್ಞರನ್ನು ಕೇಳಿಕೊಳ್ಳುತ್ತೇನೆ" ಎಂದು ಕಾವ್ಯಮಯವಾಗಿ ಹೇಳಿರುವುದು ಅವರ ಸೌಜನ್ಯ-ವಿನಯಶೀಲತೆಗಳಿಗೆ ರುಜುವಾತು ಆಗಿದೆ.

ಅವರ ಸಂಪಾದನಾ ಕೃತಿಗಳಲ್ಲಿ ಇದೊಂದು ವಿಶಿಷ್ಟ ಕೃತಿಯೂ ಹೌದು. ಸಂಪಾದನಾಕಾರನಲ್ಲಿರಬೇಕಾದ ಎಲ್ಲಾ ಲಕ್ಷಣಗಳೂ ಅವರಲ್ಲಿವೆ. ಸಂಪಾದನೆ-ಸಂಶೋಧನೆ ಕುರಿತ ಒಂದು ಶಾಸ್ತ್ರೀಯ ಗ್ರಂಥ ರಚಿಸಬಲ್ಲಂಥ ಸಾಮರ್ಥ್ಯ ಅವರಲ್ಲಿರುವಾಗ ಅವರು ಯಾಕೆ ಆ ಬಗ್ಗೆ ಮನ ಹೊರಳಿಸಲಿಲ್ಲ ಎಂದು ಆಶ್ಚರ್ಯವಾಗುತ್ತದೆ.

ಶ್ರೀ ಆರಾಧ್ಯರನ್ನು ಕುರಿತು ಬರೆಯಲು ಹೊರಟಾಗ ಅವರು ನೀಡಿದ ಇನ್ನೊಂದು ಬಹೃತ್ ಗ್ರಂಥ "ಹಳಗನ್ನಡ ನಿಘಂಟು". ಇದು ೧೯೭೯ರಲ್ಲಿ ಪ್ರಕಟವಾಗಿದೆ. ೩೯ ಹಸ್ತ ಪ್ರತಿಗಳ ಸಹಾಯದಿಂದ ಶಾಸ್ತ್ರೀಯವಾಗಿ ಪರಿಷ್ಕರಿಸಿ ರೂಪುಗೊಂಡ ನಿಘಂಟು. ಶ್ರೀ ಆರಾಧ್ಯರ ಮಹಾನ್ ಶ್ರದ್ಧೆ ಪ್ರಾಮಾಣಿಕತೆಗಳ ಫಲವಾಗಿದೆ. ಏಲ್ಲ ಸಂಪಾದಿತ ಗ್ರಂಥಗಳಲ್ಲಿರುವಂತೆ ಈ "ನಿಘಂಟು"ವಿನಲ್ಲೂ ವಿದ್ವತ್ ಪೂರ್ಣವಾದ ಪೀಠಿಕೆ ಇದೆ. ಕ್ರೌನ್ ಅಷ್ಟದಳದ ೯೩೦ ಪುಟಗಳ ಈ ಹಳಗನ್ನಡ ಪದಕೋಶದ ಕೊನೆಯಲ್ಲಿ ಪ್ರಕಟಿತ ಕನ್ನಡ ನಿಘಂಟುಗಳ ಪಟ್ಟಿಯನ್ನು ಕೊಟ್ಟಿದ್ದಾರೆ.

ಆರಂಭದಲ್ಲಿ ದೀರ್ಘಪೀಠಿಕೆಯಲ್ಲಿ "ರನ್ನಕಂದ, ಶಬ್ದಮಣಿದರ್ಪಣ, ಕರ್ನಾಟಕ ಶಬ್ದಸಾರಂ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದ ಮಂಜರಿ, ಕರ್ನಾಟಕ ಸಂಜೀವನಂ, ಕರ್ನಾಟಕ ಭಾರತ ನಿಘಂಟು, ಕವಿಕಂಠ ಹಾರಂ, ಶಬ್ದಾರ್ಥಕೋಶ -ಎಂಬ ಹತ್ತು ಪ್ರಾಚೀನ ನಿಘಂಟುಗಳನ್ನು ಕುರಿತು, ಸಂಕ್ಷಿಪ್ತ ವಿವರ ನೀಡಿ ತಮ್ಮ ಗುರು ವರ್ಯರನ್ನು ಪ್ರಾಂಜಲ ಮನಸ್ಸಿನಿಂದ ವಂದಿಸಿದ್ದಾರೆ.

ನಿಘಂಟಿನ ಸ್ವರೂಪ, ಲಕ್ಷಣ, ಇತಿಹಾಸಗಳನ್ನು ಗುರುತಿಸಿ ಕನ್ನಡದಲ್ಲಿ ಸುಮಾರು ೬೪ ಪ್ರಾಚೀನ ಕನ್ನಡ ನಿಘಂಟುಗಳಿವೆಯೆಂದು ತಿಳಿಸಿದ್ದಾರೆ. ಈ ಕೃತಿ ಸಂಪಾದಿಸಲು ಅವರು ನೀಡಿದ ಕಾರಣ ಇದು- "ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುಗಳ ಅವಲೋಕನವನ್ನು ಮೇಲಿಂದ ಮೇಲೆ ಮಾಡಬೇಕಾದ ಪ್ರಸಂಗ ಒದಗಿತು. ಆಗ ಈ ಕೆಲವು ನಿಘಂಟುಗಳಲ್ಲಿನ, ಅವುಗಳ ಟೀಕೆಗಳಲ್ಲಿನ ಅಸಂಗತಗಳನ್ನು, ಅಶುದ್ಧ ರೂಪಗಳನ್ನು, ಅಲಭ್ಯಪ್ರಸಂಗಗಳನ್ನು ಮನಗಂಡು ಈ ನಿಘಂಟುಗಳ ಅಧಿಕೃತ ಪರಿಷ್ಕರಣವೊಂದನ್ನು ಹೊರತರಬೇಕೆಂಬ ಬಯಕೆ ಅಂಕುರಿಸಿತು."

ನಿಘಂಟು ಕಾರ್ಯ ಒಂದು ರೀತಿಯಲ್ಲಿ ನೀರಸ ಹಾಗೂ ಶುಷ್ಕ ಕಾರ್ಯ. ಆದರೆ ಎಲ್ಲಿ ಶ್ರೀ ಆರಾಧ್ಯರು ಇರುತ್ತಾರೋ ಅಲ್ಲಿ ನೀರಸತೆಗೆ, ಶುಷ್ಕತೆಗೆ ಅವಕಾಶವಿಲ್ಲ. ಅವರ ಮನೋಭಾವವೇ ಅಂತಹುದು, ಕಸದಲ್ಲಿ ರಸವನ್ನು ಆರಿಸುವಂತಹುದು. ತಿಳಿಹಾಸ್ಯದ ಅವರ ಮಾತು, ಸಾಂದರ್ಭಿಕವಾಗಿ ಅವರು ಉಲ್ಲೇಖಿಸುವ ಕಾವ್ಯದ ಸಾಲುಗಳು ನಿಘಂಟು ರಚನೆಯಂಥ

ಕೆಲಸಮಾಡುವಾಗಲೂ ನಗೆಯ ಅಲೆ ಎಬ್ಬಿಸುತ್ತದೆ, ಸಂದರ್ಭವನ್ನು ರಸಮಯವಾಗಿಸುತ್ತದೆ, ಮನವನ್ನು ತಟ್ಟುತ್ತದೆ, ಸೇವೆಯನ್ನು ಮುಂದುವರಿಸಲು ಪ್ರೇರೇಪಿಸುತ್ತದೆ. ಇಲ್ಲದಿದ್ದರೆ ಇಷ್ಟೊಂದು ಸಂಪಾದನಾ ಕಾರ್ಯ ಮಾಡಲು ಸಾಧ್ಯವಾಗುತ್ತಿತ್ತೇ? ಅವರ ಜತೆಯಲ್ಲಿ ನೆರವು ನೀಡಿದ ಮಂದಿಗಳ ಹೆಸರುಗಳ ಪಟ್ಟಿಯನ್ನು ಅವರು ಕೊಟ್ಟಿರುವುದನ್ನು ಗಮನಿಸಿದಾಗ, ಅಷ್ಟು ಮಂದಿಯನ್ನು ತಮ್ಮ ಈ ಕಾರ್ಯದಲ್ಲಿ ತೊಡಗಿಸಿಕೊಂಡ ಅವರ ಪ್ರಾಮಾಣಿಕತೆ, ಕಾರ್ಯಶ್ರದ್ಧೆ ನಿಜಕ್ಕೂ ಪ್ರಶಂಸಾರ್ಹವಾದುದು.

ಹಳಗನ್ನಡ ನಿಘಂಟುಗಳನ್ನು ಸಮಗ್ರವಾಗಿ ಸಂಪಾದಿಸಿ, ನಿಘಂಟು ಶಾಸ್ತ್ರವನ್ನು ಕುರಿತು ಅಧ್ಯಯನ ಮಾಡುವವರಿಗೆ ಪೂರ್ಣಆಕರ ಗ್ರಂಥವನ್ನು ಒದಗಿಸಿದ ಶ್ರೇಯಸ್ಸು ಶ್ರೀ ಆರಾಧ್ಯರಿಗೆ ಸಲ್ಲುತ್ತದೆ.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗಿನ ಅವಧಿಯಲ್ಲಿ ಅವರಿಗೆ ಬಿಡುವಿಲ್ಲದಷ್ಟು ಕೆಲಸ ಕಾರ್ಯಗಳು. ಕರ್ನಾಟಕದಾದ್ಯಂತ ಒಂದಿಲ್ಲೊಂದು ಕಾರ್ಯಕ್ರಮಗಳ ಉದ್ಘಾಟನೆ, ಅಧ್ಯಕ್ಷತೆಗಳು, ಅವರ ಉತ್ಸಾಹವನ್ನು ಕುಂಠಿತಗೊಳಿಸಲಿಲ್ಲ. ಊರೆಲ್ಲ ತಿರುಗಾಡಿ ಬಂದರೂ, ಪರಿಷತ್ತಿಗೆ ಅವರ ಹಾಜರು ತಪ್ಪಿದ್ದಿಲ್ಲ. ಕನ್ನಡದ ಬಗ್ಗೆ ಅವರಿಗೆ ತೀವ್ರ ಕಳಕಳಿ. ಅವರನ್ನು ಭೇಟಿಯಾಗಲು ಬರುವ ಎಲ್ಲರನ್ನು ಪ್ರೀತಿಯಿಂದ ಮಾತನಾಡಿಸಿ, ಕಾಫಿ, ಟೀ ನೀಡಿ ಸತ್ಕರಿಸಿ ಕಳುಹಿಸಿಕೊಡುತ್ತಿದ್ದವರು ಅವರು. ಸಹನೆ ತಪ್ಪದ ಅವರ ಈ ಮನೋಭಾವ, ತಿಳಿಹಾಸ್ಯದ ಅಲೆ ಎಬ್ಬಿಸುವ ಅವರ ಮಾತುಗಳು ಸದಾ ಆಪ್ಯಾಯಮಾನವಾಗಿರುತ್ತವೆ.

ಶ್ರೀ ಬಸವಾರಾಧ್ಯರ ಭಾಷಣದ ಬಗ್ಗೆ ಹೇಳಬೇಕು, ಇವರು ವಾಗ್ಮಿ ಹೌದು. ಆದರೆ ಇವರ ಭಾಷಣ ಭೋರ್ಗರೆಯುವ ಜಲಪಾತವಲ್ಲ, ಪರ್ವತಾಗ್ರದಿಂದ ಕೆಳಕ್ಕೆ ಹರಿಯುವ ಝುರಿಯಂತೆ, ಅದು ಎಲ್ಲರನ್ನು ತನ್ನ ಮೋಹಕತೆಯಿಂದ ಸೆಳೆಯುತ್ತದೆ. ಇವರ ಭಾಷಣವೂ ಹಾಗೇ ಇಲ್ಲಿ ಆಡಂಬರದ ಪದ ಪುಂಜಗಳಿಲ್ಲ. ಒಂದರ ಮೇಲೊಂದು ಬರುವ ಪದಗಳ ಅಬ್ಬರವಿಲ್ಲ. ಸರಳ, ಲಲಿತ ಪ್ರಸನ್ನವಾದ ಪದಗಳದೇ ಒಂದು ಆಕರ್ಷಣೆ, ಹಿತಮಿತ ಮೃದು ವಚನ. ಅದುವೇ ಶ್ರೀ ಆರಾಧ್ಯರ ಭಾಷಣ, ವಿಷಯ ನಿರೂಪಣೆ ನೇರ ಸ್ಪಷ್ಟ. ಎಲ್ಲೂ ಸುತ್ತು ಬಳಸು ಇಲ್ಲ.

ಆಗಾಗ ದೂರವಾಣಿ ಮೂಲಕ ನನ್ನನ್ನು ವಿಚಾರಿಸಿ ಕೊಳ್ಳುವ ಅವರ ವಿಶ್ವಾಸ, ಹಿರಿತನ, ಆತ್ಮೀಯತೆಗಳಿಗೆ ನಾನು ಚಿರಋಣಿ. ಅವರು ನನ್ನನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗೆಲ್ಲ "ಯಾವುದೋ ವಿಷಯದ ಬಗ್ಗೆ ಚಿಂತಿಸಬೇಡಿ, ದೈವಫಲದ ಮುಂದೆ ಮಾನವ ಪ್ರಯತ್ನಗಳು ವಿಫಲವಾಗುತ್ತವೆ. ಆದರೆ ಆರೋಗ್ಯವನ್ನು ಮಾತ್ರ ಕಡೆಗಣಿಸ ಬೇಡಿ, ಕಾಪಾಡಿಕೊಳ್ಳಿ. ಮೊದಲು ಆರೋಗ್ಯ ಆಮೇಲೆ ಮಿಕ್ಕ ವಿಚಾರ" ಎಂದು ಹರಸುವ ಅವರ ದೊಡ್ಡ ಮನಸ್ಸಿಗೆ ನಮಿಸಬೇಕು.

ಇತ್ತೀಚೆಗೆ ಹರ್ಯಾಣದ ಪಾಣಿಪತದ ಪ್ರತಿಷ್ಠಿತ ಸಂಸ್ಥೆಯಾದ ಜೈಮಿನಿ ಅಕಾಡೆಮಿಯ "ಸುಭದ್ರಾಕುಮಾರಿ ಜನ್ಮಶತಾಬ್ಧಿ ಸಮ್ಮಾನ್ ಪ್ರಶಸ್ತಿ" ಬಂದಾಗ ಪತ್ರಿಕೆಯಲ್ಲಿ ಅದನ್ನು ಗಮನಿಸಿ ದೂರವಾಣಿ ಮೂಲಕ ಸಂಪರ್ಕಿಸಿ ಶುಭಾಶಯ ಹೇಳಿ ಅಭಿನಂದಿಸಿದವರು ಶ್ರೀ ಆರಾಧ್ಯರು.

ಈ ಒಂದು ಲೇಖನ ರಚನೆಗೆ ನನಗೆ ಕರೆ ಬಂದಾಗ ನಾನು ಸಂತಸಪಟ್ಟೆ. ಶ್ರೀ ಆರಾಧ್ಯರಿಂದ ಪುಸ್ತಕಗಳನ್ನು ಸಂಗ್ರಹಿಸಿಕೊಂಡೆ, ಓದಿದೆ. ಹಲವಾರು ಒತ್ತಡಗಳ ಮಧ್ಯೆಯೂ ಬಸವಾರಾಧ್ಯರ ಬಗ್ಗೆ ನಾನು ಬರೆಯಲೇಬೇಕೆಂಬ ಮನಸ್ಸು ಇಷ್ಟು ಬರೆಯುವಂತೆ ಮಾಡಿತು.

XXX

ಅರ್ಧ ಕಪ್ ಚಹಾದ ಸತ್ಕಾರ

-ಡಾ. ಕೆ.ಆರ್. ಸಂಧ್ಯಾರೆಡ್ಡಿ

ಬಸವಾರಾಧ್ಯರ ಹೆಸರು ಕೇಳಿದ ಕೂಡಲೇ ನೆನಪಾಗುವ ವಿಷಯವೆಂದರೆ ಮುಂದೆ ಎಂದಾದರೂ ದಪ್ಪ ಆಗಬಹುದು ಎಂಬ ಊಹೆಗೆ ಅವಕಾಶವೇ ಕೊಡದಂಥ ಸಮತಟ್ಟಾದ ಎತ್ತರದ ದೇಹ, ದೊಡ್ಡ ಚೌಕುಳಿಯ ಆಡ್‌ಕೋಟು, ಪ್ರಸನ್ನ -ಶಾಂತ ಮನಸ್ಥಿತಿಯನ್ನು ಬಿಂಬಿಸುವ ಮಾತುಗಾರಿಕೆ, ೫೦-೬೦ರ ದಶಕದ ಮಾದರಿಯ ಸಹೃದಯ ನಡವಳಿಕೆ. ಅವರ ವ್ಯಕ್ತಿತ್ವವೆಂದರೆ, ಪ್ರಕೃತಿಯ ಮಡಿಲಲ್ಲಿ ತನ್ನಷ್ಟಕ್ಕೆ ತಾನು ಆನಂದದಿಂದ ಹರಿಯುವ ಚಿಕ್ಕ ತೊರೆಯ ಹಾಗೆ.

ನಾನು ಅವರನ್ನು ಮೊದಲು ನೋಡಿದ್ದು ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ. ೭೪ರಿಂದ ೭೭ರವರೆಗೆ ವಿಶ್ವವಿದ್ಯಾಲಯದ ಫೆಲೋಶಿಪ್ ಪಡೆದು ನಾನು ಸಂಶೋಧನಾ ವಿದ್ಯಾರ್ಥಿಯಾಗಿ ಅಧ್ಯಯನ ಸಂಸ್ಥೆ ಸೇರಿದ್ದೆ. ಆಗಿನ ಕಾಲಕ್ಕೆ ಮಾನವಿಕ ವಿಭಾಗದಲ್ಲಿ ಪೂರ್ಣಾವಧಿಯ ಸಂಶೋಧನ ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆ. ಆದರೆ ಮೈಸೂರು ವಿಶ್ವವಿದ್ಯಾಲಯವು ಈ ವಿಭಾಗಗಳಿಗೂ ಇಂತಿಷ್ಟು ಎಂದು ಫೆಲೋಶಿಪ್‌ಗಳನ್ನು ಕೊಡಮಾಡಲು ಆರಂಭಿಸಿದ್ದರಿಂದ ಎಂ.ಎ. ಮುಗಿದ ಕೂಡಲೇ ಸಂಶೋಧನಾ ಕ್ಷೇತ್ರಕ್ಕೆ ಕಾಲಿರಿಸಿದ ಐದಾರು ಹುಡುಗಿಯರ ಒಂದು ಗುಂಪು ಅಧ್ಯಯನ ಸಂಸ್ಥೆಯಲ್ಲಿ ಕಾಣಬರುವಂತಾಗಿತ್ತು.

ಹಾಮಾನಾ ಆಗ ಅಧ್ಯಯನ ಸಂಸ್ಥೆಯ ನಿರ್ದೇಶಕರು. ಅದು ಅವರ ಆಡಳಿತದ ಉಚ್ಛ್ರಾಯಕಾಲ. ಅವರು ತಮ್ಮ ಚೇಂಬರಿನೊಳಗೇ ಇದ್ದರೂ ಅವರ ಕಟ್ಟು ನಿಟ್ಟು, ಬಿಗಿ ಶಿಸ್ತಿನ ಪ್ರಖರತೆ ಇಡೀ ಅಧ್ಯಯನ ಸಂಸ್ಥೆಯ ನಿಃಶಬ್ದತೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಇನ್ನು ಕೋಣೆ ಬಿಟ್ಟು ಹೊರಬಂದರೆ? ಅವರು ತಲೆತಗ್ಗಿಸಿ, ನಿಧಾನವಾಗಿ ಆಚೀಚೆ ನೋಡದೆ ಬರುತ್ತಿದ್ದರೆ ಕಾಡಿನ ಹುಲಿ ಎದುರಿಗೇ ಬಂದಷ್ಟು ಹೆದರಿಕೆಯಾಗುತ್ತಿತ್ತು. ಆಗಾಗ ಅವರು ಅನಿರೀಕ್ಷಿತವಾಗಿ ಹೀಗೆ ಹೊರಬರುವುದನ್ನು ಆಗಾಗ ನಿರೀಕ್ಷಿಸಿಯೋ ಏನೋ, ಸಂಸ್ಥೆಯ ಒಂದು ವಿಭಾಗದವರು ಇನ್ನೊಂದು ವಿಭಾಗಕ್ಕೆ ಹೋಗಿ ಮಾತುಕಥೆ, ಹರಟೆಗೆ ಕೂರುವಂಥ ಸಂದರ್ಭಗಳು ತೀರ ಅಪರೂಪ.

ಹಾಮಾನಾ ಕಂಡರೆ ನಮಗೂ ಇತರರಷ್ಟೇ ಹೆದರಿಕೆಯಿದ್ದರೂ ಆ ಹೆದರಿಕೆಗೆ ತಕ್ಕಂತೆ ನಮ್ಮ ನಡುವಳಿಕೆ ಬದಲಾಗಿರಲಿಲ್ಲ. ಸಂಶೋಧನಾ ವಿದ್ಯಾರ್ಥಿಗಳಲ್ಲಿ ನಿರೀಕ್ಷಿಸಲಾಗುವ ಶಿಸ್ತು, ಗಾಂಭೀರ್ಯಗಳಿಗೆ ಸಾಕಷ್ಟು ವ್ಯತಿರಿಕ್ತವಾಗಿದ್ದ ನಾವು ಹಾಮಾನಾ ಭಯದ ನೆರಳಿನಲ್ಲಿಯೂ ಹತ್ತಾರು ಸಲ ಕ್ಯಾಂಟೀನಿಗೆ ಭೇಟಿಕೊಡುವುದನ್ನು ತಪ್ಪಿಸಿರಲಿಲ್ಲ. ತಮಾಷೆ, ಹರಟೆ, ನಗೆಚಾಟಿಕೆಗಳಿಂದ ದೂರವಾಗಿರಲಿಲ್ಲ. ನಮ್ಮ ನಡವಳಿಕೆ ಅಧ್ಯಯನ ಸಂಸ್ಥೆಯ ಇತರರಿಗೆ ಕಣ್ಣುರಿ ಮತ್ತು ಅಸೂಯೆಯ ವಿಷಯವಾಗಿತ್ತು. ಇವರೇನು ಹೀಗಾಡ್ತಾರೆ, ಸ್ವಲ್ಪನೂ Seriousness ಇಲ್ಲ ಎಂಬ ಅಭಿಪ್ರಾಯ ಅವರ ನೋಟದಲ್ಲಿ ವ್ಯಕ್ತವಾಗುತ್ತಿತ್ತು. ಇಂಥ ಹಿನ್ನೆಲೆಯಲ್ಲಿ ನಮ್ಮನ್ನು ಸಹಜ ವಿಶ್ವಾಸದಿಂದ ಮಾತಾಡಿಸುತ್ತಿದ್ದ ಏಕೈಕ ವ್ಯಕ್ತಿ ಬಸವಾರಾಧ್ಯರು. ಅವರು ಗ್ರಂಥ ಸಂಪಾದನಾ ವಿಭಾಗದ ಮುಖ್ಯಸ್ಥರಾಗಿದ್ದರು. ಅಲ್ಲಿ ಸಹಾಯಕ ಸಂಪಾದಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಗೆಳತಿ ಭಾನುಮತಿ ನಮಗೂ ಬಸವಾರಾಧ್ಯರಿಗೂ ನಡುವಣ ಲಿಂಕು. ಬಸವಾರಾಧ್ಯರು ಟೀಗೆ ಕರೀತಿದ್ದಾರೆ ಬನ್ರೇ, ಈವತ್ತು ಕ್ಯಾಂಟೀನಿಗೆ ಹೋಗಬೇಡಿ ಅಂತ ಭಾನುಮತಿ ನಮ್ಮನ್ನು ಬಸವಾರಾಧ್ಯರ ಕೋಣೆಗೆ ಕರೆದುಕೊಂಡು ಹೋಗುತ್ತಿದ್ದಳು. ಅಲ್ಲಿ ಚಹಾ ಸರಬರಾಜಿನ ಶಿಸ್ತೇ ಬೇರೆ. ಚೊಕ್ಕವಾದ ಪಿಂಗಾಣಿ ಕಪ್ಪುಗಳಲ್ಲಿ ಎಲ್ಲರಿಗೂ ಸಮಾನ ಅಳತೆಯಲ್ಲಿ ಬಿಸಿಬಿಸಿಯಾದ ಚಹಾ ಸಿಗುತ್ತಿತ್ತು. ಇಂಥ ಸತ್ಕಾರಕ್ಕೆ ಪಾತ್ರರಾಗುವ ಯಾವ ಅರ್ಹತೆ ನಮಗಿದೆ ಎಂಬ ಅರ್ಥವಾಗದ ಗೊಂದಲದಲ್ಲೆ ನಾವು ಚಹಾ ಮುಗಿಸುತ್ತಿದ್ದೆವು. ಕಪ್ಪುಗಳನ್ನು ತೆಗೆದಿರಿಸಿ, ಮೇಜನ್ನು ನೀಟಾಗಿ ಸ್ವಚ್ಛ ಮಾಡಿಸಿದ ನಂತರ ಆರಾಧ್ಯರು ನಮ್ಮ ಸಂಶೋಧನೆಗೆ ಸಂಬಂಧಿಸಿದಂತೆ ಐದಾರು ನಿಮಿಷದ ಮಾತುಕಥೆ ನಡೆಸುತ್ತಿದ್ದರು. ಅನಂತರ ಚೆದುರುತ್ತಿದ್ದೆವು. ಇಂಥ ಸತ್ಕಾರ ನಮಗೆ ಆಗಾಗ್ಗೆ ಸಿಗುತ್ತಿತ್ತು ಮತ್ತು ನಂತರದ ವರ್ಷಗಳಲ್ಲಿ ನಮ್ಮೊಂದಿಗೆ ಬಂದು ಸೇರಿದವರಿಗೂ ಇದು ವಿಸ್ತರಿಸಲ್ಪಡುತ್ತಿತ್ತು.

ಎಂಬತ್ತರ ದಶಕದಿಂದಾನಂತರದ ದಿನಗಳಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಿದೆ. ಜೊತೆಗೇ ಜಾತಿ, ಕೋಮು ಭಾವನೆಗಳು, ಸ್ಥಾನಮಾನಭೇದಗಳು, ಪಕ್ಷಪಾತ ಭಾವಗಳೂ ವಿಪರೀತ ಹೆಚ್ಚಾಗಿವೆ. ಬಸವಾರಾಧ್ಯರಂಥ ನಿಷ್ಕಲ್ಮಶ ಹೃದಯದವರು ಹುಡುಕಿದರೂ ಸಿಗುವುದು ಕಷ್ಟ,

ನಿವೃತ್ತಿಯ ನಂತರ, ಕೆಲವೇ ದಿನಗಳಲ್ಲಿ ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನಂಥ ಭಾರೀ ಪೈಪೋಟಿಯ ಸಂಸ್ಥೆಗೆ ಸಲೀಸಾಗಿ ಆಯ್ಕೆಯಾಗಿ ಬಂದದ್ದು ಒಂದು ವಿಸ್ಮಯ. ಇದು ಅವರ ವ್ಯಕ್ತಿತ್ವ, ಅಧ್ಯಯನ, ಪಾಂಡಿತ್ಯಗಳಿಗೆ ದೊರೆತ ಮನ್ನಣೆ. ಇದೇ ರೀತಿ ಅವರು ಇನ್ನು ಅನೇಕ ಸಂಘಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕೊಟ್ಟರೆ ಬೇಡ ಅನ್ನದ ಕೊಡಬೇಕು ಎಂದು ಆಗ್ರಹ ಮಾಡದ ಬಸವಾರಾಧ್ಯರು ತಮಗೆ ದೊರೆತ ಅವಕಾಶಗಳಲ್ಲಿ ನಿಸ್ಪೃಹವಾಗಿ ದುಡಿದಿದ್ದಾರೆ. ವಯಸ್ಸಾಗಲೀ, ಅಧಿಕಾರವಾಗಲೀ ಅವರನ್ನು ಬದಲಾಯಿಸಿಲ್ಲ. ಜನರು ಕೊಡುವ ಅಧಿಕಾರದ ಆಸೆ ಆಮಿಷಗಳಿಗೆ ಅಂಟಿಕೊಳ್ಳದ ಬಸವಾರಾಧ್ಯರು ನೋಡುವಾಗ ನಮ್ಮ ಗರತಿಯ ಹಾಡಿನ ತ್ರಿಪದಿ ನೆನಪಾಗುತ್ತದೆ-

ಮಂದೇನು ಕೊಟ್ಟೀತ ಮನವೇನು ದಣಿದೀತ
ಮುಂಜಾನದಾಗ ನಮ್ಮ ಗಿರಿಯಲ್ಲಿ ಕೊಟ್ಟರ
ಮನೆ ತುಂಬಿ ನಮ್ಮ ಮನ ತುಂಬಿ.

ಬಿಸಿಯಾದ ಚಹಾದಷ್ಟೇ ಹಿತಕರ ವ್ಯಕ್ತಿತ್ವದ ಬಸವಾರಾಧ್ಯರಿಗೆ ನಮ್ಮೆಲ್ಲರ ಶುಭಹಾರೈಕೆಗಳು.

XXX

ಒಂದಿಷ್ಟು ಬಿಡಿ ಚಿತ್ರಗಳು

-ಎಸ್.ವಿ. ಪ್ರಭಾವತಿ

ಎರಡು ಸಾವಿರದ ನಾಲ್ಕನೇ ಇಸವಿಯಲ್ಲಿ ನಿಂತು ಹಿಂದಿರುಗಿ ನೋಡಿದಾಗ, ಒಂದೂವರೆ ಸಾವಿರ ವರ್ಷಗಳ ಇತಿಹಾಸವನ್ನು ಭಾಷೆಗೆ ಸಂಬಂಧಿಸಿಯೂ, ಒಂದು ಸಾವಿರ ವರ್ಷಗಳ ಇತಿಹಾಸವನ್ನು ಸಾಹಿತ್ಯಕ್ಕೆ ಸಂಬಂಧಿಸಿಯೂ ಹೊಂದಿರುವ ಕನ್ನಡ ಸಾಹಿತ್ಯ ಚರಿತ್ರೆಯ ಇತಿಹಾಸವನ್ನು ಮತ್ತೆ ಬರೆಯ ಬಯಸುವವರಿಗೆ ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯವನ್ನು ಅರುಣೋದಯ, ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ, ಸ್ತ್ರೀ ವಾದ, ನವೋತ್ತರ ಅಥವಾ ನವ್ಯ ನವೋದಯ ....ಹೀಗೆ ವಿಭಾಗಿಸಿಕೊಳ್ಳಬೇಕಾದ ಅನಿವಾರ್ಯತೆಯೊದಗುತ್ತದೆ. ಆಗ ಮೊದಲು ಕಾಣುವುದು ಅರುಣೋದಯದ ಕಾಲ. ಕನ್ನಡದ ಮೊದಲ ಶಾಸನವನ್ನು ಓದಿದವರು, ಕನ್ನಡದ ಮೊದಲ ನಿಘಂಟನ್ನು ಬರೆದವರು ಕನ್ನಡದ ಮೊದಲ ಸಾಹಿತ್ಯ ಚರಿತ್ರೆ ಬರೆದವರು, ಮೊದಲ ಕನ್ನಡ ಪತ್ರಿಕೆ ತಂದವರು, 'ಪಂಪ ಭಾರತ'ವನ್ನು ಮೊದಲು ಸಂಪಾದಿಸಿದವರು ಕ್ರಿಶ್ಚಿಯನ್ ಮಿಷಿನರಿಗಳು. ರೆವರೆಂಡ್ ಕಿಟ್ಟೆಲ್, ಇ.ಸಿ. ರೈಸ್, ಬಿ.ಎಲ್. ರೈಸ್, ಮೊದಲಾದ ಮಹನೀಯರು. ಅನಂತರ ಈ ಪರಂಪರೆಯನ್ನು ಮುಂದುವರಿಸಿದರು ಆರ್. ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಆ.ನೇ. ಉಪಾಧ್ಯೆ, ಬಿ.ಎಂ. ಶ್ರೀಕಂಠಯ್ಯ, ತೀ.ನಂ. ಶ್ರೀಕಂಠಯ್ಯ ಮೊದಲಾದವರು. ಹೀಗೆ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿ ಪ್ರಾತಃಸ್ಮರಣೀಯರಾದ ವ್ಯಕ್ತಿಗಳ ಸಾಲಿನಲ್ಲಿ ಬರುವವರು ಪ್ರೊ. ಎನ್. ಬಸವಾರಾಧ್ಯ ಅವರು.

ನನ್ನ ಮತ್ತು ಬಸವಾರಾಧ್ಯರ ಪರಿಚಯ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆಯೇ. ನನ್ನ ಪೀಳಿಗೆಯವರಿಗೆ ಅಕಾಡಮಿ, ಪರಿಷತ್ತು, ಪುಸ್ತಕ ಪ್ರಾಧಿಕಾರ ಈ ಯಾವುದಕ್ಕೆ ಹೊಸದಾಗಿ ಅಧ್ಯಕ್ಷರಾದವರು ಬಂದರೂ ಅವರನ್ನು ಭೇಟಿ ಮಾಡಿ ನಮ್ಮ ಹೊಸ ಪುಸ್ತಕವೊಂದನ್ನು ಅವರ ಕೈಗಿಡುವುದು ಒಂದು ರೀತಿಯ ಸತ್‌ಸಂಪ್ರದಾಯ. ನನ್ನ ಮಟ್ಟಿಗಂತೂ ಪ್ರಾಂಜಲ ಹೃದಯದಿಂದ ಯಾವ ಒಳಉದ್ದೇಶವೂ ಹೊಂಚುಹಾಕುವಿಕೆಯೂ ಇಲ್ಲದೆ ಕೇವಲ ಸಾಹಿತ್ಯಾಸಕ್ತಿಯಿಂದ ಈ ಕೆಲಸವನ್ನು ನಾನು ಮಾಡಿಕೊಂಡು

ಬಂದಿದ್ದೇನೆ. ಹಾಗೇ ನಾನು ಬಸವಾರಾಧ್ಯರನ್ನು ಕಾಣಲು ಹೋದಾಗ, ಅದು ಹೇಗೆ ನನಗೆ ಪ್ರಾಚೀನ ಸಾಹಿತ್ಯದ ಬಗ್ಗೆ ಆಸಕ್ತಿ ಎಂದು ಗುರುತಿಸಿದರೋ ಏನೋ "ಕರ್ನಾಟಕ ಇತಿಹಾಸ ಅನುಸಂಧಾನ ಪರಿಷತ್" ಕೈಗೊಂಡಿರುವ ಬೃಹತ್ ಯೋಜನೆಯೊಂದರಲ್ಲಿ ನನ್ನನ್ನು ತೊಡಗಿಸಿದರು. ಅದೂ ಒಂದು ರೀತಿಯ ನಿಘಂಟು ಕೆಲಸವೇ. ಪಾರ್ಶ್ವನಾಥ ಪಂಡಿತನ "ಪಾರ್ಶ್ವನಾಥ ಪುರಾಣ"ದಲ್ಲಿ ಕೆಲವು ಶಬ್ದಗಳನ್ನು ಹುಡುಕಿ ತೆಗೆದು ಅವುಗಳಿರುವ ಸಂದರ್ಭಾನುಸಾರ ವಾಕ್ಯಗಳನ್ನು ಪುಟಸಂಖ್ಯೆಗಳೊಂದಿಗೆ ಗುರುತಿಸುವುದು. ಮನೆ ಕೆಲಸ, ಕಾಲೇಜಿನ ಕೆಲಸ, ಇತರ ಬರವಣಿಗೆಗಳು -ಇವುಗಳ ನಡುವೆ ಇದನ್ನೂ ಮಾಡಬಹುದೆಂಬ ಅತೀ ಭರವಸೆಯಿಂದ ನಾನು ಆ ಕೆಲಸವನ್ನು ಒಪ್ಪಿಕೊಂಡೆ. ಆದರೆ ನಂತರ ಅರಿವಾಯಿತು ಅದರ ಬೃಹತ್ತು. ಕಾಲೇಜಿನಲ್ಲಿ ಪಾಠ ಮಾಡುವುದೊಂದನ್ನು ಬಿಟ್ಟು, ಉಳಿದೆಲ್ಲಾ ಕೆಲಸಗಳನ್ನೂ ಬದಿಗೆ ಸರಿಸಿ ಹಗಲೂ ರಾತ್ರಿ ಬರೆದರೂ ಮುಗಿಯದಂಥ ಅಗಾಧ ಕಾರ್ಯ. ಅದು ಆಗ ಅರಿವಾಯಿತು ನಿಘಂಟು ರಚನೆಯ ಶ್ರಮಸಾಧ್ಯವಾದ ಕೆಲಸದ ಮಹತ್ತು.

ಬಹುಶಃ ಭಾಷೆ ಎಂದು ಹುಟ್ಟಿತೋ ಅಂದೇ ನಿಘಂಟು ಹುಟ್ಟಿತೆಂದು ತೋರುತ್ತದೆ. ರೆವರೆಂಡ್ ಕಿಟ್ಟೆಲ್‌ರಿಂದ ಪ್ರಾರಂಭವಾದ ಒಂದು ಸತ್‌ಪರಂಪರೆ, ಕನ್ನಡ ಪದಗಳಿಗೆ ಕನ್ನಡದಲ್ಲಿ ಅರ್ಥಕೊಡುವ ಪರಂಪರೆ, ಕನ್ನಡ ಕಾವ್ಯಗಳಲ್ಲಿ ಕಂಡುಬರುವ ಪದಗಳಿಗೆ ಆ ಸಂದರ್ಭವೂ ಸೇರಿದಂತೆ ಉದಾಹರಿಸಿ ಅರ್ಥಕೊಡುವ ಪರಂಪರೆ. ಅದೃಷ್ಟವಶಾತ್ ಚೆನ್ನಾಗಿ ಮುಂದುವರೆಯಿತು. ಇದರ ಸಂಪೂರ್ಣ ಹೊಣೆಯನ್ನು ಪರಿಷತ್ತು ವಹಿಸಿಕೊಂಡಿತು. ಪದಗಳಿಗೆ ಅರ್ಥ ಕೊಡುವುದೆಂದರೆ ಹುಡುಕಬೇಕು, ಹುಡುಕುವುದೆಂದರೆ ಪ್ರಾಚೀನ ಕಾವ್ಯಗಳ ಪರಿಚಯ ಚೆನ್ನಾಗಿರಬೇಕು, ಪ್ರಾಚೀನ ಕಾವ್ಯಗಳೆಂದರೆ ಅವುಗಳ ಮನನ ಮಾಡುವುದೆಂದರೆ ಧ್ಯಾನಶೀಲತೆ ಬೇಕು. ಇದು ಬಸವಾರಾಧ್ಯ ಅವರ ಹುಟ್ಟು ಗುಣವೋ ಎಂಬಂತೆ ಅವರಿಗೆ ಮೈಗಂಟಿ ಬಂದಿರುವ ಗುಣವಾಗಿದೆ. ಅವರು ಭಾಷಣ ಮಾಡುತ್ತಿರುವಾಗಲೂ ಇಡೀ ವಾಕ್ಯವನ್ನು ಕತ್ತು ಬಗ್ಗಿಸಿ ತಮ್ಮೊಳಗೇ ಎಂಬಂತೆ ಹೇಳಿಕೊಂಡು ವಾಕ್ಯದ ಕೊನೇ ಪದವನ್ನು ಮಾತ್ರ ಕತ್ತೆತ್ತಿ ಎದುರಿಗಿರುವವರನ್ನು ಉದ್ದೇಶಿಸಿ ಹೇಳುತ್ತಾರೆ. ಈ ಅಂತರ್ಯಾಮಿ ಗುಣ ಭಾಷಣದಂಥ ಬಹಿರ್ಮುಖೀ ಪ್ರಯೋಗಗಳಿಗೆ ಒಗ್ಗದಿರಬಹುದು. ಆದರೆ ನಿಘಂಟು ಸಮಿತಿಯ ಅಧ್ಯಕ್ಷರಾಗುವವರಿಗೆ ಬಹು ಒಗ್ಗುವಂಥದು. ಹಾಗಲ್ಲದಿದ್ದರೆ ಒಂದು ಪದದ ಜುಟ್ಟು ಹಿಡಿದು ಅದರ ಪೂರ್ವಾಪರ ಶೋಧಿಸಿ ದಾಖಲಿಸಲು ಸಾಧ್ಯವೆ?

ಪ್ರಾಚೀನ ಸಾಹಿತ್ಯ, ನಿಘಂಟು ಎಂದ ಮಾತ್ರಕ್ಕೆ ಉಳಿದ ವಿಷಯದ ಬಗ್ಗೆ ಅವರಿಗೆ ಆಸಕ್ತಿ ಇರಲೇ ಇಲ್ಲ ಎಂದೂ ಹೇಳಲಾಗುವುದಿಲ್ಲ. "ಕನ್ನಡ ರಾಮಾಯಣಗಳು" ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸುತ್ತಿದ್ದ ನಾನು ಆಗಾಗ್ಗೆ ಕೆಲವು ಪ್ರಾಚೀನವಾದ, ಎಲ್ಲೂ ದೊರೆಯದ, ಪುಸ್ತಕಗಳಿಗಾಗಿ ಪರಿಷತ್ತಿನ ಸಂಶೋಧನಾ ವಿಭಾಗಕ್ಕೆ ಹೋಗುತ್ತಿದ್ದೆ. ಹಾಗೊಮ್ಮೆ ಹೋದಾಗ ನನ್ನ ಈ ಕೆಲಸದ ಬಗ್ಗೆ ಅವರಿಗೆ ತಿಳಿಯಿತು. ಕೂಡಲೇ ಬೇಟೆರಾಯ ದೀಕ್ಷಿತ ದತ್ತಿನಿಧಿ ಉಪನ್ಯಾಸಕ್ಕಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ "ಕನ್ನಡ ರಾಮಾಯಣಗಳು" ಎಂಬ ವಿಷಯದ ಬಗ್ಗೆ ಭಾಷಣ ಮಾಡಲು ನನಗೆ ಆಹ್ವಾನ ಬಂದಿತು. ಅದಿನ್ನೂ ನನ್ನ ಸಂಶೋಧನೆಯ ಪ್ರಾರಂಭದ ಹೆಜ್ಜೆಯಾಗಿತ್ತು. ಅಂಥ ಸಂದರ್ಭದಲ್ಲಿ "ಬರೀ ಕನ್ನಡವೊಂದರಲ್ಲಿಯೇ ರಚಿತವಾಗಿರುವ ರಾಮಾಯಣ ಸಾಹಿತ್ಯವನ್ನು ಓದಿ ಮುಗಿಸಲು-ಬರೀ ಓದಿ ಮುಗಿಸಲು-ಒಂದು ಜೀವಮಾನ ಸಾಲುವುದಿಲ್ಲವಂತೆ" ಎಂದರು. ನನಗೆ ರೋಮಾಂಚನವಾಯಿತು. ಆ ಕೂಡಲೇ "ಹಾಗೇ ರಾಮಾಯಣವನ್ನು ಕುರಿತ ಪುಸ್ತಕವೊಂದು ಮಾರಾಟವಾಗದೇ ಉಳಿಯಿತು ಎಂಬ ಮಾತೇ ಇಲ್ಲವಂತೆ" ಎಂದೂ ಸೇರಿಸಿದರು. ನನ್ನ ಉತ್ಸಾಹ ಇಮ್ಮಡಿಸಿತು. ಎಲ್ಲೂ ಓದದೇ ಇರುವ ಬರೀ ಅವರ ಬಾಯಿಂದ ಬಂದ ಈ ಎರಡು ವಾಕ್ಯಗಳನ್ನು ತುಂಬಾ ಅಧಿಕೃತವಾಗಿ ನನ್ನ ಸಂಶೋಧನಾ ಪುಸ್ತಕದಲ್ಲಿ ಮಾತ್ರವಲ್ಲದೆ ಇನ್ನೂ ಅನೇಕ ಲೇಖನಗಳಲ್ಲಿ ನಾನು ಬಳಸಿದ್ದೇನೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞಳು. ಇಂತಹ ಪ್ರಾಂಜಲ ಮನಸ್ಸಿನ ಬಸವಾರಾಧ್ಯ ಅವರಿಗೆ ೭೫ ಸಂವತ್ಸರಗಳು ತುಂಬುತ್ತಿರುವುದೂ, ಅವರ ನೆನಪಿಗಾಗಿ ಈ ಅಭಿನಂದನಾ ಗ್ರಂಥವನ್ನು ಹೊರತರುತ್ತಿರುವುದೂ, ಅದಕ್ಕಾಗಿ ಈ ಲೇಖನ ಬರೆಯುವ ಅವಕಾಶ ದೊರೆತದ್ದೂ ನನ್ನ ಭಾಗ್ಯವೆಂದೇ ಭಾವಿಸುತ್ತೇನೆ.

XXX

ಕೆಲವು ನೆನಪುಗಳು

-ಎಂ.ಎಸ್. ಸುಜಯ

೧೯೭೨ನೆಯ ಇಸವಿಯಲ್ಲಿ ಅದೇ ತಾನೇ ಎಂ.ಎ. ಪದವಿ ಪಡೆದು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಂಘಟು ವಿಭಾಗದಲ್ಲಿ ಕೆಲಸ ಮಾಡಲು ಸೇರಿದೆ. ಕನ್ನಡ ಕನ್ನಡ ಬೃಹತ್ ನಿಘಂಟಿನ ಮಹತ್ವ, ಅಗಾಧತೆಗಳ ಪರಿಚಯ ಆಗ ತಾನೇ ಆರಂಭ. (ನನ್ನ ಸೇವಾಧಿಯ ದೃಷ್ಟಿಯಿಂದ) ಕನ್ನಡ ನಿಘಂಟು ಕಚೇರಿಯು ಸುವರ್ಣಯುಗವೆಂದು ಹೇಳಬಹುದಾದ ಕಾಲಮಾನ. ಗಿಜಿಗಿಜಿಗುಟ್ಟುತ್ತ ಜೇನುಗೂಡಿನಂತೆ ಕೆಲಸ ನಡೆಯುತ್ತಿದ್ದ ಕಚೇರಿ, ಕಣ್ಣು ಹಾಯಿಸಿದ ಕಡೆ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ, ಕನ್ನಡ ಸಂಸ್ಕೃತಿಯ ಪ್ರತೀಕಗಳಾದ ಅಪೂರ್ವ ಗ್ರಂಥರಾಶಿ ಮತ್ತು ಮುಖ್ಯವಾಗಿ ತಿಂಗಳಿಗೊಮ್ಮೆ ಕರ್ನಾಟಕದ ಶ್ರೇಷ್ಠ ವಿದ್ವಾಂಸರಿಂದ ನಡೆಯುತ್ತಿದ್ದ ನಿಘಂಟು ಸಂಪಾದಕ ಸಮಿತಿಯ ಸಭೆ. 'ಈ ಪರಿಚಯ ಸೊಬಗ'ನ್ನು ಬಲ್ಲವರೇ ಬಲ್ಲರು. ಅಂದಿನ ಪ್ರಧಾನ ಸಂಪಾದಕರಾಗಿದ್ದ ಶ್ರೀ ಜಿ. ವೆಂಕಟಸುಬ್ಬಯ್ಯನವರ ಸೂಚನೆಯ ಮೇರೆಗೆ ಕಚೇರಿಯ ಸಂಪಾದಕ ವರ್ಗಕ್ಕೆ ಸಂಪಾದಕ ಸಮಿತಿಯ ಸಭೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳುವ ಅವಕಾಶ ಕಾಲಕ್ರಮೇಣ ಲಭ್ಯವಾಯಿತು. ಅದುವರೆಗೂ ಬರಹರೂಪದಲ್ಲಿ ಮಾತ್ರ ಪರಿಚಯವಿದ್ದ ನಾಡಿನ ಖ್ಯಾತ ವಿದ್ವಾಂಸರನೇಕರನ್ನು ಪ್ರತ್ಯಕ್ಷವಾಗಿ ನೋಡುವ ಸದವಕಾಶ ಆಗ ನನಗೆ ಸಿಕ್ಕಿತು. ಪ್ರತಿಯೊಬ್ಬ ಸದಸ್ಯರೂ ಅವರವರ ಕ್ಷೇತ್ರಗಳಿಗೆ ಶಿಖರಪ್ರಾಯರಾದರು. ಒಂದು ಶಬ್ದದ ಪ್ರಯೋಗ, ಅದರ ಅರ್ಥ, ನಿಘಂಟಿನಲ್ಲಿ ಅದಕ್ಕೆ ಇರುವ ಸ್ಥಾನ ಇತ್ಯಾದಿಗಳಿಗಾಗಿ ನಡೆಯುತ್ತಿದ್ದ ಚರ್ಚೆ, ವಾಗ್ವಾದ, ಕೆಲವು ಸಲ ಸಿಟ್ಟು, ಸೆಡವು, ಆಮೇಲೆ-ಶಬ್ದಕ್ಕೆ ನ್ಯಾಯ ದೊರಕಿಸಿದ ತೃಪ್ತಿ, ಅದರಿಂದ ಉಂಟಾಗುವ ಸಮಾಧಾನ ಇವುಗಳಿಂದ ಸಂಪಾದಕ ಸಮಿತಿಯ ಸಭೆ ಜಗಮಗಿಸುತ್ತಿತ್ತು. ಅನೇಕ ಶಬ್ದ-ಅರ್ಥಗಳ ಸಮಸ್ಯೆಗಳನ್ನು ಬಿಡಿಸುವ ವಿದ್ವಾಂಸರ ನಿಶಿತಮತಿ, ಮಾತಿನ ವೈಖರಿ, ಚುರುಕುತನಗಳನ್ನು ಗೌರವಪೂರ್ವಕವಾದ ಕುತೂಹಲದಿಂದ ಗಮನಿಸುತ್ತಿದ್ದೆ. (ಅಕಸ್ಮಾತ್ ಅವರಲ್ಲಿ ಯಾರಾದರೂ, ಚರ್ಚೆಯ

ಸಮಯದಲ್ಲಿ ನನ್ನ ಕಡೆ ತಿರುಗಿ ಏನಾದರೂ ಪ್ರಶ್ನಿಸಿದರೆ, ಉತ್ತರ ಗೊತ್ತಿದ್ದರೂ ಗಾಬರಿಯಿಂದ ಗಂಟಲೊಣಗಿ ಏನೂ ಹೇಳದೆ ಚಡಪಡಿಸಿದ್ದೂ ಉಂಟು!)

ನಿಘಂಟು ಕಚೇರಿಯ ಈ ಬಗೆಯ ಸಂಭ್ರಮದ ಸುದಿನಗಳಲ್ಲಿ ಸಂಪಾದಕ ಸಮಿತಿಯ ಸದಸ್ಯರಾಗಿ ಸಭೆಗೆ ಬರುತ್ತಿದ್ದ ಮಾನ್ಯ ಶ್ರೀ ಬಸವಾರಾಧ್ಯರ ಪರಿಚಯವಾಯಿತು. ಬಸವಾರಾಧ್ಯರನ್ನು ಕುರಿತು ಹೇಳಬೇಕೆಂದರೆ ಅಪ್ರಯತ್ನವಾಗಿ ಕನ್ನಡ ನಿಂಘಂಟುಗಳನ್ನು ಕುರಿತೇ ಹೇಳಬೇಕಾಗುತ್ತದೆ.

ಕನ್ನಡದ ಬೃಹತ್ ನಿಘಂಟಿನ ರಚನೆಯ ಕಾಲದಲ್ಲಿ ಗ್ರಂಥಗಳಿಂದ ಶಬ್ದ, ಪ್ರಯೋಗಗಳನ್ನು ಸಂಗ್ರಹಿಸಿಕೊಟ್ಟ ಸಹಾಯಕ ಸಂಪಾದಕರಾಗಿ, ಉಪ ಸಂಪಾದಕರಾಗಿ, ಸಂಪಾದಕರಾಗಿ, ಸಂಪಾದಕ ಸಮಿತಿಯ ಸದಸ್ಯರಾಗಿ, ಪ್ರಧಾನ ಸಂಪಾದಕರಾಗಿ, ಸಂಪಾದಕ ಸಮಿತಿಯ ಅಧ್ಯಕ್ಷರಾಗಿ-ಹೀಗೆ ವಿವಿಧ ಸ್ಥಾನಗಳಲ್ಲಿದ್ದು ಕಾರ್ಯನಿರ್ವಹಿಸುವ ಅಪರೂಪದ ಅವಕಾಶವನ್ನು ಹೊಂದಿದವರಾಗಿದ್ದಾರೆ. ೧೯೭೦ರಲ್ಲಿ ಪ್ರಕಟವಾದ ಮೊದಲ ಸಂಪುಟದ ಸಂಪಾದಕರಾಗಿದ್ದಂತೆಯೇ ಕೊನೆಯ ಎಂಟನೆಯ ಸಂಪುಟದ ಪ್ರಧಾನ ಸಂಪಾದಕರಾದ ಹೆಗ್ಗಳಿಕೆ ಇವರ ಪಾಲಿಗಿದೆ. ಈ ರೀತಿಯ ಒಂದು ಬೃಹತ್ ಕಾರ್ಯದ ಇಡೀ ಹರಹಿನಲ್ಲಿ ಹಾಸುಹೊಕ್ಕಾಗಿ ಬಿಟ್ಟಿದ್ದಾರೆ. ಹಾಗೆಯೇ ಹಳಗನ್ನಡ ನಿಘಂಟುಗಳನ್ನೆಲ್ಲ ಶಾಸ್ತ್ರೀಯವಾಗಿ ಸಂಪಾದಿಸಿದ ಸಂಕಲನವಾದ ಇವರ ಹಳಗನ್ನಡ ನಿಘಂಟು (೧೯೭೬) ಗಮನಾರ್ಹ. ಇದರಲ್ಲಿ ಅನೇಕ ಪ್ರಾಚೀನ ಅಪರೂಪದ ನಿಘಂಟುಗಳ ಸಮಗ್ರ ಪರಿಚಯವಾಗುತ್ತದೆ. ಪ್ರೌಢವಾದ ವಿಷಯಗಳನ್ನು ಸಾಮಾನ್ಯರಿಗೆ ಸರಳವಾಗಿ ವಿವರಿಸುವ ಬೆಲೆಯುಳ್ಳ ಪೀಠಿಕೆಯಿದೆ. ಮುಂದೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗಲೂ ಕೂಡ, ಅಧ್ಯಕ್ಷಸ್ಥಾನದ ಕಾರ್ಯಬಾಹುಳ್ಯ, ಒತ್ತಡ ಇವೆಲ್ಲದರ ನಡುವೆಯೂ ಬಸವಾರಾಧ್ಯರಿಗೆ ನಿಘಂಟು ಮರವೆಯಾಗಲಿಲ್ಲ. ಅವರಿಂದ ಮರೆಯಾಗಲಿಲ್ಲ. ೧೯೭೫ರಲ್ಲಿ ಮುದ್ರಣವಾದ ಸಂಕ್ಷಿಪ್ತ ಕನ್ನಡ ನಿಘಂಟು ಪರಿಷ್ಕೃತವಾಗಿ (೨೦೦೧) ಮೂಡಿ ಬಂದಿತು. ಜೊತೆಯಲ್ಲಿಯೇ ಕನ್ನಡ ರತ್ನಕೋಶದ ಪರಿಷ್ಕೃತ ಆವೃತ್ತಿಯ ತಯಾರಾಯಿತು. ಸಂಕ್ಷಿಪ್ತ ಕನ್ನಡ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರು, ಪ್ರಧಾನ ಸಂಪಾದಕರಾಗಿ ಪರಿಷ್ಕರಣ ಕಾರ್ಯವನ್ನು ವಿವಿಧ ಕೋನಗಳಲ್ಲಿ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಅದೇ ಅವಧಿಯಲ್ಲಿಯೇ ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟಿನ ಮೊದಲ ಸಂಪುಟಕ್ಕೂ ಚಾಲನೆ ನೀಡಿದರು.

ಇಷ್ಟು ಕಠಿಣ ಪರಿಶ್ರಮದ ಕಾರ್ಯಸಾಧನೆ ಮಾಡುವವರಿಗೆ ಅತ್ಯಗತ್ಯವಾದ ಗುಣಗಳಲ್ಲಿ ಒಂದೆಂದರೆ ಅಪಾರವಾದ ತಾಳ್ಮೆ. ಅದು ಬಸವಾರಾಧ್ಯರ ವ್ಯಕ್ತಿತ್ವದ ಒಂದು ಭಾಗವೂ ಆಗಿದೆ. ಸಂಪಾದಕ ಸಮಿತಿಯ ಸಭೆಗಳಲ್ಲಿ ಎಷ್ಟೋ ಸಲ ವಾಗ್ವಾದದಿಂದ ವಾತಾವರಣ ಎಷ್ಟೇ ಕಾವೇರಿದ್ದರೂ ನಗುನಗುತ್ತ ಸಮಾಧಾನ ಹೇಳಲು ಪ್ರಯತ್ನಿಸುತ್ತಿದ್ದರು. ಆದರೂ ಬಗೆಹರಿಯದಿದ್ದರೆ. "ಕಿತ್ತಾಡ್ಕೊಂಡು ಸಾಯ್ರಿ" ಎಂದು ಆಶೀರ್ವದಿಸಿ ಸಿಗರೇಟು ಸೇದಲು ಎದ್ದು ಹೊರಗೆ ಹೋಗಿ ಬಿಡುತ್ತಿದ್ದರು! ನಿಘಂಟು ಕಚೇರಿಯ ಸಿಬ್ಬಂದಿಯ ಜೊತೆಗಿನ ಅವರ ವರ್ತನೆಯೂ ಅಷ್ಟೇ. ನಾನು ಕಂಡ ಹಾಗೆ ಕಚೇರಿಯಲ್ಲಿ ಅವರು ಸಿಬ್ಬಂದಿಯ ಮೇಲೆ ಎಂದೂ ರೇಗಿದ್ದಿಲ್ಲ. ಎಷ್ಟೇ ತಾಳ್ಮೆಕೆಟ್ಟು ಹೋಗುವ ಸಂದರ್ಭಗಳಲ್ಲೂ "ಹಾಳಾಗಿ ಹೋಗ್ಲಿ ಬಿಡಿ" ಎನ್ನುವ ಉದ್ಗಾರದೊಂದಿಗೆ ಕೋಪ, ಬೇಸರ ವ್ಯಕ್ತವಾಗಿ ಮುಕ್ತಾಯವಾಗಿ ಬಿಡುತ್ತಿತ್ತು! ಕೆಲವು ಸಲ ಯಾವುದಾದರೂ ಶಬ್ದಕ್ಕೆ ಅರ್ಥ ಬರೆದವರು ಸರಿಯಾಗಿ ಬರೆದಿಲ್ಲ, ಹಾಗೆ-ಹೀಗೆ ಎಂದು ಯಾರಾದರೂ ಅವರ ಬಳಿ ಅಬ್ಬರಿಸುತ್ತಾ ಟೀಕಿಸಿದರೆ, "ಅವರು ಹಾಗೆ ಬರೆಯಲು ಯಾವುದೋ ಕಾರಣ, ಆಧಾರ ಇರಬೇಕು. ಸುಮ್ಮನೆ ಯಾರೂ ಯಾವುದೋ ಅಬದ್ಧ ಬರೆಯವುದಿಲ್ಲ. ಅದಕ್ಕೆ ಆಧಾರ ಯಾವುದಾದರೂ ಸಿಗುತ್ತಾ ನೋಡಿ" ಎಂದಾಗ 'ಹೌದಲ್ಲ' ಎಂದುಕೊಳ್ಳುವಂತಾಗುತ್ತಿತ್ತು.

ಬಿಗುಮಾನವಿಲ್ಲದೆ ಸಿಬ್ಬಂದಿಯೊಡನೆ ಬೆರೆಯುತ್ತಿದ್ದ ರೀತಿ, ಅವರ ಕಷ್ಟ, ಕಾರ್ಪಣ್ಯಗಳನ್ನು ವಿಚಾರಿಸಿ ಸಾಧ್ಯವಾದರೆ ಪರಿಹರಿಸಲು ಪ್ರಯತ್ನಿಸುತ್ತಿದ್ದ ರೀತಿಗಳ ಬಗೆಗೆ, ನಾನು ಕಚೇರಿಗೆ ಸೇರುವ ಮೊದಲು ಇದ್ದವರೆಲ್ಲರೂ, ಅಂದರೆ ಒಬ್ಬ ಜವಾನ ಮೊದಲುಗೊಂಡು ಎಲ್ಲರೂ ಸದಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಬಸವಾರಾಧ್ಯರ ಈ ಸ್ನೇಹಪರತೆ, ವಿಶ್ವಾಸ,

ಧಾರಾಳತನಗಳು ಅವರ ಪರಿಚಿತರಿಗೆಲ್ಲ ಅನುಭವವಾಗಿರುವುದರಲ್ಲಿ ಅನುಮಾನವಿಲ್ಲ. ಮುಂದೆ ನನಗೇ ಅನೇಕ ಸಲ ಅನುಭವಕ್ಕೆ ಬಂದಿದೆ. ಎಷ್ಟೋ ಸಲ ನಿಘಂಟಿನ ಕರಡು ಪ್ರತಿ ತಿದ್ದುತ್ತಿದ್ದರೆ ಟೇಬಲ್ ಬಳಿ ಬಂದು 'ಕೊಡ್ರಿ ಆ ಪ್ರೂಫ್‌ನ ನೀವು ಓದಿ, ನಾನು ತಿದ್ದುತ್ತೇನೆ' ಎಂದು ಅರ್ಧಕೆಲಸ ವಹಿಸಿಕೊಳ್ಳುತ್ತಿದ್ದರು. ಅಥವಾ ತದೇಕಚಿತ್ತದಿಂದ ಕರಡುಪ್ರತಿ ತಿದ್ದುತ್ತಿದ್ದರೆ, ಅದನ್ನು ಗಮನಿಸಿ ಜವಾನರು ಯಾರನ್ನಾದರೂ ಕರೆದು,' ಕಾಫಿ ತೊಗೊಂಡು ಬಂದು ಕೊಡು ಅವರಿಗೆ. ಒಂದೇ ಸಮನೆ ಆಗಿನಿಂದ ಓದುತ್ತಿದ್ದಾರೆ' ಎಂದು 'ಬೇಡ ಸರ್' ಎಂದು ಸಂಕೋಚ ಪಟ್ಟುಕೊಂಡರೂ ಬಿಡುತ್ತಿರಲಿಲ್ಲ.

ನಮ್ಮ ಮನೆಯ ಗೃಹಪ್ರವೇಶ ಸಮಾರಂಭದ ಆಹ್ವಾನಪತ್ರಿಕೆ ಮಾನ್ಯ ಜಿ.ಎಸ್. ಗಾಯಿಯವರಿಗೆ ತಲುಪದೇ ಇದ್ದಾಗ, ಅವರನ್ನು ತಮ್ಮ ಜೊತೆಯಲ್ಲಿ ಸಮಾರಂಭಕ್ಕೆ ಕರೆದುಕೊಂಡು ಬಂದು 'ನೋಡ್ರಿ, ಇವರಿಗೆ ಇನ್ವಿಟೇಷನ್ ಹೋಗಿಲ್ಲ. ನಾನೇ ಹೇಳಿ ಕರೆದುಕೊಂಡು ಬಂದಿದ್ದೀನಿ' ಎಂದರು. ಇಬ್ಬರೂ ಹಿರಿಯರ ಇಂಥ ಸರಳ ಸಜ್ಜನಿಕೆಗೆ ನನ್ನ ಮನಸ್ಸುಈಗಲೂ ಆಭಾರಿ.

ಒಂದು ಸಲ ಎರಡನೆಯ ಶನಿವಾರ ಸಂಪಾದಕ ಸಮಿತಿಯ ಸಭೆಗೆ ನನ್ನ ಪುಟ್ಟ ಮಗಳನ್ನು ಕಚೇರಿಗೆ ಕರೆದುಕೊಂಡು ಬಂದಿದ್ದೆ. ಸ್ವಲ್ಪ ಹೊತ್ತಿನಲ್ಲಿಯೇ ಕೈತುಂಬಾ ಚಾಕೋಲೇಟ್ ತುಂಬಿಕೊಂಡು ಅವರ ಜೊತೆ ನನ್ನ ಮಗಳು ಅಡ್ಡಾಡುತ್ತಿದ್ದಾಳೆ!

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಒಂದು ಸಲ ಸಂಪಾದಕ ಸಮಿತಿಯ ಸಭೆ ನಡೆದಾಗ ನಾವು ಇಲ್ಲಿಂದ ಬೆಳಗ್ಗೆ ೧೦ ಗಂಟೆಯ ಹೊತ್ತಿಗೆ ಕಾಲೇಜಿಗೆ ಹೋದರೆ, ಸಂಪಾದಕ ಸಮಿತಿಯ ಸದಸ್ಯರಾದಿಯಾಗಿ ನಮ್ಮೆಲ್ಲರಿಗೂ ಅವರ ಮನೆಯಿಂದ (ಸ್ವತಃ ಅವರೇ ತಯಾರು ಮಾಡಿಕೊಂಡು ತಂದಿದ್ದ)ಇಡ್ಲಿಗಳ ಆತಿಥ್ಯ! ಕೆಲವು ಸಲ ಕಚೇರಿಯ ಮಧ್ಯಾಹ್ನದ ವಿರಾಮದಲ್ಲಿ ಗೇಟ್ ಬಳಿ ನಾವು ಯಾರಾದರೂ ಕಡಲೆಕಾಯಿ ಇತ್ಯಾದಿ ಕೊಳ್ಳಲು ನಿಂತಿರುವುದನ್ನು ಕಂಡರೆ ಅಲ್ಲಿಗೆ ಬಂದು 'ಕಡಲೆಕಾಯಿ ಕೊಡಪ್ಪ ಇವರಿಗೆ' ಎಂದು ಅವನಿಗೆ ದುಡ್ಡುಕೊಟ್ಟು ಬಿಡುತ್ತಿದ್ದರು.

ಇವೆಲ್ಲ ಏತಕ್ಕೆ ನೆನಪಿಗೆ ಬರುತ್ತಿವೆಂದರೆ, ಮೇಲ್ನೋಟಕ್ಕೆ ಚಿಕ್ಕ ಪುಟ್ಟ ವಿಷಯಗಳು ಹೌದು. ಆದರೆ ಈ ಪುಟ್ಟ ಪುಟ್ಟ ಸಂಗತಿಗಳೇ ಮನಸ್ಸಿನಲ್ಲಿ ಉಳಿಯುವುದು, ಯಾಂತ್ರಿಕತೆಯ ಎಷ್ಟೋ ಅ-ಸಹ್ಯಗಳನ್ನು ಸಹ್ಯಮಾಡುವುದು.

ಬಸವಾರಾಧ್ಯರ ಈ ರೀತಿಯ ಸಹೃದಯತೆಯ-ಮಾನವೀಯತೆ ಮುಖದ ಮಗ್ಗಲುಗಳು, ನಿಘಂಟು ಕಚೇರಿಯ ಅಳಿವು-ಉಳಿವಿನಿಂದ ಪ್ರಶ್ನೆಯ ಗಂಭೀರ ಪರಿಸ್ಥಿತಿಯಲ್ಲೂ ಕಂಡಿದೆ. ಉತ್ಸರ್ಪಿಣಿಯಿಂದ ಅವಸರ್ಪಿಣಿಗೆ ಬದಲಾದ ನಿಘಂಟು ಕಚೇರಿಯ ಸ್ಥಾನ; ಸರಕಾರಕ್ಕೂ ಸಲ್ಲದ-ಪರಿಷತ್ತೂ ಒಲ್ಲದ ಸಿಬ್ಬಂದಿಯ ಇಬ್ಬಂದಿ ಪರಿಸ್ಥಿತಿ; ಕೋಶ ರಚನೆಯಲ್ಲೇ ಮಗ್ನರಾಗಿ, ಕೋಶಾವಸ್ಥೆಯಲ್ಲೇ ಭದ್ರವಾಗಿದ್ದ ಸಿಬ್ಬಂದಿ ಬೀದಿಗಿಳಿದು ಮುಷ್ಕರ ನಡೆಸಬೇಕಾದ ಹತಾಶೆ-ಹೀಗೆ ನಿಘಂಟು ಕಚೇರಿಯ ಅಸ್ತಿತ್ವದ ಹೋರಾಟ ಆರಂಭವಾಯಿತು. ಆ ಸಂದರ್ಭಗಳಲ್ಲಿ ನಿಘಂಟು ಸಂಪಾದಕ ಸಮಿತಿಯ ಮಾನ್ಯ ಸದಸ್ಯರೆಲ್ಲರೂ ಸಂಪೂರ್ಣ ಸಹಾನುಭೂತಿ ತೋರಿ, ಅನೇಕ ಬಾರಿ ಆಗಿನ ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆಯ ಕಾರ್ಯದರ್ಶಿಯವರನ್ನು, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು, ಆಗಿನ ವಿದ್ಯಾಸಚಿವರನ್ನು ಭೇಟಿಮಾಡಿ ಸಿಬ್ಬಂದಿಯ ಪರವಾದ ನಿಲುವನ್ನು ಮಂಡಿಸಿದ್ದಾರೆ. ಆ ನಿಯೋಗಗಳಲೆಲ್ಲ ಬಸವಾರಾಧ್ಯರು ಪ್ರಮುಖ ಪಾತ್ರವಹಿಸಿ ಬೆಂಬಲ ಕೊಟ್ಟಿದ್ದಾರೆ. ೧೯೮೭ರ ಪರಿಷ್ಕೃತ ವೇತನ ಶ್ರೇಣಿಗಾಗಿ ಸಿಬ್ಬಂದಿಯು ಸರಕಾರದೊಡನೆ ವ್ಯವಹರಿಸುವಾಗಲೂ ಸಂಪೂರ್ಣವಾಗಿ ಬೆಂಬಲ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ವಿಧಾನಸೌಧಕ್ಕೆ ಹೋಗಿ ಬರಲು ಸಿಬ್ಬಂದಿಯು ಅನುಮತಿ ಕೇಳಿದರೆ ಒಂದು ದಿನವಾದರೂ ಅಸಮಾಧಾನ ಪಡದೆ, 'ಹೋಗಿ ಬನ್ನಿ, order ತಗೊಂಡೇ ಬನ್ನಿ' ಎನ್ನುತ್ತಿದ್ದರು. ಅಷ್ಟೇ ಅಲ್ಲ,'ಗವರ್ನಮೆಂಟಿನಿಂದ order ಬರೋವರ್ಗೂ ಬೇಕ್ರಾದೆ ದಿನಾ ಯಾರಾದ್ರರೂ ಹೋಗಿ ಬನ್ನಿ' ಎಂದೂ ಔದಾರ್ಯದಿಂದ ಹೇಳುತ್ತಿದ್ದರು.

ಹೀಗೆ ಇನ್ನೊಬ್ಬರ ಕಷ್ಟ-ನೋವುಗಳಿಗೆ ಸ್ಪಂದಿಸುವ ಮೃದುತ್ವ ಇರುವಂತೆಯೇ ವೈಯಕ್ತಿಕವಾದ ದುಃಖವನ್ನು ತಾಳಿಕೊಳ್ಳುವ ದೃಢತೆಯೂ ಇದೆ. ಅವರ ಪತ್ನೀವಿಯೋಗದ ಸಂದರ್ಭದಲ್ಲಿ ತೋರಿದ ಸಂಯಮವನ್ನು ನಾವು ಮೌನವಾಗಿ ನಿಂತು ನೋಡುತ್ತ ನಮ್ಮ ಗೌರವವನ್ನು ಸಲ್ಲಿಸಿದೆವು.

ಬಸವಾರಾಧ್ಯರ ಮತ್ತೂ ಕೆಲವು ಗಮನ ಸೆಳೆಯುವ ಗುಣ ವಿಶೇಷಗಳೆಂದರೆ ಪೂರ್ವಸೂರಿಗಳ ಬಗೆಗೆ ಅವರು ತೋರುವ ವಿನಯ, ನಿಷ್ಠೆ. ಪ್ರಾತಃಸ್ಮರಣೀಯರಾದ ಶ್ರೀ ಡಿ.ಎಲ್. ನರಸಿಂಹಾಚಾರ್, ತೀ.ನಂ.ಶ್ರೀ, ಕೆ.ವಿ. ರಾಘವಾಚಾರ್ ಅವರೆಲ್ಲರ ಮಾರ್ಗಸೂಚಿಯಲ್ಲಿ ಕಾರ್ಯನಿರ್ವಹಣೆ ಮಾಡಿ ಜಯಿಸಿಕೊಂಡಿದ್ದಾರೆ. ಆದುದರಿಂದಲೇ 'ಶಬ್ದಪಾರಮಾರ್ಗಮಶಕ್ಯಂ ಎಂಬುದು ಅಂದಿಗೂ ಸತ್ಯವಾದುದು, ಎಂದೆಂದಿಗೂ ಸತ್ಯವಾದುದು'ಎನ್ನುವ ಕಟುಸತ್ಯ ಅವರಿಗೆ ಗೋಚರವಾಗಿದೆ. ಸಂಕ್ಷಿಪ್ತ ಕನ್ನಡ ನಿಘಂಟಿನ ಪರಿಷ್ಕರಣವಾದ ಆವೃತ್ತಿಯಲ್ಲಿ 'ಆದರೆ ಈ ಪರಿಷ್ಕರಣ ಸಂಪೂರ್ಣವಲ್ಲ' ಎಂದು ಹೇಳಿಕೊಂಡಿದ್ದಾರೆ. "ಕೆಲವು ತಿದ್ದುಪಡಿಗಳಿಂದ ಹಿಂದಿನ ನಿಯಮಾವಳಿಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳು ಸಂದರ್ಭೋಚಿತವಾಗಿ ಆಗಿವೆಯೇ ಹೊರತು ಮೊದಲು ಮಾಡಿದ್ದ ನಿಯಮಾವಳಿಗಳು ತಪ್ಪೆಂದು ಭಾವಿಸುವುದಕ್ಕೆ ಎಡೆ ಯಿಲ್ಲ' ಎಂದು ಎಂಟನೆಯ ಸಂಪುಟದಲ್ಲಿ ಹೇಳಿರುವ ಅವರ ಮಾತುಗಳು ಮೇಲೆ ಹೇಳಿದ ಗುಣಗಳಿಗೆ ಸಾಕ್ಷಿಯಾಗಿವೆ. "ಇಂದು ಈ ಸಂಪುಟ ನನ್ನೊಬ್ಬನ ಹೆಸರಿನಲ್ಲಿಯೇ ಉಳಿದಿದ್ದರೂ ಉಸಿರು ತುಂಬಿದವರು ಅವರು" ಎಂದು ಶ್ರೀ ಡಿ.ಎಲ್. ನರಸಿಂಹಾಚಾರ್ಯರಿಗೆ ಕೃತಜ್ಞತೆ ಸಲ್ಲಿಸಿರುವುದೂ ಅದನ್ನೇ ಹೇಳುತ್ತದೆ.

ಬಸವಾರಾಧ್ಯರಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದಾಗಲೀ, ದೇವರಾಜ ಬಹುದ್ದೂರ್ ಬಹುಮಾನ ಬಂದದ್ದಾಗಲೀ, ಅಥವಾ ಕನ್ನಡದ ಬೃಹತ್ ನಿಘಂಟಿನ ಎಂಟನೆ ಸಂಪುಟದ ಬಿಡುಗಡೆಯ ಸಂದರ್ಭದಲ್ಲಿ, ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಎಚ್.ಡಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮಾನ್ಯ ಶ್ರೀ ಎ.ಎನ್. ಮೂರ್ತಿರಾಯರಿಂದ ಸನ್ಮಾನ ನಡೆದಿದ್ದೇ ಆಗಲಿ ಸ್ತುತ್ಯಾರ್ಹವೇ. ಆದರೆ ಒಬ್ಬ ನಿಘಂಟು ಕಾರ್ಯಕರ್ತನಿಗೆ- "ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್ಯರು ಮತ್ತು ನನ್ನ ಕೈಯಲ್ಲಿ ಪಳಗಿ ಹದಿನೈದು ವರ್ಷಗಳಿಂದ ಒಂದೇ ಸಮನೆ ನಿರ್ವಂಚನೆಯಿಂದ ದುಡಿದ ಸಂಪಾದಕ" (ಕ.ವೆಂ. ರಾಘವಾಚಾರ್-ನಂದಾ ನೆನಪು) -ಎನ್ನುವ ಪ್ರಶಸ್ತಿ ಇದೆಯಲ್ಲ, ಅದರ ಸಮಾನವಿಲ್ಲ. ವಷಿಷ್ಠರ ಕೈಯಲ್ಲಿ ಬ್ರಹ್ಮರ್ಷಿ ಎನ್ನಿಸಿಕೊಳ್ಳುವುದು ಸಾಮಾನ್ಯ? 'ಸುಧೆ ಬಂತೆ ಸುಲಭದಲಿ?'

ಮುಖ್ಯವಾಗಿ ನನಗನ್ನಿಸುವುದು ಅವರ ಈ ಹೃದಯಶ್ರೀಮಂತಿಕೆ ಸ್ವಭಾವದ ಸಹಜ ಗುಣ. ಬುದ್ಧಿಪೂರ್ವಕವಾಗಿ, ಲೆಕ್ಕಾಚಾರ ಮಾಡಿಕೊಂಡು ನಡೆಯುವ ರೀತಿಯಲ್ಲ. ಅವರ ಪರಿಚಯದ ಪರಿಧಿಯೊಳಗೆ ಬಂದವರೆಲ್ಲ ಈ ಸ್ನೇಹ-ವಿಶ್ವಾಸಗಳನ್ನು ಸವಿದು, ಆಪ್ತವಲಯಕ್ಕೆ ಸೇರುವುದರಲ್ಲಿ ಆಶ್ಚರ್ಯವಿಲ್ಲ. ಅಂಥ ಅಸಂಖ್ಯಾತ ಆಪ್ತರ ಸಾಲಿನಲ್ಲಿ ನಾನಿರುವುದು ನನಗೆ ಹೆಮ್ಮೆಯ ವಿಷಯ. ಈ ಹಿರಿಯರು ದೈಹಿಕವಾಗಿ, ಮಾನಸಿಕವಾಗಿ ಹೀಗೆಯೇ ಕ್ರಿಯಾಶೀಲವಾಗಿರಲಿ. ಯಾವುದಾದರೂ ಮದುವೆ ಮನೆಯಲ್ಲಿ ಭೇಟಿಮಾಡಿದಾಗಲೂ 'ನಿಮ್ಮಲೇಖನ ಬರಲೇ ಇಲ್ಲ' ಎನ್ನಲಿ. 'ಇಲ್ಲೂ ಲೇಖನ ವಿಚಾರಿಸ್ತೀರಲ್ಲಾ ಸರ್' ಎಂದು ನಾವು ಗೊಣಗುತ್ತಿರೋಣ. ಯಾವುದಾದರೂ ಪ್ರಾಚೀನ ಕವಿಯನ್ನು ನಿರ್ದೇಶಿಸಿ 'ನೋಡ್ರೀ, ಈ ಕಾವ್ಯ ಸ್ವಲ್ಪ ಗಮನಿಸಿ ಓದಿ' ಎಂದು ಆದೇಶಿಸುತ್ತ ಇರಲಿ. ನಾವು ಪಾಲಿಸುತ್ತೀರೋಣ.

ಇವರ ವರ್ಧಂತಿ ನಮಗೆ ಸಂಭ್ರಮ; ಹಬ್ಬ.

XXX

ವಿದ್ವತ್ತು ಮತ್ತು ಸಜ್ಜನಿಕೆಗಳ ಸಂಗಮ
ಎನ್. ಬಸವಾರಾಧ್ಯರೊಡನೆ ಒಂದು ಸಂವಾದ

-ಡಾ. ವಿಜಯಾ ಸುಬ್ಬರಾಜ್

ಭಾಗ-೧

ಕಣ್ಣಲ್ಲಿ ಕನಸುಗಳು
ಎದೆಯಲ್ಲಿ ಆಸೆಗಳು
ನಗೆಮಿಂಚು ರೇಖೆಗಳು
ನೀಳ ಕೋಮಳ
ಕೃಷ್ಣ ಕೃಶಕಾಯದಲಿ
ಪುಟಿವ ಚೇತನ ಚಿಲುಮೆ
ಸಂಜೆ ಪ್ರಾಯದಲೂ
ಹೊಳೆವ ಕಾಂತಿಕಿರಣ
ಬತ್ತದುತ್ಸಾಹದೊನಲು
ಕಾಯಕವೆ ಕೈಲಾಸವೆಂದೆನುತ
ದುಡಿವ ಕರ್ಮಯೋಗಿ.

ಎಂದು ಬಣ್ಣಿಸಬಹುದಾದ ಎನ್. ಬಸವಾರಾಧ್ಯರು ತಮ್ಮ ಎಪ್ಪತ್ತೆರಡನೇ ಪ್ರಾಯದಲ್ಲಿರುವಾಗ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಒಂದು ಮಹಾನ್ ಸಾಹಿತ್ಯ ಸಂಸ್ಥೆಯ ಬಹುದೊಡ್ಡ ಜವಾಬ್ದಾರಿಯನ್ನು ಹೊರಲು ಅಧ್ಯಕ್ಷರಾಗಿ ಹೆಗಲು ಕೊಟ್ಟು ನಿಂತದ್ದು ೧೯೯೮ರಲ್ಲಿ. ಆ ಪ್ರಾಯದಲ್ಲಿ ಬಿಡುವಿಲ್ಲದ ಕ್ರಿಯಾಶೀಲತೆಯನ್ನು ನಿರೀಕ್ಷಿಸುವ ಅಧ್ಯಕ್ಷ ಪದವಿಯನ್ನು ಪಡೆದು ಸ್ವೀಕರಿಸಿದ್ದು ಯಾರಿಗೇ ಆಗಲಿ ಬೆರಗು ಹುಟ್ಟುಸುವಂಥಾದ್ದು. ಅವರಲ್ಲಿ ಒಡೆದೆದ್ದು ಕಾಣುವ ಹುರುಪು, ಹುಮ್ಮಸ್ಸು, ಲವಲವಿಕೆ, ಚೈತನ್ಯಶಕ್ತಿ, ಕ್ರೀಯಾಶೀಲತೆಗಳು ಯುವಪೀಳಿಗೆಯನ್ನು ತಲೆತಗ್ಗಿಸುವಂತೆ ಮಾಡಿದರೆ ಆಶ್ಚರ್ಯಪಡಬೇಕಾದ್ದಿಲ್ಲ.

ವಿದ್ಯುತ್ ಜಗತ್ತಿನಲ್ಲಿ ಬಸವಾರಾಧ್ಯರ ಹೆಸರು ಚಿರಪರಿಚಿತ. ಅವರನ್ನು ಹೊರತುಪಡಿಸಿ ವಿದ್ವತ್ತಿನ ಬಗ್ಗೆ, ವಿದ್ವಾಂಸರ ಬಗ್ಗೆ ಮಾತನಾಡುವುದು ಸಾಧ್ಯವೇ ಇಲ್ಲ . ಕನ್ನಡ ಸಾಹಿತ್ಯದ ಸಮಗ್ರ ಅಭಿವೃದ್ಧಿ, ವಿಕಾಸಗಳು ಸಾಧ್ಯವಾಗುವುದು ಸೃಜನಶೀಲ ಪ್ರತಿಭೆ ಮತ್ತು

ವಿದ್ವತ್ ಪ್ರತಿಭೆಗಳು ಒಟ್ಟಿಗೆ ಕೆಲಸಮಾಡಿದಾಗಲೇ. ಇಂತಹ ವಿದ್ವತ್ ಪ್ರತಿಭೆಗಳಲ್ಲಿ ಬಸವಾರಾಧ್ಯರದು ದೈತ್ಯ ವಿದ್ವತ್‌ಪ್ರತಿಭೆ. ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಶಾಸ್ತ್ರಪರಂಪರೆಯ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲವರಲ್ಲಿ ಬಸವಾರಾಧ್ಯರದು ಪ್ರಮುಖವಾದ ಹೆಸರು. ಸರಳತೆ, ಸಜ್ಜನಿಕೆಗಳನ್ನು ಮೈಗೂಡಿಸಿಕೊಂಡಿರುವ ಅವರು ಎಷ್ಟೇ ದೊಡ್ಡ ವಿದ್ವಾಂಸರಾದರೂ ಎಂದಿಗೂ ಅದನ್ನು ಅವರು ತೋರಿಸಿಕೊಳ್ಳುವುದಿಲ್ಲ. ಅಂತಸ್ತು, ಅಧಿಕಾರ, ಹಣ, ಕೀರ್ತಿ. ಪ್ರತಿಷ್ಠೆಗಳ ಹಂಬಲದಿಂದ ಯಾರ ಬೆನ್ನಿಗೂ ಬೀಳದೆ, ಯಾವುದೇ ಪ್ರಚಾರಕ್ಕೆ, ಪ್ರಶಸ್ತಿಗೆ ಆಸೆಪಡದೆ ತಮ್ಮ ಪಾಡಿಗೆ ತಾವು ಸದ್ದುಗದ್ದಲವಿಲ್ಲದೆ ಶಾಸ್ತ್ರ, ಸಾಹಿತ್ಯಗಳ ಅನುಸಂಧಾನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು. ಅಧ್ಯಕ್ಷರಾದ ಮೇಲೆ ಸಾರ್ವಜನಿಕ ಬದುಕು ಅನಿವಾರ್ಯವಾದ ಮೇಲೆ ಅದನ್ನು ಹೇಗೆ ಸಮರ್ಥವಾಗಿ ನಿರ್ವಹಿಸುತ್ತಾರೆ ಎಂಬುದರ ವಿಚಾರದಲ್ಲಿ ಎಲ್ಲರಿಗೂ ಕುತೂಹಲ; ನಿರೀಕ್ಷೆ!! ತಮಗೆ ಅತ್ಯಂತ ಆಪ್ತವಾದ ಪ್ರಾಚ್ಯ ಕಾವ್ಯ ಗ್ರಂಥಗಳ ಸಂಶೋಧನೆ, ಸಂಪಾದನೆ ಮತ್ತು ನಿಘಂಟು ರಚನೆಯಂತಹ ಚಟುವಟಿಕೆಗಳಿಗೆ ಯಾವ ಬಗೆಯಲ್ಲಿ ಹೊಸ ಚಾಲನೆ ದೊರೆಯಬಲ್ಲದು ಎನ್ನುವುದನ್ನು ಎಲ್ಲರೂ ಗಮನಿಸುತ್ತಿರುವ ಸಂದರ್ಭದಲ್ಲಿ, ಅವರಿಂದಲೇ ಅವರ ಅಭಿಪ್ರಾಯಗಳನ್ನು ಪಡೆಯುವ ಪ್ರಯತ್ನದಲ್ಲಿ ನಡೆಸಿದ ಒಂದು ವಿಶೇಷ ಸಂದರ್ಶನವನ್ನು ಅದರ ಮೂಲಸ್ವರೂಪದಲ್ಲಿ, ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದೊಂದಿಗೇ ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ:

ಪ್ರಶ್ನೆ: ಸಾರ್. ನೀವು ಕನ್ನಡ ಸಾಹಿತ್ಯ ಪರಿಷತ್ತಿನ ೨೧ನೇ ಅಧ್ಯಕ್ಷರಾಗಿ ಪ್ರಚಂಡ ಬಹುಮತದೊಡನೆ ಆಯ್ಕೆಯಾಗಿರುವುದು ನಮಗೆಲ್ಲರಿಗೂ ಬಹಳ ಸಂತೋಷವಾಗಿದೆ. ಅದಕ್ಕಾಗಿ ಕನ್ನಡಿಗರೆಲ್ಲರ ಪರವಾಗಿ ನನ್ನ ಹಾರ್ದಿಕ ಅಭಿನಂದನೆಗಳು. ಈ ಸಂದರ್ಭದಲ್ಲಿ ನಿಮ್ಮನ್ನು ಒಂದೆರಡು ಪ್ರಶ್ನೆ ಕೇಳಬೇಕಾಗಿದೆ. ನಿಮಗೆ ಅಭ್ಯಂತರವಿಲ್ಲದಿದ್ದರೆ, ಕೇಳಬಹುದೇ?

ಉತ್ತರ: ಮೊದಲಿಗೆ ನಿಮ್ಮ ಅಭಿನಂದನೆಗಳಿಗೆ ನನ್ನ ಧನ್ಯವಾದಗಳು. ನೀವು ಯಾವುದೇ ಸಂಕೋಚವಿಲ್ಲದೆ ನಿಮಗೆ ಕೇಳಬೇಕೆನಿಸಿದ್ದನ್ನು ಕೇಳಿ.

ಪ್ರಶ್ನೆ: ಸಾರ್, ನಿಮ್ಮ ಪಾಡಿಗೆ ನೀವು ಅಧ್ಯಯನ, ಸಂಶೋಧನೆ, ನಿಘಂಟು ಕೆಲಸಗಳೆಂದು, ನಿಮ್ಮನ್ನು ತೊಡಗಿಸಿಕೊಂಡು ಅಧಿಕಾರ ಅದೂ ಇದೂ ಯಾವುದೂ ಬೇಡವೆಂದು ದೂರವಾಗಿದ್ದವರು. ಅಧ್ಯಕ್ಷರಾಗುವ ಹಂಬಲಕ್ಕೆ ಏಕೆ ಬದ್ದಿರಿ?

ಉತ್ತರ: ಅಧ್ಯಕ್ಷ ಪದವಿಗೆ ಆಸೆಪಟ್ಟು ಅದರ ಬೆನ್ನ ಹಿಂದೆ ಬಿದ್ದವನಲ್ಲ. ಅರಸಿಕೊಂಡು ಹೋದವನೂ ಅಲ್ಲ. ಆದರೆ ಹಿರಿಯ ವಿದ್ವಾಂಸರು, ಸಾಹಿತಿಗಳು, ಮಿತ್ರರು ಒತ್ತಾಯಿಸಿ, ಹಾರೈಸಿದ ದಾಕ್ಷಿಣ್ಯಕ್ಕೆ ಮಣಿದು ನನ್ನಿಂದ ಕಿಂಚಿತ್ತಾದರೂ ಸಾಹಿತ್ಯಕ್ಕೆ ಸೇವೆ ಸಲ್ಲಿಸಲು ಸಾಧ್ಯವಾಗುವುದಾದರೆ ಆಗಲಿ ಎನಿಸಿ ಚುನಾವಣೆಗೆ ನಿಂತೆ. ಆತ್ಮೀಯರ ಆಪ್ತರ ಹಾರೈಕೆ ಫಲಿಸಿ ಈಗ ಅಧ್ಯಕ್ಷನಾಗಿದ್ದೇನೆ. ಇದರಿಂದ ನನಗೆ ಕೊಂಬುಮೂಡಿದೆ ಎನಿಸುವುದಕ್ಕಿಂತ, ಕನ್ನಡಗರ ನಿರೀಕ್ಷೆಗಳನ್ನು ಹೇಗೆ ಪೂರೈಸಲು ಸಾಧ್ಯ ಎಂಬ ಚಿಂತೆಯ ಭಾರವೇ ಹೆಚ್ಚಾಗಿದೆ.

ಪ್ರಶ್ನೆ: ಹಾಗಾದರೆ ಪರಿಷತ್ತಿನ ಅಭಿವೃದ್ಧಿಯ ಬಗ್ಗೆ ನಿಮ್ಮ ಆಲೋಚನೆಗಳು, ವಿಚಾರಗಳು ಏನಿವೆ?

ಉತ್ತರ: ಪರಿಷತ್ತನ್ನು ಪುನಃಶ್ಚೇತನಗೊಳಿಸುವುದು. ಇಲ್ಲಿಯವರೆಗೆ ನಡೆದ ಕೆಲಸಗಳಿಗೂ ಮಿಗಿಲಾಗಿ ಪರಿಷತ್ತಿನ ಸರ್ವತೋಮುಖವಾದ ಬೆಳವಣಿಗೆಯನ್ನು ಚುರುಕುಗೊಳಿಸಲು ಅದರ ಬೇರಿಗೆ ನೀರುಣಿಸಿ ತನ್ಮೂಲಕ ವೃಕ್ಷದ ಟೊಂಗೆಗಳಿಗೆ ಜೀವಶಕ್ತಿ ತುಂಬಿ ನಳನಳಿಸುವಂತೆ ಮಾಡಬೇಕಾದ ಚೇತೋಹಾರಿ ಕಾರ್ಯಕ್ಕೆ ಟೊಂಕಕಟ್ಟಿ ನಿಲ್ಲಬೇಕೆಂದು ಮನಸ್ಸು ಮಾಡಿದ್ದೇನೆ.

ಪ್ರಶ್ನೆ: ನಿಮ್ಮ ಆಶಯಗಳೇನೋ ಉದಾತ್ತವಾಗಿವೆ. ಅವುಗಳನ್ನೆಲ್ಲ ಮಾಡಬಲ್ಲಿರೆಂಬ ದೃಢವಿಶ್ವಾಸ ನಿಮಗಿದೆಯೇ? ನಿಮ್ಮ ವಯಸ್ಸು ನಿಮ್ಮೊಂದಿಗೆ ಸಹಕರಿಸುವುದೇ?

ಉತ್ತರ: ಮಾಡಬೇಕೆಂಬ ಮನಸ್ಸಿದ್ದರೆ ಏನನ್ನಾದರೂ ಮಾಡಿ ತೋರಿಸಬಹುದು. ವಯಸ್ಸೇನೂ ನನಗೆ ಅಡ್ಡಿಯಾಗಿಲ್ಲ. ನನಗಿಂತ ಹಿರಿಯರಾದವರೂ ಇನ್ನೂ ಚಟುವಟಿಕೆಯಿಂದ ಓಡಾಡಿಕೊಂಡಿದ್ದು ಕ್ರಿಯಾಶೀಲರಾಗಿರುವುದನ್ನು ನೋಡಿದರೆ ಅವರ ಮುಂದೆ ನಾನು ಯುವಕ. ನನಗೆ ನನ್ನಲ್ಲಿ ಭರವಸೆಯಿದೆ. ಹಿಡಿದ ಕಾರ್ಯವನ್ನು ಮಾಡದೆ ಬಿಡುವುದಿಲ್ಲ. 'ಹೂವ ತಹೆನಲ್ಲದೆ ಹುಲ್ಲು ತಾರೆನು' ಎಂಬ ನಂಬಿಕೆಯಿದೆ (ವಿನಯ). ಕನ್ನಡಿಗ ಬಂಧುಗಳೆಲ್ಲರಿಗೂ ನಾನು ಪ್ರಾಮಾಣಿಕವಾಗಿ ಕೆಲಸಮಾಡುವೆನೆಂದು ಭರವಸೆ ನೀಡುತ್ತೇನೆ.

ಪ್ರಶ್ನೆ: ಚುನಾವಣೆಗೆ ನಿಲ್ಲುವ ಮೊದಲೇ ನೀವು ಪರಿಷತ್ತಿನ ಅಭಿವೃದ್ಧಿ ವಿಚಾರದಲ್ಲಿ ಏನನ್ನಾದರೂ ಆಲೋಚಿಸಿದ್ದಿರಾ ಹೇಗೆ?

ಉತ್ತರ: ಖಂಡಿತವಾಗಿ. (ನಕ್ಕು) ಯಾವುದೇ ಸ್ಪರ್ಧೆಗಾಗಲೀ, ಚುನಾವಣೆಗಾಗಲೀ ನಿಲ್ಲುವ ಮೊದಲೇ ನಮ್ಮ ಗುರಿಗಳ ಬಗ್ಗೆ ಆಶಯಗಳ ಬಗ್ಗೆ ಕಾರ್ಯವೈಖರಿಯ ಬಗ್ಗೆ ಖಚಿತವಾದ ಆಲೋಚನೆಗಳನ್ನು ಹೊಂದಿರಬೇಕಾದ್ದು ಧರ್ಮ ಮತ್ತು ಅನಿವಾರ್ಯವೂ ಕೂಡಾ! ಮೂಲಭೂತವಾಗಿ ನಮ್ಮೆಲ್ಲರ ಹೆಮ್ಮೆಯ ಸಂಸ್ಥೆಯಾದ ಪರಿಷತ್ತಿನ ಪ್ರತಿಷ್ಠೆಯ ಧ್ವಜವನ್ನು ಮತ್ತಷ್ಟು ಎತ್ತರಕ್ಕೆ ಏರಿಸಬೇಕೆಂಬುದೇ ನನ್ನ ಆದ್ಯ ನಿಲುವು. ಜೊತೆಗೆ ಕನ್ನಡ ಜನತೆಯ ಅಭಿಮಾನಿ ಸಂಸ್ಥೆಯಾದ ಪರಿಷತ್ತು ಕ್ಷುಲ್ಲಕ ರಾಜಕಾರಣ ಭ್ರಷ್ಟತೆಗಳಿಂದ ದೂರವಿದ್ದು ಆರೋಗ್ಯ ಪೂರ್ಣವಾದ, ಮುಕ್ತವಾದ ವಾತಾವರಣದೊಂದಿಗೆ ಬೆಳೆಯಬೇಕೆಂಬುದೇ ನನ್ನ ಮಹದಾಸೆ.

ಪ್ರಶ್ನೆ: ಇದೆಲ್ಲವನ್ನೂ ಹೇಗೆ ಮಾಡಬಲ್ಲಿರಿ?

ಉತ್ತರ: ರಾಜಕೀಯ ಪ್ರವೇಶವಿಲ್ಲದೆ ಜಾತ್ಯತೀತ ನೆಲೆಯಲ್ಲಿ ಅರ್ಥಪೂರ್ಣವಾದ ಕಾರ್ಯವೈಖರಿಯನ್ನು ರೂಪಿಸಿಕೊಳ್ಳುತ್ತೇನೆ. ಪ್ರಜಾಸತ್ತಾತ್ಮಕ ರೀತಿಯಲ್ಲಿ ಎಲ್ಲ ಕನ್ನಡ ಜನತೆಯೂ ಇದರ ಬೆಳವಣಿಗೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಆಗಬೇಕು. ರಾಷ್ಟ್ರಾದ್ಯಂತದ ಕನ್ನಡ ಸಾಹಿತಿಗಳು, ಬುದ್ಧಿಜೀವಿಗಳು ಪರಿಷತ್ತಿನ ಜೀವನಾಡಿಗಳಾಗಬೇಕು. ಅವರೆಲ್ಲರೂ ತಮ್ಮದೇ ರೀತಿಯಲ್ಲಿ ಪರಿಷತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದೇ ನನ್ನ ಕನಸು. ಇದೇ ನನ್ನ ಹಂಬಲ!

ಪ್ರಶ್ನೆ: ರಾಜಕಾರಣದಿಂದ, ರಾಜಕೀಯದಿಂದ ದೂರವಿರಿಸಬೇಕೆಂದೇನೋ ಹೇಳುತ್ತಿದ್ದೀರಿ. ಆದರೆ ಪರಿಷತ್ತಿಗೆ ಆಗತ್ಯವಾಗಿ ಬೇಕಾದ ಆರ್ಥಿಕ ಸಹಾಯ ಪಡೆಯುವಲ್ಲಿ ಸರ್ಕಾರದ ಅಂದರೆ ರಾಜಕಾರಣಿಗಳ ಸಹಕಾರ ಬೇಕಾಗುವುದಲ್ಲವೇ? ಸಹಾಯ ನೀಡುವಲ್ಲಿ ಮುಂದೊಡ್ಡುವ ನಿಬಂಧನೆಗಳಿಗೆ ಒಳಗಾಗಬೇಕಾಗುವುದು ಅನಿವಾರ್ಯವಲ್ಲವೇ?

ಉತ್ತರ: ಪರಿಷತ್ತು ಸರ್ಕಾರದ ಅನುದಾನ ಪಡೆಯುವುದಾದರೂ ಸ್ವಾಯತ್ತ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಳ್ಳುವಷ್ಟು ಸ್ವತಂತ್ರವಾಗಿರಬೇಕು. ಸರಕಾರದೊಂದಿಗೆ ವಿರಸಕ್ಕೆ ಇಳಿಯದೆ ಇನ್ನಷ್ಟು ಆರ್ಥಿಕ ಸಹಾಯಪಡೆದು ಗಟ್ಟಿಗೊಳ್ಳಬೇಕು. ಜೊತೆಗೆ ಪರಿಷತ್ತಿನಂತಹ ಪ್ರತಿಷ್ಠಿತ ಮತ್ತು ವಿಸ್ತೃತ ಸಂಸ್ಥೆ ಹಮ್ಮಿಕೊಳ್ಳುವ ಬೃಹತ್ ಯೋಜನೆಗಳಿಗೆ ಅಪಾರವಾದ ಹಣಸಹಾಯದ ಅಗತ್ಯವಿರುವುದರಿಂದ ಸರಕಾರದ ಹೊರಗಿದ್ದು ಕೆಲಸಮಾಡುವ ಕನ್ನಡ ಅಭಿಮಾನಿ ಸಂಘ, ಸಂಸ್ಥೆಗಳ, ಮಠಮಾನ್ಯಗಳ ಶ್ರೀಮಂತ ಗಣ್ಯರಿಂದ ಉದಾರವಾಗಿ ನೆರವು ಪಡೆದು ಆರ್ಥಿಕ ಸುಭದ್ರತೆಯನ್ನು ಸಾಧಿಸಿಕೊಳ್ಳಬೇಕು. ಆದ್ದರಿಂದ ನಾನು ಮೊದಲಿಗೆ ಇಂತಹ ರೀತಿಯಲ್ಲಿ ಹೆಚ್ಚಿನ ಸಹಾಯ ನೀಡಲು ಪ್ರಚೋದಿಸುವ ಪ್ರಯತ್ನಮಾಡುತ್ತೇನೆ. ಈಗಾಗಲೇ ಚಾಲ್ತಿಯಲ್ಲಿರುವ ಅಮೃತನಿಧಿಯೋಜನೆಯೂ ಮುಂದುವರೆದು ಸಾಕಷ್ಟು ಹಣ ಸಂಗ್ರಹವಾದಲ್ಲಿ ಕನ್ನಡದ ಪ್ರಾಚೀನ ಕಾವ್ಯ, ಶಾಸ್ತ್ರ ಗ್ರಂಥಗಳನ್ನು ನಿಘಂಟುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಕಟಿಸಿ ಪ್ರತಿಯೊಬ್ಬ ಕನ್ನಡ ಸಾಹಿತ್ಯಾಭಿಮಾನಿಗೆ ಅವು ದೊರಕುವಂತೆ ಮಾಡಬೇಕೆಂಬುದೇ ನನ್ನ ಆಕಾಂಕ್ಷೆ.

ಪ್ರಶ್ನೆ: ಹಿಂದಿನ ಅಧ್ಯಕ್ಷರುಗಳೇನಾದರೂ ನಿಮ್ಮ ಮುಂದೆ ಕೆಲವು ಮಾದರಿಗಳನ್ನು, ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆನಿಸುವುದೇ?

ಉತ್ತರ: ಮಾದರಿಗಳು, ಆದರ್ಶಗಳು ಅಂತ ಹೇಳುವುದಕ್ಕೆ ಇಲ್ಲವಾದರೂ ಅವರು ಮಾಡಿದ ಕೆಲಸಗಳನ್ನು ಗಮನಿಸಿ ಅವುಗಳ ಬೆಳಕಲ್ಲಿ ನನ್ನ ಆಲೋಚನೆಗಳಿಗೆ ಹೊಸ ಆಯಾಮಗಳನ್ನು ಕೊಡುವುದಕ್ಕೆ ಪ್ರಯತ್ನಿಸುತ್ತೇನೆ. ತುಳಿದ ಹಾದಿಯನ್ನೇ ತುಳಿದು ಸಾಗಿದಲ್ಲಿ ನನ್ನ ಸ್ವಂತ ದಾರಿಗಳನ್ನು ಕಂಡುಕೊಳ್ಳುವುದಾದರೂ ಹೇಗೆ? ಕೆಲವು ಚಟುವಟಿಕೆಗಳು, ಯೋಜನೆಗಳು ಅರ್ಥಕಳೆದುಕೊಳ್ಳುವುದನ್ನು ತಪ್ಪಿಸಿ ಪರಿಷ್ಕರಿಸುವ ಇಲ್ಲವೇ ಅವುಗಳನ್ನು ಕೈಬಿಡಬೇಕೆನಿಸಿದಲ್ಲಿ ಕೈಬಿಡುವುದಕ್ಕೂ ಹಿಂಜರಿಯುವುದಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಕನ್ನಡಗರಿಗಷ್ಟೇ ಸೀಮಿತಗೊಳ್ಳಬಾರದು. ಕನ್ನಡ ನೆಲದಲ್ಲಿದ್ದು, ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯಗಳ ಬಗ್ಗೆ ಪ್ರೀತಿ, ಅಭಿಮಾನಗಳನ್ನು ಬೆಳಸಿಕೊಂಡಿರುವ ಎಲ್ಲ ಕನ್ನಡೇತರ ಜನಾಂಗಗಳನ್ನೂ ಪರಿಷತ್ತಿನ ಕನ್ನಡ ಕಾರ್ಯಚಟುವಟಿಕೆಗಳ ವ್ಯಾಪ್ತಿಯೊಳಗೆ ಸೆಳೆದುಕೊಳ್ಳಬೇಕು. ಇದು ಸಾಧ್ಯವಾಗಬೇಕಾದರೆ ಪ್ರತಿಯೊಬ್ಬ ಕನ್ನಡಿಗನೂ ವೈಯಕ್ತಿಕ ನೆಲೆಯಿಂದ ಮತ್ತು ಸಮಷ್ಟಿನೆಲೆಯಿಂದ ಪ್ರಯತ್ನಿಸಬೇಕಾಗುತ್ತದೆ.

ಪ್ರಶ್ನೆ: ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷವೂ ಹಮ್ಮಿಕೊಳ್ಳುವ ಸಾಹಿತ್ಯ ಸಮ್ಮೇಳನಗಳ ಬಗ್ಗೆ ಪದೇ ಪದೇ ಒಡಕಿನ ದನಿ ಕೇಳಿ ಬರುತ್ತಿದೆ. ಸಮ್ಮೇಳನಗಳು ಜಾತ್ರೆಯಂತೆ ಆಗುತ್ತಿವೆ. ಗುಂಪುಗಾರಿಕೆ ಹೆಚ್ಚುತ್ತಿದೆ. ಭ್ರಷ್ಟತೆ ಹೆಚ್ಚುತ್ತಿದೆ -ಎಂಬ ಆರೋಪಗಳು ಕೇಳಿ ಬರುತ್ತಿವೆಯಲ್ಲ. ಇದಕ್ಕೆ ನೀವೇನನ್ನುತ್ತೀರಿ?

ಉತ್ತರ: ಪರಿಷತ್ತನ್ನು ಇಂತಹ ಅಪವಾದಗಳಿಂದ, ಆರೋಪಗಳಿಂದ ರಕ್ಷಿಸುವ, ಸಮ್ಮೇಳನಗಳನ್ನು ಅರ್ಥಪೂರ್ಣವಾಗಿಸುವ, ಪ್ರತಿಭೆ, ಅರ್ಹತೆಗಳಿಗೆ ಮಾತ್ರವೇ ಅವಕಾಶ ಕಲ್ಪಿಸುವ, ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಆದಷ್ಟೂ ವಿಕೇಂದ್ರೀಕರಿಸುವ ಆಲೋಚನೆಗಳನ್ನು ಕಾರ್ಯಗತಗೊಳಿಸುವುದರ ಮೂಲಕ ಪರಿಷತ್ತನ್ನು ಪರಿಶುದ್ಧವಾದ ಒಂದು ಸಾಂಸ್ಕೃತಿಕ, ಸಾಹಿತ್ಯಕ ಮಹಾನ್ ಕೇಂದ್ರವಾಗಿಸುವ ನಿಟ್ಟಿನಲ್ಲಿ ದೃಢವಾದ ಹೆಜ್ಜೆಯಿರಿಸಬೇಕೆಂದಿದ್ದೇನೆ. ಏನು ಕೆಲಸಮಾಡಿದರೂ ಟೀಕೆ ಟಿಪ್ಪಣಿಗಳು ಇದ್ದದ್ದೇ!

ಪ್ರಶ್ನೆ: ಸಾರ್, ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿ ನೀವು ಬಹಳಷ್ಟು ಕನಸುಗಳನ್ನು, ಯೋಜನೆಗಳನ್ನು, ಆಲೋಚನೆಗಳನ್ನು ತುಂಬಿಕೊಂಡು ಅವುಗಳನ್ನು ಪೂರೈಸಬೇಕೆಂಬ ದೃಢನಿರ್ಧಾರವನ್ನು ಮತ್ತು ಪೂರೈಸಬಲ್ಲನೆಂಬ ಆತ್ಮವಿಶ್ವಾಸವನ್ನು ಇರಿಸಿಕೊಂಡುರುವುದು ನಿಮ್ಮ ಮಾತುಗಳಿಂದಲೇ ಸ್ಪಷ್ಟವಾಗಿದೆ. ನಿಮ್ಮ ಆಶಯಗಳು ಸಫಲವಾಗಲೆಂಬುದು ನಮ್ಮೆಲ್ಲರ ಹಾರೈಕೆ... ಈಗ ಪರಿಷತ್ತಿನ ವಿಚಾರಬಿಟ್ಟು ನಿಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ಕೇಳುತ್ತೇನೆಂದರೆ ತಪ್ಪಿಲ್ಲ ತಾನೇ?

ಉತ್ತರ: (ನಕ್ಕು) ವೈಯಕ್ತಿಕ ಬದುಕಿನ ಬಗ್ಗೆ ಹೇಳೋದಕ್ಕೆ ಏನುತಾನೆ ಇದ್ದೀತು? ಆದರೂ ಕೇಳುವುದಕ್ಕೆ ಏನಾದರೂ ಇದೆ ಅಂತ ನಿಮಗನಿಸಿದರೆ ಧಾರಾಳವಾಗಿ ಕೇಳಿ ಸಂಕೋಚಬೇಡ.

ಪ್ರಶ್ನೆ: ನಿಮ್ಮನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿದ್ವತ್ ಪ್ರತಿಭೆಯಾಗಿಯೇ ಗುರುತಿಸಿದೆ. ಸಂಪಾದನೆ ಸಂಶೋಧನೆಗಳೇ ನಿಮ್ಮ ವ್ಯಾಪಕ ಕ್ಷೇತ್ರಗಳಾಗಿವೆ. ನಿಮಗೆ ಸೃಜನಶೀಲ ಬರವಣಿಗೆಯಲ್ಲಿ ಆಸಕ್ತಿ ಮೂಡಲಿಲ್ಲವೇಕೆ?

ಉತ್ತರ: ನಾನು ಕನ್ನಡ ವಿದ್ವತ್ ಪ್ರಪಂಚವನ್ನು ಪ್ರವೇಶಿಸಿದಾಗ ನವೋದಯದ ಗಾಳಿ ಬೀಸುತ್ತಿತ್ತು. ಸೃಜನಾತ್ಮಕ ಸಾಹಿತ್ಯ ಚಟುವಟಿಕೆಗಳು ಬಹಳ ಬಿರುಸಿನಿಂದ ನಡೆಯುತ್ತಿದ್ದವು. ಎಲ್ಲರ ದೃಷ್ಟಿ ಸೃಜನಶೀಲ ಬರವಣಿಗೆಯ ಕಡೆಗೇ ಒಲಿದಿತ್ತು. ನಾನೂ ಕೂಡಾ ಸರ್ವೋದಯ ಸಾಧಕರು ಮತ್ತು ಇನ್ನೂ ಒಂದೆರೆಡು ಸಾಹಿತ್ಯ ಕೃತಿಗಳನ್ನು ರಚಿಸಿದೆನಾದರೂ ಯಾಕೋ ನನ್ನ ಮನಸ್ಸು ಮತ್ತು ನನ್ನ ಪ್ರೀತಿ ಸಂಶೋಧನೆ, ಸಂಪಾದನೆ, ನಿಘಂಟುರಚನೆಗಳ ಕಡೆಗೇ ಹೆಚ್ಚಾಗಿತ್ತು. ಪ್ರೀತಿಯ ಜೊತೆಗೆ

ನನಗಿದ್ದ ಬಹುದೊಡ್ಡ ಗುರುಪರಂಪರೆಯ ಆದರ್ಶ ಅವರ ಪ್ರೇರಣೆಗಳು ನನ್ನನ್ನು ಸಂಶೋಧನೆ, ನಿಘಂಟು ರಚನೆಯ ಕಡೆ ದೂಡಿದವು. ಡಿ.ಎಲ್.ಎನ್., ಎ.ಆರ್.ಕೃ. ಮೊದಲಾದವರ ಪ್ರೀತಿ, ಪ್ರೋತ್ಸಾಹಗಳು ನನ್ನ ಆಸಕ್ತಿಗೆ ತನಿ ಎರೆದು ಈ ದಿಕ್ಕಿನೆಡೆಗೆ ಹೊರಳುವಂತೆ ಮಾಡಿದವು. ಅಲ್ಲದೆ ಬಯಸಿದವನಿಗೆ ಭಾಗ್ಯವೇ ಬಾಗಿಲಿಗೆ ಬಂದಂತೆ ಡಿ.ಎಲ್.ಎನ್ ಅವರಿಂದ ನಿಘಂಟು ಕೆಲಸಕ್ಕೆ ಬೆಂಗಳೂರಿಗೆ ಬರಲು ಆಹ್ವಾನ ದೊರೆಯಿತು. ಹತ್ತಿಕ್ಕಲಾಗದ ಈ ಸೆಳೆತ ಬೆಂಗಳೂರಿಗೆ ಬರುವಂತೆ ಮಾಡಿ, ೧೯೫೫ರಲ್ಲಿಯೇ ನಿಘಂಟು ಸಂಪಾದಕ ಸಮಿತಿಯಲ್ಲಿ ಸೇರಲು ಅವಕಾಶ ಕಲ್ಪಿಸಿತು.

ನಮ್ಮ ಸಾಂಸ್ಕೃತಿಕ ಪರಂಪರೆಯ ಅತಿಮುಖ್ಯ ಮತ್ತು ಅವಿಚ್ಛಿನ್ನ ಭಾಗವಾದ ಪ್ರಾಚ್ಯಕಾವ್ಯ ಸಮುದಾಯ ಕಣ್ಮರೆಯಾಗದಂತೆ ಭದ್ರವಾಗಿ ರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮದಾಗಿದೆ. ಆದ್ದರಿಂದ ಮೊದಲಿಗೆ ಅದನ್ನು ಭದ್ರಗೊಳಿಸಬೇಕಾದ ಕಾರ್ಯಭಾರ ಹೆಚ್ಚಾಗಿದೆಯೆನಿಸಿದರಿಂದ ಮತ್ತು ಅತಿ ತುರ್ತಿನ ಅಗತ್ಯವಿದೆಯೆಂದು ಭಾವಿಸಿದ್ದರಿಂದ ಸೃಜನಶೀಲ ಬರವಣಿಗೆಯ ಕಡೆ ಗಮನ ಹರಿಸಲು ಆಗಲಿಲ್ಲ. ಈ ರೀತಿಯಲ್ಲಿ ಅಮೂಲ್ಯವಾದ ಪ್ರಾಚೀನ ಕಾವ್ಯಕೃತಿಗಳು ಮತ್ತು ಹೊಸಗನ್ನಡ ಸಾಹಿತ್ಯದ ಮೌಲಿಕ ಕೃತಿಗಳು ಪರಿಷತ್ತಿನ ಮೂಲಕ ಪ್ರಕಟವಾಗಿ ಸುಲಭ ಬೆಲೆಯಲ್ಲಿ ಕಾವ್ಯ ಸಾಹಿತ್ಯಾಸಕ್ತರಿಗೆ ದೊರಕುವಂತೆ ಮಾಡುವುದೂ ನನ್ನ ಕನಸಾಗಿದೆ.

ವೈಯಕ್ತಿಕ ನೆಲೆಯಿಂದಲೂ ಈ ಕೆಲಸ ಮಾಡಲು ಪ್ರಯತ್ನಿಸಿದೆ. ಕೆಲವು ಕಾಲ ಪ್ರಾಚೀನ ಕಾವ್ಯಗಳ ಪ್ರಕಟಣೆಯ ಕೆಲಸಕ್ಕೆ ಕೈಹಚ್ಚಿದೆ. ಯಾರಿಂದಲೂ ನನ್ನ ಈ ಪ್ರಯತ್ನಕ್ಕೆ ಪ್ರೋತ್ಸಾಹವಾಗಲೀ, ಆರ್ಥಿಕ ನೆರವಾಗಲೀ ದೊರೆಯದೆ ಹೋದರೂ 'ಚಂದ್ರಹಾಸನ ಕಥೆ' ಮುಂತಾದ ಕೃತಿಗಳನ್ನು ಪ್ರಕಟಿಸಿ ಸಾಹಸಮಾಡಿದೆ. ಆರ್ಥಿಕ ಲಾಭ ಎಳ್ಳಷ್ಟೂ ಇಲ್ಲವಾದರೂ ಆತ್ಮತೃಪ್ತಿಯಂತೂ ದೊರೆಯಿತು.

ಈ ಆತ್ಮತೃಪ್ತಿಯೇ ಪ್ರಚಂಡ ಪ್ರಚೋದನೆಯಾಯಿತು. ಹರಿಶ್ಚಂದ್ರ ಕಾವ್ಯ, ಧರ್ಮನಾಥಪುರಾಣ, ಆರಾಧ್ಯ ಚಾರಿತ್ರ ಅಬ್ಬಲೂರು ಚರಿತೆ, ತೊರವೆ ರಾಮಾಯಣ, ಸಿದ್ಧಲಿಂಗೇಶ್ವರ ಸಾಂಗತ್ಯ.' ದೇವಲಾಪುರ ನಂಜುಂಡ ವಿರಚಿತ ಕೃತಿಗಳು ಚತುರಾಚಾರ್ಯ ಚಾರಿತ್ರ' -ಮೊದಲಾಗಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿದೆ. ಹಲವಾರು ಲೇಖನಗಳನ್ನೂ ಬರೆದು ಪ್ರಕಟಿಸಿದೆ.

ಪ್ರಶ್ನೆ: ನಿಮ್ಮ ಕಾರ್ಯಕ್ಷೇತ್ರ ಮೈಸೂರು, ಬೆಂಗಳೂರು ಎಂದು ಎರಡೂ ಕಡೆ ಇದ್ದು, ಈ ಎರಡೂ ಸ್ಥಳಗಳಲ್ಲಿ ನೀವು ಮಾಡಿದ ಕೆಲಸಗಳ ಸ್ವರೂಪವೇನು?

ಉತ್ತರ: ಹೌದು ಎರಡೂ ಕಡೆ ನನ್ನ ಕೆಲಸದ ಹರವಿದ್ದರೂ ನನಗೆ ಕಷ್ಟವೇನೂ ತೋರಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸ್ನಾತಕ ವಿಶೇಷಜ್ಞನಾಗಿ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಯೋಜನೆಯಲ್ಲಿ ಪ್ರಧಾನ ಸಂಪಾದಕರಿಗೆ ಸ್ನಾತಕ ಸಹಾಯಕರಾಗಿ, ಉಪಸಂಪಾದಕರಾಗಿ. ಮುಂದೆ ನಿಘಂಟು ಸಂಪಾದಕರಾಗಿ, ಮಾನಸ ಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದೇನೆ. ಇದರ ಜೊತೆಗೆ ಇನ್ನೂ ಅನೇಕ ಜವಾಬ್ದಾರಿಗಳನ್ನು ಹೊತ್ತಿದ್ದೇನೆ. ವಿದ್ವತ್ ಸಮಿತಿಗಳ ಸದಸ್ಯನಾಗಿಯೂ ಇದ್ದೇನೆ.

ಪ್ರಶ್ನೆ: ಈ ವಯಸ್ಸಿನಲ್ಲಿ ಇಷ್ಟೊಂದು ಜವಾಬ್ದಾರಿಗಳು, ಕಾರ್ಯಭಾರಗಳು, ಇನ್ನಿತರೆ ಚಟುವಟಿಕೆಗಳನ್ನು ಹೇಗೆ ತಾನೇ ನಿಭಾಯಿಸಲು ಸಾಧ್ಯವಾಯಿತು?

ಉತ್ತರ: ವಯಸ್ಸೇನು ಮಾಡುತ್ತೆ. ಅದನ್ನು ಅತ್ತ ಕಡೆ ತಳ್ಳಿ. ಯೋಚನೇನೇ ಮಾಡದೆ, ನೀವು ಎಷ್ಟೆಷ್ಟು ಕ್ರಿಯಾಶೀಲರಾಗಿ ಉತ್ಸಾಹ, ಹುಮ್ಮಸ್ಸುಗಳಿಂದ ಮುಂದುವರಿಯುತ್ತಿಯೋ ಅಷ್ಟಷ್ಟು ಮುಪ್ಪು ಹೆದರಿಗೊಂಡು ನಿಮ್ಮಿಂದ ದೂರ ಓಡಿಹೋಗುತ್ತೆ. ಆದಕ್ಕೆ ನಾನು ನನ್ನೆಲ್ಲ ಕೆಲಸಗಳನ್ನು ಪ್ರೀತಿಯಿಂದ, ಶ್ರದ್ಧೆಯಿಂದ ಮಾಡುತ್ತೇನೆ. ವಯಸ್ಸಿನ ಕಾಳಜಿಯೇ ನನಗಿಲ್ಲ.

ಪ್ರಶ್ನೆ: ಸಾರ್, ಇಷ್ಟೊಂದು ವ್ಯಾಪಕವಾದ ರೀತಿಯಲ್ಲಿ ವಿದ್ವತ್ ಕಾರ್ಯಗಳಲ್ಲಿ ಅವಿರತವಾಗಿ ದುಡಿಯುತ್ತ ಬಂದಿದ್ದೀರಿ. ನಿಮ್ಮ ಕೆಲಸಕ್ಕೆ ಸರಿಯಾದ ಮನ್ನಣೆ ಪ್ರಶಸ್ತಿ, ಪುರಸ್ಕಾರಗಳು ದೊರೆತಿವೆ ಎನಿಸುತ್ತದೆಯೇ?

ಉತ್ತರ: ಪ್ರಶಸ್ತಿ ಪುರಸ್ಕಾರಗಳ ಬಗ್ಗೆ ನಾನು ಯೋಚಿಸುವುದೇ ಇಲ್ಲ. ನಾವು ನಾವಾಗಿ ನಮ್ಮ ಪ್ರೀತಿಗಾಗಿ ಮಾಡುವ ಕೆಲಸಗಳಿಗೆ ಯಾರು ಪ್ರಶಸ್ತಿ ಕೊಟ್ಟು ಮಾಡುವುದಾದರೂ ಏನಿದೆ? ...ಪ್ರಶಸ್ತಿಗಳು ಕೆಲವು ಬಂದಿವೆ. ಆದರೆ ಅವುಗಳಿಗೆ ನಾನು ಹೆಚ್ಚಿನ ಮಹತ್ವ ಕೊಡುವುದಿಲ್ಲ.

ಪ್ರಶ್ನೆ: ಸಂಶೋಧನೆ, ಸಂಪಾದನೆ, ನಿಘಂಟು ಕಾರ್ಯದಲ್ಲಿ ನಿಮ್ಮ ಅನುಭವದ ಸ್ವರೂಪ?

ಉತ್ತರ: ಸಂಶೋಧನೆ, ಸಂಪಾದನೆಯ ಹಾದಿಯಲ್ಲಿ ನಾನು ಕಂಡುಕೊಂಡ ಸತ್ಯಗಳು ಹಲವು. ನಿಘಂಟು ಕ್ಷೇತ್ರದಲ್ಲಿ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ನಾವು ಬಹಳ ಹಿಂದುಳಿದಿದ್ದೇವೆ. ಕನ್ನಡ ನಿಘಂಟಿಗೆ ಒಂದು ಸಾವಿರ ವರ್ಷದ ಇತಿಹಾಸವೇ ಇದೆ. ಆದರೆ ಇದರಲ್ಲಿ ಆಸಕ್ತಿ ತೋರುತ್ತಿರುವವರು ಕಡಿಮೆ. ನೀರಸ, ಶುಷ್ಕವೆನ್ನುವ ಭಾವನೆಯೇ ಹೆಚ್ಚಾಗಿದೆ. ಆದರೆ ಕೆಲಸ ಮಾಡಲು ಹೊರಟಾಗ, ಶಬ್ದ ಜಗತ್ತಿನೊಡನೆ ಒಡನಾಟವಾಡಿದಾಗ ಅದರ ಖುಷಿ ಅನುಭವಕ್ಕೆ ಬರುತ್ತದೆ. ವೆಬ್‌ಸ್ಟರ್, ಆಕ್ಸ್‌ಫರ್ಡ್, ರ್‍ಯಾಂಡಮಹೌಸ್‌ನ ನಿಘಂಟು ಮುದ್ರಣಗಳು ಹೊರಬಂದಿವೆ. ಆದರೆ ಕನ್ನಡದಲ್ಲಿ ಹೀಗೆಲ್ಲಿ ಸಾಧ್ಯ? ಅಲ್ಲಿರುವಂತೆ ವಿವಿಧಾಕಾರ, ವಿವಿಧ ಗಾತ್ರ, ವಿವಿಧೋಪಯೋಗಿ ನಿಘಂಟುಗಳು ನಮ್ಮಲ್ಲಿ ಇಲ್ಲವೆ ಇಲ್ಲವೆನ್ನುವಷ್ಟು ಅಪರೂಪ. ಸಿನಾನಿಮ್ಸ್ ಡಿಕ್ಷನರಿ, ಬಯೋಗ್ರಾಫಿಕಲ್ ಡಿಕ್ಷನರಿ, ಲಿಟರೆರಿ ಟರ್ಮ್ಸ್ ಡಿಕ್ಷನರಿ ಮುಂತಾದುವೆಲ್ಲ ನಮಗೆ ಬೇಡವೇ?... ಆದರೆ ಅವೆಲ್ಲ ಎಲ್ಲಿ ಲಭ್ಯ?... ಇನ್ನೂ ಅಪ್ರಕಟಿತ ಕೃತಿಗಳೇ ಸಾವಿರಾರು ಸಂಖ್ಯೆಯಲ್ಲಿ ಬಿದ್ದಿವೆ. ಅವೆಲ್ಲವೂ ನಾಶವಾಗುವುದಕ್ಕೆ ಮೊದಲೇ ಅಚ್ಚಾಗಿ ಉಳಿಯಬೇಕು. ನಾಡಿನಾದ್ಯಂತ ಚೆದುರಿಹೋಗಿರುವ ಹಸ್ತಪ್ರತಿಗಳ ಶೋಧ ಮತ್ತು ಸಂಗ್ರಹಕಾರ್ಯವಾಗ ಬೇಕು. ಆಗಬೇಕಾದ ಕೆಲಸಗಳಿಗೆ ಸಂಖ್ಯೆಯಿಲ್ಲ ಮಿತಿಯಿಲ್ಲ.

ಪ್ರಶ್ನೆ: ವಿದ್ವತ್ ಪ್ರಪಂಚದಲ್ಲಿ ಮಹಿಳೆಯರು ಎಲ್ಲಿ ನಿಲ್ಲುತ್ತಾರೆ? ಅವರ ಪ್ರಾತಿನಿಧ್ಯದ ಬಗ್ಗೆ ನಿಮ್ಮ ಅನಿಸಿಕೆ ಏನು?

ಉತ್ತರ: ಸೃಜನಶೀಲ ಮಹಿಳಾ ಪ್ರತಿಭೆಗಳಿಗೆ ಅಷ್ಟಾಗಿ ಕೊರತೆ ಇಲ್ಲವಾದರೂ, ನಾವು ಮಾಡುತ್ತಿರುವಂತಹ ಸಂಶೋಧನೆ, ಸಂಪಾದನೆ, ನಿಘಂಟು ಕೆಲಸಗಳಲ್ಲಿ ಅವರ ಕೊಡುಗೆ ತೀರಾ ಅಲ್ಪ. ಈ ಕೆಲಸಗಳಿಗೆ ಶ್ರಮ ಓಡಾಟ ನಿರಂತರ ಅಧ್ಯಯನ, ಗ್ರಂಥಗಳ ಅನುಸಂಧಾನ, ಇತ್ಯಾದಿ ಶಿಸ್ತುಗಳು ಬೇಕಾಗಿರುವುದರಿಂದ, ಗೃಹಕೃತ್ಯಗಳ ಜೊತೆಗೆ ಅವುಗಳನ್ನು ನಿಭಾಯಿಸುವುದು ಅತ್ಯಂತ ತ್ರಾಸದಾಯಕ ಕೆಲಸವಾದ್ದರಿಂದ ಅವರ ಒಲವು ಈ ಕಡೆ ಹೊರಳುವುದು ಸಾಧ್ಯವೇ? ಅಪರೂಪಕ್ಕೆ ಒಬ್ಬರೋ ಇಬ್ಬರೋ ಸಿಗಬಹುದು ಅಷ್ಟೆ!

ಪ್ರಶ್ನೆ: ಪರಿಷತ್ತಿನಲ್ಲಿ ಅವರಿಗೆ ಪ್ರಾತಿನಿಧ್ಯ ಎಷ್ಟರಮಟ್ಟಿಗೆ ಇದೆ ಎನಿಸುತ್ತದೆ?

ಉತ್ತರ: ಪರಿಷತ್ತಿಗೆ ಮಹಿಳಾ ಪ್ರಾತಿನಿಧ್ಯದ ಅಗತ್ಯವಿದೆ. ಆದರೆ ತಾಂತ್ರಿಕ ನಿಬಂಧನೆಗಳ ತೊಡಕಿನಿಂದ ಅದು ಸಾಧ್ಯವಾಗುತ್ತಿಲ್ಲ. ಆದರೆ ಪರಿಷತ್ತಿನ ಎಲ್ಲಾ ಜಿಲ್ಲಾ ಘಟಕಗಳಲ್ಲಿ ಮಹಿಳಾ ಘಟಕಗಳನ್ನು ಹುಟ್ಟು ಹಾಕುವ ಅಪೇಕ್ಷೆಯಿದೆ. ಪ್ರಸ್ತುತ ಕೇಂದ್ರ ಪರಿಷತ್ತಿಗೆ ಹೊಂದಿಕೊಂಡಂತೆ, ಲೇಖಕಿಯರ ಅನುಕೂಲಕ್ಕಾಗಿ ಮಹಿಳಾ ಘಟಕವೊಂದನ್ನು ಆರಂಭಿಸುವ ಆಲೋಚನೆಯಿದೆ.

ಸುದೀರ್ಘವಾದ ಸಂದರ್ಶನದಲ್ಲಿ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಂಡ ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ ಗೌರವಗಳನ್ನು ಹೆಚ್ಚಿಸಲು ಮುಂದಾಗಿದ್ದಾರೆ. ಕನ್ನಡ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಳೆದ ಕನಸುಗಳನ್ನು ಸಾಕ್ಷಾತ್ಕರಿಸಲು ಟೊಂಕ ಕಟ್ಟಿ ನಿಂತಿದ್ದಾರೆ. ಡಿ.ಎಲ್.ಎನ್., ತೀ.ನಂ.ಶ್ರೀ., ಎ.ಆರ್.ಕೃ.ರಂಥವರ ವಿದ್ವತ್ ಪರಂಪರೆಯ

ಮುಂದುವರಿಕೆಯ ಪ್ರತೀಕವಾಗಿದ್ದಾರೆ. ಇಂತಹ ಬಸವಾರಾಧ್ಯರು ಕ.ಸಾ.ಪ.ದ ಅಧ್ಯಕ್ಷರಾಗಿರುವುದು ಕನ್ನಡಿಗರೆಲ್ಲರಿಗೂ ಅತಿಯಾದ ಹೆಮ್ಮೆಯೆನಿಸಿದೆ. ಕನ್ನಡ ಸಾಹಿತ್ಯ ಬಂಧುಗಳು ಕುತೂಹಲ ನಿರೀಕ್ಷೆಗಳಿಂದ ಕನ್ನಡದ ಉಜ್ವಲ ಭವಿಷ್ಯವನ್ನು ನೋಡುವಂತಾಗಿದೆ.

ಭಾಗ-೨

ಭಾಗ-೨ರಲ್ಲಿ ಕಾಣಿಸಿದ ಸಂದರ್ಶನದಲ್ಲಿ ಬಸವಾರಾಧ್ಯರ ಕಾರ್ಯಕ್ಷಮತೆ, ಕಟ್ಟಿಕೊಂಡ ಕನಸುಗಳು, ಪರಿಷತ್ತಿನಂತಹ ಸಂಸ್ಥೆಯನ್ನು ಅಭಿವೃದ್ಧಿಯ ಉತ್ಕರ್ಷಕ್ಕೆ ಕೊಂಡೊಯ್ಯಬೇಕೆಂಬ ತಹತಹಿಕೆ, ಅದನ್ನೆಲ್ಲ ಮಾಡಬಲ್ಲೆನೆಂಬ ಆತ್ಮವಿಶ್ವಾಸಗಳು ಒಡೆದದ್ದು ಕಾಣುತ್ತವೆ. ಅಧ್ಯಕ್ಷರಾಗಿ ಮೂರುವರ್ಷಗಳ ಕಾಲ ಪರಿಷತ್ತಿಗಾಗಿ ದುಡಿದರು ತಮ್ಮಯೋಜನೆಗಳಲ್ಲಿ ಸಾಕಷ್ಟು ಸಂಖ್ಯೆ ಪೂರೈಸಿದರು. ಆತ್ಮಸಾಕ್ಷಿಗೆ ಅನುಗುಣವಾಗಿ ತಮ್ಮ ಕೈಲಾದಷ್ಟು ಮಾಡಿದೆನೆಂಬ ತೃಪ್ತಿ ಒಂದು ಕಡೆ ಇದೆಯಾದರೂ, ಮಾಡಬೇಕದ್ದು ಇನ್ನಷ್ಟು ಉಳಿದುಬಿಟ್ಟಿರುವುದರಿಂದ ಅವುಗಳನ್ನು ಪೂರೈಸಲಾಗಲಿಲ್ಲವೆಂಬ ನೋವೂ ಅವರಿಗಿದೆ. ಅವರನ್ನೆ ಈ ವಿಚಾರವಾಗಿ ಮಾತನಾಡಿಸಬೇಕೆಂದು ಹೊರಟಾಗ ಅವರು ಪ್ರತಿಕ್ರಿಯಿಸಿದ್ದು ಹೀಗೆ:

ಪ್ರಶ್ನೆ: ಸಾರ್, ಕನ್ನಡಿಗರು ತಮ್ಮ ಅಧ್ಯಕ್ಷತೆಯಲ್ಲಿ ಅತ್ಯಂತ ಮಹತ್ವದ ಕೆಲಸಗಳನ್ನು ನಿರೀಕ್ಷಿಸಿದ್ದರು. ತಾವೂ ಕೂಡಾ ಮೂರುವರ್ಷಗಳ ಅವಧಿಯನ್ನು ಯಶಸ್ವಿಯಾಗಿ ಪೂರೈಸಿದಿರಿ. ನೀವು ಅಂದುಕೊಂಡ ಕೆಲಸಗಳನ್ನೆಲ್ಲ ಪೂರೈಸಲು ಸಾಧ್ಯವಾಯಿತಾ?

ಉತ್ತರ: ಯೋಜನೆಗಳು, ಕೆಲಸಗಳು ಬೇಕಾದಷ್ಟು ಇರುತ್ತವೆ. ಆದರೆ ಅವುಗಳನ್ನೆಲ್ಲ ಪೂರೈಸಬೇಕಾದರೆ ಒಬ್ಬ ವ್ಯಕ್ತಿಯಿಂದ ಕೇವಲ ಮೂರು ವರ್ಷಗಳ ಅವಧಿಯಲ್ಲಿ ಸಾಧ್ಯವಾಗುವುದೆ ಇಲ್ಲ. ಆದರೂ ನಾನು ನನ್ನ ಆತ್ಮಸಾಕ್ಷಿಯಂತೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನನ್ನ ಸೀಮಿತ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ್ದೇನೆ. ಹಳೇ ಕಾವ್ಯಗಳು ಸಾಮಾನ್ಯ ಜನತೆಗೆ ಅರ್ಥಮಾಡಿಕೊಳ್ಳಲು ಸುಲಭವಾಗುವಂತೆ ಗದ್ಯಾನುವಾದವನ್ನು ಖ್ಯಾತ ವಿದ್ವಾಂಸರುಗಳಿಂದ ಮೂಲದ ಜೊತೆಗೇ ಮಾಡಿಸಿ ಪ್ರಕಟಿಸಿದ್ದೇನೆ. ಅವುಗಳಿಗೆ ಸಾಕಷ್ಟು ಬೇಡಿಕೆಯಿದ್ದು ನನ್ನ, ನಂತರದ ಅವಧಿಯಲ್ಲಿ ಮರುಮುದ್ರಣಗಳನ್ನು ಕಂಡಿವೆ. ನಾನು ಪರಿಷತ್ತನ್ನು ಬಿಟ್ಟು ಬಂದಾಗ ೮೫ ಲಕ್ಷದ ವರೆಗೆ ಬಂಡವಾಳವಿದ್ದುದರಿಂದ ಕಾರ್ಯಗಳ ಮುಂದುವರಿಕೆಗೆ ಆರ್ಥಿಕ ಮುಗ್ಗಟ್ಟಿನ ಪ್ರಶ್ನೆಯೇ ಇರಲಿಲ್ಲ. ಪುಸ್ತಕಗಳ ಪ್ರಕಟಣೆ, ದತ್ತಿಉಪನ್ಯಾಸಗಳು, ಅನೇಕ ಸಾಹಿತ್ಯಿಕ ಕಾರ್ಯಕ್ರಮಗಳಲ್ಲದೆ, ಸಮ್ಮೇಳನಗಳ ವ್ಯವಸ್ಥೆಯಲ್ಲಿಯೇ ಹೆಚ್ಚುಕಾಲ ಕಳೆದು ಹೋಗುತ್ತದೆ. ಆದ್ದರಿಂದ ನಾವು ಆಲೋಚಿಸುವ ಪ್ರಮಾಣದಲ್ಲಿ ಕೆಲಸಗಳು ನಡೆಯಲಿಲ್ಲವೆಂಬ ಕೊರಗು ಇದ್ದೇ ಇರುತ್ತದೆ.

ಪ್ರಶ್ನೆ: ಪರಿಷತ್ತು ಸಾಹಿತಿಗಳ ಬುದ್ಧಿಜೀವಿಗಳ ಕನ್ನಡ ಅಭಿಮಾನಿಗಳ ನಿರೀಕ್ಷೆಗಳ ಪ್ರತೀಕವಾಗಿದೆ. ಕನ್ನಡ ಸಾಹಿತ್ಯದ ಅಭಿವೃದ್ಧಿ ಎಂದಾಗ ಕೇವಲ ಸೃಜನಶೀಲ ಸಾಹಿತ್ಯವಷ್ಟೆ ಅಲ್ಲದೆ ಸೃಜನೇತರವಾದ ಸಾಹಿತ್ಯಪ್ರಕಾರಗಳ ಬಗ್ಗೆಯೂ ಯೋಚಿಸಬೇಕಾದ ಅಗತ್ಯವಿದೆ. ಭಾಷೆ, ಸಂಸ್ಕೃತಿ ಸಂಬಂಧವಾದ ಕೃತಿಗಳ ಪ್ರಕಟನೆ ಅಷ್ಟು ಸಮರ್ಪಕವಾಗಿಲ್ಲ ಎನಿಸುವುದಿಲ್ಲವೇ?

ಉತ್ತರ: ಹೌದು. ನೀವು ಹೇಳುವುದು ಸರಿ. ಭಾಷಾಶಾಸ್ತ್ರ, ಗ್ರಂಥಸಂಪಾದನೆಗಳ ಬಗ್ಗೆ ಪರಿಷತ್ತಿನಿಂದ ಸಾಕಷ್ಟು ಕೆಲಸ ನಡೆದಿಲ್ಲ. ಭಾಷಾವಿಷಯ ಸಂಬಂಧವಾದ, ಶಬ್ದಗಳ ವ್ಯುತ್ಪತ್ತಿಯ ಬಗ್ಗೆ ನಿಘಂಟುವಿನಲ್ಲಿ ಮಾಹಿತಿ ಸ್ವಲ್ಪ ಮಟ್ಟಿಗೆ ಸಿಗುವುದಾದಾರೂ ನೇರವಾಗಿ ಭಾಷಾಶಾಸ್ತ್ರದ ಬಗ್ಗೆ, ಗ್ರಂಥಸಂಪಾದನೆ ಬಗ್ಗೆ ಹಿಂದಿನವರು ಬರೆದ ಕೆಲವು ಕೃತಿಗಳನ್ನು ಬಿಟ್ಟರೆ ಇಲ್ಲವೇ ಇಲ್ಲವೆಂದು ಹೇಳಬೇಕು. ಇವತ್ತು ಭಾಷಾಶಾಸ್ತ್ರವನ್ನು ಸಾಂಸ್ಕೃತಿಕ, ಮನೋವೈಜ್ಞಾನಿಕ, ಸಾಮಾಜಿಕ ಹಿನ್ನೆಲೆಯೊಂದಿಗೆ ಅಧ್ಯಯನ ಮಾಡುವ ಪ್ರಕ್ರಿಯೆ ಬೆಳೆದಿದೆ. ಭಾಷಾಶಾಸ್ತ್ರ ಅಥವಾ ಭಾಷಾವಿಜ್ಞಾನ ಹಲವು ಮುಖಗಳಲ್ಲಿ ಬೆಳೆದಿದೆ. ಆದರೆ ಕನ್ನಡದಲ್ಲಿ ಪುಸ್ತಕಗಳೇ ಇಲ್ಲ. ಇಂಗ್ಲೀಷ್ ಕೃತಿಗಳ ಮೂಲಕ ಓದಿ ಗ್ರಹಿಸಿಕೊಳ್ಳಬೇಕಾಗಿದೆ. ಇದು ನಿಜವಾಗಿಯೂ ಶೋಚನೀಯ.

ಪ್ರಶ್ನೆ: ಪರಿಸ್ಥಿತಿಯ ಗಂಭೀರತೆಯ ಅರಿವು ನಿಮಗಾಗಿದೆ. ಆದ್ದರಿಂದ ಈ ಸಮಸ್ಯೆಯ ಪರಿಹಾರಕ್ಕೆ ನೀವು ಕೊಡುವ ಸಲಹೆಗಳೇನು?

ಉತ್ತರ: ಪರಿಷತ್ತಿನಿಂದ ಭಾಷಾವಿಜ್ಞಾನ, ಗ್ರಂಥಸಂಪಾದನೆಗೆ ಸಂಬಂಧಿಸಿದ ಕೆಲಸಗಳು ನಡೆದಿಲ್ಲವಾದರೂ ಹಂಪಿ ವಿಶ್ವವಿದ್ಯಾಲಯ ಈ ನಿಟ್ಟಿನಲ್ಲಿ ಬಹಳಷ್ಟು ಕೆಲಸಗಳನ್ನು ಮಾಡುತ್ತಿದೆ. ಭಾಷಾವಿಜ್ಞಾನ, ಜಾನಪದ, ಸ್ತ್ರೀವಾದಿ ಅಧ್ಯಯನ ಬುಡಕಟ್ಟು ಜನಾಂಗಗಳ ಅಧ್ಯಯನ -ಹೀಗೆ ಹಲವಾರು ಶಿಸ್ತುಗಳಿಗೆ ಸಂಬಂಧಿಸಿದಂತೆ ಮಹತ್ವದ ಕೆಲಸಗಳನ್ನು, ಯೋಜನೆಗಳನ್ನು ಹಮ್ಮಿಕೊಂಡು ಸಾರ್ಥಕವಾದ ಕೆಲಸಗಳನ್ನು ಮಾಡುತ್ತಿದೆಯೆಂಬುದು ಸಂತೋಷದ ವಿಷಯವಾದರೂ, ಅದಕ್ಕೂ ಮೊದಲೇ ಅತಿಹಳೆಯದಾದ ಪರಿಷತ್ತಿನಂತಹ ಸಂಸ್ಥೆಯೇ ಇಂತಹ ಕೆಲಸಗಳನ್ನು ಮಾಡಬೇಕಿತ್ತು.

ಪ್ರಶ್ನೆ: ಇಷ್ಟೊಂದು ಅಗತ್ಯವಿರುವ ವಿಷಯಗಳ ಬಗ್ಗೆ ಈಗಲಾದರೂ ವಿದ್ವಾಂಸರಿಂದ ನೆರವು ಪಡೆದು ಗ್ರಂಥ ರಚನೆಗೆ ಪ್ರಯತ್ನಿಸಬಹುದಲ್ಲ?

ಉತ್ತರ: ಈಗ ನೋಡಿ ಕಷ್ಟಕರವಾದ ಇಂತಹ ವಿದ್ವತ್ ಕ್ಷೇತ್ರಗಳಿಗೆ ಬರುವ ಜನ ಕಡಿಮೆ. ಇದಕ್ಕೆ ಸಾಕಷ್ಟು ಅಧ್ಯಯನ ಅನುಸಂಧಾನ, ವಿದ್ವತ್ ಪ್ರತಿಭೆ, ಶ್ರಮ ಇವೆಲ್ಲ ಬೇಕಾಗಿದೆ. ಇಷ್ಟೆಲ್ಲ ಮಾಡಲು ಮುಂದೆ ಬರುವ ಜನರ ದೊಡ್ಡ ಕೊರತೆಯಿದೆ. ಆದರೆ ಹಾಗಂತ ಕೈ ಬಿಡಬಾರದು. ಈಗಂತೂ ಅದ್ಭುತವಾದ ತಾಂತ್ರಿಕ ಅನುಕೂಲಗಳಿವೆ. ತಂತ್ರಾಂಶದ ಬಳಕೆಯಿಂದ, ಗಣಕಯಂತ್ರದ ಸಹಾಯದಿಂದ ಅದ್ಭುತವಾದ ಕಾರ್ಯಗಳನ್ನೆಲ್ಲ ನಿರಾಯಾಸವಾಗಿ ಅತಿ ಅಲ್ಪಕಾಲದಲ್ಲಿ ಮಾಡುವ ಸಾಧ್ಯತೆಯಿದೆ. ಪರಿಷತ್ತು ಆಯಾ ವಿಷಯಗಳಲ್ಲಿ ಪರಿಣತರಾದ ವಿದ್ವಾಂಸರಿಂದ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬೇಕಾದ ಗ್ರಂಥಗಳನ್ನು ಬರೆಸಲು ಪ್ರಯತ್ನಿಸಬೇಕು. ಇಂತಹ ಶಾಸ್ತ್ರವಿಷಯಗಳಲ್ಲೂ ಆಸಕ್ತಿಮೂಡುವಂತಹ ಪರಿಸರ ನಿರ್ಮಾಣವಾಗಬೇಕು. ಸೃಜನಶೀಲವಾಗಿ ಬರೆದ ಸಾಹಿತ್ಯವೇ ಸಾಹಿತ್ಯವೆನ್ನುವ ಭ್ರಮೆಯಿರಿಸಿಕೊಂಡಿರುವುದು ಬಹುಶಃ ಇಂತಹ ಸಮಸ್ಯೆಗೆ ಕಾರಣವಾಗಿರಬಹುದು. ಮೊದಲಿಗೆ ನಮ್ಮಂತಹವರೂ ಕವನ, ಕಥೆ, ಇತ್ಯಾದಿ ಬರೆಯಲು ಹೊರಟರೂ ವಿದ್ವತ್ ಜಗತ್ತಿನ ಮೇರುಶೃಂಗಗಳಂತಿದ್ದ ಡಿ.ಎಲ್.ಎನ್., ತೀ.ನಂ.ಶ್ರೀ., ಎ.ಆರ್.ಕೃ. ಮೊದಲಾದವರ ಪ್ರತಿಭೆ ಪಾಂಡಿತ್ಯಗಳಿಗೆ ಬೆರಗಾಗಿ, ಮೋಡಿಗೆ ಒಳಗಾಗಿ ನಾವು ಈ ರೀತಿ ಸಂಶೋಧನೆ, ಸಂಪಾದನೆ, ನಿಘಂಟುಗಳ ಕಡೆಗೆ ಆಕರ್ಷಿತರಾಗಿ ಹೊರಳಿ ಬಂದೆವು.

ಪ್ರಶ್ನೆ: ಸಾರ್, ಇದು ನಿಮ್ಮ ಸಾಹಿತ್ಯ ಶಾಸ್ತ್ರ ವಿದ್ವತ್ ಬಗೆಗಿನ ನಿಲುವುಗಳು ಅಭಿಪ್ರಾಯಗಳು. ಆದರೆ ಈಗ ನಿಮ್ಮನ್ನು ಬೇರೆ ದಿಕ್ಕಿನಿಂದ ಕೆಲವು ಪ್ರಶ್ನೆ ಕೇಳುತ್ತೇನೆ. ನೀವು ಸ್ವಾತಂತ್ರ್ಯಪೂರ್ವದ ಸ್ಥಿತಿಯನ್ನೂ ಸ್ವಾತಂತ್ರ್ಯೋತ್ತರದ ಈಗಿನ ಸ್ಥಿತಿಯನ್ನೂ ಕಂಡಿದ್ದೀರಿ. ಎಪ್ಪತ್ತೆಂಟು ವರ್ಷಗಳ ಸುದೀರ್ಘ ಬದುಕಿನಲ್ಲಿ ಅನೇಕ ಬಗೆಯ ಸನ್ನಿವೇಶಗಳನ್ನು, ವ್ಯಕ್ತಿಗಳನ್ನು ಕಂಡಿದ್ದೀರಿ. ನಿಮಗೆ ಇದೆಲ್ಲ ಹೇಗನಿಸುತ್ತೆ? ಆಗಿರುವ ಬದಲಾವಣೆಗಳಿಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?

ಉತ್ತರ: ಅನಿಸುವುದೇನಿದೆ! ನನ್ನಂತಹ ಮತ್ತು ನನಗಿಂತ ಹಿರಿಯ ಪ್ರಾಯದ ಎಲ್ಲ ವ್ಯಕ್ತಿಗಳ ಪ್ರತಿಕ್ರಿಯೆ ನನಗೆ ತಿಳಿದ ಮಟ್ಟಿಗೆ ಒಂದೇತರ ಇರುತ್ತೆ. ಬ್ರಿಟಿಷರು ಬಿಟ್ಟು ಹೋದರೂ ಬ್ರಿಟಿಷರ ಬದುಕಿನ ಶೈಲಿ, ಆಂಗ್ಲಮೋಹ, ಆಂಗ್ಲಸಂಸ್ಕೃತಿಯ ಪ್ರೀತಿಗಳು ಮಾತ್ರ ನಮ್ಮನ್ನು ಬಿಟ್ಟಿಲ್ಲ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಮೆಚ್ಚಬಹುದಾದರೂ ಪಾಶ್ಚಾತ್ಯೀಕರಣ, ಜಾಗತೀಕರಣಗಳ ಸೆಳೆತ ಪ್ರಭಾವಗಳ ಪರಿಣಾಮಗಳನ್ನು ಕಂಡರೆ ಹೆದರಿಕೆ ಆಗುತ್ತದೆ. ನಮಗೆ ನಮ್ಮದೆನ್ನುವ ಯಾವುದೂ ಬೇಡವಾಗಿದೆ. ಎಲ್ಲ ಕ್ಷೇತ್ರಗಳಲ್ಲಿ ಅನುಕರಣೆಯೇ ಪ್ರಧಾನವಾಗಿದೆ. ಸಂಸ್ಕೃತಿ, ಸಂಪ್ರದಾಯ, ಮೌಲ್ಯಗಳ ಬಗ್ಗೆ ಒಂದು ಬಗೆಯ ಅಸಡ್ಡೆ. ಸಾಲದ್ದಕ್ಕೆ ಮನುಷ್ಯ ಸಂಬಂಧಗಳಂತೂ ಇವತ್ತು ಅರ್ಥಹೀನವಾಗಿವೆ. ಯಾರಿಗೆ ಯಾರೂ ಬೇಡ. ಸ್ವಾರ್ಥ ಸ್ವಚಿಂತನೆಗಳು ಪ್ರಮುಖವಾಗಿ ಅಣ್ಣ-ತಮ್ಮ, ಅಕ್ಕ-ತಂಗಿ, ತಾಯಿಗಳೇ ಬೇಡವೆನಿಸುತ್ತಿರುವಾಗ ನೆರೆಹೊರೆ ಸ್ನೇಹಿತರು ಯಾವ ಲೆಕ್ಕಕ್ಕೂ ಇಲ್ಲ.

ಪ್ರಶ್ನೆ: ಜಗತ್ತನ್ನೇ ಗದಗುಟ್ಟಿಸುತ್ತಿರುವ ಕೋಮು ಗಲಭೆಗಳು, ಉಗ್ರವಾದಿತ್ವ, ಮತೀಯ ದ್ವೇಷಗಳ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರ: ಯಾವ ದೇಶದಲ್ಲಿಯೇ ಆಗಲಿ ಶಾಂತಿ, ಕ್ಷೇಮಗಳು ನೆಲಸಬೇಕಾದರೆ ಜಾತಿ, ಮತ, ಕೋಮುಗಳ ನಡುವಿನ ಅಂತರ ಮರೆತು ಸೌಹಾರ್ದತೆಯಿಂದ ಬಾಳಬೇಕು. ಉಗ್ರವಾದಿ ಚಟುವಟಿಕೆಗಳು ಕೇವಲ ಒಂದು ದೇಶಕ್ಕೆ ಮಾತ್ರ ಸೀಮಿತಗೊಳ್ಳದೆ ಜಗದ್ವ್ಯಾಪಿಯಾಗಿ ಬೆಳೆದು ಮನುಕುಲವನ್ನೇ ನಡುಗಿಸುತ್ತಿವೆ. ಮತದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಏನೆಲ್ಲಾ ಅನಿಷ್ಟಗಳು ಸಂಭವಿಸುತ್ತಿವೆ. ಯಾರೋ ಸ್ವಾಮಿಗಳು ಯಾವುದೋ ಮಠಮಾನ್ಯಕ್ಕೆ ಸೇರಿದವರು, ಏನೋ ಮಾಡಿದರೆಂದರೆ ಸಾಕು, ವ್ಯಾಪಕವಾಗಿ ಚರ್ಚೆ ನಡೆಸಿ, ದ್ವೇಷ, ಅಸೂಯೆ ಟೀಕೆಗಳನ್ನು ಹುಟ್ಟುಹಾಕಿ ಗಲಭೆ, ಘರ್ಷಣೆಗಳಿಗೆ ದಾರಿಮಾಡುತ್ತಾರೆ. ಜನಕ್ಕೆ ಗೊಂದಲ ಉಂಟುಮಾಡಲು ನಾಲಗೆ ತೀಟೆ ತೀರಿಸಿಕೊಳ್ಳಲು ಏನಾದರೂ ವಿಷಯಬೇಕು. ಅದಕ್ಕಾಗಿ ಇಂತಹ ಸಣ್ಣ ಪುಟ್ಟ ಅವಕಾಶಗಳಿಗೆ ಕಾಯುತ್ತಿರುತ್ತಾರೆ, ಅಷ್ಟೆ.

ಪ್ರಶ್ನೆ: ವಯಸ್ಸು, ಅನುಭವ, ಪಾಂಡಿತ್ಯಗಳಲ್ಲಿ ಪಕ್ವಗೊಂಡವರು ನೀವು. ನಿಮ್ಮಿಂದ ಕಡೆಯದಾಗಿ ಕನ್ನಡಿಗರಿಗೆ ನೀಡುವ ಸಂದೇಶವಾದರೂ ಏನು?

ಉತ್ತರ: ಮೊದಲಿನಿಂದಲೂ ಕನ್ನಡಿಗರು ಉದಾರಿಗಳು, ಹೃದಯವಂತರು, ಪ್ರತಿಭಾವಂತರು, ಸ್ನೇಹಪರರು. ಅವರಿಗೆ ಒಳ್ಳೆಯ ಗುಣಗಳು ರಕ್ತಗತವಾಗಿ ಬಂದಿದೆ. ಆದರೂ ಜಗತ್ತಿನಲ್ಲಿನ ಬದಲಾವಣೆಗಳಲ್ಲಿ ನೇತ್ಯಾತ್ಮಕ ಅಂಶಗಳನ್ನು ಕೈಬಿಟ್ಟು ಒಳಿತಾವುದೋ ಅದನ್ನು ಸ್ವೀಕರಿಸಲಿ. ಆಂಗ್ಲ ಅಥವಾ ಪಾಶ್ಚಿಮಾತ್ಯ ಪ್ರಭಾವಗಳನ್ನು ತನ್ನ ಮೂಲ ಕನ್ನಡ ಸಂಸ್ಕೃತಿ ಏನಿದೆ. ಅದನ್ನು ಬಲಿಷ್ಠಗೊಳಿಸಲು ಇರುವ ಸಾಧ್ಯತೆಗಳಷ್ಟಕ್ಕೆ ಮಾತ್ರ ಸ್ವೀಕರಿಸಲು ಸಾಹಿತ್ಯ, ಸಂಸ್ಕೃತಿ ಪ್ರೀತಿಯನ್ನು ಮೌಲ್ಯಗಳ ಬಗ್ಗೆ ಇದ್ದ ಆದರವನ್ನು ಬಿಟ್ಟು ಕೊಡದೆ ಆಧುನಿಕತೆಯನ್ನು ಸಮಕಾಲೀನ ಪ್ರಗತಿಯ ಪರಿಣಾಮಗಳನ್ನು ಅಳವಡಿಸಿಕೊಳ್ಳಲಿ ಇದೊಂದನ್ನೇ ಕನ್ನಡಿಗರಿಂದ ನಾನು ನಿರೀಕ್ಷಿಸುವುದು.

XXX

ನಾನು ಕಂಡಂತೆ ಬಸವಾರಾಧ್ಯರು

-ಡಾ. ವೈ.ಸಿ. ಭಾನುಮತಿ

ಶ್ರೀ ಎನ್. ಬಸವಾರಾಧ್ಯರನ್ನು ನಾನು ಮೊದಲ ಬಾರಿ ಕಂಡದ್ದು ೧೯೭೫ರ ಮೇ ತಿಂಗಳಿನಲ್ಲಿ. ಆ ದಿನ ನನ್ನ ಸ್ಮೃತಿಕೋಶದಲ್ಲಿ ಹಚ್ಚ ಹಸುರಾಗಿದೆ. ಆಗಷ್ಟೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದಲ್ಲಿ ಸಂಶೋಧನ ಸಹಾಯಕಿಯಾಗಿ ವೃತ್ತಿಜೀವನ ಆರಂಭಿಸಿದ್ದೆ. ಈ ವಿಭಾಗದ ಆಡಳಿತದ ಸ್ವರೂಪ ಅರಿಯದ ನನಗೆ ಬಸವಾರಾಧ್ಯರೇ ಸಂಪಾದನ ವಿಭಾಗದ ಉಪನಿರ್ದೇಶಕರೆಂಬ ಸಂಗತಿಯೂ ತಿಳಿಯದಾಗಿತ್ತು. ಅಪರಿಚಿತಳಾಗಿದ್ದ ನನ್ನನ್ನು ಅವರಿಗೆ ಪರಿಚಯಿಸಿದವರು ಶ್ರೀ ಬಿ.ಎಸ್. ಸಣ್ಣಯ್ಯನವರು. ಇವರೇ ಬಸವಾರಾಧ್ಯರು ಎಂದಾಗ ನೀಳಕಾಯದ ಸೂಟುಧಾರಿಯಾದ ಬಸವಾರಾಧ್ಯರು ನಮ್ಮೆಡೆಗೆ ತಿರುಗಿ ಸೌಜನ್ಯದ ನಗೆ ಬೀರಿದರು. ಮೊದಲ ಭೇಟಿಯಲ್ಲಿಯೇ ಬಹಳ ವಿಶ್ವಾಸದಿಂದ ಮಾತನಾಡಿಸಿ ನನ್ನ ಶೈಕ್ಷಣಿಕ ಹಿನ್ನೆಲೆಗಳನ್ನು ವಿಚಾರಿಸಿಕೊಂಡರು. ಸ್ವಲ್ಪ ಹೊತ್ತಿಗೆಲ್ಲ ಕರೆದು ಕೆಲಸ ಹಚ್ಚಿದರು.

ಎನ್. ಬಸವಾರಾಧ್ಯರು ಎಲ್ಲದರಲ್ಲೂ ಅಚ್ಚುಕಟ್ಟು. ಇತರರಿಂದಲೂ ಇದನ್ನೇ ನಿರೀಕ್ಷಿಸುತ್ತಿದ್ದರು. ಅವರು ತಮ್ಮ ಮೇಜಿನ ಮೇಲೆ ಪುಸ್ತಕಗಳನ್ನು ಜೋಡಿಸಿದ ರೀತಿಯೇ ಅವರ ಅಭಿರುಚಿಯನ್ನು ಸಾರುತ್ತಿತ್ತು. ಪುಸ್ತಕಗಳು ಸ್ಥಾನ ಪಲ್ಲಟವಾಗಬಾರದು, ಜರುಗಬಾರದು ಹೀಗೆ ವಿಪರೀತ ಕಾಳಜಿ. ಅವರಿಗೆ ಪೆನ್ನುಗಳನ್ನು ಸಂಗ್ರಹಿಸುವ ಖಯಾಲಿ ಇತ್ತು. ಪೆನ್‌ಸ್ಟ್ಯಾಂಡ್ ತುಂಬ ಬಗೆಬಗೆಯ ಪೆನ್ನುಗಳು. ಆಕಾರವಷ್ಟೇ ಅಲ್ಲ ವಿವಿಧ ವರ್ಣದ ಶಾಯಿಯನ್ನೊಳಗೊಂಡ ಪೆನ್ನುಗಳು ಇರುತ್ತಿದ್ದವು. ಮೇಜಿನ ಮೇಲೆ ನಿಘಂಟುಗಳು, ಕವಿಚರಿತೆ ಸಂಪುಟಗಳು, ಬಸವಪುರಾಣ, ಶಿವಶರಣರ ಚರಿತ್ರೆಗಳು, ಪಂಪಭಾರತ, ವಡ್ಡಾರಾಧನೆ ಇವೇ ಮೊದಲಾದ ಗ್ರಂಥಗಳು ಖಾಯಂ ಸ್ಥಾನ ಪಡೆದಿದ್ದವು.

ಬಸವಾರಾಧ್ಯರು ಒಬ್ಬ ದಕ್ಷ ಅಧಿಕಾರಿಯಾಗಿದ್ದರು. ಶಿಸ್ತು ಪ್ರಾಮಾಣಿಕತೆಗಳು ಅವರ ವ್ಯಕ್ತಿತ್ವದ ಭಾಗವೇ ಆಗಿದ್ದವು. ಕಛೇರಿ ಆರಂಭವಾಗುವ ಮೊದಲೇ ಬಂದು ತಮ್ಮ ಪೀಠದಲ್ಲಿ ಆಸೀನರಾಗಿರುತ್ತಿದ್ದರು. ಮಧ್ಯಾಹ್ನದ ಊಟದ ವಿರಾಮದ ವೇಳೆಯಲ್ಲಿ ಅವರಿಗೆ ಮನೆಯಿಂದ ಕ್ಯಾರಿಯರ್ ಬರುತ್ತಿತ್ತು. ಊಟ ಮುಗಿಸಿದ ಬಳಿಕ ನಮ್ಮ ಸಂಸ್ಥೆಯ ಅಂಗಳದಲ್ಲಿಯೇ ನಾಲ್ಕು ಸುತ್ತು ಓಡಾಡಿ ಪುನಃ ತಮ್ಮ ಕೋಣೆ ಸೇರುತ್ತಿದ್ದರು. ಕರಡು ತಿದ್ದುವ ಕೆಲಸವಿದ್ದರೆ ಮಧ್ಯಾಹ್ನ ಹನ್ನೆರಡು ಗಂಟೆಗೆ ಮತ್ತು ಸಂಜೆ ನಾಲ್ಕು ಗಂಟೆಗೆ ಟೀ ತರಿಸುತ್ತಿದ್ದರು. ಅವರು ಎಂದಿಗೂ ಪರರ ಹಣದಲ್ಲಿ ಟೀ ಕುಡಿದವರಲ್ಲ. ನಾವು ಚಹಾ ಬೇಡವೆಂದರೆ 'ನಿಮ್ಮ ಆಯಸ್ಸು ಕಡಿಮೆಯಾಗುವುದಿಲ್ಲ ಕುಡಿಯಿರಿ' ಎಂದು ಹೇಳುತ್ತಿದ್ದರು. ಇವರ ಚಹಾ ಅತಿಥ್ಯದಿಂದ ಆಕರ್ಷಿತರಾಗಿ ಕೆಲವು ಸ್ನೇಹಿತರು ಟೀ ಸಮಯಕ್ಕೆ ಆಗಮಿಸುತ್ತಿದ್ದುದೂ ಉಂಟು. ಉಳಿದ ಸಮಯದಲ್ಲಿ ಒಂದು ನಿಮಿಷವನ್ನೂ ಪೋಲುಮಾಡದೆ ಕೆಲಸದಲ್ಲಿ ನಿರತರಾಗಿರುತ್ತಿದ್ದರು.

ಕನ್ನಡ ಅಧ್ಯಯನ ಸಂಸ್ಥೆ ತನ್ನ ಉತ್ತುಂಗ ಸ್ಥಿತಿಯಲ್ಲಿದ್ದಂತಹ ಕಾಲದಲ್ಲಿ ಬಸವಾರಾಧ್ಯರು ಅಲ್ಲಿ ಉಪನಿರ್ದೇಶಕರಾಗಿದ್ದುದು ಅವರ ಸುದೈವವೆನ್ನಬೇಕು. ಆಗ ಅಧ್ಯಯನ ಸಂಸ್ಥೆಯ ನಿರ್ದೇಶಕ ಪೀಠದಲ್ಲಿದ್ದವರು ಹಾ.ಮಾ. ನಾಯಕರು. ಕನ್ನಡಕ್ಕೆ ಸಂಬಂಧಿಸಿದ ಹಲವು ಯೋಜನೆಗಳು ಸಾಕಾರಗೊಳ್ಳುವ ಸಮಯ ಅದು. ಹಾಗಾಗಿ ಸಂಸ್ಥೆಯ ಉದ್ಯೋಗಿಗಳೆಲ್ಲ ಬಿಡುವಿಲ್ಲದಂತೆ ದುಡಿಯುತ್ತಿದ್ದರು. ಸಂಪಾದನ ವಿಭಾಗದಲ್ಲಿಯೇ ಏಳು ಮಂದಿ ಕಾರ್ಯ ನಿರತರಾಗಿದ್ದರು. ಸಂಪಾದನ ವಿಭಾಗದ ಪ್ರಕಟಣೆಗಳ ಸಂಖ್ಯೆ ಏರುಗತಿಯಲ್ಲಿತ್ತು. ಇದರಲ್ಲಿ ಬಸವಾರಾಧ್ಯರ ಪಾತ್ರವೂ ವಿಶೇಷವಾಗಿತ್ತೆಂಬುದನ್ನು ಮರೆಯುವಂತಿಲ್ಲ. ಪುನರ್ಮುದ್ರಣಗಳು, ಹೊರಗಿನವರು ಸಂಪಾದಿಸಿದ ಕೃತಿಗಳೂ ಇವರ ಸಂದರ್ಭದಲ್ಲಿಯೇ ಹೊರಬಂದವು. ನಾನು ಸಂಸ್ಥೆಗೆ ಸೇರಿದಾಗ ವಿಭಾಗದ ವತಿಯಿಂದ ಜಗನ್ನಾಥ ವಿಜಯದ ಪುನರ್ಮುದ್ರಣ ಮತ್ತು ಡಿ.ಕೆ. ಭೀಮಸೇನರಾಯರ ಶಬ್ದಮಣಿದರ್ಪಣದ ಪರಿಷ್ಕರಣಗಳು ಮುದ್ರಣಗೊಳ್ಳುತ್ತಿದ್ದವು. ಜಗನ್ನಾಥ ವಿಜಯವನ್ನು ಹಿಂದಿನ ಆವೃತ್ತಿಗೆ ಅನುಗುಣವಾಗಿ ಮುದ್ರಿಸಿ ನಮ್ಮ ಕೆಲಸ ಹಗುರಗೊಳಿಸಿಕೊಳ್ಳಬಹುದಾಗಿತ್ತು. ಆದರೆ ಬಸವಾರಾಧ್ಯರು ಕೆಲಸ ಮಾಡುವ ಕ್ರಮ ಬೇರೆಯಾಗಿತ್ತು. ಮಾಡುವ ಕೆಲಸ ಸಮರ್ಪಕವಾಗಿರಬೇಕೆಂಬುದು ಅವರ ಧ್ಯೇಯ. ಹಿಂದಿನ ಆವೃತ್ತಿಯಲ್ಲಿರುವ ಅನುಮಾನಾಸ್ಪದ ಪಾಠಗಳಿರುವೆಡೆ ಪ್ರಶ್ನಾರ್ಥಕ ಚಿಹ್ನೆಯನ್ನು ಪೆನ್ಸಿಲ್‌ನಲ್ಲಿ ಹಾಕಲು ಹೇಳುತ್ತಿದ್ದರು. ಅನಂತರ ಹಸ್ತಪ್ರತಿಯಲ್ಲಿ ಆ ಭಾಗವನ್ನು ಹುಡುಕಿ ಅಲ್ಲಿಯ ಪಾಠದ ಜೊತೆ ತಾಳೆನೋಡಬೇಕಾಗಿತ್ತು. ನಿಘಂಟು ರಚನೆಯಲ್ಲಿ ಪರಿಣತಿ ಇದ್ದ ಅವರು ಯಾವುದೇ ಶಬ್ದದ ನಿಷ್ಪತ್ತಿಯನ್ನು ಚೆನ್ನಾಗಿ ವಿವರಿಸುತ್ತಿದ್ದರು. ನಿಘಂಟುವಿನಲ್ಲಿ ಆ ಶಬ್ದ ಇದೆಯೇ ಎಂಬುದನ್ನು ಪರಿಶೀಲಿಸಿದ ಬಳಿಕವೇ ಕರಡುಗಳಿಗೆ ಮುದ್ರಣ ಮಾಡಲು ಅನುಮತಿ ನೀಡುತ್ತಿದ್ದರು. ಹೊಸದಾಗಿ ಸೇರಿಕೊಂಡ ನಾನು ಅವರಿಂದ ಕರಡು ತಿದ್ದುವುದನ್ನು, ನಿಘಂಟು ಪರಿಶೀಲಿಸುವುದನ್ನು ಕ್ರಮವಾಗಿ ಕಲಿತುಕೊಂಡೆನೆಂದು ಹೇಳಬಹುದು. ಡಿ.ಕೆ. ಭೀಮಸೇನರಾಯರು ಹೊಸ ಹಸ್ತಪ್ರತಿಯನ್ನು ಬಳಸಿಕೊಂಡು ತಮ್ಮ ಶಬ್ದಮಣಿದರ್ಪಣದ ಆವೃತ್ತಿಯನ್ನು ಸಿದ್ಧಪಡಿಸಿದ್ದರೂ ಅದು ಅವರ ಮರಣೋತ್ತರದಲ್ಲಿ ಪ್ರಕಟಗೊಳ್ಳುತ್ತಿದ್ದ ಕಾರಣ ಸಮಸ್ಯೆಗಳು ಹಾಗೇ ಉಳಿದಿದ್ದವು. ಆ ಸಂದರ್ಭದಲ್ಲಿ ಸಮಸ್ಯೆಗಳಿರುವೆಡೆ ಡಿ.ಎಲ್. ನರಸಿಂಹಾಚಾರ್ಯರ ಶಬ್ದಮಣಿದರ್ಪಣ ಆವೃತ್ತಿಯನ್ನು ಹಾಗೂ ಕಾವ್ಯಾವಲೋಕನಗಳನ್ನು ಪಕ್ಕದಲ್ಲಿಟ್ಟುಕೊಂಡೇ ಕರಡು ತಿದ್ದುತ್ತಿದ್ದೆವು. ಹೀಗೆ ಬಸವಾರಾಧ್ಯರು ಪಾಠಶುದ್ಧತೆಗೆ ಬಹಳ ಮಹತ್ವ ನೀಡುತ್ತಿದ್ದರು.

ಬಸವಾರಾಧ್ಯರ ಅವಧಿಯಲ್ಲಿ ಸಂಪಾದನ ವಿಭಾಗದ ಸಂಪಾದಕರ ಗ್ರಂಥಗಳಲ್ಲದೆ ಹೊರಗಿನ ವಿದ್ವಾಂಸರು ಸಂಪಾದಿಸಿಕೊಟ್ಟ ಕೃತಿಗಳೂ ಪ್ರಕಟಗೊಂಡಿದ್ದು ವಿಶೇಷ. ಈ ನಿಟ್ಟಿನಲ್ಲಿ ಉಮಾಪತಿಯವರು ಸಂಪಾದಿಸಿದ ಉತ್ತರದೇಶದ ಬಸವಲಿಂಗನ ಬಸವೇಶ್ವರ ಪುರಾಣದ ಕಥಾಸಾಗರ, ಕೆ. ರಾಘವೇಂದ್ರರಾಯರು ಹಾಗೂ ಡಿ.ಕೆ. ಭೀಮಸೇನರಾಯರು ಸಂಪಾದಿಸಿದ ಮಹಾಭಾರತ ಯುದ್ಧಪಂಚಕ ಇತ್ಯಾದಿ ಗ್ರಂಥಗಳು ಪ್ರಕಟವಾದುದನ್ನು ಇಲ್ಲಿ ಉಲ್ಲೇಖಿಸಬಹುದು.

ಸ್ನೇಹ ಮತ್ತು ಸಜ್ಜನಿಕೆ ಬಸವಾರಾಧ್ಯರ ವ್ಯಕ್ತಿತ್ವದ ಗುಣಗಳಾಗಿವೆ. ಅವರಿಗೆ ಕರ್ನಾಟಕದಾದ್ಯಂತ ಸ್ನೇಹಿತರಿದ್ದರು. ಈ ಸ್ನೇಹಬಲದಿಂದಲೇ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಲು ಸಾಧ್ಯವಾಯಿತು. ಮೈಸೂರಿಗೆ ಯಾರೇ ಸ್ನೇಹಿತರು ಬರಲಿ ಅವರನ್ನು ಮಾತನಾಡಿಸದೆ ಹೋಗುತ್ತಿರಲಿಲ್ಲ. ಪ್ರೊ. ಹಂಡಿ, ಪ್ರೊ. ತಿಪ್ಪೇರುದ್ರಸ್ವಾಮಿ, ಪ್ರೊ. ಸಾಸನೂರ, ಪ್ರೊ. ಎಂ.ಎಂ. ಕಲಬುರ್ಗಿ, ಪ್ರೊ. ಚಿದಾನಂದಮೂರ್ತಿ -ಇವರೇ ಮೊದಲಾದವರನ್ನು ಬಸವಾರಾಧ್ಯರ ಛೇಂಬರಿನಲ್ಲಿ ಕಾಣಬಹುದಿತ್ತು. ಸಂಸ್ಥೆಯಲ್ಲಿ ಅವರು ಅಜಾತಶತ್ರುಗಳು. ಹಿರಿಯ ಕಿರಿಯರೆನ್ನದೆ ಸಂಸ್ಥೆಯಲ್ಲಿ ಎಲ್ಲರಿಗೂ ಅವರು ಸ್ನೇಹಿತರು. ಇಷ್ಟಾದರೂ ಇವರು ಕಛೇರಿಯ ವೇಳೆಯಲ್ಲಿ ಬೇರೆಯವರ ಸ್ಥಳಕ್ಕೆ ಹೋಗಿ ಮಾತನಾಡುತ್ತ ಕುಳಿತದ್ದನ್ನು ಯಾರೂ ಕಂಡಿರಲಿಲ್ಲ. ಇಂಥ ಸಂಗತಿಗಳು ನಮ್ಮಂಥ ಕಿರಿಯರ ಮೇಲೆ ಪ್ರಭಾವ ಬೀರಿದ್ದಂತು ಸತ್ಯ. ಇಂದಿಗೂ ಕಛೇರಿ ವೇಳೆಯಲ್ಲಿ ಅಕಾರಣವಾಗಿ ಸಹೋದ್ಯೋಗಿಗಳೊಡನೆ ಹರಟಲು ಕೂರುವುದೆಂದರೆ ಮನಸ್ಸಿಗೆ ಹಿಡಿಸದು.

ಬಸವಾರಾಧ್ಯರು ತಮ್ಮ ಸೇವೆಯ ಕಡೆಯ ದಶಕದಲ್ಲಿ ಆರಾಧ್ಯ ಚಾರಿತ್ರ, ಚತುರಾಚಾರ್ಯ ಪುರಾಣ, ನವಮುಗ್ಧಲೀಲೆ, ಧರ್ಮನಾಥ ಪುರಾಣ, ದೇವಲಾಪುರದ ನಂಜುಂಡನ ಕೃತಿಗಳುಈ ಗ್ರಂಥಗಳನ್ನು ಪ್ರಕಟಿಸಿದರು. ಇವುಗಳ ಸಂಪಾದನಕಾರ್ಯವನ್ನು ಸಮೀಪದಿಂದ ಗಮನಿಸುವ ಅವಕಾಶ ನನ್ನದಾಗಿತ್ತು. ಒಂದೊಂದು ಹಸ್ತಪ್ರತಿಯ ಪಾಠಗಳನ್ನೂ ಒಂದೊಂದು ಬಣ್ಣದ ಇಂಕ್‌ನಲ್ಲಿ ನಮೂದಿಸಲಾಗುತ್ತಿತ್ತು. ಪ್ರತಿಯೊಂದು ಗ್ರಂಥದ ಪೀಠಿಕೆ ಬರೆಯುವ ಸಂದರ್ಭದಲ್ಲಿ ತೌಲನಿಕ ಅಭ್ಯಾಸಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿತ್ತು. ಬಸವಾರಾಧ್ಯರು ಡಿ.ಎಲ್.ಎನ್ ಗರಡಿಯಲ್ಲಿ ಪಳಗಿದಂಥವರು. ಹಾಗಾಗಿ ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ವಿದ್ವತ್ತಿನ ಬಗೆಗೆ ಗೌರವ ಅವರಲ್ಲಿತ್ತು. ಇದು ಗ್ರಂಥಸಂಪಾದನೆಯಂಥ ಶ್ರಮಪೂರ್ಣ ಕಾರ್ಯವನ್ನು ಕೈಗೊಳ್ಳಲು ಪೂರಕವಾಯಿತು.

ಬಸವಾರಾಧ್ಯರು ತಮ್ಮ ಸಹಾಯಕ ಸಿಬ್ಬಂದಿಗಳೊಡನೆ ನಡೆದುಕೊಳ್ಳುತ್ತಿದ್ದ ರೀತಿ ಅನನ್ಯವಾದುದು. ಅವರು ನಮ್ಮ ಮೇಲಧಿಕಾರಿಯಾಗಿದ್ದರೂ ಎಂದಿಗೂ ಅಧಿಕಾರ ಶಾಹಿಯ ದರ್ಪವನ್ನು ತೋರಿಸಿದವರಲ್ಲ. ಹಾಗೆಂದು ನಮ್ಮನ್ನು ಸ್ವೇಚ್ಛೆಯಾಗಿ ಬಿಟ್ಟಿದ್ದರು ಎಂಬ ಅರ್ಥವಲ್ಲ. ಪ್ರೀತಿ ವಿಶ್ವಾಸದಿಂದಲೇ ಕೆಲಸಕ್ಕೆ ತೊಡಗಿಸುತ್ತಿದ್ದರು. ನನ್ನ ಪ್ರಥಮ ಸಂಪಾದಿತ ಕೃತಿ 'ಪುರಾತನರ ಚರಿತೆ' ಪ್ರಕಟವಾದಾಗ "ಕೆಲಸಕ್ಕೆ ಸೇರಿದ ಒಂದು ವರ್ಷದಲ್ಲಿಯೇ ಪುಸ್ತಕ ತಂದಿದ್ದೀರಿ, ಹೀಗೆಯೇ ಕೆಲಸ ಮಾಡಿದರೆ ನಿಮ್ಮ ಸರ್ವೀಸ್ ಮುಗಿಯುವ ಹೊತ್ತಿಗೆ ಬೇಕಾದಷ್ಟು ಪುಸ್ತಕ ತರಬಹುದು" ಎಂಬ ಪ್ರೋತ್ಸಾಹದ ನುಡಿಗಳನ್ನಾಡಿದ್ದರು. ಬಸವಾರಾಧ್ಯರ ಅಕ್ಷರಗಳು ಸುಂದರವಾಗಿದ್ದರೂ ನಮ್ಮ ಅಕ್ಷರಗಳನ್ನು ನೋಡಿ ಮನಸಾರೆ ಪ್ರಶಂಸೆಗೈದು ಅಚ್ಚುಕಟ್ಟಾಗಿ ಕೆಲಸಮಾಡುವುದನ್ನು ಕಲಿಸಿದರು.

ಬಸವಾರಾಧ್ಯರು ನಮ್ಮ ವೈಯಕ್ತಿಕ ಯೋಗಕ್ಷೇಮಗಳನ್ನೂ ವಿಚಾರಿಸುತ್ತಿದ್ದರು. ಆಸ್ಪತ್ರೆ ಸೇರಿದ ಸಂದರ್ಭಗಳಲ್ಲೆಲ್ಲ ಬಂದು ಸಾಂತ್ವನದ ಮಾತುಗಳನ್ನಾಡಿ ಹೋಗುತ್ತಿದ್ದರು. ಹೀಗೆ ಮಾನವೀಯತೆಯುಳ್ಳ ಮಾದರಿ ಅಧಿಕಾರಿಯಾಗಿ ಕಿರಿಯಳಾಗಿ ಬಂದ ನನ್ನಂಥವರಿಗೆ ತಮ್ಮ ನಡೆನುಡಿಗಳಿಂದ ಮಾರ್ಗದರ್ಶಕರಾಗಿ ಸಂಶೋಧನೆಯಲ್ಲಿ ತೊಡಗುವಂತೆ ಮಾಡಿದರು. ಇಂಥವರೊಡನೆ ಕೆಲಸ ಕಲಿಯುವ, ಕೆಲಸಮಾಡುವ ಅವಕಾಶ ದೊರೆತದ್ದು ನಮ್ಮ ಭಾಗ್ಯವೆನ್ನಬಹುದು.

XXX

'ಸಹೃದಯಿ' ಪ್ರೊ. ಎನ್. ಬಸವಾರಾಧ್ಯರು

-ವಿಜಯಶ್ರೀ

ಸಜ್ಜನಿಕೆ, ಸರಳತೆ, ಸೌಜನ್ಯ, ಪಾಂಡಿತ್ಯ, ಪ್ರಬುದ್ಧತೆ, ಕಲೆ, ಜೊತೆಗೆ ಸಹೃದಯತೆ, ಮಾನವೀಯತೆ ಇವೆಲ್ಲ -ಒಂದೇ ಕಡೆ ಇರುವುದು ಅಸಾಧ್ಯ. ಕೆಲವಡೆ ಪಾಂಡಿತ್ಯ, ಪ್ರತಿಭೆ, ಉನ್ನತಸ್ಥಾನ ಇದ್ದೆಡೆ ಉಳಿದ 'ಗುಣ'ಗಳು ಅದು ಹೇಗೋ ಮರೆಯಾಗಿ ಬಿಡುತ್ತವೆ. ಪರಿಚಿತರೂ ಅಪರಿಚಿತರಾಗುತ್ತಾರೆ. ಉನ್ನತ ಸ್ಥಾನದವರೊಂದಿಗಿದ್ದಾಗ ತಮಗಿಂತ ಕೆಳಸ್ತರದಲ್ಲಿರುವ ಆತ್ಮೀಯರೂ ಅವರ ದೃಷ್ಟಿಗೆ ಬೀಳುವುದಿಲ್ಲ. ಒಬ್ಬ ಸಾಮಾನ್ಯ ವ್ಯಕ್ತಿಯನ್ನೆ ಉನ್ನತಸ್ಥಾನದಲ್ಲಿ ಕೂರಿಸಿ ನೋಡಿ ನಾಲ್ಕು ದಿನದಲ್ಲಿ ಆ ವ್ಯಕ್ತಿ ಸಾಮಾನ್ಯತೆ ಕಳೆದುಕೊಂಡು ಅಸಾಮಾನ್ಯ ರೀತಿಗೇರಿ ಬಿಡುತ್ತಾನೆ. ಹಾಗೆಂದು ಎಲ್ಲರೂ ಹಾಗೇ ಇರುವುದಿಲ್ಲ. ನಾನು ಮೇಲೆ ಹೇಳಿದ ಎಲ್ಲ ಗುಣಗಳನ್ನು ಒಳಗೊಂಡೂ ಸಾಮಾನ್ಯರಲ್ಲಿ ಸಾಮಾನ್ಯರಾಗಿ, ಸಹೃದಯರಾಗಿ, ವಿನಯವಂತ-ರಾಗಿರುವವರೂ ಇರುತ್ತಾರೆ ; ಆದರೆ ಬೆರಳೆಣಿಕೆಯಲ್ಲಿ. ಈ ಪೀಠಿಕೆಗೆ ಕಾರಣವಿಷ್ಟೆ! ಒಬ್ಬ ಲೇಖಕಿಯಾಗಿ ಈ ಎಲ್ಲ ತರಹದ ವ್ಯಕ್ತಿತ್ವಗಳನ್ನು ನೋಡಿದ್ದೇನೆ. ಧೀಮಂತ ಪಾಂಡಿತ್ಯ ಪ್ರತಿಭೆ ವಿದ್ವತ್ತುಗಳಿಂದ ಶೋಭಿತರಾಗಿ, ವಯಸ್ಸಿನಲ್ಲಿ ನನ್ನ ಪಿತೃಸಮಾನರಾದ ಮಾತ್ರ ಸಮಾನರಾದ ಅನೇಕ ಹಿರಿಜೀವಗಳ ಪ್ರೀತಿ-ಆಶೀರ್ವಾದದಿಂದ ನಾನು ಬೆಳೆದಿದ್ದೇನೆ. ಅವರ ಸಹೃದಯತೆ ಕಂಡು ಬೆರಗಾಗಿ ಭಾವುಕಳಾಗಿದ್ದೇನೆ. ಒಂದೇ ಭೇಟಿಯಲ್ಲಿ ಎಷ್ಟೋ ಕಾಲದ ಆಪ್ತಬಂಧುವಿನಂತೆ ನನ್ನನ್ನು ಕಂಡವರಿದ್ದಾರೆ. ಅವರಲ್ಲಿ ಧೀಮಂತ ಪಾಂಡಿತ್ಯ ಪ್ರಭುಗಳಾದ ಹಿರಿಯ ಶ್ರೀ ಎನ್. ಬಸವಾರಾಧ್ಯರು ಒಬ್ಬರು. ಇದು ಉತ್ಪ್ರೇಕ್ಷೆ ಅಥವಾ ಹೊಗಳಿಕೆಗೆ ಹೇಳಿದ ಮಾತಗಳಲ್ಲ. ನನ್ನ ಅಂತರಂಗ ಮೊದಲು ಭೇಟಿಯಲ್ಲೇ ಹೇಳಿಕೊಂಡು ಇದುವರೆಗೂ ಅಲ್ಲೇ ಉಳಿಸಿಕೊಂಡಿರುವ ಮಾತುಗಳು. ಇಂದು ಬರಹ ರೂಪಕ್ಕಿಳಿದಿವೆ.

ಐದು ವರ್ಷಗಳ ಹಿಂದಿನ ಮಾತು. ನಾನು ಶಿಕಾರಿಪುರ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದೆ. ಶ್ರೀ ಬಸವಾರಾಧ್ಯರನ್ನು -ನಾನು ಸಾಹಿತ್ಯ ಪರಿಷತ್ತಿನ ಆಜೀವ

ಸದಸ್ಯಳಾಗಿದ್ದರೂ ಯಾರೂ ಪರಿಚಯಿಸಿರಲಿಲ್ಲ. ದೂರದಿಂದಲೆ ಸಭೆ-ಸಮಾರಂಭಗಳಲ್ಲಿ ನೋಡಿದ್ದಷ್ಟೆ ಗೊತ್ತು. ಸಮ್ಮೇಳನಕ್ಕೆ ಅವರು ಬಂದರು. ಬರುವಾಗ ಶ್ರೀ ಕೆ. ವಾಸುದೇವಾಚಾರ್‌ರಿಂದ ನನ್ನ ವಿಚಾರ ತಿಳಿದುಕೊಂಡು ಬೆರಗಾಗಿದ್ದಾರೆ. ನನ್ನ ಒಂದು ಗಂಟೆಗೂ ಮೀರಿದ ಅಧ್ಯಕ್ಷ ಭಾಷಣವನ್ನ ಗಂಭೀರ ತಲ್ಲೀನತೆಯಿಂದ ಕೇಳಿದರು. ನನಗೋ ಒಳಗೇ ಅಳುಕು. ಎಂತೆಂತಹ ಪಾಂಡಿತ್ಯ ಪೂರ್ಣ ಭಾಷಣಗಳನ್ನು ಕೇಳಿರ್ತಾರೆ. ಅವರು ಸ್ವತಃ ಪಾಂಡಿತ್ಯಪೂರ್ಣ ವ್ಯಕ್ತಿತ್ವದ ವ್ಯಕ್ತಿ ಎಂದು. ಜೊತೆಗೆ ನನ್ನ ತಂದೆ ವಯಸ್ಸಿನವರು. ಭಾಷಣ ಮಾಡಿಬರುತ್ತಿದ್ದಂತೆ ತುಂಬಾ ಚೆನ್ನಾಗಿ 'ಮಾತನಾಡಿದೆಯಮ್ಮಾ' ಎಂದರು. ನಾನು ಸಂಕೋಚದಿಂದ ತಲೆತಗ್ಗಿಸಿದೆ. ಅವರ ಭಾಷಣದಲ್ಲಿ ಉದ್ದಕ್ಕೂ ನನ್ನ ಅಭಿನಂದಿಸುತ್ತ, ಭಾಷಣದ ಕೆಲವು ಮಾತುಗಳನ್ನು ಉದಾಹರಿಸಿ ಹೊಗಳಿದಾಗಲಂತೂ ನಾನು ನೆಲ ನೋಡುತ್ತಿದ್ದೆ. ಕೊನೆಯಲ್ಲಿ 'ಇಂತಹ ಸೋದರಿಯ ಪರಿಚಯ' ನನ್ನ ಅಧ್ಯಕ್ಷಾವಧಿಯ ಕೊನೆಯಲ್ಲಿ ಆಗುತ್ತದೆ. ಇದುವರೆಗೂ ಯಾಕೆ ಯಾರೂ ನನಗೆ ಇವರನ್ನು ಪರಿಚಯಿಸಲಿಲ್ಲ? ಎಂದೂ ಕೇಳಿದರು (ಕೆಲಬಾರಿ ಕೆಲವೊಂದು ಕಾರಣಗಳಿಗಾಗಿ...ನಾವು, ನನ್ನಂಥವರು ದೂರ ಇಡಲ್ಪಡುತ್ತೇವೆ ನಾನಾಗಿಯೆ ಹೋಗಿ ಇಂಥವಳು ಎಂದು ಹೇಳಿಕೊಳ್ಳುವಲ್ಲಿ ಇಂದಿಗೂ ನನಗೆ ಸಂಕೋಚವಿದೆ. ಹೀಗೆ ಶ್ರೀ ಬಸವಾರಾಧ್ಯರಂತಹ ಹಿರಿಯರು, ಪಂಡಿತರು ನನ್ನನ್ನು ಕಾರ್ಯಕ್ರಮಗಳಲ್ಲಿ ಗುರುತಿಸಿದ್ದರಿಂದಲೆ ನನಗೆ ಹೆಚ್ಚು ಸಹೃದಯರ ಪರಿಚಯವಾಗಿರುವುದು). ನಂತರ ಶಾಲು ಹೊದಿಸಿ ಅಭಿನಂದಿಸಿ, ಆಶೀರ್ವದಿಸಿದ್ದು ಆ ಸಮ್ಮೇಳನದ ಏಕೈಕ ಮರೆಯಲಾಗದ ಘಟನೆಯಾಗಿ ನನ್ನಲ್ಲಿ ಉಳಿದಿವೆ. ನಾನು ಭಾಷಣ ಮಾಡುವಾಗಲೆ ಯಾರನ್ನೋ ಕಳಿಸಿ ಶಾಲು ತರಿಸಿದ್ದಾರೆ. ಆ ಸಹೃದಯರ ಆಶೀರ್ವಾದ ಸದಾ ನನ್ನ ಶಿರದ ಮೇಲಿರಲಿ ಎಂದು ಬಯಸುವೆ. ನಾನು ವಯಸ್ಸಿನಲ್ಲಿ ಕಿರಿಯಳು. "ಮಹಿಳಾ" "ಲೇಖಕಿ"ಎಂಬ ಕಾರಣದಿಂದ ಅನೇಕ ಬಾರಿ ತಾವು ಪ್ರಬುದ್ಧರು, ಬುದ್ಧಿವಂತರು, ಬುದ್ಧಿಶಾಲಿಗಳೆಂದು ನಂಬಿದವರಿಂದ ಒಂದು ರೀತಿಯ ಅವಜ್ಞೆಗೆ ಒಳಗಾಗಿದ್ದೇನೆ. ಸಮ್ಮೇಳನದ ಅನೇಕ ಸಂದರ್ಭಗಳಲ್ಲಿ ಆದದ್ದು ಹಾಗೆ. ಆದರೆ ಶ್ರೀ ಬಸವರಾಧ್ಯರಂತಹ ಸಹೃದಯರು ನನ್ನನ್ನು ಸಂಪೂರ್ಣವಾಗಿ ಅಭಿಮಾನದಿಂದ ಆದರಿಸಿ ಗೌರವಿಸಿದ್ದು ಅವರ ಹಿರಿಯ ವ್ಯಕ್ತಿತ್ವಕ್ಕೆ, ಪರಿಪೂರ್ಣತೆಗೆ, ಸಹೃದಯತೆಗೆ ಸಾಕ್ಷಿ. ಅವರ ಸರಳ, ಸಹೃದಯ ವ್ಯಕ್ತಿತ್ವ ಅಚ್ಚೊತ್ತಿದಂತೆ ನನ್ನಲ್ಲಿ ಉಳಿಯಿತು. ಸದ್ಯ ಸೋದರ ಜಿ.ಕೆ. ಸುರೇಶ್‌ಕುಮಾರ್‌ರವರು ಭಾವಚಿತ್ರ ತೆಗೆಸಿದರು. ಅದು ನನ್ನ ಸದಾ ನೆನಪಿನ ಸಂಗ್ರಹದಲ್ಲಿದೆ. ಅವರು ತೆರಳುವಾಗಲೂ 'ಈ ವಯಸ್ಸಿಗೆ ಅದೆಷ್ಟು ಸಾಧನೆ ಮಾಡಿದ್ದಿಯಮ್ಮ. ನಿಮ್ಮ ಭೇಟಿಯಾಗಿದ್ದು ತುಂಬಾ ಸಂತಸ ತಂದಿವೆ. ಮತ್ತೆ ಖಂಡಿತಾ ಭೇಟಿಯಾಗೋಣ' ಎಂದು ಹೇಳಿ ಹೋದರು. ಹಾಗೆ ಹೇಳಿದ ಎಷ್ಟೊ ಜನ ಮರೆತಿರಬಹುದು. ಇವರು ಮಾತ್ರ ಮರೆಯಲಿಲ್ಲ. ಅದೇ ಅವರ ಹಿರಿಹೃದಯದ ಸಹೃದಯತೆ.

ಹಳೆಗನ್ನಡದ ಅಪ್ರತಿಮ ವಿದ್ವಾಂಸರಾದ ಇವರು ಹೊಸಗನ್ನಡ ಸಾಹಿತ್ಯವನ್ನಾಗಲಿ, ಮಹಿಳಾ ಸಾಹಿತ್ಯಗಳೆಂದಾಗಲಿ ಮೂಗುಮುರಿದವರಲ್ಲ. ಯಾರಲ್ಲಿ ಪ್ರತಿಭೆಯಿದೆಯೋ ಅವರ ಬರಹವನ್ನ ಪ್ರೋತ್ಸಾಹಿಸುತ್ತ, ಗೌರವಿಸುತ್ತ ಬಂದಿರುವುದನ್ನು ನಾವು ಕಾಣುತ್ತಾ ಬಂದಿದ್ದೇವೆ. ನನ್ನಂತಹ ಕಿರಿಯರಿಗಂತೂ ಇವರ ಗೌರವಪೂರ್ಣ ಪ್ರೋತ್ಸಾಹ. ಎಂತಹ ಕಷ್ಟ ಕಾಲದಲ್ಲೂ ಬರವಣಿಗೆಯಲ್ಲಿ ನಿರತರಾಗುವಂತೆ ಮಾಡುತ್ತದೆ. ನಮ್ಮ ಸಂಸ್ಥೆ 'ಪ್ರತಿಭಾರಂಗ' ಬೆಂಗಳೂರಿನಲ್ಲಿ ನನ್ನ ೭೫ (ಎಪ್ಪತ್ತೈದು)ನೆ ಕಾದಂಬರಿ ಬಿಡಗಡೆ ಹಮ್ಮಿಕೊಂಡಾಗ ಕಾರ್ಯಕ್ರಮದ ಉದ್ಘಾಟನೆಗೆ ಈ ಸಹೃದಯ ಹಿರಿಯರೆ ಸೂಕ್ತ ಎಂದು ಎಲ್ಲರು ನಿರ್ಧರಿಸಿದರು. ನಾನು ಫೋನಿನಲ್ಲಿ ಸಂಪರ್ಕಿಸಿದಾಗ ಬೇರೇನೂ ಕಾರಣ ಹೇಳದೆ ಒಪ್ಪಿಕೊಂಡರಲ್ಲವೆ 'ಈ ವಯಸ್ಸಿಗೆ ಎಪ್ಪತ್ತೈದು ಕೃತಿಗಳನ್ನು ರಚಿಸಿದ್ದಿಯಮ್ಮ!' ಎಂದು ಅಚ್ಚರಿಪಟ್ಟರು. ಈ ಹಿರಿಯ ಮಾಗಿದ ಜೀವಗಳೆ ಹೀಗೇ ಏನೋ? ಪ್ರೊ॥ ಜಿ. ವೆಂಕಟಸುಬ್ಬಯ್ಯನವರು ನನ್ನ ಕಾದಂಬರಿಗಳ ಬಗ್ಗೆ ಶ್ರೀಮತಿ ಜ್ಯೊತ್ಸ್ನಾಕಾಮತ್‌ರವರು ನನ್ನ ಸಣ್ಣಕಥೆ ಹಾಗೂ ತಮಗೆ ಇಷ್ಟವಾದ ನನ್ನ ಇನ್ನೆರಡು ಕಾದಂಬರಿಗಳ ಬಗ್ಗೆ ಮಾತನಾಡಲು ಒಪ್ಪಿದರು. ಆ ದಿನವನ್ನು ನಾನು ನನ್ನ ಜೀವನದಲ್ಲಿ ಮರೆಯಲಾರೆ. ಇಡೀದಿನ ಸಾಹಿತ್ಯ-ಸಂಗೀತ-ಚಿತ್ರಕಲೆಗಳ ಅಭೂತಪೂರ್ವ ದಿನ. ಕಾರ್ಯಕ್ರಮ ಉದ್ಘಾಟನೆ ಮಾಡಿದ ಶ್ರೀ ಬಸವಾರಾಧ್ಯರು ನನ್ನ ಎರಡು ರೂಪಾಯಿ, ಸ್ಫೋಟಗಳ ಬಗ್ಗೆ ತುಂಬುಹೃದಯದಿಂದ ಮಾತನಾಡಿದರು. 'ಎರಡು

ರೂಪಾಯಿ' ಕಥಾ ಸಂಕಲನದಲ್ಲಿ ಅತ್ಯಂತ ಶ್ರೇಷ್ಠ ಕಥೆಗಳಿವೆ, ಅಪರೂಪವಾದ ವಿಷಯ, ವಿಚಾರಗಳಿವೆ. ಭಾಷೆ ಬಿಗಿಯಾಗಿದೆ, 'ಕೆಂಪು ರಿಬ್ಬನ್ನು' ಸಣ್ಣಕಥಾಲೋಕಕ್ಕೆ ವಿಶಿಷ್ಟ ಕೊಡುಗೆ...' ಎಂದೆಲ್ಲ ಹೇಳಿದ್ದಲ್ಲದೆ 'ಈ ವಯಸ್ಸಿಗೆ ಎಪ್ಪತ್ತೈದು ಕಾದಂಬರಿ, ಇಷ್ಟೆಲ್ಲ ಕೆಲಸ ಮಾಡಲು ಸಾಧ್ಯವಾಯಿತು ಹೇಗೆ ಎಂಬ ಗುಟ್ಟನ್ನು ಹೇಳಬೇಕು' ಎಂದರು. ಈ ಕಿರಿಯಳು ಮತ್ತಷ್ಟು ಕಿರಿಯಳಾಗಿದ್ದಳು. ನಾನು ಬರೆದದ್ದೆಲ್ಲ ಶ್ರೇಷ್ಠ ಅಥವಾ ಉತ್ತಮ ಎಂದು ಹೇಳಿಕೊಳ್ಳಲು ನಾನು ತಯಾರಿಲ್ಲ.

ಆದರೆ ಅದರಲ್ಲಿ ಒಳ್ಳೆಯ ಗುಣಗ್ರಾಹಿ ಕೃತಿಗಳೂ ಇವೆ ಎಂಬುದನ್ನು ಮಾತ್ರ ಹೇಳಬಲ್ಲೆ. ಅಷ್ಟೊಂದು ಕೃತಿಗಳನ್ನು ರಚಿಸಿದ ಗುಟ್ಟು ಬೇರೆನಿಲ್ಲ. 'ಜೀವನ'ದ ನಿರ್ವಹಣೆ. ನನ್ನ ಬರವಣಿಗೆ, ಕೃತಿಗಳ ಬಗ್ಗೆ ಆ ದಿನ ಪ್ರೊ. ಎಂ.ಎಚ್. ಕೃಷ್ಣಯ್ಯ, ಜ್ಯೋತ್ಸ್ನಾಕಾಮತ್‌ರವರು ಮೆಚ್ಚುಗೆಯೊಂದಿಗೆ ಮಾರ್ಗದರ್ಶನವನ್ನು ಮಾಡಿದರೆ, ಹಿರಿಯ ಪ್ರೊ. ವೆಂಕಟಸುಬ್ಬಯ್ಯನವರಂತೂ 'ಸ್ಫೋಟ ನನ್ನನ್ನು ಆಸ್ಫೋಟಿಸಿ ಬಿಟ್ಟಿತು. ಇದನ್ನು ಈ ಹುಡುಗಿ ಬರೆದಿದ್ದಾಳೆಂದರೆ ನಂಬಲೆ ಸಾಧ್ಯವಿಲ್ಲ' ಎಂದು ಕೃತಿಗಳನ್ನು ತುಂಬ ಸಹೃದಯತೆಯಿಂದ ವಿಮರ್ಶಿಸಿ ಮತ್ತಷ್ಟು ಕಿರಿಯಳಾಗಿಸಿದರು. ಆ ದಿನವೂ ಪ್ರೊ. ಬಸವಾರಾಧ್ಯರವರು ಜರಿಶಾಲನ್ನು ಹೊದಿಸಿ ಆಶೀರ್ವದಿಸಿದರು. ಗೋಷ್ಠಿಯ ನಂತರವೂ ಎಷ್ಟೋ ಕಾಲ ಮಾತನಾಡುತ್ತ ನಿಂತೆವು. ಅವರ ಪ್ರತಿ ಮಾತಿನಲ್ಲೂ ತುಂಬಿದ ಸರಳ ನಿಗರ್ವಿತನ, ಎತ್ತರಕ್ಕೆರಿದರೂ ಹಾಗೆ ಏರಿದ್ದೇವೆ ಎಂಬ ಹಮ್ಮು-ಬಿಮ್ಮು ಇಲ್ಲದ ವ್ಯಕ್ತಿತ್ವ ಎಷ್ಟು ಜನಕ್ಕೆ ಬಂದೀತು? ಯಾವತ್ತು ಎಲ್ಲೇ ಸಿಗಲಿ ಅದೇ ಸರಳ, ನಿಷ್ಕಳಂಕ, ಸಹೃದಯ ಭಾವ, ನಿರಾಡಂಬರ ವ್ಯಕ್ತಿತ್ವ, ಅವರ ವಿದ್ವತ್ತು, ಪ್ರಾವೀಣ್ಯತೆ ಬಗ್ಗೆ ಹೇಳಲು ನನ್ನಂಥ ಕಿರಿಯಳಿಗೆ ಅಸಾಧ್ಯ. ಅವರ ಹಿರಿತನದ ವಾತ್ಸಲ್ಯ ಅಭಿಮಾನ, ಎಲ್ಲೆ ಸಿಗಲಿ ಗೌರವದಿಂದ ಕಾಣುವುದು, 'ಮತ್ತೇನು ಬರೆದಿರಿ? ಬರೆಯುತ್ತಿರಿ' ಎಂಬ ಪ್ರೋತ್ಸಾಹ ನುಡಿಗಳು ನನ್ನನ್ನು ಸದಾ ಎಚ್ಚರಿಸುತ್ತವೆ. ತುಂಬಿದ ಕೊಡದಂತಹ ಇವರಂತಹ ಕೆಲವೇ ಸಹೃದಯರ ಸಹಕಾರದಿಂದ ನಾನು ನೋವಿನಲ್ಲಿ ಚೇತನ ತಂದುಕೊಂಡು ಬದುಕು ವಂತಾಗಿದೆ, 'ವಿಜಯಾ ವಿಜಯಾ' ಎಂದು ತಮ್ಮ ನೋವಿನ ಸಂದರ್ಭಗಳಲ್ಲಿ, ನನ್ನಿಂದಾಗಬೇಕಾದ ಕೆಲಸಗಳಿಗೆ ತುಂಬಾ ಒಳ್ಳೆಯ ಮಾತುಗಳಾಡಿ, ಕೆಲಸಮಾಡಿಸಿ ಕೊಂಡವರು. ನಾನು, ನನ್ನ ಆತ್ಮೀಯರು ಎಂದು ಗೌರವಿಸುವವರು. 'ಕಾರ್ಯಕ್ರಮ ಮಾಡಿ ನಮ್ಮ ಸಂಪೂರ್ಣ ಸಹಕಾರವಿದೆ' ಎಂದವರು. ಕೆಲವರು ದೂರವೇ ಉಳಿದಾಗ ನಮ್ಮ ಸಂಸ್ಥೆ ಸದಸ್ಯರು ಹೆದರಲಿಲ್ಲ, ಮತ್ತಷ್ಟು ಉತ್ಸಾಹಿತರಾಗಿ ಕಾರ್ಯನಿರ್ವಹಿಸಿದರು. ಅದಕ್ಕೆ ಪೂರಕವಾಗಿ ಬೆಂಗಳೂರಿನ ಕಲಾವಿದರು, ಸಾಹಿತಿ-ಕವಿಗಳು, ಧಾರವಾಹಿ ಹಾಗೂ ಚಲನಚಿತ್ರ ನಿರ್ದೇಶಕರು, ನಟ-ನಟಿಯರು, ಖ್ಯಾತ ಗಾಯಕ-ಗಾಯಕಿಯರು, ಡಾ॥ ಎಸ್.ಎಲ್. ಭೈರಪ್ಪನವರು, ಡಾ॥ ಬಸವಾರಾಧ್ಯರಂತಹ ನೂರಾರು ಸಹೃದಯಿ ವಿದ್ವಜ್ಜನರು ಇಡೀ ದಿನದ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಬರದಿದ್ದವರ ನೆನಪೇ ಬಾರದಂತೆ ಮಾಡಿದರು. ನಾನಿಲ್ಲಿ ಈ ಹಿರಿಯರ ಪಾಂಡಿತ್ಯ ವಿದ್ವತ್ ಎಲ್ಲವನ್ನು ಮೀರಿದ ಸರಳ ಸಹೃದಯ ಸಜ್ಜನಿಕೆ ಮಾನವೀಯತೆಯನ್ನು ಮಾತ್ರ ಸ್ಮರಿಸಿಕೊಳ್ಳುತ್ತ ಇವರಿಗೆ ಭಗವಂತನು ದೀರ್ಘಾಯುಷ್ಯ, ಆರೋಗ್ಯ, ಚೇತನಕೊಟ್ಟು ಕಾಪಾಡಲಿ ನನ್ನಂತಹ ಸಾವಿರಾರು ಕಿರಿಯರಿಗೆ ಹೀಗೆ ಪ್ರೋತ್ಸಾಹದ ನೀರೆರೆಯುತ್ತಿರಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ.

XXX

'ಎನಗಿಂತ ಕಿರಿಯರಿಲ್ಲ' - ಎನ್. ಬಸವಾರಾಧ್ಯ

-ಇಂದಿರಾ ಹೆಗ್ಗಡೆ

ತನಗಿಂತ ಹಿರಿಯರಾದವರ ಬಳಿ ನಿಂತು ಮಾತಾಡುವುದೆಂದರೆ ಕಿರಿಯರಿಗೆ ಸಂಕೋಚ. ಹಿರಿಯರು ಏನು ಭಾವಿಸುವರೋ ಎಂಬ ಆತಂಕ. ಅದರಲ್ಲೂ ಆ ಹಿರಿಯವ್ಯಕ್ತಿ ಸಾಹಿತಿ, ವಿದ್ವಾಂಸರಾದರೆ ಕಿರಿಯರು ಅವರ ಬಳಿ ಹೋಗಲು ಹಿಂದೇಟು ಹಾಕುವುದನ್ನು ನಾವು ಕಾಣುತ್ತೇವೆ. ನನಗಿಂತ ಕಿರಿಯರಿಲ್ಲ ಎಂದು ನಡೆನುಡಿಯಲ್ಲಿ ತೋರಿಸುವ ಎನ್. ಬಸವಾರಾಧ್ಯರ ವಿಷಯದಲ್ಲಿ ಇಂತಹ ಸಂಕೋಚ, ಹಿಂಜರಿಕೆ, ಆತಂಕಗಳನ್ನು ಇಟ್ಟುಕೊಳ್ಳುವ ಅಗತ್ಯ ಇಲ್ಲ. ಕಿರಿಯರೂ ಕೂಡಾ ಆ ಹಿರಿಯ ವಿದ್ವಾಂಸರನ್ನು 'ಆತ ತಮ್ಮ ಮಿತ್ರ' ಎಂದು ಭಾವಿಸಿ ಸಲಿಗೆಯಿಂದ ನಡಕೊಳ್ಳಬಹುದಾದಂತಹ ಅಪರೂಪದ ವ್ಯಕ್ತಿ ಬಸವಾರಾಧ್ಯರು. ಹೊಸ ಮುಖದೊಂದಿಗೆ ಮಾತನಾಡುವಾಗ ಕೂಡ ಆತ್ಮೀಯತೆಯಿಂದ ಮಾತನಾಡುವುದು ಅವರ ಗುಣ. ಆ ವ್ಯಕ್ತಿ ಹೆಣ್ಣೂ ಆಗಬಹುದು, ಗಂಡೂ ಆಗಬಹುದು. ಆದುದರಿಂದ ಹೊಸಬರು ಅವರನ್ನು ಗೌರವದಿಂದ ಅಭಿಮಾನದಿಂದ ನೋಡುತ್ತಾರೆ. ಆ ಪರಿಚಯವನ್ನು ಮತ್ತೆ ಮಿತ್ರತ್ವಕ್ಕೆ ತಿರುಗಿಸುವುದು ಬಸವಾರಾಧ್ಯ ಅವರ ಶ್ರೇಷ್ಠ ಗುಣ. ಇಲ್ಲಿ ಹಿರಿಯ ಕಿರಿಯ ಎಂಬ ಭೇದವಾಗಲೀ, ಪುರುಷ ಮಹಿಳೆ ಎಂಬ ಲಿಂಗ ಭಿನ್ನತೆಯನ್ನಾಗಲೀ ಅವರು ಇಟ್ಟುಕೊಳ್ಳುವುದಿಲ್ಲ. ಎಲ್ಲರೂ ಮಿತ್ರರು, ಸ್ನೇಹಿತರು. ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಇರುವಾಗ ಅವರ ಗುಣ ಅವರನ್ನು ಇನ್ನೂ ಜನರ ಹತ್ತಿರಕ್ಕೆ ತಂದಿತ್ತು. ನಾವು ಮತ್ತೊಬ್ಬರಲ್ಲಿ ಅವರು ಹೊಸಬರಾಗಿದ್ದರೂ ಆತ್ಮೀಯವಾಗಿ, ಆಹ್ಲಾದಕರವಾಗಿ ಮಾತನಾಡಿದರೆ ಸಾಕು ನಾವು ಅವರಿಗೆ ಮತ್ತಿನ್ನೇನೂ ಮಾಡಬೇಕಾಗಿಲ್ಲ.

ಒಬ್ಬ ವ್ಯಕ್ತಿಯ ಸಾಹಿತ್ಯಕ ಮೌಲ್ಯ, ಪಾಂಡಿತ್ಯ ಮೌಲ್ಯ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅವರ ನಿಜ ಜೀವನದ ಮೌಲ್ಯ ಕೂಡಾ. ವಿದ್ವಾಂಸರಲ್ಲದವರ ಜೊತೆ, ಪಂಡಿತರಲ್ಲದವರ ಜೊತೆ, ಸಾಹಿತಿ ಅಲ್ಲದವರ ಜೊತೆ, ಆತ ಹೇಗೆ ಬೆರೆಯುತ್ತಾನೆ, ಹೇಗೆ ಸ್ಪಂದಿಸುತ್ತಾನೆ

ಎಂಬುದು ಕೂಡ ಮುಖ್ಯ. ಹಿರಿಯ ಸಾಹಿತಿ ಹೀಗೆ ಕಿರಿಯರೊಂದಿಗೆ ಆತ್ಮೀಯತೆಯಿಂದ, ಆಪತ್ತೆಯಿಂದ ಬೆರೆಯುತ್ತಾ ಅವರ ಬರವಣಿಗೆ ಮುಂತಾದವುಗಳನ್ನು ವಿಚಾರಿಸುವುದರಿಂದ ಇಬ್ಬರಿಗೂ ಲಾಭವಿದೆ. ಆದರೆ ನಮ್ಮ ಎಲ್ಲ ಸಾಹಿತಿಗಳಲ್ಲಿ, ವಿದ್ವಾಂಸರಲ್ಲಿ ಈ ಗುಣ ನನಗೆ ಕಾಣುವುದಿಲ್ಲ. ಬಸವಾರಾಧ್ಯರು ಕಿರಿಯರ ಬರಹಗಳನ್ನು ಪ್ರೋತ್ಸಾಹಿಸುವಾಗ ಅವರ ಸಾಹಿತ್ಯಕ, ಸಾಂಸ್ಕೃತಿಕ ಕೂಟಗಳಲ್ಲಿ ಭಾಗವಹಿಸುವಾಗ, ತನ್ನ ಕಾರ್ಯಕ್ರಮಗಳಿಗೆ ಕಿರಿಯ ಮಿತ್ರರನ್ನು ಆಹ್ವಾನಿಸುವಾಗ ಈ ಪ್ರೋತ್ಸಾಹ ಗುಣ ಕಾಣುತ್ತದೆ. ಈ ಗುಣಗಳು ಕೆಲವರಲ್ಲಿ ಮಾತ್ರ ಇವೆ. ಅಂತಹ ಕೆಲವರಲ್ಲಿ ನಮ್ಮ ಬಸವಾರಾಧ್ಯರು ಒಬ್ಬರು. ಅವರ ಮೇಲಿನ ಗುಣದಿಂದಾಗಿಯೇ ನನಗೂ ಬಸವಾರಾಧ್ಯರ ಪರಿಚಯವಾಯಿತು. ಆತ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರ ಹತ್ತಿರದ ಪರಿಚಯ ನನಗೆ ಆಯಿತು. ಬಿ.ಎಂ.ಶ್ರೀ. ಶತಮಾನೋತ್ಸವ ಸಂದರ್ಭದಲ್ಲಿ ಬೆಳ್ಳೂರಿನಲ್ಲಿ ನಡೆಸಿದ ಕವಿಗೋಷ್ಠಿಯಲ್ಲಿ ನಾನೂ ಭಾಗವಹಿಸಿದ್ದೆ.

ಬಸವಾರಾಧ್ಯ ಸಾಹಿತ್ಯಕ ಕೃತಿಗಳ ಬಗ್ಗೆ ಮೌಲ್ಯಗಳ ಬಗ್ಗೆ ಅವುಗಳ ನಾನು ಬರೆಯಲು ಹೋಗುವುದಿಲ್ಲ. ಆ ಬಗ್ಗೆ ನಾನು ಹೆಚ್ಚಿಗೆ ತಿಳಿದುಕೊಂಡಿಲ್ಲ. ಆದರೆ ಅವರ ಸಂಪಾದಕೀಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹೊರತಂದ ಕನ್ನಡ ನಿಘಂಟು, ಶಬ್ದಕೋಶ ಒಂದು ಜ್ಞಾನಕೋಶವೇ ಸರಿ. ಕನ್ನಡ ನಿಘಂಟನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ. ಅನೇಕ ತುಳು ಪದಗಳಿಗೆ ತುಳು ನಿಘಂಟಿನಲ್ಲಿ ದೊರೆಯದ ಅರ್ಥಗಳನ್ನು ಕನ್ನಡ ನಿಘಂಟಿನಿಂದ ಪಡೆದಿದ್ದೇನೆ.

ಈ ನಿಘಂಟಿಗೆ ಅನೇಕ ವಿದ್ವಾಂಸರು ದುಡಿದಿರುವುದು ನಿಜ. ಆದರೆ ಪ್ರಧಾನ ಸಂಪಾದಕ ಸಮರ್ಥನಾಗಿ ಕೆಲಸಮಾಡಿದರೆ, ಅವನ ಮಾರ್ಗದರ್ಶನ, ಅಥವಾ ಆತನ ಮುಖಂಡತ್ವ ಸರಿಯಾದ ದಿಕ್ಕಿನಲ್ಲಿ ನಡೆದಾಗ ಮಾತ್ರ ಉಳಿದವರು ಸರಿಯಾದ ರೀತಿಯಲ್ಲಿ ಸ್ಪಂದಿಸಲು ಸಾಧ್ಯವಾಗುವುದು.

೭೫ ಮಳೆಗಾಲಗಳನ್ನು ಕಂಡ ಬಸವಾರಾಧ್ಯರು ಆರೋಗ್ಯವಂತರಾಗಿ ಇನ್ನೂ ೫೦ ಮಳೆಗಾಲವನ್ನಾದರೂ ಕಾಣಲಿ, ಅವರ ಜೀವನಾನುಭವನ್ನು ತನ್ನ ಬಳಿಬರುವ ಕಿರಿಯರಿಗೆ ಧಾರೆ ಎರೆಯಲಿ ಎಂದು ಹಾರೈಸುತ್ತೇನೆ.

ಸಮಚಿತ್ತದ ಮೃದುಭಾಷಿ

-ಕೆ.ಆರ್. ಪ್ರೇಮಲೀಲಾ

ಕವಿ, ಕಾದಂಬರಿಕಾರ, ಕತೆಗಾರರಿಗೆ ಸಿಗುವಷ್ಟು ಖ್ಯಾತಿ ಸಾಮಾನ್ಯವಾಗಿ ನಿಘಂಟುಕಾರರಿಗೆ, ಶಾಸ್ತ್ರಪರಿಣತರಿಗೆ ಅದೇಕೋ ಆ ಪ್ರಮಾಣದಲ್ಲಿ ಸಾಹಿತ್ಯ ಪ್ರಪಂಚ ಹಾಗೂ ಸಾಮಾನ್ಯ ಜನತೆಯಿಂದ ಸಿಗುವುದಿಲ್ಲವೆಂದು ತೋರುತ್ತದೆ. ಶ್ರೀ ಬಸವಾರಾಧ್ಯರು ಎರಡನೆಯ ಗುಂಪಿಗೆ ಸೇರಿದ ವಿದ್ವಾಂಸರಾಗಿರುವುದರಿಂದ ಈ ಮಾತು ಅವರಿಗೂ ಅನ್ವಯಿಸುತ್ತದೆ ಎನ್ನಬಹುದು.

ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿ, ಮಹಾರಾಜಾ ಕಾಲೇಜಿನಲ್ಲಿ ಅತಿರಥ ಶ್ರೇಷ್ಠ ಪ್ರಾಧ್ಯಾಪಕರ ಶಿಷ್ಯರಾಗಿ, ಇಂದಿನ ಕನ್ನಡ ಸಾರಸ್ವತ ಲೋಕದ ದಿಗ್ಗಜಗಳ ಸಹಪಾಠಿಗಳಾಗಿ ಬಸವಾರಾಧ್ಯರು ಆರಿಸಿಕೊಂಡ ಕ್ಷೇತ್ರ ಗ್ರಂಥಸಂಪಾದನೆ ಹಾಗೂ ನಿಘಂಟುರಚನಾಕಾರ್ಯ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅವರು ಸಂಪಾದಿಸಿಕೊಟ್ಟ ಹಳಗನ್ನಡ-ನಡುಗನ್ನಡ ಕೃತಿಗಳು ಹಲವಾರು. ಇಂತಹ ಕ್ಲಿಷ್ಟ ಕಾರ್ಯದಲ್ಲಿ ಅಪಾರ ಅಧ್ಯಯನ, ವಿದ್ವತ್ತು, ಸಹನೆ ಹಾಗೂ ದುಡಿಮೆ ಅತ್ಯಗತ್ಯ. ಈ ಗುಣಗಳನ್ನೆಲ್ಲ ಮೈಗೂಡಿಸಿಕೊಂಡವರು ಅವರು. ತಮ್ಮ ಕೃತಿಸಂಪಾದನಾ ಕೆಲಸದಲ್ಲಿ ಅವರು ಶಾಸ್ತ್ರೀಯ ಶಿಸ್ತುಬದ್ಧತೆಯನ್ನು, ಉತ್ಕೃಷ್ಟತೆಯನ್ನು ತೋರಿದ್ದಾರೆ. ಅವರ ಎಲ್ಲ ಸಂಪಾದಿತ ಹೊತ್ತಿಗೆಗಳಲ್ಲಿ ಅಚ್ಚುಕಟ್ಟುತನ, ನಿರ್ದುಷ್ಟತೆಯನ್ನು ಸಹೃದಯ ಓದುಗರು ಗುರುತಿಸಬಹುದಾಗಿದೆ.

ಬಸವಾರಾಧ್ಯರ ಪಾಂಡಿತ್ಯ-ಪರಿಶ್ರಮಕ್ಕೆ ದ್ಯೋತಕವಾಗಿದೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ-ಕನ್ನಡ ನಿಘಂಟು. ಭಾರತೀಯ ಭಾಷೆಗಳಲ್ಲೇ ಇಂತಹದೊಂದು ಮೇರು ಕೃತಿ ರಚಿತವಾಗಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಇದೊಂದು ಸಾಹಸ- ದುಡಿಮೆಯ ಪರಿಕಲ್ಪನೆ; ಕನ್ನಡಕ್ಕೆ ಗೌರವ ತಂದುಕೊಟ್ಟ ಕೃತಿ ಸಂಪುಟ. ಈ ಪ್ರಕಟಣ ಯೋಜನೆಯಲ್ಲಿ ಅವಿರತವಾಗಿ, ನಿಷ್ಕಾಮ ಭಾವನೆಯಿಂದ

ಪಣತೊಟ್ಟು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು ಅವರು. ಹತ್ತಾರು ಮಂದಿ ಪರಿಣತರ ಜೊತೆಗೆ ವರ್ಷಗಟ್ಟಲೆ ಕುಳಿತು ಚರ್ಚಿಸಿ, ಬರಹರೂಪಕ್ಕಿಳಿಸಿ, ತಿದ್ದಿ, ಅಂತಿಮಗೊಳಿಸಿ ಪ್ರಕಟಿಸುವ ಎದೆಗಾರಿಕೆಯಂತೂ ಬಸವರಾಧ್ಯರಂಥವರಿಗೆ ಮಾತ್ರ ಸಾಧ್ಯ. ಕನ್ನಡ ವಿದ್ವತ್‌ಲೋಕ ಅವರ ಈ ಸಾರ್ಥಕ ಸೇವೆಯನ್ನು ಬಹುಕಾಲ ನೆನೆಯುತ್ತದೆ.

ತಮ್ಮ ಸೇವಾ ನಿವೃತ್ತಿಯ ನಂತರ, ತುಂಬು ಜೀವನ ನಡೆಸುತ್ತಿರುವ ಬಸವಾರಾಧ್ಯರ ಸ್ನೇಹವಲಯ ಬಹು ದೊಡ್ಡದು. ಅವರದು ನಿರ್ವ್ಯಾಜ ಪ್ರೀತಿ, ವಿಶ್ವಾಸ. ಎಂಥದೇ ಸಂದರ್ಭದಲ್ಲಿಯೂ ಯಾರ ಮನಸ್ಸನ್ನೂ ನೋಯಿಸದ ವ್ಯಕ್ತಿತ್ವ ಅವರದು. ಕೊಂಚ ಸಂಕೋಚ ಸ್ವಭಾವದವರೆಂದು ಅವರ ಸ್ನೇಹಿತರ ಅನಿಸಿಕೆ. ಅನಗತ್ಯವಾಗಿ ತಮಗೆ ಒಗ್ಗದ ವಿಷಯಗಳಲ್ಲಿ ತಲೆ ಹಾಕದ ಸ್ವಭಾವ ಅವರದು. ಕಷ್ಟದಲ್ಲಿರುವವರ, ತೊಳಲಾಟದಲ್ಲಿರುವವರ ಬಗ್ಗೆ ಕೈಲಾದಷ್ಟು ಸಹಾಯ ಮಾಡುವ, ಕನಿಕರ ಪ್ರವೃತ್ತಿಯುಳ್ಳ ಬಸವಾರಾಧ್ಯರು ಸಜ್ಜನಿಕೆಗೆ, ಪ್ರಾಮಾಣಿಕತೆಗೆ ಹೆಸರಾದವರು. ಬೆಂಗಳೂರಿನ ಅನೇಕ ಸಂಘಸಂಸ್ಥೆಗಳೊಡನೆ ನಿಕಟ ಬಾಂಧವ್ಯವುಳ್ಳವರು. ಸಮುದಾಯದ ಅಭಿಮಾನಿಗಳು; ಸಾಮಾಜಿಕ ಒಳಿತಿನಲ್ಲಿ ನಂಬಿಕೆಯುಳ್ಳವರು. ಹಣಕಾಸಿನ ವಿಷಯದಲ್ಲಿ ಕಟ್ಟುನಿಟ್ಟಾಗಿ ನಡೆದುಕೊಳ್ಳುವುದರ ಜೊತೆಗೆ, ತಾವು ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲಿ ಸಹ ಅಂತಹದೇ ಕೈಶುದ್ಧಿಯನ್ನು ಅಪೇಕ್ಷಿಸುವಂತಹವರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಬಸವಾರಾಧ್ಯರು ಯಾವುದೇ ಪಕ್ಷಪಾತ, ಗುಂಪುಗಾರಿಕೆಯಿಲ್ಲದೆ ಕನ್ನಡದ ತೇರನ್ನು ಸದ್ದುಗದ್ದಲವಿಲ್ಲದೆ ಎಳೆದವರು. ಅವರ ಅವಧಿಯಲ್ಲಿ ಯಾರೂ ಅವರನ್ನು ಕುರಿತಂತೆ ಆಡಳಿತಾತ್ಮಕವಾಗಿಯಾಗಲಿ, ಆರ್ಥಿಕನಿರ್ವಹಣೆಯ ಬಗ್ಗೆಯಾಗಲೀ ಯಾವುದೇ ಆಪಾದನೆ ಮಾಡಲಿಲ್ಲವೆಂದೇ ಹೇಳಬಹುದು. ತಾವು ಯೋಜಿಸಿದ ಚಟುವಟಿಕೆಗಳನ್ನು ತುಂಬ ಅರ್ಥಪೂರ್ಣವಾಗಿ ಅವರು ಪೂರೈಸಿದರಲ್ಲದೆ, ಕಾಲಬದ್ಧವಾಗಿ ಅವುಗಳಿಗೊಂದು ನಿಶ್ಚಿತ ಸ್ವರೂಪ ನೀಡಿದರು. ಪರಿಷತ್ತಿನ ನಿಘಂಟು ಸಂಪುಟಗಳ ಮುದ್ರಣ, ಸಿಬ್ಬಂದಿಯ ಯೋಗಕ್ಷೇಮ, ಹಣಕಾಸು ಪೋಲಾಗದಂತೆ ನೋಡಿಕೊಳ್ಳುವಿಕೆ, ಜಿಲ್ಲಾ ಮಟ್ಟದಲ್ಲಿ ನೂರಾರು ಸಕಾರಾತ್ಮಕ, ಸೃಜನಶೀಲ ಕಾರ್ಯಕ್ರಮಗಳ ಯೋಜನೆ ಮುಂತಾದವು ಅವರಿಗೆ ಶ್ರೇಯಸ್ಸನ್ನು ತಂದುಕೊಟ್ಟವು. ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಈ ಅವಧಿಯಲ್ಲಿ ಅವರು ಸೇವಾದೀಕ್ಷೆ ಕೈಗೊಂಡಿದ್ದರೆನ್ನಬಹುದು.

ಅಂತೇಯೇ, ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ ಅವರೆಸಗಿದ ಸೇವೆ ಅನನ್ಯವಾದದ್ದು. ಅವರ ಈ ಅಭಿನಂದನಾ ಸಮಾರಂಭದ ಸಂದರ್ಭದಲ್ಲಿ ಬಸವಾರಾಧ್ಯರ ಮೈಸೂರಿನ ಸ್ನೇಹಬಳಗದ ಪರವಾಗಿ ಎಲ್ಲ ಶುಭಕಾಮನೆಗಳು!

ಗ್ರಂಥಸಂಪಾದನಾಧುರೀಣ ಎನ್. ಬಸವಾರಾಧ್ಯರು

-ಹೆಚ್.ಎಂ. ಸುಲೋಚನ ಶಾಸ್ತ್ರಿ

ನಾರಸಿಂಹನಹಳ್ಳಿಯ ನಂಜುಂಡಾರಾಧ್ಯ ಬಸವಾರಾಧ್ಯರು ತಾರೀಖು ೨೦.೨.೧೯೨೬ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ನಾರಸಿಂಹನಹಳ್ಳಿಯಲ್ಲಿ ಜನಿಸಿದರು. ತಂದೆ ಶ್ರೀಮಾನ್ ನಂಜುಂಡಾರಾದ್ಯರು, ತಾಯಿ ಶ್ರೀಮತಿ ಗಿರಿಜಮ್ಮನವರು. 'ಎನ್' ಎಂಬ ಅವರ ಹೆಸರಿನ ಮುಂದಿನ ಪ್ರಾರಂಭದ ಪದವು ಅವರ ಊರು 'ನಾರಸಿಂಹನಹಳ್ಳಿ' ಮತ್ತು ತಂದೆಯ ಹೆಸರು 'ನಂಜುಂಡಾರಾದ್ಯರು' ಎಂಬುದು ಸೂಚಕವಾಗಿ ಒಂದೇ 'ಎನ್' ಅಕ್ಷರದಲ್ಲಿ ಎರಡೂ ಹೆಸರುಗಳು ಅಂತರ್ಗತ-ಗೊಂಡಂತೆ ಇದೆ. ಕಡುಬಡತನದ ವಾತಾವರಣದಲ್ಲಿಯೆ ಬೆಳೆದುಬಂದ ಶ್ರೀ ಎನ್. ಬಸವಾರಾಧ್ಯರು ವಿದ್ಯಾರ್ಜನೆಗಾಗಿ ಕೋಲಾರವನ್ನು ಬಿಟ್ಟು ಬಂದು ಬೆಂಗಳೂರಿನಲ್ಲಿ ಇಂಟರ್ ಮುಗಿಸಿದರು. ನಂತರ ಮೈಸೂರಿಗೆ ಬಂದು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎ. ಆನರ್ಸ್ ಪದವಿ ಪಡೆದು ನಂತರ ೧೯೫೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪದವಿ ಪಡೆದರು.

೧೯೪೯-೫೫ರಲ್ಲಿ ಪ್ರಾಚ್ಯವಿದ್ಯಾಸಂಶೋಧನಾ ಸಂಸ್ಥೆಯಲ್ಲಿ ಪದವೀಧರ ತಜ್ಞರಾಗಿ ಸೇವೆ ಸಲ್ಲಿಸಿದರು. ಇಲ್ಲಿಂದ ಅವರ ವೃತ್ತಿಜೀವನ ಆರಂಭವಾಯಿತು. ಈ ಅವಧಿಯಲ್ಲಿ ಅವರ ಪ್ರಥಮ ಸಂಪಾದಿತ ಗ್ರಂಥ 'ತೊರವೆ ರಾಮಾಯಣ' ಮೊದಲ ಭಾಗದ ಪರಿಶೋಧಿತ ಗ್ರಂಥ ಸಂಪಾದನೆಯಲ್ಲಿ ಪಾಲ್ಗೊಂಡುದುಲ್ಲದೆ ಓಲೆಗರಿ ಹಸ್ತ ಪ್ರತಿಗಳು ಮತ್ತು ಐತಿಹಾಸಿಕ ದಾಖಲೆಗಳ ಸಂಗ್ರಹ ನಿರತರಾಗಿದ್ದರು. ೧೯೫೫-೭೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಕಾರ್ಯಕ್ಕಾಗಿ ನಿಯೋಜಿತರಾಗಿ ೧೯೬೩ರಲ್ಲಿ ಕನ್ನಡ-ನಿಘಂಟು ಸಂಪಾದಕರಾಗಿ ೧೯೭೦ರಿಂದ ನಿಘಂಟು ರಚನೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದರು. ೧೯೭೧ರಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ

ವಿಭಾಗದಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಪ್ರಾಚೀನ ಕನ್ನಡ ಕಾವ್ಯಗಳನ್ನು ಹೊರತರಬೇಕೆಂದುಬುದು ಅವರ ಆಸೆ. ಅದರಂತೆಯೆ ಹತ್ತಾರು ಗ್ರಂಥಗಳನ್ನು ಪರಿಷ್ಕರಿಸಿದರು.

ಇವರ ಅವಧಿಯಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಚ್ಯಕಾವ್ಯ ಮಾಲೆಯಲ್ಲಿ ನೂರುಗ್ರಂಥಗಳು ಪ್ರಕಟವಾದದ್ದು ಅವರ ಅನುಪಮ ಸೇವೆಯಾಗಿದ. ವೈಯಕ್ತಿಕವಾಗಿ ಬಸವಾರಾಧ್ಯರು ಒಟ್ಟು ೩೧ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಕೃತಿ ಸಮೂಹದಲ್ಲಿ ೨೦ ಕೃತಿಗಳು ಗ್ರಂಥಸಂಪಾದನೆಗೆ ಸಂಬಂಧಿಸಿದವು. ಅವುಗಳಲ್ಲಿ ತೊರವೆ ರಾಮಾಯಣ ಸಂಗ್ರಹ, ಚಂದ್ರಹಾಸನ ಕಥೆ, ಹರಿಶ್ಚಂದ್ರ ಸಾಂಗತ್ಯ, ೧೯೫೫ರಲ್ಲಿ ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯವು ಪಂಡಿತ ಎಸ್ ಬಸಪ್ಪನವರೊಡನೆ ಬಸವಾರಾಧ್ಯರು ಪರಿಷ್ಕರಿಸಿದ ಕೃತಿ ಜನಪ್ರಿಯವಾದುದು. ಉದ್ಭಟದೇವ ಚರಿತ್ರೆ, ತ್ರಿಪುರ ದಹನ ಸಾಂಗತ್ಯ, ಶರಣರ ಚರಿತ್ರೆ ವರ್ಣಿಸುವ ನವಮುಗ್ಧಲೀಲೆ, ೧೯೬೫ರಲ್ಲಿ ಮೈಸೂರು ಆಸ್ಥಾನದಲ್ಲಿದ್ದ ಕವಿಗಳಲ್ಲಿ ಮೈಸೂರು ಜಿಲ್ಲೆಗೆ ಸೇರಿದ ದೇವಲಾಪುರದ ನಂಜುಂಡ ವಿರಚಿತ ಕೃತಿಗಳು, ಪಂಪ ಭಾರತ ಸಂಗ್ರಹ, ಧರ್ಮನಾಥ ಪುರಾಣ, ೧೯೫೯ರಲ್ಲಿ ಚಿಕ್ಕುಪಾಧ್ಯಯ ವಿರಚಿತ ಶತಕ ಸಾಂಗತ್ಯಗಳು, ಸಿದ್ಧಲಿಂಗೇಶ್ವರ ಸಾಹಿತ್ಯ, ಈ ರೀತಿ ಸಾಲು ಸಾಲು ಕೃತಿಗಳು ಹೊರಬಂದವು. ಇವರು ಅನೇಕ ಅಪ್ರಕಟಿತ ಕನ್ನಡ ಗ್ರಂಥಗಳನ್ನು ಸಂಪಾದಿಸಿದ್ದು ಶ್ಲಾಘನೀಯವಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಕಾವ್ಯಗಳಿಗೆ ಆದ್ಯತೆ ನೀಡಿ ಅನೇಕ ವೀರಶೈವ ಕಾವ್ಯಗಳನ್ನು ಪ್ರಕಟಿಸಿದೆ. 'ಚುತುರಾಚಾರ್ಯರ' ಬಗೆಗಿರುವ 'ಚತುರಾಚಾರ್ಯ ಚಾರಿತ್ರ' ಹೊರತಂದಿದೆ. ಈ ಬೃಹತ್ ಗ್ರಂಥವನ್ನು ಬಸವಾರಾಧ್ಯರು ನಾಲ್ಕುಹಸ್ತಪ್ರತಿಗಳ ನೆರವಿನಿಂದ ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ಈ ಕಾವ್ಯವು ಪಂಡಿತಾರಾಧ್ಯ, ಏಕೋರಾಮ, ಮರುಳಸಿದ್ಧ, ರೇವಣಸಿದ್ಧ, ಎಂಬ ನಾಲ್ವರು ಆಚಾರ್ಯರ ಚರಿತ್ರೆಯನ್ನು ನಿರೂಪಿಸುತ್ತದೆ. ಆರಾಧ್ಯ ಚಾರಿತ್ರ ಮಲ್ಲಿಕಾರ್ಜುನ ಪಂಡಿತಾರಾಧ್ಯವನ್ನು ಕುರಿತ ಕೃತಿಯಾಗಿದೆ.

ಬಸವಾರಾಧ್ಯರು ತಮ್ಮ ಗುರುಗಳಾದ ಡಿ.ಎಲ್. ನರಸಿಂಹಾಚಾರ್ ಅವರ ಪಾಠ ಪ್ರವಚನಗಳಿಂದ, ಸಂಶೋಧನಾ ಕಾರ್ಯಗಳಿಂದ ಪ್ರಭಾವಿತರಾಗಿದ್ದು, ನಿಕಟ-ವರ್ತಿಗಳೂ ಆಗಿದ್ದು ಅವರ ಆತ್ಮೀಯ ಮಾರ್ಗದರ್ಶನ ಪಡೆದುಕೊಂಡು ಸಂಪಾದನಾ ಕಾರ್ಯದಲ್ಲಿ ಪ್ರಬುದ್ಧ ಪಾಂಡಿತ್ಯವನ್ನು ಪಡೆದರು. ಇವರು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಸಾಹಿತ್ಯಿಕ ವಾತಾವರಣ ಕೂಡ ವಿಭಿನ್ನವಾಗಿತ್ತು. ಒಂದೆಡೆ ಕುವೆಂಪು ಅವರ ಪ್ರಭಾವದಿಂದ ಅನೇಕರು ನವೋದಯದ ಕಾವ್ಯರಚಿಸುತ್ತಾ ಸೃಜನಶೀಲ ಸಾಹಿತ್ಯದೆಡೆ ತೊಡಗಿದ್ದರು. ಮತ್ತೊಂದೆಡೆ ಕನ್ನಡ ಸಂಶೋಧನೆ ತೀ.ನಂ.ಶ್ರೀ., ಡಿ.ಎಲ್. ನರಸಿಂಹಾಚಾರ್ ಅವರಂತಹ ಘನವಿದ್ವಾಂಸರ ಪರಿಶ್ರಮದಿಂದ ಧೃಡವಾದ ಹೆಜ್ಜೆ ಇಡುತ್ತಿದ್ದರು.

ಕನ್ನಡ ನಿಘಂಟು ಸಂಪಾದಕರ ಸಮಿತಿಯಲ್ಲಿ ಡಾ. ಜಿ.ಎಸ್. ಗಾಯ್, ಡಾ. ಆರ್.ಸಿ. ಹಿರೇಮಠ, ಜಿ. ನಾರಾಯಣ (ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು), ಡಿ. ಜವರೇಗೌಡರು (ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳು), ಡಾ.ಡಿ.ಎಲ್. ನರಸಿಂಹಾಚಾರ್. (ಕನ್ನಡ ನಿಘಂಟು ಪ್ರಧಾನ ಸಂಪಾದಕರು) ಮತ್ತು (ಕನ್ನಡ ನಿಘಂಟು, ಸಂ.ಸ. ಅಧ್ಯಕ್ಷರು) ಕ.ವೆಂ. ರಾಘವಾಚಾರ್ (ಕ.ನಿ.ಸಂ.ಸ. ಅಧ್ಯಕ್ಷರು), ಎನ್. ಲಕ್ಷ್ಮೀನಾರಾಯಣರಾವ್, ಪ್ರೊ. ಎಂ. ಮರಿಯಪ್ಪಭಟ್, ಪ್ರೊ. ಸ.ಸ. ಮಾಳವಾಡ, ಪ್ರೊ. ಜಿ. ವೆಂಕಟಸುಬ್ಬಯ್ಯ, ಶ್ರೀ ಸಿದ್ಧಯ್ಯ ಪುರಾಣಿಕ, ಕಾ.ಸ. ಧರಣೇಂದ್ರಯ್ಯ, ಪದ್ಮ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ಪ್ರೊ. ತೀ.ನಂ. ಶ್ರೀಕಂಠಯ್ಯ, ಎನ್. ಬಸವಾರಾಧ್ಯ (ಸಂಪಾದಕರು)ರವರು ಇದ್ದರು. ಬಸವಾರಾಧ್ಯರು ೧೯೯೬ರಿಂದ-೨೦೦೧ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ದಕ್ಷ ಹಾಗೂ ಪ್ರಾಮಾಣಿಕ ಸೇವೆ ಸಲ್ಲಿಸಿದರು. ಪ್ರಸ್ತುತ ಬಿ. ಶಿವಮೂರ್ತಿಶಾಸ್ತ್ರಿ ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನ, ಗೋಖಲೆ ಇನ್ಸ್‌ಟಿಟ್ಯೂಟ್, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ -ಮುಂತಾದ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎನ್. ಬಸವಾರಾಧ್ಯರು ತಮ್ಮ ಒಡನಾಟದಲ್ಲಿ ಎಲ್ಲರೊಂದಿಗೂ ಮಾನವೀಯ ಸಂಬಂಧಗಳನ್ನು ಬೆಳೆಸಿಕೊಂಡಿದ್ದಾರೆ. ವಿಶಾಲ ಹೃದಯದ, ಮೃದುಮನಸ್ಸಿನ ಮಾನವೀಯ ಮೌಲ್ಯಗಳುಳ್ಳ ಮಾನವ ಬಸವಾರಾಧ್ಯರು. ಇವರು ಕ್ಷಿಪ್ರಕೀರ್ತಿಗೆ ಮಾರುಹೋಗದ ಸೃಜನೇತರ ಸಾಹಿತ್ಯಕ್ಕೆ ಅಭಿಮುಖರಾದರು. ವಿದ್ವತ್ ಪ್ರಪಂಚದಲ್ಲಿ ಬರಿ ವ್ಯಕ್ತಿಯಾಗಿರದೆ ಒಂದು ಶಕ್ತಿಯಾಗಿ ಸಂಪಾದನಾ ಕಾರ್ಯದಲ್ಲಿ ಸೇವೆಮಾಡಿರುವುದೇ ಒಂದು ನಿದರ್ಶನವಾಗಿದೆ. ಇವರು ಸಂಪನ್ನರು, ಸಜ್ಜನಿಕೆಯುಳ್ಳವರು, ಪಾಂಡಿತ್ಯದ ಜೊತೆ ಸೌಜನ್ಯ ಸಹೃದಯತೆಗಳ ಸ್ನೇಹಮೂರ್ತಿಯಾಗಿದ್ದರು. ಇವರಲ್ಲಿ ಒಬ್ಬ ಸಂಪಾದಕನ ಅನುಭಾವಿಕ ಜೀವನವನ್ನು ಕಾಣಬಹುದು.

ಬಸವಾರಾಧ್ಯರು ಪರಿಷ್ಕರಿಸಿದ ಅನೇಕ ಗ್ರಂಥಗಳನ್ನು ಹಸ್ತಪ್ರತಿಯ ರೂಪದಲ್ಲಿದ್ದಾಗಲೇ ಡಿ.ಎಲ್. ನರಸಿಂಹಾಚಾರ್‌ರವರು ಪರಿಶೀಲಿಸಿ ಕೊಟ್ಟು ತಮ್ಮ ಶಿಷ್ಯನನ್ನು ಗ್ರಂಥಸಂಪಾದನೆಯ ಆಯಕಟ್ಟಿನ ಜಾಗದಲ್ಲಿ ನಿಲ್ಲಿಸಿದರು. ಈ ಸಂದರ್ಭದಲ್ಲಿ ಕುವೆಂಪು ಅವರು ಹೇಳುತ್ತಿದ್ದಂತೆ, 'ಗುರುವಿದ್ದ ಹಿಂದೆ, ಗುರಿಯಿತ್ತು ಮುಂದೆ' ಎನ್ನುವ ಮಾತು ನೆನಪಿಗೆ ಬರುತ್ತದೆ. ಗ್ರಂಥಸಂಪಾದಕರಿಗಿರಬೇಕಾದ ಮುಖ್ಯಲಕ್ಷಣಗಳಲ್ಲಿ ಪಾಂಡಿತ್ಯ, ಪ್ರತಿಭೆ, ಮತ್ತು ವ್ಯುತ್ಪತ್ತಿಗಳು ಮುಖ್ಯ. ಇವರಿಗೆ ನಿಘಂಟು ಕಾರ್ಯದಲ್ಲಿ ಶಬ್ದವ್ಯುತ್ಪತ್ತಿ ಸಹಜವಾಗಿಯೆ ಲಭ್ಯವಾಯಿತೆನ್ನಬಹುದು. ಇವರು ತಮ್ಮ ಪರಿಶ್ರಮ, ಪ್ರಾಮಾಣಿಕತೆಗಳಿಂದ ಕಾರ್ಯನಿರ್ವಹಿಸಿ ವಿದ್ವತ್ತಿನ ಬಲದಿಂದ ಶಾಸ್ತ್ರೀಯವಾಗಿ ಗ್ರಂಥಸಂಪಾದಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಸಮಕಾಲೀನ ವಿದ್ವಾಂಸರಲ್ಲಿ ಪ್ರಮುಖರಾಗಿರುವ ಎನ್. ಬಸವಾರಾಧ್ಯರು ಅವರ ಪಾಂಡಿತ್ಯ, ಆಳವಾದ ಅಧ್ಯಯನ, ಸಂಶೋಧನೆ, ಸಂಪಾದನಾ ಕಾರ್ಯಗಳಿಂದ ರಾಜ್ಯಮಟ್ಟದಲ್ಲಿ ಮನ್ನಣೆಗಳಿಸಿದ್ದಾರೆ.

೧೯೭೧ರಿಂದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದಲ್ಲಿ ಸೇವೆಸಲ್ಲಿಸಿ ನಿವೃತ್ತರಾದರು. ಇವರು ಹಳಗನ್ನಡ ನಿಘಂಟುಗಳನ್ನು ಸಮಗ್ರವಾಗಿ ಸಂಗ್ರಹಿಸಿ ಸಂಪಾದಿಸಿ ಶಬ್ದಾರ್ಥಕೋಶದೊಡನೆ ವಿದ್ವತ್ಪೂರ್ಣವಾಗಿ ಸಂಪಾದಿಸಿ ಕೊಟ್ಟಿರುವ 'ಹಳಗನ್ನಡ ನಿಘಂಟು' ಕನ್ನಡ ವಾಙ್ಮಯಕ್ಕೆ ನೀಡಿರುವ ಮೇರು ಕೃತಿಯಾಗಿದೆ. ಇವರು ಸಂಪಾದಿಸಿರುವ ಕೃತಿಗಳು ಅನೇಕ ಪ್ರಶಸ್ತಿ, ಬಹುಮಾನಗಳನ್ನು ಪಡೆದಿದೆ. ತೊರವೆ ರಾಮಾಯಣ ಮತ್ತು ಧರ್ಮನಾಥ ಪುರಾಣಗಳಿಗೆ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಇತ್ತೀಚೆಗೆ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ೯೭ನೇ ವರ್ಷದ ಜನ್ಮದಿನಾಚರಣೆಯಂದು ಪೂಜ್ಯಶ್ರೀಗಳಿಂದ 'ಸಂಶೋಧಕ ಶಿವರತ್ನ' ಎಂಬ ಪ್ರಶಸ್ತಿಯನ್ನು ಪಡೆದಿದ್ದಾರೆ. ಬಸವಾರಾಧ್ಯರಿಗೆ ತಮ್ಮ ಸಹೃದಯರಲ್ಲಿ, ಆಪ್ತರಲ್ಲಿ ವಿಶೇಷ ಅಭಿಮಾನ, ಪ್ರೀತಿಯಿತ್ತು. ಅಧ್ಯಯನಕ್ಕೆ ಸಂಬಂಧಪಟ್ಟ ವಿಚಾರವಾಗಿ ಯಾರಾದರೂ ಅವರ ಸಲಹೆ ಕೇಳಿದರೆ ಮುಕ್ತಮನಸ್ಸಿನಿಂದ ವೇಳೆಯ ಪರಿಮಿತಿಯಿಲ್ಲದೆ ಹೇಳಿ ಕೊಡುವುದು ಅವರ ಗುಣವನ್ನು ತೋರಿಸುತ್ತದೆ.

ದಿವಂಗತ ಸರ್ವಮಂಗಳಮ್ಮ ಇವರ ಪತ್ನಿ. ಇವರು ಸರಳ ಮತ್ತು ಸೌಮ್ಯ ಸ್ವಭಾವದ ಗೃಹಿಣಿಯಾಗಿದ್ದರು. ಇವರು ಮನೆಗೆ ಬಂದ ಅತಿಥಿಗಳನ್ನು ಗೌರವಾದರಗಳಿಂದ ಸತ್ಕರಿಸುತ್ತಿದ್ದರು. ಇವರಿಗೆ ಮೂರು ಜನ ಹೆಣ್ಣು ಮಕ್ಕಳು ರೇಣುಕ, ಲತ, ಸುಮಂಗಲಿ, ಎಲ್ಲರೂ ಪದವೀಧರರು ಗೃಹಿಣಿಯರಾಗಿದ್ದಾರೆ. ನಾಲ್ಕುಜನ ಗಂಡುಮಕ್ಕಳು, ಮಹೇಶ, ಮಲ್ಲಿಕಾರ್ಜುನ ಮೂರ್ತಿ, ಚಂದ್ರಶೇಖರ್, ಹರೀಶ್, ಮೂವರು ಎಂಜಿನಿಯರ್‌ಗಳಾಗಿದ್ದಾರೆ. ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದಾರೆ. ಈ ಸುಖೀಕುಟುಂಬದಲ್ಲಿ ಬಸವಾರಾಧ್ಯರು ೭೫ ವರುಷಗಳ ತುಂಬುಜೀವನ ನಡೆಸಿ ಸಾರ್ಥಕ ಬದುಕು ಬಾಳಿದ್ದಾರೆ. ಹಿರಿಯ ಚೇತನರಾಗಿದ್ದಾರೆ. ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ. ಶ್ರೀಮಾನ್ ಪ್ರೊ. ಎನ್. ಬಸವಾರಾಧ್ಯರಿಗೆ ೭೫ ವರುಷಗಳು ತುಂಬಿದ ಈ ಸುಸಂದರ್ಭದಲ್ಲಿ ಅವರಿಗೆ ನನ್ನ ಈ ನುಡಿ ನಮನವನ್ನು ಅರ್ಪಿಸಿದ್ದೇನೆ.

ಅಂತರ್ಯಾನ

-ಭಾರತಿ ಪಾಟೀಲ

೧೯೯೮-೨೦೦೧ರ ಅವಧಿಗೆ ಶ್ರೀ ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭ. ಸಾಹಿತ್ಯ-ಪರಿಷತ್ತಿನ ಇತಹಾಸದಲ್ಲಿಯೇ ಜಿಲ್ಲಾ ಅಧ್ಯಕ್ಷಳಾಗಿ ಆಯ್ಕೆಗೊಂಡ ಮೊದಲ ಮಹಿಳೆಯಾಗಿ ನಾನು ಕಾರ್ಯನಿರ್ವಹಿಸಬೇಕಿತ್ತು. ಓರ್ವ ಮಹಿಳೆ ಈ ಸಮಾಜದ ಸಾರ್ವಜನಿಕ ರಂಗದಲ್ಲಿ ಎದುರಿಸಬೇಕಾದ ಅನೇಕ ಸವಾಲುಗಳ ಮಧ್ಯದ ಜವಾಬ್ದಾರಿ ನನ್ನದಾಗಿತ್ತು. ಪರಿಷತ್ತಿನ ಅಧ್ಯಕ್ಷರು ಎಂಥವರಿರಬಹುದೆಂಬ ಕುತೂಹಲದೊಂದಿಗೆ ಮೊದಲ ಕಾರ್ಯಕಾರೀ ಸಮಿತಿ ಸಭೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ಹೋದೆ. ರಾಜ್ಯದ ಎಲ್ಲ ಜಿಲ್ಲೆಗಳ ಅಧ್ಯಕ್ಷರು ಅಲ್ಲಿ ಜಮಾಯಿಸಿದ್ದರು. ನೀಳಕಾಯದ, ಕಪ್ಪು ಸೂಟು ಧರಿಸಿದ, ಹೆಗಲ ಮೇಲೆ ಶಾಲು ಹೊದ್ದ ವ್ಯಕ್ತಿಯೇ ಬಸವಾರಾಧ್ಯರೆಂದು ತಿಳಿಯಿತು. ಅವರ ಮುಖದಲ್ಲಿ ಪುಟ್ಟದೊಂದು ನಗುವಿತ್ತು. ಆ ನಗುವಿನ ಹಿಂದೆ ಅಡಗಿದ್ದ ದೃಢತೆ, ಆತ್ಮವಿಶ್ವಾಸ, ಕೆಲಸದ ಮೇಲಿನ ಶ್ರದ್ಧೆ ಹಾಗೂ ಸ್ನೇಹಭಾವಗಳು ನಮ್ಮ ಅರಿವಿಗೆ ಬರುವುದು ತಡವಾಗಲಿಲ್ಲ. ಮೂರು ವರ್ಷದ ಅವಧಿಯಲ್ಲಿ ನಾನು ಮಹಿಳೆ ಎಂಬ ಭಾವನೆ ಬರದಂತೆ ನನ್ನನ್ನು ಕೆಲಸದಲ್ಲಿ ತೊಡಗಿಸಿದ ಅವರ ಸಹಕಾರ ಹಾಗೂ ಪ್ರೋತ್ಸಾಹದ ವಾತಾವರಣದಲ್ಲಿ ನನ್ನ ಆತ್ಮವಿಶ್ವಾಸ ಇಮ್ಮಡಿಸಿತು.

ಕಾರ್ಯಕಾರೀ ಸಮಿತಿ ಸಭೆಯಲ್ಲಿ ಚರ್ಚೆ ನಡೆದಾಗ ಕೆಲವರು ಗುಡುಗುತ್ತಿದರು, ಕೆಲವು ಚೀರುತ್ತಿದ್ದರು. ಏನಾದರೂ ಬಸವಾರಾಧ್ಯರ ಮೃದುಧೋರಣೆ ಬದಲಾಗುತ್ತಿರಲಿಲ್ಲ. ಅಂಥ ಕೆಲಪ್ರಸಂಗಗಳಲ್ಲಿ ಭದ್ರ-ವೀರಭದ್ರರಂತಿದ್ದ ಪರಿಷತ್ತಿನ ಗೌ. ಕಾರ್ಯದರ್ಶಿಗಳಾದ ಡಾ. ಸಿ. ವೀರಣ್ಣ ಹಾಗೂ ಡಾ. ಚಂದ್ರಣ್ಣಗೌಡರು ಪರಿಸ್ಥಿತಿ ನಿಭಾಯಿಸುವಲ್ಲಿ ಸಹಕರಿಸುತ್ತಿದ್ದರು.

ಸಭೆ ಮುಗಿದ ತಕ್ಷಣ ಉತ್ತರ ಕರ್ನಾಟಕದ ಬಹುತೇಕ ಜಿಲ್ಲಾಧ್ಯಕ್ಷರುಗಳು ಶ್ರೀ ಬಸವಾರಾಧ್ಯರ ಸುತ್ತ ಬೇಲಿಯಾಗುತ್ತಿದ್ದರು.

ಡಾ. ಎಂ.ಎಸ್. ಪಾಟೀಲ, ಗುಲ್ಬರ್ಗ, ಕೆ.ಎಸ್. ಪಾಟೀಲ ವಿಜಾಪುರ, ಬಿ.ಆರ್. ಪೋಲೀಸ್ ಪಾಟೀಲ ಬಾಗಲಕೋಟೆ, ಬೆಳಗಾಂವ, ಪ್ರೊ. ಸಿ.ವ್ಹಿ. ಜ್ಯೋತಿ, ಕೊಪ್ಪಳದ ಬ್ಯಾಳಿ-ಬಳ್ಳಾರಿ, ರಾಯಚೂರು, ಗದಗ -ಹೀಗೆ ಆ ಬೇಲಿಯ ಸುತ್ತ ಚರ್ಚೆ ನಡೆಯುತ್ತಿತ್ತು. ರಾಜ್ಯದ, ಜಿಲ್ಲೆಯ ನಾಡು-ನುಡಿ, ಕೆಲಸಕಾರ್ಯಗಳ ಬಗ್ಗೆ ಹೂಗಳು ಅರಳಿ ನಗುತ್ತಿದ್ದವು. ಬಸವಾರಾಧ್ಯರ ಪಾಂಡಿತ್ಯಪೂರ್ಣ ಮಾತುಗಳು, ಹಲವರ ಹಾಸ್ಯ ಚಟಾಕಿ, ಬಿಚ್ಚು ನುಡಿಗಳು -ಹೀಗೇ ಸಾಗುತ್ತಿತ್ತು. ಆ ನೆನಪಿನ ಝರಿ ಬತ್ತದ ಒರತೆಯಾಗಿ ಇಂದಿಗೂ ನೆನಪಿನಂಗಳದಲ್ಲಿ ಜಿನಿಗುತ್ತಿದೆ. ಅಧಿಕಾರದ ವಯಸ್ಸಿನ, ಪಾಂಡಿತ್ಯದ ಏರನ್ನು ಮೀರಿ ಸಣ್ಣವರೊಂದಿಗೆ ಸ್ನೇಹದಿಂದ ಬೆರೆವ ಬಸವಾರಾಧ್ಯರು ಅಂದು ನಮ್ಮನ್ನೆಲ್ಲ ಒಂದೇ ಬಳ್ಳಿಯ ಹೂಗಳಂತೆ ಬೆಸೆವಲ್ಲಿ ಪ್ರಮುಖರಾದವರು.

ಪರಿಷತ್ತಿಗೆ ಎಂದೂ ತಡಮಾಡಿ ಬಾರದ ಬಸವಾರಾಧ್ಯರು ಪ್ರೀತಿಯಿಂದಲೇ ಸಿಬ್ಬಂದಿಯೊಂದಿಗೆ ವ್ಯವಹರಿಸುತ್ತ ಪರಿಷತ್ತಿನ ಕಾರ್ಯಗಳನ್ನು ಸುಗಮಗೊಳಿಸಿದವರು. ಜಿಲ್ಲಾ ಪರಿಷತ್ತಿನ ಕಾರ್ಯಗಳನ್ನು ಪರಿಶೀಲಿಸಿ ಅನುಕೂಲ ವಾತಾವರಣ ನಿರ್ಮಿಸಿದವರು. ಎಂದೂ ಯಾವುದಕ್ಕು ನಾವು ಕಾಯಬೇಕಾದ ಪರಿಸ್ಥಿತಿ ತಲೆದೋರದಂತೆ ನಡೆದುಕೊಂಡವರು.

ಕನಕಪುರ ಸಾಹಿತ್ಯ ಸಮ್ಮೇಳನದಲ್ಲಿ ವಿಜಾಪುರದ ಸಾಹಿತ್ಯ-ಸಾಂಸ್ಕೃತಿಕ-ಲೋಕದ ದಿಗ್ಗಜರಾದ ಶ್ರೀ ಬಿ.ಟಿ. ಸಾಸನೂರರ ಹೆಸರು ಸನ್ಮಾನಿತರ ಪಟ್ಟಿಯಲ್ಲಿತ್ತು. ಅನಾರೋಗ್ಯದ ನಿಮಿತ್ಯ ಅವರು ಅಲ್ಲಿಗೆ ಬಂದಿರಲಿಲ್ಲ. ಕೆಲದಿನಗಳಲ್ಲಿ ಬಸವಾರಾಧ್ಯರು ನನ್ನನ್ನು ಕರೆದು. ಭಾರತಿಯವರೇ, ಅಲ್ಲಿಯೇ ಒಂದು ಸಮಾರಂಭ ಏರ್ಪಡಿಸಿಬಿಡಿ. ಪರಿಷತ್ತೇ ಸಾಸನೂರರ ಸನ್ಮಾನಕ್ಕಾಗಿ ಆಗಮಿಸುವುದು ಎಂದರು. ನಂತರ ಸಾಸನೂರರ ಇಚ್ಛೆಯಂತೆ ಅವರ ಮನೆಯಲ್ಲಿಯೇ ಸಮಾರಂಭ ಏರ್ಪಾಡಾಯಿತು. ಅಲ್ಲಿ ಸಾಸನೂರರ ಸ್ನೇಹಿತರು-ಹಿತೈಷಿಗಳು, ಅನೇಕ ಜನ ಗಣ್ಯರು ಸೇರಿದ್ದರು. ಅದೊಂದು ಹೃದಯಸ್ಪರ್ಶಿ ಸಮಾರಂಭವಾಗಿತ್ತು. ಪರಿಷತ್ತು ಸಾಸನೂರರ ಮನೆಗೆ ಬಂದು ಸನ್ಮಾನಿಸಿದ ರೀತಿ ಮತ್ತು ಬಸವಾರಾಧ್ಯರ ನಿಲುವು ಅನೇಕರನ್ನು ಮೆಚ್ಚಿಸಿತು.

ಆತ್ಮೀಯರಿಗೆ ಆತಿಥ್ಯ ನೀಡುವಲ್ಲಿ ಶ್ರೀ ಬಸವಾರಾಧ್ಯರು ಮುಂದು. ನಾನು ನನ್ನ ಪತಿ ಪ್ರೊ. ಕೆ.ಎಸ್. ಪಾಟೀಲರು ಮೊದಲ ಬಾರಿ ಅವರ ಮನೆಗೆ ಹೋದಾಗ ಅವರು ಉಪಚರಿಸಿದ ರೀತಿ ಎಷ್ಟೋ ವರ್ಷದ ಸ್ನೇಹಿತರಂತೆ, ಮನೆಯವರಂತೆ ಅನಿಸಿದ್ದು ಸುಳ್ಳಲ್ಲ. ತಮ್ಮ ಪತ್ನಿಯನ್ನು ಕರೆದು ಇವಳೂ ನಮ್ಮ ಮಗಳೆಂದು ಪರಿಚಯಿಸಿದ ಬಸವಾರಾಧ್ಯರು ಮಾನಸಿಕವಾಗಿ, ದೈಹಿಕವಾಗಿ ಕೃಶವಾಗಿ ಕಂಡ ಆ ತಾಯಿಗೆ ಊಟಮಾಡಲು-ಚಿಂತಿಸದಿರಲು ನೀನಾದರೂ ಹೇಳು-ಭಾರತಿ ಎಂದು ವೈಯಕ್ತಿಕ ನೋವನ್ನು ಹೇಳಿಕೊಂಡದ್ದು. ನಾನು ಏನೂ ಹೇಳದೆ ಆ ತಾಯಿಯ ಕೈಮೇಲೆ ಕೈಯಿಟ್ಟಾಗ ಆ ಬೆಚ್ಚನೆಯ ಸ್ಪರ್ಶದೊಂದಿಗೆ ಅವರು ನನ್ನೊಂದಿಗೆ ಅನೇಕ ಮಾತು ಹೇಳಿದ್ದು ಎಲ್ಲ ತೀರ ಆತ್ಮೀಯ ಎನಿಸುವಷ್ಟು. ಕೆಲದಿನಗಳಲ್ಲಿಯೇ ಆ ಜೀವ ಇನ್ನಿಲ್ಲವಾದಾಗ ಸಂಕಟಪಟ್ಟದ್ದು ಸಹಜವೆನಿಸಿತು, ನನ್ನ ತಾಯಿಯನ್ನು ನೆನಪಿಸಿಕೊಂಡು.

ಮತ್ತೊಮ್ಮೆ ಅವರ ಮನೆಗೆ ಹೋದಾಗ ಒಂಟಿಯಾದ ಬಸವಾರಾಧ್ಯರನ್ನು ನೆನಪಿಸಿಕೊಳ್ಳುತ್ತಲೇ ಅಡಿ ಇಟ್ಟೆವು. ಆದರೆ ಪುಸ್ತಕದ ರಾಶಿಯ ಎದುರು ತನ್ಮಯತೆಯಿಂದ ಬರೆಯುತ್ತ ಕುಳಿತ ಬಸವಾರಾಧ್ಯರು ಒಂಟಿ ಎನಿಸಲಿಲ್ಲ. ಅವರು ನನ್ನನ್ನು ಕೆ.ಎಸ್. ಅವರನ್ನು ಸೊಸೆಗೆ ಪರಿಚಯಿಸಿದರು. ಬರೆವುದನ್ನು ನಿಲ್ಲಿಸಿ ಅನೇಕ ವಿಚಾರಗಳ ಬಗ್ಗೆ ಮಾತನಾಡಿದರು. ಅಕ್ಕಿರೊಟ್ಟಿ ಮಾಡಿಸಿ ಉಪಚರಿಸಿದರು. ಇದನ್ನೆಲ್ಲ ನಾವು ಹೇಗೆ ಮರೆಯಲು ಸಾಧ್ಯ?

ವೈಯಕ್ತಿಕ ಬದುಕನ್ನೂ ಮೀರಿ ನಾಡು-ನುಡಿಗೆ ಭಾಗ್ಯ ತರುವ ಶ್ರೀ ಬಸವಾರಾಧ್ಯರಿಂದ ಮೂರುವರ್ಷದ ಅವಧಿಯಲ್ಲಿ ನಾನು ಕಲಿತದ್ದು ಬಹಳಷ್ಟು, ಉಳಿದದ್ದು ಬೆಟ್ಟದಷ್ಟು. ಎಂದಿಗೂ ಸಿಟ್ಟುಮಾಡಿಕೊಳ್ಳದ ಬಸವಾರಾಧ್ಯರು, ಬಾಗಲಕೋಟೆ ಸಮ್ಮೇಳನದ ಸಂದರ್ಭದಲ್ಲಿ 'ಕತ್ತೆ ಬಾಲ ಕತ್ತರಿಸಿಬಿಡಿ' ಎಂದು ಸಹಜವೆನ್ನುವಂತೆ ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದ ರೀತಿಗೆ ಎಲ್ಲರೂ ನಕ್ಕದ್ದಿದೆ. ಇವರಿಗೆ ಸರಿಯಾಗಿ ಸಿಟ್ಟಿಗೇರಲೂ ಬಾರದಲ್ಲ ಎಂದು.

ಶ್ರೀ ಬಸವಾರಾಧ್ಯರ ಮೆದುಳು ಕಂಪ್ಯೂಟರ್‌ನಂತೆ. ಎಲ್ಲ ಚಕಚಕನೇ ಹೇಳಿಬಿಡುವ ನೆನಪಿನ ಶಕ್ತಿ. ೭೦ರ ನಂತರವೂ ಕನ್ನಡಕದ ಸಹಾಯ ಕೇಳದಿರುವ ಕಣ್ಣುಗಳು ಸಂಶೋಧನೆ-ನಿಘಂಟು ಶಾಸ್ತ್ರಗಳಲ್ಲಿನ ಅವರ ಆಸಕ್ತಿ, ಕುಂದದ ಉತ್ಸಾಹ, ಕಾರ್ಯವೈಖರಿ, ದಕ್ಷತೆ ಈ ಎಲ್ಲ ಸಾಧ್ಯತೆಗಳನ್ನು ಮೈಗೂಡಿಸಿಕೊಂಡಿರುವ ಈ ವ್ಯಕ್ತಿ ನಮ್ಮೆಲ್ಲರ ಸಾಂಘಿಕ ಶಕ್ತಿ. ಈ ವ್ಯಕ್ತಿ ಬದುಕನ್ನು ನೋಡುತ್ತ ಪಡೆದ ಲಾಭದ ದಿನಗಳಿಗೆ ನಾನು ಋಣಿ.

ಬಸವಾರಾಧ್ಯರು ಕುರ್ಚಿಗೆ, ಅಧಿಕಾರಕ್ಕೆ ಎಂದೂ ಮಹತ್ವ ನೀಡಿದವರಲ್ಲ. ಸಭೆಗಳಲ್ಲಿ ಎಷ್ಟೋ ಬಾರಿ ಅವರ ಕುರ್ಚಿಯಲ್ಲಿ ಬೇರಾರೋ ಕುಳಿತಿರುತ್ತಿದ್ದರು. ಈ ಆಕ್ರಮಣಕಾರೀ ಪ್ರವೃತ್ತಿಗೆ ಅವರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ನನ್ನ ಬಳಿ ಪರಿಷತ್ತಿನ ಗ್ರುಫ್ ಫೋಟೋ ಇತ್ತು. ನನ್ನ ಸ್ನೇಹಿತರೊಬ್ಬರು ಅದನ್ನು ನೋಡುತ್ತಾ, ನಿಮ್ಮ ಪರಿಷತ್ತಿನ ಅಧ್ಯಕ್ಷರು ಕೋಟು ತೊಡುತ್ತಾರೆ ಎಂದಿದ್ದಿರಿ. ಇಲ್ಲಿ ಬರೀ ಶರ್ಟ್ ತೊಟ್ಟಿದ್ದಾರೆ. ಕಪ್ಪಗೆ-ನೀಳಕಾಯ ಎಂದಿದ್ದಿರಿ, ಇಲ್ಲಿ ಬೆಳ್ಳಗಿದ್ದಾರಲ್ಲ ಎಂದು ಅಧ್ಯಕ್ಷರಿಗೆ ಮೀಸಲಾದ ಖುರ್ಚಿಯಲ್ಲಿದ್ದವರನ್ನು ತೋರಿಸಿ ಕೇಳಿದರು. (ಏಕೆಂದರೆ ನಾನೊಮ್ಮೆ ಕೋಟಿಲ್ಲದ ಬಸವಾರಾಧ್ಯರನ್ನು ಊಹಿಸುವದು ಕಷ್ಟ ಎಂದಿದ್ದೆ.) ಅಲ್ಲಿ ಕುಳಿತವರು ಅಧ್ಯಕ್ಷರಲ್ಲ ಎಂದು ಹೇಳಲು ನನಗೇ ಸಂಕೋಚವೆನಿಸಿ, ಹೌದು ಅಂದು ಸೆಖೆಗೆ ಕೋಟು ತೆಗೆದಿದ್ದರು ಮತ್ತೆ ಅದು ಫೋಟೋದಲ್ಲಿ ಬೆಳ್ಳಗೆ ಬಂದಿರಬಹುದು ಎಂದು ಹೇಳಿ ನುಣುಚಿಕೊಂಡೆ. ಹಿಂದಿನ ಸಾಲಿನಪಕ್ಕ ಕುಳಿತ ಶ್ರೀ ಬಸವಾರಾಧ್ಯರನ್ನು ತೋರಿಸಲು ಹೋಗಲಿಲ್ಲ!

ಬಸವಾರಾಧ್ಯರು ಬೆಂಗಳೂರಿಗರು. ನಮಗಿಂತ-ಹಿರಿಯರು, ವಿದ್ವಾಂಸರು. ಅನೇಕ ಸಂಘ ಸಂಸ್ಥೆಗಳ ಸಲಹೆಗಾರರು, ಗೌರವಾನ್ವಿತ ಅಧ್ಯಕ್ಷರು ಎಲ್ಲ ನಿಜ, ಆದರೆ ಯಾರೊಂದಿಗೂ ಬೆರೆಯಬಲ್ಲ ಸರಳ ಸೌಜನ್ಯಪೂರ್ಣ ವ್ಯಕ್ತಿತ್ವ-ನಿಗರ್ವದ ನಡೆತೆಯಿಂದ ಎಲ್ಲ ಎತ್ತರಗಳಿಗೂ ಮೆರುಗು ತರಬಲ್ಲವರು, ಮನದಲ್ಲುಳಿಯಬಲ್ಲವರು ಎಂಬುದು ನಾನು ಕಂಡುಕೊಂಡು ಸತ್ಯ.

XXX

ಆರಾಧ್ಯರು -ನಾನು ಕಂಡಂತೆ

-ಉಷಾ ಅಗ್ನಿಹೋತ್ರಿ

ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಶ್ರೀಯುತ ಎನ್. ಬಸವಾರಾಧ್ಯರದು ವಿಸ್ತಾರವಾದ ಮತ್ತು ಆಳವಾದ ಅಧ್ಯಯನ ಮತ್ತು ಕೃಷಿ. ಬಹುಶಃ ಅವರ ವಿದ್ಯಾರ್ಥಿ ದೆಸೆಯಲ್ಲಿಯೇ ಇದಕ್ಕೆ ಅಂಕುರಾರ್ಪಣ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಅಂದು ಅವರಿಗೆ ವಿದ್ಯಾಗುರುಗಳಾಗಿದ್ದವರು: ಡಾ. ಡಿ.ಎಲ್. ನರಸಿಂಹಾಚಾರ್, ಪ್ರೊ. ತೀ.ನಂ. ಶ್ರೀಕಂಠಯ್ಯ, ಡಾ. ಕೆ.ವಿ. ಪುಟ್ಟಪ್ಪನವರು, ಪ್ರೊ. ಜಿ.ಪಿ. ರಾಜರತ್ನಂ, ಪ್ರೊ. ಎ.ಎನ್. ಮೂರ್ತಿರಾಯರು, ಪ್ರೊ. ವೀ. ಸೀತಾರಾಮಯ್ಯನವರು -ಮೊದಲಾದ ಮಹನೀಯರು ಎಂದ ಮೇಲೆ ಕೇಳಬೇಕೆ? ಕನ್ನಡ ಸಾರಸ್ವತಲೋಕದಲ್ಲಿ ಖ್ಯಾತನಾಮರೆನಿಸಿದ ಈ ಗುರುವೃಂದ ಅಂದು ಬೆಳಗಿದ ಜ್ಞಾನದ ನಂದಾದೀಪ ಆರಾಧ್ಯರಲ್ಲಿ ಇಂದಿಗೂ ಉಜ್ವಲ! ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ದುಡಿಯಲು ಅಂದು ಸೆಲೆಯೊಡೆದ ಉತ್ಸಾಹ ಇಂದಿಗೂ ಬತ್ತದ ಚಿಲುಮೆ!

ನನಗೆ ತಿಳಿದಂತೆ, ಪ್ರಾಚೀನ ಕನ್ನಡ ಸಾಹಿತ್ಯ ಕುರಿತು ಇವರಿಗೆ ವಿಶೇಷ ಒಲವು. ಹಳಗನ್ನಡ ನಡುಗನ್ನಡ ವಿವಿಧ ಕಾವ್ಯ ಪ್ರಕಾರಗಳ ಅಧ್ಯಯನ ಮತ್ತು ಸಮೀಕ್ಷೆ ಬರವಣಿಗೆ, ನಿರಂತರವಾಗಿ ಕಳೆದ ಐವತ್ತು ವರ್ಷಗಳಿಗೂ ಮೀರಿದ ಅವಧಿಯಲ್ಲಿ ಸಾಗಿದ್ದು ಇವತ್ತಿಗೂ ಅದರಲ್ಲಿ ತತ್ಪರರು. ಇವರ ಸಂಗ್ರಹದಲ್ಲಿರುವ ಅಪಾರ ಗ್ರಂಥ ರಾಶಿಯೇ ಈ ಬಗೆಯ ಅಧ್ಯಯನಶೀಲತೆಗೆ ಸಾಕ್ಷಿ!

ಗ್ರಂಥಸಂಪಾದನೆ ಮತ್ತು ನಿಘಂಟು ರಚನೆ -ಇವೆರಡು ಇವರ ಸಾಧನೆಯ ಪ್ರಮುಖ ಕ್ಷೇತ್ರಗಳು ಎಂದು ನನ್ನ ಅನಿಸಿಕೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಉಪನಿರ್ದೇಶಕರಾಗಿದ್ದಾಗ, ಪ್ರಕಟನ ವಿಭಾಗದಲ್ಲಿ ಪ್ರಧಾನ ಸಂಪಾದಕರಾಗಿ ಅನೇಕ ಮೌಲಿಕ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿರುವರು.

ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡ ಕನ್ನಡ-ಕನ್ನಡ ನಿಘಂಟು ರಚನೆಯ ಬೃಹತ್ ಯೋಜನೆಯ ಅಡಿಯಲ್ಲಿ ಕೆಲಕಾಲ ಸಂಪಾದಕರಾಗಿ, ತದನಂತರ ಪ್ರಧಾನ ಸಂಪಾದಕರಾಗಿ ಇವರ ಕೊಡುಗೆ ಬಹುಮುಖ್ಯ.

ನನಗೆ, ಶ್ರೀಯುತ ಆರಾಧ್ಯರ ಪರಿಚಯವಾದದ್ದು ೧೯೬೭ರಲ್ಲಿ-ಕರ್ನಾಟಕ ಸರ್ಕಾರದ ಪರವಾಗಿ ಎರವಲು ಸೇವೆಯ ಆಧಾರದ ಮೇಲೆ ಕನ್ನಡ ನಿಘಂಟು ಕಚೇರಿಯಲ್ಲಿ ಸಹಾಯಕ ಸಂಪಾದಕರಲ್ಲಿ ಒಬ್ಬಳಾಗಿ ೧-೧೦-೧೯೬೭ ರಿಂದ ೨೦-೯-೧೯೭೫ರವರೆಗೆ ಎಂಟು ವರ್ಷ ಕೆಲಸ ಮಾಡುವ ಯೋಗ ಒದಗಿದಾಗ. ಈ ಅವಧಿಯಲ್ಲಿ ಅವರ ವ್ಯಕ್ತಿತ್ವ ಮತ್ತು ಕಾರ್ಯವೈಖರಿಯ ಕುರಿತು ನನ್ನ ಅನಿಸಿಕೆಗಳನ್ನು ಇಲ್ಲಿ ಉಲ್ಲೇಖಿಸಲಿರುವೆ.

ಮೊದಲನೆಯದಾಗಿ ಆರಾಧ್ಯರಲ್ಲಿ ಎದ್ದು ಕಾಣುವ ಗುಣ: ಸರಳ, ನೇರ, ನಡೆ-ನುಡಿ. ಮಾನವ ನಿರ್ಮಿತ ಜಾತಿ, ಮತ, ಪಂಥ, ಬಡವ-ಬಲ್ಲಿದ, ಹಿರಿಯ-ಕಿರಿಯ ಎಂಬ ಭೇದ ಭಾವಗಳ ಎಲ್ಲೆಯನ್ನು ಮೀರಿನಿಂತ ಸೌಜನ್ಯ. ಅಧಿಕಾರದ ದರ್ಪ-ಬಿಗುಮಾನ ಇವರಿಂದ ಬಹುದೂರ.

ಕನ್ನಡ ನಿಘಂಟು ಕಚೇರಿಯಲ್ಲಿ ಸಂಪಾದಕರಾಗಿದ್ದಾಗಲೇ ಆಗಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಲ್ಲಿ ಇರುವಾಗಲೇ ಆಗಲಿ, ಸಿಬ್ಬಂದಿ ವರ್ಗದವರೆಲ್ಲರೊಡನೆ ಒಂದೇ ಬಗೆಯ ಸ್ನೇಹಪರ ನಡವಳಿಕೆ. ಹೀಗಿದ್ದೂ ಕಚೇರಿಯ ಎಲ್ಲ ಕೆಲಸಕಾರ್ಯಗಳನ್ನು ನಿಯಮಾನುಸಾರ, ಸಕಾಲಕ್ಕೆ, ಸುಲಲಿತವಾಗಿ, ನಡೆಸಿಕೊಂಡು ಹೋಗುವ ಆಡಳಿತ ದಕ್ಷತೆ!

ನಿಘಂಟಿನ ಕರಡು ಪ್ರತಿಯ ಪರಿಶೀಲನೆಯ ಸಂದರ್ಭಗಳಲ್ಲಿ, ಒಂದೊಂದು ಶಬ್ದಕ್ಕೂ ಪ್ರಯೋಗಗಳ ಆಧಾರದಿಂದ ಬೇರೆ ಬೇರೆ ಅರ್ಥಗಳನ್ನು, ವಿವಿಧ ಛಾಯಾರ್ಥಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ನಿರ್ಣಯಿಸುವಾಗಲೂ ಶಬ್ದಗಳ ನಿಷ್ಪತ್ತಿಯನ್ನು ಕುರಿತು ವಿವೇಚಿಸುವಾಗಲೂ ಪ್ರಾದೇಶಿಕ ಅರ್ಥಭೇದಗಳನ್ನು ಗುರುತಿಸುವಾಗಲೂ ಯಾವ ಪೂರ್ವಾಗ್ರಹಗಳಿಗೆ ಒಳಗಾಗದೆ, ಎಲ್ಲರ ಅಭಿಪ್ರಾಯಗಳನ್ನು ಗಮನಿಸುವ ವಸ್ತುನಿಷ್ಠವಾದ ನಿಲುವು ಅವರದು. ಇದೇ ಅವಧಿಯಲ್ಲಿ ಆರಾಧ್ಯರು ಸಂಪಾದಿಸಿ ಪ್ರಕಟಿಸಿದ್ದು "ಹಳಗನ್ನಡ ನಿಘಂಟುಗಳು". ರನ್ನಕಂದದಿಂದ ಮೊದಲ್ಗೊಂಡು ಪದ್ಯರೂಪದಲ್ಲಿರುತ್ತಿದ್ದ ಹಳಗನ್ನಡ ನಿಘಂಟುಗಳ ಅಪೂರ್ವ ಸಂಗ್ರಹ. ಬೇರೆ ಬೇರೆ ಅವಧಿಯಲ್ಲಿ ಪ್ರಧಾನ ಸಂಪಾದಕರಾಗಿದ್ದ, ಹಿರಿಯ ವಿದ್ವಾಂಸರಾದ ಡಾ. ಡಿ.ಎಲ್. ನರಸಿಂಹಾಚಾರ್ ಅವರು, ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅಲ್ಲದೆ ನಿಘಂಟು ಸಂಪಾದಕ ಸಮಿತಿಯ ಹಿರಿಯ ಸದಸ್ಯರಾದ ಪ್ರೊ. ಕ.ವೆಂ. ರಾಘವಾಚಾರ್, ಪ್ರೊ. ಎಂ. ಮರಿಯಪ್ಪಭಟ್ಟರು, ಡಾ॥ ಜಿ.ಎಸ್. ಗಾಯಿಯವರು, ಪ್ರೊ. ಎನ್. ಲಕ್ಷ್ಮೀನಾರಾಯಣರಾಯರು, ಪ್ರೊ. ಸ.ಸ. ಮಾಳವಾಡರು, ಪ್ರೊ. ಆರ್.ಸಿ. ಹಿರೇಮಠರು, ಡಾ॥ ರಂ.ಶ್ರೀ. ಮುಗಳಿಯವರು -ಮುಂತಾದ ವಿದ್ವಾಂಸರೊಂದಿಗೆ ಕಿರಿಯರಾದ ನಮಗೂ ಶಬ್ದಾರ್ಥಗಳ ಕುರಿತು ಚರ್ಚಿಸಲು ಅವಕಾಶ ಲಭ್ಯ.

ಆರಾಧ್ಯರನ್ನು ಕಾಣಲು ಕಚೇರಿಗೆ ಬರುತ್ತಿದ್ದ ಸ್ನೇಹಿತರಿರಲಿ, ಮನೆಗೆ ಬರುವ ಸಹೋದ್ಯೋಗಿ-ಮಿತ್ರರಿರಲಿ ಅವರಿಗೆ ತುಂಬುಹೃದಯದ ಆತಿಥ್ಯ. ಇವರಿಗೆ ಅನುರೂಪರೆನಿಸಿದ, ಸಹಧರ್ಮಿಣಿಯವರದೂ ಇದರಲ್ಲಿ ಸಹಭಾಗಿತ್ವ. ಒಟ್ಟಿನಲ್ಲಿ ತಮ್ಮ ಪರಿಚಯದ ಪರಿಧಿಯೊಳಗೆ ಬಂದವರನ್ನು ಬಹುಬೇಗ ಆತ್ಮೀಯವಾಗಿಸಿಕೊಳ್ಳುವ ಹೃದಯ ವೈಶಾಲ್ಯ ಈ ಅನುರೂಪ ದಂಪತಿಗಳದು. ಅಲ್ಲದೆ, ಕಿರಿಯರಿಗೆ ಮಾದರಿಯಾಗಿ ಇಂದಿಗೂ ದಣಿವರಿಯದ ದುಡಿಮೆ. ಕನ್ನಡದ ಕಣ್ವರೆನಿಸಿದ ಬಿ.ಎಂ.ಶ್ರೀ. ಪ್ರತಿಷ್ಠಾನ, ಡಾ॥ ಬಿ. ಶಿವಮೂರ್ತಿಶಾಸ್ತ್ರಿ ಪ್ರತಿಷ್ಠಾನಗಳ ಅಧ್ಯಕ್ಷರಾಗಿ ಮತ್ತು ಹತ್ತು ಹಲವು ಸಾಹಿತ್ಯಿಕ-ಧಾರ್ಮಿಕ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ, ಪ್ರಾಮಾಣಿಕವಾಗಿ, ನಿಸ್ಪೃಹತೆಯಿಂದ ಸದಾ ತಮ್ಮನ್ನು ತೊಡಗಿಸಿಕೊಂಡಿರುವ ಆರಾಧ್ಯರು ಆದರಣೀಯರು, ಅಭಿನಂದನೀಯರು!

XXX

ಸರಳತೆಯ ಸಾಕಾರಮೂರ್ತಿ ಬಸವಾರಾಧ್ಯರು

-ಶ್ರೀಮತಿ ಎಸ್.ಕೆ. ರಮಾದೇವಮ್ಮ

ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ನಾರಸಿಂಹ ಹಳ್ಳಿಯಲ್ಲಿ ದಿನಾಂಕ ೨೦.೨.೧೯೨೬ರಂದು ಪ್ರೊ. ಎಸ್. ಬಸವಾರಾಧ್ಯರ ಜನನವಾಯಿತು. ಇವರ ತಂದೆ ಶ್ರೀ ನಂಜುಂಡಾರಾಧ್ಯ, ತಾಯಿ ಗಿರಿಜಮ್ಮ. ಕಡುಬಡತನದಲ್ಲೇ ಬೆಳೆದಾಗ್ಯೂ, ಇವರು ದೂರದ ಕೋಲಾರದಿಂದ ಸಾಂಸ್ಕೃತಿಕ ರಾಜಧಾನಿ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿ, ೧೯೫೦ರಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದರು. ವಿದ್ವನ್ಮಣಿಗಳಾದ ತೀ.ನಂ.ಶ್ರೀ. ಹಾಗೂ ಡಿ.ಎಲ್.ಎನ್.ರವರ ಹೆಜ್ಜೆಗಳನ್ನನುರಿಸಿ ನಡೆದ ಬಸವಾರಾಧ್ಯರು ನಿಘಂಟು ರಚನೆ ಹಾಗೂ ಗ್ರಂಥ ಸಂಪಾದನಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡರು.

ಒಂದು ಶಬ್ದಕ್ಕೆ ಎಷ್ಟು ಅರ್ಥವಿದೆ ಎಂಬುದನ್ನು ಸಾಹಿತ್ಯ ಕೃತಿಗಳಿಂದ ಆಯ್ಕೆ ಮಾಡುವ ಕಾರ್ಯಕ್ಕೆ ಆಯ್ಕೆ ಮಾಡಲ್ಪಟ್ಟ ಎಂ.ಎ. ಪದವೀಧರರ ಗುಂಪಿನಲ್ಲಿ ಬಸವಾರಾಧ್ಯರ ಹೆಸರೂ ಸೇರ್ಪಡೆಯಾಗಿತ್ತು. ಅಂದಿನಿಂದ ಅವರು ಈ ಸಂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಂಡು, ಶಬ್ದವಿಹಾರಿಯೇ ಆದರು. ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ತಮ್ಮ ಜೀವನ ವೃತ್ತಿಯನ್ನು ಆರಂಭಿಸಿದ ಆರಾಧ್ಯರು ಕನ್ನಡ ನಿಘಂಟು ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಆರಂಭಿಸಿದಾಗ ಡಿ.ಎಲ್. ನರಸಿಂಹಾಚಾರ್ಯರಿಂದ ಈ ಕೆಲಸಕ್ಕೆ ಇವರನ್ನು ಆಯ್ಕೆ ಮಾಡಲಾಯಿತು. ಈ ಯೋಜನೆಯಲ್ಲಿ ಮುಖ್ಯ ಸಂಪಾದಕರಿಂದ ಪ್ರಧಾನ ಸಂಪಾದಕರವರೆಗೆ ಸೇವೆ ಸಲ್ಲಿಸಿ, ಕನ್ನಡಕ್ಕೊಂದು ಮಹತ್ವದ ನಿಘಂಟನ್ನು ನಿರ್ಮಿಸಿ ಕೊಟ್ಟರು.

೧೯೭೧ರಿಂದ ೧೯೮೬ರವರೆಗೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ, ವೃತ್ತಿಯಿಂದ ನಿವೃತ್ತರಾದರು. ಈ ಮುಖ್ಯ ಹೆಜ್ಜೆಗಳ ನಡುವೆ, ಪಠ್ಯಪುಸ್ತಕ ಸಮಿತಿಗಳಲ್ಲಿ ಪಿ.ಹೆಚ್.ಡಿ. ಪ್ರಕಟಣೆಯ ಸಲಹೆಗಾರರಾಗಿ ಬೆಂಗಳೂರು, ಮೈಸೂರು, ಕರ್ನಾಟಕ, ಹಾಗೂ ಚಾಮರಾಜ ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸಿದರು.

ಡಾ. ಶಿವಮೂರ್ತಿಶಾಸ್ತ್ರಿ ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನಗಳಲ್ಲಿ ಕಾರ್ಯ ನಿರ್ವಹಿಸಿದರು. ಬಿ.ಎಂ. ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿದ್ದರು, ಗೋಖಲೆ ಇಸ್‌ಸ್ಟಿಟ್ಯೂಟ್ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಮುಂತಾದ ಸಂಸ್ಥೆಗಳೊಡನೆಯೂ ಸಂಪರ್ಕವನ್ನಿಟ್ಟು ಕೊಂಡಿದ್ದರು. ೧೯೯೮ರಿಂದ ೨೦೦೧ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ತಮ್ಮ ಅಧ್ಯಕ್ಷತೆಯ ಕಾಲದಲ್ಲಿ ತಾಲ್ಲೂಕು ಸಾಹಿತ್ಯ ಸಮ್ಮೇಳನಗಳಿಗೆ ಚಾಲನೆಯನ್ನು ಕೊಟ್ಟರು. ಕನ್ನಡ ಸಾಹಿತ್ಯ ಪರಿಷತ್ತಿನ ಅಚ್ಚು ಕೂಟವನ್ನು ಆಧುನೀಕರಿಸಿ, ಎಲ್ಲಾ ಮುದ್ರಣ ಕಾರ್ಯ ಪರಿಷತ್‌ನ ಅಚ್ಚು ಕೂಟದಲ್ಲೇ ಆಗುವಂತೆ ಮಾಡಿದರು. ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು, ರತ್ನಕೋಶ ಮತ್ತು ಸಂಕ್ಷಿಪ್ತ ಕನ್ನಡ ನಿಘಂಟುಗಳ ಪರಿಷ್ಕರಣಾ ಕಾರ್ಯವನ್ನು ನಿರ್ವಹಿಸಿದರು. ಆಕ್ಸ್‌ಫರ್ಡ್ ಇಂಗ್ಲೀಷ್ ನಿಘಂಟಿನ ಪರಿಷ್ಕರಣ ಕಾರ್ಯ ಇನ್ನೂ ನಡೆಯುತ್ತಿದೆ.

ಅವರು ಒಟ್ಟು ೩೧ ಕೃತಿಗಳನ್ನು ರಚಿಸಿದ್ದಾರೆ. ಪೂಜ್ಯ ಡಿ.ಎಲ್.ಎನ್.ರವರಿಂದ ಗ್ರಂಥ ಸಂಪಾದನಾ ದೀಕ್ಷೆಯನ್ನು ಪಡೆದಿರುವ ಇವರು, ಇಂದಿಗೂ ಆ ಕಾರ್ಯವನ್ನು ನಡೆಸಿಕೊಂಡೇ ಹೋಗುತ್ತಿದ್ದಾರೆ.

ಹಳಗನ್ನಡ ವಿದ್ವಾಂಸರುಗಳಾದ ಕಿಟಲ್, ಕುವೆಂಪು, ಡಿ.ಎಲ್.ಎನ್., ಎ.ಆರ್.ಕೃ., ತೀ.ನಂ.ಶ್ರೀ. ಕುವೆಂಪು, ರಾಘವಾಚಾರ್ ಮುಂತಾದವರ ಸಾಲಿನಲ್ಲಿ ನಿಲ್ಲುವಂತಹ ಸಾಮರ್ಥ್ಯವನ್ನು ಬಸವಾರಾಧ್ಯರು ಪಡೆದಿರುದಾಗ್ಯೂ, ಹೊರಗಡೆಗೆ ತುಂಬಾ ಸಾಧಾರಣ ವ್ಯಕ್ತಿಯಂತೆ ಕಾಣಿಸಿಕೊಳ್ಳುತ್ತಾರೆ. ಯಾವ ವಿಧವಾದ ಹಮ್ಮುಬಿಮ್ಮುಗಳಿಲ್ಲದೆ ಎಲ್ಲರೊಡನೆ ಬೆರೆಯತ್ತಾ, ಸರಳ ವ್ಯಕ್ತಿಯಂತೆ ಇರುವುದು ಇವರ ವ್ಯಕ್ತಿತ್ವದ ವೈಶಿಷ್ಠ್ಯ ಎಲೆ ಮರೆಯ ಕಾಯಿಯಂತೆ ತಮ್ಮ ಪಾಡಿಗೆ ತಾವು ತಮ್ಮ ವಿದ್ವತ್ ಪ್ರಂಪಚದಲ್ಲಿ ಮುಳುಗಿರುತ್ತಾರೆ, ಬೂದಿ ಮುಚ್ಚಿದ ಕೆಂಡದಂತಿದ್ದಾರೆ. ಎಲ್ಲೂ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡದೆ. ಸದಾ ಎಲ್ಲರೊಡನೆ ನಗುನಗುತ್ತಾ ಮಾತನಾಡಿಕೊಂಡು ಇರುತ್ತಾರೆ. ವಿನಯ ವಿದ್ಯೆಗೆ ಭೂಷಣವೆಂಬುದನ್ನು ಅರಿಸಿರುವವರು.

ನನಗೆ ಇವರು ಈಗ ಸುಮಾರು ಹದಿನೈದು ವರ್ಷಗಳಿಂದ ಚೆನ್ನಾಗಿ ಪರಿಚಿತರಾಗಿದ್ದಾರೆ. ಸೌಜನ್ಯದಿಂದ ಮಾತನಾಡುತ್ತಾರೆ. ನನ್ನ ಹತ್ತಿರ ತುಂಬಾ ಮಾಡಲು ಕೆಲಸವಿದೆ ನಿಮ್ಮ ಸಹಾಯವನ್ನು ಪಡೆದುಕೊಳ್ಳಬಹುದಿತ್ತು ಎಂದು ಸದಾ ಹೇಳುತ್ತಾರೆ. ಆದರೆ, ನಮ್ಮ ಮನೆ ಹಾಗೂ ಅವರ ಮನೆ North pole, south pole ನಲ್ಲಿರುವಂತೆ ಇದೆ. ಆದ್ದರಿಂದ, ನನಗೆ ಅವರೊಡನೆ ಸಂಪರ್ಕವನ್ನಿಟ್ಟುಕೊಂಡು ಲಾಭ ಪಡೆಯವ ಅವಕಾಶವಿಲ್ಲ. ಒಮ್ಮೆ ಅವರ ಮನೆಗೆ ಹೋಗಿದ್ದೆ, ಅವರು ತಮ್ಮ ಪುಸ್ತಕಗಳನ್ನು ಓರಣವಾಗಿ ಅಟ್ಟದ ಮೇಲೆ ಜೋಡಿಸಿಟ್ಟಿರುವುದನ್ನು ನೋಡಿ ತುಂಬಾ ಖುಷಿಯಾಯಿತು, ಅಷ್ಟೆತ್ತರದಲ್ಲಿದೆಯಲ್ಲಾ, ಹೇಗೆ ತೆಗೆದು ಕೊಳ್ಳುತ್ತೀರಾ ಎಂದಾಗ, ಏಣಿಯನ್ನು ತೋರಿಸಿದರು. ಅವರ ತಾಳ್ಮೆಯನ್ನು ನೋಡಿ ಆಶ್ಚರ್ಯವಾಯಿತು.

ಎಪ್ಪತ್ತೈದು ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನವರಾದಾಗ್ಯೂ, ಅಷ್ಟು ಚಟುವಟಿಕೆಯಿಂದ ತಮ್ಮನ್ನು ವಿದ್ವತ್ ಪ್ರಪಂಚಕ್ಕೆ ತೆರೆದಿಟ್ಟು ಕೊಂಡಿರುವುದು ಹೆಮ್ಮೆಯ ವಿಷಯವೇ ಸರಿ.

ಅಷ್ಟು ವಿದ್ವತ್ ಇದ್ದಾಗ್ಯೂ ತಮ್ಮ ಸರಳತೆ ಹಾಗೂ ವಿನಯವನ್ನು ಪಾಲಿಸಿಕೊಂಡು ಬರುತ್ತಿರುವುದು ತುಂಬಾ ಮೆಚ್ಚಬೇಕಾದ ಅಂಶ. ದೇವರು ಅವರನ್ನು ಆಶೀರ್ವದಿಸಲಿ!

ಸಾಹಿತ್ಯಾಲೋಕ

ಚತುರಾಚಾರ್ಯ ಚಾರಿತ್ರ : ಒಂದು ಅವಲೋಕನ

-ಷಣ್ಮುಖಯ್ಯ ಅಕ್ಕೂರಮಠ

ಹದಿನೇಳನೆಯ ಶತಮಾನ ವೀರಶೈವ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಗಮನಿಸಬೇಕಾದ ಶತಮಾನವಾಗಿದೆ. ಈ ಶತಮಾನದ ಕವಿಗಳಲ್ಲಿ ಯಳಂದೂರಿನ ಮಹಾಕವಿ ಷಡಕ್ಷರದೇವ, ಗೂಳೂರು ಸಿದ್ಧವೀರಣಾರ್ಯ, ಚಿಕ್ಕನಂಜೇಶ, ಕೊಟ್ಟೂರು ಬಸವಲಿಂಗ, ಸಿದ್ಧನಂಜೇಶ ಇವರು ಪ್ರಮುಖರು. ಇವರ ಪಂಕ್ತಿಯಲ್ಲಿ ನಿಲ್ಲಬಲ್ಲ ಮತ್ತೊಬ್ಬ ಕವಿ-ದಾರ್ಶನಿಕ ಸಂಪಾದನೆಯ ಪರ್ವತೇಶ್ವರ. ಈತನ ಕೃತಿ- 'ಚತುರಾಚಾರ್ಯ ಚಾರಿತ್ರ'*

ಈ ಶತಮಾನದಲ್ಲಿ ಪುರಾಣಯುಗವು ಹಿಂದೆ ಸರಿದು ಚರಿತ್ರೆಗಳ ಯುಗವು ಆರಂಭವಾದಂತೆ ಕಂಡುಬಂದರೂ, ಹರೀಶ್ವರನ ಪ್ರಭುದೇವರ ಪುರಾಣ; ಬಸವಲಿಂಗ ಕವಿಯ ಶಿವಾಧಿಕ್ಯ ಪುರಾಣ; ಬಸವಲಿಂಗ ಕವಿಯು ಕೊಟ್ಟೂರು ಬಸವೇಶ್ವರ ಪುರಾಣ ಇತ್ಯಾದಿ ಪುರಾಣಗಳೂ ರಚನೆಯಾಗಿರುವುದು ಕಂಡುಬರುತ್ತದೆ. ಆದರೆ ಚರಿತ್ರೆಯ ದೃಷ್ಟಿಯಿಂದ ಉಪಯುಕ್ತವಾದ ವೀರಶೈವ ಕೃತಿಗಳಲ್ಲಿ ಸಿದ್ಧನಂಜೇಶನ 'ಗುರುರಾಜ ಚಾರಿತ್ರ'; ಶಾಂತಲಿಂಗ ದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ'; ಸಿದ್ಧನಂಜೇಶನ 'ರಾಘವಾಂಕ ಚರಿತ್ರೆ'; ಪರ್ವತೇಶನ 'ಚತುರಾಚಾರ್ಯ ಚಾರಿತ್ರ'-ಇವು ಮಹತ್ವದ ಕೃತಿಗಳಾಗಿವೆ.

ಈ ಶತಮಾನದ ವೀರಶೈವ ಕವಿಗಳ ಗ್ರಂಥರಚನೆಯಲ್ಲಿ ನವೀನತೆಯನ್ನು ಗುರುತಿಸಬಹುದಾಗಿದೆ. ಹಿಂದೆ, ೧೨ನೆಯ ಶತಮಾನದಿಂದ ಹೆಚ್ಚಾಗಿ ಮತಪ್ರಚಾರದ ದೃಷ್ಟಿಯಿಂದ ಗ್ರಂಥಗಳನ್ನು ರಚಿಸುತ್ತಿದ್ದರು. ಪುರಾಣ ಹಾಗೂ ವಚನ ರಚನೆಗಳು ಮುಖ್ಯವಾಗಿದ್ದವು. ಆದರೆ ಈ ಶತಮಾನದಲ್ಲಿ ಪುರಾಣಗಳ ಜೊತೆಗೆ, ಚರಿತ್ರೆಗಳನ್ನು ಹಾಗೂ ಟೀಕೆಗಳನ್ನು ಬರೆಯುವ ನೂತನ ವಿಧಾನ ಸೃಷ್ಟಿಯಾಯಿತು. ಟೀಕಾಕಾರಲ್ಲಿ ಶಾಂತಮಲ್ಲ, ಪರ್ವತ ಶಿವಯೋಗಿ, ಸಂಪಾದನೆಯ ಗುರುಲಿಂಗದೇವ, ಸೋಮಶೇಖರ ಶಿವಯೋಗಿ ಮುಂತಾದವರು ಮುಖ್ಯರಾಗಿ ಕಾಣುತ್ತಾರೆ. ವೀರಶೈವ ಸಿದ್ಧಾಂತಶಿಖಾಮಣಿ ಹಾಗೂ

* ಸಂ. : ಎನ್. ಬಸವಾರಾಧ್ಯ, ಪ್ರ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೬.

ಶಿವಾಧಿಕ್ಯಗಳಂತಹ ಅಧಿಕೃತ ವೀರಶೈವ ಸಿದ್ಧಾಂತ ಶಿಖಾಮಣಿ ಹಾಗೂ ಶಿವಾಧಿಕ್ಯಗಳಂತಹ ಅಧಿಕೃತ ಸಿದ್ಧಾಂತ ಗ್ರಂಥಗಳಿಗೆ ಟೀಕೆಗಳು ಬರೆಯಲ್ಪಟ್ಟವು. ಹೀಗೆ ಸಾಹಿತ್ಯ ಸೃಷ್ಟಿಯ ಕೆಲವು ಪ್ರಮುಖ ಅಂಶಗಳಿಂದ ಈ ಶತಮಾನದ ವೈಶಿಷ್ಟವನ್ನು ಗುರುತಿಸಬಹುದಾಗಿದೆ.

ಈ ಶತಮಾನದ ಪ್ರಮುಖ ಕವಿ ಪರ್ವತೇಶ. ಈತನ ಕಾಲ ಕ್ರಿ.ಶ. ೧೬೯೮. ಕರ್ನಾಟಕ ಕವಿಚರಿತ್ರೆಕಾರರೂ ಇದೇ ಕಾಲವನ್ನು ಅನುಮೋದಿಸುತ್ತಾರೆ. ಈತನ ಗುರು ಪರಂಪರೆ ತೋಂಟದ ಸಿದ್ಧಲಿಂಗರದು. ಪರ್ವತೇಶನ ಏಕೈಕ ಕೃತಿ-'ಚತುರಾಚಾರ್ಯ ಚಾರಿತ್ರ'. ಈತನು ಬೇರಾವ ಕೃತಿಗಳನ್ನೂ ಬರೆದಂತೆ ಕಂಡುಬರುವುದಿಲ್ಲ. ಈ ಕೃತಿಯಲ್ಲಿ ಆರು ಕಾಂಡಗಳು, ಐವತ್ತು ನಾಲ್ಕು ಸಂಧಿಗಳೂ, ಮೂರುಸಾವಿರದ ಒಂದುನೂರಾ ಎಂಬತ್ತೇಳು ಪದ್ಯಗಳೂ ಇವೆ. ಇದು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಇದೊಂದು ಆಚಾರ್ಯ ಚರಿತ್ರೆಯ ಮಹಾಕಾವ್ಯ. ಈ ಕಾವ್ಯದಲ್ಲಿ ರೇಣುಕ, ಮರುಳಸಿದ್ಧ, ಏಕೋರಾಮ ಹಾಗೂ ಪಂಡಿತಾರಾಧ್ಯರೆಂಬ ನಾಲ್ವರು ಆಚಾರ್ಯರ ಚರಿತ್ರೆ ನಿರೂಪಿತವಾಗಿದೆ.

ಈ ಕಾವ್ಯದ ಪ್ರತಿ ಸಂಧಿಯ ಕೊನೆಗೆ ಈ ಕೆಳಕಂಡ ಪದ್ಯದಿಂದ ಸಂಧಿ ಮುಕ್ತಾಯವಾಗುವುದು ಈ ಕೃತಿಯ ವೈಶಿಷ್ಟವಾಗಿದೆ.

ಇದು ಚತುರ್ಯುಗದೊಳಾಚಾರ್ಯರೂಪಂ ತಾಳಿ
ಯಾದವಿ ಶಾಂಭವ ಮರ್ತ್ಯದೋಳ್ ಚರಿಸಿ ಪಾವನವ
ಮುದದಿ ಮಾಡುವ ರೇವಣೇಶ ಮರುಳೇಶ ಪಂಡಿತ ಏಕರಾಮಾಧ್ಯರ
ಸದಮಲ ಸುಚಾರಿತ್ರ ಸಂಪಾದನಾಚಾರ್ಯ
ವಿದಿತ ಶ್ರೀಚನ್ನಮಲ್ಲೇಶ್ವರ ನಿರೂಪಣಂ
ಪದುಳದಿಂ ಕೇಳ್ವ ಶಿವಭಕ್ತ ಮಾಹೇಶ್ವರರ್ಗಿಷ್ಟಾರ್ಥವಹುದು ಸತ್ಯಂ॥ (೧-೫೭)

ಈ ಪದ್ಯದಲ್ಲಿ ರೇವಣೇಶ, ಮರುಳೇಶ, ಪಂಡಿತ, ಏಕರಾಮಾಧ್ಯರ ಸದಮಲ ಸುಚಾರಿತ್ರ ಎಂದೂ, ಮುಂದಿನ ಪದ್ಯದಲ್ಲಿ (೧-೧-೫೮) 'ಮಹಾಲಿಂಗ ಪದಪದ್ಮಷಟ್ಪದೋದಿತ ರೂಪರಹ ಚತುರ್ಗುರು ಚರಿತ್ರದೊಳ್' ಎಂದು ಹೇಳಿದ್ದರೂ,

ಗುರು ಚರ್ತುವಿಧ ಮಧ್ಯದೋಳ್ ನಿಂದ ವರಗುರುವೆ
ಪರಮೇಶ್ವರನೆ ಗುಣಾತೀತನೆ ನಿರುಪಮನೆ
ಗುರುಯಾನತ ಕಲ್ಪತರುವ ಜ್ಞಾನಾಮೃತಗಳಿರವೆಯಾಮರರಧೇನುವೆ
ಗುರುವೆ ಮುಕ್ತಿಯ ಮಣಿಯ ಕೊಡುವ ಚಿಂತಾಮಣಿಯೆ
ಗುರುವೆ ಯುಕ್ತಿಯ ಸಾಣೆವಿಡಿದ ಪರುಷದ ಕಣಿಯೆ
ಗುರುವೆ ವಿಶ್ವಾರಾಧ್ಯ ವಿಶ್ವತಾನಂದವಿತ್ತನವರತ ಪೊರೆವುದೆನ್ನಂ॥

ಎಂದು ವಿಶ್ವಾರಾಧ್ಯರನ್ನು ಅತ್ಯಂತ ಗೌರವಭಾವದಿಂದ ಸ್ಮರಿಸುತ್ತಾನೆ. ಮತ್ತೆ ಹೇಳುತ್ತಾನೆ : 'ಆಚಾರ್ಯ ರೇವಣಸಿದ್ಧೇಶ, ಮರುಳಸಿದ್ಧಾಚಾರ್ಯ, ಪಂಡಿತಾರಾಧ್ಯ, ಏಕೋರಾಮಾಚಾರ್ಯ, ವಿಶ್ವೇಶ್ವರಾಚಾರ್ಯರೆನಿಪ ಪಂಚಕಲಶದಾಚಾರ್ಯರ ಸ್ವಾಚಾರ್ಯ ಚಾರಿತ್ರ ಸಕಲ ಶಿವಶರಣರ್ಗೆ ಗೋಚರಿಸುವಂದದಿಂ ರಚಿಸುವೆಂ ಕೃತಿಯನತ್ಯಾಶ್ಚರ್ಯವಪ್ಪುದಿದು' ಎಂದು ಪರ್ವತೇಶ ತನ್ನ ಕಾವ್ಯದಲ್ಲಿ ರೇಣುಕಾದಿ ಪಂಚಾಚಾರ್ಯರನ್ನು ಅನನ್ಯ ಭಕ್ತಿಯಿಂದ ಸ್ತುತಿಸಿ ಎಲ್ಲ ಶರಣರಿಗೂ ತಿಳಿಯುವಂತೆ ಆಶ್ಚರ್ಯಕರವಾದ ರೀತಿಯಲ್ಲಿ ಕಾವ್ಯ ರಚಿಸುತ್ತೇನೆ ಎಂದು ಹೇಳಿಕೊಂಡಿದ್ದಾನೆ. ಕವಿ ತನಗೆ ತಿಳಿದ ಮಾಹಿತಿಗಳಿಂದ ಚತುರಾಚಾರ್ಯರ ಚಾರಿತ್ರವನ್ನು ಮಾತ್ರ ಕಾವ್ಯದಲ್ಲಿ ನಿರೂಪಿಸುವ ಉದ್ದೇಶವನ್ನಿಟ್ಟುಕೊಂಡಿದ್ದರೂ, ಕಾವ್ಯದ ಪ್ರಥಮ ಸಂಧಿಯಲ್ಲಿ ಪಂಚಾಚಾರ್ಯರನ್ನು ಅನನ್ಯಭಕ್ತಿಯಿಂದ ಸ್ತುತಿಸಿದ್ದಾನೆ.

ಕಾವ್ಯದ ಆರಂಭದಲ್ಲಿ ಪರ್ವತೇಶ, ತನ್ನ ಗುರು ಚನ್ನಮಲ್ಲಿಕಾರ್ಜುನದೇವರ ಪಾದಕ್ಕೆ ನಮಸ್ಕರಿಸಿ 'ಗುರುವೆ ಧರಣಿಯೋಳ್ ಮೆರೆವ ಚತುರಾಚಾರ್ಯರನ್ವಯವ ಕರುಣದಿಂದೊರೆದು ಕೃತಕೃತ್ಯನು ಮಾಳ್ಪುದು' ಎಂದು ಪ್ರಾರ್ಥಿಸಿಕೊಳ್ಳಲು ಪೇಳ್ವೆನೊಲವಿಂ ಎಂದು ಗುರುಗಳು ಒಲವಿನಿಂದ ಅಪ್ಪಣೆ ಮಾಡುತ್ತಾರೆ. ಅನಂತರ ರೇವಣಸಿದ್ಧರ ಅನ್ವಯದ ಪೌರಾಣಿಕ ಬಸವಯ್ಯ ಹಾಗೂ

ಶರಣರು 'ಮೂಲ ಚತುರ್ಗುರುಗಳ ಉಪದೇಶ ವಿಧಿಯಂ ನೀಂ ಪಾಲಿಸುವುದು' ಎಂದು ಪರ್ವತೇಶನನ್ನು ಕೇಳಿಕೊಳ್ಳಲು ನಾನು ಈ ಕಾವ್ಯವನ್ನು ರಚಿಸಿದ್ದೇನೆಂದು ಕಾವ್ಯದ ಉದ್ದೇಶವನ್ನು ಕವಿ ತಿಳಿಸಿದ್ದಾನೆ. ಮತ್ತೆ ಗುರು ಈತನ ಕನಸಿನಲ್ಲಿ ಬಂದು 'ತಲೆದಡಹಿ ನಿಂದು' ಕೃತಿಯನ್ನು ಹೇಳಿಸಿದನೆಂದು ಹೇಳಿಕೊಳ್ಳುತ್ತಾನೆ.

ಕಾವ್ಯದ ಕಥಾನಾಯಕರಾದ ನಾಲ್ಕುಜನ ಆಚಾರ್ಯರು ಭೂಲೋಕಕ್ಕೆ ಬರುವ ಮುನ್ನ ಶಿವನು ಕೈಲಾಸದಲ್ಲಿ ಚತುರಾಚಾರ್ಯರನ್ನು ಕುರಿತು ಹೀಗೆ ಹೇಳುತ್ತಾನೆ:

'ಆದಿ ವೃಷಭ ಬಸವನಾಮವನ್ನು ಹೊತ್ತು ಪ್ರಮಥರೊಂದಿಗೆ ಭೂಲೋಕಕ್ಕೆ ಹೋಗುತ್ತಾನೆ. ನೀವು ಅವನಿಗಿಂತ ಮೊದಲೇ ಭೂಲೋಕಕ್ಕೆ ಹೋಗಿ ವೀರಶೈವೋಪದೇಶವನ್ನು ಮಾಡುತ್ತಾ ಭೂಲೋಕವನ್ನು ಪಾವನ ಮಾಡಿ ಎಂದು ಆಜ್ಞಾಪಿಸುತ್ತಾನೆ. ಆಗ ಆಚಾರ್ಯರು ದೇವ ಪಾದ ಸೇವೆ ಹಾಗೂ ಪ್ರಮಥರನ್ನು ಬಿಟ್ಟು ನಾವು ಹೇಗೆ ಹೋಗುವುದು?' ಎನ್ನುತ್ತಾರೆ. ಆಗ ಶಿವನು 'ನಾನು ನಿಮ್ಮನ್ನು ನಿರಂತರವಾಗಿ ರಕ್ಷಿಸುತ್ತೇನೆ' ಎಂದು ಹೇಳಿ ನಾಲ್ವರೂ ಭೂಲೋಕಕ್ಕೆ ಹೋಗಿ ವೀರಶೈವೋಪದೇಶವನ್ನು ಮಾಡಿ ಎಂದು ಕರುಣ ಪ್ರಸಾದವನ್ನು ಕೊಟ್ಟು ಕಳುಹಿಸುತ್ತಾನೆ. ಶಿವನ ಪ್ರಕಾರ ಚತುರಾಚಾರ್ಯರು ಭೂಲೋಕಕ್ಕೆ ಬರುತ್ತಾರೆ. (೧-೨-೧೦೩೪)

ಕವಿ ತನ್ನ ಕಾವ್ಯವನ್ನು 'ಚರಿತ್ರೆ' ಎಂದು ಕರೆದಿದ್ದರೂ, ಅವತಾರವಾದದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಆಚಾರ್ಯರ ಕಥೆಯನ್ನು ಕೈಲಾಸದಿಂದಲೇ ಆರಂಭಿಸುತ್ತಾನೆ. 'ಚತುರಾಚಾರ್ಯ ಚಾರಿತ್ರ' ಕನ್ನಡ ಸಾಹಿತ್ಯದ ಒಂದು ಶ್ರೇಷ್ಠ ಕಾವ್ಯಕೃತಿ. ವಾರ್ಧಕ ಷಟ್ಪದಿಯಲ್ಲಿ ಇದು ರಚಿತವಾಗಿದೆ.

ವೀರಶೈವ ಧರ್ಮ ಸಂಸ್ಥಾಪಕರೂ, ಸಂವರ್ಧಕರೂ ಆದ ಪಂಚಾಚಾರ್ಯರಲ್ಲಿ ಕವಿ ನಾಲ್ವರು ಆರ್ಚಾಯರ ಚರಿತ್ರೆಯನ್ನು ಮಾತ್ರ ತನ್ನ ಕಾವ್ಯದಲ್ಲಿ ನಿರೂಪಿಸಿದ್ದಾನೆ. ಪರ್ವತೇಶನು ವೀರಶೈವ ಮತಾಚಾರ್ಯರಲ್ಲೂ, ಅನುಭಾವಿಗಳಾದ ಶರಣರಲ್ಲೂ ಪೂಜ್ಯ ಭಾವವನ್ನಿಟ್ಟು ಕೊಂಡವನು. ಆಚಾರ್ಯರ ಚರಿತ್ರೆಯನ್ನು ನಿರೂಪಿಸುವ ಸಂದರ್ಭದಲ್ಲಿ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ ಮತ್ತು ತೋಂಟದ ಸಿದ್ಧಲಿಂಗರನ್ನು ವಿಶೇಷವಾಗಿ ಸ್ಮರಿಸಿದ್ದಾನೆ.

ಕವಿ ತನ್ನ ಕಾವ್ಯವನ್ನು ಕುರಿತು 'ಇದು ನಿರ್ದೋಷಯುತವಾದುದು, ನವರಸಭರಿತವಾದುದು ಮತ್ತು ವಸ್ತುಕ ಹಾಗೂ ವರ್ಣಕ ಗುಣಗಳುಳ್ಳದ್ದು' ಎಂದು ಹೇಳುತ್ತಾನೆ. ಕಾವ್ಯದಲ್ಲಿ ದೋಷಗಳಿದ್ದರೆ ತಿದ್ದಬೇಕೆಂದೂ ಕೇಳಿಕೊಳ್ಳುತ್ತಾನೆ. ಈ ಮಾತು ಕವಿಯ ವಿನಯಶೀಲತೆಗೆ ಸಾಕ್ಷಿಯಾಗುತ್ತದೆ.

ಮತ್ತೆ ಹೇಳುತ್ತಾನೆ. ತನ್ನ ಕಾವ್ಯ 'ವೇದ ಪೌರಾಣಾಗಮಾದಿ ಶಾಸ್ತ್ರ ದಿರವಿನೇಶಗುಳ್ಳ ಶಿವಜ್ಞಾನ ಗ್ರಂಥವಾಗಿದೆ'. ಇದನ್ನು ಆಚಾರಹೀನರು, ನಾಸ್ತಿಕರು ಅರಿಯಬಲ್ಲರೆ? ಎಂದು ಪ್ರಶ್ನಿಸುತ್ತಾನೆ.

ಪರ್ವತೇಶ ತನ್ನ ಕೃತಿಗೆ 'ಚತುರಾಚಾರ್ಯ ಚಾರಿತ್ರ' ಎಂದು ಕರೆದಿದ್ದರೂ ಕಾವ್ಯದ ಪ್ರಥಮ ಕಾಂಡ ಪ್ರಥಮ ಸಂಧಿಯಲ್ಲಿ ಪಂಚಾಚಾರ್ಯರಾದ ರೇಣುಕ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರೆಂಬ ಐದು ಜನ ಆಚಾರ್ಯರನ್ನು ಭಕ್ತಿಭಾವದಿಂದ ಸ್ಮರಿಸಿಕೊಂಡಿದ್ದಾನೆ.

> "...ಅಷ್ಟಮೂರ್ತಿ ಭರ್ಗನೊಳೈಕ್ಯವಾದ ರೇಣುಕ ಜಯ" (೧.೧.೫೦)
> "...ಮರುಳಸಿದ್ಧೇಶ್ವರನೆ ನವಕೋಟಿ ಸಿದ್ಧ ಪ್ರಸಿದ್ಧ ಹೃತ್ಸಿದ್ಧ ಗುರುವೆ" (೧.೧.೫೭)
> "...ಏಕರಾಮಾರಾಧ್ಯ ಲೋಕವಿಶ್ರುತಪಾದ್ಯ ಸಾಕು ಮೂಲೋಕದೊಡೆಯ" (೧.೧.೫೨೦)
> "...ಶಿವಪಂಡಿತಾರಾಧ್ಯ ಕೊಡು ಚಾರು ಬುದ್ಧಿಯಂ ಎನ್ನ ಕೃತಿಗೆ" (೧.೧.೫೩)
> "...ಗುರುವೆ ವಿಶ್ವಾರಾಧ್ಯ ವಿಶ್ವಾತಾನಂದವಿತ್ತವ ನವರತ ಪೊರೆವುದೆನ್ನಂ" (೧.೧.೫೪)

ಹೀಗೆ ಪಂಚಾಚಾರ್ಯರನ್ನು ಸ್ತೋತ್ರ ಮಾಡಿದ್ದಾನೆ. ವೇದವೇದಾಂತ, ಸಿದ್ಧಾಂತ, ಆಗಮಗಳನ್ನು ಅಧ್ಯಯನ ಮಾಡಿದ ವೀರಶೈವ ಪ್ರಾಚೀನ ಪರಂಪರೆಯನ್ನು ಚೆನ್ನಾಗಿ ಬಲ್ಲ ಕವಿಗೆ ವೀರಶೈವ ಮತಾಚಾರ್ಯರು-ಪಂಚಾಚಾರ್ಯರು ಎನ್ನುವ ವಿಚಾರ ಗೊತ್ತಿದೆ. ಆದರೂ ತನ್ನ ಕಾವ್ಯದಲಿ ನಾಲ್ವರ ಚರಿತ್ರೆಯನ್ನು ಮಾತ್ರ ನಿರೂಪಿಸುತ್ತಾನೆ. ಇದಕ್ಕೆ ಕಾರಣ ಗೊತ್ತಾಗುವುದಿಲ್ಲ.

ಕವಿ ಕಾವ್ಯದ ಆರಂಭದಲ್ಲಿ ತನ್ನ ಗುರುವಾದ ಸಿದ್ಧ ವೀರೇಶನನ್ನು ಅನನ್ಯ ಕೃತಜ್ಞತಾ ಭಾವದಿಂದ ಸ್ಮರಿಸುತ್ತಾನೆ. ತನ್ನ ಗುರು ವೇದವೇದಾಂತ, ಸಿದ್ಧಾಂತವನ್ನು ಬಲ್ಲ ವಿದ್ವಾಂಸರು. ಶೈವವನ್ನು ಜರಿದು ವೀರಶೈವವನ್ನು ಸ್ಥಾಪಿಸಿದ ಗುರುವರನು ಎಂದು ತನ್ನ ಗುರುವಿನ ಗರಿಮೆಯನ್ನು ಎತ್ತಿ ಹಿಡಿದಿದ್ದಾನೆ.

ಕವಿ ಸಂಧಿಯ ಆರಂಭದಲ್ಲಿ ಇಷ್ಟದೇವತಾ ಪ್ರಾರ್ಥನೆ ಮಾಡುತ್ತಾನೆ. ಎರಡನೆಯ ಪದ್ಯದಲ್ಲಿ ಒಬ್ಬೊಬ್ಬ ಪುರಾತನ ಹಾಗೂ ನೂತನ ಶರಣರನ್ನು ತಪ್ಪದೆ ಸ್ಮರಿಸುತ್ತಾನೆ. ಕೆಲವು ಕಡೆ ವಚನಕಾರರನ್ನು ನೆನೆಯುತ್ತಾನೆ. ಪ್ರಥಮ ಕಾಂಡದಲ್ಲಿ ಗುರು ಪರಂಪರೆ, ಕೈಲಾಸವರ್ಣನೆ, ಶಿವನ ಆಸ್ಥಾನದ ವರ್ಣನೆ, ಶಿವನು ಚತುರಾಚಾರ್ಯರಿಗೆ ಭೂಲೋಕಕ್ಕೆ ಹೋಗಿ ವೀರಶೈವೋಪದೇಶವನ್ನು ಮಾಡಿ ಧರೆಯನ್ನು ಪಾವನ ಮಾಡಿ ಬನ್ನಿರಿ ಎಂದು ಆಜ್ಞಾಪಿಸುವುದು, ಅಲ್ಲಲ್ಲಿ ಪ್ರಕೃತಿ ವರ್ಣನೆ, ಸೂರ್ಯೋದಯ, ಸೂರ್ಯಾಸ್ತ, ವೇಶ್ಯಾವಾಟಿಕೆ ಇತ್ಯಾದಿ ವರ್ಣನೆಗಳಿವೆ. ಇದು ವರ್ಣಕ ಕಾವ್ಯ ಹಾಗೂ ವಸ್ತುಕ ಕಾವ್ಯ ಎನ್ನಲು ಇಲ್ಲಿ ಹಲವಾರು ನಿದರ್ಶನಗಳನ್ನು ನಾವು ಕಾಣುತ್ತೇವೆ.

ಎರಡನೆಯ ಕಾಂಡವನ್ನು ಕವಿ ಸಂಪೂರ್ಣವಾಗಿ ರೇವಣಸಿದ್ಧರ ಚರಿತ್ರೆಗೆ ಮೀಸಲಾಗಿರಿಸಿದ್ದಾನೆ. ರೇವಣಸಿದ್ಧರು ಮಾಲಯಾಚಲಕ್ಕೆ ಹೋಗುವುದು, ಅಲ್ಲಿ ಅಗಸ್ತ್ಯರ ಪ್ರಾರ್ಥನೆಯಂತೆ 'ಪರಮ ರಹಸ್ಯವನ್ನು-ಕರಿಯನ್ನು ಕನ್ನಡಿಯಲ್ಲಿ ಕಾಣಿಸುವಂತೆ-ಉಪದೇಶಿಸುವುದು, ವೀರಶೈವ ಸಿದ್ಧಾಂತದ ಏಕೋತ್ತರ ಶತಸ್ಥಲಗಳ ವಿಸ್ತಾರವಾದ ವಿವರಣೆ ಈ ಕಾಂಡದಲ್ಲಿ ಬರುತ್ತದೆ. ಈ ಸಿದ್ಧರು ಕಂಚೀಪುರಕ್ಕೆ ಬರುವುದು ಮರುಳನಂತೆ ವರ್ತಿಸುವುದು, ಶಿವಕಂಚಿಯಿಂದ ವಿಷ್ಣುಕಂಚಿಗೆ ಬರುವುದು ಅಲ್ಲಿ ಅಲ್ಲಾಡುತ್ತಿದ್ದ ವಿಷ್ಣುವನ್ನು ಸಿದ್ಧಗೊಳಿಸುವುದು, ಮಂಗಳವಾಡಕ್ಕೆ ಬಂದು ಕಲ್ಲಿಸೆಟ್ಟಿಯ ಮನೆಯಲ್ಲಿ ಗಾಣ ಹೊಡೆಯುವ ಕೆಲಸ ಮಾಡುವುದು, ಕಲ್ಲಿ ಸೆಟ್ಟಿಗೆ ಇಹ-ಪರಗಳ ಮಾರ್ಗದರ್ಶನ ನೀಡುವುದು, ಶ್ರೀಶೈಲಕ್ಕೆ ಹೋಗುವುದು, ಅಲ್ಲಿ ಶಿವನು ಪ್ರತ್ಯಕ್ಷನಾಗಿ 'ನೀನು ಚೋಳ, ಮಲೆಯಾಳ, ಕುಂತಳ, ಮಗಧ, ಮಾಳವ, ಮಹಾರಾಷ್ಟ್ರ, ಪಾಂಚಾಳ, ಕಳಿಂಗ, ಅಂಗ, ವಂಗ ಇತ್ಯಾದಿ ದೇಶಗಳ ರಾಜಪುತ್ರಿಯರನ್ನು ವಿವಾಹವಾಗಿ, ವೀರಶೈವವನ್ನು ಧರೆಗೆ ಪಸರಿಸುತ್ತ ಮಂಗಳವಾಡ ದೇಶದಿ ನೆಲಸು' ಎಂದು ಆಜ್ಞಾಪಿಸುವುದು, ಮುಂದೆ ರೇವಣಸಿದ್ಧರು ಮಂಗಳವಾಡದಲ್ಲಿ ನೆಲೆಸಿ ಅನೇಕ ರಾಜಪುತ್ರಿಯರನ್ನು ಮದುವೆಯಾಗುವುದು, ಮಾಸೂರ ಮಡುವಿನಿಂದ ಸುರಗಿಯನ್ನು ಹೊರತೆಗೆಯುವುದು, ರುದ್ರಮುನಿಯ ಜನನ ಇತ್ಯಾದಿ ವಿಷಯಗಳ ವಿವರಣೆ ಈ ಕಾಂಡದಲ್ಲಿ ನಿರೂಪಿತವಾಗಿದೆ. ಕನ್ನಡ ವಾಙ್ಮಯದಲ್ಲಿ ರೇವಣಸಿದ್ಧರ ಕಥೆಗೆ ಮೂಲ ಆಕರ, ಹರಿಹರನ - "ರೇವಣಸಿದ್ಧರಗಳೆ". ಹರಿಹರ ಕವಿ ಹೇಳಿದ ಕಥೆಯನ್ನೇ ಕನ್ನಡದ ಇತರ ಕವಿಗಳೂ ಹೇಳುತ್ತಾರೆ. ಪರ್ವತೇಶನು ನಿರೂಪಿಸುವ ರೇವಣಸಿದ್ಧರ ಚರಿತ್ರೆಗೆ ಹರಿಹರನ ರೇವಣಸಿದ್ಧೇಶ್ವರ ರಗಳೆಯು ಆಧಾರವಾಗಿದ್ದರೂ, ಆಶ್ಚರ್ಯದ ಸಂಗತಿ ಎಂದರೆ ಕವಿ ಹರಿಹರನ ಹೆಸರನ್ನೇ ಉಲ್ಲೇಖಿಸದಿರುವುದು.

ಪ್ರಥಮ ಕಾಂಡದಲ್ಲಿ, ರೇವಣಸಿದ್ಧರು ತಮ್ಮ ಮಗ ರುದ್ರಮುನಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸುವ ಸಂದರ್ಭದಲ್ಲಿ ಬಸವಣ್ಣನವರ ಜನ್ಮವೃತ್ತಾಂತವನ್ನು ತಿಳಿಸುತ್ತಾರೆ. ಇದು ಬಸವಣ್ಣನವರ ಜೀವನ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಅದು ಹೀಗಿದೆ : ವಿಭಾಂಡಕನ ಹೆಂಡತಿ, ಆಕೆ ನಂದಿಯು ತನಗೆ ಮಗನಾಗಬೇಕೆಂದು ತಪಸ್ಸುಮಾಡುವುದು, ಶಿವನು ಪ್ರತ್ಯಕ್ಷನಾಗಿ ಅವರ ಇಚ್ಛೆಯನ್ನು ಪೂರೈಸುವುದು, ಭೂಲೋಕದ ರಜತಗಿರಿಯ ದಕ್ಷಿಣ ಭಾಗದ, ಭರತಖಂಡದ ನೈರುತ್ಯದಲ್ಲಿರುವ ದೇಶದಲ್ಲಿ ಬ್ರಾಹ್ಮಣವಂಶದಲ್ಲಿ ಹುಟ್ಟಿ ನಂದಿಯ ವ್ರತವನ್ನು ಆಚರಿಸುವಂತೆ ತಿಳಿಸುವುದು, ವಿಭಾಂಡಕ ಹಾಗೂ ಅವನ ಹೆಂಡತಿ ಮಾದರಸ-ಮಾದಲಾಂಬಿಕೆಯರಾಗಿ ಭೂಲೋಕದಲ್ಲಿ ಹುಟ್ಟಿ ಬಸವನನ್ನು ಕುಮಾರನನ್ನಾಗಿ ಪಡೆಯುವುದು, ಚನ್ನಬಸವಣ್ಣನ ಅವತಾರ, ಅನುಭವ ಮಂಟಪ ರಚನೆ, ೧೨ ಸಾವಿರ ಷಟ್‌ಸ್ಥಲ ಬ್ರಹ್ಮಿಗಳು, ವೀರಮಾಹೇಶ್ವರರು ಬಂದು ನೆಲೆಸುವುದು, ಒಂದು ಲಕ್ಷತೊಂಬತ್ತಾರುಸಾವಿರ ಕಂಠೀರವರೂ, ಅಷ್ಟೇ ಸಂಖ್ಯೆಯ ಚರಲಿಂಗಸ್ವಾಮಿಗಳೂ ಬಂದು ಸೇರುವುದರ ವಿವರವನ್ನು ರುದ್ರಮುನಿಗೆ ಭವಿಷ್ಯವಾಗಿ ನುಡಿಯುತ್ತಾರೆ.

ಪರ್ವತೇಶ ತನ್ನ ಕಾವ್ಯದ ಮೂರನೆಯ ಕಾಂಡದಲ್ಲಿ ಮರುಳಸಿದ್ಧನ ಚರಿತ್ರೆಯನ್ನು ನಿರೂಪಿಸುತ್ತಾನೆ. ಮರುಳಸಿದ್ಧರು ಕೊಲ್ಲಾಪುರಕ್ಕೆ ಹೋಗಿ ಮಾಯೆಯನ್ನು ಭಂಗಿಸುವುದು, ಹರನ ಲೀಲೆಯನ್ನು ದಧೀಚಿಗೆ ಹೇಳುವುದು ಇತ್ಯಾದಿ. ಭಿಕ್ಷಾಟನ ಲೀಲೆ, ಕಾಮದಹನ, ಕಲಾವಿಜಯದ ಲೀಲೆ, ತ್ರಿಪುರದಹನದ ಕತೆ, ದಕ್ಷಯಾಗ ಧ್ವಂಸ ಇತ್ಯಾದಿ ಶಿವನ ಲೀಲೆಗಳನ್ನು ಕವಿ ವರ್ಣಿಸುತ್ತಾನೆ.

ನಾಲ್ಕನೆಯ ಕಾಂಡದಲ್ಲಿ, ವೀರಭದ್ರ ಶರಭರೂಪದಿಂದ ನರಸಿಂಹನನ್ನು ಸೀಳಿದುದು, ಅರ್ಧನಾರೀಶ್ವರ ಲೀಲೆ, ಪಾಶುಪತಾಸ್ತ್ರಪ್ರದಾನ ಲೀಲೆ, ಕಂಕಾಳಧರ ಲೀಲೆ, ವಿಷಧರ ಲೀಲೆ, ಚಕ್ರಪ್ರದಾನಲೀಲೆ, ವಿಘ್ನಪ್ರದಾನ ಲೀಲೆ, ಉಮಾಸ್ಕಂದ ಲೀಲೆ, ತಾರಕಾಸುರಸಂಹಾರ ಲೀಲೆ, ಗಂಗೆಯಂ ಶಿರದೊಳಾಂತುದು, ಏಕಪಾದ ಲೀಲೆ, ಅನ್ನದಾನದ ಕಥೆ, ಗಂಗಾವತರಣ, ಕಮಲಾಸನ ಹರಿಯ ಕಮಲವ ಬಿಡಿಸಲು ಲಿಂಗವಾಗಿ ಮಧ್ಯದಲ್ಲಿ ತೋರಿದ್ದು ಇತ್ಯಾದಿ ಶಿವನ ಲೀಲೆಗಳನ್ನು ಹಾಗೂ ಮಹಿಮೆಯನ್ನು ಕವಿ ಹೃದಯಂಗಮವಾಗಿ ಬಣ್ಣಿಸಿದ್ದಾನೆ.

ಐದನೆಯ ಕಾಂಡದಲ್ಲಿ, ಏಕೋರಾಮನು ಕೇವಲ ಋಷಿಗೆ ದಿವ್ಯಾಗಮಗಳಲ್ಲಿ ನಿರೂಪಿತವಾಗಿರುವ ವಿಷಯ ತಿಳಿಸುವುದು, ಬ್ರಹ್ಮಾಂಡ ವಿಚಾರ, ಕರ್ಪರದ ರೀತಿ, ಕುಲಗಿರಿಗಳ ವಿವರ, ಬ್ರಹ್ಮಾಂಡದ ಮೇಲಿನ ಲೋಕಗಳ ವರ್ಣನೆ, ರುದ್ರನಾಮಗಳು ಇತ್ಯಾದಿ ಸಂಗತಿಗಳು ವಿವರವಾಗಿ ವರ್ಣಿತವಾಗಿವೆ. ಈ ಕಾಂಡದಲ್ಲಿ ಏಕೋರಾಮನು ಮುದ್ರಾಪುರದ ಬ್ರಾಹ್ಮಣರನ್ನೆಲ್ಲ ವಾದದಲ್ಲಿ ಸೋಲಿಸಿ, ವೀರಶೈವವನ್ನು ಎತ್ತಿ ಹಿಡಿದ ಪ್ರಸಂಗವನ್ನು ಕವಿ ತುಂಬಾ ಸ್ವಾರಸ್ಯ ಪೂರ್ಣವಾಗಿ ವರ್ಣಿಸಿದ್ದಾನೆ. ಇಲ್ಲಿ ಕವಿ ವೀರಶೈವದ ಸಮರ್ಥನೆಗಾಗಿ ವಿಪುಲ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿ ತನ್ನ ಬಹುಶ್ರುತತ್ವವನ್ನು ವ್ಯಕ್ತಪಡಿಸಿದ್ದಾನೆ. ವ್ಯಾಸ ಹಾಗೂ ಏಕೋರಾಮರ ಸಂವಾದ ಇಲ್ಲಿ ತರ್ಕಬದ್ಧವಾಗಿ ಮೂಡಿಬಂದಿದೆ.

ವಿಶ್ವೇಶ್ವರ ಲಿಂಗದಿಂದ ವೀರಶೈವೋಪದೇಶವನ್ನು ಪಡೆದ ಮಂಚಣ್ಣ ಕಾಶಿಯಲ್ಲಿ ನೆಲೆಸಿ 'ಅನ್ಯ ಸಮಯಿಗಳ ಮೂಗನ್ನು ಕತ್ತರಿಸುವವನು' 'ಪರವಾದಿ ಗಿರಿವಜ್ರದಂಡ ಪಂಡಿತ' ಎಂದು ಬಿರುದು ಹೊತ್ತು ಪರವಾದಿಗಳನ್ನು ಖಂಡಿಸಿ ಶಿವನೇ ಸರ್ವೋತ್ತಮನೆಂದು ಸಾರುತ್ತಾನೆ. ಈ ಶಿವಲೆಂಕ ಮಂಚಣ್ಣ (ವಿಶ್ವಾರಾಧ್ಯ?) ಕಲ್ಯಾಣಕ್ಕೆ ಒಂದು ಬಸವಾದಿ ಶರಣರನ್ನು ಸಂದರ್ಶಿಸುತ್ತಾನೆ. ಶಿವಲೆಂಕ ಮಂಚಣ್ಣ ವಾಮನ ಮುನೀಶ್ವರನಿಗೆ ತಮ್ಮ ಅವತಾರದ ಉದ್ದೇಶವನ್ನು ತಿಳಿಸಿ ವೀರಾಗಮದ ತತ್ತ್ವವನ್ನು ಬೋಧಿಸುತ್ತಾನೆ, ಇತ್ಯಾದಿ ವಿಷಯಗಳು ಇಲ್ಲಿವೆ.

ಚತುರಾಚಾರ್ಯ ಚಾರಿತ್ರದಲ್ಲಿ ಆರನೆಯ ಕಾಂಡ ಸಾರವತ್ತಾದ ಕಾಂಡ, ವೀರಶೈವ ಧರ್ಮದ ಸಾರಸರ್ವಸ್ವವನ್ನು ಕವಿ ಈ ಕಾಂಡದಲ್ಲಿ ನಿರೂಪಿಸಿದ್ದಾನೆ. ವೀರಶೈವ ತತ್ತ್ವ ಪ್ರತಿಪಾದನೆಗೆ ಪುರಾಣ, ಆಗಮ, ಶಾಸ್ತ್ರಗಳಿಂದ ಅನೇಕ ಸಂಸ್ಕೃತ ಭಾಗಗಳನ್ನು ಉದ್ಧರಿಸುತ್ತಾನೆ. ಪಂಡಿತಾರಾಧ್ಯ ಚಕ್ರೇಶ್ವರನು ವಾಮನ ಮುನಿಗೆ ವೀರಶೈವಾಚಾರ ಪದ್ಧತಿಯನ್ನು ಉಪದೇಶ ಮಾಡಿದ್ದಾನೆ. ದೀಕ್ಷಾಕಾಲ, ಮಂಟಪೋಪಕರಣ, ಯೋಗದ ಪ್ರಭೇದ, ಪಂಚಕಲಶ ಸ್ಥಾಪನೆ, ಋತ್ವಿಜರ ಮತ್ತು ಕಲಶದ ಲಕ್ಷಣಗಳನ್ನು ವಿವರಿಸಿದ್ದಾನೆ. ಶರಣಸತಿ-ಲಿಂಗಪತಿ ವಿಚಾರ, ಲಿಂಗಧಾರಣದ ಮಹತ್ವವನ್ನು ತಿಳಿಸಲು ಯಜುರ್ವೇದ, ಕಾಶೀಖಂಡಗಳ ಸಂಸ್ಕೃತ ಸೂಕ್ತಿಗಳನ್ನು ಸಾಕ್ಷಿಯಾಗಿ ಉದ್ಧರಿಸುತ್ತಾನೆ. ಗುರು-ಲಿಂಗ-ಜಂಗಮರ ಮಹತ್ವ, ಷಟ್‌ಸ್ಥಲ, ಅದರ ಭೇದೋಪಭೇದ ಹಾಗೂ ಪಂಚಾಚಾರಗಳ ಲಕ್ಷಣಗಳನ್ನು ವಿವರಿಸಿದ್ದಾನೆ. 'ಶಿವಭಕ್ತರಲಿ ಕುಲವ ನೋಡದೆ ತರಬೇಕು ಯುವತಿಯರ ಮೇಣವರಿಗಂ ತನ್ನೊಳಿರ್ದೊಡಂ ಯುವತಿಯರ ಕೊಡಬೇಕು', 'ಚರ್ಮಪಾತ್ರೆಯಲ್ಲಿ ಘೃತ ತೈಲ ಜಲಮಿರ್ದೊಡದನು ಸವಿಯದೇ ಬಿಡಬೇಕು' 'ಕಾಲ ಕಾಲದಲಿ ಲಿಂಗವ ಪೂಜಿಸದೆ ಭೋಜನವ ಮಾಡಲಾಗದು', 'ಆ ಶಿವನಲ್ಲದೆ ಅನ್ಯ ದೈವವ ಭಜಿಸಲಾಗದು' (೬.೬.೧೯) ಹೀಗೆ ಅನೇಕ ಧಾರ್ಮಿಕ ಆಚಾರ-ವಿಚಾರಗಳನ್ನು ಕವಿ ತಿಳಿಸುತ್ತಾನೆ. ಮತ್ತು ವಾಮನ ಮುನಿಗೆ ಪಂಡಿತಾರಾಧ್ಯರು ಶೈವತತ್ತ್ವ ರಹಸ್ಯವನ್ನು ತಿಳಿಸಿ ಆತನನ್ನು ಬೀಳ್ಕೊಡುತ್ತಾರೆ. ಪಂಡಿತಾರಾಧ್ಯರು ವೀರಶೈವ ತತ್ತ್ವದ ರಹಸ್ಯವನ್ನು ಮುಮುಕ್ಷುಗಳಿಗೆ ಬೋಧಿಸಬೇಕು ಮತ್ತು 'ಮೂರು ವೇಳೆಗೂ ನಮ್ಮವಾಕ್ಯಮಂ ಮರೆಯದೆ ವೀರಶೈವ ಪ್ರತಿಷ್ಠೆಯಂ ಮಾಡಿ ಮಕ್ಕಳಿರ, ಶಿಷ್ಯರ್ಕಳಿರ ನಿಶ್ಚಯಂ' ಎಂದು ಆಜ್ಞೆ ಮಾಡುತ್ತಾರೆ. ಸಂಸಾರ ಸಾಗರದಲ್ಲಿ ತೊಳಲಾಡುತ್ತಿರುವ ಜೀವಜಾಲಗಳಿಗೆ ಶಿವವನ್ನುಂಟು

ಮಾಡಬೇಕೆಂಬುದೇ ಆಚಾರ್ಯರ ಧ್ಯೇಯ ಸಂಕಲ್ಪ, ಅದಕ್ಕಾಗಿಯೇ ಲೋಕದಲ್ಲಿ ಅವರ ಅವತಾರ. ಇದು ಶಿವನ ಆಜ್ಞೆ ಎಂದು ಹೇಳುತ್ತಾರೆ. ಆಚಾರ್ಯರ ಈ ಉಪದೇಶವನ್ನು ಗ್ರಹಿಸಿದ ರುದ್ರಮುನಿಗಳು 'ಭಕ್ತಿಯಿಂದ ಬಂದವರ್ಗೆ ಶಿವದೀಕ್ಷೆಯನ್ನು ಕೊಡುವುದು ಆವಶ್ಯಕಂ' ಎಂದು ಭಾವಿಸಿ ವೀರಶೈವ ತತ್ತ್ವ ಪ್ರಚಾರ ಹಾಗೂ ಜನತೆಯ ಉದ್ಧಾರ ಕಾರ್ಯವನ್ನು ಕೈಗೊಳ್ಳುತ್ತಾರೆ.

ಇಲ್ಲಿಗಾದುದು ಸಕಲ ವೀರಶೈವಾಚಾರ
ವಲ್ಲಭರೆನಿಪ್ಪ ಚತುರಾಚಾರ್ಯರುದ್ಭವಿಸಿ
ಸಲ್ಲೀಲೆಯಿಂ ನಟಿಸಿ ಸಕಲ ಸದ್ಭಕ್ತರಿಗೆ ಕೈಲಾಸ ಗಿರಿಮಾರ್ಗವಂ।
ಒಳ್ಳಿತಾಗಿಯೆ ವಿಶಾಲವ ಮಾಡಿ ಶಿವಭಕ್ತಿ
ಪಲ್ಲವಾಗ್ರದಲಿ ಷಟ್‌ಸ್ಥಲದಮೃತಫಲವ ಬೆಳೆ
ದಿಲ್ಲಿರಿಸಿ ಪೋದರೀ ಬಗೆಯ ಚತುರಾಚಾರ್ಯ ಚಾರಿತ್ರಮಾಯ್ತು ಪೂರ್ಣಂ॥

ಎಂದು ಹೇಳಿ ಆಚಾರ್ಯರ ಚರಿತ್ರೆಯನ್ನು ಪೂರ್ಣಗೊಳಿಸುತ್ತಾನೆ. ಮತ್ತೆ ಈ ಕಾವ್ಯವನ್ನು ಕೇಳಿದವರಿಗೆ ಫಲಶ್ರುತಿ ಹೇಳುತ್ತಾನೆ.

ಇದು ಚತುರ್ಯುಗದೊಳಾಚಾರ್ಯ ರೂಪಂ ತಾಳಿ
ಯೊದವಿ ಶಾಂಭವ ಮರ್ತ್ಯದೊಳ್ ಚರಿಸಿ ಪಾವನವ
ಮುದದಿ ಮಾಡುವ ರೇವಣೇಶ, ಮರುಳೇಶ, ಪಂಡಿತ ಏಕರಾಮಾಧ್ಯರ ॥
ಸದಮಲ ಸುಚಾರಿತ್ರ ಸಂಪಾದನಾಚಾರ್ಯ
ವಿದಿತ ಶ್ರೀಚನ್ನ ಮಲ್ಲೇಶ್ವರ ನಿರೂಪಣಂ
ಪದುಳದಿಂದ ಕೇಳ್ವ ಶಿವಭಕ್ತ ಮಾಹೇಶ್ವರರ್ಗಿಷ್ಟಾರ್ಥವಹುದು ಸತ್ಯಂ॥

ಎಂದು ಕಾವ್ಯಕ್ಕೆ ಮಂಗಳ ಹಾಡುತ್ತಾನೆ.

ಈ ಬೃಹತ್ ಕಾವ್ಯವನ್ನು ಅವಲೋಕಿಸಿದಾಗ ಪರ್ವತೇಶ ತನ್ನ ಕೃತಿಯ ಆರಂಭದಲ್ಲಿ ಪಂಚಕಲಶದ ಆಚಾರ್ಯರ ಚರಿತ್ರೆಯನ್ನು ಹೇಳುವುದಾಗಿ ಘೋಷಿಸಿ, ಚತುರಾಚಾರ್ಯರ ಚಾರಿತ್ಯವನ್ನು ಹೇಳಿರುವುದು ಕಂಡುಬರುತ್ತದೆ.

ಈ ಚತುರಾಚಾರ್ಯರೆಂದರೆ ರೇವಣೇಶ, ಮರುಳೇಶ, ಪಂಡಿತ, ಏಕೋರಾಮಾರಾಧ್ಯರು. ಕಾವ್ಯದಲ್ಲಿ ರೇವಣಸಿದ್ಧರ ಚರಿತ್ರೆ ಮಾತ್ರ ವಿಸ್ತಾರವಾಗಿ ಬಂದಿವೆ, ಉಳಿದ ಆಚಾರ್ಯರ ವಿಷಯ ತೀರಾ ಸಂಕ್ಷಿಪ್ತವಾಗಿ ಬಂದಿದೆ. ಕಾವ್ಯದ ಐದನೆಯ ಕಾಂಡದಲ್ಲಿ ಶಿವಲೆಂಕ ಮಂಚಣ್ಣ ಪಂಡಿತಾರಾಧ್ಯರ ಚರಿತ್ರೆಯನ್ನು ತಿಳಿಸುತ್ತಾನೆ. ಈ ಶಿವಲೆಂಕ ಮಂಚಣ್ಣ ಪಂಡಿತನೇ, ಕಾಶೀ ವಿಶ್ವಾರಾಧ್ಯರೆಂದು ನಾವು ಭಾವಿಸಬೇಕಾಗಿದೆ. ಕವಿ ಮಾಡಿಕೊಂಡಿರುವ ಈ ಬದಲಾವಣೆಯ ಉದ್ದೇಶವೇನಿರಬಹುದು? ಯಾರೀ ಶಿವಲೆಂಕ ಮಂಚಣ್ಣ? ಇದು ಸಂದೇಹಕ್ಕೆಡೆಯನ್ನುಂಟುಮಾಡುತ್ತದೆ.

ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಾಗಲಿ, ದಕ್ಷಿಣ ಭಾರತದ ದ್ರಾವಿಡ ಭಾಷೆಗಳಲ್ಲಾಗಲೀ, ಪಂಚಾಚಾರ್ಯರ ಸಮಗ್ರ ಚರಿತ್ರೆಯನ್ನು ತಿಳಿಸುವ ಕೃತಿಗಳು ಇಲ್ಲ. ಕನ್ನಡದಲ್ಲೂ ಇಲ್ಲ. ಪ್ರಾಸಂಗಿಕವಾಗಿ ಇವರ ಚರಿತ್ರೆಗಳು ಅಲ್ಲಲ್ಲಿ ಅಲ್ಪಸ್ವಲ್ಪ ದೊರೆಯುತ್ತವೆ...ಚತುರಾಚಾರ್ಯರಲ್ಲಿ ಒಬ್ಬೊಬ್ಬರನ್ನೂ ಕುರಿತು ಸ್ವತಂತ್ರ ಕೃತಿಗಳು ರಚಿತವಾಗಿವೆ. ಹರಿಹರನ 'ರೇವಣಸಿದ್ಧ ರಗಳೆ' (೧೨೦೦); ನೀಲಕಂಠಾಚಾರ್ಯನ 'ಪಂಡಿತಾರಾಧ್ಯ ಚಾರಿತ್ರ' (೧೪೮೫); ದೇವಕವಿಯ 'ಮರುಳಸಿದ್ಧ ಚಾರಿತ್ರ' (೧೫೮೭); ಬಸವಕವಿಯ 'ರೇವಣ ಸಾಂಗತ್ಯ' (೧೭೦೦); ತಿಲಕಪುರದ ಸೋಮನ 'ಚತುರಾಚಾರ್ಯ ಪ್ರಬಂಧ' (೧೮೩೦); ಮಲ್ಲಣ ಕವಿಯ 'ರೇವಣ ಸಿದ್ಧೇಶ್ವರ ಕಾವ್ಯ'; ಉಜ್ಜನೀಶನ 'ಸಿದ್ಧಾಂತ ಶಿಖಾಮಣಿ ಟೀಕೆ;' ಸೋಸಲೆ ರೇವಣಾರಾಧ್ಯನ 'ಚೋಳ-ರೇಣುಕ ಸಂವಾದ' (ಸಂಸ್ಕೃತ-ಕನ್ನಡ); ನಂಜಣಾರ್ಯನ 'ಏಕೋರಾಮೇಶ್ವರ ಪುರಾಣ' (೧೬೫೦); ಇತ್ಯಾದಿ. ವೀರಶೈವ ಮತಾಚಾರ್ಯರಿಗೆ ಸಂಬಂಧಿಸಿದ ಮಾಹಿತಿಗಳು ಇತರೆ ಕಾವ್ಯಗಳಲ್ಲೂ ದೊರೆಯುತ್ತವೆ. ಪಾಲ್ಕುರಿಕೆ ಸೋಮೇಶ್ವರ ಪುರಾಣ, ಗುರುರಾಜಚಾರಿತ್ರ, ಚನ್ನಬಸವಪುರಾಣ, ತೋಂಟದ ಸಿದ್ಧೇಶ್ವರ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ

ಸೂತ್ರ ರತ್ನಾಕರ, ಪಂಡಿತಾರಾಧ್ಯ ಚರಿತ್ರೆ, ಶಿವತತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ಪ್ರಭುದೇವರ ಪುರಾಣ ಇತ್ಯಾದಿ ಕೃತಿಗಳಲ್ಲೂ ಆಚಾರ್ಯರಿಗೆ ಸಂಬಂಧಿಸಿದ ವಿಷಯಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಆದರೆ ಚತುರಾಚಾರ್ಯರನ್ನು ಕುರಿತು ಸಮಗ್ರ ಮಾಹಿತಿಯನ್ನು ನೀಡುವ ಕೃತಿಯೆಂದರೆ ಪರ್ವತೇಶನ ಚತುರಾಚಾರ್ಯ ಚಾರಿತ್ರ ಒಂದೇ ಆಗಿದೆ.

ಪರ್ವತೇಶ ತನ್ನ ಚತುರಾಚಾರ್ಯರ ಕೃತಿಗೆ ಆಕರವನ್ನೂ ಎಲ್ಲೂ ತಿಳಿಸಿಲ್ಲ. ತನಗಿಂತ ಹಿಂದೆ ಆಗಿ ಹೋದ ಪ್ರಾಚೀನ ಕವಿಗಳ ಕಾವ್ಯಗಳಲ್ಲಿ ಬಿಡಿಬಿಡಿಯಾಗಿ ಬಂದಿರುವ ಸಂಗತಿಗಳನ್ನು ಸಂಕಲಿಸಿ ಕೃತಿರಚನೆ ಮಾಡಿದಂತೆ ತೋರುತ್ತದೆ. ಹರಿಹರನ 'ರೇವಣಸಿದ್ಧೇಶ್ವರ ರಗಳೆ', ಸಿದ್ಧನಂಜೇಶನ 'ಗುರುರಾಜ ಚಾರಿತ್ರ'ದ ಸಂಗತಿಗಳನ್ನು ಆಧರಿಸಿರಬೇಕು. ಈ ಬೃಹತ್ ಕಾವ್ಯದ ಉದ್ದಕ್ಕೂ ಹಬ್ಬಿದ ಶಿವನ ಪಂಚವಿಂಶತಿಲೀಲೆಗಳಿಗೆ, ಶಿವಶರಣರ ಕಥೆಗಳಿಗೆ, ವೀರಶೈವ ಧರ್ಮದ ವಿಪುಲವಾದ ಮಾಹಿತಿಗೆ ಗುಬ್ಬಿ ಮಲ್ಲಣ್ಣಾರ್ಯರ 'ವೀರಶೈವಾಮೃತ ಮಹಾಪುರಾಣ'ವೇ ಆಧಾರವಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಆದರೂ ಪರ್ವತೇಶ ಇವರಾರನ್ನೂ ತನ್ನ ಕಾವ್ಯದಲ್ಲಿ ಸ್ಮರಿಸದಿರುವುದು ಆಶ್ಚರ್ಯದ ಸಂಗತಿಯಾಗಿ ಕಾಣುತ್ತದೆ.

ವೀರಶೈವ ಧರ್ಮದ ಪರಂಪರೆಯಲ್ಲಿ ಪಂಚಾಚಾರ್ಯರಿಗೆ ಪ್ರಮುಖ ಸ್ಥಾನವಿದೆ. ವಿದ್ವಾಂಸರಲ್ಲಿ ಇವರ ಕಾಲ-ದೇಶ-ವರ್ತಮಾನಗಳ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಇದು ಸಹಜ. ಈ ಕೃತಿಯಲ್ಲಿ ಪಂಡಿತಾರಾಧ್ಯರು ಬಸವೇಶ್ವರರನ್ನು ಕಾಣಲು ಹೋದದ್ದು, ಮಾರ್ಗಮಧ್ಯದಲ್ಲಿ ಬಸವೇಶ್ವರರ ಅವಸಾನವನ್ನು ತಿಳಿದು ಪರಿಪರಿಯಾಗಿ ದುಃಖಿಸಿದ ಶಿವಲೆಂಕ ಮಂಚಣ್ಣ ಕಲ್ಯಾಣಕ್ಕೆ ಹೋಗಿ ಶಿವಶರಣರನ್ನು ಕಂಡು ಬರುವ ಸಂಗತಿಗಳು ಪ್ರಸ್ತಾಪಿಸಲ್ಪಟ್ಟಿವೆ. ಅಂದರೆ ಪಂಡಿತಾರಾಧ್ಯರೂ, ಶಿವಲೆಂಕಮಂಚಣ್ಣ (ವಿಶ್ವರಾಧ್ಯ?) ಇವರಿಬ್ಬರೂ ವಚನಕಾರರ ಸಮಕಾಲೀನರೆನ್ನಲು ಆಧಾರಗಳಾಗುತ್ತವೆ. ಈ ದಿಸೆಯಲ್ಲಿ ಆಳವಾದ ವ್ಯಾಸಂಗ ಹಾಗೂ ಪ್ರಾಮಾಣಿಕವಾದ ಸಂಶೋಧನೆ ನಡೆಯಬೇಕಾಗಿದೆ. ಈ ದಿಸೆಯಲ್ಲಿ ಸಾಗಿದ ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರಾದ ಕರ್ಲಮಂಗಲಂ ಶ್ರೀಕಂಠಯ್ಯ, ಕಪಟರಾಳ ಕೃಷ್ಣರಾವ್, ಹುಲ್ಲೂರು ಶ್ರೀನಿವಾಸ ಜೋಯಿಸರು, ಅನುಭಾವಿ ಮಲ್ಲಿಕಾರ್ಜುನ, ಬಿ. ಶಿವಮೂರ್ತಿ ಶಾಸ್ತ್ರಿ ಮತ್ತು ಡಾ|| ಎಂ. ಚಿದಾನಂದಮೂರ್ತಿ ಈ ಮಹನೀಯರನ್ನು ವಿಶೇಷವಾಗಿ ಸ್ಮರಿಸಬೇಕಾಗಿದೆ.

ಪರ್ವತೇಶ ವೀರಶೈವಧರ್ಮವನ್ನು ಹಾಗೂ ಭಾರತೀಯ ದರ್ಶನಗಳನ್ನು ಆಳವಾಗಿ ಅಧ್ಯಯನ ಮಾಡಿದ ದಾರ್ಶನಿಕ ಕವಿ. ಪಂಚವಿಂಶತಿ ಲೀಲೆಗಳನ್ನು, ಶಿವಶರಣರ ಕಥೆಗಳನ್ನು, ಸಂದರ್ಭೋಚಿತವಾಗಿ ಹೆಣೆದಿದ್ದಾನೆ. ಚತುರಾಚಾರ್ಯ ಚಾರಿತ್ರಕ್ಕಿಂತ ಶಿವಪುರಾಣದ ಕಥೆಗಳು, ಶಿವನ ಪಂಚವಿಂಶತಿ ಲೀಲೆಗಳು, ಶಿವಶರಣರ ಕಥೆಗಳಿಂದಾಗ ಕಾವ್ಯ ಬೃಹತ್ತಾಗಿದೆ, ಮಹತ್ತಾಗಿದೆ. ಒಂದರ್ಥದಲ್ಲಿ ಇದು ಶಿವನ-ಶಿವಶರಣರ ಕಥಾ ಸರಿತ್ಸಾಗರವಾಗಿದೆ. ಕವಿ ಆರನೆಯ ಕಾಂಡದಲ್ಲಿ ವೀರಶೈವ ಸಿದ್ಧಾಂತದ ಷಟ್‌ಸ್ಥಲ, ಪಂಚಾಚಾರ, ಅಷ್ಟಾವರಣಗಳ ವಿಷಯವನ್ನು ಸಮಗ್ರವಾಗಿ ಪರಿಚಯಿಸುತ್ತಾನೆ. ಹೀಗಾಗಿ ಇದು 'ವೀರಶೈವ ವಿಶ್ವಕೋಶ'ವೇ ಆಗಿದೆಯೆಂದರೂ ತಪ್ಪಾಗಲಿಕ್ಕಿಲ್ಲ. ಪರ್ವತೇಶ ಸಕಲಶಾಸ್ತ್ರಪಂಡಿತ. ಜ್ಯೋತಿಷ್ಯಶಾಸ್ತ್ರದಲ್ಲೂ ಅವನಿಗೆ ಅಪಾರ ಪಾಂಡಿತ್ಯವಿದೆ. ಉದಾಹರಣೆಗೆ : ಭಾನುವಾರ, ಮಂಗಳವಾರ, ಶನಿವಾರಗಳನ್ನು ಬಿಟ್ಟು ಉಳಿದ ವಾರಗಳು ದೀಕ್ಷಾ ಕಾಲಕ್ಕೆ ಯೋಗ್ಯವಾದವುಗಳು (ಶಂಕರ ಸಂಹಿತೆ) ಎಂಬ ಉಲ್ಲೇಖ.

ಪುಷ್ಯಾ ನಕ್ಷತ್ರದಲ್ಲಿ ದೀಕ್ಷೆಯನ್ನು ಮಾಡಿದರೆ, ಗುರುಭಕ್ತಿ ಉಂಟಾಗುತ್ತದೆ. ಉರಗ (ಆಶ್ಲೇಷಾ) ನಕ್ಷತ್ರ ತಮೋಜ್ಞಾನವನ್ನುಂಟು ಮಾಡುತ್ತದೆ. ಪುಬ್ಬಾ ನಕ್ಷತ್ರ ಜ್ಞಾನ-ವೈರಾಗ್ಯ ಭಕ್ತಿಗಳನ್ನು ಕೆಡಿಸುತ್ತದೆ ಇತ್ಯಾದಿ. ವಾಸ್ತು ಶಾಸ್ತ್ರದಲ್ಲೂ ಈತ ಪರಿಣಿತ. ದೀಕ್ಷಾ ಮಂಟಪಕ್ಕೆ ವಾಸ್ತುಲಕ್ಷಣವನ್ನು ವಿವರವಾಗಿ ತಿಳಿಸುತ್ತಾನೆ. ಕವಿ ಆರನೆಯ ಕಾಂಡದಲ್ಲಿ ವೀರಶೈವ ಧರ್ಮದ ಸಾರಸರ್ವಸ್ವವನ್ನು ಕಡೆದು ನಿಲ್ಲಿಸಿದ್ದಾನೆ. ವೇದ, ಆಗಮ, ಪುರಾಣಗಳನ್ನು ಉದ್ಧರಿಸಿ ವೀರಶೈವತತ್ವ ಪ್ರತಿಪಾದನೆ ಮಾಡುತ್ತಾನೆ. ಯಜುರ್ವೇದ, ಸ್ಕಂದ, ಕಾಶೀಕಾಂಡಗಳಿಂದ ವಿಪುಲವಾದ ಸೂಕ್ತಿಗಳನ್ನು ಉದ್ಧರಿಸಿ ಸಾಕ್ಷಿಗಳನ್ನಾಗಿ ಮಾಡುತ್ತಾನೆ.

ವರ ನಾಲ್ಕು ವೇದಗಳು ಶಾಸ್ತ್ರ ಪೌರಾಣತತಿ
ಪರಮ ಕಾಮಿಕ ವಾತೂಲಾಂತ ವೇದಾಗಮಂ
ಸ್ಥಿರುದುಪನಿಷದ್ವಾಕ್ಯ ಮುಂತಾದವೆಲ್ಲವುಂ ಲಿಂಗಧಾರಣವಿಧಿಯೆನೆ
ಒರೆವುತಿರ್ದವು (೬.೩.೫೦)

ಹೀಗೆ ಹೇಳುತ್ತಾ ಲಿಂಗಧಾರಣ ಪ್ರಾಚೀನತೆಯ ಮೇಲೆ ಬೆಳಕು ಚೆಲ್ಲುತ್ತಾನೆ.

ಬಹುಶ್ರುತನಾದ ಈ ಕವಿ ಲಿಂಗಧಾರಣೆ, ವಿಭೂತಿ-ರುದ್ರಾಕ್ಷಿಧಾರಣೆ ಹಾಗೂ ಮಂತ್ರ-ನ್ಯಾಸ ವಿಧಿಗಳನ್ನು ತಿಳಿಸುತ್ತಾ ವೀರಾಗಮ, ಅಥರ್ವಣ ಶಿರಸಿ-ಸ್ಕಂದ-ಯಜುರ್ವೇದ-ನಾರಾಯಣ ಉಪನಿಷತ್, ಕಾಶೀಕಾಂಡ, ಶಿವರಹಸ್ಯ, ವೀರತಂತ್ರ, ಸಿದ್ಧಾಂತ ಶಿಖಾಮಣಿ, ವೇದಶಾಸ್ತ್ರ ಪುರಾಣೇಷು ಕಾಮಿಕಾದ್ಯಾಗಮೇಷು ಚ. ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ (೬.೩.೫೧) -ಎಂದು ಅನೇಕ ಗ್ರಂಥಗಳ ಆಧಾರದಿಂದ ಲಿಂಗಧಾರಣದ ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತಾನೆ.

ನಿಜವಾದ ವೀರಶೈವಸಾಧಕನಿಗಿರಬೇಕಾದ ಸಂಸಾರ (Family) ಯಾವುದು? ಎನ್ನುವುದಕ್ಕೆ ಪರ್ವತೇಶನ ಉತ್ತರ ಹೀಗಿದೆ : ಉತ್ತಮ ವಿದ್ಯೆ-ಭಾರ್ಯೆ, ಸಂತೋಷವೃತ್ತಿ-ಮಗ, ಸತ್ಯ-ಪುತ್ರ-ಪುತ್ರಿಯರು ; ಸತ್ವಗುಣ-ಅಳಿಯ; ವಿರಾಗ -ಬಂಧುಗಳು ; ಕ್ಷಮೆ-ಸಂಗತಿಗಳು ; ಶಾಂತಿ-ಮಿತ್ರ ; ಶಿವಭಕ್ತಿ-ತಾಯಿ ; ಆಚಾರ-ತಂದೆ ; ಸ್ನೇಹವೇ-ಪುತ್ರ ಪುತ್ರರು ಎಂದು ಹೇಳುತ್ತಾ ವೀರಶೈವರ ಗುಣಾತ್ಮಕ ವ್ಯಾಖ್ಯಾನ ಮಾಡುತ್ತಾನೆ.

ಪರ್ವತೇಶನಿಗೆ ಸಂಗೀತ ಕಲೆಯಲ್ಲೂ ಆಸಕ್ತಿ ; ಉದಾಹರಣೆಗೆ-

ಲಲಿತ ಭೂಪಾಳ ಸಾಳಗ ಗೌಳ ರಾಮಕ್ರಿ
ಮಲಹರಿ ವಸಂತ ಗುರ್ಜರಿ ನಾಟಿ ಕಾಂಬೋದಿ
ಘಳಮಂಜರಿಯು ಮೇಘ ದೇಶಿ ಧನ್ವಾಸಿ ಗಾಂಧಾರಿ ಬಂಗಾಳಿ ಪಹಡಿ।
ಸಲೆ ಶಂಕರಾಭರಣ ಮುಖ್ಯ ರಾಗಂಗಳಂ
ಕಲಿ ಮುದ್ರ ಗಂಭೀರ ತಾರ ಸ್ವರಯುಕ್ತದಿಂ
ದೊಲವಿನಲಿ ಸಾರಣೀ ಮುಖ್ಯಮಾದೇಳು ತಂತ್ರಿಗಳಿಂದ ಪಾಡುತಿಹುದು।। (೧.೪.೭೧)

ಇಲ್ಲಿ ಉದಾಹರಿಸಿರುವ ರಾಗಗಳ ಹೆಸರುಗಳನ್ನು ಓದುತ್ತಿದ್ದಂತೆಯೆ ಕವಿಗೆ ಸಂಗೀತ ಜ್ಞಾನ ವಿಶೇಷವಾಗಿ ವ್ಯಕ್ತವಾಗುತ್ತದೆ.

ಪರ್ವತೇಶ ಸಕಲ ಶಾಸ್ತ್ರಕೋವಿದ, ಶ್ರೇಷ್ಠ ಕವಿ ಎನ್ನುವುದರಲ್ಲಿ ಸಂದೇಹವಿಲ್ಲ. ವೀರಶೈವ ಮತಾಚಾರ್ಯರ ಚರಿತ್ರೆಯನ್ನು ಕಾವ್ಯರೂಪದಲ್ಲಿ ರಚಿಸಿದ ಶ್ರೇಯಸ್ಸು ಇವನಿಗೆ ಸಲ್ಲುತ್ತದೆ. ಕಾವ್ಯವನ್ನು ಚರಿತ್ರೆ ಎಂದು ಕರೆದಿದ್ದರೂ, ಪುರಾಣವೇ ಆಗಿದೆ. ಪ್ರಾಚೀನ ಕಾವ್ಯಪದ್ಧತಿಯನ್ನು ಅನುಸರಿಸಿ ಕವಿ ಅಷ್ಟಾದಶ ವರ್ಣನೆಗಳಿಗೆ ಕಟ್ಟುಬಿದ್ದಿದ್ದಾನೆ. ಸೂರ್ಯೋದಯ, ಸೂರ್ಯಾಸ್ತ, ಸಮುದ್ರ ವರ್ಣನೆಗಳಂತೆ ಸೂಳೆಗೇರಿಯ ವರ್ಣನೆಯೂ ಒಂದು ನಿಯಮವಾಗಿತ್ತು. ಧಾರ್ಮಿಕ ಕಾವ್ಯವಾದ ಚತುರಾಚಾರ್ಯ ಚಾರಿತ್ರದಲ್ಲಿ ಕವಿ ಪ್ರಥಮಕಾಂಡದ ೭ನೇ ಸಂಧಿಯನ್ನು ಸೂಳೆಗೇರಿಯ ವರ್ಣನೆಗೆ ಮೀಸಲಾಗಿರಿಸಿದ್ದಾನೆ. ಇದು ಅನೌಚಿತ್ಯವೆನಿಸಿದರೂ, ಪ್ರಾಚೀನ ಕಾವ್ಯಗಳ ಮಾದರಿಯನ್ನು ಕವಿ ಕಣ್ಮುಂದೆ ಇರಿಸಿಕೊಂಡಿದ್ದಾನೆಂಬುದು ಸ್ಪಷ್ಟ. ಇಂತಹ ಕೆಲವು ಲೋಪದೋಷಗಳನ್ನು ಬಿಟ್ಟರೆ ಪರ್ವತೇಶನ ಕಾವ್ಯ ಬೃಹತ್ ಕಥಾಕೋಶ, ಸೋಮದೇವನ ಕಥಾ ಸರಿತ್ಸಾಗರದಂತೆ. ಕಥೆ-ಉಪಕಥೆಗಳು ವಿಸ್ತಾರ ವರ್ಣನೆಗೆ ವಾರ್ಧಕಷಟ್ಪದಿ ಛಂದಸ್ಸನ್ನು ಕವಿ ಆಯ್ಕೆಮಾಡಿಕೊಂಡಿರುವುದು ಅತ್ಯಂತ ಸೂಕ್ತವೆನಿಸುತ್ತದೆ. ಚತುರಾಚಾರ್ಯರ ಚರಿತ್ರೆ ಪುರಾಣ ಶೈಲಿಯಲ್ಲಿ ಪವಾಡಮಯವಾಗಿ ಚಿತ್ರಿತವಾಗಿದೆ. ಈ ಕಾವ್ಯವನ್ನು ಕುರಿತು ದಿವಂಗತ ಎಂ.ಆರ್. ಶ್ರೀನಿವಾಸ ಮೂರ್ತಿಯವರ ಅಭಿಪ್ರಾಯ ಹೀಗಿದೆ: "ಒಂದು ಕಡೆ ಶಾಸ್ತ್ರ ವಿಚಾರಗಳ ನಿಧಿ; ಶರಣರಾನಂದ ಮತ್ತೊಂದು ಕಡೆ. ಲೌಕಿಕರಿಗೆ ರಸಭಾವಸಿದ್ಧಿ; ರಸಿಕರಿಗೆ ಕಾವ್ಯನಂದ-ಈ ಉಭಯ ಮತಗಳಿಗೂ ಹೊಂದಿಕೆಯಾಗಿ ಬರೆದಿರುತ್ತೇನೆಂದು ಹೇಳಿಕೊಂಡಿದ್ದಾರೆ. ಅದರಲ್ಲಿ ಸತ್ಯಾಂಶವಿದೆ." ಎನ್ನುವ ಮಾತುಗಳು ಯಥಾರ್ಥವಾದವು .

ವೀರಶೈವ ವಾಙ್ಮಯದಲ್ಲಿ ಚತುರಾಚಾರ್ಯರು:

ಶಿವಾಗಮಗಳಲ್ಲಿ ಪಂಚಾಚಾರ್ಯರ ಉತ್ಪತ್ತಿ, ಶೈವಮತಸ್ಥಾಪನೆಯ ಕಾರ್ಯದ ವಿವರಗಳು ದೊರೆಯುತ್ತವೆ. ಸಂಪಾದನೆಯ ಪರ್ವತೇಶ ತನ್ನ ಕಾವ್ಯದಲ್ಲಿ ವೀರಾಗಮದ ಶ್ಲೋಕವನ್ನು ಉಲ್ಲೇಖಿಸಿ ಪಂಚಾಚಾರ್ಯರ ಉಗಮವನ್ನು ತಿಳಿಸುತ್ತಾನೆ.

ಶ್ರೀ ಕೊಲ್ಲಿಪಾಕಿ ಸೋಮೇಶಾಬ್ಜಿತ: ಶ್ರೀ ರೇಣುಕೋ ಗುರುಃ
ಶ್ರೀಸಿದ್ಧವಟ ಸಿದ್ಧೇಶಾತ್ ಬವನ್ಮರುಳ ಸಿದ್ಧರಾಜ್
ಮದ್ರಾಪುರೀ ರಾಮನಾಥದೇಕೋರಾಮ ಜಗದ್ಗುರುಃ
ಆರ್ಯಭೂದಮ್ಯಗುಂಡಸ್ಯ ಪಂಡಿತೋ ಮಲ್ಲಿಕಾರ್ಜುನಾತ್
ಕಾಶೀ ವಿಶ್ವೇಶ್ವರಾಶ್ಚನಾದ್ವಿಥಾರ್ಯೋಸಮ್ಬಭೂವಹಿಃ

ಈ ಶ್ಲೋಕದ ಆಧಾರವನ್ನು ಗ್ರಹಿಸಿ ಪರ್ವತೇಶ ಕೊಲ್ಲಿಪಾಕಿಯ ಸೋಮನಾಥ ಲಿಂಗದಿಂದ ರೇವಣಪ್ರಭು ಜನಿಸಿದ, ಸಿದ್ಧವಟಪುರದ ಜ್ಯೋತಿರ್ಲಿಂಗದಿಂದ ಮರುಳಸಿದ್ಧನುದಯಿಸಿದ, ಮುದ್ರಾಪುರದ ಶ್ರೀರುದ್ರನ ಆಜ್ಞೆಯಿಂದ ಏಕೋರಾಮನು ಉದ್ಭವಿಸಿದ, ಗೋಕರ್ಣ ಗುರುವರ ಅಮರಗೊಂಡದ ಮಲ್ಲಿಕಾರ್ಜುನಲಿಂಗದಲ್ಲಿ ಉದಿಸಿದ, ಕಾಶಿ ವಿಶ್ವೇಶ್ವರಲಿಂಗದಲ್ಲಿ ವಿಶ್ವನಾಥಾರ್ಯ ಜನಿಸಿದ ಎಂದು ತಿಳಿಸುತ್ತಾನೆ. (೧.೫)

ಪಾಶುಪತತಂತ್ರದಲ್ಲೂ-ಪಂಚಾಚಾರ್ಯರ ಉಲ್ಲೇಖವಿರುತ್ತದೆ.

ದ್ವಾಪರೇ ರೇಣುಕಶ್ಚೇತಿ ದಾರುಕಶ್ಚ ದ್ವಿತೀಯಕಃ
ತೃತೀಯ ಖಶಂಕುಕರ್ಣಶ್ಚ ಚತುರ್ಥೋ ಧೇನುಕರ್ಣಕಃ
ಪಂಚಮೋ ವಿಶ್ವಕರ್ಣಾಖ್ಯಃ ಪಂಚಮಾನಿ ವೈಶ್ವಣು॥

ಇತ್ಯಾದಿ.

ವಚನವಾಙ್ಮಯದಲ್ಲಿ ಚತುರಾಚಾರ್ಯರ ಹೆಸರುಗಳು ಮಾತ್ರ ಉಲ್ಲೇಖಗೊಂಡಿವೆ. ಹಾವಿನಹಾಳ ಕಲ್ಲಯ್ಯನ ವಚನವೊಂದು ಹೀಗಿದೆ:

ಎನ್ನ ಘ್ರಾಣದಲ್ಲಿ ಸ್ವಾಯತವಾದನಯ್ಯಾ ಏಕೋರಾಮಿ ತಂದೆಗಳು
ಎನ್ನ ಜಿಹ್ವೆಯಲ್ಲಿ ಸ್ವಾಯತವಾದನಯ್ಯಾ ಪಂಡಿತಾರಾಧ್ಯರು
ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯಾ ರೇವಣಸಿದ್ಧೇಶ್ವರದೇವರು
ಎನ್ನ ತ್ವಕ್ಕಿನಲ್ಲಿ ಸ್ವಾಯತವಾದನಯ್ಯಾ ಸಿದ್ಧರಾಮೇಶ್ವರದೇವರು
ಎನ್ನ ಶ್ರೋತ್ರದಲ್ಲಿ ಸ್ವಾಯತವಾದನಯ್ಯಾ ಮರುಳಸಿದ್ಧ ದೇವರು

(ಎಳೆಮಲೆ ಗುರುಶಾಂತದೇವರ ವಚನ ಸಂಕಲನಗಳು;
ಸಂ. ವೀರಣ್ಣ ರಾಜೂರ; ಪುಟ ೧೩೫, ೧೯೮೩)

ಮೆರೆಮಿಂಡಯ್ಯನ ವಚನದಲ್ಲಿ-

ಎನ್ನ ಘ್ರಾಣ ಶುದ್ಧವಾಯಿತ್ತಯ್ಯ ಏಕೋರಾಮತಂದೆಗಳ ಧರ್ಮದಿಂದ
ಎನ್ನ ಜಿಹ್ವೆ ಶುದ್ಧವಾಯಿತ್ತಯ್ಯ ಪಂಡಿತಾರಾಧ್ಯರ ಧರ್ಮದಿಂದ
ಎನ್ನ ನೇತ್ರ ಶುದ್ಧವಾಯಿತ್ತಯ್ಯ ರೇವಣಸಿದ್ಧೇಶ್ವರ ದೇವರ ಧರ್ಮದಿಂದ
ಎನ್ನ ತ್ವಕ್ಕು ಶುದ್ಧವಾಯಿತ್ತಯ್ಯಾ ಸಿದ್ಧರಾಮೇಶ್ವರ ದೇವರ ಧರ್ಮದಿಂದ
ಎನ್ನ ಶ್ರೋತ್ರ ಶುದ್ಧವಾಯಿತ್ತಯ್ಯ ಮರುಳಸಿದ್ಧೇಶ್ವರ ದೇವರ ಧರ್ಮದಿಂದ

(ಅದೇ, ಪುಟ ೧೧೨)

ಆದಯ್ಯನು ತನ್ನ ವಚನವೊಂದರಲ್ಲಿ ರೇವಣಸಿದ್ಧಯ್ಯ ದೇವರ ನಿಷ್ಠೆ. ಮರುಳಸಿದ್ಧಯ್ಯದೇವರ ದೃಷ್ಟಪ್ರಸಾದನಿಷ್ಠೆ, ಏಕೋರಾಮಯ್ಯಗಳ ಆಚಾರನಿಷ್ಠೆ, ಪಂಡಿತಾರಾಧ್ಯರ ಸ್ವಯಂಪಾಕಗಳನ್ನು ಕೊಂಡಾಡಿದ್ದಾನೆ. (ಅದೇ, ಪುಟ ೧೩೫)

ಹೀಗೆ ವಚನಗಳಲ್ಲಿ ಚತುರಾಚಾರ್ಯರ ಹೆಸರುಗಳು ಕಂಡುಬರುತ್ತದೆ. ವಿಶ್ವಾರಾಧ್ಯರು ಹೆಸರು ವಚನಗಳಲ್ಲಿ ಉಲ್ಲೇಖಗೊಂಡಿಲ್ಲ. ತೋಂಟದ ಸಿದ್ಧಲಿಂಗರೂ (ಕ್ರಿ.ಶ. ೧೫೬೦) ನಾಲ್ವರ ಹೆಸರನ್ನು ಮಾತ್ರ ಸೂಚಿಸುತ್ತಾರೆ. ಚನ್ನವೀರಮಾಹೇಶ್ವರನ (ಕ್ರಿ.ಶ. ೧೫೫೦) ಸಟೀಕ ಪುರುಷಸೂಕ್ತದಲ್ಲೂ ನಾಲ್ವರು ಆಚಾರ್ಯರ ಹೆಸರುಗಳು ಮಾತ್ರ ದೊರೆಯುತ್ತವೆ. (ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ; ಡಾ. ಸಾ.ಶಿ. ಮರುಳಯ್ಯ; ಪುಟ ೧೫೧, ೧೯೮೦)

ಸಂಪಾದನೆಯ ಪರ್ವತೇಶ (ಕ್ರಿ.ಶ. ೧೬೯೮) ತನ್ನ ಚತುರಾಚಾರ್ಯ ಚಾರಿತ್ರದಲ್ಲಿ ಐವರು ಆಚಾರ್ಯರನ್ನು ಸುತ್ತಿಸಿ ಚರಿತ್ರೆಯನ್ನು ಮಾತ್ರ ಬರೆದಿದ್ದಾನೆ. ಬಸವ ಭೂಪಾಲನ (ಕ್ರಿ.ಶ. ೧೭೧೦) ಶಿವತತ್ತ್ವರತ್ನಾಕರದಲ್ಲಿ ನಾಲ್ವರು ಆಚಾರ್ಯರ ಸ್ತೋತ್ರವಿದೆ. ವೀರಾಗಮದ ವೀರಮಾಹೇಶ್ವರ ತಂತ್ರ ಎಂಬ ಉತ್ತರಭಾಗಕ್ಕೆ ಟೀಕೆ ಬರೆದಿರುವ ಚನ್ನವೀರ ಮಾಹೇಶ್ವರನು ತನ್ನ ವ್ಯಾಖ್ಯಾನದಲ್ಲಿ ವಿಶ್ವಾರಾಧ್ಯರನ್ನು ಬಿಟ್ಟು ನಾಲ್ವರ ಹೆಸರನ್ನು ಮಾತ್ರ ಹೇಳುತ್ತಾನೆ. ಮಹಾಕವಿ ಷಡಕ್ಷರದೇವ (ರೇಣುಕ ಪರಂಪರಾಗತ ಧನುಗೂರು ಮಠದ ಪಟ್ಟಾಧ್ಯಕ್ಷ) ಕ್ರಿ.ಶ. ೧೬೫೫-ತನ್ನ ರಾಜಶೇಖರವಿಳಾಸದಲ್ಲಿ ಬಸವಾದಿ ಶರಣರನ್ನು, ನಿಜಗುಣ ಶಿವಯೋಗಿಗಳನ್ನು ಸ್ತುತಿಸಿ ರೇಣುಕ, ಏಕೋರಾಮ, ಪಂಡಿತಾರಾಧ್ಯ, ಮರುಳಾರಾಧ್ಯರೆಂಬ ಚತುರಾಚಾರ್ಯರನ್ನು ಮಾತ್ರ ಸ್ತುತಿಸಿದ್ದಾನೆ. ೧೬ನೇ ಶತಮಾನದ ಉತ್ತರಾರ್ಧದಲ್ಲಿದ್ದ ಸಿದ್ಧನಂಜೇಶನು ತನ್ನ ಗುರುರಾಜ ಚಾರಿತ್ರದ ೨ನೇ ಸಂಧಿಯಲ್ಲಿ ನಾಲ್ವರು ಆಚಾರ್ಯರ ಮಹಿಮೆಯನ್ನು ತಿಳಿಸಿ ೩ನೇ ಸಂಧಿಯಲ್ಲಿ ವಿಶ್ವೇಶ್ವರಾಚಾರ್ಯರ ಮಹಿಮೆ ತಿಳಿಸುತ್ತಾನೆ.

> ವರದೆ ತ್ರೇತಾಯುಗದೊಳಾ ವಿಲಸದಾಚಾರ್ಯ
> ಗುರುಸಾಂಪ್ರದಾಯದೊಳಗಾದರೇಕಾಕ್ಷರಂ
> ಚಿರತರದ್ವಯಾಕ್ಷರಂ ಪಂಚಾಕ್ಷರಂತಾ ಷಡಕ್ಷರ ಗಣಾಧ್ಯಕ್ಷರು।
> ಸುರನರೋರಗ ಮುಖ್ಯ ಲೋಕಕ್ಕನುಗ್ರಹವ
> ನುರೆಮಾಡಿದರುಮವರ ಸಂಪದ್ರಾಯದೊಳು ಹಣ
> ವರ ರೇಣುಕಂ-ದಾರುಕಂ-ವೇಣು ಗೋಕರ್ಣ ಶಂಖಕರ್ಣಂ ನಾಲ್ವರು।
> (ಗು.ರಾ.ಚಾ. ಸಂ. ೧, ಪ. ೫೫)

ಎಂದು ನಾಲ್ವರು ಆಚಾರ್ಯರ ಹೆಸರನ್ನು ಮಾತ್ರ ಉಲ್ಲೇಖಿಸಿ, ಇವರು ತ್ರೇತಾ ದ್ವಾಪರಕ್ಕೆ ಸೇರಿ ಲೋಕಕ್ಕೆ ಅನುಗ್ರಹ ಮಾಡಿದವರು ಎಂದು ತಿಳಿಸುತ್ತಾ-

> ....ಕಲಿಯುಗದಲ್ಲಿ
> ಪ್ರವರ ರೇವಣಸಿದ್ಧ ಮರುಳಸಿದ್ಧೇಶ್ವರರೇಕೋರಾಮಿ ತಂದೆಗಳಹ
> ಭವರಹಿತ ಪಂಡಿತಾರಾಧ್ಯ ವಿಶ್ವೇಶ್ವರಂ
> ಯಿವರು ಪಂಚಾಚಾರ್ಯರಾಗಿ ಲೋಕಕ್ಕನುಗ್ರಹ ಮಾಡಿದರು ಕಾಣಾ....
> (ಗು.ರಾ.ಚಾ. ಸಂ. ೧, ಪ. ೫೬)

ಎಂದವನೇ ಈ ಪದ್ಯದಲ್ಲಿ ಐವರು ಆಚಾರ್ಯರು ಲೋಕಕ್ಕೆ ಅನುಗ್ರಹವ ಮಾಡಿದವರು ಎಂದು ತಿಳಿಸುತ್ತಾನೆ. ಮತ್ತೆ ಈ ವೀರಶೈವಮತಾಚಾರ್ಯರ ವಿಷಯವನ್ನು ತಿಳುಸುತ್ತಾ-

> ಇವರಲಾ ಶಿವನ ನಿಜ ಸಂಪ್ರದಾಯದ ಗುರುಗ
> ಳಿವರ ಘನ ಮಹಿಮೆಯಂ ಹೇಳುವಡೆಯಬ್ಜಸಂ
> ಭವಗಸಾಧ್ಯಂ ಲೋಕರಕ್ಷಕರು ವೀರಶೈವ ಪ್ರತಿಷ್ಠಾಚಾರ್ಯರು।

ಭವಭಯ ವಿಭಾಡನರು ಸಕಲಾಗಮ ಸ್ತುತ್ಯ
ರವಿರಳ ಜ್ಞಾನಿಗಳು ಸದ್‌ಧರ್ಮ ಚರಿತರುಂ

(ಗು.ರಾ.ಚಾ. ಸಂ. ೧, ಪ. ೭೫)

ಎಂದು ಆಚಾರ್ಯರ ಘನತೆ ಗೌರವಗಳನ್ನು ಕೊಂಡಾಡುತ್ತಾನೆ.

ಶ್ರೀಪತಿ ಪಂಡಿತರು ತಮ್ಮ ಶ್ರೀಕರ ಭಾಷ್ಯದಲ್ಲಿ (ಇವರ ಕಾಲ ಕ್ರಿ.ಶ. ೧೧೬೦, ವಿದ್ವಾಂಸರಲ್ಲಿ ಈ ಬಗ್ಗೆ ಭಿನ್ನಭಿಪ್ರಾಯವೂ ಇದೆ) ಬ್ರಹ್ಮಸೂತ್ರಗಳಿಗೆ ವೀರಶೈವ ಸಿದ್ಧಾಂತದ ಪರವಾಗಿ, ತಮಗಿಂತ ಮೊದಲು ಭಾಷ್ಯಗಳನ್ನು ಬರೆದ ವೀರಶೈವಾಚಾರ್ಯರ ಹೆಸರುಗಳನ್ನು ಉಲ್ಲೇಖಿಸುತ್ತಾ 'ವೇಮಾರಾಧ್ಯ-ಉದ್ಭಟಾರಾಧ್ಯ-ಮರುಲಸಿದ್ಧ-ರೇವಣಸಿದ್ಧಾದಿಭಿಃ ಮಹಾತ್ಮಬಿಃ ಕೃಪಾತ್ ವೇದಾಂತ ಭಾಷ್ಯಾದಿ ಗ್ರಂಥಾತ್' ಎಂದು ಹೇಳುವ ಉಕ್ತಿಯಲ್ಲಿ ರೇವಣಸಿದ್ಧಾದಿ ಆಚಾರ್ಯರು ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದಿದ್ದರು ಎನ್ನುವ ಅಂಶ ವೇದ್ಯವಾಗುತ್ತದೆ. ಆದರೆ ಆ ಭಾಷ್ಯಗಳು ಉಪಲಬ್ಧವಾಗಿಲ್ಲ. ಶ್ರೀಪತಿ ತನ್ನ ಭಾಷ್ಯದಲ್ಲಿ ರೇವಣ, ಮರುಳ, ಏಕೋರಾಮಾರಾಧ್ಯರು ಹೆಸರುಗಳನ್ನು ಮಾತ್ರ ಉಲ್ಲೇಖಿಸಿದ್ದಾನೆ.

ವೀರಶೈವ ಮತಾಚಾರ್ಯರನ್ನು ಕುರಿತು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿಸುವುದಾದರೆ ಥರ್ಸಟನ್ ಎಂಬ ವಿದ್ವಾಂಸ ವೀರಶೈವರಲ್ಲಿ ಐವರು ಮಹಾಗೋತ್ರಕರ್ತರು ಎಂದು ತಿಳಿಸುತ್ತಾ ಏಕೋರಾಮಾರಾಧ್ಯ-ವಿಶ್ವಾರಾಧ್ಯ-ಮರುಳಾರಾಧ್ಯ-ಪಂಡಿತಾರಾಧ್ಯ-ರೇಣುಕಾಚಾರ್ಯರೆಂದು ಐವರು ಆಚಾರ್ಯರ ಹೆಸರುಗಳನ್ನು ಉಲ್ಲೇಖಿಸಿದ್ದಾನೆ.[೧] ಡಾ|| ಜೆ.ಎನ್. ಫಾರ್ಕೊಹಾರ್ ಎಂಬ ವಿದ್ವಾಂಸರು ಏಕೋರಾಮಾರಾಧ್ಯ-ಪಂಡಿತಾರಾಧ್ಯ-ರೇವಣಾರಾಧ್ಯ-ಮರುಳಾರಾಧ್ಯ ಮತ್ತು ವಿಶ್ವಾರಾಧ್ಯ ಎಂಬ ಐವರು ಯತಿಗಳಿಂದ ವೀರಶೈವಮತವು ಸ್ಥಾಪಿಸಲ್ಪಟ್ಟಿತು ಎಂದು ಅಭಿಪ್ರಾಯಪಡುತ್ತಾನೆ.[೨]

ಆದರೆ ಸಿ.ಪಿ. ಬ್ರೌನ್ ಎಂಬ ವಿದ್ವಾಂಸ ಮಾತ್ರ ರೇವಣಾರಾಧ್ಯ, ಮರುಲಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯರೆಂಬ ನಾಲ್ಕು ಜನ ಆಚಾರ್ಯರ ಹೆಸರುಗಳನ್ನು ಮಾತ್ರ ಉಲ್ಲೇಖಿಸುತ್ತಾನೆ.[೩]

ಈವರೆಗಿನ ಎಲ್ಲ ಅಭಿಪ್ರಾಯವನ್ನು ಗಮನಿಸಿದಾಗ, ಚತುರಾಚಾರ್ಯರು ಮೊದಲು ಇದ್ದು, ಕಾಲಾನಂತರದಲ್ಲಿ ಐದನೆಯ ಆಚಾರ್ಯರ ಸೇರ್ಪಡೆ ಆಗಿ ಪಂಚಾಚಾರ್ಯರಾಗಿರಬೇಕೆಂದು ಊಹಿಸಬಹುದಾಗಿದೆ.

ವಿ.ಸೂ.: ನನ್ನ ಈ ಲೇಖನಕ್ಕೆ 'ಚತುರಾಚಾರ್ಯ ಚಾರಿತ್ರ' ಗ್ರಂಥದ ಪೀಠಿಕೆಯ ಸಹಾಯವನ್ನು ಪಡೆದಿದ್ದೇನೆ. ಅದಕ್ಕಾಗಿ ಗ್ರಂಥ ಸಂಪಾದಕರಿಗೆ ಕೃತಜ್ಞತನಾಗಿದ್ದೇನೆ. (ಲೇ)

ಅಡಿಟಪ್ಪಣಿಗಳು

1. Castes and Tribes of Southern India, Vol. IV, Page 264-265.
2. The Raligious Quest of India, Page 259.
3. Madras Journal of Literature and Science, Vol XI; 1840; Page 153.

XXX

ಕನ್ನಡ ಗದ್ಯದ ಸಮಗ್ರಾವಲೋಕನದ ಮಾದರಿಗಳು

(ಎನ್. ಬಸವಾರಾಧ್ಯರ ಕನ್ನಡ ಗದ್ಯವಿಕಾಸ ಮತ್ತು ಕನ್ನಡಗದ್ಯಾವಲೋಕನ ಕೃತಿಗಳ ಕುರಿತು ಲೇಖನ)

-ಪ್ರೊ. ಜಿ. ಅಶ್ವತ್ಥನಾರಾಯಣ

ಕನ್ನಡ ವಿದ್ವಾಂಸರಲ್ಲಿ ಹಲವು ತರದವರು ಇದ್ದಾರೆ. ಕೆಲವರು ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡುತ್ತಾ ಬರಹದ ಕಡೆಗೆ ಅಷ್ಟಾಗಿ ಗಮನ ನೀಡುವುದಿಲ್ಲ. ಮತ್ತೆ ಕೆಲವರು ಕೇವಲ ಬರಹದ ಕಾಯಕ ಕೈಗೊಂಡು ತಮ್ಮ ವಿದ್ವತ್ತನ್ನು ಉಪನ್ಯಾಸಗಳಲ್ಲಿ ವ್ಯಕ್ತಮಾಡುವ ಗೋಜಿಗೆ ಹೋಗುವುದಿಲ್ಲ. ಮತ್ತೆ ಕೆಲವರು ಉಪನ್ಯಾಸ, ಬರಹಗಳನ್ನು ಮಾಡಿದರೂ ಸಂಘ ಸಂಸ್ಥೆಗಳ ಸೇವೆಗೆ ಕಣ್ಣೂ ಹಾಯಿಸುವುದಿಲ್ಲ, ಕಿವಿಯನ್ನೂ ಕೊಡಲಾರರು, ಮತ್ತೆ ಕೆಲವರು ಉಪನ್ಯಾಸಕ ವೃತ್ತಿಯಲ್ಲಿ ತಮ್ಮ ಬದುಕನ್ನೇ ತೇದು ವಿದ್ಯಾರ್ಥಿಗಳಿಗೆ ಜ್ಞಾನಧಾರೆ ಎರೆಯುವುದರಲ್ಲೇ ನಿರಂತರಾಗಿ ಬಿಡುವರು. ಆದರೆ ಎನ್. ಬಸವಾರಾಧ್ಯರು ಉಪಾಧ್ಯಾಯ ವೃತ್ತಿಯಿಲ್ಲದೆ ಕಛೇರಿ ಕೆಲಸದಲ್ಲೇ ನಿರತರಾದವರಾದರೂ, ಉಪನ್ಯಾಸ, ಬರಹ, ಸಂಘಸಂಸ್ಥೆಗಳ ತ್ರಿಮುಖ ಸೇವೆಯಲ್ಲಿ ನಿರತರಾದ ಗಣ್ಯವಿದ್ವಾಂಸರಾಗಿದ್ದಾರೆ. ಹೀಗಾಗಿ ಅವರು ನಮ್ಮ ನಾಡಿನ ಪರಿಚಿತ ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಅಖಿಲ ಭಾರತ ನಿಘಂಟು ತಜ್ಞರ ಸಮ್ಮೇಳನ ಮೊದಲಾದ ವಿದ್ವತ್ ಸಂಸ್ಥೆಗಳಲ್ಲಿ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದಾರೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ತು, ಬಿ. ಶಿವಮೂರ್ತಿ ಶಾಸ್ತ್ರಿಗಳ ಪ್ರತಿಷ್ಠಾನ ಮುಂತಾದ ಸಂಸ್ಥೆಗಳ ಅಧ್ಯಕ್ಷರಾಗಿ ನೂರಾರು ಸಾಂದರ್ಭಿಕ ಭಾಷಣಗಳನ್ನು ನೀಡಿದ್ದಾರೆ. ಆವೇಶ ರಹಿತ ವಿಚಾರ ಪೂರ್ಣ ಉಪನ್ಯಾಸಗಳನ್ನು ನೀಡುವುದಲ್ಲಿ ಎತ್ತಿದಕೈ. ಇನ್ನು ವಿದ್ವತ್ ಪ್ರಬಂಧಗಳ ಮಂಡನೆಯಲ್ಲಿ ಅದ್ವಿತೀಯರು. ಸಮ್ಮೇಳನ, ವಿದ್ವತ್‌ಗೋಷ್ಠಿ, ವಿಚಾರ ಸಂಕಿರಣ, ಶತಮಾನೋತ್ಸವ,

ರಜತಮಹೋತ್ಸವ ಮೊದಲಾದ ಸಂದರ್ಭಗಳಲ್ಲಿ ನಾನಾ ಸಂಸ್ಥೆಗಳ ಗೋಷ್ಠಿಗಳಲ್ಲಿ ಮೌಲಿಕ ಪ್ರಬಂಧಗಳನ್ನು ಮೂಡಿಸಿರುವ ಲೇಖಕರು ಇವರು.

ಮೊದಲಿನಿಂದಲೂ ಸದ್ದಿಲ್ಲದ ಕಾರ್ಯಕರ್ತರು ಮತ್ತು ಸಂಘಟಕರು. ಇವರ ಕಾರ್ಯಸಾಮರ್ಥ್ಯಕ್ಕೆ ಕನ್ನಡಸಾಹಿತ್ಯ ಪರಿಷತ್ತು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕನ್ನಡ ನಿಘಂಟು ಕಛೇರಿಗಳಲ್ಲಿ ನಿರ್ವಹಿಸಿರುವ ಕಾರ್ಯನಿರ್ವಹಣೆ ಸಾಕ್ಷಿಯಾಗಿದೆ.

ಇವೆಲ್ಲಕ್ಕಿಂತ ಮಿಗಿಲಾಗಿ ಕಳೆದ ೫೦ ವರುಷಗಳಲ್ಲಿ ಕನ್ನಡ ನಿಘಂಟು, ಗ್ರಂಥ ಸಂಪಾದನೆ, ಕಾವ್ಯ ಪ್ರಕಟಣೆ, ಕ್ಷೇತ್ರಗಳಲ್ಲಿ ಇವರು ಸಲ್ಲಿಸಿರುವ ಸೇವೆ ಅಮೋಘವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇವರ ಹೆಸರು ನಿಲ್ಲುವಂತೆ ಮಾಡಿದೆ.

ನಿಘಂಟು ಕ್ಷೇತ್ರದಲ್ಲಿ ಎರಡು ಬಗೆಯ ಕೆಲಸಮಾಡಿದ್ದಾರೆ. ಸಮಿತಿಗಳ ಮೂಲಕ ಮತ್ತು ಗ್ರಂಥ ಪ್ರಕಟನೆಗಳ ಮೂಲಕ ಕಾರ್ಯ ಮಾಡಿದ್ದಾರೆ. ಮೈ.ವಿ.ವಿ. ಇಂಗ್ಲಿಷ್ ಕನ್ನಡ ನಿಘಂಟು ಪರಿಷ್ಕರಣ ಯೋಜನೆಯ ಸಂಪಾದಕ ಸಮಿತಿಯಲ್ಲಿ, ಕರ್ನಾಟಕ ಸರ್ಕಾರದ ಕನ್ನಡ ಕಛೇರಿ ಕೈಪಿಡಿ ತಯಾರಿಕಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟಿನ ಸಂಪಾದಕ ಸಮಿತಿಗಳಲ್ಲಿ ಸಲಹೆ ಸೂಚನೆ ನೀಡುವಿಕೆ, ಕರಡು ತಯಾರಿಸುವಿಕೆ, ಪರಿಷ್ಕರಣ ಮಾಡುವಿಕೆ, ಪದಗಳ ಸಂಗ್ರಹ ಮಾಡುವಿಕೆ, ಅರ್ಥನಿರ್ಣಯ ಮೊದಲಾದ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಸಾಮೂಹಿಕ ಕಾರ್ಯವಾದ ಸಮಿತಿ ಕೆಲಸಗಳಲ್ಲಿ ವೈಯಕ್ತಿಕ ಕೊಡುಗೆಯನ್ನು ನಿರ್ದೇಶಿಸುವುದು ಕಷ್ಟವೆಂಬುದು ನಿಜ. ಆದರೆ ನಾನು ಕಣ್ಣಾರೆ ಕಂಡಂತೆ ಕನ್ನಡ ಸಾಹಿತ್ಯ ಪರಿಷತ್ತಿನ ೮ ಸಂಪುಟಗಳ ಬೃಹತ್ ಕನ್ನಡ ನಿಘಂಟಿನಲ್ಲಿ ಮೊದಲಿನಿಂದ ಕೊನೆಯವರೆಗೆ ನಿರಂತರ ಸೇವೆಯನ್ನು ನಿಘಂಟಿನ ಎಲ್ಲ ಹಂತಗಳಲ್ಲೂ ಸಲ್ಲಿಸಿದವರು ಇವರೊಬ್ಬರೇ ಎಂದರೆ ತಪ್ಪಾಗಲಾರದು. ಅವರ ಅಮೂಲ್ಯ ಬದುಕಿನ ಬಹುಭಾಗ ಕನ್ನಡ ನಿಘಂಟಿನ ಸೇವೆಯಲ್ಲಿಯೇ ಕಳೆದಿದೆ. ಇದಲ್ಲದೆ ಸಚಿತ್ರ ಶಾಲಾ ನಿಘಂಟನ್ನು ಭಾಷಾಂತರ ಮಾಡಿದ್ದಾರೆ ಮತ್ತೆ ಇವರ ಗ್ರಂಥ ಸಂಪಾದನೆಯ ಹಿರಿಮೆಯ ಕೃತಿಗಳಲ್ಲಿನ ಒಂದಾದ ಹಳಗನ್ನಡ ನಿಘಂಟು ಕನ್ನಡಕ್ಕೆ ಒಂದು ಹೆಮ್ಮೆಯ ಕೊಡುಗೆ ಆಗಿದೆ. ಕನ್ನಡ ನಿಘಂಟು ಕ್ಷೇತ್ರಕ್ಕೆ ದೀರ್ಘಕಾಲದ ಸೇವೆ ಸಲ್ಲಿಸಿರುವ ಕೆಲವೇ ಕನ್ನಡ ವಿದ್ವಾಂಸರಲ್ಲಿ ಎಸ್. ಬಸವಾರಾಧ್ಯರೂ ಒಬ್ಬರಾಗಿದ್ದಾರೆ.

ಬಸವಾರಾಧ್ಯರ ವಿಶೇಷ ಕೊಡುಗೆಯ ಇನ್ನೊಂದು ಕ್ಷೇತ್ರವೆಂದರೆ ಪ್ರಮುಖವಾಗಿ ವೀರಶೈವ ಕಾವ್ಯಗಳ ಮತ್ತು ಇತರ ಕೃತಿಗಳ ಸಂಪಾದನೆ, ಪರಿಷ್ಕರಣೆ, ಪ್ರಕಟನೆ. ತ್ರಿಪುರ ದಹನ ಸಾಂಗತ್ಯ, ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ, ಹರಿಶ್ಚಂದ್ರಕಾವ್ಯ, ಉದ್ಭಟದೇವ ಚರಿತೆ, ಗುರುಭಕ್ತಾಂಡಾರಿ ಚರಿತೆ, ಅಬ್ಬಲೂರು ಚರಿತೆ, ಆರಾಧ್ಯಚರಿತ್ರ, ಸಿದ್ಧಲಿಂಗೇಶ್ವರ ಸಾಂಗತ್ಯ, ಚತುರಾಚಾರ್ಯ ಚಾರಿತ್ರ, ದೇವಲಾಪುರದ ನಂಜುಂಡ ವಿರಚಿತ ಕೃತಿಗಳು ಇತ್ಯಾದಿ. ವೀರಶೈವ ಕಾವ್ಯಗಳು ಗ್ರಂಥ ಸಂಪಾದನೆ, ವೀರಶೈವ ಕಾವ್ಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಪಾದಿಸುವ ವಿದ್ವಾಂಸರಲ್ಲಿ ಗಣ್ಯಸ್ಥಾನ ತಂದುಕೊಟ್ಟಿದೆ.

ಕೇವಲ ವೀರಶೈವ ಕಾವ್ಯಗಳ ಸಂಪಾದನೆಗೇ ಇವರ ಪಾಂಡಿತ್ಯ ಮೀಸಲಾಗಿಲ್ಲ. ಹಳಗನ್ನಡ ಯಾವುದೇ ಕ್ಷೇತ್ರದಲ್ಲಾದರೂ ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲರು ಎನ್ನಲು, ತೊರವೆ ರಾಮಾಯಣ, ಪಂಪಭಾರತ ಸಂಗ್ರಹ, ಶತಕ ಸಾಹಿತ್ಯಸಂಗ್ರಹ, ಸರ್ವಜ್ಞ ವಚನ ಸಂಗ್ರಹ, ಹರಿಶ್ಚಂದ್ರ ಸಾಂಗತ್ಯ ಇತಾದಿ ಗ್ರಂಥಗಳು ನಿದರ್ಶವಾಗಿವೆ.

ಸಂಭಾವನಾ ಗ್ರಂಥಗಳನ್ನು ಸಂಪಾದಿಸುವುದು ಯಾರಿಗೇ ಆದರೂ ತಲೆ ನೋವಿನ ಕೆಲಸ. ವೈಯಕ್ತಿಕ ಗ್ರಂಥಸಂಪಾದನೆಯನ್ನು ಹೇಗೋ ಮಾಡಬಹುದು. ಆದರೆ ಗೌರವಗ್ರಂಥ ಸಂಪಾದನೆ, ಹತ್ತಾರು ಜನ ವಿದ್ವಾಂಸರನ್ನು ಒಲೈಸಿ ಲೇಖನ ಸಂಗ್ರಹ ಮಾಡಿ ಗ್ರಂಥ ಪ್ರಕಟಿಸುವುದು ಸುಲಭ ಸಾಧ್ಯವಿಲ್ಲ. ಅದೊಂದು ಕಲೆ. ಅಂತೆಯೇ ಬಹಳ ಕಠಿಣ ಕೆಲಸ. ಈ ಕ್ಷೇತ್ರದಲ್ಲಿ ಜನಾನುರಾಗಿಯಾಗಿ ವಿದ್ವತ್ ಮನ್ನಣೆ ಪಡೆದ ವಿದ್ವಾಂಸರು ಈ ಕೆಲಸವನ್ನು ಯಶಸ್ವಿಯಾಗಿ ಮಾಡಬಲ್ಲರು. ಬಸವಾರಾಧ್ಯರು ಈ ವರ್ಗಕ್ಕೆ ಸೇರಿದವರು. ಇವರು ಸಂಪಾದಿಸಿದ, ಬಿ. ಶಿವಮೂರ್ತಿಶಾಸ್ತ್ರಿ ಸಂಭಾವನಾ ಗ್ರಂಥ (೧೯೬೮), ಉಪಾಯನ

(ಡಿ.ಎಲ್. ನರಸಿಂಹಾಚಾರ್ಯರ ಸಂಭಾವನಾ ಗ್ರಂಥ ೧೯೬೭), ಅಮರ ವಾಣಿ (ಅಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರ ಸಂಸ್ಮರಣ ಸಂಪುಟ ೧೯೯೧) ಇವು ವಿದ್ವದ್ವಲಯದಲ್ಲಿ ಮನ್ನಣೆ ಗಳಿಸಿವೆ.

ಬಸವಾರಾಧ್ಯರು ಅನೇಕರ ಗಮನಕ್ಕೆ ಬಾರದಿರುವ ಮತ್ತೊಂದು ಕ್ಷೇತ್ರದಲ್ಲಿ ವಿಶೇಷ ಕೊಡುಗೆ ನೀಡಿದ್ದಾರೆ. ಆ ಕ್ಷೇತ್ರವೆಂದರೆ ಕನ್ನಡ ಗದ್ಯ ಸಾಹಿತ್ಯ ಪ್ರಕಾರ. ಅವರು ಸ್ವತಃ ಒಳ್ಳೆಯ ಗದ್ಯಕಾರರು ಎನ್ನುವುದಕ್ಕೆ ಅವರ ವಿದ್ವತ್‌ಪ್ರಬಂಧಗಳು ಅಂದು ಸಂಪಾದಿಸಿದ ಗ್ರಂಥಗಳಿಗೆ ಬರೆದ ವಿವಿಧ ಪೀಠಿಕೆಗಳೂ ಸಾಕ್ಷಿಯಾಗಿವೆ. ಹರಿಶ್ಚಂದ್ರಕಾವ್ಯ ಮತ್ತು ತೊರವೆ ರಾಮಾಯಣ ಕಾವ್ಯಗಳಿಗೆ ಬರೆದ ವಿಸ್ತೃತ ಪೀಠಿಕೆಗಳೂ ಪ್ರಸಿದ್ಧವಾಗಿವೆ. ಇದ್ದಕ್ಕಿಂತ ಮಿಗಿಲಾಗಿ ಅವರ ಕನ್ನಡ ಗದ್ಯ ಸಾಹಿತ್ಯ ಬೆಳವಣಿಗೆಯನ್ನು ಗುರುತಿಸುವ ಕಾರ್ಯವನ್ನು ಗದ್ಯ ಲೇಖನಗಳ ಸಂಗ್ರಹವನ್ನು ಕನ್ನಡ ಗದ್ಯವಿಕಾಸ ಮತ್ತು ಕನ್ನಡ ಗದ್ಯಾವಲೋಕನ ಎಂಬೆರಡು ಗ್ರಂಥಗಳಲ್ಲಿ ಗುರುತಿಸಬಹುದಾಗಿದೆ. ಇವೆರಡೂ ಗ್ರಂಥಗಳು ಪಠ್ಯ ಗ್ರಂಥಗಳಾಗುವ ಮಾದರಿಯಲ್ಲಿ ರಚಿತವಾಗಿದ್ದು ಪಠ್ಯ ಗ್ರಂಥಗಳಾಗಿಯೂ ವಿಶ್ವವಿದ್ಯಾನಿಲಯದ ಡಿಗ್ರಿ ತರಗತಿಗಳಿಗೆ ಪಾಠ್ಯವಾಗಿದ್ದುಂಟು. ಆದರೆ ಇದು ಕೇವಲ ಪಠ್ಯ ಗ್ರಂಥವಾಗಿಲ್ಲ. ಕನ್ನಡ ಸಾಹಿತ್ಯದ ಗದ್ಯ ಬೆಳವಣಿಗೆಯನ್ನು ತೋರಿಸುವ ಮಾದರಿ ಗದ್ಯ ಲೇಖನಗಳ ಸಂಗ್ರಹವಾಗಿರುವುದು ಇವುಗಳ ವೈಶಿಷ್ಟ್ಯ.

ಕನ್ನಡದಲ್ಲಿ ಹತ್ತಾರು ಬಗೆಯ ಗದ್ಯ ಸಂಕಲನಗಳು ಬಂದಿವೆ. ಶಾಲಾಪಠ್ಯಗಳಲ್ಲಿ ಐತಿಹಾಸಿಕ ದೃಷ್ಟಿಯಿಂದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಗದ್ಯದ ಪಾಠಗಳ ಸಂಕಲನ ಕಾಣಬಹುದು. ಇನ್ನು ಕೇವಲ ಹೊಸಗನ್ನಡ ಗದ್ಯ ಸಂಕಲನಗಳಲ್ಲಿ ಪ್ರಬಂಧ, ವಿಮರ್ಶೆ, ಸಣ್ಣಕತೆ. ಸಂಶೋಧನೆ, ನಾಟಕ ಮೊದಲಾದ ಪ್ರಕಾರಗಳಲ್ಲಿ ಪ್ರಾತಿನಿಧಿಕ ಗದ್ಯ ಭಾಗಗಳ ಸಂಕಲನ ಗ್ರಂಥಗಳು ಬಂದಿವೆ. ಆದರೆ ಇವೆಲ್ಲ ಸೀಮಿತ ಗುರಿಯಿಂದ ಪ್ರಕಟವಾದವು. ಕ್ರಿ.ಶ. ೫ನೇ ಶತಮಾನದಿಂದ ೨೧ನೇ ಶತಮಾನದವರೆಗೆ ಸಮಗ್ರ ಗದ್ಯಾವಲೋಕನ ಮಾಡಿದ ಗ್ರಂಥಗಳು ಕೆಲವೇ ಕೆಲವು. ಆ ಪೈಕಿ ಬಸವಾರಾಧ್ಯರ ಗ್ರಂಥಗಳು ವಿಶಿಷ್ಟವಾಗಿವೆ. ಆ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೧೯೬೧ರಲ್ಲಿ ಕನ್ನಡ ಗದ್ಯವಿಕಾಸ ಪ್ರಕಟವಾಯಿತು. ಕ್ರಿ.ಶ. ೪೫೦ ರಿಂದ ೧೯೦೦ರವರೆಗೆ ಕನ್ನಡದಲ್ಲಿ ಪ್ರಕಟವಾದ ಹಳಗನ್ನಡ ಗದ್ಯ ಮತ್ತು ನಡುಗನ್ನಡ ಗದ್ಯ ಗ್ರಂಥಗಳನ್ನು ಅವಲೋಕಿಸಿ ಅವುಗಳ ಪ್ರಾತಿನಿಧಿಕ ಗದ್ಯ ಭಾಗಗಳನ್ನು ಈ ಸಂಕಲನದಲ್ಲಿ ನೀಡಲಾಗಿದೆ. ಈ ಗ್ರಂಥಕ್ಕೆ ಬರೆದಿರುವ ಪೀಠಿಕೆಯಲ್ಲಿ ಕೆಲವು ಗಮನಾರ್ಹ ಸಂಗತಿಗಳನ್ನು ಕನ್ನಡ ಗದ್ಯದ ಬಗೆಗೆ ತಿಳಿಸಿದ್ದಾರೆ.

"ವಿಪುಲವಾದ ಕನ್ನಡ ಸಾಹಿತ್ಯದಲ್ಲಿ ಪದ್ಯ ಕೃತಿಗಳಿಗಿಂತ ಗದ್ಯ ಕೃತಿಗಳು ಬಹಳ ಕಡಿಮೆ. (ಈ ಮಾತು ೧೯ನೇ ಶತಮಾನದವರೆಗೆ ನಿಜ ಅಷ್ಟೆ.) ಕೆಲವು ಶತಮಾನಗಳಲ್ಲಿ ಗದ್ಯ ಕೃತಿಗಳೇ ಕಂಡು ಬರುವುದಿಲ್ಲ. ಇದಕ್ಕೆ ನಿದರ್ಶನವಾಗಿ "ಚಾವುಂಡರಾಯ (ಕ್ರಿ.ಶ. ೯೭೮), ಹರಿಹರ (ಕ್ರಿ.ಶ. ೧೧೬೫) ಇವರ ಗ್ರಂಥಗಳ ನಂತರ, ಇಲ್ಲಿಂದ ಸುಮಾರು ೧೭ನೇ ಶತಮಾನದವರೆಗೂ ಸುಮಾರು ಬರಿಯ ಗದ್ಯದಲ್ಲೇ ಬರೆದ ಯಾವ ಗ್ರಂಥವೂ ಕಂಡುಬರುವುದಿಲ್ಲ. ಸುಮಾರು ೫ ಶತಮಾನಗಳ ಕಾಲ ಗದ್ಯ ಗ್ರಂಥಗಳೇ ರಚಿತವಾಗದಿದ್ದುದು ನಿಜಕ್ಕೂ ದುರ್ದೈವವೆ". ಆದರೆ ೧೭, ೧೮ನೇ ಶತಮಾನದ ಗದ್ಯ ಗ್ರಂಥಗಳನ್ನು ಉಲ್ಲೇಖಿಸಿ ಕನ್ನಡ ಗದ್ಯ ಸಾಹಿತ್ಯದ ಸುವರ್ಣಯುಗವೆಂದು ಕರೆಯಬಹುದು ಎಂದಿದ್ದಾರೆ. ಈ ಶತಮಾನಗಳಲ್ಲಿ ಕಂಡು ಬರುವಷ್ಟು ಕವಿಗಳು ಅವರ ಕಾವ್ಯಗಳೂ ಮತ್ತಾವ ಶತಮಾನದಲ್ಲೂ ಕಂಡು ಬರುವುದಿಲ್ಲ ಎಂದಿದ್ದಾರೆ? ಈ ಮಾತು ಹಳಗನ್ನಡ ಕಾವ್ಯಗಳ ರಚನೆಗೆ ಅನ್ವಯಿಸುವ ಮಾತಾಗಿದೆ.

ಕನ್ನಡ ಗದ್ಯ ವಿಕಾಸ ಗ್ರಂಥ ರಚನೆಯನ್ನು ಕುರಿತು ಸಂಪಾದಕ ಬಸವಾರಾಧ್ಯರು ಹೇಳಿರುವ ಮಾತಿದು- "ಕನ್ನಡ ಗದ್ಯದ ಬೆಳವಣಿಗೆಯನ್ನು ಕಾಲ ಕ್ರಮದಲ್ಲಿ ಮಜಲು ಮಜಲುಗಳಾಗಿ ನಿರೂಪಿಸಲು ಪ್ರಯತ್ನಿಸಲಾಗಿದೆ. ಅತ್ಯಂತ ಪ್ರಾಚೀನ (ಹಲ್ಮಿಡಿ)

ಶಾಸನದಿಂದ ಹಿಡಿದು ಸುಮಾರು ೧೯ನೆಯ ಶತಮಾನದವರೆಗಿನ ಕಾವ್ಯ ಭಾಗಗಳನ್ನು ಆರಿಸಿಕೊಳ್ಳಲಾಗಿದೆ. ಕನ್ನಡ ಗದ್ಯವು ಕಾಲಕಾಲಕ್ಕೆ ಯಾವ ಯಾವ ರೀತಿ ಮಾರ್ಪಾಡಾಗುತ್ತ ಬಂದಿತೆಂಬುದು ಇದರಿಂದ ವ್ಯಕ್ತವಾಗುತ್ತದೆ."

ಈ ಗದ್ಯ ಸಂಕಲನದಲ್ಲಿ ಗದ್ಯವೇ ವಿಪುಲವಾಗಿರುವ ಕೆಲವು ಚಂಪೂಕಾವ್ಯಗಳ ಭಾಗಗಳನ್ನು ಅಳವಡಿಸಿಕೊಳ್ಳಲಾಗಿದೆ. ಗ್ರಂಥಕರ್ತನು ಯಾರೆಂಬುದನ್ನು ತಿಳಿಯದ ಕೆಲವು ಗದ್ಯಕೃತಿಗಳೂ ಇವೆ. ಅವುಗಳಲ್ಲಿ ನೋಂಪಿಯ ಕಥೆಗಳು, ಕನ್ನಡ ವಚನ ಕಾದಂಬರಿ ಮುಂತಾದವನ್ನು ಉದಾಹರಿಸಬಹುದು.

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಸಂಪಾದಕರು ಆರಿಸಿರುವ ಗದ್ಯಭಾಗಗಳ ಆಕರ ಗ್ರಂಥಗಳು ಹೀಗಿವೆ:

೧) ಹಲ್ಮಿಡಿಶಾಸನ ೨) ವೀರಗಲ್ಲು ೩) ವಡ್ಡಾರಾಧನೆ ೪) ವಿಕ್ರಮಾರ್ಜುನವಿಜಯ ೫) ಚಾವುಂಡರಾಯ ಪುರಾಣಂ ೬) ಪಂಚತಂತ್ರ ೭)ಬೇಲೂರಿನ ೨೦೨ನೆಯ ಶಾಸನ, ೮)ನಂಬಿಯಣ್ಣನ ರಗಳೆ ೯) ಪುಣ್ಯಾಶ್ರಮ ೧೦) ಶ್ರವಣ ಬೆಳಗೊಳದ ೩೪೪ನೆಯ ಶಾಸನ ೧೧) ಚಾಮರಾಜೋಕ್ತಿ ವಿಲಾಸ ೧೨) ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ ೧೩) ವಿಷ್ಣುಪುರಾಣಂ ೧೪) ಹಾಲಾಸ್ಯ ಮಾಹಾತ್ಮ್ಯಂ ೧೫) ರಾಜಾವಳಿ ಕಥೆ ೧೬) ರಾಜೇಂದ್ರನಾಮೆ ೧೭) ಉತ್ತರರಾಮ ಚರಿತ್ರಕಥೆ ೧೮) ಮದ್ರಾಮಂಜೂಷವು ೧೯) ಆದಿತ್ಯವಾರದ ನೋಂಪಿ ೨೦) ಕನ್ನಡ ವಚನ ಕಾದಂಬರಿ ೨೧) ಅದ್ಭುತ ರಾಮಾಯಣ.

ಯಾವುದೇ ಗದ್ಯ ಲೇಖನವೂ ಸ್ವತಂತ್ರ ಕಥನವಾಗಿರುವ ಹಾಗೆ ಆಯ್ಕೆ ಮಾಡಲಾಗಿದೆ. ಪೀಠಿಕೆಯಲ್ಲಿ ೨೧ ಗ್ರಂಥಗಳ ಬಗೆಗೆ ಮತ್ತು ಲೇಖಕರ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಗಳನ್ನು ನೀಡಲಾಗಿದೆ. ಗ್ರಂಥದ ಕೊನೆಯಲ್ಲಿ ಪಾರಿಭಾಷಿಕ ಶಬ್ದಕೋಶ ಮತ್ತು ಶಬ್ದಾರ್ಥಕೋಶ ಕೊಟ್ಟಿದ್ದಾರೆ. ವಿದ್ಯಾರ್ಥಿಗಳಿಗೆ ಮತ್ತು ಓದುಗರಿಗೆ ಈ ಟಿಪ್ಪಣಿ, ಕೋಶಗಳು ಸಹಾಯಕವಾಗಿವೆ ಎಂಬುದು ಗಮನಾರ್ಹ. ಇಲ್ಲಿ ಆಯ್ಕೆ ಮಾಡಿದ ಲೇಖನಗಳಲ್ಲಿ ಕೆಲವು ಅಪ್ರಕಟಿತವಾಗಿದ್ದು ಹಸ್ತ ಪ್ರತಿಯಲ್ಲಿರುವುದನ್ನು ಸಂಪಾದಕರು ಆಯ್ಕೆ ಮಾಡಿದ್ದಾರೆ. ಉದಾ: ಕನ್ನಡ ವಚನ ಕಾದಂಬರಿ, ಆದಿತ್ಯವಾರದ ನೋಂಪಿ.

ಈ ಲೇಖನಗಳನ್ನು ಕೇವಲ ಮುದ್ರಿತ ಗ್ರಂಥಗಳಿಂದ ಆರಿಸಿದ ಭಾಗಗಳಾಗಿಲ್ಲ. ಇಂದು ನಮ್ಮ ಶಾಲಾ ಕಾಲೇಜು ಪಠ್ಯಗಳಲ್ಲಿ ಕೇವಲ ಕೆಲವು ಗ್ರಂಥಗಳಿಂದ ಆಯ್ದ ಭಾಗಗಳ ಸಂಕಲನಗಳಾಗಿದ್ದು ಅವುಗಳ ಬಗ್ಗೆ ಪರಿಷ್ಕರಣೆ, ಸಂಗ್ರಹ, ಸಂಪಾದನೆ, ಟಿಪ್ಪಣಿ, ಇತ್ಯಾದಿ ಏನೂ ಇರುವುದಿಲ್ಲ. ಆದರೆ ಈ ಗ್ರಂಥ ಹಾಗಿಲ್ಲ.

ಈ ಮಾತಿಗೆ ನಿದರ್ಶನವಾಗಿ ಸಂಪಾದಕರ ಈ ಮಾತುಗಳನ್ನು ಗಮನಿಸಬೇಕು, "ಈ ಗದ್ಯ ಸಂಕಲನದಲ್ಲಿ ಆರಿಸಿಕೊಂಡಿರುವ ಭಾಗಗಳಲ್ಲಿ ಅನೇಕವನ್ನು ಮೈಸೂರು ಪ್ರಾಚ್ಯ ಕೋಶಾಗಾರದಲ್ಲಿರುವ ಹಸ್ತ ಪ್ರತಿಗಳಿಂದ ಸಂಗ್ರಹಹಿಸಿದ್ದೇನೆ. ಮುದ್ರಿತ ಪ್ರತಿಗಳನ್ನು ಸಹ ಸಂದೇಹ ಬಂದೆಡೆ ಮೂಲ ಮಾತೃಕೆಗಳೊಡನೆ ಹೋಲಿಸುವ ಸಾಹಸವನ್ನು ಮಾಡಿದ್ದೇನೆ. ಸಾಧ್ಯವಾದಷ್ಟು ಮಟ್ಟಿಗೆ ಮಾತೃಕೆಗಳನ್ನು ಹೋಲಿಸಿ ಪಾಠಾಂತರಗಳನ್ನು ಗುರುತಿಸಿಕೊಂಡಿದ್ದೇನೆ. ಆದರೆ ಅವು ಇಲ್ಲಿ ಅಪ್ರಕೃತವೆಂದು (ಅಚ್ಚಿನಲ್ಲಿ) ಬಿಟ್ಟಿದ್ದೇನೆ."

ಹೀಗೆ ವಿದ್ಯಾರ್ಥಿಗಳನ್ನು ವಿದ್ವಾಂಸರನ್ನು ಗಮನದಲ್ಲಿಟ್ಟು ಕೊಂಡಿದ್ದರಿಂದ "ಈ ಸಂಕಲನವನ್ನು ಮೂಲತಃ ವಿದ್ಯಾರ್ಥಿಗಳ ದೃಷ್ಟಿಯನ್ನೇ ಗಮನದಲ್ಲಿಟ್ಟುಕೊಂಡು ಸಂಕಲಿಸಿದೆಯಾದರೂ ಸಾಹಿತ್ಯಾಭಿಲಾಷಿಗಳಿಗೂ ಇದರಿಂದ ಪ್ರಯೋಜನವಾಗುವುದು" ಎಂದಿದ್ದಾರೆ.

ರಸವತ್ತಾದ ಸಂಕ್ಷಿಪ್ತ ಗದ್ಯಭಾಗಗಳು ಕಥಾ ಆಕರ್ಷಣೆಯಿಂದ ಭಾಷೆಯ ಸೊಗಸಿನಿಂದ ವಿದ್ಯಾರ್ಥಿಗಳಿಗೆ ಪ್ರಿಯವಾದರೆ, ಶುದ್ಧ ಪಾಠಗಳಿಂದ, ಉಪಯುಕ್ತ ಟಿಪ್ಪಣಿಗಳಿಂದ, ಪ್ರಾತಿನಿಧಿಕ ಆಯ್ಕೆಯಿಂದ ಪಂಡಿತರಿಗೂ ಮೆಚ್ಚುಗೆ ಆದ ಗದ್ಯ ಸಂಕಲನವಾಗಿದೆ. ಈ ಬಗೆಯ ಗದ್ಯ ಸಂಕಲನಗಳು ಇದುವರೆಗೆ ಕನ್ನಡದಲ್ಲಿ ಬಂದಿರುವುದು ಕೈ ಬೆರಳಿನಲ್ಲಿ ಎಣಿಸುವಷ್ಟೇ ಸಂಖ್ಯೆಯಷ್ಟು ಎಂದರೆ ತಪ್ಪಾಗಲಾರದು.

ಕನ್ನಡ ಗದ್ಯಾವಲೋಕನ

ಇದು ಕನ್ನಡ ಗದ್ಯವಿಕಾಸದ ಮುಂದುವರೆದ ಭಾಗ ಎಂದು ಹೇಳಬಹುದು. ಅದಕ್ಕೆ ಸಂಪಾದಕರ ಮಾತುಗಳು ಸಾಕ್ಷಿಯಾಗಿವೆ:

"ಕನ್ನಡ ಸಾಹಿತ್ಯದ ಗದ್ಯದ ಬೆಳವಣಿಗೆಗೆ ಸಂಬಂಧಿಸಿದಂತೆ ಒಂದು ಸಮಗ್ರ ಸಂಕಲನವನ್ನು ಸಿದ್ಧಪಡಿಸಬೇಕೆಂದು ಅಭಿಲಾಷೆ ನನ್ನಲ್ಲಿ ಬಹುಕಾಲದಿಂದಲೂ ಇತ್ತು. ಅದು ಕನ್ನಡ ಗದ್ಯವಿಕಾಸ ಮತ್ತು ಕನ್ನಡ ಗದ್ಯಾವಲೋಕನಗಳಿಂದ ನೆರವೇರಿದೆ ಎಂದು ಭಾವಿಸುತ್ತೇನೆ."

"೧೯, ೨೦ನೇ ಶತಮಾನದ ಗದ್ಯದ ಬರವಣಿಗೆಗಳ ಒಂದು ಪ್ರಾತಿನಿಧಿಕ ಸಂಕಲನ. ಈ ಸಂಕಲನದಲ್ಲಿ ಕನ್ನಡ ಸಾಹಿತ್ಯಕ್ಕೆ ವಿಶೇಷವಾಗಿ ಗದ್ಯದ ಬೆಳವಣಿಗೆಗೆ ಶ್ರಮಿಸಿದ ವಿದ್ವಾಂಸರ ಲೇಖನಗಳಿವೆ". ಹೀಗೆ ಹೇಳುವಾಗ ತಮ್ಮ ಅಭ್ಯಾಸದ ಮಿತಿಯನ್ನು ಸಂಪಾದಕರು ಮರೆತಿಲ್ಲ. ಈ ಲೇಖನಗಳನ್ನು ಬಿಟ್ಟರೆ ಮತ್ತಾವ ಗದ್ಯ ಲೇಖನಗಳೂ ಇಲ್ಲ ಎಂದು ಹೇಳುವುದು ಧಾರ್ಷ್ಟ್ಯವಾಗುತ್ತದೆ. ನನಗೆ ತಿಳಿದಷ್ಟು, ಶಕ್ಯವಿದಷ್ಟು ಮುಖ್ಯವಾಗಿ ಕನ್ನಡ ಗದ್ಯ ಸಾಹಿತ್ಯದ ಒಂದು ಸಮಗ್ರ ಚಿತ್ರಮೂಡುವಂತೆ ಈ ಲೇಖನಗಳನ್ನು ಆರಿಸಿಕೊಂಡಿದ್ದೇನೆ ಎಂದಿದ್ದಾರೆ.

ಕನ್ನಡ ಗದ್ಯಾವಾಲೋಕನದಲ್ಲಿ ಇರುವ ಹನ್ನೊಂದು ಲೇಖನಗಳ ವಿವರ ಹೀಗಿದೆ:

೧) ಪಾಳೆಯಗಾರರು (ಎಂ.ಎಸ್. ಪುಟ್ಟಣ್ಣನವರು, ೧೮೫೪-೧೯೩೦)

೨) ವೈದ್ಯರ ಒಗ್ಗರಣೆ (ಪಂಜೆ ಮಂಗೇಶರಾಯರು, ೧೮೭೪-೧೯೩೭)

೩) ಕನ್ನಡವನ್ನುದ್ಧರಿಸಿದ್ದ ಪುಣ್ಯಪುರುಷರು (ಮುದುವೀಡು ಕೃಷ್ಣರಾಯರು, ೧೮೭೪-೧೯೪೭)

೪) ತರುಣರ ಕೈಗನ್ನಡಿ (ಹರ್ಡೇಕರ ಮಂಜಪ್ಪನವರು, ೧೮೮೬-೧೯೪೭)

೫) ಮಹಾಭಾರತ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಅದರ ಸ್ಥಾನ (ಡಾ. ಎ.ಆರ್. ಕೃಷ್ಣಶಾಸ್ತ್ರಿ, ೧೮೯೦)

೬) ನಿಜಗಲ್ಲಿನರಾಣಿ (ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೮೯೧)

೭) ಕನ್ನಡ ಮುನ್ನಡೆವ ಬಗೆ (ಶಿ.ಶಿ. ಬಸವನಾಳ, ೧೮೯೩)

೮) ವಿಜ್ಞಾನವೆಂದರೇನು? (ಜಿ. ಹನುಮಂತರಾವ್, ೧೮೯೮)

೯) ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ (ಕುವೆಂಪು, ೧೯೦೪)

೧೦) ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣ (ಡಿ.ಎಲ್. ನರಸಿಂಹಾಚಾರ್, ೧೯೦೬)

೧೧) ದಾನಚಿಂತಾಮಣಿ ಅತ್ತಿಮಬ್ಬೆ (ತೀ.ನಂ. ಶ್ರೀಕಂಠಯ್ಯ, ೧೯೦೬)

ಇಲ್ಲಿಯ ಲೇಖಕರನ್ನು ಕಂಡಾಗ ಇವರೆಲ್ಲ ಕನ್ನಡದ ಪ್ರಮುಖ ಲೇಖಕರು, ಕನ್ನಡವನ್ನು ಕಟ್ಟಿ ಬೆಳೆಸಿದವರು ಎಂಬುದರಲ್ಲಿ ಸಂದೇಹವಿಲ್ಲ. ಇವರಲ್ಲಿ ಬಹುಮಂದಿ ೧೯ನೇ ಶತಮಾನದಲ್ಲಿ ಹುಟ್ಟಿದವರು, ೨೦ನೇ ಶತಮಾನದಲ್ಲಿ ಬರೆದವರು. ಸಂಪಾದಕರು ೧೯-೨೦ನೇ ಶತಮಾನದ ಗದ್ಯದ ಬೆಳವಣಿಗೆಗೆ ಒಂದು ಪ್ರಾತಿನಿಧಿಕ ಸಂಕಲನ ಎಂಬ ಮಾತು ಸಮರ್ಪಕವೆನಿಸದು. ಏಕೆಂದರೆ ವಾಸ್ತವಿಕವಾಗಿ ಇಲ್ಲಿಯ ಗದ್ಯ ಬರಹಗಳೆಲ್ಲ ೨೦ನೇ ಶತಮಾನದ ಪೂರ್ವಾರ್ಧದ ಗಣ್ಯ ಲೇಖಕರ ಬರಹವಾಗಿದೆ. ಈ ಅವಧಿಯಲ್ಲಿ ಗದ್ಯವನ್ನು ಬೆಳೆಸಿದ ಬಿ. ವೆಂಕಟಾಚಾರ್, ಚ. ವಾಸುದೇವಯ್ಯ, ಕೆರೂರು ವಾಸುದೇವಯ್ಯ, ಬೆಳ್ಳಾವೆ ವೆಂಕಟನಾರಾಣಪ್ಪ, ಟಿ.ಎಸ್. ವೆಂಕಣ್ಣಯ್ಯ, ಹೊಸಕೆರೆ ಚಿದಂಬರಯ್ಯ, ಡಿ.ವಿ.ಜಿ. -ಇತ್ಯಾದಿ. ಇವರು ಪ್ರಾಯೋಗಿಕ ಗದ್ಯ ಶೈಲಿಗೆ ಹೆಸರಾದವರು. ಅವರ ಬರಹಗಳ ಪ್ರಾತಿನಿಧಿಕ ಸ್ವರೂಪ ಅಷ್ಟಾಗಿ ಈ ಸಂಕಲನದಲ್ಲಿ ಇಲ್ಲ. ೧೯ನೇ ಶತಮಾನದ ಲೇಖಕರ ಗದ್ಯದ ಮಾದರಿಗಳಂತೂ ಇಲ್ಲಿಲ್ಲ. ಬಹುಶಃ ಕನ್ನಡ ಗದ್ಯ ವಿಕಾಸದಲ್ಲಿ ಬಂದಿವೆ ಎಂದು ಸಂಪಾದಕರು ಬಿಟ್ಟಿರಬಹುದು.

ಆದರೆ ಅಲ್ಲಿ ಕೇವಲ ಹಳಗನ್ನಡ ನಡುಗನ್ನಡ ಮಾದರಿಗಳಿವೆ. ಹೊಸಗನ್ನಡ ಮಾದರಿಗಳಲ್ಲಿ ಬಹುಶಃ ಸಂಪಾದಕರು ತಮ್ಮ ಪರಿಚಿತ ವಿದ್ವಾಂಸರು ಮತ್ತು ಗುರುಗಳ ಬರಹಗಳಿಗೆ ಆದ್ಯತೆ ನೀಡಿದ್ದು ಕಂಡು ಬರುತ್ತದೆ. ಅದು ಅವರ ಗುರುಭಕ್ತಿಗೆ ವಿದ್ವತ್ ಪ್ರೇಮಕ್ಕೆ ಸಾಕ್ಷಿಯಾಗಿದೆ. ಅದಕ್ಕೆ ಪೀಠಿಕೆಯಲ್ಲಿ ಹೇಳಿರುವ ಮಾತುಗಳನ್ನು ಗಮನಿಸಬಹುದು, "ಪ್ರಸ್ತುತ ಸಂಕಲನದಲ್ಲಿ ಆರಿಸಿಕೊಂಡಿರುವ ಲೇಖಕರಲ್ಲಿ ಕೆಲವರು ನನ್ನ ಗುರುಗಳಾಗಿದ್ದವರು. ಉಳಿದವರು ಗುರುಸ್ಥಾನದಲ್ಲಿರುವವರು: ಹಿರಿಯರು: ವಿದ್ವಾಂಸರು."

ಕನ್ನಡ ಗದ್ಯ ವಿಕಾಸದ ಹಾಗೆಯೇ ಇಲ್ಲಿ ಆರಿಸಿದ ಗದ್ಯ ಬರಹಗಳ ಲೇಖಕರ ಪರಿಚಯ, ಶಬ್ದಾರ್ಥಕೋಶ ಕೊಟ್ಟಿದ್ದಾರೆ. ಕೆಲವು ಪದ್ಯಗಳಿಗೆ ಅನುವಾದ ಮತ್ತು ಕೆಲವು ಪದಗಳಿಗೆ ಟಿಪ್ಪಣಿ ಅಗತ್ಯವಿತ್ತು. ಆದರೆ ಆ ಕಡೆ ಸಂಪಾದಕರು ಗಮನ ಹರಿಸಿದಂತೆ ಕಾಣಿಸುವುದಿಲ್ಲ. ಉದಾಹರಣೆಗೆ: ದಾನಚಿಂತಾಮಣಿ ಅತ್ತಿಮಬ್ಬೆ ಲೇಖನದಲ್ಲಿ ಬರುವ ಪದ್ಯಗಳಿಗೆ ಅನುವಾದ ಬೇಕಿತ್ತು (ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಓದುಗರಿಗಾಗಿ).

೧೯೬೭ರಲ್ಲಿ ಪ್ರಕಟವಾದ ಈ ಗದ್ಯ ಸಂಕಲನ ಜನಪ್ರಿಯವಾಗಿದ್ದು ೧೯೭೨ರಲ್ಲಿ ಮರುಮುದ್ರಣವಾಗಿರುವುದನ್ನು ಕಾಣುತ್ತೇವೆ. ಈ ಕನ್ನಡಗದ್ಯ ವಿಕಾಸ ಮತ್ತು ಕನ್ನಡ ಗದ್ಯಾವಲೋಕನ ಯಮಳ ಸಂಕಲನಗಳು ಕನ್ನಡ ಸಮಗ್ರ ಗದ್ಯದ ಬೆಳವಣಿಗೆಯ ಕಿರುನೋಟ ನೀಡುವಲ್ಲಿ ಯಶಸ್ವಿ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ನಮ್ಮಲ್ಲಿ ಹಳಗನ್ನಡ ವಿದ್ವಾಂಸರು ಹೆಚ್ಚು ಮಂದಿ ಇಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕಂಡು ಬಂದ ಸಂಖ್ಯೆಯಲ್ಲಿ ಹಳಗನ್ನಡ ವಿದ್ವಾಂಸರು ಈಗಿಲ್ಲವೆಂದರೂ ತಪ್ಪಾಗಲಾರದು. ಈ ಅಪರೂಪದ ವರ್ಗಕ್ಕೆ ಸೇರಿದ ಬಸವಾರಾಧ್ಯರು, ಸಮಗ್ರ ಕನ್ನಡ ಸಾಹಿತ್ಯದ ಬೆಳವಣಿಗೆಯ ಮಜಲುಗಳನ್ನು ಗುರುತಿಸುವ ಯಶಸ್ವಿ ಪ್ರಯತ್ನ ಮಾಡಿದ್ದಕ್ಕೆ ಈ ಎರಡು ಗ್ರಂಥಗಳು ಸಾಕ್ಷಿಯಾಗಿವೆ. ಬಸವಾರಾಧ್ಯರು ಕನ್ನಡಕ್ಕೆ ನೀಡಿದ ವಿಶಿಷ್ಟ ಕೊಡುಗೆಗಳಲ್ಲಿ ಒಂದಾಗಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಇದೇ ಹಾದಿಯಲ್ಲಿ ಮುಂದುವರೆದು ಬಸವಾರಾಧ್ಯರು ಆಧುನಿಕ ಗದ್ಯ ಸಂಗ್ರಹವೊಂದನ್ನು ಕನ್ನಡಕ್ಕೆ ನೀಡಲಿ ಎಂದು ಆಶಿಸುತ್ತೇನೆ.

"ನಿಘಂಟುಕಾರ ಎನ್. ಬಸವಾರಾಧ್ಯ"

-ಹೀ.ಚಿ. ಶಾಂತವೀರಯ್ಯ

"ನಿಘಂಟು" ಪದಕ್ಕೆ ೧. ಶಬ್ದಾರ್ಥಗಳ ಕೋಶ; ಶಬ್ದಕೋಶ, ಅರ್ಥಕೋಶ: ಛಂದಮಲಂಕಾರಂ ನಿಘಂಟು ಕಾವ್ಯನಾಟಕ (ವಡ್ಡಾರಾಧನೆ, ೨) ಸಮುದಿತ ಸಂಖ್ಯಾವ್ಯಯರಹಿತಮೆನಿಸಿ ವರ್ತಿಪ ನಿಘಂಟು (ಶಬ್ದಮಣಿದರ್ಪಣಂ), ನಿಘಂಟುಗಳಲ್ಲಿ ಜನಸಾಮಾನ್ಯರಿಗೆ ಗೌರವ ಹುಟ್ಟುವುದು ಅಪರೂಪ. ನಿಘಂಟು ಒಂದು ಗ್ರಂಥವೆಂದು ಒಪ್ಪದವರೇ ಹಲವರಿದ್ದಾರೆ(ಸಮಾಲೋಚನೆ ೨೬೬). ಮಗನಿಂದ ಕಾಗದ ಬಂದರೆ ಒಡನೆ ಅರ್ಥಕೆಬೇಕು ನಿಘಂಟು (ಇಂದ್ರಚಾಪ, ೧೬೯), ೨. ನಿಶ್ಚಿತವಾದುದು; ಖಚಿತವಾದುದು: ಒಂದು ಮೊಳದ ಅಳತೆಯನ್ನು ತಾಮ್ರದ ಪಟ್ಟಿಯಲ್ಲಿ ನಿಘಂಟುಮಾಡಿ ವಿಭಾಗ ಮಾಡಿದರು (ಶಿಲ್ಪ ಮತ್ತು ನಾಗರೀಕತೆ, ೩೯) ೩. ಯಾಸ್ಕಾಚಾರ್ಯ-ರಿಂದ ವಿರಚಿತವಾದ ನಿರುಕ್ತವೆಂಬ ವೇದದ ಶಬ್ದಗಳ ಕೋಶ. 'ನಿಘಂಟಾಗಿ ಹೇಳು, ನಿಘಂಟಾಗು, ನಿಘಂಟು ಪ್ರಮಾಣ, ನಿಘಂಟು ಸಮಯ ನೋಡಿ.'

ಶ್ರೀ ಎನ್. ಬಸವಾರಾಧ್ಯ ಅವರು ನಿಘಂಟು ಪದದ ಎಲ್ಲ ಅರ್ಥ ಮತ್ತು ಪ್ರಯೋಗಗಳಿಗೆ ಭಾಜನರು. ಅವರು ಸಲ್ಲಿಸಿದ ನಿಘಂಟು ಸೇವೆ ಅನುಪಮ ಮತ್ತು ಸ್ತುತ್ಯಾರ್ಹವಾದುದು.

ಕನ್ನಡದಲ್ಲಿ ನಿಘಂಟಿನ ಚರಿತ್ರೆ ಹೀಗಿದೆ. ರನ್ನನ 'ರನ್ನಕಂದ'ವೇ ಕನ್ನಡದ ಮೊದಲ ನಿಘಂಟು. ಕೇಶಿರಾಜನ ಶಬ್ದಮಣಿದರ್ಪಣ ವ್ಯಾಕರಣ ಗ್ರಂಥವಾದರೂ ಹಲವಾರು ಹಳಗನ್ನಡ ಪದಗಳಿಗೆ ಅರ್ಥವನ್ನು ಕೊಡಲಾಗಿದೆ. ಗದ್ಯರೂಪದಲ್ಲಿ ರಚಿತವಾದ 'ಕರ್ನಾಟಕ ಶಬ್ದಸಾರ' ನಿಜಕ್ಕೂ ಕನ್ನಡದ ಮೊದಲನೆ ನಿಘಂಟು (೧೪೦೦). ಅದೇ ಕಾಲದಲ್ಲಿ ರಚಿತವಾದ ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ, ಶೃಂಗಾರ ಕವಿಯ ಕರ್ನಾಟಕ ಸಂಜೀವನ, ಸೂರ್ಯಕವಿಯ ಕವಿಕಂಠಹಾರ, ಎರಡನೆ ನಾಗವರ್ಮನ ಅಭಿಧಾನ ವಸ್ತುಕೋಶ, ಎರಡನೆ ಮಂಗರಾಜನ ಅಭಿನವ ನಿಘಂಟು, ಕರ್ತೃ ಗೊತ್ತಿಲ್ಲದ

'ಶಬ್ದರತ್ನಾಕರ', ಚೆನ್ನಕವಿಯ ನಾನಾರ್ಥಕಂದು, ದೇವೋತ್ತಮನ ನಾನಾರ್ಥರತ್ನಾಕರ, ಏಕಾಕ್ಷರ ನಿಘಂಟು, ಹಲಾಯುಧನ ಅಭಿಧಾನರತ್ನಮಾಲಾ, ಅಮೃತನಂದಿಯ 'ಅಕಾರಾದಿವೈದ್ಯ ನಿಘಂಟು', ಕರ್ತೃಗೊತ್ತಿಲ್ಲದ ಧನ್ವಂತರೀಯ ನಿಘಂಟು, ಇಂದ್ರದೀಪಿಕಾ ನಿಘಂಟು, ಚತುರಾಸ್ಯ ಬೊಮ್ಮರಸನ 'ಚತುರಾಸ್ಯನಿಘಂಟು', ವಿರಕ್ತ ತೋಂಟದಾರ್ಯನ 'ಕರ್ನಾಟಕ ಶಬ್ದಮಂಜರಿ', ಕರ್ತೃ ತಿಳಿಯದ 'ಭಾರತದ ನಿಘಂಟು', ಮುಮ್ಮುಡಿ ಕೃಷ್ಣರಾಜನ 'ಚಾಮುಂಡಿಕಾಲ ನಿಘಂಟು'ಗಳಲ್ಲದೆ ಅನೇಕ ಪಾದ್ರಿಗಳು ಮತ್ತು ದೇಶೀಯ ವಿದ್ವಾಂಸರು ರೀವ್, ಸ್ಯಾಂಡರಸನ್, ನಿಘಂಟುಗಳಲ್ಲದೆ ಕನ್ನಡ ನಿಘಂಟಿನ ಮೇರುಕೃತಿಯೆಂದರೆ ರೆ. ಕಿಟ್ಟೆಲ್ ಅವರ ಕನ್ನಡ ಇಂಗ್ಲಿಷ್ ನಿಘಂಟು. ೨೦ನೆಯ ಶತಮಾನದಲ್ಲಿ ಶಿವರಾಮಕಾರಂತರ 'ಸಿರಿಗನ್ನಡ ಅರ್ಥಕೋಶ', ಕವಲಿಯವರ 'ಕಸ್ತೂರಿಕೋಶ', ಆರ್.ಎಸ್. ರಾಮರಾಯರ ಕನ್ನಡ-ಕನ್ನಡ-ಇಂಗ್ಲೀಷ್ ನಿಘಂಟು ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' ನಿಘಂಟು ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಈ ಹಿಂದಿನ ಎಲ್ಲ ಕನ್ನಡ ನಿಘಂಟುಗಳನ್ನು ಈ ಬೃಹತ್ ನಿಘಂಟಿನಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಕನ್ನಡ ನಿಘಂಟಿನಲ್ಲಿ ಹಲ್ಮಿಡಿ ಶಾಸನದಿಂದ (೪೫೦) ಹಿಡಿದು ಇತ್ತೀಚಿನ ಅಂದರೆ ೧೯೭೬ರ ಪುಸ್ತಕದವರೆಗೆ ಸುಮಾರು ಹತ್ತು ಲಕ್ಷ ಪಟ್ಟಿಕೆಗಳನ್ನು ತಯಾರಿಸಲಾಗಿದೆ. ಹಲವಾರು ಮಜಲುಗಳಲ್ಲಿ ನಿಘಂಟಿನ ತಯಾರಿಕೆ ನಡೆದಿದೆ.

ಈ ನಿಘಂಟಿನಲ್ಲಿ ಮುಖ್ಯ ಉಲ್ಲೇಖಗಳಾಗಿ ಬರುವ ಶಬ್ದಗಳನ್ನು ಕ್ರಿಯಾ, ನಾಮ,ಗುಣ, ಅವ್ಯಯ, ಪ್ರತ್ಯಯ, ಸರ್ವನಾಮ, ಉಪಸರ್ಗ ಎಂದು ಬಿಡಿಸಿ ತರುವಾಯ ಆ ಶಬ್ದಕ್ಕಿರುವ ಅನೇಕ ಅರ್ಥಗಳನ್ನು ಕೊಡಲಾಗಿದೆ. ಜೈನ, ವೀರಶೈವ, ವೈಷ್ಣವ, ಅಲಂಕಾರ, ಛಂದಸ್ಸು, ವ್ಯಾಕರಣ, ಮೀಮಾಂಸೆ, ಸಂಗೀತ, ನೃತ್ಯ, ಚಿತ್ರ, ವಾಸ್ತು, ತರ್ಕ, ನ್ಯಾಯ, ವೈಶ್ಯ, ಅಶ್ವ, ಗಜ, ಗಣಿತ, ಸೂಪ, ಕಾಮಶಾಸ್ತ್ರ, ಜ್ಯೋತಿಷ್ಯ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿಯ ಪದಗಳನ್ನು ಒಳಗೊಂಡಿದೆ.

ಕನ್ನಡ ನಿಘಂಟು ಡೆಮ್ಮಿ ಚತುಷ್ಪತ್ರದ ಆಕಾರದಲ್ಲಿ ೧ ರಿಂದ ೯೦೨೧ ಪುಟಗಳಿದ್ದು ಪ್ರತಿ ಪುಟದಲ್ಲಿಯೂ ಎರಡು ಅಂಕಣಗಳಿವೆ. ಪ್ರತಿ ಅಂಕಣದಲ್ಲಿ ನಲವತ್ತೈದು ಸಾಲುಗಳಿವೆ. ಇದರಲ್ಲಿ ಸುಮಾರು ಎರಡು ಲಕ್ಷಕ್ಕೂ ಮೇಲ್ಪಟ್ಟು ಮುಖ್ಯ ಉಲ್ಲೇಖಗಳು, ಉಪಉಲ್ಲೇಖಗಳು, ನುಡಿಗಟ್ಟುಗಳು, ದೇಶ್ಯ, ಅನ್ಯದೇಶ್ಯ, ತತ್ಸಮ, ತದ್ಭವ, ಸಮಸಂಸ್ಕೃತ ಮತ್ತು ಸಂಸ್ಕೃತ ಶಬ್ದಗಳು ಬಂದಿದೆ. ಪ್ರತಿಯೊಂದು ಅರ್ಥಕ್ಕೂ ಪ್ರಯೋಗಗಳನ್ನು ನೀಡಲಾಗಿದೆ. ಇದುವರೆಗೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳು ಖರ್ಚಾಗಿದೆ. ಎಂಟು ಸಂಪುಟಗಳಲ್ಲಿ ಪ್ರಕಟವಾಗಿವೆ. ಪ್ರತಿ ಸಂಪುಟದ ಬೆಲೆ ಕೇವಲ ಮೂವತ್ತು ರೂಪಾಯಿ.

ಭಾರತೀಯ ಭಾಷೆಗಳಲ್ಲಿ ಇಷ್ಟು ಅಗ್ಗದ ದರದಲ್ಲಿ ಅರ್ಘ್ಯದಂತಹ ಕನ್ನಡ ನಿಘಂಟು ನೀಡಿರುವುದು ಕನ್ನಡ ನಾಡಿನಲ್ಲಿ ಮಾತ್ರ. ವಿಶ್ವದ ಆಕ್ಸ್‌ಫರ್ಡ್ ನಿಘಂಟನ್ನು ಬಿಟ್ಟರೆ ಸರ್ವಸಾಮಾನ್ಯವೂ, ಶಾಸ್ತ್ರೀಯವೂ, ಜನಪ್ರಿಯವೂ ಆದ ನಿಘಂಟೆಂದರೆ "ಕನ್ನಡ ನಿಘಂಟು". ೧೯೭೦ರಲ್ಲಿ ಕನ್ನಡ ನಿಘಂಟಿನ ಮೊದಲ ಸಂಪುಟ ಬಿಡುಗಡೆಯಾಯಿತು. ೧೯೯೫ರಲ್ಲಿ ಅದರ ಕೊನೆಯ ಸಂಪುಟ ಅಂದರೆ ಎಂಟನೆ ಸಂಪುಟ ಪ್ರಕಟವಾಯಿತು. ಕನ್ನಡ ನಿಘಂಟಿನ ಒಟ್ಟು ಕಾಲ ೧೯೬೨ರಿಂದ ೧೯೯೫ ಅಂದರೆ ೩೩ ವರ್ಷಗಳು.

ಶ್ರೀ ಎನ್. ಬಸವಾರಾಧ್ಯರು ೧೯೫೫ರಿಂದ ೧೯೫೬ರವರೆಗೆ ಸಹಾಯಕ ಸಂಪಾದಕರಾಗಿ ೧೯೫೬ರಿಂದ ೧೯೬೨ರವರೆಗೆ ಉಪಸಂಪಾದಕರಾಗಿ ೧೯೬೩ರಿಂದ ಸಂಪಾದಕರಾಗಿ ೧೯೯೫ರವರೆಗೆ ಪ್ರಧಾನ ಸಂಪಾದಕರಾಗಿ ಕನ್ನಡ ನಿಘಂಟಿನ ಸೇವೆಸಲ್ಲಿಸಿದರು.

ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರನ್ನು ಬಿಟ್ಟರೆ ಶ್ರೀ ಎನ್. ಬಸವಾರಾಧ್ಯರೇ ಕನ್ನಡ ನಿಘಂಟಿಗೆ ಹೆಚ್ಚಿನ ಸೇವೆ ಸಲ್ಲಿಸಿದ ಮಹನೀಯರು.

ಶಬ್ದ ಸಂಗ್ರಹಮಾಡಿ ಪಟ್ಟಿಕೆ ಬರೆಯುವುದು, ಹೀಗೆ ಪಟ್ಟಿಕೆಗಳನ್ನು ಅಕಾರಾದಿಕ್ರಮದಲ್ಲಿ ಜೋಡಿಸಿಕೊಂಡು ಮೊದಲನೆಯ ಕರಡುಪ್ರತಿ ರಚಿಸುವುದು, ಆಮೇಲೆ ಅದನ್ನು ಪರಿಸ್ಕರಿಸಿ ಭಾಷಾಶಾಸ್ತ್ರದ ದೃಷ್ಟಿಯಿಂದ, ಮುಖ್ಯಉಲ್ಲೇಖ, ಉಪಉಲ್ಲೇಖ, ನುಡಿಗಟ್ಟು, ಗಾದೆ ಮೊದಲಾದವುಗಳನ್ನು ಸೇರಿಸಿಕೊಂಡು ಪರಿಷ್ಕರಿಸುವುದೇ ಎರಡನೇ ಕರಡು. ಮೂರನೆಯ ಕರಡಿನಲ್ಲಿ ಅರ್ಥಗಳಿಗೆ ಕೊಟ್ಟಿರುವ ಪ್ರಯೋಗಗಳ ಪರಿಶೀಲನೆ ಜೊತೆಗೆ ನಿಷ್ಪತ್ತಿ ವಿಭಾಗವನ್ನು ನೋಡುವುದು. ಇಲ್ಲಿಗೆ ಬರವಣಿಗೆಯ ಪೂರ್ಣಹಂತ ಮುಟ್ಟಿ ಕನ್ನಡ ನಿಘಂಟಿನ ಮುದ್ರಣ ಪ್ರತಿ ತಯಾರಾದಂತೆ.

ಕನ್ನಡ ನಿಘಂಟಿನ ಮುದ್ರಣವು ಅಪರೂಪವಾದುದು, ಅಲ್ಲದೆ ವಿಶಿಷ್ಟವಾದುದು. ಇದರಲ್ಲಿ ಉಪಯೋಗಿಸಿರುವ ಅಕ್ಷರದ ಅಳತೆಯೇ ಅದರ ವಿಶಿಷ್ಟರೂಪವನ್ನು ತಿಳಿಸುತ್ತದೆ. ಅಕ್ಷರ ಗಾತ್ರದ ವಿವರ ಇಂತಿದೆ ನೋಡಿ- "೧೨ ಪಾಯಿಂಟ್ ದಪ್ಪ ಅಕ್ಷರ=ಶಬ್ದದ ಮುಖ್ಯಉಲ್ಲೇಖ. ೧೨ಪಾಯಿಂಟ್ ಸಾದಾಕ್ಷರ=ಇತರ ಉಲ್ಲೇಖಗಳು, ಅರ್ಥವಿವರಣೆ, ನೋಡು, ವಿಶೇಷಾಂಶಗಳನ್ನು ತಿಳಿಸುವಲ್ಲಿ ೧೦ಪಾಯಿಂಟ್ ದಪ್ಪ ಅಕ್ಷರ=ನುಡಿಗಟ್ಟು ಮತ್ತು ಪ್ರತಿಶಬ್ದದ ನಿಷ್ಪತ್ತಿ ತಿಳಿಸುವಲ್ಲಿ. ೧೦ಪಾಯಿಂಟ್ ಸಾದಾಕ್ಷರ=ಪ್ರತಿ ಶಬ್ದದ ಅರ್ಥದ ಪೂರಕತೆಗೆ ನೀಡುವ ಪ್ರಯೋಗಗಳು ೮ ಪಾಯಿಂಟ್ ಸಾದಾಕ್ಷರ= ಪ್ರಯೋಗದ ಆಕರಗಳನ್ನು ತಿಳಿಸುವಲ್ಲಿ ಉಪಯೋಗಿಸಲಾಗಿದೆ.

ಈ ಮಹಾನ್ ನಿಘಂಟಿಗೆ ಸೇವೆ ಸಲ್ಲಿಸಿದ ಮಹಾಪುರುಷರು ಎಂದರೆ ಡಿ.ಎಲ್. ನರಸಿಂಹಾಚಾರ್, ಡಾ. ರಂ.ಶ್ರೀ. ಮುಗಳಿ, ಶ್ರೀ ಎನ್. ಬಸವಾರಾಧ್ಯ, ಡಿ.ಕೆ. ಭೀಮಸೇನರಾವ್, ಕ.ವೆಂ. ರಾಘವಾಚಾರ್, ಎಂ. ಮರಿಯಪ್ಪಭಟ್ಟ, ಸ.ಸ. ಮಾಳವಾಡ, ಡಾ. ಆರ್.ಸಿ. ಹಿರೇಮಠ, ಎನ್. ಲಕ್ಷ್ಮಿನಾರಾಯಣರಾವ್, ಕಾ.ಸ. ಧರಣೇಂದ್ರಯ್ಯ, ದೇ. ಜವರೇಗೌಡ, ಸಿದ್ಧಯ್ಯಪುರಾಣಿಕ, ಜಿ. ವೆಂಕಟಸುಬ್ಬಯ್ಯ, ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳನ್ನು ಹೆಸರಿಸಬಹುದು.

ಶ್ರೀ ಎನ್. ಬಸವಾರಾಧ್ಯರು ಕನ್ನಡ ನಿಘಂಟಿನ ಎಲ್ಲ ಮಜಲುಗಳಲ್ಲಿ ಕೆಲಸಮಾಡಿದವರು ಮತ್ತು ಹಳಬರು. ಜೊತೆಗೆ ಡಿ.ಎಲ್. ನರಸಿಂಹಾಚಾರ್ ಅವರ ಕೈಕೆಳಗೆ ತಯಾರಾದವರು. ಹೀಗಾಗಿ ಕನ್ನಡ ನಿಘಂಟಿನ ಎಲ್ಲ ಅರ್ಹತೆ ಮತ್ತು ಯೋಗ್ಯತೆಯನ್ನು ಪಡೆದವರು ಅವರೊಬ್ಬರೇ ಅಂದರೆ ಅತಿಶಯೋಕ್ತಿಯಲ್ಲ.

ನಿಘಂಟು ಶಾಸ್ತ್ರವೂ ಅಲ್ಲ ಗ್ರಂಥವೂ ಅಲ್ಲ ಎನ್ನುವವರು ಇರುವಾಗ ಅದಕ್ಕೆ ಒಂದು ಗತ್ತು ಮತ್ತು ಗಮ್ಮತ್ತು ತಂದುಕೊಟ್ಟವರೇ ಶ್ರೀ.ಎನ್.ಬಸವಾರಾಧ್ಯರು.

ನಿಘಂಟು ರಚನೆಗೆ ವಿಶೇಷವಾದ ಜ್ಞಾನವಿದ್ದರೆ ಸಾಲದು, ವಿಶೇಷವಾದ ತರಬೇತಿ ಇರಬೇಕು, ಶಬ್ದ, ರೂಪ, ಅರ್ಥ, ಪ್ರಯೋಗ ಮತ್ತು ನಿಷ್ಪತ್ತಿ ನೀಡುವಲ್ಲಿ ವಿಶೇಷವಾದ ಅನುಭವವಿರಬೇಕು. ತೋಚಿದ್ದನೆಲ್ಲಾ ಗೀಚಿದರೆ ಅದು ಕಥೆ, ಕಾದಂಬರಿಯಾಗಬಹುದು. ಆದರೆ ನಿಘಂಟಿಗೆ ವಿಶೇಷವಾದ ಪರಿಶ್ರಮ, ಜ್ಞಾನ, ಮತ್ತು ಸಂಯಮಬೇಕು.

ಶಬ್ದ ಸಂಗ್ರಹವನ್ನು ಮಾಡುವಾಗ ಯಾರೋ ಒಬ್ಬರು ಒಂದು ಪಟ್ಟಿಕೆ ಬರೆದಿದ್ದರು. ಶಬ್ದ ಖಭುಕಿ. ಪ್ರಯೋಗ ಹೀಗಿದೆ. ಖಭುಕಿಯೊಂದು ಗೃಹದೊಳ್ ಮರಿಗಳಂ ಪೆತ್ತು ಸಲಹುತಿರೆ. (ಮಹಾಂತೇಶಪುರಾಣ ೨-೭) 'ಖಭುಕಿ' ಶಬ್ದವೇ ಇಲ್ಲ. ನಿಘಂಟು ಕಚೇರಿಯಲ್ಲಿ ಸುಮಾರು ಇಪ್ಪತ್ತು ಭಾಷೆಯ ನಿಘಂಟುಗಳಿದ್ದವು. ಈ ಯಾವ ನಿಘಂಟಿನಲ್ಲಿಯೂ 'ಖಭುಕಿ' ಶಬ್ದವಿಲ್ಲ. ಹಾಗಾದರೆ ಇದು ಶಬ್ದವೇ ಅಲ್ಲವೆ? ಮಹಾಂತೇಶ ಪುರಾಣದ ಕವಿ ತೋಚಿದ್ದನ್ನು ಗೀಚಿದ್ದಾನೆಯೇ ಎಂದು ಪರಿಶೀಲಿಸಿದಾಗ ಇದೊಂದು ವಾರ್ಧಕ ಷಟ್ಪದಿ ಪದ್ಯ. ಈಗ ಪ್ರಯೋಗವಿರುವುದು ಉತ್ತರಾರ್ಧ. ಆದರೆ ಪೂರ್ವಾರ್ಧದ

ಕೊನೆಯ ಪಾದದಲ್ಲಿ 'ಆ' ಎಂಬ ಅಕ್ಷರ ಸೇರಿಕೊಂಡಿದೆ. ಅಂದರೆ ಆ 'ಆ' ಅನ್ನು ಸೇರಿಸಿಕೊಂಡು ಓದಿದರೆ 'ಆಖುಭುಕ್' ಎಂಬ ಶಬ್ದವಾಗುತ್ತದೆ. ಈಗ ಸುಲಭವಾಗಿ ಅರ್ಥಮಾಡಬಹುದು ಆಖು=ಇಲಿ, ಭುಕ್=ತಿನ್ನುವುದು ಅಂದರೆ ಇಲಿಗಳನ್ನು ತಿನ್ನುವ ಬೆಕ್ಕು ಮನೆಯಲ್ಲಿ ಮರಿಗಳನ್ನು ಹಾಕಿ ಸಲಹುತಿದೆ ಎಂದು ಸುಲಭವಾಗಿ ಅರ್ಥವಾಗುತ್ತದೆ. ಈ ಶಬ್ದದ ಮೇಲೆ ಬೆಳಕು ಚೆಲ್ಲಿದವರು ಶ್ರೀ ಎನ್.ಬಸವಾರಾಧ್ಯರೇ.

ನಿಘಂಟು ರಚಿಸುವಾಗ ನುಸುಳಿಕೊಂಡು ಬಂದ ಮಿಥ್ಯಾಶಬ್ದಗಳಿಗೆ ಲೆಕ್ಕವಿಲ್ಲ .'ಎಲ್ಲ ಮಿಥ್ಯಾಶಬ್ದ (Glost World) ಗಳನ್ನು ಕೂಡಿಹಾಕಿದ್ದರೆ ಅದೇ ಒಂದು ದೊಡ್ಡ ನಿಘಂಟಾಗುತ್ತಿತ್ತು.

ಡಾ. ವಿ.ಕೃ. ಗೋಕಾಕ್ ಅವರು ತಮ್ಮ ಗ್ರಂಥ, 'ನವ್ಯತೆ ಹಾಗೂ ಕಾವ್ಯ ಜೀವನ' ಪುಸ್ತಕದಲ್ಲಿ 'ನಗ್ನಕವಿತೆ' ಎಂಬ ಶಬ್ದವನ್ನು ಪ್ರಯೋಗಿಸಿದ್ದರು. 'ನಗ್ನಕವಿತೆ' ಶಬ್ದ ಆರಿಸಿಕೊಂಡಾಗ ಅದರ ಅರ್ಥ ಮತ್ತು ನಿಷ್ಪತ್ತಿಗೆ ಹುಡುಕಾಟವಾಯಿತು. ನಗ್ನಕವಿತೆ ಅಲಂಕಾರಗಳಿಲ್ಲದೆ, ಸರಳಕವಿತೆ, ಇಂಗ್ಲೀಷ್‌ನ Block verse ಇದ್ದಂತೆ ಎಂದು ಅರ್ಥ ಬರೆದಿದ್ದೆವು. 'ನಗ್ನಚರಿತೆ' ಸಂಪಾದಕ ಸಮಿತಿಯ ಸಭೆಗೆ ಚರ್ಚೆಗೆ ಬಂದಾಗ ವಿದ್ವಾಂಸರು ಚರ್ಚಿಸಿ ಅರ್ಥವಾಗದೆ ಡಾ.ವಿ.ಕೃ ಗೋಕಾಕ್ ಅವರಿಗೆ ಬರೆದು ಕೇಳಿ ಎಂದು ಆದೇಶಿಸಿದರು.

ಸಂಪಾದಕ ಸಮಿತಿಯ ಆದೇಶದಂತೆ ಡಾ.ಗೋಕಾಕ್ ಅವರಿಗೆ 'ನಗ್ನಕವಿತೆ' ಶಬ್ದ ಮತ್ತು ನಿಷ್ಪತ್ತಿ ಬಗ್ಗೆ ಬೆಳಕು ಚೆಲ್ಲಬೇಕೆಂದು ಪತ್ರ ಬರೆದೆವು. ಅವರು ಉತ್ತರ ಬರೆದು ದಯವಿಟ್ಟು ಕ್ಷಮಿಸಿ. ಇದು ಮುದ್ರಣ ದೋಷ ನಗ್ನಕವಿತೆ ಶಬ್ದ ಅಲ್ಲ. ಅದು 'ನನ್ನಕವಿತೆ' ಎಂದಿರಬೇಕು ಎಂದರು. ಆ ಗ್ರಂಥ, ಎರಡನೆಯ ಬಾರಿ ಮುದ್ರಣವಾಗಿತ್ತು. ಅಂತೂ ನಗ್ನಕವಿತೆ ನಿಘಂಟು ಜನರ ಪ್ರತಿಭೆಗೆ ನಗ್ನತ್ವ ತಂದಿತ್ತು.

ಇಂತಹ ತಪ್ಪು ಪ್ರಮಾದಗಳಿಗೆ ಕೊರತೆಯೇನು ಇಲ್ಲ. ಕೃಷ್ಣಮೂರ್ತಿ ಪುರಾಣಿಕರು ತಮ್ಮ 'ಭಾಗೀರಥಿ' ಕಾದಂಬರಿಯಲ್ಲಿ ಒಬ್ಬ ವ್ಯಕ್ತಿಯನ್ನು ವರ್ಣಿಸುತ್ತಾ ಅವರು ಹತ್ತು ಬೆರಳಿಗೆ ಹನ್ನೆರಡು ಉಂಗುರ ಧರಿಸಿದ್ದರು. ಅದರಲ್ಲಿ 'ಆರುಮಾನೆ' ಉಂಗುರಧೌಸಿದಿ ಎಂದಿದ್ದರು. ನಾವು ನಿಘಂಟಿನವರು 'ಆರುಮಾನೆ' ಶಬ್ದವನ್ನು ಅಲ್ಲಿಂದ ತೆಗೆದುಕೊಂಡೆವು. 'ಆರುಮಾನೆ' ಏನು ಶಬ್ದ, ಇದರ ಅರ್ಥವೇನು, ಇದು ಎಲ್ಲಿಂದ ಬಂತು ಹೀಗೆ ಪ್ರಶ್ನೆಗಳ ಮಾಲೆಯೇ ಎದ್ದಿತು. ಆರು+ಮಾನೆ. 'ಮಾನೆ' ಎಂದರೆ ಏನು. ಸಂಸ್ಕೃತದ 'ಮಾನ್ಯ' ಪಾಕೃತರಲ್ಲಿ 'ಮಾನೆ' ಅಂದರೆ ಮಾನ್ಯನಾದವನು ಎಂಬರ್ಥವಿದೆ. ಆರುಬಾರಿ ಮಾನ್ಯರಾದವರೇ? ಉಂಗುರಕ್ಕೇನು ಮಾನ್ಯತೆ ಆರುಮಲೆ, ಆರುಮೊನೆ, ಆರುಮೂಸೆ, ಆರುಮೂತಿ' ಇರಬಹುದೆಂದು ಭಾವಿಸಿ ಡಾ.ಗೋಕಾಕ್ ಅವರಿಗೆ ಪತ್ರಬರೆದವು. ಅವರು ದಯವಿಟ್ಟು ಕ್ಷಮಿಸಿ ಇದೂ ಮುದ್ರಣ ದೋಷ. ಅದು 'ಆರುಮಾನೆ' ಅಂದರೆ ಅರ್ಧತೊಲ', 'ಮಾಸಾ' ಅಂದರೆ ಉದ್ದಿನ ಕಾಳಿನ ತೂಕ. ಆರು ಉದ್ದಿನ ಕಾಳಿನ ತೂಕದ ಚಿನ್ನದ ಉಂಗುರಕ್ಕೆ ಬದಲಾಗಿ ಚುಕ್ಕಿ ಹೋಗಿನೆ' ಆಗಿದೆ ಎಂದರು. ಹೀಗಿದೆ ಆರುಮಾನೆ-ಆರುಮಾಸೆಯ ಚರಿತ್ರೆ ಕನ್ನಡ ನಿಘಂಟಿನಲ್ಲಿ.

ಕನ್ನಡ ನಿಘಂಟಿನಲ್ಲಿ ಈ ಹಿಂದೆ ತಿಳಿಸಿದಂತೆ ಪ್ರಾದೇಶಿಕತೆಗೂ ಹೆಚ್ಚಿನ ಅವಕಾಶ ನೀಡಲಾಗಿದೆ. ಹಳೆ ಮೈಸೂರಿನ ಶಬ್ದ 'ಗದ್ದಕಟ್ಟು'-ಗದ್ದಊದಿಕೊಳ್ಳುವ ಒಂದು ರೋಗ, ಇಂಗ್ಲೀಷಿನಲ್ಲಿ ಮಪ್ ಎನ್ನುತ್ತಾರೆ. 'ಗದ್ದಕಟ್ಟು' ಶಬ್ದವನ್ನು ನಾನೇ ಬರೆದೆ. ಗದ್ದ ಊದಿಕೊಳ್ಳುವ ಒಂದು ರೋಗ ಎಂದು ಬರೆದೆ. ಉತ್ತರ ಕರ್ನಾಟಕದವರಲ್ಲಿ ಅದೆಂತಹ ರೋಗ ನಮ್ಮಲ್ಲಿ ಪದವೇ ಇಲ್ಲ. ನಮ್ಮಲ್ಲಿ ಆರೋಗ್ಯಕ್ಕೆ 'ಮಂಗನಬಾಹು' ಅಂತಾರೆ ಅಂದರು. ಸರಿ 'ಮಂಗನಬಾಹು' ಅದನ್ನು ಒಪ್ಪಿಕೊಂಡು ನಿಘಂಟಿನಲ್ಲಿ ಬರೆದು (ಉಕ) ಎಂದು ಸೂಚಿಸಲಾಯಿತು. ಕರಾವಳಿ ಜನ ತರಲೆ ತೆಗೆದರು. ನೀವು ಕೊಟ್ಟಿರುವ ಎರಡು ಪದಗಳೂ ನಮ್ಮ ಜನಕ್ಕೆ ಅರ್ಥವಾಗುವುದಿಲ್ಲ. ನಮ್ಮ ಕಡೆ 'ಕೆಪ್ಪಟ್ಟರಾಯ' ಅಂತಾರೆ ಅಂದರು. ಗದ್ದಕಟ್ಟು (ನಾ) ಗದ್ದ ಊದಿಕೊಳ್ಳುವ ಒಂದು ರೋಗ ಮಫ್, ಮಂಗನಬಾವು (ಉಕ); ಕೆಪ್ಪಟ್ಟರಾಯ (ಕರಾ) ಎಂದು ಸೂಚಿಸಲಾಯಿತು.

ಇದೇ ರೀತಿಯ ಮತ್ತೊಂದು ಉದಾಹರಣೆ ಹಳೆಯ ಮೈಸೂರಿನಲ್ಲಿ ನಿಶ್ಚಯ, ನಿಶ್ಚಿತಾರ್ಥ ಎರಡು ಪದಗಳಿವೆ. ಅರ್ಥ ಮದುವೆಯನ್ನು ನಿರ್ಧಾರ ಮಾಡಿದಮೇಲೆ ಅಂದರೆ ಈ ಗಂಡಿಗೆ ಈ ಹೆಣ್ಣನ್ನು ತರುವುದೆಂದು ಮಾಡುವ ಶಾಸ್ತ್ರ, ಎಂದರೆ ಉತ್ತರ ಕರ್ನಾಟಕದವರು ಸಕ್ಕರೆ ಕಾರರಾ, ಕರಾವಳಿಯವರು ಗಟ್ಟಿಕಡುಬು, ಮಲೆನಾಡಿನಲ್ಲಿ 'ಕಡಲೆಬೆಲ್ಲ' ಅನ್ನುತ್ತಾರೆ.

ಕನ್ನಡ ನಿಘಂಟಿಗೆ ಅನುಪಮ ಸೇವೆ ಸಲ್ಲಿಸಿದವರೆಂದರೆ ಶ್ರೀ.ಎನ್.ಬಸವಾರಾಧ್ಯ ಅವರು. ಸುಮಾರು ನಲವತ್ತು ವರ್ಷಗಳ ಕಾಲ ಎಡೆಬಿಡದೆ ನಿಘಂಟಿನ ಸೇವೆ ಮಾಡಿದ್ದಾರೆ. ಉತ್ತಮ ಸಂಪಾದಕರು, ಸಂಶೋಧಕರು ಅಲ್ಲದೆ ಶ್ರೇಷ್ಠ ಬರಹಗಾರರು. ಶ್ರೀ.ಎನ್.ಬಸವಾರಾಧ್ಯ ಅವರು ಓದಿದ್ದಕ್ಕಿಂತ ಬರೆದದ್ದೇ ಹೆಚ್ಚು. ನಿಘಂಟಿನ ಎಲ್ಲ ಪುಟಗಳು ಒಂದಿಲ್ಲ ಒಂದು ಘಟ್ಟದಲ್ಲಿ ಬಸವಾರಾಧ್ಯ ಅವರ ದೃಷ್ಟಿಗೆ ಬಿದ್ದು ಅವರ ಕೈವಾಡದಲ್ಲಿ ನಡೆದು ಬಂದಿದೆ.

ಶ್ರೀ.ಎನ್.ಬಸವಾರಾಧ್ಯ ಅವರನ್ನು ಕುರಿತೇ ಈ ಆಯೋಕ್ತಿಯನ್ನು ಬರೆದಂತಿದೆ. "ಪ್ರತಿಭಾನಾಂ, ಶಾಸ್ತ್ರವಿದ್ಯಾ ಪ್ರಥಮ ಪರಿಚಯಂ, ವೃದ್ಧ ಸೇವಾನುರಾಗಂ, ಸತತ ಅಭ್ಯಾಸ ಪ್ರಯತ್ನಂ ನಿಯಕಂ ಜ್ಞಾನ (ಕಾವ್ಯ)ಕೆ ಕಾರಣಂ" ಎಂಬ ಸುಭಾಷಿತ ಬಸವಾರಾಧ್ಯರ ಅವರ ಬಾಳಿಗೆ ಬೆಳಕನ್ನು ನೀಡಿದೆ.

ಶ್ರೀ ಎನ್. ಬಸವಾರಾಧ್ಯ ಅವರು ಕನ್ನಡ ನಾಡು ಮತ್ತು ನುಡಿಗೆ ಮಹತ್ತರ ಸೇವೆ ಸಲ್ಲಿಸಿರುವರು. ಅವರ ಜೀವನದಲ್ಲಿ ಕನ್ನಡವೇ ಉಸಿರು. ಕನ್ನಡಕ್ಕಾಗಿ ಕೈಯೆತ್ತಿ ಕೈ ಕಲ್ಪವೃಕ್ಷ ಮಾಡಿಕೊಂಡವರು. ಕನ್ನಡದ ಈ ಮಹಾನ್ ಸೇವೆಯೇ ಅವರ ಜೀವನದ ಸತ್ವ, ತತ್ವ ಮತ್ತು ಮಹತ್ವ ಎಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ಅಪರೂಪದ ವ್ಯಕ್ತಿಗಳು ನೂರ್ಕಾಲ ಬಾಳಲಿ. "ಶತಮಾನಂ ಭವತಿ ಶತಮಾಯು ಪುರುಷಂ, ಶತೇಂದ್ರಿಯಂ ಶ್ರೀ ಎನ್. ಬಸವಾರಾಧ್ಯ ದೀರ್ಘಮಾಯಃ" ಎಂಬ ಆಶೀರ್ವಾದವನ್ನು ಕನ್ನಡದ ಶ್ರೀರಾಜರಾಜೇಶ್ವರಿ ನೀಡಲೆಂದು ಪ್ರಾರ್ಥಿಸುತ್ತೇನೆ.

XXX

ಗ್ರಂಥಸಂಪಾದನೆ :
ಎನ್. ಬಸವಾರಾಧ್ಯ ಅವರ ಸಾಧನೆ

-ಡಾ. ಎಫ್.ಟಿ. ಹಳ್ಳಿಕೇರಿ

ನೂರೈವತ್ತು ವರ್ಷಗಳ ಇತಿಹಾಸವನ್ನು ಹೊಂದಿದ ಆಧುನಿಕ ಗ್ರಂಥಸಂಪಾದನೆಯಲ್ಲಿ ಮುಖ್ಯವಾಗಿ ನಾಲ್ಕು ಘಟ್ಟಗಳನ್ನು ಗುರುತಿಸಬಹುದು. ೧. ಹರ್ಮೇನ್ ಮೋಗ್ಲಿಂಗ್, ಕಿಟೆಲ್, ರೈಸ್ ಮುಂತಾದ ವಿದೇಶಿ ವಿದ್ವಾಂಸರ ಘಟ್ಟ. ೨. ಎಂ.ಎ. ರಾಮಾನುಜಯ್ಯಂಗಾರ್, ಆರ್. ನರಸಿಂಹಾಚಾರ್, ಫ.ಗು. ಹಳಕಟ್ಟಿ, ಶಿ.ಶಿ. ಬಸವನಾಳ ಮೊದಲಾದ ದೇಶೀ ವಿದ್ವಾಂಸರ ಘಟ್ಟ ೩. ಮಾಣಿಕ್ಯಂ ಶೆಟ್ಟಿ, ಶಿವಲಿಂಗಶೆಟ್ಟಿ, ಕೃಷ್ಣಯ್ಯಶೆಟ್ಟಿ ಇತ್ಯಾದಿ ಬಳ್ಳಾರಿ ಬೆಂಗಳೂರು ಶೆಟ್ಟರ ಘಟ್ಟ ೪. ಡಿ.ಎಲ್. ನರಸಿಂಹಾಚಾರ್, ಟಿ.ಎಸ್. ವೆಂಕಣ್ಣಯ್ಯ, ಆರ್.ಸಿ. ಹಿರೇಮಠ, ಎನ್. ಬಸವಾರಾಧ್ಯ, ಎಂ.ಎಂ. ಕಲಬುರ್ಗಿಯವರಂಥ ವಿಶ್ವವಿದ್ಯಾಲಯ ವಿದ್ವಾಂಸರ ಘಟ್ಟ. ಹೀಗೆ ಈ ನಾಲ್ಕು ಘಟ್ಟಗಳಲ್ಲಿ ಕನ್ನಡ ಗ್ರಂಥಸಂಪಾದನೆಯು ತನ್ನ ನಿಯಮಗಳನ್ನು ಪರಿಷ್ಕರಿಸಿಕೊಳ್ಳುತ್ತ ಈಗ ಒಂದು ಹಂತವನ್ನು ತಲುಪಿದೆ. ಈ ನಾಲ್ಕನೆಯ ಘಟ್ಟದಲ್ಲಿ ಕಂಡುಬರುವ ಗ್ರಂಥಸಂಪಾದಕರಲ್ಲಿ ಪ್ರಮುಖರಾಗಿದ್ದಾರೆ, ಎನ್. ಬಸವಾರಾಧ್ಯ. ಪ್ರಸ್ತುತ ಸಂಪ್ರಬಂಧದಲ್ಲಿ ಗ್ರಂಥಸಂಪಾದನೆಯಲ್ಲಿ ಬಸವಾರಾಧ್ಯರ ಸಾಧನೆ ಕುರಿತು ವಿವೇಚಿಸಲಾಗುವುದು.

ಬಸವಾರಾಧ್ಯರು ಟಿ.ಎಸ್. ವೆಂಕಣ್ಣಯ್ಯ, ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಹೆಚ್. ದೇವೀರಪ್ಪ ಮುಂತಾದ ವಿದ್ವಾಂಸರ ವಿದ್ವತ್ಪರಂಪರೆಯನ್ನು ಮುಂದುವರೆಸಿಕೊಂಡು ಬಂದವರಲ್ಲಿ ಬಹುಮುಖ್ಯರಾಗಿದ್ದಾರೆ. ವಿಶೇಷವಾಗಿ ಡಿ.ಎಲ್.ಎನ್. ಎಂದರೆ ಬಸವಾರಾಧ್ಯರಿಗೆ ತುಂಬ ಗೌರವ. ಬೆಂಗಳೂರಿನ ಇಂಟರಮಿಡಿಯೆಟ್ ತರಗತಿಗಳಲ್ಲಿ ಪಾಠ ಹೇಳಿದ ಡಿ.ಎಲ್.ಎನ್. ಅವರು ಮೈಸೂರಿನಲ್ಲಿ ಎಂ.ಎ. ಓದುವಾಗಲೂ ಇವರಿಗೆ ಗುರುಗಳಾಗಿದ್ದರು. ಅವರ ಪಾಠಪ್ರವಚನ, ಮಾತಿನ ಧಾಟಿ, ಬೋಧನಾ ವಿಧಾನ ಬಸವಾರಾಧ್ಯರ ಮೇಲೆ ತುಂಬ ಪ್ರಭಾವ

ಬೀರಿತು. ಅವರೇ ಒಂದೆಡೆ "ನನಗೆ ಗ್ರಂಥಸಂಪಾದನಾ ವಿಧಾನ ತಿಳಿದದ್ದೇ ಡಿ.ಎಲ್.ಎನ್ ಅವರಿಂದ. ಅವರ ನೆರವು, ನಿರಂತರ ಪ್ರೋತ್ಸಾಹಗಳಿಂದ ಕೆಲವು ಅಪ್ರಕಟಿತ ಕಾವ್ಯಗಳನ್ನು ಸಂಪಾದಿಸಿದ್ದು. ನನ್ನ ಆರಂಭದ ಕೃತಿಗಳೆಲ್ಲ ನನ್ನ ಗುರುಗಳ ಪರಿಶೀಲನೆಗೆ ಒಳಪಟ್ಟಿವೆ ಎಂಬುದು ನನಗೆ ಹೆಮ್ಮೆಯ ವಿಷಯ"ವೆಂದು ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಶಾಸ್ತ್ರಾಧ್ಯಯನದ ಶಿಸ್ತು, ಸತ್ಯಶೋಧನೆಯ ಸಾತ್ವಿಕ ದೃಷ್ಟಿಕೋನದಿಂದಾಗಿ ಇವರು ಹಸ್ತಪ್ರತಿ-ಗ್ರಂಥಸಂಪಾದನೆ, ಹಳೆಗನ್ನಡ ಸಾಹಿತ್ಯ ಮತ್ತು ನಿಘಂಟು ಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿ ಅನುಭವವನ್ನು ಹೊಂದಿದವರು. ಕಳೆದ ಐದು ದಶಕಗಳಿಂದ ಈ ಕ್ಷೇತ್ರಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡ ಬಸವಾರಾಧ್ಯರು ಮೂವತ್ತಕ್ಕೂ ಮೀರಿದ ಕೃತಿಗಳನ್ನು ಪರಿಷ್ಕರಿಸುವುದರ ಮೂಲಕ ವಿದ್ವತ್ ಲೋಕದ ಗಮನಸೆಳೆದಿದ್ದಾರೆ.

ಬಿ.ಎ. ಆನರ್ಸ್ (೧೯೪೯) ಮುಗಿದ ಕೂಡಲೇ ಮೈಸೂರಿನ ಪ್ರಾಚ್ಯ ವಿದ್ಯಾಸಂಸ್ಥೆಯಲ್ಲಿ ಪದವೀಧರ ತಜ್ಞ(Graduate Kannada Specialist)ರಾಗಿ ಬಸವಾರಾಧ್ಯರು ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ತೊರವೆ ರಾಮಾಯಣ ಕೃತಿಯ ಪರಿಷ್ಕರಣ ಕಾರ್ಯದಲ್ಲಿ ಭಾಗಿಯಾದದ್ದು. ಹಸ್ತಪ್ರತಿ ಹಾಗೂ ಐತಿಹಾಸಿಕ ದಾಖಲೆಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದುದು. ಇವರ ವೃತ್ತಿಜೀವನದಲ್ಲಿ ಮಹತ್ವದ ಸಂಗತಿಯಾಗಿದೆ. ಬಸವಾರಾಧ್ಯರ ಗ್ರಂಥಸಂಪಾದನೆಯು ಎರಡು ನೆಲೆಗಳಲ್ಲಿ ಮುನ್ನಡೆದಿದೆ. ಒಂದು, ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪನಿರ್ದೇಶಕರಾಗಿ, ಮತ್ತೊಂದು, ಒಬ್ಬ ಸಮರ್ಥ ಗ್ರಂಥಸಂಪಾದಕರಾಗಿ. ಹದಿನೈದು ವರ್ಷ (೧೯೭೧-೧೯೮೬) ಗಳ ಕಾಲ ಉಪನಿರ್ದೇಶಕರಾಗಿದ್ದ ಅವಧಿಯು ಕನ್ನಡ ಅಧ್ಯಯನ ಸಂಸ್ಥೆಯ ಏರುಕಾಲ. ಹಾಲಾಸ್ಯ ಪುರಾಣಂ, ನನ್ನಯ್ಯಗಳ ಚಾರಿತ್ರ, ರಸರತ್ನಾಕರ, ಮೈಸೂರು ವಿ.ವಿ. ಹಸ್ತಪ್ರತಿ ಸೂಚಿಸಂಪುಟಗಳು ಹೀಗೆ ಪ್ರಾಚೀನಕಾವ್ಯಗಳು, ಶಾಸ್ತ್ರಕೃತಿಗಳು, ಸೂಚಿಸಂಪುಟಗಳು ಅಧಿಕ ಸಂಖ್ಯೆಯಲ್ಲಿ ಪ್ರಕಟವಾಗಿರುವುದು ಇದರ ಅಧಿಕಾರಾವಧಿಯಲ್ಲಿ ಎಂಬುದೊಂದು ವಿಶೇಷತೆ. ಅಪ್ರಕಟಿತ ಕೃತಿಗಳ ಶೋಧ, ಪರಿಷ್ಕರಣೆ, ಪ್ರಕಟಣೆ ಇವರ ಮುಖ್ಯ ಉದ್ದೇಶವಾಗಿತ್ತು. ಇದಕ್ಕಾಗಿ ತಾವೂ ಕೆಲಸ ಮಾಡುವುದರ ಜೊತೆಗೆ ತಮ್ಮ ಸಹೋದ್ಯೋಗಿಗಳನ್ನೂ ಈ ಕಾರ್ಯದಲ್ಲಿ ತೊಡಗಿಸಿದರು. ಹೀಗಾಗಿ ಅವರೂ ಹತ್ತಾರು ಕೃತಿಗಳನ್ನು ಪ್ರಕಟಿಸುವಂತೆ ಮಾಡಿದರು. ಬಿ.ಎಸ್. ಸಣ್ಣಯ್ಯ, ಜಿ.ಜಿ. ಮಂಜುನಾಥನ್, ಕೆ.ಆರ್. ಶೇಷಗಿರಿ, ಹ.ಕ. ರಾಜೇಗೌಡ, ಎಂ.ಪಿ. ಮಂಜಪ್ಪಶೆಟ್ಟಿ, ವೈ.ಸಿ. ಭಾನುಮತಿ, ಟಿ.ಎನ್. ನಾಗರತ್ನ ಮೊದಲಾದವರು ಇವರ ನೇತೃತ್ವದಲ್ಲಿ ವೈವಿಧ್ಯಮಯವಾದ ಕೃತಿಗಳನ್ನು ಪರಿಷ್ಕರಿಸಿ ಈ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ಗ್ರಂಥಸಂಪಾದನೆಯ ಕ್ಷೇತ್ರದತ್ತ ಮುಖಮಾಡಲು ಮುಖ್ಯಕಾರಣವನ್ನು ಅವರೇ ಒಂದು ಕಡೆ ದಾಖಲಿಸಿದ್ದಾರೆ. "ನಮ್ಮ ಪ್ರಾಚೀನರು ನಮಗಾಗಿ ಬಿಟ್ಟು ಹೋಗಿದ್ದ ಸಾಹಿತ್ಯವನ್ನು ಹೆಕ್ಕಿ ನೋಡಲು ನನಗೆ ತುಂಬ ಆಸೆಯಿತ್ತು. ಅಪಾರವಾದ ಅಪ್ರಕಟಿತ ಸಾಹಿತ್ಯ ಹಾಗೇ ಉಳಿಯಬಾರದು ಎಂಬುದು ನನ್ನಲ್ಲಿ ಪ್ರಬಲವಾಗಿತ್ತು. ಹೀಗಾಗಿ ನನ್ನ ಮೇಷ್ಟರು ಡಿ.ಎಲ್.ಎನ್., ಎ.ಆರ್.ಕೃ., ತೀ.ನಂ.ಶ್ರೀ. ಕೂಡಾ ಈ ಕಡೆ ಒಲವು ತೋರಿದವರೇ. ಈ ಎಲ್ಲದರಿಂದ ನಾನು ಈ ಕಡೆ ಬಂದೆ. ನನ್ನ ಎಲ್ಲ ಸಮಯವನ್ನೂ ಇದಕ್ಕೆ ವಿನಿಯೋಗಿಸಿದೆ" ಎಂದಿದ್ದಾರೆ. ಈ ಕಾರಣಗಳಿಂದಾಗಿ ಇವರು ಈ ಕ್ಷೇತ್ರಗಳಲ್ಲಿ ಹೆಚ್ಚು ಆಸಕ್ತಿ, ನಿಷ್ಠೆ ವಹಿಸುವಂತಾಯಿತು. ಅಪ್ರಕಟಿತ ಕೃತಿಗಳು ಬೆಳಕು ಕಾಣಬೇಕೆಂಬ ಉದ್ದೇಶದಿಂದ ಸ್ವತಃ ಅವರೇ ಪ್ರಾಚ್ಯ ಕಾವ್ಯ ಪ್ರಕಾಶನವನ್ನು ಸ್ಥಾಪಿಸಿದುದು ಆ ಕಾಲಕ್ಕೆ ಸಾಹಸದ ಕೆಲಸವೆಂದೇ ಹೇಳಬೇಕು.

ಈವರೆಗೂ ಹರಿಶ್ಚಂದ್ರ ಕಾವ್ಯ, ಚೇರಮಕಾವ್ಯ, ತೊರವೆ ರಾಮಾಯಣ, ಚತುರಾಚಾರ್ಯ ಚಾರಿತ್ರ, ಉದ್ಭಟದೇವ ಚರಿತೆ, ತ್ರಿಪುರದಹನ ಸಾಂಗತ್ಯ, ಉದ್ಯೋಗಸಾರ, ಹಳೆಗನ್ನಡ ನಿಘಂಟು*, ಧರ್ಮನಾಥ ಪುರಾಣ, ನವಮುಗ್ಧಲೀಲೆ, ಚಂದ್ರಹಾಸನ ಕಥೆ, ಸಿದ್ಧಲಿಂಗೇಶ್ವರ ಸಾಂಗತ್ಯ, ಗುರುಭಕ್ತಾಂಡಾರಿ ಚರಿತೆ, ಸರ್ವಜ್ಞ ವಚನ ಸಂಗ್ರಹ, ಆರಾಧ್ಯ ಚಾರಿತ್ರ, ಅಬ್ಬಲೂರು ಚರಿತೆ, ನವರತ್ನ ಮಾಲಿಕೆ ಮೊದಲಾದ ಮೂವತ್ತು ಹಳಗನ್ನಡ-ನಡುಗನ್ನಡ ಕೃತಿಗಳನ್ನು ಇವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಪ್ರಾಚೀನ ಕೃತಿಗಳ ಸಂಪಾದನ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾದರೆ ಸಂಪಾದಕನು ಕೆಲವು ವಿಷಯಗಳನ್ನು

ತಿಳಿದುಕೊಂಡಿರುವುದು ಅಗತ್ಯ. ಅವುಗಳನ್ನು ಬಸವಾರಾಧ್ಯರು ಹೀಗೆ ಗುರುತಿಸಿದ್ದಾರೆ. "ಸಂಪಾದನೆಗೆ ಆರಿಸಿಕೊಂಡ ಕೃತಿಗಳ ಹಸ್ತಪ್ರತಿಗಳಿಗಾಗಿ ಹುಡುಕಾಡಬೇಕು. ಶುದ್ಧಪ್ರತಿ ನಿರ್ಣಯಿಸಬೇಕು. ಕವಿಕಾಲಕ್ಕೆ ಸಮೀಪವಾದ ಹಸ್ತಪ್ರತಿಯಿಂದ ಪ್ರತಿಮಾಡಿ, ಇತರ ಪ್ರತಿಗಳಿಂದ ಪಾಠಾಂತರ ಗುರುತುಹಾಕಿಕೊಳ್ಳಬೇಕು. ಇವು ಎಲ್ಲಾ ಕೃತಿಗಳ ಸಂಪಾದನೆಗೂ ಅನ್ವಯವಾಗುತ್ತವೆ. ಆದರೆ ಜನಪ್ರಿಯ ಕೃತಿಗಳಿಗೆ ಪಾಠಾಂತರಗಳು ವಿಪುಲ ಪ್ರಕ್ಷೇಪಗಳು, ಪಲ್ಲಟಗಳು ಸಾಮಾನ್ಯ." ಈ ಮಾತುಗಳನ್ನು ಗಮನಿಸಿದಾಗ ಬಸವಾರಾಧ್ಯರಿಗೆ ಮಾರ್ಗ ಮತ್ತು ದೇಶೀ ಕೃತಿಗಳ ಸಂಪಾದನೆಯಲ್ಲಿ ವಹಿಸಬೇಕಾದ ಎಚ್ಚರವನ್ನು ಆಗಲೇ ಗುರುತಿಸಿರುವುದು ವೇದ್ಯವಾಗುತ್ತದೆ. ಸಂಪಾದಕನಾದವನು ಈ ಸಂಗತಿಗಳನ್ನು ಅರಿತುಕೊಂಡು ಒಂದು ಕೃತಿಯನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಬೇಕು. ಈ ಹಿನ್ನೆಲೆಯಲ್ಲಿ ಬಸವಾರಾಧ್ಯರ ಕೆಲವು ಕೃತಿಗಳ ಪರಿಷ್ಕರಿಣ ವಿಧಾನ. ವೈಶಿಷ್ಟ್ಯಗಳನ್ನು ಕುರಿತು ಈಗ ಅವಲೋಕಿಸಬಹುದು.

ತೊರವೆ ರಾಮಾಯಣ

೧೯೫೩ರಲ್ಲಿ ತೊರವೆ ರಾಮಾಯಣದ ಸಂಗ್ರಹ ಕೃತಿಯೊಂದನ್ನು ಪರಿಷ್ಕರಿಸುವುದರ ಮೂಲಕ ಇವರ ಸಾಹಿತ್ಯಕೃಷಿ ಆರಂಭವಾಯಿತು. ಕೆಲಸಕ್ಕೆ ಸೇರಿಕೊಂಡ ಹೊಸದರಲ್ಲಿಯೇ ಈ ಕೃತಿಯನ್ನು ಸಂಪಾದಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಯಿತು. ಇಡೀ ಕಾವ್ಯವನ್ನು ಹಸ್ತಪ್ರತಿಯಿಂದ ಪ್ರತಿಮಾಡಿಕೊಂಡು ಪಾಠಾಂತರ ಹಾಕಿದರು. ೧೯೫೬ರ ಹೊತ್ತಿಗೆ ತೊರವೆ ರಾಮಾಯಣದ ಪೂರ್ಣ ಕೃತಿಯ ಮೊದಲ ಸಂಪುಟ ಪ್ರಕಟವಾಯಿತು. ಇದು ಬಾಲ, ಅಯೋಧ್ಯಾ, ಅರಣ್ಯ, ಕಿಷ್ಕಿಂದಾ ಮತ್ತು ಸುಂದರ ಎಂಬ ಐದು ಕಾಂಡಗಳನ್ನೊಳಗೊಂಡರೆ, ಎರಡನೆಯ ಸಂಪುಟವು ಯುದ್ಧಕಾಂಡವನ್ನೊಳಗೊಂಡಿದೆ. ಪ್ರಸ್ತಾವನೆಯಲ್ಲಿ ಇತರೆ ರಾಮಾಯಣ ಕಾವ್ಯಗಳ ಬಗೆಗೆ ಸುದೀರ್ಘವಾಗಿ ಚರ್ಚಿಸಲಾಗಿದೆ.

ಹರಿಶ್ಚಂದ್ರ ಕಾವ್ಯ

ಪಂಡಿತ ಎಸ್. ಬಸಪ್ಪ ಅವರೊಂದಿಗೆ ರಾಘವಾಂಕನ ಹರಿಶ್ಚಂದ್ರ ಕಾವ್ಯ (೧೯೫೫)ವನ್ನು ಸಂಪಾದಿಸಿ ಪ್ರಕಟಿಸಿದ ಬಸವಾರಾಧ್ಯರು ಈ ಸಂದರ್ಭದಲ್ಲಿ ತಮಗಾದ ಅನುಭವಗಳನ್ನು ಹೇಳುತ್ತಾ "ಹರಿಶ್ಚಂದ್ರ ಕಾವ್ಯ ಸಂಪಾದನೆಯಲ್ಲಿ, ಪ್ರಕಟನೆಯಲ್ಲಿ ಅನುಭವಿಸಿದ ಕಷ್ಟಕಾರ್ಪಣ್ಯ ಅಪಾರ. ನಮಗೆ ಆಗ ಎಚ್. ದೇವೀರಪ್ಪ, ಡಿ.ಎಲ್.ಎನ್. ತುಂಬ ನೆರವಾದರು. ಆ ಕಾವ್ಯದ ಹಸ್ತಪ್ರತಿಗಳ ಸ್ವರೂಪವೇ ತೊಡಕಿನದು. ಕೆಲವದರಲ್ಲಿ ೧೪ ಸ್ಥಲ, ಇನ್ನು ಕೆಲವದರಲ್ಲಿ ೧೬ ಸಂಧಿ, ಮತ್ತೆ ಕೆಲವದರಲ್ಲಿ ೧೭ ಸಂಧಿ, ಸಂಗ್ರಹ ಪಾಠ ಅನುಸರಿಸಬೇಕೆ? ವಿಸ್ತೃತ ಪಾಠವೇ? ಈ ಕಾವ್ಯದ ೩, ೫ನೆಯ ಸ್ಥಲಗಳಲ್ಲಿ ರಗಳೆಯ ಭಾಗದಲ್ಲಿ ಪದ್ಯಗಳ ಅನುಕ್ರಮಣಿಕೆ ತುಂಬ ಏರುಪೇರು. ಒಂದೊಂದು ಪ್ರತಿಯಲ್ಲಿ ಒಂದೊಂದು ವಿಧಾನ. ಬಹುಪ್ರತಿಗಳಲ್ಲಿ ಬಂದಿರುವ ಕ್ರಮವನ್ನು ಮಾನ್ಯಮಾಡಿದೆವು. ಶಬ್ದರೂಪವಂತೂ ವಿದ್ವತ್ತಿಗೆ ಸವಾಲು ಹಾಕುವಂತಹುದು. ಈ ಕೃತಿಯ ಸಂಪಾದನೆ ಇಂದಿಗೂ ಅವಿಸ್ಮರಣೀಯ"ವೆಂದು ನೆನಪಿಸಿಕೊಳ್ಳುತ್ತಾರೆ. ಕವಿಕಾವ್ಯದ ಬಗೆಗೆ ವಿಚಾರಪೂರ್ಣ ಪೀಠಿಕೆಯನ್ನೊಳಗೊಂಡ ಈ ಕೃತಿ ಈಗಾಗಲೇ ವಿದ್ವತ್ ಲೋಕದಲ್ಲಿ ವಿದ್ವಾಂಸರ ಮನ್ನಣೆಗೆ ಪಾತ್ರವಾಗಿದೆ.

ಶತಕ ಸಾಂಗತ್ಯಗಳು

ಪ್ರಾಚೀನ ಕೃತಿಗಳು ಪ್ರಕಟವಾಗಬೇಕೆಂಬ ಉದ್ದೇಶದಿಂದ ಸ್ವತಃ ಅವರೇ ಆರಂಭಿಸಿದ ಪ್ರಾಚ್ಯಕಾವ್ಯ ಪ್ರಕಾಶನ ಮಂದಿರದಿಂದ ೧೯೫೯ರಲ್ಲಿ ಚಿಕ್ಕುಪಾಧ್ಯಾಯ ವಿರಚಿತ ಶತಕ ಸಾಂಗತ್ಯಗಳು ಎಂಬ ಕೃತಿಯನ್ನು ಹೊರತಂದಿರುವುದು ಸಾಹಸದ ಕೆಲಸ. ಮೈಸೂರು ಅರಸ ಚಿಕ್ಕದೇವರಾಜನ ಆಸ್ಥಾನ ಕವಿ ಚಿಕ್ಕುಪಾಧ್ಯಾಯನು ೩೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವುದು ತಿಳಿದ ಸಂಗತಿ. ಆದರೆ ಆ ಕೃತಿಗಳೆಲ್ಲವೂ ಒಂದೇ ಕಡೆ ಪ್ರಕಟವಾಗಿರಲಿಲ್ಲ. ಈ ಕೊರತೆಯನ್ನು ಮನಗಂಡ ಬಸವಾರಾಧ್ಯರು ರಂಗಧಾಮಸ್ತುತಿ ಸಾಂಗತ್ಯ, ರಂಗಧಾಮ ಪುರುಷ ವಿರಹ ಸಾಂಗತ್ಯ, ನೀತಿ ಶತಕ ಸಾಂಗತ್ಯ ಮತ್ತು ಅಕ್ಷರ ಮಾಲಿಕಾ ಸಾಂಗತ್ಯ ಎಂಬ ನಾಲ್ಕು ಕೃತಿಗಳನ್ನು ಇಲ್ಲಿ ಸಂಯೋಜಿಸಿಕೊಟ್ಟಿರುವುದು ಓದುಗರಿಗೆ ಅನುಕೂಲಕರವಾಗಿದೆ.

ಅಬ್ಬಲೂರು ಚರಿತೆ

೧೯೭೩ರಲ್ಲಿ ಅಬ್ಬಲೂರು ಚರಿತೆಯನ್ನು ಹೊರತಂದರು. ಪೀಠಿಕೆಯಲ್ಲಿ ಮುಖ್ಯ ಕಥಾವ್ಯತ್ಯಾಸಗಳು, ಏಕಾಂತರಾಮಯ್ಯ, ವಿಶೇಷ ವಿಷಯಗಳು, ಕೃತಿವಿಮರ್ಶೆ, ಕಾವ್ಯಸಂಪಾದನಾ ವಿಧಾನ ಮುಂತಾದ ಸಂಗತಿಗಳನ್ನು ಚರ್ಚಿಸಲಾಗಿದೆ. ಅಬ್ಬಲೂರು ಶಾಸನ, ಏಕಾಂತರಾಮಿತಂದೆಗಳ ರಗಳೆ, ಬಸವಪುರಾಣ, ಶಿವತತ್ವ ಚಿಂತಾಮಣಿ ಮೊದಲಾದ ಹತ್ತು ಹಲವು ಕೃತಿಗಳಲ್ಲಿ ಏಕಾಂತರಾಮಯ್ಯನನ್ನು ಕುರಿತು ಬಂದ ಉಲ್ಲೇಖಗಳನ್ನು ಅನುಬಂಧದಲ್ಲಿ ಕೊಟ್ಟಿರುವುದು ಸಮಂಜಸವಾಗಿದೆ. ಪರಿಪೂರ್ಣವಾದ ಪೀಠಿಕೆ, ಅಗತ್ಯವಾದ ಅನುಬಂಧಗಳಿದ್ದರೆ ಸಂಶೋಧಕರಿಗೆ ತುಂಬ ಅನುಕೂಲ. ಅಂಥ ಅನುಕೂಲತೆಯನ್ನು ಬಸವರಾಧ್ಯರು ತಮ್ಮ ಎಲ್ಲ ಕೃತಿಗಳಲ್ಲಿ ಒದಗಿಸಿರುವುದು ಅವರ ಪ್ರೌಢಿಮೆಗೆ ನಿದರ್ಶನವಾಗಿದೆ.

ಆರಾಧ್ಯ ಚಾರಿತ್ರ

ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿ ವೀರಶೈವ ಪಂಚಾಚಾರ್ಯರಿಗೂ ವಿಶಿಷ್ಟ ಸ್ಥಾನವಿದೆ. ಈ ಆಚಾರ್ಯರು ಎಷ್ಟು ಜನ? ಇವರು ಕಾಲ್ಪನಿಕ ವ್ಯಕ್ತಿಗಳೇ? ಎಂಬ ಕುರಿತು ಜಿಜ್ಞಾಸೆಗಳಿವೆ. ಈ ಜಿಜ್ಞಾಸೆಯನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಬಸವಾರಾಧ್ಯರು ಪಂಚಾಚಾರ್ಯರಿಗೆ ಸಂಬಂಧಿಸಿದ ಕೃತಿಗಳೆಲ್ಲ ಪ್ರಕಟವಾಗಬೇಕೆಂಬ ಉದ್ದೇಶದಿಂದ ಆರಾಧ್ಯ ಚಾರಿತ್ರ ಮತ್ತು ಚತುರಾಚಾರ್ಯ ಚಾರಿತ್ರ ಎಂಬೆರಡು ಬೃಹದ್ಗ್ರಂಥಗಳನ್ನು ಶೋಧಿಸಿ ಪರಿಷ್ಕರಿಸಿ ಪ್ರಕಟಿಸಿರುವುದು ಇವರ ಸಾಹಿತ್ಯಕ ಸಾಧನೆಗಳಲ್ಲಿ ಪ್ರಮುಖವಾಗಿದೆ.

೬೫ ಸಂಧಿ, ೩೦೬೯ ಪದ್ಯಗಳನ್ನೊಳಗೊಂಡ ನೀಲಕಂಠಾಚಾರ್ಯ ಪಂಡಿತನ ಆರಾಧ್ಯ ಚಾರಿತ್ರವು ಪಂಚಾಚಾರ್ಯರನ್ನು ಕುರಿತು ತಿಳಿಸುವ ಒಂದು ಬೃಹದ್ಗ್ರಂಥ. ಒಂದು ಮುದ್ರಿತ ಪ್ರತಿಯೂ ಸೇರಿದಂತೆ ನಾಲ್ಕು ಹಸ್ತಪ್ರತಿಗಳ ನೆರವಿನಿಂದ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. ಯಾವುದೇ ಒಂದು ಕೃತಿಯನ್ನು ಸಂಪಾದನೆಗೆ ಕೈಗೆತ್ತಿಕೊಂಡಾಗ ಆ ಕೃತಿಯ ಸಮಗ್ರ ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಸಂಪಾದಕನ ಮೊದಲ ಕರ್ತವ್ಯ. ಬಸವಾರಾಧ್ಯರು ಈ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ಶ್ರಮದಿಂದ ಪೂರೈಸಿರುವುದು ಅವರ ಪರಿಷ್ಕರಣೆಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗುತ್ತದೆ. ಈ ಕಾರ್ಯವನ್ನು ಕೈಗೊಂಡಾಗ ಮೈಸೂರು ವಿಶ್ವವಿದ್ಯಾಲಯದಲ್ಲಿ ಒಂದು ಕಾಗದದ ಪ್ರತಿ ಮಾತ್ರ ಲಭ್ಯವಿತ್ತು. ಬಸವಾರಾಧ್ಯರು ಇಷ್ಟಕ್ಕೆ ತೃಪ್ತಿ ಹೊಂದದೆ ಈ ಕೃತಿಯ ಹಸ್ತಪ್ರತಿಗಳು ಎಲ್ಲೆಲ್ಲಿ ದೊರೆಯಬಹುದೆಂದು ಪತ್ತೆ ಹಚ್ಚಿದರು. ನಾಲ್ಕು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳ ಸಹಾಯದಿಂದ ಈ ಕೃತಿಯನ್ನು ಬಸವಾರಾಧ್ಯರು ಪರಿಷ್ಕರಿಸಿದ್ದಾರೆ. ಇವುಗಳನ್ನು ಕ,ಗ,ಜ,ವ ಎಂಬ ಸಂಕೇತದಿಂದ ಗುರುತಿಸಿದ್ದಾರೆ. ಗಾತ್ರದಲ್ಲಿ ಹಿರಿದಾದ ಆರಾಧ್ಯ ಚರಿತ್ರೆಯಲ್ಲಿ ಭಿನ್ನಪಾಠಗಳಿಗೆ ಅವಕಾಶ ವಿಲ್ಲದಾಗಿದೆ. ಉದಾಹರಣೆಗೆ 'ವಂಚಕಿತಿ' ಪಾಠಕ್ಕೆ 'ಪಿಸುಣಗಿತ್ತಿ' (ಪುಟ. ೨೨೩), 'ಸೆದು ಶಿವಸದ್ಭಕ್ತಿ' ಎಂಬುದಕ್ಕೆ 'ಲ್ದೊಸೆದು ಶಿವಭಕ್ತಿ' ಎಂಬ ಪಾಠಾಂತರ (ಪುಟ. ೨೮೩) ಗಳಿವೆ. ಹೀಗೆ ಇಲ್ಲಿನ ಪಾಠಾಂತರಗಳಲ್ಲಿ ಹೆಚ್ಚಿನ ಅರ್ಥವ್ಯತ್ಯಾಸಗಳು ಕಂಡುಬರುವುದಿಲ್ಲ. ಇವೆಲ್ಲವುಗಳನ್ನು ಗಮನಿಸಿ ಬಸವಾರಾಧ್ಯರು ಸೂಕ್ತಪಾಠಗಳನ್ನೇ ಕೊಟ್ಟಿರುವುದು ಕೃತಿಯುದ್ದಕ್ಕೂ ವೇದ್ಯವಾಗುತ್ತದೆ.

ವಿಸ್ತಾರವಾದ ಪ್ರಸ್ತಾವನೆಯಲ್ಲಿ ಕವಿಕಾಲ ವಿಚಾರ, ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆಯನ್ನೊಳಗೊಂಡಂತೆ ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಪಂಡಿತಾರಾಧ್ಯರನ್ನು ಕುರಿತು ಕೃತಿಗಳು ರಚನೆಗೊಂಡಿವೆ. ಅವುಗಳ ತೌಲನಿಕ ಚರ್ಚೆಯೂ ಇಲ್ಲಿದೆ. ಶ್ರೀಶೈಲ, ದ್ರಾಕ್ಷಾರಾಮ ಸ್ಥಳಗಳ ವಿವೇಚನೆ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ಇತಿವೃತ್ತ ವಿಚಾರಗಳು ಸಂಪಾದಕರ ಆಳವಾದ ಅಧ್ಯಯನಕ್ಕೆ ಕೈಗನ್ನಡಿಯಂತಿವೆ. ಅನುಬಂಧದಲ್ಲಿ ಪದ್ಯಗಳ ಅಕಾರಾದಿ, ವಿಶಿಷ್ಟ ಪದಸೂಚಿ, ಪಾರಿಭಾಷಿಕ ಪದಕೋಶ, ಶಬ್ದಾರ್ಥಕೋಶ ಮತ್ತು ಕೆಲವು ಆಧಾರ ಗ್ರಂಥಗಳ ಸೂಚಿಗಳು ಕೃತಿಯ ವಿಸ್ತಾರ ಓದಿಗೆ ನೆರವಾಗುತ್ತವೆ. ಇಷ್ಟಾಗಿಯೂ ಸಹಿತ "ಈ ಮಹತ್ಕೃತಿಯನ್ನು ಸಂಪಾದಿಸುವಲ್ಲಿ ನನ್ನ ಅಜ್ಞಾನ, ಅನವಧಾನ, ಅನ್ಯಥಾಜ್ಞಾನ ಇವುಗಳಿಂದ ಎಡೆವಾಯ್ದು ಬಂದ ತಪ್ಪುಗಳನ್ನು ಕಡೆತನಕ ಸಾಧಿಸದೆ ಬಂದ ಲೇಸಿಂಗೆ ತಲೆದೂಗಬೇಕೆಂದು ಪ್ರಾಜ್ಞರನ್ನು ಕೇಳಿಕೊಳ್ಳುತ್ತೇನೆ" ಎಂದು ಪ್ರಸ್ತಾವನೆಯ ಕೊನೆಯಲ್ಲಿ ಬಸವಾರಾಧ್ಯರು ಹೇಳಿರುವುದು ಅವರ ವಿನಯಶೀಲತೆ, ಪ್ರಾಮಾಣಿಕತೆ, ನಿಷ್ಠೆಯನ್ನು ತಿಳಿಸುತ್ತದೆ.

ಚತುರಾಚಾರ್ಯ ಚಾರಿತ್ರ

ಬಸವಾರಾಧ್ಯರ ಗ್ರಂಥಸಂಪಾದನೆ ಮಾದರಿಗೆ ಮತ್ತೊಂದು ಉದಾಹರಣೆಯಾಗಿದೆ, ಚತುರಾಚಾರ್ಯ ಚಾರಿತ್ರ. ಹೆಸರೇ ಸೂಚಿಸುವಂತೆ ಇದು ರೇಣುಕ, ಮರುಳಸಿದ್ಧ, ಏಕೋರಾಮಿ ಮತ್ತು ಪಂಡಿತಾರಾಧ್ಯರೆಂಬ ನಾಲ್ಕು ಆಚಾರ್ಯರ ಜೀವನ ಸಾಧನೆಗಳನ್ನು ನಿರೂಪಿಸುವ ಒಂದು ಬೃಹತ್ಕಾವ್ಯ. ಇದಕ್ಕಾಗಿ ಕ, ಗ, ಚ, ಜ ಎಂಬ ನಾಲ್ಕು ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಇವುಗಳಲ್ಲಿ ಕ ಮತ್ತು ಗ ಪ್ರತಿಗಳು ಒಂದೇ ಪರಂಪರೆಗೆ ಸೇರಿದವುಗಳೆಂಬುದನ್ನು ಸಂಪಾದಕರು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಸಂಗ್ರಹಿಸಿದ ಈ ನಾಲ್ಕೂ ಹಸ್ತಪ್ರತಿಗಳು ಶುದ್ಧವಾದವುಗಳು. ಹೀಗಾಗಿ ಪಾಠಪರಿಷ್ಕರಣೆಯಲ್ಲಿ ಜಟಿಲವಾದ ಸಮಸ್ಯೆಗಳು ಎದುರಾಗಿಲ್ಲ. ಆದರೂ ಈ ಕೃತಿಯ ಪಾಠಗಳನ್ನು ಕುರಿತು 'ಹಸ್ತಪ್ರತಿಗಳಲ್ಲಿ ಯಾವುದೊಂದು ಸರ್ವಸಮರ್ಪಕವಾದುದಲ್ಲ. ಸಂದರ್ಭೋಚಿತವಾಗಿ ಸಮ್ಮಿಶ್ರ ಪಾಠಗಳನ್ನು ಬಳಸಿಕೊಳ್ಳಲಾಗಿದೆ. ಸಾಧ್ಯವಿದ್ದ ಮಟ್ಟಿಗೂ ಕವಿಯ ಮೂಲಪಾಠ ಏನಿರಬಹುದೆಂಬುದನ್ನು ಅಂತರಿಕ ಮತ್ತು ಬಾಹ್ಯ ಆಧಾರಗಳಿಂದ ನಿರ್ಣಯಿಸಲಾಗಿದೆ" ಎಂದಿದ್ದಾರೆ.

೧೫೯ ಪುಟಗಳ ಪೀಠಿಕಾ ಭಾಗವು ಕವಿಕಾವ್ಯ ವಿಚಾರ, ಕಥಾಸಾರ, ಕಾವ್ಯಸಮೀಕ್ಷೆ ಎಂಬ ಮೂರು ವಿಭಾಗಗಳಲ್ಲಿ ಚತುರಾಚಾರ್ಯ ಚಾರಿತ್ರದ ಸಮಗ್ರ ಅಧ್ಯಯನವನ್ನು ಕೈಕೊಳ್ಳಲಾಗಿದೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದ ಪ್ರಭಾವ ಈ ಕೃತಿಯ ಮೇಲಾದುದನ್ನು ಸಾಧಾರಪೂರ್ವಕವಾಗಿ ನಿರೂಪಿಸಲಾಗಿದೆ. ಜೊತೆಗೆ ಇಲ್ಲಿ ಸಂಪಾದಕರ ತೌಲನಿಕ ದೃಷ್ಟಿಕೋನವು ಮೈದಾಳಿ ನಿಂತಿದೆ. ಕವಿಯ ಪ್ರತಿಭೆ, ಕೃತಿಯ ವಿಶಿಷ್ಟ ಭಾಗಗಳನ್ನು ಉಲ್ಲೇಖಿಸಿ ಇದೊಂದು ಗಮನಾರ್ಹ ಕೃತಿಯೆಂಬುದನ್ನು ಸಾಬೀತುಪಡಿಸಿರುವುದು ಬಸವಾರಾಧ್ಯರ ವಿದ್ವತ್ತು, ಪಾಂಡಿತ್ಯ, ಪ್ರತಿಭೆಯ ದ್ಯೋತಕವಾಗಿದೆ. ಒಟ್ಟಿನಲ್ಲಿ ಪಂಚಾಚಾರ್ಯರನ್ನು ಕುರಿತು ಸಂಶೋಧನೆ ಕೊಗೊಳ್ಳುವವರಿಗೆ ಆರಾಧ್ಯ ಚಾರಿತ್ರ ಮತ್ತು ಚತುರಾಚಾರ್ಯ ಚಾರಿತ್ರ ಕೃತಿಗಳು ಮೂಲ ಆಕರಗಳಾಗಿ ನೆರವಾಗುತ್ತವೆ. ಈ ಕಾರಣಕ್ಕಾಗಿ ಬಸವಾರಾಧ್ಯರು ವಿದ್ವಾಂಸರ ಮೆಚ್ಚುಗೆಗೆ ಅರ್ಹರಾಗಿದ್ದಾರೆ.

ಹಳಗನ್ನಡ ನಿಘಂಟು

ನಿಘಂಟು ಕ್ಷೇತ್ರಕ್ಕೆ ಬಸವಾರಾಧ್ಯರ ಕೊಡುಗೆ ಅಪಾರ. ೧೯೫೫ರಲ್ಲಿ ಡಿ.ಎಲ್.ಎನ್. ಅವರ ಸೂಚನೆಯ ಮೇರೆಗೆ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಕನ್ನಡ-ಕನ್ನಡ ನಿಘಂಟಿನ ರಚನಾ ಯೋಜನೆಯಲ್ಲಿ ಸ್ನಾತಕ ಸಹಾಯಕರಾಗಿ ಕೆಲಸ ನಿರ್ವಹಿಸಲು ಆಹ್ವಾನಿಸಿತು. ಈ ಹೊತ್ತಿಗಾಗಲೇ ಆರಾಧ್ಯರು ಹರಿಶ್ಚಂದ್ರ ಕಾವ್ಯ ಮುಂತಾದ ಕೃತಿಗಳನ್ನು ಸಂಪಾದಿಸಿ ತುಂಬ ಅನುಭವವನ್ನು ಪಡೆದುಕೊಂಡಿದ್ದರು. ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾದ ಎ.ಆರ್. ಕೃಷ್ಣಶಾಸ್ತ್ರಿಗಳು ಇವರನ್ನು ಸಂಪಾದಕನಾಗಲು ಕೇಳಿದಾಗ "ನನ್ನ ಗುರುಗಳು ಕುಳಿತ ಕುರ್ಚಿಯಲ್ಲಿ ಕುಳಿತುಕೊಳ್ಳುವ ಯೋಗ್ಯತೆ ನನಗಿಲ್ಲ. ದಯವಿಟ್ಟು ಬೇರೆ ಯಾರನ್ನಾದರೂ ನೇಮಿಸಿ ಎಂದರು. ಆಗ ಶಾಸ್ತ್ರಿಗಳು ಡಿ.ಎಲ್.ಎನ್. ಅವರು ಈ ಕೆಲಸಕ್ಕೆ ನಿನ್ನನ್ನು ಸಮರ್ಥ ಎಂದು ಕರೆತಂದಿದ್ದಾರೆ. ಈ ಕೆಲಸಕ್ಕೆ ನೀನೇ ಸಮರ್ಥ. ಆದ್ದರಿಂದ ನೀನೇ ಸಂಪಾದಕನಾಗಬೇಕು" ಎಂದು ಹಟಹಿಡಿದರು. ಇದರಿಂದಾಗಿ ಕನ್ನಡ-ಕನ್ನಡ ನಿಘಂಟು ಯೋಜನೆಯಲ್ಲಿ ಉಪಸಂಪಾದಕ, ಸಂಪಾದಕ, ಪ್ರಧಾನ ಸಂಪಾದಕರಾಗಿ ಕೆಲಸ ನಿರ್ವಹಿಸಿದ್ದಾರೆ. ಕೊನೆಯ ೭ ಮತ್ತು ೮ನೆಯ ಸಂಪುಟಗಳು ಪ್ರಕಟಗೊಳ್ಳುವುದರಲ್ಲಿ ಬಸವಾರಾಧ್ಯರ ಶ್ರಮ, ಸೇವೆ ಗಮನಾರ್ಹವಾಗಿದೆ.

ಈ ಅನುಭವದಿಂದಾಗಿ ಬಸವಾರಾಧ್ಯರಿಗೆ ಪ್ರಾಚೀನ ನಿಘಂಟು ಕೃತಿಗಳನ್ನೊಳಗೊಂಡ ಹಳಗನ್ನಡ ನಿಘಂಟು ಹೆಸರಿನ ಒಂದು ಸಂಕಲನವನ್ನು ೧೯೭೬ರಲ್ಲಿ ಹೊರತರಲು ಸಾಧ್ಯವಾಯಿತು. ಅಲ್ಲದೇ ಈ ಕೃತಿಯನ್ನು ಅಗತ್ಯವಾಗಿ ಶಾಸ್ತ್ರಶುದ್ಧವಾಗಿ ಹೊರತರಬೇಕೆಂಬುದನ್ನು ಪ್ರಸ್ತಾವನೆಯಲ್ಲಿ ಹೀಗೆ ಸ್ಪಷ್ಟಪಡಿಸಿದ್ದಾರೆ. "ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕನಾಗಿದ್ದಾಗ ಈ ಸಂಪುಟದಲ್ಲಿ ಸೇರ್ಪಡೆಯಾಗಿರುವ ನಿಘಂಟುಗಳ ಅವಲೋಕನವನ್ನು ಮೇಲಿಂದ ಮೇಲೆ ಮಾಡಬೇಕಾದ ಪ್ರಸಂಗ ಒದಗಿತು. ಆಗ ಈ ಕೆಲವು ನಿಘಂಟುಗಳಲ್ಲಿನ, ಅವುಗಳ ಟೀಕೆಗಳಲ್ಲಿನ ಅಸಂಗತಗಳನ್ನೂ, ಅಶುದ್ಧ ರೂಪಗಳನ್ನೂ, ಅಲಭ್ಯ ಪ್ರಸಂಗಗಳನ್ನೂ ಮನಗಂಡು ಈ ನಿಘಂಟುಗಳ ಅಧಿಕೃತ ಪರಿಷ್ಕರಣ ವೊಂದನ್ನು ಹೊರತರಬೇಕೆಂಬ

ಬಯಕೆ ಅಂಕುರಿಸಿತು." ಇದಕ್ಕಾಗಿ ಸುಮಾರು ೩೯ ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಇವುಗಳ ಒಡಲಲ್ಲಿದ್ದ ರನ್ನಕಂದ, ಶಬ್ದಮಣಿದರ್ಪಣ, ಕರ್ನಾಟಕ ಶಬ್ದಸಾರಂ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ, ಕರ್ನಾಟಕ ಸಂಜೀವನಂ, ಕರ್ನಾಟಕ ಭಾರತ ನಿಘಂಟು, ಕವಿಕಂಠಹಾರಂ, ಶಬ್ದಾರ್ಥಕೋಶ ಎಂಬ ಹತ್ತು ನಿಘಂಟುಗಳು ಈ ಸಂಪುಟದಲ್ಲಿ ಸೇರ್ಪಡೆಗೊಂಡಿವೆ.

ಪಾಂಡಿತ್ಯಪೂರ್ಣವಾದ ಪೀಠಿಕೆಯಲ್ಲಿ ಕನ್ನಡ ನಿಘಂಟುಗಳ ಬಗೆಗೆ ಸುದೀರ್ಘವಾದ ವಿವೇಚನೆಯಿದೆ. ನಿಘಂಟು ಎಂದರೇನು? ನಿಘಂಟಿನ ಇತಿಹಾಸವನ್ನು ಗುರುತಿಸಿ ಕನ್ನಡದಲ್ಲಿ ಅಂದಾಜು ೬೪ ಪ್ರಾಚೀನ ನಿಘಂಟುಗಳಿವೆಯೆಂದು ಮೊದಲ ಬಾರಿಗೆ ಶೋಧಿಸಲಾಗಿದೆ. ಇಲ್ಲಿಯ ನಿಘಂಟುಗಳನ್ನು ೧. ಸಂಸ್ಕೃತ ಶಬ್ದಗಳಿಗೆ ಪರ್ಯಾಯ ಶಬ್ದಗಳನ್ನು ಸೂಚಿಸಿರುವ ನಿಘಂಟುಗಳು, ೨. ಸಂಸ್ಕೃತ ಶಬ್ದಗಳಿಗೆ ಕನ್ನಡ ಕನ್ನಡ ಟೀಕಿರುವ ನಿಘಂಟುಗಳು, ೩. ವೈದ್ಯನಿಘಂಟು, ೪. ಕನ್ನಡ ನಿಘಂಟುಗಳು, ೫. ಟೀಕಿರುವ ಕನ್ನಡ ನಿಘಂಟುಗಳು ಎಂದು ವಿಭಾಗಿಸಿದ್ದು ಔಚಿತ್ಯವೆನಿಸುತ್ತದೆ. ನಿಘಂಟು ಕ್ಷೇತ್ರದಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಇದೊಂದು ಪ್ರಮುಖ ಆಕರಗ್ರಂಥವಾಗಿದೆ. ಇನ್ನುಳಿದು ಪ್ರಾಚೀನ ನಿಘಂಟುಗಳು ಶೋಧಗೊಳ್ಳಬೇಕಾದ ಅಗತ್ಯತೆಯನ್ನು ಬೇರೆ ಹೇಳಬೇಕಿಲ್ಲ. ಈ ಕಾರ್ಯವನ್ನು ಇಂದಿನ ಸಂಶೋಧಕರು ಮುಂದುವರೆಸಬೇಕಾಗಿದೆ.

ನವರತ್ನ ಮಾಲಿಕೆ

೭೫ ವರ್ಷಗಳ ಈ ತುಂಬು ವಯಸ್ಸಿನಲ್ಲಿ ಬಸವಾರಾಧ್ಯರು ಪ್ರಾಚೀನ ಕೃತಿಗಳ ಪರಿಷ್ಕರಣ ಕಾರ್ಯವನ್ನು ನಿಲ್ಲಿಸಿಲ್ಲ. ಇತ್ತೀಚೆಗೆ (೧೯೯೯) ನಾ. ಗೀತಾಚಾರ್ಯ ಮತ್ತು ಎನ್.ಎಸ್. ರಾಮಸ್ವಾಮಿ ಅಯ್ಯರ್ ಅವರ ಜೊತೆಗೂಡಿ ಹೊರತಂದ ಒಂದು ಅಪ್ರಕಟಿತ ಕೃತಿ ಬಸವಣ್ಣಾಚಾರ್ಯನ ನವರತ್ನ ಮಾಲಿಕೆ ಇದಕ್ಕೊಂದು ಒಳ್ಳೆಯ ಉದಾಹರಣೆ. ಸಾಕಷ್ಟು ಜೀರ್ಣಾವಸ್ಥೆಯಲ್ಲಿದ್ದ ಏಕೈಕ ಹಸ್ತಪ್ರತಿಯೊಂದರಿಂದ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. "Aj" ಅಲ್ಲಲ್ಲೆ ಪಾಠ ಕ್ಲೇಶಗಳಿದ್ದು ಕವಿಪಾಠನಿರ್ಣಯಕ್ಕೆ ತೊಡಕಾಗಿದೆ. ಗರಿಗಳು ತ್ರುಟಿತ ವಾಗಿರುವುದು ಒಂದಾದರೆ, ಪಾಠಸಮಸ್ಯೆಗಳು ಇನ್ನೊಂದಾಗಿ ಹಲವು ಕಡೆ ಅನ್ವಯ ಸಮರ್ಪಕವಾಗಿ ಮೂಡಿಬಂದಿಲ್ಲ. ಅವುಗಳನ್ನೆಲ್ಲ ನಿವಾರಣೆ ಮಾಡುವುದು, ಒಂದೇ ಹಸ್ತಪ್ರತಿಯಾಗಿರುವುದರಿಂದ ಕಷ್ಟಸಾಧ್ಯ. ಆದ್ದರಿಂದ ಈ ಕೃತಿಯಲ್ಲಿ ಕೆಲವು ಸಂದರ್ಭಗಳಲ್ಲಿ ಪಾಠಸಮಸ್ಯೆ ಹಾಗೆಯೇ ಉಳಿದುಕೊಂಡಿದೆ. ಸಾಧ್ಯವಿರುವ ಕಡೆಗಳಲ್ಲಿ ಮಾತ್ರ ಊಹಾಪಾಠಗಳನ್ನು ನೀಡಲಾಗಿದೆ. ಅಂತಹ ಸಂದರ್ಭದಲ್ಲೆಲ್ಲ ಚೌಕಕಂಸವನ್ನು ಸೂಚಿಸಿದೆ. ಹಸ್ತಪ್ರತಿಯಲ್ಲಿ ಹೆಚ್ಚಿನ ಬದಲಾವಣೆಯನ್ನು ಮಾಡಿಲ್ಲ. ಭಾಷಿಕ ಮತ್ತು ವ್ಯಾಕರಣ ದೋಷಗಳನ್ನು ಮಾತ್ರ ಸರಿಪಡಿಸಿಕೊಂಡು ಇರುವಂತೆಯೇ ಉಳಿಸಿಕೊಳ್ಳಲಾಗಿದೆ. ಅಲ್ಲಲ್ಲೆ ಕಾಣಿಸಿಕೊಂಡಿರುವ ಛಂದೋದೋಷದ ನಿವಾರಣೆಗೂ ಕೈಹಾಕಿಲ್ಲ"ವೆಂದು ಪ್ರಾಮಾಣಿಕವಾಗಿ ಹೇಳಿಕೊಂಡಿದ್ದಾರೆ.

ಪೀಠಿಕೆಯಲ್ಲಿ ಕವಿ ಕೃತಿಯ ಇತಿವೃತ್ತ ವಿಚಾರ, ಕಥಾಸಂಗ್ರಹ, ಕೃತಿಯ ಮಹತ್ವ, ಧರ್ಮ ಇತಿಹಾಸದ ಸಂಬಂಧ, ಭಾಷಾ ಶೈಲಿ, ಹಸ್ತಪ್ರತಿಯ ಸ್ವರೂಪ, ಸಂಪಾದನ ವಿಧಾನ ಇತ್ಯಾದಿ ವಿಷಯಗಳನ್ನು ಸ್ಥೂಲವಾಗಿ ಚರ್ಚಿಸಿದ್ದಾರೆ. ಪಂಪ, ಹರಿಹರ, ಚಾಮರಸರಂತೆ ಧರ್ಮದೊಂದಿಗೆ ಇತಿಹಾಸವನ್ನೂ ತಗುಳ್ಚಿ ಪೇಳ್ದ ಕೃತಿಯಾದ ಇದರಲ್ಲಿ ಹೊಸ ಚಾರಿತ್ರಿಕ ಸಂಗತಿಗಳು ಎಡೆಪಡೆದಿವೆ. ಕುಮಾರ ರಾಮನ ವಿಚಾರ, ಹರತಿಕೋಟೆ ಪಾಳೇಗಾರರ ಬಗೆಗೆ ಹೊಸ ಸಂಗತಿಗಳಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಇವುಗಳಲ್ಲದೇ ಚೇರಮಕಾವ್ಯ (೧೯೫೬), ಉದ್ಭಟದೇವ ಚರಿತೆ (೧೯೫೭), ತ್ರಿಪುರದಹನ ಸಾಂಗತ್ಯ (೧೯೫೯), ಗುರುಭಕ್ತಾಂಡಾರಿ ಚರಿತೆ (೧೯೬೯), ಧರ್ಮನಾಥ ಪುರಾಣ (೧೯೭೫), ನವಮುಗ್ಧಲೀಲೆ (೧೯೮೩) ಮೊದಲಾದ ಅನೇಕ ಕೃತಿಗಳನ್ನು ಪರಿಷ್ಕರಿಸುವುದರ ಮೂಲಕ ಬಸವಾರಾಧ್ಯರು ಕನ್ನಡ ಸಾಹಿತ್ಯ ಚರಿತ್ರೆಯ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ನೆರವಾಗಿದ್ದಾರೆ. ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿಯೂ ಬಸವಾರಾಧ್ಯರು ಗಮನಿಸುವಂಥ ಕಾರ್ಯಗಳನ್ನು ಮಾಡಿದ್ದಾರೆ.

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾಗಿ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸಿರುವರು. ಹಸ್ತಪ್ರತಿ ಸಂಗ್ರಹ ಸಂಪಾದನೆ, ಗ್ರಂಥಪ್ರಕಟನೆ, ಹಸ್ತಪ್ರತಿಶಾಸ್ತ್ರ ಕುರಿತು ತರಬೇತಿ ಶಿಬಿರ, ವಿಚಾರ ಸಂಕಿರಣ, ಕಮ್ಮಟಗಳು ಪ್ರತಿಷ್ಠಾನದ ಮೂಲಕ ನಡೆಯುವಲ್ಲಿ ಕಾರಣಕರ್ತರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಬಗೆಗಿನ ಪ್ರಾಚೀನ ಗ್ರಂಥ, ಸಂಶೋಧನ ಕೃತಿಗಳ ಪ್ರಕಟನೆಗೆ ಹೆಚ್ಚು ಒತ್ತು ಕೊಟ್ಟದ್ದು ಅವರ ವೈಶಾಲ್ಯತೆಗೆ ಸಾಕ್ಷಿಯಾಗಿದೆ. ತೊರವೆ ರಾಮಾಯಣ, ಧರ್ಮನಾಥ ಪುರಾಣ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ, ಹಳಗನ್ನಡ ನಿಘಂಟು ಕೃತಿಗೆ ಮೈಸೂರು ವಿಶ್ವವಿದ್ಯಾಲಯದ ತೀ.ನಂ.ಶ್ರೀಕಂಠಯ್ಯ ಸ್ಮಾರಕ ಪ್ರಶಸ್ತಿ, ಹರಿಶ್ಚಂದ್ರ ಕಾವ್ಯ, ಚೇರಮಕಾವ್ಯ, ಉದ್ಭಟದೇವ ಚರಿತೆಗಳಿಗೆ ದೇವರಾಜ್ ಬಹದ್ದೂರ್ ಸಾಹಿತ್ಯಕ ಬಹುಮಾನ, ಇವರ ಒಟ್ಟು ಸಾಹಿತ್ಯ ಕೃಷಿಯನ್ನು ಪರಿಗಣಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಒಟ್ಟಿನಲ್ಲಿ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಬಸವಾರಾಧ್ಯರ ಸಾಧನೆಯನ್ನು ಡಾ. ವೈ.ಸಿ. ಭಾನುಮತಿಯವರು ಹೀಗೆ ಗುರುತಿಸಿದ್ದಾರೆ- "ಇವರು ಸಂಪಾದಿಸಿದ ಗ್ರಂಥಗಳ ಪೈಕಿ ಧಾರ್ಮಿಕ ಕಾವ್ಯಗಳಿವೆ, ಶಾಸ್ತ್ರಕೃತಿಗಳಿವೆ, ಐತಿಹಾಸಿಕ ಕಾವ್ಯಗಳಿವೆ, ಸಂಗ್ರಹಗಳಿವೆ. ಪಂಚಾಚಾರ್ಯರಿಗೆ ಸಂಬಂಧಿಸಿದಂತಹ ಉದ್ಗ್ರಂಥಗಳನ್ನು ಸಂಪಾದಿಸಿದ ಕೀರ್ತಿ ಇವರ ಮಡಿಲಿಗಿದೆ. ಇವರ ಕೃತಿಗಳು ಚಂಪೂ, ಷಟ್ಪದಿ, ಸಾಂಗತ್ಯ ಪ್ರಕಾರಗಳಿಗೆ ಸೇರಿದ್ದು, ಗ್ರಂಥಸಂಪಾದನಾ ಶಾಸ್ತ್ರಕ್ಕನುಗುಣವಾಗಿ ಪರಿಷ್ಕಾರಗೊಂಡಿವೆ. ವೈವಿಧ್ಯಮಯ ಗ್ರಂಥಗಳನ್ನು ತಂದರೆಂಬುದು ಇವರಿಗೆ ಮತ್ತಷ್ಟು ಹೆಗ್ಗಳಿಕೆ ನೀಡುವ ಅಂಶವಾಗಿದೆ. ಉತ್ತಮ ಪಾಠಗಳನ್ನು ಕೊಡಬೇಕೆಂಬ ಕಳಕಳಿ ಅವರ ಎಲ್ಲ ಕೃತಿಗಳಲ್ಲಿ ಅನುರಣಿತವಾಗಿದೆ. ಒಟ್ಟಿನಲ್ಲಿ ಪರಿಶ್ರಮ, ಪ್ರಾಮಾಣಿಕತೆಗಳಿಂದ ಕಾರ್ಯನಿರ್ವಹಿಸಿ ವಿದ್ವತ್ತಿನ ಬಲದಿಂದ ಶಾಸ್ತ್ರೀಯವಾಗಿ ಸಂಪಾದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಂಥಸಂಪಾದನೆ ಕ್ಷೇತ್ರದಲ್ಲಿ ವಿಶಿಷ್ಟಸ್ಥಾನ ಪಡೆದಿದ್ದಾರೆ."

ಸಹಾಯಕ ಗ್ರಂಥಗಳು

೧. ಚತುರಾಚಾರ್ಯ ಚಾರಿತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೬

೨. ಬಸವಾರಾಧ್ಯ, ಎನ್. (ಸಂ), ಆರಾಧ್ಯ ಚಾರಿತ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦

೩. ಬಸವಾರಾಧ್ಯ, ಎನ್. (ಸಂ), ಅಬ್ಬಲೂರು ಚರಿತೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩

೪. ವೈ.ಸಿ. ಭಾನುಮತಿ, ಗ್ರಂಥಸಂಪಾದನೆ ವಿವಕ್ಷೆ, ರಾಜ್ ಪ್ರಕಾಶನ, ಮೈಸೂರು, ೨೦೦೩

೫. ಬಸವಾರಾಧ್ಯ, ಎನ್. (ಸಂ). ಹಳಗನ್ನಡ ನಿಘಂಟು, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೭೬

೬. ಎನ್. ಬಸವಾರಾಧ್ಯ, ನಾ. ಗೀತಾಚಾರ್ಯ, ಎನ್.ಎಸ್. ರಾಮಸ್ವಾಮಿ ಅಯ್ಯರ್ (ಸಂ), ಬಸವ ಸಮಿತಿ, ಬೆಂಗಳೂರು, ೧೯೬೯

೭. ಸದಾನಂದ ಕನವಳ್ಳಿ, ವೀರಣ್ಣ ರಾಜೂರು (ಸಂ), ಮಹಾಮಾರ್ಗ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೮

ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯಂ" - ಸಂಪಾದನೆಯ ಪ್ರೌಢಿಮೆ

-ಡಾ. ಕೆಎಸ್. ರತ್ನಮ್ಮ

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾದ ಕನ್ನಡ ಗ್ರಂಥ ಸಂಪಾದನೆ ಒಂದು ಅಧ್ಯಯನದ ಶಿಸ್ತಾಗಿ ಬೆಳೆಯಲು ಮಾರ್ಗ ನಿರ್ಮಿಸಿದ ಹಿರಿಯ ವಿದ್ವಾಂಸರಲ್ಲಿ ಪ್ರೊ. ಎನ್. ಬಸವಾರಾಧ್ಯರು ಪ್ರಮುಖರು. ಹಿರಿಯ ಪೀಳಿಗೆಯ ವಿದ್ವಾಂಸರಾದ ಡಿ.ಎಲ್.ಎನ್.ರಂತಹ ದಿಗ್ಗಜರೊಡನಾಡಿ ಸ್ಫೂರ್ತಿ-ಪ್ರೇರಣೆ ಪಡೆದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಒಂದು ಅಂಗವಾದ ಗ್ರಂಥಸಂಪಾದನ ವಿಭಾಗದ ಉಪನಿರ್ದೇಶಕರೂ ಆದರು. ಇವರ ಅವಧಿಯಲ್ಲಿ ಗ್ರಂಥಸಂಪಾದನಾ ವಿಭಾಗಕ್ಕೆ ಅತ್ಯಂತ ಹುರುಪು-ಹುಮ್ಮಸ್ಸುಗಳನ್ನು ನೀಡಿದರು. ೧೨೫ಕ್ಕೂ ಹೆಚ್ಚು ಕೃತಿಗಳ ಪರಿಷ್ಕರಣಾಕಾರ್ಯ ಆಗ ನಡೆದು ಪ್ರಕಟಗೊಂಡದ್ದು ಒಂದು ದಾಖಲೆಯೇ ಸರಿ. ಸ್ವತಃ ಬಸವಾರಾಧ್ಯರೂ ೩೧ ಕೃತಿಗಳನ್ನು ಸಂಪಾದಿಸಿ, ಪ್ರಕಟಿಸಿ ಇತರರಿಗೂ ಸ್ಫೂರ್ತಿದಾಯಕರಾದರು.

ಪ್ರೊ. ಎನ್. ಬಸವಾರಾಧ್ಯರು ಸಂಪಾದಿಸಿದ ಕೃತಿಗಳಲ್ಲಿ ಒಂದಾದ ರಾಘವಾಂಕ ವಿರಚಿತ 'ಹರಿಶ್ಚಂದ್ರ ಕಾವ್ಯಂ' ಗ್ರಂಥ ಸಂಪಾದನೆಯನ್ನು ಪಂಡಿತ ಎಸ್. ಬಸಪ್ಪನವರೊಡನೆ ಮಾಡಿದ್ದಾರೆ. ಇದು ೧೯೫೫ರಲ್ಲಿ 'ಪ್ರಾಚ್ಯಕಾವ್ಯಮಾಲೆ'ಯಲ್ಲಿ ಪ್ರಕಟವಾಯಿತು. ನಂತರ ೧೯೬೯ರಲ್ಲಿ ಎರಡನೇ ಮುದ್ರಣ ಹಾಗೂ ೧೯೭೫ರಲ್ಲಿ ಮೂರನೇ ಮುದ್ರಣಗೊಂಡಿರುವುದು ಈ ಕೃತಿಯು ಪಡೆದ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಪ್ರಸ್ತುತ ಹರಿಶ್ಚಂದ್ರ ಕಾವ್ಯವನ್ನು ಒಂಬತ್ತು ಪ್ರತಿಗಳ ಆಧಾರದಿಂದ ಪರಿಸ್ಕರಿಸಲಾಗಿದೆ, ರಾ.ಅ.ಇ.ಕ.ಸ.ಬ.ಮ ಮತ್ತು ಹ ಎಂಬ ಸಂಕೇತಾಕ್ಷರಗಳನ್ನು ಒಂಬತ್ತು ಕಾವ್ಯಪ್ರತಿಗಳಿಗೂ ನೀಡಲಾಗಿದೆ. ಈ ಪ್ರತಿಗಳ ಸ್ವರೂಪವನ್ನು ಕುರಿತ ಸಂಕ್ಷಿಪ್ತ ವಿವರಣೆಯನ್ನು ಪೀಠಿಕಾಭಾಗದ ಕಥೆಯಲ್ಲಿ ನಿರೂಪಿಸಲಾಗಿದೆ.

ಈ ಕೃತಿಗೆ ಸಂಪಾದಕರು ಬರೆದಿರುವ ಪೀಠಿಕೆ ಸುದೀರ್ಘವಾಗಿದೆ. ನಲವತ್ತೈದು ಪುಟಗಳ ಪೀಠಿಕೆಯಲ್ಲಿ ಕವಿಯ ಜೀವನ ಚರಿತ್ರೆ, ಕಾಲವಿಚಾರ, ಹರಿಶ್ಚಂದ್ರನ ಕಥೆಯ ಪೂರ್ವ ವೃತ್ತಾಂತ, ಹರಿಶ್ಚಂದ್ರನ ಕಥೆಯ ಪೂರ್ವವೃತ್ತಾಂತ ಪುರಾಣಗಳಲ್ಲಿ ಕಂಡುಬರುವ ಕಥಾವ್ಯತ್ಯಾಸಗಳು, ಹರಿಶ್ಚಂದ್ರನ ಕಥೆ ಬರುವ ಕನ್ನಡ ಗ್ರಂಥಗಳ ಪಟ್ಟಿ, ಕಾವ್ಯವಿಮರ್ಶೆ, ಹರಿಶ್ಚಂದ್ರ ಕಾವ್ಯದಲ್ಲಿ ಪ್ರಯೋಗವಾಗಿರುವ ಶಬ್ದರೂಪಗಳು, ಪರಿಷ್ಕರಣಕ್ಕೆ ಉಪಯೋಗಿಸಿಕೊಂಡಿರುವ ಪ್ರತಿಗಳ ಸಂಕ್ಷಿಪ್ತ ಚರಿತ್ರೆ, ಸ್ಥಲಸಂಧಿ, ಪರಿಶಿಷ್ಟ, ಅರ್ಥಕೋಶ-ಹೀಗೆ ವಿವಿಧ ಬಗೆಯ ಶೀರ್ಷಿಕೆಗಳಲ್ಲಿ ವಿಪುಲ ಮಾಹಿತಿಗಳಿಂದ ಮೌಲಿಕವಾದ ವಿವರಣೆಯನ್ನು ಒಳಗೊಂಡಿದೆ. ಈ ಪೀಠಿಕೆಯು ಸಂಪಾದಕರು ಕೈಗೊಂಡ ಪರಿಷ್ಕರಣಾ ಕಾವ್ಯದಲ್ಲಿನ ಅಧ್ಯಯನ, ವಿವೇಚನೆ, ಪಾಠಾಂತರ ನಿರ್ಧರಣೆಗಳಲ್ಲಿನ ಪರಿಶ್ರಮದ ಕೈಗನ್ನಡಿಯಂತಿದೆ. ವಿವರಗಳು ಸಾದ್ಯಂತವಾಗಿ ಸಂಪಾದನಕಾರರು ಅನುಸರಿಸಿರುವ ವೈಜ್ಞಾನಿಕ ವಿಧಾನಕ್ಕೂ ಉತ್ತಮ ನಿದರ್ಶನವಾಗಿವೆ.

ಕವಿಯ ಜೀವನ ಚರಿತ್ರೆಯನ್ನು ಹರಿಶ್ಚಂದ್ರ ಕಾವ್ಯದಿಂದ ಮಾತ್ರವೇ ಅಲ್ಲದೆ ಇತರ ವೀರಶೈವ ಕಾವ್ಯಗಳ ಆಕರಗಳಿಂದ ಸಂಗ್ರಹಿಸಿ ನಿರೂಪಿಸಲಾಗಿದೆ. ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ, ಸಿದ್ಧನಂಜೇಶನ ರಾಘವಾಂಕ ಚಾರಿತ್ರ್ಯ, ಗುರುರಾಜ ಚಾರಿತ್ರ್ಯ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ, ಪದ್ಮಣಾಂಕನ ಪದ್ಮರಾಜ ಪುರಾಣ -ಮುಂತಾದ ಕೃತಿಗಳ ಆಂತರಿಕ-ಬಾಹ್ಯ ಪ್ರಮಾಣಗಳ ಆಧಾರದಿಂದ ರಾಘವಾಂಕನ ಜೀವನ ಚರಿತ್ರೆಯನ್ನು, ಕವಿಯು ವೀರಶೈವನೆಂಬುದನ್ನು ಸಾಬೀತುಪಡಿಸಲಾಗಿದೆ.

ರಾಘವಾಂಕ ಕವಿಯ ಕಾಲ ವಿಚಾರದಲ್ಲಿ ಹಿರಿಯ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿ ಭಿನ್ನಾಭಿಪ್ರಾಯಗಳಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ರಾಘವಾಂಕನ ಸಮಕಾಲೀನ ಕವಿಗಳಾದ ಹರಿಹರ, ಕೆರೆಯ ಪದ್ಮರಸರನ್ನು ಗಮನಿಸಿದ್ದಾರೆ. ವಿದ್ವಾಂಸರ ಬಹುಮತದ ಕಾಲನಿರ್ಣಯದ ಆಧಾರದಿಂದ ಈತ ಕ್ರಿ.ಶ. ೧೧೯೫ ರಿಂದ ೧೨೦೦ರವರೆಗೆ ಜೀವಿಸಿದ್ದಿರಬಹುದೆಂಬುದಕ್ಕೆ ಯಾರ ವಿರೋಧವೂ ಇಲ್ಲ ಎಂಬ ಸರ್ವಸಮ್ಮತ ನಿರ್ಧಾರವನ್ನು ಕೈಗೊಂಡಿರುವುದು ಗಮನಾರ್ಹ. ಇದರ ಜೊತೆಗೆ ಐತಿಹಾಸಿಕ ಆಧಾರಗಳನ್ನು ಕೂಡಾ ಪರಿಶೀಲಿಸಿರುವುದು ಸಂಪಾದನಾಕಾರರ ಸಮಗ್ರ ದೃಷ್ಟಿಕೋನಕ್ಕೆ ಇಂಬು ನೀಡಿದೆ. ಪಂಪಾಪುರದ ದೇವರಾಜ, ಓರಂಗಲ್ಲನ ರುದ್ರ ಪ್ರತಾಪ, ಹೊಯ್ಸಳ ನರಸಿಂಹಬಲ್ಲಾಳ ಎಂಬ ಸಮಕಾಲೀನ ರಾಜರ ಅವಧಿಯಲ್ಲಿದ್ದನೆಂದು ಸಿದ್ಧಪಡಿಸಲಾಗಿದೆ. ಒಟ್ಟಾರೆ ಕವಿ ರಾಘವಾಂಕ ಕ್ರಿ.ಶ. ೧೧೨೫ರ ಸಮೀಪದಲ್ಲಿ ಜನ್ಮವೆತ್ತಿ, ಕಾವ್ಯರಚನೆಮಾಡಿ ಕ್ರಿ.ಶ. ೧೨೦೦ರವರೆಗೂ ಜೀವಿಸಿದ್ದಿರಬಹುದೆಂಬ ಸಂಪಾದಕರ ತೀರ್ಮಾನ ವಿವಾದಾತೀತ.

ರಾಘವಾಂಕನ ಹರಿಶ್ಚಂದ್ರ ಕಾವ್ಯ ಜನಪ್ರಿಯವಾದ ಕಾವ್ಯ. ಇದರ ಕಥಾವಸ್ತು ಹಾಗೂ ಮೌಲ್ಯಗಳು ಪ್ರಸಿದ್ಧಿ ಪಡೆದಿವೆ. ಸಂಪಾದಕರಾಗಿ ಬಸವಾರಾಧ್ಯರು ಹರಿಶ್ಚಂದ್ರನ ಕಥೆಯ ಪೂರ್ವವೃತ್ತಾಂತವನ್ನು ಚೂಲಮೂಲಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಇದು ಅವರ ಅಧ್ಯಯನಶೀಲತೆಗೂ ಪ್ರಗಲ್ಭ ಪಾಂಡಿತ್ಯಕ್ಕೂ ನಿದರ್ಶನವೂ ಆಗಿದೆ. ಹರಿಶ್ಚಂದ್ರನ ಕಥೆಗೆ ಸಂಬಂಧಿಸಿದ ಪೂರ್ವವೃತ್ತಾಂತ ಹಾಗೂ ಹರಿಶ್ಚಂದ್ರನ ಕಥೆ ಅಡಗಿರುವ ಪುರಾಣೇತಿಹಾಸಗಳನ್ನು ಅವುಗಳ ಅಧ್ಯಾಯ ಸಹಿತವಾಗಿ ಅಡಿಟಿಪ್ಪಣಿಗಳಲ್ಲಿ ಉಲ್ಲೇಖಿಸಿರುವಲ್ಲಿ ವ್ಯಕ್ತವಾಗುತ್ತದೆ. ಆದುದರಿಂದಲೇ ವೈದಿಕ, ಪೌರಾಣಿಕ ಕಾವ್ಯಗ್ರಂಥಗಳಲ್ಲಿ ಕ್ರಮವಾಗಿ ಯಾಜ್ಞಿಕ, ಐತಿಹಾಸಿಕ, ಧಾರ್ಮಿಕಾಂಶಗಳು ಮುಪ್ಪುರಿಗೊಂಡಿವೆ ಎಂದು ಆಧಾರ ಸಹಿತವಾಗಿ ಹೇಳುವ ನಿರ್ದುಷ್ಟತೆ ಗ್ರಂಥ ಸಂಪಾದನಕಾರರ ಶ್ರಮದ ಫಲದಿಂದ ಹೊಮ್ಮಿದ ಅಭಿಪ್ರಾಯವೇ ಆಗಿದೆ. ತಮ್ಮ ಅಧ್ಯಯನದ ಪರಿಶ್ರಮದಿಂದ ಕಲೆಹಾಕದ "ಈ ಅಂಶಗಳೆಲ್ಲ ಸಮಗ್ರವಾಗಿ ವಿಸ್ತಾರವಾಗಿ ಒಂದೆಡೆ ಎಲ್ಲಿಯೂ ದೊರೆಯುವುದಿಲ್ಲ" (ಹರಿಶ್ಚಂದ್ರ ಕಾವ್ಯಂ-ಪು. ೮) ಎಂದು ಹೇಳುವ ಮೂಲಕ ವಿಷಯಗಳ ಅಧಿಕೃತತೆಯನ್ನು ಪ್ರಮಾಣೀಕರಿಸಿರುವುದು ಈ ಸಂಪಾದನೆಯ ವೈಶಿಷ್ಟ್ಯವೇ ಆಗಿದೆ.

ತ್ರಿಶಂಕುವಿನ ಮಗನಾದ ಸತ್ಯಹರಿಶ್ಚಂದ್ರ, ಅವನ ಮಗ ರೋಹಿತ, ಈ ರೋಹಿತ ಹುಟ್ಟಿ ಬೆಳೆದ ಕಥಾಭಾಗವನ್ನು ವೈದಿಕ ಗ್ರಂಥಗಳಾದ ಬ್ರಹ್ಮಮಹಾಪುರಾಣ, ದೇವಿಭಾಗವತ, ಶ್ರೀಮದ್ಭಾಗವತ ಮೊದಲಾದ ಪುರಾಣಗಳಲ್ಲಿ ತಿಳಿಸಿರುವುದನ್ನು ಪ್ರಸ್ತಾಪಿಸಿದ್ದಾರೆ. ವೈದಿಕ ಐತ್ತರೇಯ ಬ್ರಾಹ್ಮಣವೇ ಮೊಟ್ಟಮೊದಲಿಗೆ ಈ ಕಥಾಭಾಗವನ್ನು ಒಳಗೊಂಡಿದೆ. ಆದ್ದರಿಂದ ಅಲ್ಲಿಯ ಕಥಾಭಾಗವನ್ನೇ ಸಂಗ್ರಹಿಸಿಕೊಟ್ಟಿರುತ್ತಾರೆ.

ಹರಿಶ್ಚಂದ್ರನ ಕಥೆಯ ಪೂರ್ವ ವೃತ್ತಾಂತ ಸಂಗ್ರಹದ ಒಂದನೇ ಭಾಗದಲ್ಲಿ ಹರಿವಂಶ ಹಾಗೂ ಎಲ್ಲಾ ಪುರಾಣಗಳಲ್ಲಿನ (ಮಾರ್ಕಂಡೇಯ ಪುರಾಣಹೊರತುಪಡಿಸಿ) ಸಂಕ್ಷಿಪ್ತ ಕಥೆಯಿದೆ. ಎರಡನೆಯ ಭಾಗದಲ್ಲಿ ದೇವಿಭಾಗವತ, ಶ್ರೀಮದ್ಭಾಗವತ, ಬ್ರಹ್ಮ ಪುರಾಣಗಳ ಕಥಾ ಸಾರಾಂಶವನ್ನು ಸ್ಕಾಂದ ಪುರಾಣದಲ್ಲಿ ಬಂದಿರುವ ವ್ಯತ್ಯಾಸಗೊಂಡ ಭಾಗವನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ದೇವಿಭಾಗವತ ಪುರಾಣದಲ್ಲಿ ಮಾತ್ರ ಹರಿಶ್ಚಂದ್ರನ ಸಮಗ್ರ ಕಥೆ ಇರುವುದನ್ನು ಗಮನಿಸಿ ಸ್ಕಾಂದಪುರಾಣದ ಕಥಾನಕ ಕೊಟ್ಟಿದ್ದಾರೆ. ಬ್ರಹ್ಮಮಹಾಪುರಾಣ, ದೇವಿಭಾಗವತದ ಕಥಾನಕ ನೀಡಿರುವುದರ ಜೊತೆಗೆ ಮಾರ್ಕಂಡೇಯಪುರಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯಗಳಿಗಿರುವ ಹೋಲಿಕೆ, ಅಲ್ಪಸ್ವಲ್ಪ ವ್ಯತ್ಯಾಸಗಳು, ದೇವಿಭಾಗವತ, ಮಾರ್ಕಂಡೇಯಪುರಾಣ, ಹರಿಶ್ಚಂದ್ರ ಕಾವ್ಯದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ತೌಲನಿಕವಾಗಿ ವಿವರಿಸಲಾಗಿದೆ.

ಗ್ರಂಥ ಸಂಪಾದನಾಕಾರರಿಗೆ 'ಹರಿಶ್ಚಂದ್ರ ಕಾವ್ಯಕ್ಕೆ ಯಾವುದೊಂದು ಪುರಾಣವೂ ಸಂಪೂರ್ಣವಾಗಿ ಆಧಾರವಾಗಲಾರದು' ಎಂಬ ಅಭಿಪ್ರಾಯ ಅವರ ಕೂಲಂಕಷ ಪರಿಣಿತಮತಿಗೆ ಮೂಡಿರುವುದು ಸಹಜವೇ ಆಗಿದೆ. ರಾಘವಾಂಕನು ವೇದ,ಪುರಾಣೇತಿಹಾಸ, ನಾಟಕಾದಿಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಸಂಸ್ಕೃತ ಸಾಹಿತ್ಯ ಭಂಡಾರದ ಅನರ್ಘಭಾಗವನ್ನೂ ಅಧ್ಯಯನಮಾಡಿ, ತಾನೇ ಸ್ವತಂತ್ರ ತೀರ್ಮಾನಗಳಿಂದ ಕಾವ್ಯ ರಚಿಸಿರುವನೆಂದು ನಿರ್ಧರಿಸಿರುವುದು ವಿಸ್ತೃತವೂ, ಆಳವೂ ಆದ ಅಧ್ಯಯನದ, ಶೋಧನದ ಫಲವಾದ ಅಭಿಪ್ರಾಯವೇ ಆಗಿದೆ.

ಬಸವಾರಾಧ್ಯರು ಗ್ರಂಥ ಸಂಪಾದನೆಗೆ ಸಂಬಂಧಿಸಿದ ಕೃತಿಗಳ ಅಗತ್ಯ ಮಾಹಿತಿಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಅದರ ಆಳ ಅಗಲಗಳನ್ನು ತಲಸ್ಪರ್ಶಿಯಾಗಿಯೇ ದರ್ಶಿಸಿದ್ದಾರೆ. ಸ್ಕಾಂದಪುರಾಣದಲ್ಲಿ ಅಂತರ್ಗತವಾದ 'ಸಂಸ್ಕೃತ ಹರಿಶ್ಚಂದ್ರೋಪಾಖ್ಯಾನವು' ಸಂಸ್ಕೃತಭಾಷೆ ಹಾಗೂ ತೆಲುಗು ಲಿಪಿಯಲ್ಲಿ ಇರುವುದನ್ನು ಗುರುತಿಸುವುದರ ಜೊತೆಗೆ ಈ ಉಪಾಖ್ಯಾನವು ಸ್ಕಾಂದಪುರಾಣದಲ್ಲಿ ಇಲ್ಲದ್ದರಿಂದ ಅದರ ಕಥಾಭಾಗವನ್ನೂ ಓದುಗರಿಗಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ಈ ಕಥೆ ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನೇ ಮೂಲವಾಗಿಟ್ಟುಕೊಂಡಂತಿದೆ ಎಂಬ ಊಹೆಯನ್ನು ಮಾಡಿದ್ದಾರೆ. ಈ ಕಾವ್ಯದಲ್ಲಿ ಅತಿಶಯೋಕ್ತಿಗಳಿರುವುದರಿಂದ ಇತ್ತೀಚಿನದೆಂದು ಊಹಿಸಲೂ ಅವಕಾಶವಿದೆ ಎಂಬ ಅಭಿಪ್ರಾಯವಿತ್ತಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ರಾಘವಾಂಕನಿಗಿಂತ ಮೊದಲು ಆದಿಪಂಪನ ಭಾರತದಲ್ಲಿ ಈ ಕಥೆ ಆನುಷಂಗಿಕವಾಗಿ ಬಂದಿರುವುದನ್ನು ಪ್ರಸ್ತಾಪಿಸಿದ್ದಾರೆ. ಸಂಸ್ಕೃತ ಸಾಹಿತ್ಯದಲ್ಲಿ ೧೦ನೇ ಶತಮಾನದ ಕ್ಷೇಮೀಶ್ವರನ 'ಚಂಡಕೌಶಿಕ ನಾಟಕವೂ' ೧೨ನೇ ಶತಮಾನದ, ಹೇಮಿಚಂದ್ರನ ಶಿಷ್ಯ ರಾಮಚಂದ್ರಸೂರಿಯ 'ಸತ್ಯಹರಿಶ್ಚಂದ್ರ ನಾಟಕವೂ' ಕಂಡುಬರುತ್ತದೆ ಎಂದೂ, ನಂತರದಲ್ಲಿ 'ಬೊಂಬೆಯಲಕ್ಕ, ಹಲಗ ಎಂಬ ಇಬ್ಬರು ಹರಿಶ್ಚಂದ್ರ ಕಾವ್ಯದ ಪ್ರತಿಚ್ಛಾಯೆ ಎಂದಿರುವುದು ಬಸವಾರಾಧ್ಯರು ನಡೆಸಿದ ಸಾಹಿತ್ಯಿಕ ಅಧ್ಯಯನದ ಸಮಗ್ರ ವಿವೇಚನೆಗೆ ಸಾಕ್ಷಿಯಾಗಿದೆ. ಹರಿಶ್ಚಂದ್ರನ ಕಥೆ ಬರುವ ಕನ್ನಡ ಗ್ರಂಥಗಳ ಪಟ್ಟಿಯನ್ನು ಕೊಟ್ಟಿರುವುದಲ್ಲದೆ ಗುಜರಾತಿ, ಆಂಗ್ಲಭಾಷೆಯಲ್ಲಿನ ಕೃತಿಗಳ ಪಟ್ಟಿಯನ್ನು ನೀಡಿದ್ದಾರೆ. ಹೀಗೆ ಕೃತಿಯೊಂದರ ಪಾಠಾಂತರ ಪರಿಷ್ಕರಣೆಯಷ್ಟೆ ಗ್ರಂಥ ಸಂಪಾದನೆ ಅಲ್ಲ ಆ ಕೃತಿಗೆ ಸಂಬಂಧಿಸಿದ ಸಾಹಿತ್ಯ ಯಾವ ಯಾವ ಮೂಲಗಳಲ್ಲಿ, ಭಾಷೆಗಳಲ್ಲಿ ಇದೆ ಎಂಬುದನ್ನು ಶೋಧಿಸುವ ಸಂಶೋಧಕ ದೃಷ್ಟಿಯೂ ಇರಬೇಕಾದುದು ಅಗತ್ಯ ಎಂಬುದಕ್ಕೆ ಮಾದರಿಯಾಗಿದೆ. ಈ

ಕೃತಿಯ ಸಂಪಾದನಾ ಕಾರ್ಯ ಇಂತಹ ಅಧ್ಯಯನ, ಸಂಪಾದನಗಳಿಂದ 'ಹರಿಶ್ಚಂದ್ರ ಕಾವ್ಯದ ತೌಲನಿಕ ಅಧ್ಯಯನಕ್ಕೆ ಬೇಕಾದ ಆಕರ ಸಾಮಗ್ರಿಯನ್ನು ಒದಗಿಸಿರುವುದು ಮುಂದಿನ ಅಧ್ಯಯನಗಳಿಗೆ ಹೆಚ್ಚು ಪ್ರಯೋಜನಕಾರಿ.

'ಹರಿಶ್ಚಂದ್ರ ಕಾವ್ಯದ ಕಾವ್ಯ ವಿಮರ್ಶೆ' ಕೂಡ ಸಂಪಾದಕರ ಮೌಲಿಕ ವಿಮರ್ಶಾ ಸ್ವರೂಪದ ಪ್ರಾತಿನಿಧಿಕ ಭಾಗ ಎನ್ನಬಹುದು. "ಹರಿಶ್ಚಂದ್ರ ಕಾವ್ಯ ಒಂದು ಉತ್ತಮ ಕಲಾಕೃತಿ, ಇದು ಕಾವ್ಯವೂ ಹೌದು, ನಾಟಕವೂ ಹೌದು. ಇದರಲ್ಲಿ ಮೈವೆತ್ತಿರುವ ಪಾತ್ರಗಳು ಜೀವಂತವಾಗಿವೆ... ಆದರ್ಶಪ್ರಾಯವಾಗಿವೆ" (ಪು.೩೩) ಎಂಬ ಸಂಪಾದಕರ ಅಭಿಪ್ರಾಯದ ಬಗ್ಗೆ ಎರಡು ಮಾತಿಲ್ಲ. ಹರಿಶ್ಚಂದ್ರನ ಮಂತ್ರಿ ಸತ್ಯಕೀರ್ತಿಯ ಅದ್ವಿತಿಯ ಸ್ವಾಮಿನಿಷ್ಠೆಯನ್ನು ಗುರುತಿಸಿ "ತಾನು ಮಂತ್ರಿಯಾಗಿಯೇ ರಾಜ್ಯದಲ್ಲಿ ಉಳಿಯಬಹುದಾಗಿದ್ದರೂ ಹಾಗೆ ಮಾಡದೆ ತನ್ನ ಸ್ವಾಮಿಯನ್ನೇ ಹಿಂಬಾಲಿಸುತ್ತಾನೆ. ಆದರ್ಶ ಚಕ್ರವರ್ತಿಯಾದ ಹರಿಶ್ಚಂದ್ರನಂತೆ ಸತ್ಯಕೀರ್ತಿ ಆದರ್ಶಮಂತ್ರಿಯಾಗಿದ್ದಾನೆ" (ಪು. ೩೮) ಎಂಬಲ್ಲಿ ಪಾತ್ರದ ಗುಣಗೌರವವನ್ನು ಗುರುತಿಸಲಾಗಿದೆ.

ಹರಿಶ್ಚಂದ್ರ ಕಾವ್ಯದಲ್ಲಿ ಛಂದಸ್ಸಿನ ಬಗ್ಗೆ ನಿರ್ಣಯಿಸುವಾಗ ಎಷ್ಟೋ ವೇಳೆ ಜಟಿಲತೆ ಗೊಂದಲಗಳುಂಟಾದಾಗ ಹಿರಿಯ ವಿದ್ವಾಂಸರ, ವಿಮರ್ಶಕರ ಅಭಿಪ್ರಾಯಗಳನ್ನು ಗಮನಿಸಿ ಅದನ್ನು ಉಲ್ಲೇಖಿಸಿರುವುದು ಅವರು ವಿದ್ವಾಂಸರಿಗೆ ನೀಡಿದ ಗೌರವವೇ ಸರಿ. ಹರಿಶ್ಚಂದ್ರ ಕಾವ್ಯದಲ್ಲಿ ಪ್ರಯೋಗವಾಗಿರುವ ಶಬ್ದರೂಪಗಳ ಔಚಿತ್ಯಾನೌಚಿತ್ಯಗಳ ಬಗ್ಗೆ, ತಾವು ಉಳಿಸಿಕೊಂಡ ರೂಪದ ಬಗ್ಗೆ ಛಂದಸ್ಸಿನ ದೃಷ್ಟಿಯಿಂದ ವಿವೇಚಿಸಿದ್ದಾರೆ. ಹಾಗೆಯೇ ಪ್ರತಿಗಳಲ್ಲಿ ಕಂಡುಬಂದಂತೆ ಇರಿಸಿರುವ ಬಗ್ಗೆ ಸಹಾ ಹೇಳುವಲ್ಲಿ ಪ್ರಾಮಾಣಿಕತೆ, ಪ್ರಾಂಜಲತೆಯಿದೆ.

ಪ್ರೊ. ಎನ್. ಬಸವಾರಾಧ್ಯರು ಹರಿಶ್ಚಂದ್ರ ಕಾವ್ಯವನ್ನು ಒಂಬತ್ತು ಪ್ರತಿಗಳ ಆಧಾರದಿಂದ ಪರಿಷ್ಕರಿಸಿರುವಲ್ಲಿ ಅವರ ಸಾಹಸ, ತಾಳ್ಮೆ, ಸಾವಧಾನ, ವಿಚಕ್ಷಣೆಗಳು ಗಮನಾರ್ಹ. ಮೂಲಪ್ರತಿಗಳ ಸ್ವರೂಪವನ್ನು, ಪಾಠಾಂತರಗಳನ್ನು ನಿರ್ಧರಿಸುವಲ್ಲಿ ಅನುಸರಿಸಿದ ವಿಧಾನವನ್ನು ಕೊಡುವ ಜೊತೆಗೆ ಕೆಲವೆಡೆ, ಸಂಗ್ರಹದ ಪಾಠಾಂತರವನ್ನು ಉಪಯೋಗಿಸಿಕೊಂಡಿದ್ದೇನೆ ಎಂದು ತಿಳಿಸಿರುವ ನಿಜದ ನಿಲುವು ಅನುಕರಣೀಯ. 'ಒಂಬತ್ತು ಪ್ರತಿಗಳಲ್ಲಿ ಯಾವುದೂ ಶ್ರೇಷ್ಠವಾದುದಲ್ಲ'. ಆದ್ದರಿಂದ ತಾವು ಯಾವ ಪ್ರತಿಯ ಪಾಠವನ್ನಾಗಲೀ, ಗ್ರಂಥದ ಮೂಲಪಾಠವನ್ನಾಗಲೀ ಸ್ವೀಕರಿಸದೆ, ಸಂದರ್ಭಾನುಸಾರ ಆಯಾ ಪ್ರತಿಗಳ ಪಾಠವನ್ನು ಬಳಸಿಕೊಂಡು ಉಳಿದ ಪ್ರತಿಗಳ ಪಾಠವನ್ನು ಅಡಿಟಿಪ್ಪಣಿಗಳಲ್ಲಿಯೂ ಸಂಪಾದಕರು ನೀಡಿದ ಪಾಠವು ಚೌಕ ಕಂಸದಲ್ಲಿ ಉಪಯೋಗಿಸಿದ್ದಾರೆ. ಪದ್ಯದ ಅರ್ಥಸ್ಪಷ್ಟತೆ ಇಲ್ಲದೆಡೆ, ಛಂದಸ್ಸುಗಳಿಗೆ ಭಂಗಬಂದಿರುವುದನ್ನು ಸೂಚಿಸುವಲ್ಲಿ ಸಂಪಾದನಕಾರರ ಮೂಲನಿಷ್ಠೆ, ಕೃತಿಕಾರನ ಆಶಯ ಅಥವಾ ಲಭ್ಯ ಪಾಠಗಳನ್ನು ಉಳಿಸಿಕೊಳ್ಳುವ ಪರಿಯಲ್ಲಿ ಸಹೃದಯ ದೃಷ್ಟಿಯಿದೆ. ಕಾವ್ಯದ ವಿಪುಲ ಪಾಠಾಂತರಗಳನ್ನು ನಿರ್ಧರಿಸುವಾಗ ಹಿರಿಯ ವಿದ್ವಾಂಸರಾದ ಡಿ.ಎಲ್.ಎನ್. ರವರು ಓದಿ ಸಮ್ಮತಿ ನೀಡಿದ ನಂತರವೇ ಪ್ರಕಟಿಸುವಲ್ಲಿ ತಮ್ಮ ಸಂಪಾದನೆ ಸಮರ್ಪಕವಾಗಿದ್ದು ಶುದ್ಧವಾಗಿರಬೇಕೆಂದು ಅಪಾರ ಕಾಳಜಿ ಹಿರಿದಾದುದು.

ಸ್ಥಲ-ಸಂಧಿ, ಪದ್ಯಸಂಖ್ಯೆ ನಿರ್ಣಯಗಳಲ್ಲಿ ಬಸವಾರಾಧ್ಯರು ಬಹುಪ್ರತಿಗಳಲ್ಲಿ ಬಂದಿರುವ ಕ್ರಮವನ್ನು ಅನುಸರಿಸಿರುವುದನ್ನು ತಿಳಿಸಿದ್ದಾರೆ. ಪರಿಶಿಷ್ಟದಲ್ಲಿ ಹೆಚ್ಚಿನ ಪ್ರತಿಗಳ ಕ್ರಮದಲ್ಲಿ ಸ್ಥಲ ಅಥವಾ ಸಂಧಿಗಳ ಕ್ರಮದಲ್ಲಿ ಕೊಟ್ಟಿರುತ್ತಾರೆ. ಪರಿಶಿಷ್ಟದಲ್ಲಿರುವ ಪದ್ಯಗಳು ಮತ್ತಾವ ಪ್ರತಿಗಳಲ್ಲಿವೆ ಎಂಬುದನ್ನು ಆ ಪದ್ಯದ ಕೆಳಗಡೆಯ ಕಂಸದಲ್ಲಿ ಕೊಡಲಾಗಿದೆ. ಪದ್ಯಗಳಲ್ಲಿ ಪ್ರಾಸ, ಛಂದೋಭಂಗಗಳನ್ನು ಸರಿಪಡಿಸದೆ ಪ್ರತಿಗಳಲ್ಲಿದ್ದಂತಯೇ ಇಡಲಾಗಿದೆ. ಇದರಲ್ಲಿ ತಮ್ಮ ಪರಿಷ್ಕರಣವೇ ಅಂತಿಮವಲ್ಲ' ಎಂಬ ವಿನಯದ ದ್ಯೋತಕವಾಗಿದೆ, ಮುಂದಿನವರಿಗೆ ಸವಾಲಾಗಿಯೂ ಇದೆ. ಒಟ್ಟಾರೆ ಪೀಠಿಕಾ ಭಾಗವು ಅಪಾರ ಮಾಹಿತಿಗಳ ಕೋಶವಾಗಿದೆ ಎಂದರೆ ಅತಿಶಯೋಕ್ತಿಯೇನಲ್ಲ.

ಒಂಬತ್ತು ಹಸ್ತಪ್ರತಿಗಳ ಆಧಾರದಿಂದ ನಡೆಸಿದ 'ಹರಿಶ್ಚಂದ್ರ ಕಾವ್ಯ'ದ ಪಾಠ ಪರಿಷ್ಕರಣವನ್ನು ಅತ್ಯಂತ ಸಮರ್ಪಕವಾಗಿ ನಡೆಸಲಾಗಿದೆ. ಈ ಬಗ್ಗೆ ಒಂದೆರಡು ಪಾಠ ಪರಿಷ್ಕರಣಗಳನ್ನು ಹೀಗೆ ಗಮನಿಸಬಹುದಾಗಿದೆ.

ರೋಗಿ ಹಳಿದೊಡೆ ಹಾಲು "ಹುಳಿ"ಯಪ್ಪುದೇ ಹಗಲ
ಗೂಗೆ "ಕಾಣ"ದೊಡೆ ರವಿ ಕಂದುವನೆ ಕಂಗುರುಡ
ನೇಗೈ'ದುವುಂ ಕಾಣದೊಡೆ' ಮುಕುರ ಕೆಡುವುದೆ ದುರ್ಜನರು ಮೆಲ್ಲಂ (ಪು. ೧೦)

ಈ ಪದ್ಯದಲ್ಲಿ 'ಕ' ಪ್ರತಿಯಲ್ಲಿ 'ಕಹಿ' ಎಂಬ ಪಾಠಾಂತರವಿದೆ. ಇಲ್ಲಿ ವಾಕ್ಯಾರ್ಥದ ಔಚಿತ್ಯವನ್ನು ಪರಿಗಣಿಸಿ 'ಹುಳಿ' ಎಂಬ ಪಾಠವನ್ನು ಉಳಿಸಿಕೊಂಡಿದ್ದಾರೆ. ಅದೇ ರೀತಿ, 'ನೋಡ' ಎಂಬ ಪಾಠಾಂತರ (ರಾ, ಗ, ಚ) ಪ್ರತಿಗಳಲ್ಲಿದ್ದು, ಗೂಗೆಯು ನೋಡುವುದಕ್ಕಿಂತ 'ಕಾಣ' ಎಂಬುದು ಅರ್ಥವಂತಿಕೆ ದೃಷ್ಟಿಯಿಂದ ಉಚಿತವೆನಿಸುತ್ತದೆ. 'ರಾ' ಪ್ರತಿಯಲ್ಲಿ 'ದು ಕಾಣದಿರ್ದೊಡೆ' ಎಂಬ ಪಾಠಾಂತರವಿದ್ದರೂ 'ಕಂಗುರುಡನೇ-ಗೈದುವುಂ ಕಾಣದೊಡೆ' ಎಂಬ ಪಾಠಾಂತರ ಉಳಿಸಿಕೊಂಡಿರುವುದು ಸಂಪಾದಕರ ಔಚಿತ್ಯ ಪ್ರಜ್ಞೆ, ಪಾಠ ನಿರ್ಣಯದಲ್ಲಿ ಕವಿಯ ಭಾವಗ್ರಹಿಕೆಗೆ ಆದ್ಯತೆ ನೀಡಿರುವುದು ಸುಸ್ಪಷ್ಟ.

ಕಾವ್ಯದ ಕಡೆಯಲ್ಲಿ ವರ್ಣಮಾಲೆಯ ಪ್ರಕಾರ ಶಬ್ದಕೋಶ ನೀಡಿರುವುದು ಅರ್ಥವನ್ನರಿಯಲು ಅವಕಾಶ ನೀಡಿದೆ. ಪದ್ಯಗಳ ಅಕಾರಾದಿ ಸೂಚನೆ, ಸಂಪಾದನ ಕಾರ್ಯದ ವೈಜ್ಞಾನಿಕ ವ್ಯಾಪ್ತಿಗೆ ಸಹಾಯಕವೆಂಬುದನ್ನು ದೃಢಪಡಿಸಿದಂತಿದೆ. ಇದಲ್ಲದೆ ಈ ಸಂಪಾದನಾ ಕಾರ್ಯದಲ್ಲಿ ಅಧ್ಯಯನಕ್ಕೆ ಬಳಸಿದ ಕನ್ನಡ, ಆಂಗ್ಲ, ತೆಲುಗು ಕೃತಿಗಳ ಗ್ರಂಥ ಋಣವನ್ನು ಪಟ್ಟಿ ಮಾಡಿ ತಿಳಿಸಲಾಗಿದೆ.

ಒಟ್ಟಾರೆ 'ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯಂ' ಕೃತಿಯ ಸಂಪಾದನೆಯಲ್ಲಿ ಶಾಸ್ತ್ರೀಯ ಸಂಪಾದನೆಯ ರೀತಿಯನ್ನು ಸಮರ್ಥವಾಗಿ ಅನುಸರಿಸಲಾಗಿದೆ. ಪಾಠಾಂತರ ನಿರ್ಣಯ, ಇತ್ಯಾದಿಗಳಲ್ಲಿ ಅಧ್ಯಯನದ ಪ್ರಾಮಾಣಿಕತೆ, ನಿಷ್ಠೆಯ ದುಡಿಮೆಯು ವಿದ್ವತ್ತಿನ ಕ್ಷೇತ್ರದಲ್ಲಿ ಅತ್ಯಗತ್ಯ ಎಂಬುದನ್ನು ದೃಢಪಡಿಸಿದ್ದಾರೆ. 'ಹರಿಶ್ಚಂದ್ರ ಕಾವ್ಯ'ದ ಜನಪ್ರಿಯತೆಗೆ ಕಾರಣರಾಗಿ, ಸಹೃದಯ ಓದುಗರಿಗೆ , ಉತ್ತಮ ಪ್ರಾಚೀನ ಕೃತಿಯೊಂದನ್ನು ಸಿದ್ಧಪಡಿಸಿಕೊಟ್ಟು. ಪ್ರೊ. ಎನ್. ಬಸವಾರಾಧ್ಯರು ಸದಾ ಆದರಣೀಯರು. ಗ್ರಂಥಸಂಪಾದನಾ ಕ್ಷೇತ್ರಕ್ಕೆ ಅವರ ಕೊಡುಗೆ ಅಪೂರ್ವ. ಐವತ್ತು ವರ್ಷಗಳ ಸುದೀರ್ಘ ಸಾಹಿತ್ಯಸೇವೆ ಸಲ್ಲಿಸಿರುವ ಧೀಮಂತ ವಿದ್ವತ್ತಿನ ಆಗರದ ಶ್ರೀಯುತ ಹಿರಿಯರಾದ ಅವರಿಗೆ, ಜೀವನದ ಬೆಳ್ಳಿಹಬ್ಬದಲ್ಲಿ ಸಲ್ಲುತ್ತಿರುವ ಅಭಿನಂದನಾ ಗ್ರಂಥವು ಅರ್ಥಪೂರ್ಣವಾಗಿದೆ. ಹಿರಿಯ ವಿದ್ವಾಂಸರಾದ ಪ್ರೊ. ಬಸವಾರಾಧ್ಯರಿಗೆ ಆದರಪೂರ್ವಕ ಗೌರವ ನಮನಗಳು. ಸನ್ಮಾನ್ಯರಿಗೆ ದೀರ್ಘಾಯುರಾರೋಗ್ಯ ಹೊಂದಿ ನಾಡಿನ ಹಿರಿಯ ಚೇತನರಾಗಿ ಮಾರ್ಗದರ್ಶಕರಾಗಿ ನಾಡು-ನುಡಿಗಳ ಮುನ್ನಡೆಗೆ ಮುಂದಿರಲಿ ಎಂದು ಪ್ರಾರ್ಥಿಸುತ್ತೇನೆ.

XXX

"ಹರಿಶ್ಚಂದ್ರ ಕಾವ್ಯಂ" : ಒಂದು ಸ್ಥೂಲಾವಲೋಕನ

-ವಿಜಯಕುಮಾರ್

ಪ್ರೊ. ಎನ್. ಬಸವಾರಾಧ್ಯ ಅವರು ಕನ್ನಡ ನಾಡು ಕಂಡಂತಹ-ಕಾಣುತ್ತಿರುವ ಶ್ರೇಷ್ಠ ವಿದ್ವಾಂಸರುಗಳಲ್ಲಿ ಒಬ್ಬರು. ತಮ್ಮ ವಿದ್ವತ್ತಿನಿಂದ ಕನ್ನಡ ಸಾಹಿತ್ಯಲೋಕಕ್ಕೆ ಹಲವು ಉಪಯುಕ್ತ ಮತ್ತು ಅಷ್ಟೇ ವಿಶೇಷವಾದ ಕೃತಿಗಳನ್ನು ನೀಡಿರುವ ಹೆಗ್ಗಳಿಕೆಗೆ ಪಾತ್ರರಾದವರು. ಮೈಸೂರು ವಿಶ್ವವಿದ್ಯಾನಿಲಯದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ, ಅವರ ಕಾಲದಲ್ಲಿ ಅಮೂಲ್ಯ ಮೌಲಿಕ ಕೃತಿಗಳನ್ನು ಸಂಪಾದಿಸಿರುವುದು ಹೆಗ್ಗಳಿಕೆಯ ವಿಷಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ-ಕನ್ನಡ ನಿಘಂಟು ಕೃತಿಗೆ ಅಮೋಘ ಕೊಡುಗೆ ನೀಡಿರುವುದು ಶ್ರೀಯುತರ ಭಾಷಾಪಾಂಡಿತ್ಯದ ಪ್ರತೀಕದಂತಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ-ಸಾಹಿತ್ಯಾಭಿಮಾನಿಗಳಿಗೆ ಸದಾ ನೆನಪಿನಲ್ಲಿ ಉಳಿಯುವಂತಹ ಕಾರ್ಯನಿರ್ವಹಿಸುತ್ತಿರುವುದರಿಂದ ಶ್ರೀ ಸಾಮಾನ್ಯರೆಲ್ಲರ ಪ್ರಶಂಸೆಗೆ ಒಳಗಾಗಿರುವುದು ವಿಶೇಷವಾದ ವಿಷಯಕೂಡ. ಕನ್ನಡ ಗಾದೆಯಂತೆ "ಆಡು ಮುಟ್ಟದ ಸೊಪ್ಪಿಲ್ಲ, ಪ್ರೊ. ಎನ್. ಬಸವಾರಾಧ್ಯರು ಕೃಷಿ ಮಾಡದ ಕನ್ನಡ ಸಾಹಿತ್ಯ ಕ್ಷೇತ್ರವಿಲ್ಲ ಎಂದರೆ ಅತಿಶಯೋಕ್ತಿಯೇನಲ್ಲ.

ಕನ್ನಡದ ಘನವಿದ್ವಾಂಸರಲ್ಲಿ ಒಬ್ಬರಾಗಿ, ಕನ್ನಡ ಸಾಹಿತ್ಯ ಪರಿಷತ್ತು, ಬಿ.ಎಂ.ಶ್ರೀ. ಪ್ರತಿಷ್ಠಾನ, ಮೈಸೂರು ವಿಶ್ವವಿದ್ಯಾನಿಲಯ, ಪದ್ಮಶ್ರೀ ಪಂಡಿತರತ್ನಂ ಡಾ. ಬಿ. ಶಿವಮೂರ್ತಿಶಾಸ್ತ್ರೀ ಪ್ರತಿಷ್ಠಾನಗಳ ಅಧ್ಯಕ್ಷರಾಗಿ ನಾಡಿನಾದ್ಯಂತ ಜನರ ಮನ್ನಣೆಗೆ ಭಾಜನರಾದವರು. ಪ್ರೊ. ಎನ್. ಬಸವಾರಾಧ್ಯರು ತಾವೊಬ್ಬ ಕನ್ನಡದ ಕಟ್ಟಾಳು ಎಂಬುದನ್ನು ನಿರೂಪಿಸಲು, ಕನ್ನಡಪರ ಕಾರ್ಯವೈಖರಿಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಬಹುಮುಖ ಪ್ರತಿಭೆ. ಇವರ ಸಾಹಿತ್ಯ ಸೇವೆ ಕೂಡ ಕನ್ನಡ ಸಾಹಿತ್ಯಲೋಕಕ್ಕೆ ಅವಿಸ್ಮರಣೀಯವಾದದ್ದು. ಅವರ ಆದರ್ಶ ವ್ಯಕ್ತಿತ್ವ ಮತ್ತು ಸಾಹಿತ್ಯ ಸೇವೆಗಳೆರಡೂ ನೀರಿನಂತೆ ಸರಾಗವಾಗಿ ಮುನ್ನಡೆಯುತ್ತಲೇ ಬಂದಿವೆ.

ಕನ್ನಡ ಸಾಹಿತ್ಯ ಲೋಕಕ್ಕೆ ಇಂದಿಗೂ ಇಂತಹ: ಹಿರಿಯ ಮಹಾಚೇತನಗಳು ಮಾದರಿಯಾಗಿರುವುದು ಕನ್ನಡ ಸಾಹಿತ್ಯದ ಹಿರಿಮೆಯನ್ನು ಹೆಚ್ಚಿಸಿದಂತಿದೆ. ಪ್ರೊ. ಎನ್. ಬಸವಾರಾಧ್ಯರು ಸಂಪಾದಿಸಿರುವ ರಾಘವಾಂಕ ವಿರಚಿತ "ಹರಿಶ್ಚಂದ್ರ ಕಾವ್ಯಂ", ಕನ್ನಡ ಸಾಹಿತ್ಯ ಇತಿಹಾಸದಲ್ಲೇ ಮೇರು ಕೃತಿಯಾಗಿ ವಿಜೃಂಭಿಸಿರುವುದು ನಾವೆಲ್ಲರೂ ತಿಳಿದಿರುವ ಸತ್ಯ ಸಂಗತಿ ಮತ್ತು ಸಾಕ್ಷಿಯಾಗಿದೆ. ಈ ಅಮೂಲ್ಯ ಕೃತಿಯೂ ಕನ್ನಡದ ಉತ್ತಮ ಕೃತಿಗಳ ಸಾಲಿನಲ್ಲಿ ನಿಂತಿರುವುದೇ ಪ್ರೊ.ಎನ್.ಬಸವಾರಾಧ್ಯ ಅವರ ಸಾಹಿತ್ಯ ಪ್ರೌಢಿಮೆಯನ್ನು ಬಿಂಬಿಸುತ್ತದೆ. ಈ ಕೃತಿಯು ಹಲವಾರು ಮುದ್ರಣಗಳನ್ನು ಯಶಸ್ವಿಯಾಗಿ ಪೂರೈಸಿರುವುದು ಇವರ ಸಾಹಿತ್ಯದ ಹಿರಿಮೆಗೆ ಮತ್ತೊಂದು ಗರಿಬಂದಂತೆ ಎಂದರೆ ತಪ್ಪಾಗಲಾರದು.

ಈ ಕೃತಿಯ ಸ್ಥೂಲಾವಲೋಕನವನ್ನು ಈ ರೀತಿಯಲ್ಲಿ ನಿರೂಪಿಸಬಹುದು. ಕೃತಿಯ ಪ್ರಾರಂಭದಲ್ಲಿ ರಾಘವಾಂಕ ಕವಿಯ ಜೀವನ ಚರಿತ್ರೆಯನ್ನು ಗುರುತಿಸುವಾಗ ರಾಘವ, ರಾಘವಾಂಕಪಂಡಿತ, ರಾಘವಾಂಕ ಎಂಬ ವಿವಿಧ ಹೆಸರಿನಿಂದ ಕರೆಯಲ್ಪಡುವ ರಾಘವಾಂಕ ಕವಿಯನ್ನು ಚೆನ್ನಬಸವಪುರಾಣದಲ್ಲಿ, ರಾಘವಾಂಕ ಚಾರಿತ್ರದಲ್ಲಿ, ಗುರುಚಾರಿತ್ರದಲ್ಲಿ, ಭೈರವೇಶ್ವರ ಕಥಾಸೂತ್ರದಲ್ಲಿ, ಪದ್ಮರಾಜ ಪುರಾಣದಲ್ಲಿ ಹೀಗೆ ಹಲವಾರು ಆಧಾರಗಳಿಂದ ಕವಿಯ ಜೀವನ ಚರಿತ್ರೆಯನ್ನು ವಿಸ್ತಾರವಾಗಿ ಚಿತ್ರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಆದರೆ ರಾಘವಾಂಕ ಕವಿಯ ಕಾಲ ಎಂಬ ವಿಚಾರದಲ್ಲಿ ಲೇಖಕರು ಹಲವಾರು ಆದರ್ಶ ನಿದರ್ಶನಗಳನ್ನು ನೀಡುತ್ತಾ, ರೆ|| ಎಫ್. ಕಿಟ್ಟೆಲ್, ಡಾ. ಅ. ವೆಂಕಟಸುಬ್ಬಯ್ಯ, ಪ್ರೊ. ಡಿ.ಎಲ್. ನರಸಿಂಹಾಚಾರ್ಯರು, ಹೀಗೆ ಕೆಲವು ಮಹಾಪಂಡಿತರ ಅಭಿಪ್ರಾಯದಂತೆ ನಿಖರವಾಗಿ ಚರ್ಚಿಸಿರುವುದು ಕೃತಿಯ ಶ್ರೇಷ್ಠತೆಯನ್ನು ಎತ್ತಿತೋರಿಸುತ್ತದೆ. ವೇದ, ಪುರಾಣ, ಇತಿಹಾಸದಲ್ಲಿ ವ್ಯಕ್ತವಾಗಿರುವ ಹರಿಶ್ಚಂದ್ರನ ಕಥೆಯು ಬಹುಪುರಾತನವಾದಂತದ್ದೂ, ಸುಪ್ರಸಿದ್ಧವಾಗಿದ್ದೂ ಆಗಿದ್ದರೂ ಇದರ ಬೆಳವಣಿಗೆಯನ್ನು ಸೂಕ್ಷ್ಮದೃಷ್ಟಿಕೋನದಿಂದ ಪರಿಶೀಲಿಸಿದರೆ ಪೌರಾಣಿಕ, ವೈದಿಕ, ಕಾವ್ಯಗ್ರಂಥಗಳಲ್ಲಿ ಸರಿಯಾಗಿ ಯಾಜ್ಞಿಕ, ಐತಿಹಾಸಿಕ ಮತ್ತು ಧಾರ್ಮಿಕ ಅಂಶಗಳೆಲ್ಲವೂ ಇವೆ ಎನ್ನಬಹುದು. ಆದರೂ ಈ ಅಂಶಗಳನ್ನೆಲ್ಲ ಸಮಗ್ರವಾಗಿಯೂ ವಿಸ್ತಾರವಾಗಿಯೂ ಒಂದೆಡೆ ಎಲ್ಲಿಯೂ ಕಲೆಹಾಕಲು ಸಾಧ್ಯವಿಲ್ಲದಾಗ ಪ್ರೊ. ಎನ್. ಬಸವಾರಾಧ್ಯರು ಹರಿಶ್ಚಂದ್ರ ಮಹಾಶಯನಿಗೆ ಸಂಬಂಧಿಸಿದ ಪೂರ್ವದ ವೃತ್ತಾಂತ ಮತ್ತು ಹರಿಶ್ಚಂದ್ರನಿಗೆ ಅನ್ವಯಿಸುವಂತಹ ಹೆಸರುಗಳಲ್ಲಿ ಪುರಾಣ ಮತ್ತು ಇತಿಹಾಸಗಳನ್ನು ವಾಯುಪುರಾಣ, ಬ್ರಹ್ಮಾಂಡಪುರಾಣ, ಬ್ರಹ್ಮಮಹಾಪುರಾಣ, ಮಾರ್ಕಂಡೇಯ ಪುರಾಣ, ಲಿಂಗಮಹಾಪುರಾಣ, ಶಿವಮಹಾಪುರಾಣ, ಸ್ಕಾಂದಪುರಾಣ, ಶ್ರೀ ಮದ್ಭಾಗವತ ಮತ್ತು ದೇವಿಭಾಗವತ ಎಂಬುದಾಗಿ ವಿಭಾಗಿಸಿರುವುದಲ್ಲದೆ, ಹರಿವಂಶ, ಮಹಾಭಾರತ ಮತ್ತು ರಾಮಾಯಣ ಎಂಬಂತಹ ಶಿರ್ಷಿಕೆಯಡಿಯಲ್ಲಿ ಸಂಕ್ಷಿಪ್ತವಾದ ಇತಿಹಾಸವನ್ನು ನಿರೂಪಿಸಿರುವುದು ಈ ಕೃತಿಯ ಮೌಲಿಕತೆಯನ್ನು ಬಿಂಬಿಸುತ್ತದೆ.

ಪ್ರೊ. ಎನ್. ಬಸವಾರಾಧ್ಯರು ಸಂಗ್ರಹಿಸಿರುವಂತಹ ಹರಿಶ್ಚಂದ್ರನ ಕಥೆಯ ಪೂರ್ವ ವೃತ್ತಾಂತದ ಪೂರ್ಣ ಸಂಗ್ರಹವನ್ನು ಹಲವಾರು ಭಾಗಗಳೊಡನೆ ಆಮೂಲಾಗ್ರವಾಗಿ ರಚಿಸಿದ್ದಾರೆ. ಒಂದನೇ ಭಾಗದಲ್ಲಿ ಇಕ್ಷ್ವಾಕುವಂಶದಲ್ಲಿ ಅನೇಕ ರಾಜರು ಆಳಿದ ಮೇಲೆ ತ್ರಯ್ಯಾರುಣ ಎಂಬುವನು ರಾಜನಾದದ್ದು, ಅವನ ಮಗ ಸತ್ಯವ್ರತ ರಾಜ್ಯಭ್ರಷ್ಟನಾದದ್ದೂ, ತ್ರಯ್ಯಾರುಣ ತಪಸ್ಸಿಗೆ ತೆರಳಿದ್ದು, ಅಂತೆಯೇ ಎರಡನೇ ಭಾಗದಲ್ಲಿ ಹರಿಶ್ಚಂದ್ರನಿಗೆ ಮಕ್ಕಳಾಗದಿದ್ದದ್ದೂ, ನಾರದನ ಅಪ್ಪಣೆ ಪಡೆದು ವರುಣನನ್ನು ಆರಾಧಿಸಿ ಪುತ್ರನನ್ನು ಪಡೆದದ್ದು, ಶ್ರೀ ಮದ್ಭಾಗವತದಲ್ಲಿ ಕಾಣುವಂತಹ ಎರಡನೆಯ ಕಥಾಭಾಗಕ್ಕೆ ಸಂಬಂಧಿಸಿದಂತೆ ಶುನಶ್ಶೇಪನ ನರಮೇಧಯಜ್ಞಾನಂತರ ಇಂದ್ರನು ತೃಪ್ತನಾಗಿ ಹರಿಶ್ಚಂದ್ರನಿಗೆ ಸುವರ್ಣಮಯವಾದ ರಥವನ್ನು ನೀಡಿರುವುದನ್ನೂ, ಹರಿಶ್ಚಂದ್ರ ಚಕ್ರವರ್ತಿಯಾಗಿದ್ದು ರಾಜಸೂಯ ಯಾಗವನ್ನು ಮಾಡಿದನೆಂದು ಹೇಳುವುದರಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಅಂತೆಯೇ ಸ್ಕಾಂದಪುರಾಣದಲ್ಲಿ ತ್ರಿಶಂಕುವಿನ ವೃತ್ತಾಂತ, ಹರಿಶ್ಚಂದ್ರನ ಸ್ಕಾಂದಪುರಾಣದ ಕಥೆಯನ್ನು ಲೇಖಕರ ಹಿಡಿತದಲ್ಲಿ ಉತ್ತಮವಾಗಿ ಮೂಡಿಬಂದಿರುವ ಪೂರ್ವ ವೃತ್ತಾಂತವಾಗಿದೆ.

ಪುರಾಣಗಳಲ್ಲಿ ಕಂಡುಬರುವ ಕಥೆಗಳ ವ್ಯತ್ಯಾಸಗಳನ್ನು ವಿವಿಧ ಭಾಗಗಳಾಗಿ ಕ್ರೋಢೀಕರಿಸುವುದು ಓದುಗರಿಗೆ ಹೆಚ್ಚಿನ ಮಾಹಿತಿ ಪಡೆಯಲು ಸಹಾಯಕವಾಗಿದೆ. ಈ ಭಾಗದ "ಬ್ರಹ್ಮಮಹಾಪುರಾಣ" ಎಂಬುದರಲ್ಲಿ ವರುಣನ ಇಷ್ಟಾರ್ಥವನ್ನು ನೆರವೇರಿಸಲು ಹರಿಶ್ಚಂದ್ರನು ಯುವರಾಜನಾಗಿದ್ದಂತಹ ಹದಿನಾರು ವರ್ಷದ ರೋಹಿತನನ್ನು ಕರೆದು ವರುಣನಿಗೆ ಬಲಿಯಾಗುವಂತೆ ವೃತ್ತಾಂತವನ್ನೆಲ್ಲಾ ತಿಳಿಸಿರುವುದು ಉತ್ತಮ ರೀತಿಯಲ್ಲಿದೆ. ವಿಶ್ವಾಮಿತ್ರನ ಪಾತ್ರವನ್ನು ಇಲ್ಲಿ ವಿಶೇಷವಾಗಿ ರೂಪಿಸಿರುವುದನ್ನು ಸ್ಮರಿಸಬಹುದು.

ಮುಂದೆ "ದೇವಿಭಾಗವತ" ಎಂಬ ಎರಡನೆಯ ಭಾಗದಲ್ಲಿ ಹರಿಶ್ಚಂದ್ರನ ಬದುಕು ಮತ್ತು ದಾಂಪತ್ಯಗಳ ಸರಮಾಲೆಯನ್ನೇ ನೀಡಲಾಗಿದೆ. ದೇವಿಭಾಗವತ ಮತ್ತು ಮಾರ್ಕಂಡೇಯ ಪುರಾಣ ಹರಿಶ್ಚಂದ್ರ ಕಾವ್ಯದಲ್ಲಿ ಕಾಣುವಂತಹ ಪ್ರಮುಖ ಮತ್ತು ಅಷ್ಟೇ ವಿಶೇಷವಾದ ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಜೈನಕವಿಗಳು ಕನ್ನಡ ಸಾಹಿತ್ಯದಲ್ಲಿ ಹರಿಶ್ಚಂದ್ರನ ವಿಚಾರವನ್ನು ರಾಘವಾಂಕನಿಗಿಂತಲೂ ಮುಂಚೆಯೇ ಪ್ರಸ್ತಾಪಿಸಿರುವುದು, ೧೦ನೇ ಶತಮಾನದ ಆದಿಪಂಪನ ಭಾರತದಲ್ಲಿ ಕಾಣುವಂತಹ ಹಲವಾರು ಉಪಯುಕ್ತ ಮಾಹಿತಿಗಳನ್ನು ಸಾಕ್ಷ್ಯಾಧಾರಗಳ ಮೂಲಕ ಸೂಚಿಸಿರುವುದು ಲೇಖಕರ ಜ್ಞಾನಾರ್ಜನೆಗೆ ಸಾಕ್ಷಿಯಾಗಿದೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯವನ್ನು ಆಧಾರವಾಗಿಟ್ಟುಕೊಂಡು, ಅವನಿಗಿಂತ ಇತ್ತೀಚಿನವರೆಗೂ ಕಾಣಲು ಸಿಗುವಂತಹ ಕೆಲವು ಕನ್ನಡ ಕವಿಗಳು ಬಗೆಬಗೆಯ ಛಂದಸ್ಸಿನಲ್ಲಿ ಕಾವ್ಯಗಳನ್ನು ರಚಿಸಿರುತ್ತಾರೆ. ಇಲ್ಲಿ ಸಾಂಗತ್ಯದಲ್ಲಿ ಬರೆದಿರುವ "ಬೊಂಬೆಯಲಕ್ಕ" ಮತ್ತು "ಹಲಗ" ಈ ಎರಡು ಹೆಸರುಗಳನ್ನು ಉಲ್ಲೇಖಿಸಬಹುದಾಗಿದೆ. ಈ ಕಾವ್ಯಗಳು ನಿಜವಾಗಲೂ ಹರಿಶ್ಚಂದ್ರನ ಕಾವ್ಯಗಳಿಗೆ ಸರಿಸಮಾನವಾಗಿವೆ ಎಂಬುದು ಲೇಖಕರು ನಿರೂಪಿಸಿರುವ ವಸ್ತು ವಿಷಯವಾಗಿದೆ.

ಹರಿಶ್ಚಂದ್ರನ ವಿಚಾರಧಾರೆಯಾಗಿ ಕನ್ನಡದಲ್ಲಿ ಲಭ್ಯವಿರುವ ಗದುಗಿನ ಭಾರತ, ಕುಮಾರವ್ಯಾಸ ಭಾರತ, ಕನ್ನಡ ರಾಮಾಯಣ, ಕುಮಾರ ವಾಲ್ಮೀಕಿ, ಮಾಧವಾಂಕ ಕಾವ್ಯ, ಭೈರವೇಶ್ವರಕಾವ್ಯ, ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ, ಹರಿಶ್ಚಂದ್ರ ಮಹಾರಾಯನ ಚರಿತ್ರೆ, ಮಹಾಂತ ದೇಶಿಕೇಂದ್ರ, ಹರಿಶ್ಚಂದ್ರೋಪಾಖ್ಯಾನ ನಂಜುಂಡ ಭಾಗವತ, ಹರಿಶ್ಚಂದ್ರನ ಚರಿತ್ರೆ, ಹರಿಶ್ಚಂದ್ರರಾಯನ ಕಥೆ, ಧರ್ಮದೇವನ ಹರಿಶ್ಚಂದ್ರರಾಸ, ಹರಿಶ್ಚಂದ್ರ ಸಾಂಗತ್ಯ-ಸಿ.ಪಿ. ಕೃಷ್ಣಕುಮಾರ, ಹರಿಶ್ಚಂದ್ರ ಕಾವ್ಯಸಂಗ್ರಹ- ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿ, ಹರಿಶ್ಚಂದ್ರಕಾವ್ಯ, ನಾಗೇಶಶಾಸ್ತ್ರಿಗಳು ಮತ್ತು ವಿದ್ವಾನ್ ಎಂ.ಜಿ. ವೆಂಕಟೇಶಯ್ಯ, ಇವೆಲ್ಲವೂ ಇಲ್ಲಿ ಉಲ್ಲೇಖಿಸಬಹುದಾದ ಕನ್ನಡದ ಮೌಲಿಕ ಕೃತಿಗಳಾಗಿವೆ. ಈ ರೀತಿಯಾಗಿ ಗ್ರಂಥಗಳ ಸಂಪೂರ್ಣ ಪಟ್ಟಿಯನ್ನೇ ಒದಗಿಸುವಲ್ಲಿ ಲೇಖಕರ ಪಾತ್ರ ಮಹತ್ವದ್ದು.

ಹರಿಶ್ಚಂದ್ರನ ಕಾವ್ಯ ಒಂದು ಉತ್ತಮ ಕಲಾಕೃತಿ, ನಾಟಕವೂ ಹೌದು, ಕಾವ್ಯವು ಹೌದು. ಇಲ್ಲಿ ಕಾಣುವಂತಹ ಪಾತ್ರಗಳೆಲ್ಲವು ಜೀವಂತವಾದವು, ಆದರ್ಶಪ್ರಿಯವಾಗಿವೆ ಎಂದು ಪ್ರೊ. ಎನ್. ಬಸವಾರಾಧ್ಯ ಅವರು ತಿಳಿಸುತ್ತಾ, ಹರಿಶ್ಚಂದ್ರನ ಕಾವ್ಯಗಳ ವಿಮರ್ಶೆಯನ್ನು ನೀಡುತ್ತಾ, ರಾಘವಾಂಕನ ಕಥನ ಕೌಶಲ್ಯವನ್ನೂ, ದೃಶ್ಯಗಳನ್ನೂ, ಪಾತ್ರಗಳ ಪರಿಚಯವನ್ನೂ, ಸಂಭಾಷಣೆ, ಇತ್ಯಾದಿ ಪ್ರಕಾರಗಳಲ್ಲಿ ವಿಂಗಡಿಸಿರುವುದು ಕೃತಿಗೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟಿದೆ.

ಈ ಕೃತಿಯ ಮತ್ತೊಂದು ವಿಶೇಷವಾದ ಅಂಶವೆಂದರೆ, ಈ ಕಾವ್ಯದಲ್ಲಿ ಪ್ರಯೋಗಿಸಲ್ಪಟ್ಟಿರುವ ಅಥವಾ ಬಳಸಲ್ಪಟ್ಟಿರುವ ಎಲ್ಲ ಶಬ್ದರೂಪಗಳನ್ನು ಒಂದೊಂದಾಗಿ ವಿಂಗಡಿಸಿ, ಅರ್ಥೈಸುವುದರ ಜೊತೆಗೆ ವ್ಯಾಕರಣಾತ್ಮಕ ವಿಶ್ಲೇಷಣೆಯನ್ನು ಮತ್ತು ಭಾಷಾವಿಜ್ಞಾನದ ಹಿನ್ನೆಲೆಯಲ್ಲಿ ವಿಭಜಿಸಿರುವುದು ಶ್ಲಾಘನೀಯವಾಗಿದೆ.

ಈ ಕಾವ್ಯದಲ್ಲಿ ಸಂಪೂರ್ಣವಾಗಿ ಒಟ್ಟು ೧೪ ವಿವಿಧ ಸಂಧಿ(ಸ್ಥಲಂ) ಗಳನ್ನು ಅನುಸರಿಸಿ, ಗುರುತಿಸಿದ್ದಾರೆ. ಪರಿಶಿಷ್ಟ ಎಂಬ ಶೀರ್ಷಿಕೆಯಡಿಯಲ್ಲಿ ಸಂಧಿಗಳನ್ನು ರಚಿಸುವುದರಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಶಬ್ದಕೋಶ ಎಂಬ ಪ್ರತ್ಯೇಕ ವಿಭಾಗದಲ್ಲಿ ಕೆಲವು ಶಬ್ದಗಳ ಅರ್ಥವನ್ನು ಸಂಪೂರ್ಣವಾಗಿ ನೀಡಲಾಗದ ಶಬ್ದಗಳಿಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗಿದೆ, ಕಾರಣ ಸಂದರ್ಭಕ್ಕನುಗುಣವಾಗಿ ಅರ್ಥೈಸಿ ಓದುವುದು ಓದುಗರಿಗೆ ಮೀಸಲಾದದ್ದು. ಲೇಖಕರು ಕೆಲವು ಪದಗಳನ್ನು ಯಥಾವತ್ತಾಗಿ ಬಳಸಿರುವುದನ್ನು ಗಮನಿಸಿದರೆ, ಪದಗಳ ಸೌಂದರ್ಯಕ್ಕೆ ಧಕ್ಕೆ ಬಾರದಂತೆ ಹೊಸ ಪದಗಳನ್ನು ಎರವಲು ಪಡೆಯದಂತೆ, ಕನ್ನಡ ಭಾಷಾ ಜಾಯಮಾನಕ್ಕೆ ಸರಿಹೊಂದುವಂತೆ ಹಾಗೆಯೇ ನೀಡಿರುವುದು ಗಮನಿಸಬೇಕಾದ ಸೂಕ್ಷ್ಮಸಂಗತಿಯಾದರೆ, ಪದಗಳ ಅಕಾರಾದಿಯನ್ನು ಕನ್ನಡ ವರ್ಣಮಾಲೆಯ ಆಧಾರದ ಮೇಲೆ ರಚಿಸಲ್ಪಟ್ಟಿರುವುದು ಭಾಷಾಸ್ವಂತಿಕೆಯನ್ನು, ಮಡಿವಂತಿಕೆಯನ್ನು ಬಿಂಬಿಸುತ್ತದೆ. ಕೃತಿಯ ಕೊನೆಯಲ್ಲಿ ಉಪಯುಕ್ತ ಪರಾಮರ್ಶನ ಗ್ರಂಥಗಳ ವಿಸ್ತಾರವಾದ ಪಟ್ಟಿಯನ್ನೇ ನೀಡಲಾಗಿದೆ. ಒಟ್ಟಿನಲ್ಲಿ ಈ ಮೇರುಕೃತಿಯ (ಸಂ), ಪಾಲುದಾರರಾದ ಪ್ರೊ. ಎನ್. ಬಸವಾರಾಧ್ಯರು ಮತ್ತು ಪಂಡಿತ. ಎಸ್. ಬಸಪ್ಪನವರು ನಾಡಿನ ಸಮಸ್ತ ಸಾಹಿತ್ಯಾಭಿಮಾನಿಗಳ ಮುಕ್ತ ಕಂಠದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈ ಕೃತಿಯನ್ನು ಸಾಹಿತ್ಯಲೋಕಕ್ಕೆ ಅರ್ಪಿಸಿದ ಈ ಹಿರಿಯರು ಅಭಿನಂದನಾರ್ಹರು.

ಕೋಶರಚನೆ : ಎನ್. ಬಸವಾರಾಧ್ಯರ ಸಾಧನೆ

-ಡಾ. ಎಸ್‌ಎಸ್. ಅಂಗಡಿ

ನಿಘಂಟುಶಾಸ್ತ್ರವು ಅನ್ವಯಿಕ ಭಾಷಾವಿಜ್ಞಾನದ ಶಾಖೆಯಾಗಿದೆ. ಭಾಷಾವಿಜ್ಞಾನ ಮತ್ತು ನಿಘಂಟುಶಾಸ್ತ್ರಗಳು ಪರಸ್ಪರ ಪೂರಕಗಳಾಗಿವೆ. ನಿಘಂಟುಶಾಸ್ತ್ರವು ಪದಗಳ ವಿವೇಚನೆ ಹಾಗೂ ಅವುಗಳ ವೈಜ್ಞಾನಿಕ ಅಧ್ಯಯನಕ್ಕೆ ಒತ್ತುಕೊಡುತ್ತದೆ. ಭಾಷಾವಿಜ್ಞಾನವು ಒಂದು ಭಾಷೆಯ ರಚನೆ ಹಾಗೂ ಬೇರೆ ಬೇರೆ ಸಾಮಾಜಿಕ ಸಂದರ್ಭದಲ್ಲಿ ಭಾಷಾಬಳಕೆಯ ರೀತಿ ಮುಂತಾದ ಅಂಶಗಳಿಗೆ ಒತ್ತು ಕೊಡಲಾಗುವುದು, ಒಂದು ಭಾಷೆ ಹಾಗೂ ಭಾಷಾಪ್ರಭೇದಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವಾಗ ಅವು ಪ್ರಮುಖ ಪಾತ್ರವಹಿಸುತ್ತವೆ. ಕನ್ನಡ ನಿಘಂಟು ರಚನೆಗೆ ಬಹುದೊಡ್ಡ ಪರಂಪರೆಯಿದೆ. ಮಿಶನರಿಪಾದ್ರಿಗಳು, ಡಿ.ಎಲ್.ಎನ್., ಸೇಡಿಯಾಪು, ತೀ.ನಂ.ಶ್ರೀ., ಜಿ. ವೆಂಕಟಸುಬ್ಬಯ್ಯ ಇಂತಹ ವಿದ್ವಾಂಸರು ಹಾಕಿಕೊಟ್ಟ ಪರಂಪರೆಯನ್ನು ಎನ್. ಬಸವಾರಾಧ್ಯರು ಸಮರ್ಥವಾಗಿ ಮುಂದುವರಿಸಿ ಆ ಕ್ಷೇತ್ರವನ್ನು ಹುಲುಸಾಗಿಸಿದರು; ಬೆಳೆಸಿದರು. ಬಸವಾರಾಧ್ಯರ ಈ ಕ್ಷೇತ್ರದ ಸಾಧನೆಯನ್ನು ಮೂರು ರೀತಿಯಾಗಿ ವಿಂಗಡಿಸಬಹುದು.

ಅ. ಹಳಗನ್ನಡ ನಿಘಂಟು (ಸಂಪಾದನೆ) (೧೯೭೬)

ಆ. ಲೇಖನ ರೂಪದ ಅಧ್ಯಯನ

ಇ. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ-ಕನ್ನಡ ನಿಘಂಟು' ಸಿದ್ಧತೆ (ಸಾಂಸ್ಥಿಕ ಕೆಲಸ)

I

ಪ್ರಾಚೀನ ಕನ್ನಡ ನಿಘಂಟುಗಳು ಪಂಡಿತರಿಂದ ಪಂಡಿತರಿಗಾಗಿ ರಚಿತವಾಗಿದ್ದು ವಾಸ್ತವವಾಗಿ ಅವು ಪದಸಂಗ್ರಹಗಳೋ, ಅಪೂರ್ಣ ಅರ್ಥಕೋಶಗಳೋ ಅಗಿವೆ. ಕಾಲಕ್ರಮೇಣ ಅವು ಸಾರ್ವಜನಿಕ ಉಪಯೋಗಿಯಾದ ಸಾಮಾನ್ಯ ಕೋಶಗಳಿಗೂ ಆಧುನಿಕ ಭಾಷಾಶಾಸ್ತ್ರದ ತಳಹದಿಯ ಮೇಲೆ ರಚಿತವಾಗುತ್ತಿರುವ ಆಧುನಿಕ

ಕೋಶಗಳಿಗೂ ಆಕರವಾದವು. ಪ್ರಾಚೀನ ನಿಘಂಟುಗಳು ಹಳಗನ್ನಡ ಸಾಹಿತ್ಯದ ಅಧ್ಯಯನಕ್ಕೆ ಅತ್ಯಗತ್ಯವಾದ ಕೈಪಿಡಿಗಳಾಗಿವೆ. ಎಸ್. ಬಸವಾರಾಧ್ಯರು ನಾಗವರ್ಮನ 'ಅಭಿಧಾನ ವಸ್ತುಕೋಶ' ಮತ್ತು ಮಂಗರಾಜನ 'ಅಭಿನವಾಭಿಧಾನಂ' ಈ ಎರಡು ನಿಘಂಟುಗಳನ್ನು ಹೊರತುಪಡಿಸಿ ಮಿಕ್ಕ ಹತ್ತು ಪ್ರಾಚೀನ ನಿಘಂಟುಗಳನ್ನು 'ಹಳಗನ್ನಡ ನಿಘಂಟು' ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದ್ದಾರೆ (೧೯೭೬). ತಮಗಿಂತ ಹಿಂದೆ ಪ್ರಕಟವಾಗಿದ್ದ ಆಯಾ ನಿಘಂಟುಗಳ ಮುದ್ರಣಪ್ರತಿ ಹಾಗೂ ತಮಗೆ ದೊರೆತ ಹಲವು ಓಲೆಪ್ರತಿಗಳ ಸಹಾಯದಿಂದ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

ನಮಗೆ ಉಪಲಬ್ಧವಿರುವ ಮೊದಲನೆಯ ಪ್ರಾಚೀನ ನಿಘಂಟು ರನ್ನನ 'ರನ್ನ ಕಂದ' (ಸು. ೯೯೦). ಕೃತಿಕಾರ ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಹಳಗನ್ನಡ ರೂಪಗಳ ಅರ್ಥಗಳನ್ನು ಕಂದಗಳಲ್ಲಿ ಕೊಟ್ಟಿದ್ದಾನೆ. ಆದರೆ ಈ ನಿಘಂಟು ಪೂರ್ಣವಾಗಿ ಉಪಲಬ್ದವಾಗಿಲ್ಲ. ತ.ಸು. ಶಾಮರಾಯರು ಹನ್ನೊಂದು ಪದ್ಯಗಳಿರುವ ಓಲೆಯ ಪ್ರತಿಗಳನ್ನಾಧರಿಸಿ 'ರನ್ನಕಂದ' ಎಂಬ ಹೆಸರಿನಲ್ಲಿ ಈ ನಿಘಂಟನ್ನು ಪ್ರಕಟಿಸಿದ್ದಾರೆ. ಇದು ತೀರ ಅಶುದ್ಧವೂ ಸ್ಖಾಲಿತ್ಯಗಳಿಂದ ಕೂಡಿದುದೂ ಆಗಿದೆ. ಇದಾದ ನಂತರ ಎಂ.ಎಂ. ಕಲಬುರ್ಗಿ ಅವರು ಕೊಲ್ಲಾಪುರದಲ್ಲಿ ತಮಗೆ ದೊರೆತ ಎರಡು ಹಸ್ತಪ್ರತಿಗಳ ಮೂಲಕ 'ರನ್ನನಿಘಂಟು' ಎಂಬ ಹೆಸರಿನಿಂದ ಸಂಪಾದಿಸಿದ್ದಾರೆ. ಬಸವಾರಾಧ್ಯರು ಈ ಎಲ್ಲ ಪ್ರತಿಗಳನ್ನಾಧರಿಸಿ, ಪರಿಷ್ಕರಿಸಿ ತಮ್ಮ ಆವೃತ್ತಿಯಲ್ಲಿ ಮೊದಲ ನಿಘಂಟಾಗಿ ಸೇರಿಸಿದ್ದಾರೆ.

ಕನ್ನಡದ ಪ್ರಸಿದ್ಧ ವ್ಯಾಕರಣಕಾರನಾದ ಕೇಶಿರಾಜನ ಶಬ್ದಮಣಿದರ್ಪಣದ (ಸು. ೧೨೬೦) ಅಕ್ಷರ ಪ್ರಕರಣದಲ್ಲಿ ಬಂದಿರುವ 'ಱಟಿಕುಳ'ಗಳ ಪಟ್ಟಿ ಕನ್ನಡ ಕ್ರಿಯಾರೂಪಗಳನ್ನು ಹೇಳುವ 'ಧಾತುಪ್ರಕರಣ' ಹಾಗೂ ಹಳಗನ್ನಡ ಶಬ್ದಗಳಿಗೆ ಅರ್ಥಹೇಳುವ 'ಪ್ರಯೋಗಸಾರ' ಈ ಪ್ರಕರಣಗಳು ಒಂದು ರೀತಿಯಲ್ಲಿ ನಿಘಂಟಿನಂತೆ ಸಿದ್ಧವಾಗಿವೆ. ಬಸವಾರಾಧ್ಯರು ಡಿ.ಎಲ್.ಎನ್.ರ ಶಬ್ದಮಣಿದರ್ಪಣದ ಆವೃತ್ತಿಯಲ್ಲಿ ಬಂದಿರುವ ಆ ಮೂರು ಶಬ್ದಕೋಶಗಳನ್ನು ಪರಿಷ್ಕರಿಸಿ ತಮ್ಮ ಸಂಪಾದನೆಯಲ್ಲಿ ಸೇರಿಸಿಕೊಂಡಿದ್ದಾರೆ. ಕನ್ನಡ ಪದಗಳಿಗೆ ಕನ್ನಡದಲ್ಲಿ ಅರ್ಥ ಹೊಂದಿರುವ ಮೊದಲು ಕನ್ನಡ-ಕನ್ನಡ ನಿಘಂಟು, 'ಕರ್ಣಾಟಕ ಶಬ್ದಸಾರಂ' (ಸು. ೧೪೦೦). ಈ ಕೋಶದ ಕರ್ತೃ ತಿಳಿದುಬಂದಿಲ್ಲ. ಈ ಕೋಶದಲ್ಲಿ ನಡುಗನ್ನಡ ಶಬ್ದಗಳಿಗೆ, ತದ್ಭವಗಳಿಗೆ ಅರ್ಥ ಹೇಳಿದೆ. ನಿಘಂಟಿನಲ್ಲಿ ೬೬೬ ಗದ್ಯವಾಕ್ಯಗಳಿದ್ದು ೧೪೧೬ ಪದಗಳಿಗೆ ಅರ್ಥ ಹೇಳಲಾಗಿದೆ. ಹಳಗನ್ನಡ ಶಬ್ದಗಳಿಗೆ, ದೇಶ್ಯ ಮತ್ತು ತದ್ಭವಗಳಿಗೆ ಅರ್ಥ ಹೇಳುವ ಕನ್ನಡ-ಕನ್ನಡ ಲಘುನಿಘಂಟು 'ಕರ್ಣಾಟಕ ನಿಘಂಟು; (ಸು. ೧೪೦೦) ಈ ನಿಘಂಟುವಿನ ಕರ್ತೃ, ಕಾಲ ಸರಿಯಾಗಿ ತಿಳಿದುಬಂದಿಲ್ಲ. ಪದ್ಯಬಂಧದ ಬಿಗಿ, ನಿರೂಪಣೆಯಲ್ಲಿ ಏಕಸೂತ್ರತೆ, ಶಬ್ದಗಳ ಆಯ್ಕೆಯಲ್ಲಿ. ಉಪಯುಕ್ತತೆಯ ದೃಷ್ಟಿ ಇಲ್ಲಿ ಗಮನಾರ್ಹವಾಗಿದೆ.

ಪ್ರಾಚೀನ ನಿಘಂಟುಗಳಲ್ಲಿ ಅತ್ಯಂತ ಜಟಿಲಪ್ರಾಯವೂ ಗೊಂದಲಮಯವೂ ಆದ ನಿಘಂಟು ಚತುರಾಸ್ಯ ಬೊಮ್ಮರಸನ ಚತುರಾಸ್ಯ ನಿಘಂಟು (ಸು. ೧೪೫೦). ದೇಶ್ಯ ಮತ್ತು ತದ್ಭವಕೋಶ ಇದಾಗಿದೆ. ಹಳಗನ್ನಡ ಶಬ್ದಗಳಿಗೆ ಅರ್ಥ ಹೇಳುವ ಇನ್ನೊಂದು ನಿಘಂಟು ಲಿಂಗಮಂತ್ರಿಯ 'ಕಬ್ಬಿಗರ ಕೈಪಿಡಿ' (ಸು. ೧೫೩೦). ಇದರಲ್ಲಿ ದೇಶ್ಯ, ಗೂಡಾರ್ಥ, ತತ್ಸಮ-ತದ್ಭವಗಳಿಗೆ ಅರ್ಥ ಹೇಳಿದೆ. ಈ ನಿಘಂಟಿಗೆ ಹೆಸರುಘಟ್ಟದ ಹೊನ್ನಪ್ಪ 'ಚಕೋರ ಚಂದ್ರಿಕೆ' ಎಂಬ ಟೀಕೆಯನ್ನು ಬರೆದಿದ್ದಾನೆ. ಇದೇ ಕಾಲಘಟ್ಟದಲ್ಲಿ ವಿರಕ್ತ ತೋಂಟದಾರ್ಯನು 'ಕರ್ನಾಟಕ ಶಬ್ದಮಂಜರಿ' ಯನ್ನು ರಚಿಸಿದ್ದಾನೆ. ಈ ಕೋಶ ೧೨೦ ವಾರ್ಧಕ ಷಟ್ಪದಿಗಳನ್ನೊಳಗೊಂಡಿದೆ. ಈ ಕೋಶದಲ್ಲಿ ಅಚ್ಚಗನ್ನಡ, ಗೂಢಪದ, ತತ್ಸಮ, ತದ್ಭವ ಈ ನಾಲ್ಕು ಶಬ್ದಗಳಿಗೆ ಪೂರ್ವಕವಿಗಳ ಪ್ರಯೋಗಗಳನ್ನು ಗಮನಿಸಿ ಅರ್ಥ ಹೇಳಿದೆ. ಈ ಕೋಶಕ್ಕೆ ನಾಲ್ಕು ಟೀಕೆಗಳು ಬಂದಿವೆ. ಹೆಸರುಘಟ್ಟದ ಹೊನ್ನಪ್ಪನ ಟೀಕೆ, ವಿಬುಧಾನಂದನೀ, ಎನ್.ಆರ್. ಕರಿಬಸವಶಾಸ್ತ್ರೀ, ಮುನೇಗೌಡರ ಟೀಕೆ. ಕನ್ನಡದಲ್ಲಿ ಇನ್ನಾವ ಕೋಶಕ್ಕೂ ಇಷ್ಟು ಟೀಕೆಗಳು ಇಲ್ಲದಿರುವುದು ಈ ನಿಘಂಟಿನ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಬಸವಾರಾಧ್ಯರು ಈ ಎಲ್ಲ ಟೀಕೆಗಳನ್ನು ಪರಿಷ್ಕರಿಸಿದ್ದಾರೆ.

ಶೃಂಗಾರ ಕವಿಯ 'ಕರ್ಣಾಟಕ ಸಂಜೀವನಂ' (ಸು. ೧೬೦೦) ಕೋಶದಲ್ಲಿ ೩೫ ವಾರ್ಧಕ ಷಟ್ಪದಿಗಳಿವೆ. ಇದು 'ಱಟಿಕುಳ' ನಿಘಂಟು ಎಂದು ಪ್ರಸಿದ್ಧವಾಗಿದೆ. ಇದೇ ಕಾಲಘಟ್ಟದಲ್ಲಿ ರಚನೆಯಾದ ಇನ್ನೊಂದು ನಿಘಂಟು 'ಕರ್ಣಾಟಕ

ಭಾರತ ನಿಘಂಟು'. ಈ ಕೋಶದ ಕರ್ತೃ, ಕಾಲ ತಿಳಿದುಬಂದಿಲ್ಲ. ಇದರ ಕರ್ತೃ ಕುಮಾರವ್ಯಾಸ ಭಾರತದಲ್ಲಿನ ಪದ್ಯಗಳಿಗೆ ಅರ್ಥನಿರೂಪಿಸಿರುವುದಾಗಿ ಹೇಳಿದ್ದಾನೆ. ಪ್ರಾಚೀನ ನಿಘಂಟುಗಳಲ್ಲಿ ಸೂರ್ಯ ಕವಿಯ 'ಕವಿಕಂಠಹಾರ' (ಸು. ೧೬೪೦) ಕೊನೆಯದು. ಇದರಲ್ಲಿ ೨೭೧ ಕಂದಪದ್ಯಗಳಿವೆ. ದೇಶ್ಯ ಮತ್ತು ತದ್ಭವಗಳಿಗೆ ಅರ್ಥವಿವರಣೆ ಇಲ್ಲಿದೆ. ಪ್ರಾಚೀನ ಕೋಶಕಾರರು ಶಬ್ದಕೋಶಗಳನ್ನು ರಚಿಸಿ ತಮ್ಮ ಕಾಲದ ಸಾಹಿತ್ಯಕ ಪ್ರಗತಿಗೆ ಕಾರಣರಾಗಿದ್ದಾರೆ. ಪರಂಪರೆಯ ಶಬ್ದಸಂಪತ್ತನ್ನು ಉಳಿಸಿ ಬೆಳೆಸಿ ಕನ್ನಡ ವಾಗ್ಭಾಂಡಾರದ ವಿಪುಲತೆಯನ್ನು ಹೆಚ್ಚಿಸಿದ್ದಾರೆ.

ಪ್ರಾಚೀನ ನಿಘಂಟುಗಳು ಒಂದು ಕಾಲಘಟ್ಟದ ಸಾಂಸ್ಕೃತಿಕ ಸಂದರ್ಭದ ನಿಧಿಯಾಗಿಯೂ ಸಹಾಯಕ್ಕೆ ಬರುತ್ತವೆ. ಒಂದು ಘಟ್ಟದ ಜನಜೀವನವನ್ನು ಪುನರ್ ರಚಿಸುವಾಗ ಪ್ರಾಚೀನ ನಿಘಂಟುಗಳು ಪೂರಕವಾಗುತ್ತದೆ. ಬಸವಾರಾಧ್ಯರು ೪೩ ಪುಟಗಳ ಅಭ್ಯಾಸಪೂರ್ಣ ಪ್ರಸ್ತಾವನೆಯಲ್ಲಿ ಆಯಾ ನಿಘಂಟುಗಳ ಕಾಲ, ಕರ್ತೃ, ಸಂಪಾದನೆಯ ವಿಧಾನ, ಇತ್ಯಾದಿ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ. ಗ್ರಂಥದ ಅಧ್ಯಯನಕ್ಕೆ ಪೂರಕವಾಗಿ ಪದ್ಯಗಳ ಅಕಾರಾದಿ, ಶಬ್ದಾರ್ಥ ಕೋಶ ಇವು ಕೋಶಾಧ್ಯಯನಕ್ಕೆ ತುಂಬ ನೆರವಾಗುತ್ತವೆ. 'ಹಳಗನ್ನಡ ನಿಘಂಟು' ಕನ್ನಡ ಪಾಂಡಿತ್ಯಕ್ಕೆ ಶ್ರೀಯುತರು ನೀಡಿರುವ ಮೇರುಕೃತಿಯಾಗಿರುತ್ತದೆ.

II

ಬಸವಾರಾಧ್ಯರು ಕನ್ನಡ ನಿಘಂಟುಗಳನ್ನು ಕುರಿತು ಮೌಲಿಕವಾದ ಲೇಖನಗಳನ್ನು ಬರೆದಿದ್ದಾರೆ. ಅವು ನಾಡಿನ ಬೇರೆ ಬೇರೆ ಸಂಪತ್ರಿಕೆಗಳಲ್ಲಿ, ಅಭಿನಂದನ ಸಂಸ್ಮರಣ ಗ್ರಂಥಗಳಲ್ಲಿ ಪ್ರಕಟವಾಗಿವೆ. ಅವುಗಳ ಸ್ವರೂಪವನ್ನು ಕುರಿತು ಈ ಭಾಗದಲ್ಲಿ ವಿವೇಚಿಸಲಾಗಿದೆ.

'ನಿಘಂಟು ಶಾಸ್ತ್ರ ಮತ್ತು ಕನ್ನಡ ನಿಘಂಟುಗಳು' ತುಂಬ ಮೌಲಿಕ ಲೇಖನವಾಗಿದೆ[೧]. ಈ ಲೇಖನದಲ್ಲಿ ನಿಘಂಟು ಶಾಸ್ತ್ರದ ಅರ್ಥ, ಭಾರತದಲ್ಲಿ ನಿಘಂಟುರಚನೆಯ ಕಾರ್ಯ ಪ್ರಾರಂಭವಾದ ಬಗೆ, ಸಂಸ್ಕೃತ ಕೋಶಕಾರರು ಕನ್ನಡ ಕೋಶಕಾರರ ಮೇಲೆ ಬೀರಿದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿ, ಪ್ರಮುಖ ಇಂಗ್ಲಿಷ್ ಕೋಶಗಳಾದ ವೆಬ್ಸಟರ್ ಕೋಶ ಹಾಗೂ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟುಗಳ ಸ್ವರೂಪವನ್ನು ವಿವರಿಸಿದ್ದಾರೆ. ನಂತರ ರನ್ನಕಂದ ಮೊದಲುಗೊಂಡು ಸೂರ್ಯಕವಿಯ 'ಕವಿಕಂಠಹಾರ'ದವರೆಗಿನ ಎಲ್ಲ ಪ್ರಾಚೀನ ನಿಘಂಟುಗಳ ಬಗೆಗೆ ಸಂಕ್ಷಿಪ್ತವಾಗಿಯಾದರೂ ಚೊಕ್ಕಟ್ಟಾಗಿ ವಿವರಿಸಿದ್ದಾರೆ. ಮಿಶನರಿ ಕಾಲದ ಪ್ರಮುಖ ಕೋಶಕಾರರಾದ ರೀವ್, ಕಿಟೆಲ್, ಜಿಗ್ಲರ್ -ಇವರುಗಳ ನಿಘಂಟುರಚನಾಕಾರ್ಯ, ಅವರು ಆ ಕಾರ್ಯಕ್ಕೆ ಕೈಹಾಕುವ ಮೊದಲು ಅವರಿಗಿರುವ ಸಾಮಾಜಿಕ ಒತ್ತಡ ಈ ಕುರಿತು ಒಂದು ಲೇಖನದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ[೨]. 'ನಿಘಂಟು ಕ್ಷೇತ್ರಕ್ಕೆ ಕಿಟೆಲ್ಲರ ಕಾಣಿಕೆ'[೩] ಈ ಲೇಖನದಲ್ಲಿ ಕಿಟೆಲಕೋಶದ ಸ್ವರೂಪ, ಶಿಲ್ಪರಚನೆ, ಅದರ ಮಹತ್ವ, ಇತ್ಯಾದಿ ಅಂಶಗಳನ್ನು ಕುರಿತು ಸವಿವರವಾಗಿ ಮೌಲ್ಯಮಾಪನ ಮಾಡಿದ್ದಾರೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬಂದಿರುವ ಕನ್ನಡ-ಕನ್ನಡ ನಿಘಂಟುಗಳು, ಕನ್ನಡ ಇಂಗ್ಲಿಷ್ ನಿಘಂಟುಗಳು ಹಾಗೂ ಬೇರೆ ಬೇರೆ ಜ್ಞಾನಕ್ಷೇತ್ರಗಳಿಗೆ ಸಂಬಂಧಿಸಿದ ಪಾರಿಭಾಷಿಕ ಕೋಶಗಳ ಸ್ವರೂಪವನ್ನು ಕುರಿತು 'ಕನ್ನಡ ನಿಘಂಟುಗಳು'[೪] ಎಂಬ ಲೇಖನದಲ್ಲಿ ವಿವರಿಸಿದ್ದಾರೆ. 'ಕನ್ನಡ ನಿಘಂಟು ಕ್ಷೇತ್ರಕ್ಕೆ ತೀ.ನಂ.ಶ್ರೀ ಅವರ ಕೊಡುಗೆ'[೫] ಈ ಲೇಖನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುರಚನೆಯ ಪ್ರಥಮ ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ತೀ.ನಂ.ಶ್ರೀ. ಅವರು ಪಟ್ಟ ಶ್ರಮ, ಶ್ರದ್ಧೆ, ಮಾಡಿದ ಆಲೋಚನೆಯನ್ನು ವಿವರಿಸಿ ತೀ.ನಂ.ಶ್ರೀ. ಅವರ ಶಬ್ದಾರ್ಥವಿವೇಚನೆ, ಪ್ರಯೋಗಗಳನ್ನು ಸೂಚಿಸುವ ರೀತಿ, ವಿರಾಮಚಿಹ್ನೆಗಳ ಬಗೆಗೆ ಅವರಿಗಿರುವ ಶ್ರದ್ಧೆ, ಮುಂತಾದ ಅಂಶಗಳ ಬಗೆಗೆ ಆತ್ಮೀಯವಾದ ಶೈಲಿಯಲ್ಲಿ ನಿರೂಪಿಸಿದ್ದಾರೆ. ನಿಘಂಟು ರಚನೆಯ ನಮೂದುಗಳ ಬಗೆಗೆ ತೀ.ನಂ.ಶ್ರೀ. ಅವರಿಗೂ ಲೇಖಕರಿಗೂ ನಡೆದ ಪತ್ರವ್ಯವಹಾರದ ಪ್ರತಿಗಳ ಸಾಂಸ್ಕೃತಿಕ ದಾಖಲೆಗಳಾಗಿ ಪ್ರಸ್ತುತ ಲೇಖನದಲ್ಲಿ ನಿರೂಪಿತವಾಗಿವೆ. ಆದರ್ಶ ನಿಘಂಟುಕಾರ ಯಾವ ರೀತಿಯಾಗಿರಬೇಕು ಎಂಬುದನ್ನು ಈ ಲೇಖನ ಮಾರ್ಮಿಕವಾಗಿ ತಿಳಿಸುತ್ತದೆ.

ಪ್ರೊ. ಎಂ. ಮರಿಯಪ್ಪಭಟ್ಟರು ಪರಿಷ್ಕರಿಸಿ ಪ್ರಕಟಿಸಿದ ಕಿಟೆಲ್ ನಿಘಂಟುವಿನ ನಾಲ್ಕು ಸಂಪುಟಗಳ ಮೌಲ್ಯಮಾಪನವನ್ನು ಕುರಿತು ಬಸವಾರಾಧ್ಯರು 'ಕಿಟೆಲ್‌ರ ಕನ್ನಡ-ಇಂಗ್ಲೀಷ್ ನಿಘಂಟು -ಒಂದು ಅವಲೋಕನ' ಈ ಶೀರ್ಷಿಕೆಯಲ್ಲಿ ಮೌಲಿಕ ಲೇಖನವನ್ನು ಬರೆದಿದ್ದಾರೆ[೬]. ಈ ಲೇಖನದಲ್ಲಿ ಕನ್ನಡ ನಿಘಂಟು ಕ್ಷೇತ್ರಕ್ಕೆ ಭಟ್ ಅವರ ಕೊಡುಗೆಯನ್ನು ವಿವರಿಸಿ ಅವರ ಪರಿಷ್ಕರಣ ಸಂಪುಟಗಳ ಸ್ವರೂಪದ ಬಗ್ಗೆ ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ. ಆ ಪರಿಷ್ಕರಣ ಆವೃತ್ತಿಗಳಲ್ಲಿ ಉಳಿದಿರಬಹುದಾದ ಕೊರತೆಗಳನ್ನು ಉದಾಹರಣೆ ಸಮೇತವಾಗಿ ತಿಳಿಸಿದ್ದಾರೆ. ಕಿಟೆಲರ ನಿಘಂಟನ್ನು ಅಧ್ಯಯನ ಮಾಡುವ ಅಧ್ಯಯನಕಾರರಿಗೆ ಈ ಲೇಖನ ತುಂಬ ನೆರವಾಗುತ್ತದೆ.

ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥಾನವು (CIIL) ೧೯೮೦ರಲ್ಲಿ ಪ್ರಕಟಿಸಿದ 'Lexicography in India' ಈ ಗ್ರಂಥವು ಭಾರತೀಯ ಭಾಷೆಗಳಲ್ಲಿ ನಿಘಂಟು ರಚನೆಯ ಬಗೆಗೆ ನಡೆಸಿದ ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಲೇಖನಗಳ ಸಂಕಲನವಾಗಿದೆ. ಅದರಲ್ಲಿ ಬಸವಾರಾಧ್ಯರ 'Preparation of Kannada Dictionary on Historical Principles' ಎಂಬ ಲೇಖನವಿದೆ[೭]. ಅದರಲ್ಲಿ ಐತಿಹಾಸಿಕ ಭಾಷಾಶಾಸ್ತ್ರದ ಸೈದ್ಧಾಂತಿಕ ಅಂಶಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿದ ನಿಘಂಟುಗಳ ರಚನಾ ವಿಧಾನದ ಬಗ್ಗೆ ಅಭ್ಯಾಸಪೂರ್ಣವಾಗಿ, ಸ್ಥೂಲವಾಗಿ ವಿವೇಚನೆ ಮಾಡಿದ್ದಾರೆ.

ಎನ್. ಬಸವಾರಾಧ್ಯರು ಮೇಲಿನ ಲೇಖನಗಳಲ್ಲದೆ ಕೋಶರಚನೆಗೆ ಸಂಬಂಧಿಸಿದಂತೆ 'ಕನ್ನಡ ನಿಘಂಟು ಕನ್ನಡ ಸಾಹಿತ್ಯ ಪರಿಷತ್ತಿನ ಅಪೂರ್ವ ಸಾಧನೆ,' 'ಕನ್ನಡ ನಿಘಂಟುಶಾಸ್ತ್ರ' ಇಂತಹ ಲೇಖನಗಳಲ್ಲಿ ಪ್ರಾಚೀನ ಮತ್ತು ಆಧುನಿಕ ನಿಘಂಟುಗಳ ಬಗ್ಗೆ ಸುದೀರ್ಘವಾಗಿ ವಿವೇಚನೆ ಮಾಡಿದ್ದಾರೆ. ಆಯಾ ನಿಘಂಟುಗಳ ಸ್ವರೂಪದ ಬಗ್ಗೆ ಮೌಲಿಕವಾದ ವಿಚಾರಗಳನ್ನು ಹೇಳಿದ್ದಾರೆ. ಕನ್ನಡ ಕೋಶಗಳ ಸ್ಥೂಲ ಸ್ವರೂಪವನ್ನು ತಿಳಿದುಕೊಳ್ಳಲು ಅವು ತುಂಬ ನೆರವಾಗುತ್ತವೆ. ಕನ್ನಡ ನಿಘಂಟು ರಚನೆಗೆ ಕೃಷ್ಣಶಾಸ್ತ್ರಿಗಳ ಕಾಣಿಕೆಯನ್ನು ಕುರಿತು ಒಂದು ಲೇಖನದಲ್ಲಿ ಚರ್ಚಿಸಿದ್ದಾರೆ. ಶಿವರಾಮ ಕಾರಂತರ 'ಸಿರಿಗನ್ನಡ ಅರ್ಥಕೋಶ' ವನ್ನು ಕುರಿತು ಲೇಖನದಲ್ಲಿ ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ.

III

ಎನ್. ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್ತಿನ ಮಹತ್ವಾಕಾಂಕ್ಷಿ ಯೋಜನೆಯಾದ ಕನ್ನಡ-ಕನ್ನಡ ನಿಘಂಟು ಸಿದ್ಧತೆಯಲ್ಲಿ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ. ೧೯೫೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುಕಾರ್ಯಕ್ಕಾಗಿ ನಿಯೋಜಿತರಾಗಿ ೧೯೬೩ರಲ್ಲಿ ಕನ್ನಡ ನಿಘಂಟು ಸಂಪಾದಕರಾಗಿ ೧೯೭೦ರವರೆವಿಗೆ ನಿಘಂಟು ರಚನೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದರು. ಡಿ.ಎಲ್.ಎನ್ ಅವರ ಸೂಚನೆಯ ಮೇರೆಗೆ ಹಳಗನ್ನಡ ಕೃತಿಗಳಲ್ಲಿಯ ಶಬ್ದಗಳನ್ನು ಆಯ್ಕೆ ಮಾಡುವುದರ ಮೂಲಕ ಆ ಕ್ಷೇತ್ರದಲ್ಲಿ ಆಸಕ್ತಿಯನ್ನು ತಾಳಿದರು. ತನ್ಮೂಲಕ ಕನ್ನಡ ಕೋಶ ರಚನೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ-ಕನ್ನಡ ನಿಘಂಟು' ಬಸವಾರಾಧ್ಯರಂತಹ ಹಲವು ಪಂಡಿತರ ನೆರವಿನಿಂದ ರಚಿತವಾದ ಬೃಹತ್ ನಿಘಂಟು. ಐತಿಹಾಸಿಕ ಭಾಷಾಶಾಸ್ತ್ರದ ತತ್ವಗಳಿಗೆ ಅನುಸಾರವಾಗಿ ಚಾರಿತ್ರಿಕ ವಿವರಣೆಗಳಿಂದ ಕೂಡಿರುವ ಪ್ರಮಾಣ ಭೂತ ನಿಘಂಟುವಿದು. ಈಗಾಗಲೇ ಅದರ ೮ ಸಂಪುಟಗಳು ಪ್ರಕಟವಾಗಿವೆ. ಹಲ್ಮಿಡಿ ಶಾಸನದಿಂದ ಹಿಡಿದು ಇಂದಿನವರೆಗೆ ಉಪಲಬ್ಧವಿರುವ ಪ್ರಕಟಿತ, ಅಪ್ರಕಟಿತ ಕಾವ್ಯ, ಶಾಸ್ತ್ರ ಹಾಗೂ ಶಾಸನಗಳನ್ನು ಅವಲೋಕಿಸಿ ಶಬ್ದಗಳನ್ನು ಸಂಗ್ರಹಿಸಲಾಗಿದೆ. ಬರಹದ ರೂಪಗಳಂತೆ ಉಪಭಾಷಾರೂಪಗಳು ಇಲ್ಲಿ ದಾಖಲಾಗಿರುವುದು ವಿಶೇಷವಾಗಿದೆ. ಪ್ರಾಚೀನ ಕನ್ನಡ ನಿಘಂಟುಗಳಲ್ಲಿ ಕಂಡುಬಂದಿರುವ ಅರೆಕೊರೆಗಳನ್ನು ನಿವಾರಿಸಿಕೊಂಡು ಸಿದ್ಧವಾಗಿರುವ ಈ ನಿಘಂಟು ಕನ್ನಡಿಗರ ಬಹುದಿನದ ಆಶೋತ್ತರಗಳನ್ನು ಪೂರೈಸಿದೆ. ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುವುದೇ ಈ ನಿಘಂಟಿನ ಮುಖ್ಯ ಉದ್ದೇಶವಾಗಿದೆ. ಈ ನಿಘಂಟುರಚನೆಯ ಪ್ರತಿ ಹಂತದಲ್ಲಿಯೂ ಬಸವಾರಾಧ್ಯರ ಪಾತ್ರವಿದೆಯೆಂದು ಆ ಕ್ಷೇತ್ರದ ವಿದ್ಯಾರ್ಥಿಗಳು, ವಿದ್ವಾಂಸರು ಬಲ್ಲರು.

ಒಟ್ಟಿನಲ್ಲಿ ಕನ್ನಡ ಕೋಶ ರಚನೆಗೆ ಎಸ್. ಬಸವಾರಾಧ್ಯರ ಕಾಣಿಕೆ ಗಣ್ಯವಾಗಿದೆ. ಬಸವಾರಾಧ್ಯರು ಕೋಶರಚನೆಗೆ ಕೆಲವು ಮಾದರಿಗಳನ್ನು ರೂಪಿಸಿದರು. ಅದು ಅವರದ್ದೇ ಛಾಪು. ಕೋಶರಚನೆಯೂ ಕೂಡ ವೈಚಾರಿಕವಾಗಿ ಹೇಗೆ ಸೃಜನಶೀಲ ಮಾದರಿಯನ್ನಾಗಿ ಮಾಡಿಕೊಳ್ಳಬಹುದು ಎನ್ನುವುದು ಅವರಿಗೆ ಹಸ್ತಗತವಾಗಿದೆ. ಕೋಶರಚನೆಯ ವೈಧಾವಿಕತೆಯ ಬಗೆಗೆ ಅಧ್ಯಯನ ಮಾಡುವವರು ಬಸವಾರಾಧ್ಯರ ಸಾಧನೆಯನ್ನು ಗಮನಿಸಬೇಕೆಂದು ಬೇರೆ ಹೇಳಬೇಕಾಗಿಲ್ಲ.

ಅಡಿಟಿಪ್ಪಣಿಗಳು

೧. ನಿಘಂಟು ಶಾಸ್ತ್ರ ಮತ್ತು ಕನ್ನಡ ನಿಘಂಟುಗಳು 'ಸಂಶೋಧನ' (ಎಂ. ಚಿದಾನಂದ ಮೂರ್ತಿ ಗೌರವ ಸಂಪುಟ) ೧೯೯೧ (ಸಂ) ಲಕ್ಷ್ಮಣ್ ತೆಲಗಾವಿ.

೨. ರೀವ್, ಕಿಟೆಲ್, ಜಿಗ್ಲರ ಮುಂತಾದವರಿಂದ ಕನ್ನಡ ನಿಘಂಟು ಕಾರ್ಯ (೧೯೯೧) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ-೬ ಬೆ.ವಿ.ವಿ.

೩. ನಿಘಂಟು ಕ್ಷೇತ್ರಕ್ಕೆ ಕಿಟೆಲ್‌ರ ಕಾಣಿಕೆ ೧೯೭೧ ಕನ್ನಡಕ್ಕೆ ಕಿಟೆಲ್ಲರ ಕೊಡುಗೆ

೪. 'ಕನ್ನಡ ನಿಘಂಟುಗಳು' ಕನ್ನಡ ನುಡಿ ೨೦-೧೯

೫. 'ಕನ್ನಡ ನಿಘಂಟು ಕ್ಷೇತ್ರಕ್ಕೆ ತೀ.ನಂ.ಶ್ರೀ. ಅವರ ಕೊಡುಗೆ' ಶ್ರೀಕಂಠತೀರ್ಥ (ತೀ.ನಂ.ಶ್ರೀ ಸ್ಮಾರಕಗ್ರಂಥ) (ಸಂ) ಡಾ. ಎಂ. ಚಿದಾನಂದ ಮೂರ್ತಿ ಮತ್ತು ಇತರರು.

೬. 'ಕಿಟೆಲರ ಕನ್ನಡ ಇಂಗ್ಲೀಷ್ ನಿಘಂಟು -ಒಂದು ಅವಲೋಕನ' ಸಾರ್ಥಕ (ಪ್ರೊ. ಎಂ. ಮರಿಯಪ್ಪಭಟ್ ಸಂಸ್ಮರಣ ಸಂಪುಟ) (ಸಂ) ಶ್ರೀ ಕೃಷ್ಣಭಟ್ ಅರ್ತಿಕಜೆ.

7. Preparation of Kannada Dictionary on Historical Principles. `Lexcography in India' (edited By) B.G. Misra C.I.IL, Mysore.

XXX

ಕನ್ನಡ ಗದ್ಯಾವಲೋಕನ

-ಪ್ರೇಮಾಭಟ್

ಕನ್ನಡ ನಿಘಂಟು ಸಂಪಾದಕರೂ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರೂ ಆಗಿದ್ದ ಶ್ರೀ ಎನ್. ಬಸವಾರಾಧ್ಯರು ಮಾತುಗಾರರಲ್ಲ, ಅವಶ್ಯಕತೆಗಿಂತ ಅವರು ಹೆಚ್ಚು ಮಾತನಾಡುವವರಲ್ಲ, ಒಂದು ರೀತಿಯಲ್ಲಿ ಮಿತಭಾಷಿ ಎಂದು ಹೇಳ ಬಹುದು. ವೈಚಾರಿಕ ಹಾಗೂ ಸಂಶೋಧನ ಕ್ಷೇತ್ರದಲ್ಲಿ ವಿಶಿಷ್ಟವಾದ ಛಾಪನ್ನು ಮೂಡಿಸಿದ ಇವರು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಿಘಂಟು ಸಂಪಾದಕರಾಗಿದ್ದು, ಅವರ ಅವಧಿಯಲ್ಲಿ ಕನ್ನಡ ನಿಘಂಟುವಿನ ಸಂಪುಟವನ್ನು ಹೊರತಂದಂತಹ ಧೀಮಂತ ವ್ಯಕ್ತಿಯಾಗಿದ್ದಾರೆ.

"ಕನ್ನಡ ಗದ್ಯಾವಲೋಕನ" ಬಸವಾರಾಧ್ಯರು ಸಂಪಾದಿಸಿದ ವಿಶಿಷ್ಟ ಹಾಗೂ ಸಂಗ್ರಹ ಯೋಗ್ಯವಾದ ಗ್ರಂಥ. ಗದ್ಯ ಸಾಹಿತ್ಯದ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಇದು ಯಶಸ್ವಿಯಾಗಿದೆ, ಅದರೆ ಹಿಂದಿನ ಪರಿಶ್ರಮ ಬಸವಾರಾಧ್ಯರಿಗೆ ಸೇರಿದ್ದು. ವಿನೂತನವಾದ ಮತ್ತು ಸಂಯಮ ಶುದ್ಧವಾದ ಗಾಢ ಸತ್ವಗಳಿಂದ ಕೂಡಿರುವ ಬರಹಗಳು ಈ ಗ್ರಂಥಗಳಲ್ಲಿವೆ. ಲೇಖನಗಳನ್ನು ಆಯ್ಕೆಮಾಡುವಾಗಿನ ಬಸವರಾಧ್ಯರ ಕುಶಲತೆಯನ್ನು, ಜಾಣ್ಮೆಯನ್ನು ಗಮನಿಸ ಬಹುದು. ಬಸವಾರಾಧ್ಯರು ಕ್ರಿ.ಶ. ೧೮೫೦ ರಿಂದ ೧೯೫೦ ರವರೆಗಿನ ಅವಧಿಯ ಗದ್ಯಸಾಹಿತ್ಯವನ್ನು ಆರಿಸಿಕೊಂಡು ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಬಸವಾರಾಧ್ಯರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಈ ಗ್ರಂಥದಲ್ಲಿ ಹನ್ನೊಂದು ಮಂದಿ ವಿದ್ವಾಂಸರ ಬರಹಗಳಿದ್ದು ಕನ್ನಡ ಗದ್ಯವಿಕಾಸ, ಹಾಗೂ ಕನ್ನಡ ಗದ್ಯವಾಲೋಕನ ಕ್ರಿ.ಶ. ೪೫೦ ರಿಂದ ೧೯೫೦ ರವರೆಗೆ ಕನ್ನಡ ಸಾಹಿತ್ಯ ಬೆಳೆದು ಬಂದ ಬಗೆ ಹಾಗು ಅದರ ವಿಕಾಸವನ್ನು ದಾಖಲಿಸುತ್ತದೆ. ಈ ಎರಡೂ ಗ್ರಂಥವನ್ನು ಹೊರತಂದ ಮುಖ್ಯೋದ್ದೇಶವೂ ಇದೇ ಆಗಿದೆ.

ಮನುಷ್ಯನ ಭಾವನೆಗಳು, ಆಲೋಚನೆಗಳು ಚಿಂತನೆಗಳು ಏಕರೀತಿಯಾಗಿರಲು ಸಾಧ್ಯವಿಲ್ಲ. ಅದು ಮನುಷ್ಯನಿಂದ ಮನುಷ್ಯನಿಗೆ, ಕಾಲದಿಂದ ಕಾಲಕ್ಕೆ ವಿಭಿನ್ನವೂ ವೈವಿಧ್ಯಮಯವೂ ಆಗಿರುತ್ತದೆ. ಆ

ನಿರಂತರ ಚಲನೆಯೇ ಜೀವಸತ್ವದ ಚಿನ್ಹೆಗಳು, ಭಾವನೆಗಳು ಎಷ್ಟು ರೀತಿಯೋ ಅದನ್ನು ಅಭಿವ್ಯಕ್ತಿಗೊಳಿಸುವ ರೀತಿಯೂ ಅಷ್ಟೇ ವೈವಿಧ್ಯಪೂರ್ಣವಾದುದು. ಕಾಲದಿಂದ ಕಾಲಕ್ಕೆ ವ್ಯಕ್ತಿಯ ವಿಚಾರದಲ್ಲಿ ಆಲೋಚನೆಗಳಲ್ಲಿ ಆಗುವ ಬದಲಾವಣೆಯೇ ಸಾಹಿತ್ಯದ ಜೀವಸತ್ವ, ವ್ಯಕ್ತಿಯ ಮನೋವಿಕಾಸದ ಫಲವೇ ಸಾಹಿತ್ಯ ವಿಕಾಸವೂ ಕೂಡ.

ಕಾಲದಿಂದ ಕಾಲಕ್ಕೆ ಕನ್ನಡಗದ್ಯರಚನೆ, ಭಾಷಾಶೈಲಿಯಲ್ಲಿ ಆಗಿರುವ ಆಗುತ್ತಾ ಬಂದಿರುವ ಬದಲಾವಣೆಯನ್ನು ವಾಗ್ಝೋರಣೆಯ ವಿಕಾಸವನ್ನು ಈ ಗ್ರಂಥದಲ್ಲಿ ಗುರುತಿಸಬಹುದು. ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಇದೊಂದು ಉತ್ತಮ ಕೊಡುಗೆ.

೧೮೫೪-೧೯೫೦ ರ ಅವಧಿಯಲ್ಲಿ ಪ್ರಕಟವಾಗಿರುವ ದಿ. ಎಂ.ಎಸ್. ಪುಟ್ಟಣ್ಣನವರ "ಪಾಳೆಗಾರರು" ಸಂಕಲನದ ಮೊದಲ ಬರಹವಾಗಿದ್ದು, ಅವರ ಬರಹಕ್ಕೂ ಮಾಸ್ತಿಯವರ "ನಿಜಗಲ್ಲಿನ ರಾಣಿ" ಬರಹಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಬಹುದಾದರೂ, ಭಾಷೆ ವಸ್ತುವಿನ ಕಾಲಕ್ಕೆ ಕೊಂಡೊಯ್ಯುವ ಬನಿಯಿಂದ ಕೂಡಿದೆ. ಸಾಹಿತ್ಯ ಸೃಜನಶೀಲತೆಯು ಒಂದು ಸಾಮಾನ್ಯ ನೆಲೆಯಾಗಿದ್ದು, ಸೃಜನಶೀಲ ಬರಹಗಾರನಾದವನು ತನ್ನ ಯುಗದ ಅಂತರಂಗವನ್ನು, ಬದುಕಿನ ಚಲನಶೀಲತೆಯ ಹಿನ್ನಲೆಯಲ್ಲಿಟ್ಟು, ಅನುಭವದ ನೆಲೆ ಮತ್ತು ಅನುಭವಿಸುವ ವಿಧಾನಗಳು ಬದಲಾಗುವುದನ್ನು ಗುರುತಿಸುತ್ತಲೆ ಸಾಹಿತ್ಯ ರಚನಗೆ ಇಳಿಯುತ್ತಾನೆ. ಆಯಾಕಾಲಕ್ಕೆ ಹೊಂದಿಕೊಂಡ ಪಾತ್ರಗಳು, ಚಲನಶೀಲತೆಯಲ್ಲಿ ಮುಂದುವರೆದು ಚಿಗುರೊಡೆಯುತ್ತವೆ. ಚಲನಶೀಲತೆಯಲ್ಲಿ ಹೊಸದಾಗಿ ಚಿಗುರೊಡೆದ ಪಾತ್ರಗಳು ಮಾಸ್ತಿಯವರದ್ದು, ಇಲ್ಲಿಯ ಯಾವುದೇ ಬರಹಗಳಲ್ಲಿ ಸರಳ ಶಕ್ತಿವಂತ ಪಾತ್ರಗಳನ್ನು ಕಾಣಬಹುದು, ಯಾವುದೇ ಪಾತ್ರಗಳು ತಮ್ಮ ಮಿತಿಯನ್ನು ಮೀರುವುದಿಲ್ಲ.

ಕನ್ನಡ ಗದ್ಯಾವಲೋಕನ ಈಗಾಗಲೇ ನಾಲ್ಕು ಆವೃತ್ತಿಯನ್ನು ಕಂಡಿದೆ ಎನ್ನುವಾಗ ಅದರ ಮೌಲ್ಯ ಎಷ್ಟು ಎನ್ನುವುದು ಅರಿವಾಗದಿರದು. ಬಸವಾರಾಧ್ಯರು ಕನ್ನಡ ಗದ್ಯ ಸಾಹಿತ್ಯಕ್ಕೆ ತಮ್ಮ ಸಂಪಾದಕತ್ವದಲ್ಲಿ ವಿಶಿಷ್ಟವಾದ ಕೊಡುಗೆಯನ್ನೇ ಕೊಟ್ಟಿದ್ದಾರೆ. ಅವರು ಅಭಿನಂದನಾರ್ಹರು.

ಸಂಪಾದಕನಾದವನಿಗೆ ನಿಷ್ಕಪಟ ಮನಸ್ಸು, ಪ್ರಾಮಾಣಿಕತೆ, ನಿಷ್ಠೂರನಿಲುವು ಇರಬೇಕಾಗುತ್ತದೆ. ಅಂಥವರಿಂದ ಮಾತ್ರ ಇಂಥದೊಂದು ಉತ್ತಮ ಕೃತಿಯನ್ನು ಹೊರತರಲು ಸಾಧ್ಯ. ಶ್ರೀಯುತರು ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ತೋರಿಸಿದ್ದಾರೆ.

ತನ್ನ ಶಕ್ತಿಯನಳೆದು, ತನ್ನ ಗುಣಗಳ ಬಗೆದು।
ಸನ್ನಿವೇಶದ ಸೂಕ್ಷ್ಮವರಿತು, ಧೃತಿದಳೆದು॥
ತನ್ನ ಕರ್ತವ್ಯ ಪರಿಧಿಯ ಮೀರಿದುಜ್ಜುಗಿಸೆ।
ಪುಣ್ಯಶಾಲಿಯ ಪಾಡು-ಮಂಕುತಿಮ್ಮ॥

ಮನುಷ್ಯ ತನ್ನ ಶಕ್ತಿಯನ್ನರಿತು ಹಾಗೂ ತನ್ನ ಶಕ್ತಿಗನುಗುಣವಾಗಿ ತೀರ್ಮಾನವನ್ನು ತೆಗೆದುಕೊಂಡು ಅದರ ಪರಿಧಿಯೊಳಗೆ ಯಾರು ಕೆಲಸ ಮಾಡುತ್ತಾನೋ ಅವನು ಪುಣ್ಯಶಾಲಿಯಂತೆ. ಅಂಥದೊಂದು ವಿವೇಚನೆಯನ್ನಿಟ್ಟುಕೊಂಡು ಈ ಗ್ರಂಥವನ್ನು ಹೊರತಂದಿರುವ ಮಾನ್ಯ ಬಸವಾರಾಧ್ಯರ ಅಭಿನಂದನಾ ಸಮಾರಂಭ ಇಷ್ಟರಲ್ಲೇ ನಡೆಯಲಿದ್ದು, ಅವರಿಗೆ ಶುಭವಾಗಲಿ.

ಯಾವುದೇ ಒಂದು ಸಾಹಿತ್ಯ ಕೃತಿ ಶ್ರೇಷ್ಠ ಅಥವಾ ವಿಶಿಷ್ಟ ಎನಿಸಿಕೊಳ್ಳುವುದು ಸೊಗಸಾದ ನಿರೂಪಣೆಯಿಂದ, ಚಮತ್ಕಾರಿಕವಾದ ಅಭಿವ್ಯಕ್ತಿಯಿಂದ. ದಟ್ಟವಾದ ಅನುಭವಗಳನ್ನು ಮತ್ತು ಮಾನವೀಯ ಮೌಲ್ಯಗಳನ್ನು ಏಕತ್ರ ಮಾಡಿಕೊಂಡಾಗ ಮಾತ್ರ, ಸಾಹಿತ್ಯದ ಬೆಳವಣಿಗೆ ವಿಕಾಸದ ಜೊತೆಗೆ ಇದನ್ನು ಗಮನಿಸಿದಾಗ ಇದೊಂದು ಮೌಲ್ಯಾಧಾರಿತ ಕೃತಿಯೆಂದೇ ಹೇಳಬೇಕಾಗುತ್ತದೆ.

XXX

ಗುರುಗಳಾಗಿ ಎನ್. ಬಸವಾರಾಧ್ಯರು

-ಹೆಚ್.ಜಿ. ವಿಜಯಲಕ್ಷ್ಮಿ

ಕನ್ನಡ ಸಾಹಿತ್ಯದಲ್ಲಿನ ವಿದ್ಯಾರ್ಥಿಗಳಿಗೆ ಚಿರಪರಿಚಿತರಾದ ಹೆಸರು ಎನ್. ಬಸವಾರಾಧ್ಯ ಅವರದು. ೧೯೭೬-೭೮ರಲ್ಲಿ ನಾನು ಮೈಸೂರು ವಿ.ವಿ.ನಿಲಯದ ವಿದ್ಯಾರ್ಥಿನಿ. ಶ್ರೀಯುತರು ಬೋಧಕ ಬೋಧಕೇತರ ತಂಡದಲ್ಲಿ ಬೋಧಕೇತರ ಸಿಬ್ಬಂದಿ ವರ್ಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದರೆ ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಲ್ಲಿ ಅಪಾರವಾದ ವಿಶ್ವಾಸವುಳ್ಳವರು, ಚಿರಪರಿಚಿತರೂ ಹೌದು.

ಮೈಸೂರಿನ ಸರಸ್ವತೀಪುರಂನಲ್ಲಿರುವ ನಿವಾಸಿಯಾದ ಶ್ರೀಯುತರು ಎಷ್ಟೋ ಸಂಜೆ ನಮ್ಮೊಂದಿಗೆ ಮಾನಸಗಂಗೋತ್ರಿಯಿಂದ ನಡೆದು ಬರುತ್ತಿದ್ದರು. ಆಗ ನಾನು ಸರಸ್ವತಿಪುರಂನಲ್ಲಿ ಇದ್ದೆ, ಓದಿಗೆ ಎಲ್ಲಾ ರೀತಿ ಸಹಾಯ ಮಾಡುತ್ತಿದ್ದರು. ಅಲ್ಲಿನ ಗ್ರಂಥಾಲಯದಿಂದ ಎರವಲು ಪುಸ್ತಕಗಳನ್ನು ಕೊಡಿಸುತ್ತಿದ್ದರು. ಅಷ್ಟೇ ಅಲ್ಲ "Earn while you learn" ಎಂಬ ಯೋಜನೆಯಡಿ ನನಗೆ ದಿನಕ್ಕೆ ಎರಡು ಘಂಟೆ ಕಾಲ ಕೆಲಸ ಮಾಡುವ ಅವಕಾಶ ಕೊಡಿಸುವುದರ ಮೂಲಕ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲಿನ ಅಭಿಮಾನವನ್ನು ಎತ್ತಿ ತೋರಿಸಿದ್ದಾರೆ.

ಗುರುಗಳಾಗಿ ಅವರ ವಿಶಾಲಮನೋಭಾವನೆಯನ್ನು ಅಂದಿನ ಎಲ್ಲಾ ವಿದ್ಯಾರ್ಥಿವೃಂದ ಇಂದಿಗೂ ನೆನೆಯುತ್ತಿದೆ. ಶಿಷ್ಯರಿಂದ ಪರಾಜಿತಗೊಳ್ಳುವುದು ಅಂದಿನ ಗುರುಗಳ ಹೆಗ್ಗಳಿಕೆಯೂ ಆಗಿತ್ತು. ತಮ್ಮ ಪ್ರೌಢಿಮೆ, ಪ್ರತಿಭೆಯನ್ನು ಶಿಷ್ಯರ ಏಳಿಗೆಯ ಮೂಲಕ ಆನಂದಿಸುವುದು, ಅವರ ಏಳಿಗೆಯಲ್ಲಿ ತಮ್ಮ ಮನಸ್ಸಿನ ಆನಂದವನ್ನು ಅನುಭವಿಸುವ ಕಾಲ ಅದಾಗಿತ್ತು. ಇಂದಿನ ಗುರುಗಳಲ್ಲಿ ಎಷ್ಟು ಜನ ಗುರುಗಳಿಗಿದೆ ಆ ಮನೋಭಾವ?

ಸರಸ್ವತಿಪುರಂನಲ್ಲಿರುವ ಅವರ ನಿವಾಸ ಸದಾ ಬಂಧು-ಮಿತ್ರರಿಂದ, ವಿದ್ಯಾರ್ಥಿ ವೃಂದದಿಂದ ತುಂಬಿ ತುಳುಕುತ್ತಿತ್ತು. ಅದಕ್ಕೆ ಸಹಕಾರವೆಂಬಂತೆ ಅವರ ಧರ್ಮಪತ್ನಿ ಸರ್ವಮಂಗಳಾದೇವಿ

ಅವರು ಮನೆಗೆ ಬಂದ ಅತಿಥಿಗಳಿಗೆ ಆದರೋಪಚಾರಗಳನ್ನು ಮಾಡುತ್ತಿದ್ದದ್ದು ನಮ್ಮ ಗುರುಗಳಿಗೆ ಚೇತೋಹಾರಿಯಾಗಿತ್ತು ಎಂದರೆ ಉತ್ಪ್ರೇಕ್ಷೆಯಲ್ಲ.

ಗುರುಸ್ಥಾನ ತುಂಬಾ ಶ್ರೇಷ್ಠವಾದದ್ದು. ಒಂದಕ್ಷರ ಕಲಿಸಿದವರು ಗುರುಗಳಾಗಿರುತ್ತಾರೆ. ಗುರು-ಶಿಷ್ಯರ ಪರಂಪರೆ ನಮ್ಮ ಕನ್ನಡ ಸಾಹಿತ್ಯದಲ್ಲಿ ಅವಿರತವಾಗಿ ಹರಿದುಬಂದಿದೆ. ಗುರುಕುಲ ಪದ್ಧತಿ ಕೂಡ ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾದ ಅಂಶ.

ಮೈಸೂರು ವಿ.ವಿ. ನಿಲಯ ಹಳೆಯದು, ತುಂಬಾ ಮೌಲಿಕ ಕೊಡುಗೆ ನೀಡುವಂಥದ್ದು. ಅಂತಹ ಮೈಸೂರು ವಿ.ವಿ. ನಿಲಯದಲ್ಲಿ ಶ್ರೀಯುತರಂತಹ ಮೇಧಾವಿಗಳು ಅಸಂಖ್ಯಾತ ಶಿಷ್ಯಕೋಟಿಯ ನಿರ್ಮಾಣ ಮಾಡಿರುತ್ತಾರೆ. ಅಂತಹ ಗುರುಗಳ ವಿದ್ಯಾರ್ಥಿನಿ ನಾನು ಎಂಬುದು ಪ್ರಸ್ತುತ ಸನ್ನಿವೇಶದಲ್ಲಿ ಮನದಾಳದಿಂದ ತುಂಬಿ ಬಂದ ಮಾತು.

XXX

ನಾ ಕಂಡ ಬಸವಾರಾಧ್ಯರು

-ಪಿ. ಮನೋಹರಿ ಪಾರ್ಥಸಾರಥಿ

ನಾನು ಸುಮಾರು ೬, ೭ ವರ್ಷಗಳ ಹಿಂದೆ, ಬಸವಾರಾಧ್ಯರು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿದ್ದಾಗ, ಅವರನ್ನು ಕಛೇರಿಯಲ್ಲಿ ಭೇಟಿ ಮಾಡಿದೆ. ಒಬ್ಬರಿಗೊಬ್ಬರ ಪರಿಚಯವಾಯಿತು. ಅವರು ಆತ್ಮೀಯವಾದ ದನಿಯಲ್ಲಿ "ಬನ್ನಿ, ಬನ್ನಿ ಆಧುನಿಕ ಅತ್ತಿಮಬ್ಬೆಯೇ ನಮ್ಮಲ್ಲಿಗೆ ಬಂದ ಹಾಗಾಯ್ತು ಬನ್ನಿ ಮೇಡಂ, ಕುಳಿತುಕೊಳ್ಳಿ" ಎಂದರು. ಅಲ್ಲಿ ಅಂದರೆ ಅವರ ಕಛೇರಿಯಲ್ಲಿ ಇನ್ನೂ ಬಹಳಷ್ಟು ಜನ ಕುಳಿತಿದ್ದರು. ಅವರೆಲ್ಲರನ್ನೂ ಆತ್ಮೀಯವಾಗಿ ಪರಿಚಯಗೈದರು. ಎಲ್ಲರಿಗೂ ಮತ್ತೊಮ್ಮೆ ಕಾಫಿ ಸೇವನೆ ಆಯ್ತು. ಮತ್ತೆ ನಮ್ಮ ಕಾರ್ಯಕ್ರಮಕ್ಕೆ ಅವರನ್ನು ಆಹ್ವಾನಿಸಿದೆ. ಸಂತೋಷದಿಂದ ಬಂದು ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನನ್ನ ಬಗ್ಗೆ, ಪಾರ್ಥಸಾರಥಿಯವರ ಬಗ್ಗೆ ತುಂಬು ಮನಸ್ಸಿನ ಆಶೀರ್ವಾದ ಮಾಡಿದರು. ಅವರಲ್ಲಿರುವ ಆತ್ಮವಿಶ್ವಾಸ, ಅವರ ಸಂತೋಷಚಿತ್ತ, ಅವರ ಅಭಿಮಾನದಿಂದ ಬಂದ ಮಾತುಗಳು ನನ್ನನ್ನ ಮೂಕಳನ್ನಾಗಿ ಮಾಡಿತು. ಒಬ್ಬ ಹಿರಿಯ ವಿದ್ವಾಂಸರಾಗಿ ಅವರು ಕಿರಿಯರೇ ಇರಲಿ, ಹಿರಿಯರೇ ಇರಲಿ ಎಲ್ಲರಿಗೂ ಒಂದೇ ಸಮನಾದ ಮನೋಭಾವದಿಂದ ಮಾತನಾಡುತ್ತಾರೆ. ಅವರ ಆ ಒಂದು ಮಾತಿನ ಧಾಟಿಯೇ ಎಲ್ಲರಿಗೂ ವಿಶ್ವಾಸ, ನಂಬಿಕೆ ಮೂಡುತ್ತದೆ. ಅದು ಅವರಲ್ಲಿ ಇರುವ ದೊಡ್ಡ ಗುಣ. ಪ್ರೊ. ಬಸವಾರಾಧ್ಯರು, ನಮ್ಮ ಅತ್ತಿಮಬ್ಬೆ ವಿಶ್ವಸ್ಥ ಮಂಡಳಿಯ ಟ್ರಸ್ಟಿಯೂ ಆಗಿದ್ದಾರೆ. ಆ ಒಂದು ಹಿರಿಯ ಚೇತನ ನಮ್ಮ ವಿಶ್ವಸ್ಥ ಮಂಡಳಿಯಲ್ಲಿ ಇರುವುದೇ ನಮ್ಮ ಸೌಭಾಗ್ಯ. ಅವರನ್ನು ಕೇಳದೆ ನಾನು ಯಾವ ನಿರ್ಧಾರವನ್ನೂ ತೆಗೆದುಕೊಳ್ಳುವುದಿಲ್ಲ. **"ಹಿರಿಯ ಚೇತನರು ನಮಗೆ ಮಾರ್ಗದರ್ಶಕರಾಗಿರುವುದೇ ನಮ್ಮ ಸುಕೃತ."** ಅವರದೇ ಆದ ದಿಟ್ಟ ನಿಲುವು, ಸರಿಯಾದ ನಿರ್ಧಾರ. ಯಾರನ್ನೂ ಅವರು ಗಣನೆಗೆ ತೆಗೆದುಕೊಳ್ಳದೆ ನೇರವಾಗಿ ನುಡಿಯುತ್ತಾರೆ. ಅವರ ಈ ನೇರ ನುಡಿಯ ಮಾತು ನಮಗೆಲ್ಲರಿಗೂ ಬಹಳ ಇಷ್ಟ. **"ಈ ರೀತಿಯ ಪ್ರವೃತ್ತಿ ಬೆಳೆಸಿಕೊಂಡು ಬಂದ ಮಹಾಚೇತನದ ವ್ಯಕ್ತಿ ಬಸವಾರಾಧ್ಯರು."**

ಅವರ ಮಾರ್ಗದರ್ಶನದಲ್ಲಿ ನಾವು ನಡೆದು ಬರುತ್ತಿರುವುದೇ ನಮ್ಮ ಸೌಭಾಗ್ಯ. ಬಹಳ ಮುಖ್ಯ ಕಾರ್ಯಕ್ರಮವಾದ ಬನಶಂಕರಿ ೨ನೇ ಹಂತ, ೧೩ನೇ ಅಡ್ಡರಸ್ತೆಗೆ ಅತ್ತಿಮಬ್ಬೆ ರಸ್ತೆ ನಾಮಕರಣದ ಸಂದರ್ಭದಲ್ಲಿ ಅವರ ನೇರ ನುಡಿಯ ಮಾತು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿದೆ. "**ಎಲ್ಲರೂ ರಸ್ತೆಯ ನಾಮಕರಣ ಮಾಡುತ್ತಾರೆ. ಆದರಲ್ಲಿ ಈ ಅತ್ತಿಮಬ್ಬೆಯ ಹೆಸರನ್ನು ಶಾಶ್ವತವಾಗಿ ಉಳಿಸಿ**" ಎಂದರು. ಆ ಮಹಾನಗರ ಪಾಲಿಕೆಯಲ್ಲಿ ಕೆಲಸವಾಗಬೇಕಾದರೆ ಬೇಕಾದಷ್ಟು ಸಲ ಓಡಾಡಿ ಆ ಕಾರ್ಯ ಸಾಧಿಸಿದರು. ಮನೋಹರಿ ಪಾರ್ಥಸಾರಥಿ ಅವರಿಂದ ಒಂದು ಒಳ್ಳೆಯ ಕೆಲಸವಾಗಿದೆ. ಆ ೧೦ನೇ ಶತಮಾನದ ದಾನಚಿಂತಾಮಣಿ ಅತ್ತಿಮಬ್ಬೆ ಹೆಸರು ಹೇಳಿದರೆ ಸಾಕು, ನಾವು ಮಾಡಿದ ಪಾಪಗಳೆಲ್ಲಾ ಕಳೆದುಹೋಗುತ್ತವೆ. ಅಂತಹ ರಸ್ತೆಯಲ್ಲಿ ತಾವೆಲ್ಲ ಸಾರ್ವಜನಿಕರು ಓಡಾಡುತ್ತೀರಿ. ನೀವೆಲ್ಲಾ ಪುಣ್ಯವಂತರು. ಇಡೀ ಕರ್ನಾಟಕದಲ್ಲೇ ಆಗಲಿ, ಅತ್ತಿಮಬ್ಬೆ ಹುಟ್ಟಿದ ಸ್ವಂತ ಊರಿನಲ್ಲೇ ಆಗಲಿ ಆಕೆ ಹೆಸರು ಹೇಳಲು ಒಂದು ದಾಖಲೆ ಇಲ್ಲ. ನಮ್ಮ ಕರ್ನಾಟಕ ರಾಜಧಾನಿಯಾದ ಬೆಂಗಳೂರು, ಬನಶಂಕರಿ ೨ನೇ ಹಂತದ ಈ ರಸ್ತೆಗೆ ಹೆಸರು ಇಟ್ಟಿದ್ದಾರೆ. ಇದು ಒಂದು ಪುಣ್ಯ ವಿಶೇಷವೆಂದು ವೇದಿಕೆಯಲ್ಲಿ ಮಾತನಾಡಿ ತಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಿದರು. ಆ ಹಿರಿಯ ಚೇತನರು ಕಾರ್ಪೊರೇಷನ್‌ನಲ್ಲಿ ಅವರಿಗೆ ಗೊತ್ತಿರುವ ವ್ಯಕ್ತಿಗಳ ಜೊತೆ ದೂರವಾಣಿ ಮೂಲಕ ಸಂಪರ್ಕಿಸಿದ್ದಾರೆ. ಬೇಗ ಒಪ್ಪಿಗೆಯ ಪತ್ರ ಕೊಡಿ ಎಂದಿರುವರು. ನಮ್ಮ ಜೊತೆ ಎಷ್ಟೋ ಸಲ ಮಹಾನಗರ ಪಾಲಿಕೆಗೆ ಬಂದು ಅಧಿಕಾರಿಗಳ ಹತ್ತಿರ ಮಾತನಾಡಿ ಮೂರ್‍ನಾಲ್ಕು ವರ್ಷ ಸತತ ಪ್ರಯತ್ನಗಳು ಮಾಡಿ ಕೊನೆಗೂ ಹಠದಿಂದ ಆ ಹಿರಿಯ ಚೇತನದ ಶ್ರಮದ ಫಲದಿಂದ, ಅತ್ತಿಮಬ್ಬೆಯ ಬಗ್ಗೆ ಅವರಿಗೆ ಇದ್ದ ಅಪಾರವಾದ ಗೌರವದ ಫಲವಾಗಿ ಅತ್ತಿಮಬ್ಬೆ ರಸ್ತೆಗೆ ನಾಮಕರಣವಾಯಿತು. ಈ ಹೋರಾಟದಲ್ಲಿ ನಮ್ಮ ಬಗ್ಗೆ ಅವರಿಗೆ ಇದ್ದ ಅಭಿಮಾನವನ್ನು ನಾನು ಮರೆಯುವ ಹಾಗಿಲ್ಲ. ರಸ್ತೆಯ ನಾಮಕರಣದ ಹಿಂದೆ ಎಷ್ಟೋ ಹಿರಿಯರು ಶ್ರಮ ವಹಿಸಿದ್ದಾರೆ. ಅವರೆಲ್ಲರಿಗೂ ನಾನು ಚಿರಋಣಿ ಆಗಿದ್ದೇನೆ. "ಆದರೆ ಬಸವಾರಾಧ್ಯರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಬೆಳಗೂ, ಸಾಯಂಕಾಲವಾದರೆ ಸಾಕು, ಮಹಾನಗರ ಪಾಲಿಕೆಗೆ ಫೋನ್ ಮಾಡುವುದು... ಅವರು ಏನಂದ್ರು? ಮತ್ತೊಬ್ಬರು ಏನಂದ್ರು...? ಇದೇ ವಿಚಾರ ಅವರ ತಲೆ ತುಂಬ ತುಂಬಿತ್ತು. ನನಗೆ ಆಗಾಗ್ಗೆ ಎಚ್ಚರಿಸುತ್ತಿದ್ದರು. ನಾನು ಸುಮ್ಮನಿದ್ದರೂ ಸಹ ಅವರು ಸುಮ್ಮನಿರುತ್ತಿರಲಿಲ್ಲ. ಬಹಳಷ್ಟು ಸಾರಿ ರೇಗುತ್ತಿದ್ದರು. ಆ ರೇಗುವುದರಲ್ಲೂ ನಮ್ಮ ಬಗ್ಗೆ ಅಭಿಮಾನ ತುಂಬಿ ತುಳುಕಾಡುತ್ತಿತ್ತು. ಕರ್ತವ್ಯನಿಷ್ಠೆ, ಸಮಯ ಪ್ರಜ್ಞೆ ಇವೆಲ್ಲವನ್ನೂ ಮೈಗೂಡಿಸಿಕೊಂಡ ಮಹಾವ್ಯಕ್ತಿ ಬಸವಾರಾಧ್ಯರು. ಅಂತಹವರ ಮಾರ್ಗದರ್ಶನದಲ್ಲಿ ನಾನು ಇರುವುದು ನನ್ನ ಪುಣ್ಯವಿಶೇಷ.

ಅವರಿಗೆ ಅಭಿನಂದನಾ ಕಾರ್ಯಕ್ರಮ ಮಾಡುತ್ತಿರುವುದು ನಮ್ಮ ನಾಡಿಗೆ, ಕರ್ನಾಟಕಕ್ಕೆ, ಸಾಹಿತ್ಯ ಕ್ಷೇತ್ರಕ್ಕೆ ಹೆಮ್ಮೆಪಡುವಂತಹ, ವಿಚಾರ. ಆ ಹಿರಿಯ ಚೇತನಕ್ಕೆ ನಮ್ಮ ಅತ್ತಿಮಬ್ಬೆ ಪ್ರತಿಷ್ಠಾನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅವರು ನೂರ್ಕಾಲ ಬಾಳಲಿ. ನೂರು ಜನುಮವೆತ್ತಲಿ, ಸದಾ ನಮ್ಮೊಂದಿಗೆ ಇರಲಿ. ಅವರ ನೇರ ನುಡಿ, ನಡೆ, ಮಾರ್ಗದರ್ಶನ ನಮಗೆ ಸದಾ ಆಶೀರ್ವಾದವಾಗಿರಲಿ.

ಕುಟುಂಬವತ್ಸಲ ಎನ್.ಬಿ.

****

ನನ್ನ ತಂದೆ ಎನ್. ಬಸವಾರಾಧ್ಯರು

-ಎನ್.ಬಿ. ಮಲ್ಲಿಕಾರ್ಜುನಮೂರ್ತಿ

"ಮಕ್ಕಳಿಗೆ ತಂದೆ ಬಾಲ್ಯದೊ
ಳಕ್ಕರ ವಿದ್ಯೆಗಳನರುಪದಿರ್ದೊಡೆ ಕೊಂದಂ
ಲಕ್ಕಧನಮಿರಲು ಕೆಡುಗು ಚೂಡಾರತ್ನ"

ಎಂಬುದು ಸುಭಾಷಿತ. ಮಕ್ಕಳಿಗೆ ಸೂಕ್ತ ವಿದ್ಯಾಬುದ್ಧಿಯನ್ನು ಕೊಡಿಸಿ ಅವರ ಜೀವನವನ್ನು ರೂಪಿಸುವುದರಲ್ಲಿ ತಂದೆಯ ಪಾತ್ರ ಮಹತ್ತರವಾದುದು.

ನನ್ನ ತಂದೆಯವರು ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್ಯರಂತಹ ಪ್ರಖ್ಯಾತ ವಿದ್ವಾಂಸರ ಶಿಷ್ಯರಾಗಿ, ಕನ್ನಡ ನಿಘಂಟು ರಚನೆಯಲ್ಲಿ ಅಗಾಧ ಪರಿಶ್ರಮವುಳ್ಳವರಾಗಿ ಕಾರ್ಯನಿರ್ವಹಿಸಿ ಎಲ್ಲಾ ಸಂಪುಟಗಳನ್ನು ಹೊರತರುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೀರ್ತಿ ತಂದರು.

ಇದಾದ ನಂತರ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪನಿರ್ದೇಶಕರಾಗಿ ನೇಮಕಗೊಂಡು, ಅನೇಕ ಗ್ರಂಥಗಳನ್ನು ಸಂಪಾದನೆ ಮಾಡಿ ಪ್ರಕಟಣೆಗೊಳ್ಳಲು ನೆರವಾಗಿದ್ದಾರೆ. ಸ್ವತಃ ತಾವೇ ಅನೇಕ ಗ್ರಂಥಗಳನ್ನು ಸಂಪಾದಿಸಿ, ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟ ಮಾಡಿಸಿದ್ದಾರೆ.

ನಿವೃತ್ತಿಯ ನಂತರವೂ, ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಭಾಷಾಂತರ ಸರಳೀಕರಣ ಸಮಿತಿಯ ಸದಸ್ಯರಾಗಿ, ಇಲಾಖಾ ಪಾರಿಭಾಷಿಕ ಪದಕೋಶಗಳನ್ನು ಸಿದ್ಧಪಡಿಸುವಲ್ಲಿ ನೆರವಾಗಿದ್ದಾರೆ.

ಹೀಗೆ ಎಲೆಮರೆಯ ಹಣ್ಣಿನಂತೆ, ಕನ್ನಡ ಸಾಹಿತ್ಯದ ಸೇವೆ ಸಲ್ಲಿಸುತ್ತಾ ಬಂದಿರುವುದನ್ನು ಗುರುತಿಸಿ ೧೯೯೭ರಲ್ಲಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ಇವರಿಗೆ ಪ್ರದಾನ ಮಾಡಿತು. ಇದಾದ ನಂತರ ಗೆಳೆಯರ ಒತ್ತಾಯದ ಮೇರೆಗೆ ೧೯೯೮ರಲ್ಲಿ ಕನ್ನಡ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಪ್ರಚಂಡ ಬಹುಮತದೊಂದಿಗೆ ಆಯ್ಕೆಯಾದರು. ೧೯೯೮ ರಿಂದ ೨೦೦೧ರವರೆಗೆ ೩ ವರ್ಷಗಳ ಕಾಲ ಕ.ಸಾ.ಪ. ಅಧ್ಯಕ್ಷರಾಗಿ ಅನೇಕ ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ. ಹೀಗೆ ಸಾಹಿತ್ಯ ಸೇವೆಗೆ, ತಮ್ಮ ಜೀವನದ ಬಹುಪಾಲು ಸಮಯವನ್ನು ವಿನಿಯೋಗಿಸಿದ್ದಾರೆ.

ನನ್ನ ತೀರ್ಥರೂಪರವರು ಒಬ್ಬ ಸಾಹಿತಿಯಾಗಿ, ಜನಾನುರಾಗಿಯಾದ ಪ್ರಸಿದ್ಧ ವ್ಯಕ್ತಿ. ಹಾಗೇ ತಂದೆಯಾಗಿ ಸಹ ಅವರು ನಿರ್ವಹಿಸಬೇಕಾದ ಕೆಲಸಗಳನ್ನು ಯಶಸ್ವಿಯಾಗಿ ಮಾಡಿ ತಮ್ಮ ಜವಾಬ್ದಾರಿಗಳನ್ನು ಮುಗಿಸಿದ್ದಾರೆ.

ತಮ್ಮ ಜೀವನದ ವಿದ್ಯಾರ್ಥಿ ದೆಸೆಯಲ್ಲಿ ಕಷ್ಟವನ್ನು ಅನುಭವಿಸಿದ್ದಾರೆ. ಶಾಲೆಯಲ್ಲಿ ಕಲಿಯುತ್ತಿರುವಾಗಲೇ ತಂದೆ ತಾಯಿಗಳನ್ನು ಕಳೆದುಕೊಂಡು ಬಂಧುಗಳ ಆರ್ಥಿಕ ನೆರವಿನಿಂದ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುವಲ್ಲಿ ಸಫಲರಾದರು. ತದನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗ ಸಹ ದೊರೆಯಿತು.

ನಾನು ಕಂಡಂತೆ ನಮ್ಮ ತಂದೆಯವರದು ಪ್ರಾಮಾಣಿಕ, ಸ್ನೇಹ, ಔದಾರ್ಯ ಮತ್ತು ನಿಷ್ಠುರ ಧೋರಣೆಗಳಿಂದ ಕೂಡಿದ ಜೀವನದೃಷ್ಟಿ. ಅವರು ಸ್ವಭಾವತಃ ಸ್ವಾಭಿಮಾನಿ. ಬೇರೆಯವರು ಇವರ ಸಹಾಯಕ್ಕಾಗಿ ಯಾಚಿಸಿದಾಗ ಸಹಾನುಭೂತಿಯಿಂದ, ಔದಾರ್ಯದಿಂದ ತಮ್ಮ ಕೈಲಾದ ಸಹಾಯವನ್ನು ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ.

ನಮ್ಮ ತಂದೆಯವರದು ಸಂಕೋಚದ ಸ್ವಭಾವ. ಇದರಿಂದಾಗಿ ತಮಗೆ ವೈಯಕ್ತಿಕವಾಗಿ ಏನೇ ಬೇಕಾದರೂ ನೇರವಾಗಿ ನಮ್ಮಲ್ಲಿ ಕೇಳುತ್ತಿರಲಿಲ್ಲ. ಅವರು ಯಾವತ್ತೂ ಮಕ್ಕಳನ್ನು ಆಶ್ರಯಿಸಿದವರಲ್ಲ. ಆದರೆ ಮಕ್ಕಳೆಲ್ಲ ನಿಷ್ಪಕ್ಷಪಾತವಾಗಿ ಒಳ್ಳೆಯ ಕೆಲಸ ಮಾಡಿಕೊಂಡು ಒಳ್ಳೆಯ ವ್ಯಕ್ತಿಗಳಾಗಿ ಸಂತೋಷದಿಂದ ಬಾಳಲಿ ಎಂದು ಹಾರೈಸುತ್ತಾರೆ.

ಕಡುಬಡತನದಲ್ಲಿ ಹುಟ್ಟಿ ಬೆಳೆದುದರಿಂದ ಇವರಿಗೆ ಯಾವ ಆಸ್ತಿಯೂ ಇರಲಿಲ್ಲ. ಎಲ್ಲವೂ ತಮ್ಮ ನೌಕರಿಯ ಸಂಬಳದಿಂದಲೇ ನಡೆಯಬೇಕಿತ್ತು. ತಮ್ಮ ದುಡಿಮೆಯಿಂದ ಸಂಪಾದಿಸಿದ ಹಣದಿಂದಲೇ ತಮಗೊಂದು ಮನೆ ಮಾಡಿಕೊಂಡು, ಎಲ್ಲ ಮಕ್ಕಳ ವಿದ್ಯಾಭ್ಯಾಸ, ಮದುವೆಗಳನ್ನು ಮಾಡಿ ಮುಗಿಸಿದ್ದಾರೆ. ನಮ್ಮೆಲ್ಲರ ಅವಶ್ಯಕತೆಗಳಿಗೆ ತಕ್ಕಂತೆ, ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಂಡಿದ್ದಾರೆ. ನಮಗೆಲ್ಲಾ ಸೂಕ್ತ ವಿದ್ಯಾಭ್ಯಾಸ ನೀಡಿದ್ದರಿಂದ ನಾವು ಉದ್ಯೋಗ ಮಾಡಿಕೊಂಡು ಸ್ವತಂತ್ರವಾಗಿ ಜೀವನ ನಿರ್ವಹಿಸಲು ಸಾಧ್ಯವಾಯಿತು.

ಅವರು ಯಾವಾಗಲೂ ತಮ್ಮ ಕೆಲಸ ಕಾರ್ಯಗಳಲ್ಲಿ ಅಚ್ಚುಕಟ್ಟುತನವನ್ನು ಕಾಯ್ದುಕೊಂಡು ಬಂದವರು. ತಮ್ಮ ಮನಸ್ಸಿಗೆ ಯಾವುದಾದರೂ ಒಂದು ಕೆಲಸವನ್ನು ಮಾಡಬೇಕೆಂದು ಅನ್ನಿಸಿದರೆ ಅದರ ಬೆನ್ನು ಹತ್ತಿ ಶತಾಯ ಗತಾಯ ಮಾಡಿ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದರು. ಅಲ್ಲಿಯವರೆಗೆ ಅವರಿಗೆ ನೆಮ್ಮದಿ ಇರುತ್ತಿರಲಿಲ್ಲ.

ಅವರು ತಮ್ಮ ಈ ಇಳಿವಯಸ್ಸಿನಲ್ಲಿ ಕನ್ನಡ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿಗಳ ಅಭಿವೃದ್ಧಿಗಾಗಿ ದುಡಿಯುತ್ತಿರುವರು ಮುಂದೆಯೂ ತಮ್ಮ ಕೈಲಾದ ಮಟ್ಟಿಗೆ ದುಡಿಯುವುದರಲ್ಲಿ ಯಾವ ಸಂದೇಹವೂ ಇಲ್ಲ.

'ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ' ಎಂಬ ದಾಸರ ಹೇಳಿಕೆಯಂತೆ ಸಮಯವನ್ನು ವ್ಯರ್ಥಮಾಡದೆ ಸದಾ ಯಾವುದಾದರೊಂದು ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಾರ್ಯತತ್ಪರರಾಗಿದ್ದಾರೆ.

೮೦ ವರ್ಷಕ್ಕೆ ಕಾಲಿರಿಸುತ್ತಿರುವ ಅವರಿಗೆ ಆಯುರಾರೋಗ್ಯಗಳನ್ನು ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

XXX

ತಂದೆಯಾಗಿ ಎನ್. ಬಸವಾರಾಧ್ಯರು

-ಎನ್.ಬಿ. ಲತಾದೇವಿ

ನಮ್ಮದು ತುಂಬು ಸಂಸಾರ. ಅಕ್ಕ, ಅಣ್ಣಂದಿರು ಹೀಗಾಗಿ ಈಗಿನಂತೆ ಒಂಟಿಯಾಗಿರಲಿಲ್ಲ. ನನಗೆ ನಾಲ್ಕು ಜನ ಅಣ್ಣಂದಿರು, ಇಬ್ಬರು ಸೋದರಿಯರು. ಇವರೆಲ್ಲರ ಮುಂದೆ ನಾನು ಕಿರಿಯವಳಾಗಿ ಸುಖವಾಗಿ ಬೆಳೆದವಳು.

ನಮ್ಮ ತಂದೆ ಶಿಸ್ತಿನ ಸಿಪಾಯಿ. ಎಂದೂ ಮಕ್ಕಳೊಂದಿಗೆ ಆತ್ಮೀಯವಾಗಿ ಮಾತನಾಡಿದವರಲ್ಲ. ಹಾಗೆಂದ ಮಾತ್ರಕ್ಕೆ ಕರ್ತವ್ಯಲೋಪ ಮಾಡಿದ್ದಾರೆಂದರೆ ಅಕ್ಷಮ್ಯ ಅಪರಾಧವಾದೀತು.

ನಾವೆಲ್ಲ ಓದಿ ಬೆಳೆದದ್ದು ಮೈಸೂರಿನಲ್ಲಿ. ಆಗ ನಮ್ಮ ತಂದೆ ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದರು. ಮನೆಯೊ ಆಗ ಅವರ ಮಿತ್ರರ ಸಮುದಾಯದಿಂದ ಸಾಹಿತ್ಯ ಸುಧೆಯಿಂದ ತುಂಬಿರುತ್ತಿತ್ತು. ಸದಾ ತುಂಬಿ ತುಳುಕುತ್ತಿದ್ದ ಮನೆಯಲ್ಲಿ ನಾವೆಲ್ಲಾ ಸಂತೋಷವಾಗಿ ಬದುಕುತ್ತಾ ಸಾಹಿತ್ಯದ ವಾತಾವರಣದಲ್ಲಿ ಕಾಲ ಕಳೆಯುತ್ತಿದ್ದೆವು.

ಅವರ ವಿದ್ಯಾರ್ಥಿ ಬಳಗವೂ ಸದಾ ಮನೆಯಲ್ಲಿ ತುಂಬಿರುತ್ತಿತ್ತು. ನಮ್ಮ ತಂದೆಯವರೂ ಕೈಲಾದ ಸಹಾಯ ಮಾಡುತ್ತಿದ್ದರು. ಆದರೆ ಮಕ್ಕಳಿಗೆ ಮಾತ್ರ ತಮ್ಮ ಪ್ರಭಾವದಿಂದ ಯಾವುದೇ ಸಹಾಯ ಮಾಡುತ್ತಿರಲಿಲ್ಲ. ಕಾರಣ ಸ್ವಂತ ಪ್ರತಿಭೆಯಿಂದ ಮುಂದುವರಿಯಲಿ ಎಂಬುದೇ ಅವರ ಮನದ ಆಶಯವಾಗಿತ್ತು.

ದಾನ ಮಾಡಿದರೆ ಸತ್ಪಾತ್ರರಿಗೆ ದಾನ ಮಾಡಬೇಕು. ಅಂತೆಯೇ ನನ್ನ ಸ್ವಂತ ಮಕ್ಕಳಿಗೆ ನಾನೇ ನನ್ನ ಪ್ರಭಾವದಿಂದ ಯಾವುದಾದರೂ ಕೆಲಸ ಮಾಡಿದರೆ ಅವರಿಗೆ ಹೇಗೂ ನನ್ನ ತಂದೆ ಅವರ ಪ್ರಭಾವದಿಂದ ನಾನು ಏನೇ ಮಾಡಿದರೂ ಪರವಾಗಿಲ್ಲ ಅನ್ನುವ ಧೋರಣೆ ಬಂದರೂ ಬಂದೀತು. ಅದು ಬರಬಾರದು. ಸ್ವಂತಿಕೆಯಿಂದ ಮಕ್ಕಳು ಬೆಳೆಯಲಿ ಎಂಬುದು ಅವರು ಮನದಿಂಗಿತವಾಗಿತ್ತು. ಹೀಗಾಗಿ ಅವರ ಸಹಾಯಹಸ್ತ ಬೇರೆಯವರಿಗೆ ಮುಡಿಪಾಗಿತ್ತು. ಆದರೆ ಎಲ್ಲಾ

ಮಕ್ಕಳಿಗೂ ಅವರು ಕಲಿಯುವಷ್ಟು ವಿದ್ಯೆಯನ್ನು ಕಲಿಸಿದ್ದಾರೆ. ಎಲ್ಲಾ ಮಕ್ಕಳ ಆಸೆ, ಆಕಾಂಕ್ಷೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಹಾಗೂ ಅವರ ಬೇಡಿಕೆಗಳನ್ನು ಪೂರೈಸಿದ್ದಾರೆ, ಸಕಾಲದಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ನೆರವೇರಿಸಿದ್ದಾರೆ.

ಮೂರು ಜನ ಸೊಸೆಯರನ್ನು ಮಗಳಂತೆಯೇ ಕಂಡಿದ್ದಾರೆ. ನನ್ನನ್ನಾದರೂ ಬಯ್ದಿರಬಹುದು. ಸೊಸೆಯಂದಿರನ್ನು ಆತ್ಮೀಯತೆಯಿಂದ ಕಂಡಿದ್ದಾರೆ. ಇಂದು ನಮ್ಮ ತಾಯಿ ನಮ್ಮೊಂದಿಗಿಲ್ಲ. ಅವರು ಗತಿಸಿ ಸುಮಾರು ಐದು ವರ್ಷವಾಯಿತು. ಆದರೂ ನಮ್ಮ ದೊಡ್ಡತ್ತಿಗೆ ಶ್ರೀಮತಿ ಸರ್ವಮಂಗಳಾರವರು ನಮ್ಮ ತಂದೆಯನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಅದೇ ಇಂದು ನನ್ನ ಮನಸ್ಸಿಗೆ ನೆಮ್ಮದಿ.

ಈಗಲೂ ೭೯ರ ಹರೆಯದಲ್ಲೂ ಸಾಹಿತ್ಯ, ಸಾಹಿತ್ಯಕ್ಕೆ ಸಂಬಂಧಿಸಿದ ಕಾರ್ಯಕಲಾಪಗಳೊಂದಿಗೆ ಸ್ಪಂದಿಸುತ್ತಾ ಸಾಹಿತ್ಯಲೋಕದಲ್ಲಿ ನೆಮ್ಮದಿ ಕಂಡುಕೊಂಡಿರುವ ನಮ್ಮ ತಂದೆಯವರ ಸ್ಫೂರ್ತಿ ನಮ್ಮಗಳ ಬಾಳಿಗೆ ದಾರಿದೀಪಿಗೆಯಾಗಿದೆ.

ಸಂಸ್ಕಾರ ಹುಟ್ಟಿನಿಂದ ಬರುವುದಿಲ್ಲ. ಬೆಳೆಯುತ್ತಾ ವ್ಯಕ್ತಿಯೊಂದಿಗೆ ಅವ್ಯಾಹತವಾಗಿ, ಅದಮ್ಯ ಚೇತನವಾಗಿ ಬೆಳೆಯುವಂತಹದು. ಅಂತಹ ಉತ್ತಮ ವಿದ್ಯೆ ಹಾಗೂ ಸಂಸಾರ ಮಕ್ಕಳೆಲ್ಲರೂ ನೆಮ್ಮದಿಯ ಬದುಕು ಸಾಗಿಸಲು ನೆರವಾದ ಅದಮ್ಯ ಚೇತನ ನನ್ನ ತಂದೆ ಶ್ರೀಯುತ ಬಸವಾರಾಧ್ಯ. ನಮ್ಮ ತಂದೆ ಸಾಹಿತ್ಯದಲ್ಲಿ ಗಳಿಸಿದ ಪಾಂಡಿತ್ಯ, ಪ್ರೌಢಿಮೆ ಅಗಾಧವಾದದ್ದು. ಇಂದಿಗೂ ನಮ್ಮ ಮನೆಯಲ್ಲಿ ನಮ್ಮ ತಂದೆ ಸಂಗ್ರಹಿಸಿರುವ ಪುಸ್ತಕದ ರಾಶಿಯೇ ಅದಕ್ಕೆ ಜ್ವಲಂತ ಸಾಕ್ಷಿ.

ಆಸ್ತಿ, ಅಂತಸ್ತು ಎಂಬುದಕ್ಕೆ ಎಂದೂ ಆಸೆ ಪಡದೆ ಬಂದದ್ದನ್ನು ತೃಪ್ತಿಯಿಂದ ಸ್ವೀಕರಿಸುವ ಅವರ ಮನೋಸ್ಥೈರ್ಯಕ್ಕೆ ನಾವು ತಲೆದೂಗಲೇಬೇಕು. ಎಂತಹ ಸನ್ನಿವೇಶ, ಸಂದರ್ಭದಲ್ಲೂ ವಿಚಲಿತರಾಗದೇ ತಾಳ್ಮೆಯಿಂದ ಬಂದ ಸಮಸ್ಯೆಯನ್ನು ಎದುರಿಸುವ ಅವರ ಎದೆಗಾರಿಕೆ ನಮಗ್ಯಾರಿಗೂ ಬರಲೇ ಇಲ್ಲ.

ನಮ್ಮ ಮಾವನವರು : ನಾ ಕಂಡಂತೆ

-ಸರ್ವಮಂಗಳ ಆರ್.

ನಮ್ಮ ಮಾವನವರೆಂದರೆ ನನಗೆ ಮೊದಲು ನೆನಪಾಗುವುದು ಅವರ ಶಿಸ್ತು, ಅಚ್ಚುಕಟ್ಟುತನ, ಸಮಯಪ್ರಜ್ಞೆ ಹಾಗೂ ಮನೆಗೆ ಬರುವ ಅತಿಥಿಗಳನ್ನು ಉಪಚರಿಸುವ ರೀತಿ. ಅವರು ಕಡುಬಡತನದಲ್ಲಿ ಬೆಳೆದು ಬಂದಿದ್ದು ನಾನು ಕೇಳಿರುವ ವಿಷಯ. ಆ ಕಾಲದಲ್ಲಿ ಅವರು ಪಟ್ಟ ಕಷ್ಟಗಳನ್ನು ನಾನರಿಯೆ, ಆದರೂ ಅವರು ಇಂದು ಒಂದು ಉನ್ನತ ಸ್ಥಾನಕ್ಕೆ ಬಂದು ಆ ಸ್ಥಾನದ ಹಿರಿಮೆಯನ್ನು ಕಾಪಾಡಿಕೊಂಡು ಬಂದ ರೀತಿ ಶ್ಲಾಘನೀಯ.

ಇನ್ನು ಶಿಸ್ತಿನ ಬಗ್ಗೆ ಹೇಳಬೇಕೆಂದರೆ- ಅವರದು ಕ್ರಮಬದ್ಧ ಜೀವನ. ಮುಂಜಾನೆ ಎದ್ದು ವಾಯುವಿಹಾರಕ್ಕೆ ಹೋಗಿ ಬಂದ ನಂತರ ದಿನಪತ್ರಿಕೆಗಳನ್ನು ಓದುವುದು, ನಂತರ ಸ್ನಾನ, ಪೂಜೆ ಇತ್ಯಾದಿ. ಪೂಜೆಯ ನಂತರವೇ ಉಪಾಹಾರ. ಇದಾದ ಮೇಲೆ ಪುಸ್ತಕಗಳ ನಡುವೆ ಇರುವುದೇ ಅವರ ಹವ್ಯಾಸ. ಇದು ಅವರ ದಿನಚರಿ. ಉಚಿತ ವಿದ್ಯಾರ್ಥಿನಿಲಯಗಳಲ್ಲಿ ಅವರು ವ್ಯಾಸಂಗ ಮಾಡಿದ ವಿಷಯವನ್ನು ನಾನು ಕೇಳಿದ್ದೇನೆ. ಹಾಗೇ ಸಾಹಸದಿಂದ ವ್ಯಾಸಂಗ ಮುಗಿಸಿ ಶಿಕ್ಷಣ, ಸಂಶೋಧನೆ ಕ್ಷೇತ್ರದಲ್ಲಿದ್ದುಕೊಂಡು, ತಮ್ಮ ಮೂವರು ಗಂಡು ಮಕ್ಕಳಿಗೆ ಉನ್ನತ ಶಿಕ್ಷಣ (ಇಂಜಿನಿಯರಿಂಗ್) ಹಾಗೂ ಮೂವರು ಹೆಣ್ಣುಮಕ್ಕಳನ್ನು ಪದವೀಧರರನ್ನಾಗಿ ಮಾಡಿಸಿದ್ದು ಸಾಹಸವೇ ಸರಿ. ನಂತರ ಮಕ್ಕಳ ಮದುವೆ ಎಲ್ಲವನ್ನೂ ಜವಾಬ್ದಾರಿಯುತವಾಗಿ ನಿರ್ವಹಿಸಿದ್ದಾರೆ ಮತ್ತು ಅವರೆಲ್ಲ ಸ್ವತಂತ್ರವಾಗಿ ತಮ್ಮ ಜೀವನವನ್ನು ರೂಪಿಸುವಂತೆ ಮಾಡಿದ್ದಾರೆ.

ಇನ್ನು ಸಾಹಿತ್ಯದ ಬಗ್ಗೆ ಹೇಳಬೇಕೆಂದರೆ- ಅವರು ಪ್ರತಿದಿನ, ಪ್ರತಿಕ್ಷಣ ಸಾಹಿತ್ಯದ ಗುಂಗಿನಲ್ಲೇ ಇರುವುದನ್ನು ನಾನು ಕಂಡಿದ್ದೇನೆ. ಅದಕ್ಕಾಗಿ ಅವರು ಶ್ರಮಪಡುವುದನ್ನು ನೋಡಿದ್ದೇನೆ. 'ಕನ್ನಡ ನಿಘಂಟು' ರಚನೆಗಾಗಿ ಅವರು ಬಹಳ ಕಷ್ಟಪಟ್ಟಿದ್ದಾರೆ- ಅದು ಅವರ ದೊಡ್ಡ ಸಾಧನೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ನಾವಿಲ್ಲಿ ಇರಲಿಲ್ಲ. ಆದರೂ ನಾವುಗಳು ರಜೆಗೆ ಬಂದಾಗ ಅವರ ಸನ್ಮಾನ

ಸಮಾರಂಭಗಳಿಗೆ ಹೋದಾಗ ಅವರಿಗಿರುವ ಸ್ಥಾನ, ಮಾನ, ಕೀರ್ತಿ ಎಲ್ಲವನ್ನೂ ನೋಡಿ ಸಂತೋಷಪಟ್ಟಿದ್ದೇವೆ. ಅಹಂಕಾರ, ಪ್ರತಿಷ್ಠೆ ಅಂತಹವುಗಳಿಂದ ಅವರು ಬಹಳ ದೂರವೇ ಉಳಿದಿದ್ದಾರೆ. ಯಾರಾದರೂ ಸರಿ, ಒಳ್ಳೆಯ ಕೆಲಸ ಮಾಡಿದರೆ, ಸಾಧನೆ ಮಾಡಿದರೆ ಅಂತಹವರನ್ನು ಮನದುಂಬಿ ಪ್ರಶಂಸಿಸುವುದು ಉಂಟು. ಅಂತಹವರಿಗೆ ಇನ್ನೂ ಹೆಚ್ಚಿನ ಮಾರ್ಗದರ್ಶನ ನೀಡಿ ಅವರನ್ನು ಪ್ರೋತ್ಸಾಹಿಸುತ್ತಾರೆ.

ಅವರಿಗೆ ಬಂದ ಪ್ರಶಸ್ತಿಗಳ ಸಂಖ್ಯೆ ಬಹಳಷ್ಟು, ಅದರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಖ್ಯವಾದವು. ಇದೇ ತರಹ ಅವರ ಸೇವೆ ಸಾಹಿತ್ಯಕ್ಕೆ ಮುಂದೆಯೂ ಸಲ್ಲುತ್ತಿರಲಿ ಎಂದು ಆಶಿಸುತ್ತೇನೆ.

ಎನ್ - ಎನ್ನ ಮನೆಯಂಗಳದಲ್ಲಿ
ಜ್ಞಾನಜ್ಯೋತಿಯನ್ನು ಬೆಳಗಿದ ಆರಾಧ್ಯ.

ಬ - ಬಡವ-ಬಲ್ಲಿದನೆಂಬ ಭೇದವಿಲ್ಲದೆ
ಸೌಹಾರ್ದತೆಯಿಂದಿರುವ ಆರಾಧ್ಯ.

ಸ - ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಎಂಬ ಉಕ್ತಿಗೆ ತಕ್ಕಂತಿರುವ ಆರಾಧ್ಯ.

ವಾ - ಕನ್ನಡ **ವಾ**ಣಿಯೇ ತನ್ನ ಜೀವನಾಡಿ
ಎಂದು ಕನ್ನಡಕ್ಕಾಗಿ ದುಡಿದ ಆರಾಧ್ಯ.

ರಾ - "ಕನ್ನಡ ನಿಘಂಟು" ಕ್ಷೇತ್ರದಲ್ಲಿ
ರಾರಾಜಿಸುತ್ತಿರುವ ವ್ಯಕ್ತಿಯಾಗಿ ಆರಾಧ್ಯ.

ಧ್ಯ - ಏನಾದರೂ ಸಾಧಿಸಲೇಬೇಕೆಂಬ ಛಲದಿಂದ
"**ಧ್ಯೇ**ಯ"ದಿಂದ ಶ್ರಮಿಸುತ್ತಿರುವ ಆರಾಧ್ಯ.

ತಮ್ಮ ಬಾಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕಾಗಿ
ಮುಡುಪಾಗಿಟ್ಟ ಅವರಿಗೆ ನನ್ನ ನಮನಗಳು.

XXX

ನನ್ನ ತಾತನವರು : ನಾ ಕಂಡಂತೆ

-ಬಿ.ಎಂ. ಜಯಂತಿ

ಬ - ಬಾಂಧವ್ಯ
ಸ - ಸಾಹಸ
ವಾ - ವಾಕ್ಚಾತುರ್ಯ
ರಾ - ರಾರಾಜಿಸುವ
ಧ್ಯ - ಧ್ಯೇಯ

G - Great
R - Reputed
A - Ambitious
N - Noble
D - Disciplined
F - Faithful
A - Adorable
T - Tenacious
H - Honest
E - Eminent
R - Remarkable

XXX

ತಂದೆಯ ರೂಪದಲ್ಲಿ ಬಸವಾರಾಧ್ಯರು

-ಎಸ್.ಬಿ. ರೇಣುಕಾದೇವಿ

ಕನ್ನಡ ಸಾಹಿತ್ಯ ಲೋಕದಲ್ಲಿ ಎನ್. ಬಸವಾರಾಧ್ಯರು ಒಬ್ಬ ಹೆಸರಾಂತ ಸಾಹಿತಿಗಳಾಗಿದ್ದಾರೆ. ಇವರು ಕ.ಸಾ.ಪ.ದಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಕ.ಸಾ.ಪ. ಅಧ್ಯಕ್ಷರು ಸಹ ಆಗಿದ್ದರು. ಇವರಿಗೆ ಸಾಹಿತ್ಯ ಅಕಾಡೆಮಿ ಮತ್ತು ಇನ್ನೂ ಅನೇಕ ಪ್ರಶಸ್ತಿ ದೊರಕಿದೆ. ಇವರು ಸ್ನೇಹಿತರಲ್ಲಿ, ಬಂಧು-ಬಳಗದಲ್ಲಿ, ಮಕ್ಕಳಲ್ಲಿ ಮತ್ತು ಮೊಮ್ಮಕ್ಕಳಲ್ಲೂ ಸಹ ಅಪಾರವಾದ ಪ್ರೀತಿ ಪ್ರೇಮವನ್ನು ಇಟ್ಟುಕೊಂಡಿದ್ದಾರೆ. ಇವರು ತಮ್ಮ ಇಳಿವಯಸ್ಸಿನಲ್ಲೂ ಸಹ ಕನ್ನಡ ಸಾಹಿತ್ಯಕ್ಕಾಗಿ ಶ್ರಮ ಪಡುತ್ತಿದ್ದಾರೆ. ತಮ್ಮ ಎಲ್ಲಾ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದ್ದಾರೆ. ಇವರು ತಮ್ಮ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ. ಅವರು ನೂರು ವರುಷ ಚೆನ್ನಾಗಿ ಬಾಳಲಿ ಎಂದು ನಾವು ಆಶಿಸುತ್ತೇವೆ.

xxx

ನೆನಪಿನಂಗಳದಲ್ಲಿ.....

ಸುಮಾರು ಒಂದೂ ಒಂದೂವರೆ ವರ್ಷದ ಹಿಂದಿನ ಮಾತು. ಒಂದು ದಿನ ನನ್ನ ಅಭಿಮಾನಿಗಳು, ಹಿತೈಷಿಗಳು, ಸ್ನೇಹಿತರು ನನ್ನಲ್ಲಿಗೆ ಬಂದು- "ನೀವು ಇಷ್ಟು ವರ್ಷಗಳಿಂದ ಕನ್ನಡ ನಾಡು-ನುಡಿ-ಸಾಹಿತ್ಯಗಳಿಗೆ ಸಾರ್ಥಕ ಸೇವೆ ಸಲ್ಲಿಸಿದ್ದೀರಿ. ನಿಮ್ಮ ಸೇವೆಗೆ ತಕ್ಕುದಾದ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ, ಒಂದು ಅಭಿನಂದನ ಗ್ರಂಥವನ್ನು ಹೊರತರಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ" ಎಂದರು. ಇದರ ನೇತೃತ್ವವನ್ನು ವಹಿಸಿದ್ದವರು ಶ್ರೀ ಈಶ್ವರ ದೇವರು ಮತ್ತು ಮಿತ್ರರಾದ ಡಾ. ಬಿ. ನಂಜುಂಡಸ್ವಾಮಿ ಅವರು. ಶ್ರೀ ಈಶ್ವರ ದೇವರು ಒಂದು ಗೋಷ್ಠಿಯಲ್ಲಿ ನನ್ನ ಭಾಷಣವನ್ನು ಕೇಳಿದ ಮೇಲೆ ತಮ್ಮ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿ 'ಒಂದು ಲಕ್ಷ ರೂಪಾಯಿ ಖರ್ಚಾದರೂ ಪರವಾಗಿಲ್ಲ' ಎಂದಿದ್ದರಂತೆ.

ಕಾರಣಾಂತರಗಳಿಂದ ಈ ಕಾರ್ಯ ತಡವಾದರೂ ಕೊನೆಗೂ ಈ ಕಾರ್ಯ ನೆರವೇರುವ ದಿನ ಬಂದಿರುವುದು ನನ್ನ ಬಗ್ಗೆ ಎಲ್ಲ ಅಭಿಮಾನಿಗಳ ಪ್ರೀತಿ, ವಿಶ್ವಾಸಗಳ ಕುರುಹು. ಇದಕ್ಕಾಗಿ ನಾನು ಅವರೆಲ್ಲರಿಗೂ ಋಣಿ.

ಸಂಭಾವನ ಗ್ರಂಥಗಳನ್ನು ಹೊರತರುವ ಕಷ್ಟಕಾರ್ಪಣ್ಯಗಳ ಅರಿವು ನನಗೆ ಚೆನ್ನಾಗಿತ್ತು. ಎರಡು ಮೂರು ಸಂಭಾವನಾ ಗ್ರಂಥಗಳನ್ನು ಹೊರತಂದ ಅನುಭವವೂ ಆಗಿತ್ತು. 'ದಯವಿಟ್ಟು ಈ ಕೆಲಸಕ್ಕೆ ಕೈಹಾಕಬೇಡಿ' ಎಂದು ಮನವಿ ಮಾಡಿಕೊಂಡೆ. ಆದರೆ ಅವರ ಅಪಾರ ಅಭಿಮಾನ, ಅತ್ಯುತ್ಸಾಹ ನನ್ನ ಮಾತುಗಳಿಗೆ ಬೆಲೆಯನ್ನು ಕೊಡಲೇ ಇಲ್ಲ. ಅವರ ಅಭಿಮಾನದ ಪ್ರವಾಹದಲ್ಲಿ ಕೊಚ್ಚಿಹೋದೆ. ಗತ್ಯಂತರವಿಲ್ಲದೆ ಒಪ್ಪಿಕೊಂಡೆ. ಈವರೆಗೆ ಬರೆದಿರುವ ಎಲ್ಲ ಲೇಖನಗಳನ್ನು, ಕೃತಿಗಳ ಮುನ್ನುಡಿಗಳನ್ನು, ಬರಹಗಳನ್ನು ಪ್ರಕಟಿಸಿ ಎಂದು ಸಲಹೆ ನೀಡಿದೆ. ಅದಕ್ಕೆ ಅವರು ಅತ್ಯಂತ ಸಂತೋಷದಿಂದ ಒಪ್ಪಿಕೊಂಡರು. ಖ್ಯಾತ ವಿದ್ವಾಂಸರಾದ ಡಾ. ಎಸ್. ವಿದ್ಯಾಶಂಕರ ಮತ್ತು ಡಾ. ಶಿವಕುಮಾರ ಸ್ವಾಮಿ ಅವರನ್ನು ಸಂಪಾದಕರನ್ನಾಗಿ

ನೇಮಿಸಿಕೊಂಡರು. ಸುಮಾರು ಐವತ್ತು ವರ್ಷಗಳಿಂದ ಬರೆದಿದ್ದ ಲೇಖನಗಳನ್ನೆಲ್ಲಾ ಈ ಸಂಪುಟದಲ್ಲಿ ಸಮಾವೇಶಗೊಳಿಸಲಾಗಿದೆ. ಮತ್ತೊಂದು ಸಂಪುಟದಲ್ಲಿ ನನ್ನ ಇತಿವೃತ್ತಗಳು ಇರಲೇಬೇಕೆಂದು ಸಮಿತಿಯವರು ಆಗ್ರಹಪಡಿಸಿದ್ದರಿಂದ ಒಲ್ಲದ ಮನಸ್ಸಿನಿಂದ ಈ ಸಂಗತಿಗಳನ್ನು ದಾಖಲಿಸುತ್ತಿದ್ದೇನೆ.

ಆಚಾರ-ವಿಚಾರ ಸಂಪ್ರದಾಯಗಳಿಂದ ಕೂಡಿದ ವಿದ್ವನ್ಮನೆತನದ ಒಂದು ಜಂಗಮ ಕುಟುಂಬದಲ್ಲಿ ೧೯೨೬ರಲ್ಲಿ ಜನಿಸಿದೆನು. ತಾಯಿಯ ಒಡನಾಟದ ಸುಖವನ್ನು ಬಹುಕಾಲ ಪಡೆಯದ ನತದೃಷ್ಟ ನಾನು. ನನ್ನ ಒಂದೂವರೆ ವರ್ಷ ವಯಸ್ಸಿನಲ್ಲೇ ನನ್ನ ತಾಯಿ ತೀರಿಕೊಂಡರು. ನನ್ನ ತಂದೆ ನಾನು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಶಿವಾಧೀನರಾದರಂತೆ.

ನಾನು ಹುಟ್ಟಿದ ಊರು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ನಾರಸಿಂಹನಹಳ್ಳಿ ಎಂಬ ಕುಗ್ರಾಮ. ನನ್ನ ತಾಯಿಯ ಊರು ಇದೇ ತಾಲೂಕಿನ ನಾಮಗೊಂಡ್ಲು. ತಾಯಿ ತೀರಿಹೋದ ಮೇಲೆ ನನ್ನ ಚಿಕ್ಕಮ್ಮ ನನ್ನನ್ನು ಸಾಕಿಕೊಂಡರಂತೆ. ಅವರ ಯಜಮಾನರು ಇದೇ ತಾಲ್ಲೂಕಿನ ವಾಟದ ಹೊಸಳ್ಳಿ ಎಂಬಲ್ಲಿ ಮಠಾಧ್ಯಕ್ಷರಾಗಿದ್ದರಂತೆ. ಗೌರಿಬಿದನೂರಿನಲ್ಲಿ ನನ್ನ ದೊಡ್ಡಪ್ಪನವರು ಒಂದು ಉಪಹಾರ ಗೃಹವನ್ನು, ಒಂದು ಚಿಕ್ಕ ಅಂಗಡಿಯನ್ನು ಇಟ್ಟುಕೊಂಡಿದ್ದರು. ಇವರು ಬೆಳಗಿನ ಹೊತ್ತು ಮಾತ್ರ ದೋಸೆ ಮಾಡುತ್ತಿದ್ದರು. ದೋಸೆ ಅತ್ಯಂತ ರುಚಿಕರವಾಗಿರುತ್ತಿತ್ತು. ಅನೇಕರು ತಿಂಡಿಗೆ ಬರುತ್ತಿದ್ದರು. ಅವರಿಗೆ ತಿಂಡಿ ಕೊಡುವ ಕಾರ್ಯವನ್ನು ಬೆಳಿಗ್ಗೆ ನಿರ್ವಹಿಸಿದ ಮೇಲೆ ಸ್ಕೂಲಿಗೆ ಹೋಗುತ್ತಿದ್ದೆ. ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ ಅಲ್ಲೇ ಮುಗಿಸಿ, ಪ್ರೌಢಶಾಲೆಗೆ ಬೆಂಗಳೂರಿಗೆ ಬರಬೇಕಾಯಿತು. ಬೆಂಗಳೂರಿನ ಕೋಟೆ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿದೆ. ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್‌ಗೆ ಸೇರಿಕೊಂಡೆ. ಬೆಂಗಳೂರು ಸರ್ ಕೆ.ಪಿ. ಪುಟ್ಟಣ್ಣಚೆಟ್ಟಿ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಸಿಕ್ಕಿತು. ವಿದ್ಯಾರ್ಥಿನಿಲಯದಲ್ಲಿ ಸೀಟು ಸಿಗುವವರೆಗೂ ನಮ್ಮ ಮಾವನವರ ಮನೆಯಲ್ಲಿದ್ದು ಅವರ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದೆ.

ಇಂಟರ್ ಮೀಡಿಯಟ್‌ನಲ್ಲಿ ಎಚ್.ಇ.ಎಲ್. ತೆಗೆದುಕೊಂಡಿದ್ದೆ. ಕನ್ನಡಕ್ಕೆ ಡಿ.ಎಲ್.ಎನ್., ತೀ.ನಂ.ಶ್ರೀ., ಜಿ.ಪಿ. ರಾಜರತ್ನಂ, ಎಲ್. ಗುಂಡಪ್ಪ ಇವರೇ ಮೊದಲಾದವರೂ, ಚರಿತ್ರೆಗೆ ನಾ. ಕಸ್ತೂರಿ ಅವರೂ ಉಪನ್ಯಾಸಕರಾಗಿದ್ದರು. ಕನ್ನಡದ ಎಲ್ಲ ಗುರುಗಳೂ ನನಗೆ ಅತ್ಯಂತ ಪ್ರಿಯರಾಗಿದ್ದರು. ಅವರಲ್ಲಿ ಜಿ.ಪಿ. ರಾಜರತ್ನಂ ಅವರ ಪಾಠ ಪ್ರವಚನ ಅತ್ಯಂತ ಪ್ರಭಾವ ಬೀರಿತು.

ಇಂಟರ್ ಮೀಡಿಯಟ್ ನಂತರ ಮುಂದಿನ ವ್ಯಾಸಂಗಕ್ಕಾಗಿ ಮೈಸೂರಿನ ಮಹಾರಾಜ ಕಾಲೇಜಿಗೆ ಸೇರಿಕೊಳ್ಳಲಾಯಿತು. ಮೈಸೂರಿನಲ್ಲಿ ನಮ್ಮ ಮಾವನವರಿಗೆ ಪರಿಚಯರಾಗಿದ್ದವರ ಮೂಲಕ ಸುತ್ತೂರು ವಿದ್ಯಾರ್ಥಿನಿಲಯಕ್ಕೆ ಅರ್ಜಿ ಸಲ್ಲಿಸಿದೆ. ನನಗೆ ಕನ್ನಡ ಮತ್ತು ಲಾಜಿಕ್‌ನಲ್ಲಿ ಹೆಚ್ಚಿನ ಅಂಕಗಳು ಬಂದಿದ್ದವು. ಕನ್ನಡ ಮತ್ತು ಮನಶ್ಶಾಸ್ತ್ರ ಆನರ್ಸ್‌ಗೆ ಅರ್ಜಿ ಸಲ್ಲಿಸಿದೆ, ಸೀಟು ಸಿಕ್ಕಿತು. ಆದರೆ ಸುತ್ತೂರು ಶ್ರೀಗಳು ನಾನು ಕನ್ನಡ ಆನರ್ಸ್‌ಗೆ ಸೇರಿಕೊಂಡರೆ ಮಾತ್ರ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಕೊಡುವುದಾಗಿ ಹೇಳಿದರು. ಮುಂದೆ ಕರ್ನಾಟಕ ಏಕೀಕರಣವಾಗುತ್ತದೆ. ಆಗ ಕನ್ನಡಕ್ಕೆ ಉತ್ತಮ ಸ್ಥಾನಮಾನಗಳು ದೊರಕುತ್ತವೆ. ಮನಶ್ಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಬಿ. ಕುಪ್ಪುಸ್ವಾಮಿ ಅವರು ಆ ವಿಚಾರವನ್ನು ಬೆಂಬಲಿಸಿದರು.

ಆ ಕಾಲದಲ್ಲಿ ಕನ್ನಡಕ್ಕೆ ಹೆಚ್ಚಿನ ಮನ್ನಣೆ ಇರಲಿಲ್ಲ. ವಿದ್ಯಾರ್ಥಿನಿಲಯದಲ್ಲಿ ಸ್ಥಳ ಸಿಗದಿದ್ದರೆ ನಾನು ವ್ಯಾಸಂಗ ಮುಂದುವರೆಸುವಂತೆಯೇ ಇರಲಿಲ್ಲ. ಇರುವ ಡೋಲಾಯಮಾನ ಸ್ಥಿತಿಯಲ್ಲಿ ಕನ್ನಡದ ಪ್ರಾಧ್ಯಾಪಕರಾಗಿದ್ದ ಡಾ. ಎ.ಆರ್. ಕೃಷ್ಣಶಾಸ್ತ್ರಿ ಅವರನ್ನು ಕಂಡು ಕನ್ನಡ ಆನರ್ಸ್‌ಗೆ ಸೀಟು ಕೊಡಲು ಪ್ರಾರ್ಥಿಸಿದೆ. ಸೀಟು ಸಿಕ್ಕಿತು. ವಿದ್ಯಾರ್ಥಿನಿಲಯದಲ್ಲಿ ಸೀಟು ದೊರೆಯಿತು. ಕನ್ನಡದಲ್ಲಿ ನನಗೇ ಹೆಚ್ಚಿನ ಅಂಕಗಳು ಬಂದಿದ್ದರಿಂದ ಆ ವರ್ಷ ಸ್ಕಾಲರ್‌ಷಿಪ್ ಕೂಡ ದೊರೆಯಿತು. ಇದಕ್ಕೆ ಕಾರಣೀಭೂತರಾದ ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ಸದಾಕಾಲವೂ ಸ್ಮರಿಸುತ್ತಲೇ

ಇದ್ದೇನೆ. ಇಂದಿನ ನನ್ನ ಎಲ್ಲ ಪದವಿ, ಪ್ರಶಸ್ತಿಗಳಿಗೂ ಪರಮಪೂಜ್ಯರೇ ಕಾರಣಕರ್ತರು. ಅವರಿಗೆ ನನ್ನ ಅನಂತ ನಮನಗಳು. ಅಂತೆಯೇ ಸಂದರ್ಭೋಚಿತವಾಗಿ ಮಾರ್ಗದರ್ಶನ ನೀಡಿದ ಡಾ. ಬಿ. ಕುಪ್ಪುಸ್ವಾಮಿ ಅವರಿಗೂ ನನ್ನ ಅನಂತ ನಮಸ್ಕಾರಗಳು ಸಲ್ಲಬೇಕಾಗಿದೆ.

ಅಂತೂ ಕನ್ನಡ ಬಿ.ಎ. ಆನರ್ಸ್ ಮುಗಿಸಿ ಎಂ.ಎ.ಗೆ ಸೇರಿದ ಕೆಲವು ಸಮಯದ ಮೇಲೆ ನನಗೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ 'ಕನ್ನಡ ಗ್ರಾಜುಯೇಟ್ ಸ್ಪೆಷಲಿಸ್ಟ್' ಹುದ್ದೆಯೂ ಸಿಕ್ಕಿತು. ಕನ್ನಡ ಎಂ.ಎ.ಯನ್ನು ಮುಗಿಸಿದೆ. ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಸೇವೆಯನ್ನೂ ಮುಂದುವರಿಸಿದೆ. ಆಗ ನಾನು 'ತೊರವೆ ರಾಮಾಯಣ'ವನ್ನು ಓಲೆ ಪ್ರತಿಯಿಂದ ಪ್ರತಿಮಾಡುವ ಕಾರ್ಯವನ್ನು ಕೈಗೊಂಡೆ. ಅತ್ಯಲ್ಪ ಕಾಲದಲ್ಲಿ ಇಡೀ ರಾಮಾಯಣವನ್ನು ಲೀಲಾಜಾಲವಾಗಿ ಪ್ರತಿ ಮಾಡಿಬಿಟ್ಟೆ. ಮುಂದುವರೆದಂತೆ ಓಲೆಗರಿ ಪ್ರತಿಗಳನ್ನು ಓದುವುದನ್ನು ಕರಗತ ಮಾಡಿಕೊಂಡೆ. ನನ್ನ ಕಾರ್ಯವನ್ನು ಅಂದಿನ ಕ್ಯೂರೇಟರ್ ಆಗಿದ್ದ ಶ್ರೀ ಎಚ್.ಆರ್. ರಂಗಸ್ವಾಮಿ ಐಯಂಗಾರ್ ಅವರೂ, ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದ ಶ್ರೀ ಎಚ್. ದೇವೀರಪ್ಪನವರೂ ಬಹಳವಾಗಿ ಮೆಚ್ಚಿಕೊಂಡರು. ಮುಂದೆ ನಾನೂ, ನನ್ನ ಸಹೋದ್ಯೋಗಿಗಳಾಗಿದ್ದ ಪಂಡಿತ ಎಸ್. ಬಸಪ್ಪನವರೂ ಹರಿಶ್ಚಂದ್ರ ಕಾವ್ಯವನ್ನು ಸಂಪಾದಿಸಬೇಕೆಂದು ಪ್ರತಿನಿತ್ಯ ಕಛೇರಿ ಮುಗಿದ ಮೇಲೆಯೂ ಕೆಲಸ ಮಾಡುತ್ತಿದ್ದೆವು. ನಮ್ಮ ಸಂಸ್ಥೆಯ ಆವರಣಕ್ಕೆ ನನ್ನ ಗುರುಗಳಾದ ಡಾ. ಡಿ.ಎಲ್. ನರಸಿಂಹಾಚಾರ್ಯರು ಬರುತ್ತಿದ್ದರು. ಕಚೇರಿಯ ವೇಳೆ ಮುಗಿದ ನಂತರವೂ, ಕಛೇರಿಯಲ್ಲಿ ದೀಪವಿರುವುದನ್ನು ಕಂಡು ಒಮ್ಮೆ ಇದ್ದಕ್ಕಿದ್ದಂತೆ ಒಳಗೆ ಬಂದು ನೋಡಿ 'ಏನಯ್ಯಾ ಮಾಡುತ್ತಿದ್ದೀರಿ' ಎಂದರು. ನಾನು ವಿಷಯ ತಿಳಿಸಿದ. 'ಆಗಲಿ, ಮಾಡಿ' ಎಂದು ಹೇಳಿ ಹೋದರು. ಸಂಪಾದನೆ ಕಾರ್ಯ ಮುಗಿಸಿದ ನಂತರ ಗುರುಗಳಿಗೆ ಕೃತಿಯನ್ನು ಒಪ್ಪಿಸಿದೆ. ಅವರು ಅಗತ್ಯ ತಿದ್ದುಪಡಿ ಮಾಡಿಕೊಟ್ಟರು. ಪೀಠಿಕೆಗೆ ಅಗತ್ಯ ಮಾಹಿತಿಯನ್ನು ಒದಗಿಸಿದರು. 'ಹರಿಶ್ಚಂದ್ರ ಕಾವ್ಯ' ಶಾಸ್ತ್ರೀಯವಾಗಿ ಸಂಪಾದನೆಗೊಂಡು ಹೊರಬರಲು ಸಾಧ್ಯವಾಯಿತು. ಇದನ್ನು ನನ್ನ ಪೂರ್ವಜನ್ಮದ ಪುಣ್ಯಫಲವೆಂದು ಭಾವಿಸಿದ್ದೇನೆ.

ಮೇಲಿಂದ ಮೇಲೆ ಪ್ರಾಚ್ಯವಿದ್ಯಾಸಂಸ್ಥೆಗೆ ಬರುತ್ತಿದ್ದ ಡಿ.ಎಲ್.ಎನ್. ಅವರು ಒಂದು ದಿನ ನನ್ನನ್ನು ಕುರಿತು ಬೆಂಗಳೂರಿಗೆ ಬರುತ್ತೀಯೇನಯ್ಯಾ ಎಂದರು. ನಾನು ಏನನ್ನೂ ಕೇಳದೆ 'ಆಗಲಿ ಬರ್ತೀನಿ ಸಾರ್' ಎಂದುಬಿಟ್ಟೆ. ಅದಾದ ಕೆಲವು ಸಮಯದ ನಂತರ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಪ್ರಧಾನ ಸಂಪಾದಕರಾಗಿ ನೇಮಕಗೊಂಡ ಅವರು ನನ್ನನ್ನು ನಿಘಂಟಿನ ಕೆಲಸಕ್ಕೆ ಎರವಲು ಸೇವೆಯ ಮೇಲೆ ಸೇರಿಸಿಕೊಂಡರು. ಪ್ರಧಾನ ಸಂಪಾದಕರಿಗೆ ಸಹಾಯಕನಾಗಿ ಕಾರ್ಯಾರಂಭ ಮಾಡಿದೆ. ಕೆಲವು ದಿನಗಳ ನಂತರ ಅಪ್ರಕಟಿತ ಶಾಸನಗಳಿಂದ ನಿಘಂಟಿಗೆ ಶಬ್ದಗಳನ್ನು ಸಂಗ್ರಹಿಸಲು ಉದಕಮಂಡಲದ ಕೇಂದ್ರ ಶಾಸನ ಕಛೇರಿಗೆ ಕಳುಹಿಸಿಕೊಟ್ಟರು. ಅಲ್ಲಿಯ ಸಹಸ್ರಾರು ಅಪ್ರಕಟಿತ ಶಾಸನಗಳಿಂದ ಶಬ್ದಗಳನ್ನು ಸಂಗ್ರಹಿಸಿಕೊಂಡು ಬಂದೆ.

ನನ್ನ ಗುರುಗಳು ನಿಘಂಟು ಕಛೇರಿಗೆ ಬಂದು ಒಂದು ವರ್ಷವಾಗುತ್ತಲೆ ಅವರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಹಿಂತಿರುಗಿದರು. ಆಗ ನನ್ನ ಗುರುಗಳ ಸ್ಥಾನವನ್ನು ನಾನು ವಹಿಸಿಕೊಳ್ಳಬೇಕೆಂದು ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು ಒತ್ತಾಯ ಮಾಡಿದರು. ನನಗೆ ಆ ಯೋಗ್ಯತೆ ಇಲ್ಲವೆಂದು ಎಷ್ಟೇ ಹೇಳಿದರೂ ಕೇಳದೆ ಆ ಸಂಬಂಧವಾಗಿ ಪತ್ರ ಬರೆದೇ ಬಿಟ್ಟರು. ಅದು ಹೇಗೋ ತಪ್ಪಿ ನನ್ನ ಮತ್ತೊಬ್ಬ ಗುರುಗಳಾದ ಎಲ್. ಗುಂಡಪ್ಪನವರನ್ನು ಸಂಪಾದಕರನ್ನಾಗಿ ನೇಮಿಸಿಕೊಂಡರು. ಐದಾರು ವರ್ಷಗಳಾದ ಮೇಲೆ ಈ ನಿಘಂಟಿನ ಸಂಪಾದಕನನ್ನಾಗಿ ನನ್ನನ್ನು ನೇಮಿಸಲು ಸಂಪಾದಕರ ಸಮಿತಿ ತೀರ್ಮಾನಿಸಿತು.

ನಿಘಂಟಿನ ಮೊದಲ ಸಂಪುಟದ ಕಾರ್ಯ ನಡೆಯುತ್ತಿದ್ದಾಗ ಸಂಪಾದಕ ಸಮಿತಿ ಅಧ್ಯಕ್ಷರಾಗಿದ್ದ ಡಾ. ಎ.ಆರ್. ಕೃಷ್ಣಶಾಸ್ತ್ರಿ ಆಮೇಲೆ ಅಧ್ಯಕ್ಷರಾದ ತೀ.ನಂ.ಶ್ರೀ. ಅವರೂ ವಿಧಿವಶರಾದರು. ತರುವಾಯ ಬಂದ ಡಿ.ಎಲ್.ಎನ್. ಅವರೂ ತೀರಿಕೊಂಡರು. ಆಮೇಲೆ ಕ.ವೆಂ. ರಾಘವಾಚಾರ್ಯರು ಅಧ್ಯಕ್ಷರಾದರು. ಆ ಅವಧಿಯಲ್ಲೇ ನಾನು ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನಾ ವಿಭಾಗದ ಉಪನಿರ್ದೇಶಕನಾಗಿ ನೇಮಕಗೊಂಡೆ. ಪರಿಷತ್ತಿನಲ್ಲಿ ಉಂಟಾದ ಅಹಿತಕರ ಬೆಳವಣಿಗೆಯಿಂದಾಗಿ ನಾನು ನಿಘಂಟಿನಿಂದ ಬಿಡುಗಡೆ ಹೊಂದಿ ಅಧ್ಯಯನ ಸಂಸ್ಥೆ ಸೇರಿದೆ. ಆ ವೇಳೆಗೆ ಪ್ರಾಚ್ಯ ವಿದ್ಯಾಸಂಸ್ಥೆ, ಸಂಸ್ಕೃತ ಮತ್ತು ಕನ್ನಡ ಎಂದು ವಿಭಾಗಗೊಂಡು, ಕನ್ನಡ ಹಸ್ತಪ್ರತಿಗಳ ಕಾರ್ಯನಿರ್ವಹಿಸುತ್ತಿದ್ದ ಪಂಡಿತ ವರ್ಗ ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲ್ಪಟ್ಟಿತ್ತು.

ನಾನು ಅಧಿಕಾರ ವಹಿಸಿಕೊಂಡಾಗ ಡಾ. ಹಾ.ಮಾ. ನಾಯಕ ಅವರು ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. ನಾನು ಮೊಟ್ಟಮೊದಲು ಅಧ್ಯಯನ ಸಂಸ್ಥೆಯಲ್ಲಿನ ಅಪ್ರಕಟಿತ ಕೃತಿಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸಿ ಆ ಕಾವ್ಯಗಳ ಹಸ್ತಪ್ರತಿಗಳು ಬೇರೆ ಯಾವ ಯಾವ ವಿಶ್ವವಿದ್ಯಾಲಯಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ದೊರೆಯುತ್ತವೆ ಎಂಬುದನ್ನು ಪರಿಶೀಲಿಸಿದೆ. ಸಿಬ್ಬಂದಿ ವರ್ಗದವರನ್ನೆಲ್ಲ ಕೂಡಿಸಿಕೊಂಡು ಅಪ್ರಕಟಿತ ಪ್ರಾಚೀನ ಕಾವ್ಯಗಳ ಸಂಪಾದನಾ ಕಾರ್ಯವನ್ನು ಹಂಚಿದೆ. ಅನೇಕ ಅಪ್ರಕಟಿತ ಪ್ರಾಚೀನ ಕಾವ್ಯಗಳು ಶಾಸ್ತ್ರೀಯವಾಗಿ ಸಂಪಾದನೆಗೊಂಡು ಪ್ರಕಟವಾದುವು. ನಾನೂ ಸಹ ಅಬ್ಬಲೂರು ಚರಿತೆ, ಉದ್ಯೋಗಸಾರ, ಧರ್ಮನಾಥ ಪುರಾಣ, ಆರಾಧ್ಯ ಚಾರಿತ್ರ, ಚತುರಾಚಾರ್ಯ ಚಾರಿತ್ರ -ಮೊದಲಾದ ಮಹತ್ವದ ಕೃತಿಗಳನ್ನು ಪ್ರಕಟಿಸಿದೆ. ಈ ಎಲ್ಲ ಕಾರ್ಯಗಳಿಗೂ ಹಾ.ಮಾ. ನಾಯಕರೂ, ತರುವಾಯ ಬಂದ ಡಾ. ಎಚ್. ತಿಪ್ಪೇರುದ್ರಸ್ವಾಮಿಗಳೂ ಸಂಪೂರ್ಣ ನೆರವನ್ನಿತ್ತರು. ಈ ವಿಭಾಗದ ಪ್ರಕಟನೆಗಳು ನೂರನ್ನು ಮೀರಿದವು. ಈ ಅವಧಿ ಸಂಪಾದನ ವಿಭಾಗದ ಸುವರ್ಣಯುಗ ಎನಿಸಿತು.

ಸಂಪಾದನ ವಿಭಾಗದ ಸಂಪಾದಕ ವರ್ಗವನ್ನು ಬೋಧಕೇತರ ವರ್ಗ ಎಂದು ಪರಿಗಣಿಸಿ ಅವರನ್ನು ೫೫ ವರ್ಷಗಳಿಗೆ ನಿವೃತ್ತಿಗೊಳಿಸಲಾಗುತ್ತಿತ್ತು. ಬೋಧಕ ವರ್ಗದವರಿಗೆ ನಿವೃತ್ತಿ ೬೦ ವರ್ಷಗಳು. ಅದರಂತೆ ನನ್ನನ್ನು ೫೫ ವರ್ಷಗಳಿಗೆ ನಿವೃತ್ತಿಗೊಳಿಸುವ ಆದೇಶ ಬಂದಿತು. ನಾನು ಅದನ್ನು ಪ್ರತಿಭಟಿಸಿ ನಮ್ಮದು ಶೈಕ್ಷಣಿಕ ಹುದ್ದೆಯೇ ಹೊರತು ಆಡಳಿತಾತ್ಮಕ ಹುದ್ದೆಯಲ್ಲ. ಆದುದರಿಂದ ನನ್ನನ್ನು ೬೦ ವರ್ಷಗಳವರೆಗೆ ಮುಂದುವರೆಸಬೇಕೆಂದು ಉಚ್ಚನ್ಯಾಯಾಲಯದಿಂದ ನನ್ನ ನಿವೃತ್ತಿಗೆ ತಡೆಯಾಜ್ಞೆ ತಂದು ೬೦ ವರ್ಷಗಳವರೆಗೆ ಸೇವೆಯಲ್ಲಿ ಮುಂದುವರೆದೆ. ಆಮೇಲೆ ನಿವೃತ್ತನಾದೆ.

ತರುವಾಯ ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದ ಅಧಿಕೃತ ಸಂಪಾದನಾ ಕಾರ್ಯಕ್ಕೆ ಮೂರು ವರ್ಷಗಳ ಅನುಮತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕವೇ ತಂದೆ. ಇದಕ್ಕೆ ಸಂಬಂಧಿಸಿದ ಯೋಜನೆಯನ್ನು ನನ್ನ ಮಿತ್ರರಾದ ಡಾ. ಎಂ.ಎಂ. ಕಲಬುರ್ಗಿಯವರು ತಯಾರಿಸಿಕೊಟ್ಟರು. ಆ ವೇಳೆಗೆ ನನ್ನ ಸಂಸಾರವನ್ನು ಬೆಂಗಳೂರಿಗೆ ವರ್ಗಾಯಿಸಿದ್ದುದರಿಂದ ಈ ನನ್ನ ಯುಜಿಸಿ ಕಾರ್ಯವನ್ನು ಉಳಿದೆರಡು ವರ್ಷಗಳು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮುಂದುವರೆಸಿ ಮುಗಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬನಾಗಿದ್ದೆ. ನಿಘಂಟಿನ ಕಾರ್ಯ ಬಹಳ ತಡವಾಗುತ್ತಿರುವ ವಿಷಯವನ್ನು ಸಂಪಾದಕ ಸಮಿತಿಯಲ್ಲಿ ವಿವರವಾಗಿ ಚರ್ಚಿಸಿ ಪ್ರಧಾನ ಸಂಪಾದಕರೂ ಸಂಪಾದಕ ಸಮಿತಿಯ ಅಧ್ಯಕ್ಷರೂ ಒಬ್ಬರೇ ಆಗಿರುವುದನ್ನು ವಿಭಜಿಸಬೇಕೆಂದಾಗ ಈ ಎರಡೂ ಹುದ್ದೆಗಳಲ್ಲಿದ್ದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಇದಕ್ಕೆ ಒಪ್ಪದೆ ಅಂದು ತಮ್ಮ ಹುದ್ದೆಗಳನ್ನು ತ್ಯಜಿಸಿದರು. ಆಗ ನನ್ನನ್ನು ಪ್ರಧಾನ ಸಂಪಾದಕನೆಂದೂ ಡಾ. ಜಿ.ಎಸ್. ಗಾಯಿ ಅವರನ್ನು ಸಂಪಾದಕ ಸಮಿತಿ ಅಧ್ಯಕ್ಷರೆಂದೂ ನಿರ್ಣಯ ಮಾಡಿತು. ಉಳಿದ ಎರಡು ಸಂಪುಟಗಳನ್ನು ಹೊರತರುವ ಕಾರ್ಯವನ್ನು ಮಾಡುತ್ತಿದ್ದಾಗ ಸಂಪಾದಕ ಸಮಿತಿಯ ಅಧ್ಯಕ್ಷರಾದ ಡಾ. ಜಿ.ಎಸ್. ಗಾಯಿ ಅವರು

ದೈವಾಧೀನರಾದರು. ಈ ಎರಡೂ ಕಾರ್ಯಗಳನ್ನು ನಿರ್ವಹಿಸುವ ಹೊಣೆಗಾರಿಕೆ ನನ್ನ ಮೇಲೇ ಬಿತ್ತು. ದೈವೇಚ್ಛೆಯಿಂದ ಇವೆರಡೂ ಸಂಪುಟಗಳ ಕಾರ್ಯವನ್ನು ಮುಗಿಸಿ ಅವುಗಳನ್ನು ಬಿಡುಗಡೆ ಮಾಡಿದ್ದೂ ಆಯಿತು. ನಿಘಂಟಿನ ಎಂಟು ಸಂಪುಟಗಳೂ ಕನ್ನಡಿಗರಿಗೆ ಲಭ್ಯವಾಗುವಂತಾದದ್ದು ನನಗೆ ಅತಿಯಾದ ತೃಪ್ತಿಯನ್ನೂ ಸಂತೋಷವನ್ನೂ ತಂದುಕೊಟ್ಟಿತು. ನನ್ನ ಗುರುಗಳು ನನ್ನನ್ನು ಈ ಕಾರ್ಯಕ್ಕೆ ನಿಯೋಜಿಸಿದ್ದರಿಂದ ಗುರುಕಾಣಿಕೆಯನ್ನು ಸಲ್ಲಿಸಿದ ತೃಪ್ತಿ ಉಂಟಾಯಿತು.

ನಾನು ನಿಘಂಟು ಕಾರ್ಯದಲ್ಲಿದ್ದಾಗಲೇ ನನ್ನ ಗುರುಗಳೂ ಸಂಪಾದಕ ಸಮಿತಿಯ ಅಧ್ಯಕ್ಷರೂ ಆಗಿದ್ದ ಡಿ.ಎಲ್. ನರಸಿಂಹಾಚಾರ್ಯರಿಗೆ ಪ್ರಕಾಶಕರೊಬ್ಬರು ಹಳಗನ್ನಡ ನಿಘಂಟುಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿಕೊಡಬೇಕೆಂದು ಕೇಳಿಕೊಂಡರು. ಅದಕ್ಕೆ ಅವರು ಹೇಳಿದ ಮಾತುಗಳಂತೆ 'ಈ ಕೆಲಸಕ್ಕೆ ನಾನೇಕೆ? ನಮ್ಮ ಬಸವಾರಾಧ್ಯನಿಗೆ ವಹಿಸಿಬಿಡು ಅಚುಕಟ್ಟಾಗಿ ಮಾಡಿಕೊಡುತ್ತಾನೆ' ಎಂದು ಹೇಳಿ ಕಳುಹಿಸಿದರು. ಪ್ರಕಾಶಕರು ನನ್ನಲ್ಲಿಗೆ ಬಂದು ಈ ವಿಷಯ ತಿಳಿಸಿದಾಗ, ಗುರುಗಳ ಆಜ್ಞೆಯನ್ನು ಪರಿಪಾಲಿಸುವುದಾಗಿ ವಚನವಿತ್ತು, ಆ ಕಾರ್ಯವನ್ನು ಮುಗಿಸುವ ವೇಳೆಗೆ ಈ ಕಾರ್ಯಕ್ಕೆ ನನ್ನನ್ನು ಪ್ರವೃತ್ತಿಗೊಳಿಸಿದ್ದ ಡಿ.ಎಲ್.ಎನ್. ಮತ್ತು ಟಿ.ಎನ್.ಎಸ್. ಇಬ್ಬರೂ ಕಣ್ಮರೆಯಾಗಿದ್ದರು. ಈ ಹಳಗನ್ನಡ ನಿಘಂಟನ್ನು ಪ್ರಾತಃಸ್ಮರಣೀಯರಾದ ಈ ಇಬ್ಬರು ಗುರುಗಳಿಗೆ ಸಮರ್ಪಿಸಿ ಕೃತಾರ್ಥನಾದೆ.

ಮತ್ತೊಂದು ದಾಖಲಿಸಬೇಕಾದ ಪ್ರಕರಣ. ನಾನು ಮೈಸೂರು ವಿಶ್ವವಿದ್ಯಾನಿಲಯದಿಂದ ಎರವಲು ಸೇವೆಯ ಮೇಲೆ ಕನ್ನಡ ನಿಘಂಟಿನ ಕಾರ್ಯಕ್ಕೆ ಬಂದ ಮೇಲೆ ಅಲ್ಲಿ ನನಗೆ ಬರುತ್ತಿದ್ದ ಸಂಬಳಕ್ಕೆ ನೂರು ರೂಪಾಯಿ ಹೆಚ್ಚಿಗೆ ಕೊಡುವುದಾಗಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಲಿಖಿತ ಆದೇಶ ಬಂದಿತ್ತು. ಆದರೆ ಸರ್ಕಾರ ಇದಕ್ಕೆ ಒಪ್ಪಿಗೆ ನೀಡದೆ ಮೊದಲು ಐವತ್ತು ರೂಪಾಯಿಗಳಿಗೂ ಸಂಪಾದಕ ಸಮಿತಿ ಶಿಫಾರಸ್ಸಿನಂತೆ ಎಪ್ಪತ್ತೈದು ರೂಪಾಯಿಗಳಿಗೂ ನಿಗದಿಪಡಿಸಿತು. ಪರಿಷತ್ತಿನಿಂದ ಬರವಣಿಗೆಯಲ್ಲಿ ತಿಳಿಸಿದ್ದ ನೂರುರೂಪಾಯಿಗಳು ಸಂದಾಯವಾಗಲೇ ಇಲ್ಲ. ಆಗ ಸಂಪಾದಕ ಸಮಿತಿ ಅಧ್ಯಕ್ಷರಾಗಿದ್ದ ತೀ.ನಂ. ಶ್ರೀಕಂಠಯ್ಯನವರು ನಿಘಂಟು ಸಂಪಾದಕ ಸಮಿತಿಯ ಸದಸ್ಯರನ್ನೂ ಪರಿಷತ್ತಿನ ಅಧ್ಯಕ್ಷರನ್ನೂ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರಲ್ಲಿಗೆ ಕರೆದುಕೊಂಡು ಹೋದರು. ಕರ್ನಾಟಕದ ಈ ವಿದ್ವದ್ಮಣಿಗಳನ್ನು ಕಂಡ ಮುಖ್ಯಮಂತ್ರಿಗಳು ಎಲ್ಲರನ್ನೂ ಪ್ರೀತಿಯಿಂದ ಸತ್ಕರಿಸಿ ಬಂದ ಕಾರ್ಯವನ್ನು ಕೇಳಿದರು. ಆಗ ತೀನಂಶ್ರೀ ಅವರು ನಿಘಂಟು ಕಾರ್ಯವನ್ನು ವಿಶದಪಡಿಸಿ ಇಂತಹ ಮಹತ್ವದ ಕಾರ್ಯವನ್ನು ನಿರ್ವಹಿಸುವ ಸಂಪಾಕರಿಗೆ ಬೇರೆ ಬೇರೆ ಭಾಷೆಯವರು ಪ್ರಾಧ್ಯಾಪಕರ ಸಂಬಳ ಸಾರಿಗೆಗಳನ್ನು ನೀಡುತ್ತಿದ್ದಾರೆ. ಈ ನಮ್ಮ ಹುಡುಗ ಹಗಲು ರಾತ್ರಿ ನಿಘಂಟಿನ ಕೆಲಸ ಮಾಡುತ್ತಿದ್ದಾನೆ. ಈತನಿಗೆ ಕನಿಷ್ಠ ಒಂದು ರೀಡರ್ ಸಂಬಳವನ್ನಾದರೂ ಕೊಡಬಾರದೆ? ಸರಕಾರ ಇದಕ್ಕೆ ಅವಕಾಶ ಕೊಡುತ್ತಿಲ್ಲ ಎಂದರು. ಅದಕ್ಕೆ ಮುಖ್ಯಮಂತ್ರಿಗಳು ಈ ಸಣ್ಣ ವಿಷಯಕ್ಕೆ ತಾವೆಲ್ಲ ಬರಬೇಕಾಯಿತೆ? ಎಂದು ಹೇಳಿ ಸಂಬಂಧಿಸಿದ ಕಾರ್ಯದರ್ಶಿಗಳನ್ನು ಕರೆಸಿ ಈ ವಿಷಯವನ್ನು ತಿಳಿಸಿದರು. ಆ ಕೂಡಲೇ ಕಾರ್ಯದರ್ಶಿಗಳು ನಿಯಮಾನುಸಾರ "ಇದು ಸಾಧ್ಯವಿಲ್ಲ" ಎಂದುಬಿಟ್ಟರು.

ಈ ಸಂಗತಿ ನನ್ನ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಒಂದು ದಿನ ತೀನಂಶ್ರೀ ಅವರೊಡನೆ ಮಾತಾಡುತ್ತಿದ್ದಾಗ "ನನ್ನ ರಾಜೀನಾಮೆಯನ್ನು ತೆಗೆದುಕೊಂಡು ನನ್ನನ್ನು ನನ್ನ ಮಾತೃ ಸಂಸ್ಥೆಗೆ ಕಳಿಸಿಬಿಡಿ ಸಾರ್" ಎಂದೆ. ಅದನ್ನು ಕೇಳಿದ ತೀನಂಶ್ರೀ ಅವರು "ಒಂದು ಅರ್ಧ ಹಾಳೆ ಕಾಗದ ಇದ್ದರೆ ಕೊಡು" ಎಂದರು. ಅದಕ್ಕೆ "ಏಕೆ ಸಾರ್" ಎಂದು ಕೇಳಿದೆ. "ನೋಡು ನಿನ್ನ ರಾಜೀನಾಮೆ ಜೊತೆ ನನ್ನ ರಾಜೀನಾಮೆಯನ್ನು ತೆಗೆದುಕೋ" ಎಂದಾಗ ನಾನು ದಿಗ್ಭ್ರಾಂತನಾದೆ. ಇದೇ ವಿಷಯದಲ್ಲಿ ಡಾ. ರಂ.ಶ್ರೀ. ಮುಗಳಿ ಅವರು ವೆಲ್ಲಿಂಗ್‌ಟನ್ ಕಾಲೇಜಿನಲ್ಲಿ ತಮಗಾದ ಅನುಭವವನ್ನು ಹೇಳಿ "ಕನ್ನಡಕ್ಕಾಗಿ ನಾವು ಅಲ್ಪಸ್ವಲ್ಪ ತ್ಯಾಗ ಮಾಡಬೇಕಾಗುತ್ತದೆ" ಎಂದರು. ಅಂದಿನಿಂದ ಮುಂದೆ ಎಂದೂ ಈ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಇದಕ್ಕೆ ಪರಿಹಾರವೋ ಎಂಬಂತೆ ತೀನಂಶ್ರೀ ಅವರು ನನ್ನಿಂದ "ಕನ್ನಡ ಗದ್ಯವಿಕಾಸ" ಮತ್ತು "ಕನ್ನಡ ಗದ್ಯಾವಲೋಕನ" ಕೃತಿಗಳನ್ನು ಸಂಪಾದನೆ ಮಾಡಿಸಿ ಅವುಗಳನ್ನು ಪಠ್ಯಪುಸ್ತಕಗಳನ್ನಾಗಿ ಮಾಡಿಸಿದರು.

ನನ್ನ ಜೀವನದಲ್ಲಿ ಅನಿರೀಕ್ಷಿತವಾಗಿ ಸಂಭವಿಸಿದ ಘಟನೆ. ೧೯೯೮ಲನೇ ಇಸವಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚುನಾವಣೆ ಬಂತು. ನಾನು ಹತ್ತಾರು ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನಲ್ಲೇ ಕೆಲಸ ಮಾಡಿದ್ದುದರಿಂದ ಎಲ್ಲ ವಿದ್ಯಮಾನಗಳ ಅರಿವಿತ್ತು. ಕೆಲವರು ಪರಿಷತ್ತಿನ ಪದಾಧಿಕಾರಿಗಳಾಗಬೇಕೆಂದು ಹವಣಿಸಿ ಯಾರಾದರೂ ಒಬ್ಬ ಅಧ್ಯಕ್ಷರನ್ನು ನಿಲ್ಲಿಸಬೇಕೆಂದು ಚಿಂತಿಸುತ್ತಿದ್ದರು. ನನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬೇಕೆಂದೂ ನನಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಸ್ನೇಹಿತರೂ ಇರುವುದಾಗಿ ತಿಳಿಸಿದರು. ನಾನು ಸಾರಾಸಗಟಾಗಿ ಅವರ ಆಹ್ವಾನವನ್ನು ಅಲ್ಲಗಳೆದು: "ಹಣವುಳ್ಳವರು ಮಾತ್ರ ಈ ಕಾರ್ಯಕ್ಕೆ ಕೈಹಾಕಬೇಕು. ಇತ್ತೀಚೆಗೆ ನಮ್ಮ ಮನೆಯವರಿಗೆ ಬೈಪಾಸ್ ಸರ್ಜರಿ ಮಾಡಿಸಲು ಪಟ್ಟ ಕಷ್ಟವನ್ನು ವಿವರಿಸಿ ಮತ್ತೊಬ್ಬ ಸಮರ್ಥ ಅಭ್ಯರ್ಥಿಯನ್ನು ಹುಡುಕಿಕೊಳ್ಳಿ" ಎಂದು ಹೇಳಿದೆ. ಅದಕ್ಕೆ ಅವರು ಸುಮ್ಮನಾಗದೆ "ನೀವು ಚುನಾವಣೆಗಾಗಿ ಒಂದು ಬಿಡಿಕಾಸನ್ನೂ ಖರ್ಚು ಮಾಡಬೇಕಾಗಿಲ್ಲ. ಅದನ್ನೆಲ್ಲಾ ನಾವು ನೋಡಿಕೊಳ್ಳುತ್ತೇವೆ" ಎಂದರು. ನೀವು ನನಗಾಗಿ ಹಣ ಖರ್ಚು ಮಾಡಬೇಕಾಗಿಲ್ಲ. ನನಗೆ ಪರಿಷತ್ತಿನ ಅಧ್ಯಕ್ಷ ಸ್ಥಾನವೂ ಬೇಕಾಗಿಲ್ಲ ಎಂದು ಹೇಳಿ ಹೊರಟುಹೋದೆ. ಆದರೂ ತಮ್ಮ ಪ್ರಯತ್ನ ಬಿಡದೆ ಅವರು ಎಲ್ಲಿ ಸಿಕ್ಕಿದರಲ್ಲಿ ಕೇಳುತ್ತಲೇ ಇದ್ದರು. ಈ ಮಧ್ಯೆ ನಾನು ನನ್ನ ಗುರುಗಳಾದ ಪ್ರೊ. ಎ.ಎನ್. ಮೂರ್ತಿರಾಯರನ್ನೂ ಹಿರಿಯರಾದ ನಿಟ್ಟೂರು ಶ್ರೀನಿವಾಸರಾಯರನ್ನೂ, ಡಾ. ಎಚ್.ಎಲ್. ನಾಗೇಗೌಡರನ್ನೂ ಈ ಬಗೆಗೆ ವಿಚಾರಿಸಿದಾಗ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿ ಎಂದು ಅಭಯವನ್ನು ನೀಡಿದರು. ಹಾಗೆಯೇ ನನ್ನ ಅನೇಕ ಆಪ್ತಮಿತ್ರರೂ, ಹಿತೈಷಿಗಳೂ ಪ್ರೋತ್ಸಾಹಿಸಿದರು. ನಾನು ಆ ವೇಳೆಗಾಗಲೇ ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಬಿ. ಶಿವಮೂರ್ತಿಶಾಸ್ತ್ರಿ ಪ್ರತಿಷ್ಠಾನ ಇವುಗಳ ಅಧ್ಯಕ್ಷನೂ ಆಗಿದ್ದೆ. ಮತ್ತೊಮ್ಮೆ ನನ್ನ ಮಿತ್ರರು ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತೆ ಒತ್ತಾಯಿಸಿದಾಗ ಯಾವುದೋ ಜ್ಞಾನದಲ್ಲಿದ್ದ ನಾನು ಒಪ್ಪಿಗೆಯನ್ನು ಸೂಚಿಸಿಬಿಟ್ಟೆ.

ಈ ಹಿಂದೆ ಗೊ.ರು. ಚನ್ನಬಸಪ್ಪನವರ ಚುನಾವಣೆಗೆ ಆರಾಧ್ಯ ಕಾಂಪ್ಲೆಕ್ಸ್‌ನಲ್ಲಿ ಕೊಟ್ಟಿದ್ದ ಕಚೇರಿಯನ್ನು ಆರ್‌ಎಂಬಿ ಆರಾಧ್ಯರ ಮಕ್ಕಳಾದ ಶ್ರೀಕಂಠಾರಾಧ್ಯರು ಒದಗಿಸಿಕೊಟ್ಟರು. ಅದನ್ನು ವಿಧ್ಯುಕ್ತವಾಗಿ ಉದ್ಘಾಟಿಸಿ ನನ್ನ ಮಿತ್ರರು ಚುನಾವಣಾ ಪ್ರಚಾರ ಕಾರ್ಯವನ್ನು ಪ್ರಾರಂಭಿಸಿದರು. ನನ್ನ ಪರಮಮಿತ್ರರಾದ ಶ್ರೀ ಮಲ್ಲಿಕಾರ್ಜುನಯ್ಯ ಅವರು ಜನಾರ್ಧನ ಹೋಟೆಲಿನಲ್ಲಿ ನನ್ನ ಗುರುಗಳ, ಅಭಿಮಾನಗಳ ಒಂದು ಸಭೆಯನ್ನು ಸೇರಿಸಿ ಎಲ್ಲರಿಗೂ ಭೋಜನವ್ಯವಸ್ಥೆ ಮಾಡಿದ್ದರು. ಈ ಸಭೆಗೆ ನನ್ನ ವಿದ್ಯಾಗುರುಗಳಾಗಿದ್ದ ಎ.ಎನ್. ಮೂರ್ತಿರಾಯರು, ನಿವೃತ್ತ ನ್ಯಾಯಮೂರ್ತಿಗಳಾಗಿದ್ದ ನಿಟ್ಟೂರು ಶ್ರೀನಿವಾಸರಾಯರು, ಎಚ್.ಎಲ್. ನಾಗೇಗೌಡರು, ಮತ್ತೊಬ್ಬ ಗುರುಗಳಾದ ಎಲ್.ಎಸ್. ಶೇಷಗಿರಿರಾಯರು, ಐಬಿಎಚ್ ಪ್ರಕಾಶನದ ಜಿ.ಕೆ. ಅನಂತರಾಮು ಅವರು, ಬೆಂಗಳೂರು ವಿಶ್ವವಿದ್ಯಾಲಯದ ಅನೇಕ ಪ್ರಾಧ್ಯಾಪಕರೂ ಹಲವಾರು ಮಿತ್ರರೂ ಅಭಿಮಾನಿಗಳೂ ಭಾಗವಹಿಸಿದ್ದರು. ಎಲ್ಲರೂ ಏಕಕಂಠದಿಂದ ನನಗೆ ಬೆಂಬಲವನ್ನು ಸೂಚಿಸಿ ಮಾತಾಡಿದರು. ಆ ಸಂದರ್ಭದಲ್ಲಿ ನನ್ನ ಅಭಿಮಾನಿ ಮಿತ್ರರಾದ ಐಬಿಎಚ್ ಪ್ರಕಾಶನದ ಶ್ರೀ ಅನಂತರಾಮು ಅವರು ಹೇಳಿದ ಮಾತುಗಳಿವು: "ಬಸವಾರಾಧ್ಯ ಅವರು ಅವರ ಶ್ರೀಮತಿ ಅವರಿಗೆ ಬೈಪಾಸ್ ಸರ್ಜರಿ ಮಾಡಿಸಿ ಬರಿಗೈಯಲ್ಲಿದ್ದಾರೆ. ಈ ಚುನಾವಣೆಯ ಹೆಚ್ಚಿನ ಭಾರವನ್ನು ಅವರ ಮೇಲೆ ಹೊರಿಸದೆ ಅಗತ್ಯ ನೆರವು ನೀಡಿ" ಎಂದು ಮನವಿ ಮಾಡಿ, ತಮ್ಮ ಕಾಣಿಕೆಯಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ನೀಡಿದರು. ನನಗೆ ಪರಮಾಶ್ಚರ್ಯವೂ ಅವರ ಈ ಮುಕ್ತಮನಸ್ಸಿನ ಕೊಡುಗೆಯ ಬಗೆಗೆ ಅಪಾರ ಅಭಿಮಾನವೂ ಉಂಟಾಯಿತು. ಇದು ನನ್ನ ಗೆಲುವಿಗೆ ದಾರಿದೀಪವಾಯಿತು. ಇಂತಹ ಅನೇಕ ಮಿತ್ರರ ಅಭಿಮಾನದಿಂದ ನನ್ನ ಗೆಲುವಿನ ಬಗೆಗೆ ಧೈರ್ಯ ಅಂಕುರಿಸಿತು. ಅನೇಕ ಕಡೆ ಸಂಚರಿಸಿ ಎಲ್ಲ ಧರ್ಮದ ಗುರುಗಳ ಆಶೀರ್ವಾದ ಪಡೆದೆ. ಶ್ರೀಮಂತ ಅಭ್ಯರ್ಥಿಯ ಎದುರು ಸ್ಪರ್ಧಿಸಿ ನಾನು ಜಯಶೀಲನಾದೆ. ಬಿಜಾಪುರದಲ್ಲಿದ್ದ ನನ್ನ ಹಿತೈಷಿಗಳೂ ಹಿರಿಯರೂ ಆಗಿದ್ದ ಪ್ರೊ. ಬಿ.ಟಿ. ಸಾಸನೂರು ಮತ್ತು ಅವರ ಶಿಷ್ಯವರ್ಗ ನೀಡಿದ ಸಹಕಾರ, ಮಾಡಿದ ಉಪಕಾರ ಚಿರಕಾಲ ನೆನೆಯುವಂತಹುದು. ಪರಿಷತ್ತಿನ ಅಧ್ಯಕ್ಷನಾಗಿ ಕೊನೆಗೂ ಚುನಾಯಿತನಾದೆ.

ಆರ್ಥಿಕ ದುಸ್ಥಿತಿಯಲ್ಲಿದ್ದ ಪರಿಷತ್ತಿಗೆ ಒಂದು ಹೊಸ ದೃಷ್ಟಿ ಹೊಸ ಸೃಷ್ಟಿ ಕಲ್ಪಿಸುವ ಯೋಜನೆಯ ಅಂಗವಾಗಿ ಪರಿಷತ್ತಿನ ಕಾರ್ಯಕ್ರಮಗಳನ್ನು ನನ್ನ ಗುರುಗಳಾದ ಮೂರ್ತಿರಾಯರಿಂದ ಉದ್ಘಾಟಿಸಿದೆ. ನಿಟ್ಟೂರು ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸಿದ್ದರು. ಅಚ್ಚಿನ ಕಾರ್ಯಗಳಿಗೆ ಒಂದು ಸುಸಜ್ಜಿತ ಮುದ್ರಣಾಲಯವಿಲ್ಲದಿದ್ದುದನ್ನು ಕಂಡು ಮೊಟ್ಟಮೊದಲಿಗೆ ಒಂದು ಆಫ್‌ಸೆಟ್ ಮುದ್ರಣಾಲಯವನ್ನು ಸ್ಥಾಪಿಸಿದೆ.

ಪರಿಷತ್ತಿನ ಎಲ್ಲ ಕೃತಿಗಳೂ ಈ ಮುದ್ರಣಾಲಯದಲ್ಲೇ ಅಚ್ಚಾಗುವಂತೆ ಮಾಡಿದೆ. ಪರಿಷತ್ತಿನ ಪಕ್ಕದ ನೆಲಮಹಡಿ ಜಾಗದಲ್ಲಿ ಸಿಂಡಿಕೇಟ್ ಬ್ಯಾಂಕ್‌ಗೆ ವ್ಯವಸ್ಥೆ ಮಾಡಿಕೊಡಲಾಯಿತು. ಕನ್ನಡ ಸಂಕ್ಷಿಪ್ತ ನಿಘಂಟು, ರತ್ನಕೋಶ ಇನ್ನಿತರ ಉಪಯುಕ್ತ ಒಂದು ನೂರು ಕೃತಿಗಳ ಪ್ರಕಟನೆಗೆ ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಎಸ್.ಎಂ. ಕೃಷ್ಣ ಅವರು ಒಂದೂವರೆ ಕೋಟಿ ಬಿಡುಗಡೆ ಮಾಡಿದರು. ತಮ್ಮ ಸ್ವಂತ ವಂತಿಕೆಯಾಗಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಕನಕಪುರ ಮತ್ತು ಬಾಗಲಕೋಟೆಗಳಲ್ಲಿ ಎರಡು ಅಭೂತಪೂರ್ವ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳನ್ನು ನಡೆಸಲಾಯಿತು. ನೂರಾರು ಉಪಯುಕ್ತ ಕೃತಿಗಳನ್ನು ಜನತೆಗೆ ಸುಲಭ ಬೆಲೆಯಲ್ಲಿ ಒದಗಿಸಲಾಯಿತು. ಈ ತೆರದ ಎಷ್ಟೋ ಕಾರ್ಯಗಳು ನಡೆದಿದೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಘನತೆ ಮಾನ್ಯತೆಗಳನ್ನು ತರುವ ಕಾರ್ಯ ಈ ಅವಧಿಯಲ್ಲಿ ನಡೆದಿದೆ ಎಂದು ಭಾವಿಸಿದ್ದೇನೆ.

ಇದು ನನ್ನ ಜೀವನದ ಕರ್ಮಸಿದ್ಧಾಂತ. ನನ್ನಲ್ಲೇ ಸಂಪೂರ್ಣ ವಿಶ್ವಾಸವಿಟ್ಟು ಸಾಕಿ ಸಲಹಿದ, ನನಗಾಗಿ ಭಿಕ್ಷೆಯನ್ನು ಬೇಡಿದ ಯಾರನ್ನೂ ಸಂರಕ್ಷಿಸುವ ಕಾರ್ಯ ನನ್ನಿಂದ ಸಾಧ್ಯವಾಗಲೇ ಇಲ್ಲ. ನನ್ನ ಕರ್ಮಫಲಕ್ಕಾಗಿ ಪರಿತಪಿಸುತ್ತಿದ್ದೇನೆ. ಅಸ್ತವ್ಯಸ್ತ ಜೀವನ, ಗೊತ್ತುಗುರಿಯಿಲ್ಲದ ನಿರರ್ಥಕ ಕಾರ್ಯಗಳು, ವ್ಯರ್ಥವಾಗಿ ಲೋಕಹಿತಾರ್ಥಕ್ಕಾಗಿ ಪರಿತಪಿಸಿ ಬೇಗುದಿಗೊಂಡ ಮನಸ್ಸು, ಇನ್ನುಳಿದ ಜೀವನದ ಅಂತಿಮ ಕಾಲದಲ್ಲಾದರೂ ಸಾರ್ಥಕ ಕಾರ್ಯಗಳನ್ನು ಸಾಧಿಸಬಹುದೇನೋ ಎಂಬ ಆತ್ಮವಿಶ್ವಾಸ ನನ್ನನ್ನು ಎಲ್ಲಿಗೆ ಕೊಂಡೊಯ್ಯುತ್ತದೆಯೋ ಬಲ್ಲವರಾರು? ಕಳೆದ ಆರು ದಶಕಗಳಿಂದ ನಾನು ಬರೆದ ಲೇಖನಗಳು ಯಾವುವು? ಮಾಡಿದ ಸಾಮಾಜಿಕ ಚಿರಕಾರ್ಯಗಳು ಯಾವುವು? ಎಂಬ ಯಾವ ದಾಖಲೆಗಳೂ, ಮಾಹಿತಿಯೂ ನನ್ನಲ್ಲಿಲ್ಲ. ನನ್ನದು ಅಸ್ತವ್ಯಸ್ತ ಜೀವನ. ಇಂದಿನ ಜಗತ್ತಿನಲ್ಲಿ ನನ್ನಂತಹವನು ಬದುಕಿರುವುದೇ ಒಂದು ಆಶ್ಚರ್ಯ. ನನ್ನ ಅನಂತ ನಮನಗಳನ್ನೂ ಶುಭಕಾಮನೆಗಳನ್ನೂ ಸರ್ವರಿಗೂ ಸಮರ್ಪಿಸಿ, ಈ ಕಾರ್ಯಪ್ರವೃತ್ತರಾದ ಸರ್ವರಿಗೂ ನನ್ನ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. "ಸರ್ವೇ ಜನಾಃ ಸುಖಿನೋ ಭವಂತು"

ಎನ್. ಬಸವಾರಾಧ್ಯ

ಸಂಖ್ಯೆ-743, 12ನೆಯ ಮುಖ್ಯರಸ್ತೆ, 3ನೆಯ ವಿಭಾಗ, ರಾಜಾಜಿನಗರ,
ಬೆಂಗಳೂರು-560 010. ದೂರವಾಣಿ : 080-23380605 / 23386718

ಸ್ವ-ವಿವರಗಳು

ಹೆಸರು	:	ನಂಜುಂಡಾರಾಧ್ಯ ಬಸವಾರಾಧ್ಯ
ತಂದೆಯ ಹೆಸರು	:	ನಂಜುಂಡಾರಾಧ್ಯ
ತಾಯಿಯ ಹೆಸರು	:	ಗಿರಿಜಮ್ಮ
ಹುಟ್ಟಿದ ತಾರೀಖು	:	20-02-1926
ಹುಟ್ಟಿದ ಸ್ಥಳ	:	ನಾರಸಿಂಹನಹಳ್ಳಿ, ಗೌರಿಬಿದನೂರು ತಾಲ್ಲೂಕು, ಕೋಲಾರ ಜಿಲ್ಲೆ
ವಿದ್ಯಾರ್ಹತೆ	:	ಎಂ.ಎ.(ಕನ್ನಡ) 1950, ಮೈಸೂರು ವಿಶ್ವವಿದ್ಯಾನಿಲಯ
ಬಳಸಬಲ್ಲ ಭಾಷೆಗಳು	:	ಕನ್ನಡ, ಸಂಸ್ಕೃತ, ಇಂಗ್ಲಿಷ್, ತೆಲುಗು, ಹಿಂದಿ, ತಮಿಳು.
ವೃತ್ತಿ ಜೀವನ	:	1. ಸ್ನಾತಕ ವಿಶೇಷಜ್ಞ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 2. ಸ್ನಾತಕ ಸಹಾಯಕರು, ಕನ್ನಡ ಕನ್ನಡ ನಿಘಂಟು ಯೋಜನೆಯ ಮುಖ್ಯ ಸಂಪಾದಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. 3. ಕನ್ನಡ-ಕನ್ನಡ ನಿಘಂಟಿನ ಉಪಸಂಪಾದಕ. 4. ಕನ್ನಡ-ಕನ್ನಡ ನಿಘಂಟಿನ ಸಂಪಾದಕ (1955 ರಿಂದ 1971) 5. ಉಪನಿರ್ದೇಶಕರು, ಸಂಪಾದನ ವಿಭಾಗ (1971 ರಿಂದ 1986) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 6. ಪ್ರಧಾನ ಸಂಪಾದಕ, ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1991.
ಶೈಕ್ಷಣಿಕ ಸಾಧನೆಗಳು	:	
(ಅ) ಪರೀಕ್ಷಕ ಹುದ್ದೆ	:	1. ಮೈಸೂರು ವಿಶ್ವವಿದ್ಯಾಲಯದ ಇಂಟರ್ ಮೀಡಿಯಟ್ ಪರೀಕ್ಷೆ. 2. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕನ್ನಡ ಪಂಡಿತ ಪರೀಕ್ಷೆ. 3. ಪಿಎಚ್.ಡಿ. ಮಹಾಪ್ರಬಂಧದ ಪ್ರಕಟಣೆಯ ವಿಶೇಷ ತಜ್ಞ ಸಲಹೆಗಾರ ಕಾಮರಾಜ್ ವಿಶ್ವವಿದ್ಯಾಲಯ, ಮಧುರೈ. 4. ಪಿಎಚ್.ಡಿ. ಮಹಾಪ್ರಬಂಧ ಪ್ರಕಟಣೆಯ ವಿಶೇಷ ತಜ್ಞ ಸಲಹೆಗಾರ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ.

(ಆ) ಪಠ್ಯಪುಸ್ತಕ ಸಮಿತಿ : 1. ಅಧ್ಯಕ್ಷರು . : ಹತ್ತನೆಯ ತರಗತಿಯ 1979-80 ಪಠ್ಯಪುಸ್ತಕ ಸಮಿತಿ, ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ.

2. ಪಠ್ಯಪುಸ್ತಕ ಸಮಿತಿ ಸದಸ್ಯ : ಕರ್ನಾಟಕ ಸರ್ಕಾರದ ವಯಸ್ಕರ ಶಿಕ್ಷಣ ಸಮಿತಿ.

(ಇ) ಸಮ್ಮೇಳನಗಳು ಮತ್ತು ವಿಚಾರಗೋಷ್ಠಿಗಳು:

1. ಮೈಸೂರು ವಿಶ್ವವಿದ್ಯಾನಿಲಯ
2. ಬೆಂಗಳೂರು ವಿಶ್ವವಿದ್ಯಾನಿಲಯ
3. ಕರ್ನಾಟಕ ವಿಶ್ವವಿದ್ಯಾನಿಲಯ
4. ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ಬೆಂಗಳೂರು
5. ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬೆಂಗಳೂರು
6. ಅಖಿಲ ಭಾರತದ ನಿಘಂಟು ತಜ್ಞರ ಸಮ್ಮೇಳನ, ಮೈಸೂರು

(ಈ) ವಿದ್ವತ್ ಸಮಿತಿಗಳ ಸದಸ್ಯತ್ವ:

1. ಇಂಗ್ಲಿಷ್-ಕನ್ನಡ ನಿಘಂಟು ಪರಿಷ್ಕರಣ ಯೋಜನೆಯ ಸಂಪಾದಕ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ.
2. ಕನ್ನಡದಲ್ಲಿ ಕಛೇರಿ ಕೈಪಿಡಿ (ಆಫೀಸ್ ಮ್ಯಾನುಯಲ್) ತಯಾರಿಕಾ ಸಮಿತಿ, ಕರ್ನಾಟಕ ಸರ್ಕಾರ.
3. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಸಂಪಾದಕ ಸಮಿತಿ, ಬೆಂಗಳೂರು.

(ಉ) ಪ್ರಕಟಣೆಗಳು : 1. 30ಕ್ಕೂ ಹೆಚ್ಚು ಸಂಪಾದಿಕ ಕೃತಿಗಳು ಹಾಗೂ ವಿವಿಧ ವಿಷಯಗಳನ್ನು ಕುರಿತು ನೂರಕ್ಕೂ ಹೆಚ್ಚು ಲೇಖನಗಳು.

ಪ್ರಮುಖ ಪ್ರಕಟಣೆಗಳು (ಸಂಪಾದಿತ ಕೃತಿಗಳು):

1.	ತೊರವೆ ರಾಮಾಯಣ ಸಂಗ್ರಹ (ಇತರರೊಡನೆ)	1953
2.	ತ್ರಿಪುರ ದಹನ ಸಾಂಗತ್ಯ	1953
3.	ಚಂದ್ರಹಾಸನ ಕಥೆ	1954
4.	ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ	1954
5.	ಹರಿಶ್ಚಂದ್ರ ಕಾವ್ಯಂ (ಇತರರೊಡನೆ)	1955
6.	ಚೇರಮ ಕಾವ್ಯಂ	1956
7.	ಸರ್ವಜ್ಞ ವಚನ ಸಂಗ್ರಹ	1956
8.	ತೊರವೆ ರಾಮಾಯಣ	1956
9.	ಉದ್ಭಟದೇವ ಚರಿತೆ	1957
10.	ಸರ್ವೋದಯ ಸಾಧಕರು (ಇತರರೊಡನೆ)	1957
11.	ಶತಕ ಸಾಂಗತ್ಯಗಳು	1959
12.	ಕನ್ನಡ ಗದ್ಯವಿಕಾಸ	1961
13.	ಪಂಪಭಾರತ ಸಂಗ್ರಹ (ಇತರರೊಡನೆ)	1964

14. ಕನ್ನಡ ಗದ್ಯಾವಲೋಕನ 1966
15. ಗುರುಭಕ್ತಾಂಡಾರಿ ಚರಿತೆ 1969
16. ಅಬ್ಬಲೂರು ಚರಿತೆ 1973
17. ಉದ್ಯೋಗಸಾರ 1973
18. ಧರ್ಮನಾಥ ಪುರಾಣಂ 1975
19. ಹಳಗನ್ನಡ ನಿಘಂಟು 1976
20. ಲೇಖನ ಸಂಚಯ 1978
21. ಆರಾಧ್ಯ ಚಾರಿತ್ರ 1980
22. ಸಿದ್ಧಲಿಂಗೇಶ್ವರ ಸಾಂಗತ್ಯ 1981
23. ನವಮುಗ್ಧ ಲೀಲೆ 1983
24. ದೇವಲಾಪುರದ ನಂಜುಂಡ ವಿರಚಿತ ಕೃತಿಗಳು 1985
25. ಚತುರಾಚಾರ್ಯ ಚಾರಿತ್ರ 1986
26. ವಡ್ಡಾರಾಧನೆ 1996
27. ಸಚಿತ್ರ ಶಾಲಾ ನಿಘಂಟು (ಭಾಷಾಂತರ)
28. ರಾಘವಾಂಕ
29. ಜ್ಯೋತಿಷಿಯ ಮಗ ಮತ್ತು ಕೊಡದಣ್ಣ ಬಿಡದಣ್ಣ (ಮಕ್ಕಳ ಪುಸ್ತಕ)
30. ಅಪ್ಪಯ್ಯ ಮತ್ತು ಬಾಯಿಶೂರ ಕೈಶೂರ (ಮಕ್ಕಳ ಪುಸ್ತಕ)
31. ಐದು ಸಂಸ್ಕೃತ ನಾಟಕ ಕಥೆಗಳು (ಇತರರೊಡನೆ)
32. ಹರಿಶ್ಚಂದ್ರ ಸಾಂಗತ್ಯ (ಬೊಂಬೆಯಲಕ್ಕ)

ಸಂಭಾವನಾ ಗ್ರಂಥಗಳ ಸಂಪಾದನೆ:

1. ಉಪಾಯನ (ಪ್ರೊ. ಡಿ.ಎಲ್. ನರಸಿಂಹಾಚಾರ್ ಸಂಭಾವನಾ ಗ್ರಂಥ 1967)
2. ದೇವಗಂಗೆ (ಡಾ. ಬಿ. ಶಿವಮೂರ್ತಿಶಾಸ್ತ್ರೀ ಸಂಭಾವನಾ ಗ್ರಂಥ 1968)
3. ಅಮರವಾಣಿ (ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ ಸಂಸ್ಮರಣ ಸಂಪುಟ 1991)

ಬಹುಮಾನಗಳು :

ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ	1.	ತೊರವೆ ರಾಮಾಯಣ 1956
ಮೈಸೂರು ವಿಶ್ವವಿದ್ಯಾನಿಲಯದ ತೀ.ನಂ. ಶ್ರೀಕಂಠಯ್ಯ ಸ್ಮಾರಕ	2.	ಧರ್ಮನಾಥ ಪುರಾಣಂ 1976
ದೇವರಾಜ ಬಹದ್ದೂರ್ ಸಾಹಿತ್ಯಿಕ ಸಮಿತಿ	1.	ಹರಿಶ್ಚಂದ್ರ ಕಾವ್ಯಂ
	2.	ಚೇರಮ ಕಾವ್ಯಂ
	3.	ಉದ್ಭಟದೇವ ಚರಿತೆ

ವಿದ್ವತ್ ಲೇಖನಗಳು :

1. ಕನ್ನಡ ವಿಶ್ವಕೋಶ
2. ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾನಿಲಯ
3. ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು ವಿಶ್ವವಿದ್ಯಾನಿಲಯ
4. ಪ್ರಬುದ್ಧ ಕರ್ಣಾಟಕ, ಮೈಸೂರು ವಿಶ್ವವಿದ್ಯಾನಿಲಯ
5. ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಪ್ರಶಸ್ತಿ ಮತ್ತು ಪದವಿಗಳು	:	1. ವೀರಶೈವಾಮೃತ ಮಹಾಪುರಾಣ	:	ಗುಬ್ಬಿಯ ಮಲ್ಲಣಾರ್ಯ, ಯು.ಜಿ.ಸಿ. ಯೋಜನೆ
		2. ಸದಸ್ಯರು	:	ಭಾಷಾಂತರ ಸರಳೀಕರಣ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
		3. ಶ್ರೇಷ್ಠ ಸಾಹಿತಿ ಪ್ರಶಸ್ತಿ	:	1994, ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
		4. ಚತುರಾಚಾರ್ಯ ಚಾರಿತ್ರ	:	ವೀರಶೈವ ಸಾಹಿತ್ಯ ಶ್ರೇಷ್ಠ ಕೃತಿ ಪ್ರಶಸ್ತಿ, ಸುತ್ತೂರು ಮಠ, ಮೈಸೂರು.
		5. ಗೌರವ ಸದಸ್ಯತ್ವ	:	ಮಿಥಿಕ್ ಸೊಸೈಟಿ, ಬೆಂಗಳೂರು
		6. ಸನ್ಮಾನ, ಪ್ರಶಸ್ತಿ	:	ರಾಜಾಪುರ ಸಂಸ್ಥಾನ ಮಠ
		7. (ಮಾಜಿ) ಅಧ್ಯಕ್ಷರು	:	ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
		8. ಸನ್ಮಾನ	:	61ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
		9. ಕರ್ನಾಟಕ ಸರಕಾರದ ಪ್ರಶಸ್ತಿಗಳು	:	1995, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1997, ಕನ್ನಡ ರಾಜ್ಯೋತ್ಸವ ಪ್ರಶಸ್ತಿ
		10. ಅಧ್ಯಕ್ಷರು	:	ಬಿ. ಶಿವಮೂರ್ತಿ ಶಾಸ್ತ್ರೀ ಪ್ರತಿಷ್ಠಾನ, ಬೆಂಗಳೂರು
		11. ಮಾಜಿ ಅಧ್ಯಕ್ಷರು	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
		12. ಸಾಹಿತ್ಯ ಸಮ್ಮೇಳನಾಧ್ಯಕ್ಷರು	:	1998 ಬಂಗಾರಪೇಟೆ ತಾಲ್ಲೂಕು ಸಾಹಿತ್ಯ ಸಮ್ಮೇಳನ
		13. ಸನ್ಮಾನ	:	1999 ದಕ್ಷಿಣ ಭಾರತ ಹಿಂದಿ ಪ್ರಚಾರಸಭಾ ಕರ್ನಾಟಕ
		14. ಪ್ರಶಸ್ತಿ	:	1999 ಅಖಿಲ ಭಾರತೀಯ ಭಾಷಾ ಸಾಹಿತ್ಯ ಸಮ್ಮೇಳನ ''ಭಾರತ ಭಾಷಾ ಭೂಷಣ'' ಪ್ರಶಸ್ತಿ 2004 'ಸಂಶೋಧನ ಶಿವರತ್ನ' ಪ್ರಶಸ್ತಿ ಸಿದ್ಧಗಂಗಾ ಮಠಾಧ್ಯಕ್ಷರಾದ ಡಾ॥ ಶಿವಕುಮಾರ ಸ್ವಾಮಿಯವರ 197ನೆಯ ಜನ್ಮದಿನದಂದು 2005 'ಶಿವಕಮಲ' ಪ್ರಶಸ್ತಿ ಕಾಶೀ ಜಗದ್ಗುರುಗಳಿಂದ

ನಮ್ಮ ಲೇಖಕರ ಬಳಗ

* **ಡಾ॥ ಎಂ. ಚಿದಾನಂದ ಮೂರ್ತಿ**
  ೬/ಎ, ೪ನೇ ತಿರುವು, ೧೧ನೇ ಮುಖ್ಯರಸ್ತೆ,
  ಹಂಪಿನಗರ, ವಿಜಯನಗರ ೨ನೇ ಹಂತ
  ಬೆಂಗಳೂರು-೪೦

* **ಪ್ರೊ॥ ಎಸ್. ಉಮಾಪತಿ**
  C-೨, ವಿದ್ಯಾನಗರ, ದಾವಣಗೆರೆ-೪

* **ಪ್ರೊ॥ ಹೆಚ್.ವಿ. ವೀರಭದ್ರಯ್ಯ**
  ನಂ. ೧೭೬, 'ಹರತೀಶ ಕೃಪ', ಎಸ್,ಐ,ಟಿ.
  ೩ನೇ ಕ್ರಾಸ್, ತುಮಕೂರು-೫೭೨೧೦೨

* **ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ**
  ೨೦೩, ೭ನೇ 'ಎ' ಮುಖ್ಯರಸ್ತೆ
  ವಿಜಯನಗರ ೨ನೇ ಹಂತ, ಬೆಂ-೪೦

* **ಸಿ.ಎಚ್. ಮರಿದೇವರು**
  'ಕಲ್ಪವೃಕ್ಷ', ಯಲ್ಲಾಪುರ, ಅರಕೆರೆ ಅಂಚೆ
  ತುಮಕೂರು ತಾ॥ ಜಿ॥

* **ಬಿ. ಸಿದ್ಧಗಂಗಯ್ಯ ಕಂಬಾಳು**
  ರಾಜಾಜಿನಗರ
  ಬೆಂಗಳೂರು

* **ಡಾ॥ ಬಿ. ನಂಜುಂಡಸ್ವಾಮಿ**
  ಪಂಡಿತ್ ತಾರಾನಾಥ್ ಚಿಕಿತ್ಸಾಲಯ, ಬಿ.ಹೆಚ್. ರಸ್ತೆ,
  ತುಮಕೂರು-೫೭೨೧೦೨

* **ಶ್ರೀಮತಿ ಎಸ್.ಕೆ. ರಮಾದೇವಮ್ಮ**
  ನಂ. ೧೭೯೧ (ಮಹಡಿ)
  ೧೮ನೇ 'ಎ' ಮುಖ್ಯರಸ್ತೆ, ಜೆ.ಬಿ. ನಗರ
  ೨ನೇ ಹಂತ, ಬೆಂಗಳೂರು-೭೮

* **ಎಂ.ಜಿ. ನಾಗರಾಜು**
  'ಅನರ್ಘ್ಯ', ಶ್ರೀ ಜಚನಿ ಕೃಪ
  ೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್
  ರಾಜಾಜಿನಗರ, ಬೆಂಗಳೂರು-೧೦

* **ಡಾ. ಎಸ್. ಪ್ರಭುಲಿಂಗದೇವರು**
  ನಂ. ೭೦೨, ಎ-೨, ಶರಾವತಿ ಬ್ಲಾಕ್
  ರಾಷ್ಟ್ರೀಯ ಕ್ರೀಡಾ ಗ್ರಾಮ, ಕೋರಮಂಗಲ
  ಬೆಂಗಳೂರು-೪೭

* **ಎಸ್.ವಿ. ಶ್ರೀನಿವಾಸರಾವ್**
  ೪೩೦, ಸೌರಭ, ೪ನೇ ಮುಖ್ಯರಸ್ತೆ, ಶ್ರೀನಗರ
  ಬೆಂಗಳೂರು-೫೦

* **ಎಚ್. ನಂಜೇಗೌಡ**
  ಸರಸ್ವತಿ ನಿವಾಸ, ಹಾರೋಹಳ್ಳಿ
  ಪಾಂಡವಪುರ-೫೭೧೪೩೪

* **ಪ್ರೊ॥ ಎನ್. ಚಂದ್ರಪ್ಪ**
  ವಿ.ವಿ. ಪುರ, ಸಂಜೆ ಕಾಲೇಜು

* **ಡಾ॥ ಕೆ.ವಿ. ಚಂದ್ರಣ್ಣಗೌಡ**
  ೧೧೨, ಚಂದ್ರೋದಯ, ೨ನೇ 'ಎ' ಕಾವೇರಿ ರಸ್ತೆ
  ಸರ್. ಎಂ.ವಿ. ಮೈನ್, ಗಿರಿನಗರ
  ಬೆಂಗಳೂರು-೫೬೦೦೮೫

* **ಡಾ॥ ಬಿ.ಎಸ್. ಸ್ವಾಮಿ**
  'ಮಾದೇಶ್ವರ ನಿಲಯ', ೭ನೇ 'ಎ' ಮುಖ್ಯರಸ್ತೆ
  ವಿಜಯನಗರ ೨ನೇ ಹಂತ, ಬೆಂಗಳೂರು-೪೦

* **ಡಾ॥ ಬಸವರಾಜ ನೆಲ್ಲಿಸರ**
  ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
  ಶಂಕರಘಟ್ಟ-೫೭೭೪೫೧. ಶಿವಮೊಗ್ಗ ಜಿಲ್ಲೆ

* **ಡಾ|| ಎಸ್.ಎಸ್. ಅಂಗಡಿ**
ಅಧ್ಯಾಪಕ, ಹಸ್ತಪ್ರತಿ ಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩೨೭೬

* **'ಸಾಹಿತ್ಯ ರತ್ನ' ಅನ್ನದಾನಯ್ಯ ಪುರಾಣಿಕ**
ನಂ. ೧೯, ಶ್ರೀ ಮೃತ್ಯುಂಜಯ ಕೃಪಾ
೯-ಎ ಮೈನ್, ೩೮ನೇ ಕ್ರಾಸ್, ೫ನೇ ಬ್ಲಾಕ್
ಜಯನಗರ, ಬೆಂಗಳೂರು-೫೬೦೦೪೧

* **ಪ್ರೊ. ಜಿ. ಅಶ್ವತ್ಥನಾರಾಯಣ**
ನಂ. ೯೫, ೩೪ 'ಬಿ' ಕ್ರಾಸ್, ೧೬ನೇ ಮೈನ್
೪ನೇ 'ಟಿ' ಬ್ಲಾಕ್, ಜಯನಗರ
ಬೆಂಗಳೂರು-೫೬೦೦೧೮

* **ಇಂದಿರಾ ಹೆಗ್ಗಡೆ**
ನಂ. ೬, ಆನೆಯ ತಿರುವು, ಅಮರಜ್ಯೋತಿ ನಗರ
ಬೆಂಗಳೂರು-೫೬೦೦೪೦

* **ಉಷಾ ಅಗ್ನಿಹೋತ್ರಿ**
ಪ್ಲಾಟ್ ನಂ. ೨೦೩, ೨ನೇ ಬ್ಲಾಕ್, ೧ನೇ ಅಂತಸ್ತು,
ಶ್ರಾವಂತಿ ಪ್ಯಾರಡೈಸ್ ಅಪಾರ್ಟ್‌ಮೆಂಟ್
ಕನಕಪುರ ಮುಖ್ಯರಸ್ತೆ, ಜೆ.ಪಿ. ನಗರ ೬ನೇ ಹಂತ
ಬೆಂಗಳೂರು-೭೮

* **ಎಲ್ಲೇಗೌಡ ಬೆಸಗರಹಳ್ಳಿ**
"ಸವಿಗನ್ನಡ", ಬಾಣಂತ ಮಾರಮ್ಮ ಬಡಾವಣೆ
ಕನಕಪುರ-೫೬೨೧೧೭

* **ವಿದ್ಯಾವಾಚಸ್ಪತಿ ಕವಿತಾ ಕೃಷ್ಣ**
"ಸರ್ವೋತ್ತಮ ಆಚಾರ್ಯ" ಪ್ರಶಸ್ತಿ ವಿಜೇತರು
ಕ್ಯಾತಸಂದ್ರ (ಚಂ.ಮೌ. ಬಡಾವಣೆ)
ತುಮಕೂರು

* **ಎಸ್.ಎನ್. ಕೃಷ್ಣಜೋಯಿಸ್**
೧೧೧೨, ಕೃಷ್ಣ ಕೃಪ, ಜೆ.ಎಲ್.ಬಿ. ರಸ್ತೆ
ವಿದ್ಯಾರಣ್ಯಪುರಂ, ಮೈಸೂರು

* **ಎಚ್. ಗಂಗಾಧರನ್**
ವಕೀಲರು, ನಂ. ೧೦೮೯, ವಿಷ್ಣುವರ್ಧನ ರಸ್ತೆ,
ಚಾಮರಾಜಪುರಂ, ಮೈಸೂರು-೫೭೦೦೦೫

* **ಡಾ. ಎಚ್.ಎಸ್. ಗೋಪಾಲರಾವ್**
'ಸ್ವಸ್ತಿಶ್ರೀಸ್ಕಂದ', ಅರಿಶಿನ ಕುಂಟೆ
ನೆಲಮಂಗಲ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ-೫೬೨೧೨೩

* **ಕೆ.ಎಸ್. ಚಂದ್ರಶೇಖರಾರಾಧ್ಯ**
ದಾರುಕಾಚಾರ್ಯ ಆತ್ಮವಿಚಾರ ಮಂದಿರ
ವಳಗೆರೆ, ನಂಜನಗೂಡು ತಾಲ್ಲೂಕು-೫೭೧೩೧೫

* **ಜಯದೇವಪ್ಪ ಜೈನಕೇರಿ,**
'ಶಾಂತಲಾ', ನಂ. ೮೭, ಕುವೆಂಪು ರಸ್ತೆ
ಶಿವಮೊಗ್ಗ-೧

* **ಪ್ರೊ. ಜೆ.ಆರ್. ನಂಜುಂಡೇಗೌಡ**
೩೪, 'ಸ್ವರೂಪ', ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪು ನಗರ, ಮೈಸೂರು-೨೩

* **ಹೆಚ್. ನಂಜೇಗೌಡ**
ನಿವೃತ್ತ ಕನ್ನಡ ಪ್ರಾಧ್ಯಾಪಕರು ಮತ್ತು ಶಿಕ್ಷಣ ತಜ್ಞರು
ಸರಸ್ವತಿ ನಿವಾಸ, ಹಾರೋಹಳ್ಳಿ
ಪಾಂಡವಪುರ-೫೭೧೪೩೪

* **ಜಿ.ಟಿ. ನಾರಾಯಣರಾವ್**
೮, ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರ
ಮೈಸೂರು-೫೭೦೦೦೯

* **ಡಾ. ಎಸ್.ಜೆ. ನಾಗಲೋಟಿಮಠ**
ಮೆಡಿಕಲ್ ಡೈರೆಕ್ಟರ್
ಎಸ್. ನಿಜಲಿಂಗಪ್ಪ ಮೆಡಿಕಲ್ ಕಾಲೇಜ್ ಮತ್ತು
ಹಾನಗಲ್ ಶ್ರೀ ಕುಮರೇಶ್ವರ್ ಆಸ್ಪತ್ರೆ ಮತ್ತು
ರಿಸರ್ಚ್ ಸೆಂಟರ್, ಶ್ರೀ ಬಿ.ವಿ.ವಿ. ಸಂಘ
ಬಾಗಲಕೋಟೆ-೫೮೭೧೦೧

* **ಡಾ. ಪಂಚಾಕ್ಷರಿ ಹಿರೇಮಠ**
'ಮೃತ್ಯುಂಜಯ ಕೃಪಾ', ಜಯನಗರ
ಧಾರವಾಡ-೧

* **ಕೆ.ಎಸ್. ಪಾಟೀಲ**
ಗ್ರೇಡ್-೧, ಪ್ರಾಚಾರ್ಯರು
ಸಿ.ಎಂ. ಮನಗೂಳಿ ಕಲಾ ಮಹಾವಿದ್ಯಾಲಯ
ಸಿಂದಗಿ, ಜಿಲ್ಲಾ - ವಿಜಾಪುರ

* **ಭಾರತಿ ಪಾಟೀಲ**
ಕಲ್ಯಾಣನಗರ, ಸಿಂದಗಿ, ವಿಜಾಪುರ ಜಿಲ್ಲೆ

* **ಕೆ.ಆರ್. ಪ್ರೇಮಲೀಲಾ**
"ಹಂಸಧ್ವನಿ", ೩೯/ಎ, ೮ನೇ ಮೈನ್
೫ನೇ ಕ್ರಾಸ್, ಕೆ.ಎಚ್. ರಸ್ತೆ, ಸರಸ್ವತಿಪುರಂ
ಮೈಸೂರು-೫೭೦೦೨೩

* **ಎಸ್.ವಿ. ಪ್ರಭಾವತಿ**
೩೦೧, ಸಲ್ಲಾಪ ಟೆರೇಸ್, ಜಯನಗರ ೭ನೇ ಬ್ಲಾಕ್
ಬೆಂಗಳೂರು-೫೬೦೦೮೨

* **ಪ್ರೇಮಾಭಟ್**
'ಶ್ರೀ ಗುರುಪ್ರಸಾದ', ನಂ. ೮೪೫, ೪ನೇ ಮುಖ್ಯರಸ್ತೆ
ವಿಜಯನಗರ, ಬೆಂಗಳೂರು-೫೬೦೦೪೦

* **ಶಂ.ಗು. ಬಿರಾದಾರ**
'ಕಮಲ ಕುಂಜ', ಶಾಸ್ತ್ರಿನಗರ, ತೊರವಿ ರಸ್ತೆ
ವಿಜಾಪುರ-೫೮೬೧೦೧

* **ಡಾ. ಕೆ.ಬಿ. ಬ್ಯಾಳಿ**
'ಶಿವಶಾಂತ ವೀರಕೃಪಾ', ಗವಿಸಿದ್ಧೇಶ್ವರ ನಗರ
ಕುಕನೂರು-೫೮೩೨೬೨
ಕೊಪ್ಪಳ ಜಿಲ್ಲೆ

* **ಡಾ. ವೈ.ಸಿ. ಭಾನುಮತಿ**
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

* **ಡಾ. ಸಿ.ಯು. ಮಂಜುನಾಥ್**
ನಂ. ೧೪೮, ೭ನೇ 'ಸಿ' ಮುಖ್ಯರಸ್ತೆ
ವಿಜಯನಗರ ೨ನೇ ಹಂತ, ಬೆಂಗಳೂರು-೪೦

* **ಟಿ.ಆರ್. ಮಹದೇವಯ್ಯ**
೧೩೬, ೧ನೇ ಮೈನ್, ೧ನೇ ಬ್ಲಾಕ್
ನಾಗರಬಾವಿ ೨ನೇ ಹಂತ, ಬೆಂಗಳೂರು-೭೨

* **ಡಾ. ಕೆ.ಎಚ್. ಮುಕ್ಕಣ್ಣನವರ**
'ತಾಯಿ ನೆರಳು', ವಿನಾಯಕ ನಗರ, ೩ನೇ ಮುಖ್ಯರಸ್ತೆ
ರಾಣೆಬೆನ್ನೂರು, ಜಿಲ್ಲೆ : ಹಾವೇರಿ

* **ಡಾ. ಡಿ.ಎನ್. ಯೋಗೀಶ್**
ಪ್ರಾಧ್ಯಾಪಕ, ಚಿತ್ಕಲಾ, ೮ನೇ ಕ್ರಾಸ್, ೪ನೇ ಮೈನ್
ಸೋಮೇಶ್ವರಪುರಂ, ತುಮಕೂರು

* **ಡಾ. ಕೆ.ಎಸ್. ರತ್ನಮ್ಮ**
ಪ್ರಾಂಶುಪಾಲರು
೨೮೮೪, ಕೋರ್ಟ್ ಹಿಂಭಾಗ, ಸರಸ್ವತಿಪುರಂ
ಮೈಸೂರು-೫೭೦೦೦೯

* **ಪ್ರೊ. ಆರ್. ರಾಚಪ್ಪ**
ನಿವೃತ್ತ ಪ್ರಾಚಾರ್ಯರು
"ರಜತಗಿರಿ", ೧೫೯, ೭ನೇ 'ಬಿ' ಮುಖ್ಯರಸ್ತೆ
ವಿಜಯನಗರ ೨ನೇ ಹಂತ, ಬೆಂಗಳೂರು-೫೬೦೦೪೦

* **ಎಸ್. ರಾಮಪ್ರಸಾದ್**
ನಿವೃತ್ತ ವಿಜ್ಞಾನ ಸಂಪಾದಕ, ಕನ್ನಡ ವಿಶ್ವಕೋಶ
೭೫೫, ಕಾಶಿಪತಿ ಅಗ್ರಹಾರ, ಚಾಮರಾಜ ಜೋಡಿರಸ್ತೆ
ಮೈಸೂರು-೫೭೦೦೨೪

* **ಪ್ರೊ. ಎಸ್.ಆರ್. ರೊಹಿಡೇಕರ್**
ನಂ. ೭೬, ೧ನೇ ಕ್ರಾಸ್, ೫ನೇ ಮೈನ್
ಪದ್ಮನಾಭನಗರ, ಬೆಂಗಳೂರು-೫೬೦೦೭೦

* **ಡಾ. ವರದಾ ಶ್ರೀನಿವಾಸ**
"ಸೌಹಾರ್ದ", ೩೧/೨, ಗೋವಿಂದಪ್ಪ ರಸ್ತೆ
ಬಸವನಗುಡಿ, ಬೆಂಗಳೂರು-೫೬೦೦೦೪

* **ವಿಜಯಶ್ರೀ**
'ಪ್ರೀತಿ ಸ್ನೇಹ', ೨ನೇ ತಿರುವು, ೧ನೇ ಹಂತ
ವಿನೋಬನಗರ, ಶಿವಮೊಗ್ಗ-೪

* **ಪ್ರೊ. ಬಿ. ವಿರೂಪಾಕ್ಷಪ್ಪ**
ಗೌರವ ಕಾರ್ಯದರ್ಶಿ, ಬಸವ ಸಮಿತಿ, ಬಸವ ಭವನ
ಶ್ರೀ ಬಸವೇಶ್ವರ ಸರ್ಕಲ್, ಬೆಂಗಳೂರು-೫೬೦೦೦೧

* **ವಿಜಯಕುಮಾರ್ ಆವರೇಕಾಡು**
ಅಧ್ಯಾಪಕ, ಭಾಷಾವಿಜ್ಞಾನ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.
ಮಾನಸ ಗಂಗೋತ್ರಿ, ಮೈಸೂರು-೫೭೦೦೦೬

* **ಡಾ. ವಿಜಯಾ ಸುಬ್ಬರಾಜ್**
ಜ೧, 'ಹಂಪಿ', ೧ನೇ 'ಎ' ಅಡ್ಡರಸ್ತೆ, ೨೦ನೇ ಮೈನ್
ಅತ್ತಿಮಬ್ಬೆ ರಸ್ತೆ, ಬನಗಿರಿ ನಗರ
ಬನಶಂಕರಿ ೩ನೇ ಹಂತ, ಬೆಂಗಳೂರು-೮೫

* **ಟಿ.ವಿ. ವೆಂಕಟರಮಣಯ್ಯ**
EWS ೨೧೮, ಕೆ.ಎಚ್.ಬಿ. ಕಾಲೋನಿ ೨ನೇ ಹಂತ
೫ನೇ ಕ್ರಾಸ್, ಬಸವೇಶ್ವರನಗರ, ಬೆಂಗಳೂರು-೭೯

* **ಹೀ.ಚಿ. ಶಾಂತವೀರಯ್ಯ**
ಸಾಹಿತಿಗಳು, ನಂ. ೯, ಮನುವನ, ವಿಜಯನಗರ
ಬೆಂಗಳೂರು-೫೬೦೦೪೦

* **ಡಾ. ಎಸ್. ಶಿವರಾಜಪ್ಪ**
ನಂ. ೮೭೬, 'ನಾಗಮಲೆ', ೮ನೇ ಮುಖ್ಯರಸ್ತೆ
ಸರಸ್ವತಿಪುರಂ, ಮೈಸೂರು-೯

* **ಜಿ.ಎ. ಶಿವಲಿಂಗಯ್ಯ**
ನಂ. ೩೭೦/೧, ಡಿ. ಸುಬ್ಬಯ್ಯ ರಸ್ತೆ
ಮೈಸೂರು-೫೭೦೦೨೪

* **ಡಾ. ಎ. ಶ್ರೀಕೃಷ್ಣಭಟ್ ಅರ್ತಿಕಜೆ**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ
ಮದ್ರಾಸ್ ವಿಶ್ವವಿದ್ಯಾನಿಲಯ, ಮರೀನಾ ಕ್ಯಾಂಪಸ್
ಚೆನ್ನೈ-೬೦೦೦೦೫

* **ಷಣ್ಮುಖಯ್ಯ ಅಕ್ಕೂರಮಠ**
'ದೇವಗಂಗೋತ್ರಿ', ಶಂಕರಪುರಂ
ಬೆಂಗಳೂರು

* **ಡಾ. ನ. ಸುಬ್ರಹ್ಮಣ್ಯಂ**
೨೯೮೫, "ಗುರುದೀಪ್" ೨ನೇ 'ಎ' ಮುಖ್ಯರಸ್ತೆ
೧೭ನೇ ಅಡ್ಡರಸ್ತೆ (ಇಂಡೋ ಅಮೇರಿಕನ್ ಹೈಬ್ರಿಡ್
ಸೀಡ್ಸ್ ಎದುರು), ಬನಶಂಕರಿ ೨ನೇ ಹಂತ
ಬೆಂಗಳೂರು-೫೬೦೦೭೦

* **ಡಾ. ಕೆ.ಆರ್. ಸಂಧ್ಯಾರೆಡ್ಡಿ**
'ಸಮಯಾ', ೧೦೪೪, ೪ನೆಯ ಮುಖ್ಯರಸ್ತೆ
೮ನೆಯ ಅಡ್ಡರಸ್ತೆ, ಶ್ರೀನಿವಾಸನಗರ
ಬೆಂಗಳೂರು-೫೬೦೦೫೦

* **ಜಿ.ಎಸ್. ಸಣ್ಣಯ್ಯ**
೨೨/೧, ೮ನೇ ಅಡ್ಡರಸ್ತೆ, ಜಯಲಕ್ಷ್ಮೀಪುರಂ
ಮೈಸೂರು-೫೭೦೦೧೨

* **ಎನ್.ಎಂ. ಸಿದ್ಧರಾಮಯ್ಯ**
ಕಮರ್ಷಿಯಲ್ ಟ್ಯಾಕ್ಸ್ ಆಫಿಸರ್
ಗಾಂಧಿನಗರ, ಬಳ್ಳಾರಿ

* **ಎಂ.ಎಸ್. ಸುಜಯ**
ನಂ. ೧೪೮, ೭ನೇ 'ಸಿ' ಮುಖ್ಯರಸ್ತೆ,
ಕಲ್ಯಾಣ್ ಹೌಸಿಂಗ್ ಸೊಸೈಟಿ, ಆರ್.ಪಿ.ಸಿ. ಲೇಔಟ್
ವಿಜಯನಗರ ೨ನೇ ಹಂತ, ಬೆಂಗಳೂರು-೫೬೦೦೪೦

* **ಹೆಚ್.ಎಂ. ಸುಲೋಚನಶಾಸ್ತ್ರೀ**
ನಂ. ೫೦, ೧೩ನೇ ಮೈನ್, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ, ಮೈಸೂರು-೨೩

* **ಡಾ. ಸೋಮಶೇಖರ ಗೌಡ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಭಾಷಾವಿಜ್ಞಾನ ಅಧ್ಯಯನ ವಿಭಾಗ, ಕುಕಅಸಂ
ಮೈಸೂರು ವಿ.ವಿ., ಮಾನಸ ಗಂಗೋತ್ರಿ
ಮೈಸೂರು-೬

* **ಡಾ. ಎಫ್.ಟಿ. ಹಳ್ಳಿಕೇರಿ**
ಪ್ರವಾಚಕ, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬, ಬಳ್ಳಾರಿ ಜಿಲ್ಲೆ

* **ಸಾ.ಮ. ಹುಂಡೇಕರ**
ಬಿಜಾಪುರ

* **ಕೆ.ಎಂ. ರುದ್ರಪ್ಪ**
೫೧/೩೯, ೧ನೇ ಮೈನ್, ಪ್ಯಾಲೆಸ್ ಲೋಯರ್
ಆರ್ಕಿಡ್ಸ್, ಬೆಂಗಳೂರು-೫೬೦೦೦೩

ಪ್ರೊ॥ ಎನ್. ಬಸವಾರಾಧ್ಯ ಅಭಿನಂದನ ಸಮಿತಿ

ಅಧ್ಯಕ್ಷರು:

ಪ್ರೊ. ಹೆಚ್.ಆರ್. ದಾಸೇಗೌಡ

⌘ ⌘ ⌘

ಪ್ರಧಾನ ಕಾರ್ಯದರ್ಶಿ:

ಎಸ್. ಈಶ್ವರದೇವರು

⌘ ⌘ ⌘

ಕಾರ್ಯದರ್ಶಿಗಳು:

ಪ್ರೊ. ಎಂ. ಪ್ರಸನ್ನ ಕುಮಾರ್

ಡಾ. ಕೆ.ವಿ. ಚಂದ್ರಣ್ಣಗೌಡ

ಡಾ. ಕೆ.ಆರ್. ಸಂಧ್ಯಾರೆಡ್ಡಿ

⌘ ⌘ ⌘

ಕೋಶಾಧ್ಯಕ್ಷರು:

ಯಜಮಾನ್ ಶ್ರೀಕಂಠಪ್ಪ

⌘ ⌘ ⌘

ಸಂಪಾದಕರು:

ಡಾ. ಎಸ್. ವಿದ್ಯಾಶಂಕರ

ಡಾ. ಸಿ. ಶಿವಕುಮಾರಸ್ವಾಮಿ

⌘ ⌘ ⌘

ಸದಸ್ಯರು:

ಶ್ರೀ ಜಿ. ಚೆನ್ನವೀರಸ್ವಾಮಿ

ಪ್ರೊ. ಶ್ರೀಪಾದ

ಪ್ರೊ. ಎನ್. ಗೀತಾಚಾರ್ಯ

ಪ್ರೊ. ಎಂ.ಜಿ. ನಾಗರಾಜ್

ಪ್ರೊ. ಆರ್. ರಾಚಪ್ಪ

ಶ್ರೀ ಡಿ. ರೇಣುಕಾಚಾರ್ಯ

ಶ್ರೀ ಎಂ. ಮಲ್ಲೇಗೌಡ

ಶ್ರೀ ಉಮೇಶ್

ಶ್ರೀ ಚನ್ನವೀರದೇವರು

ಶ್ರೀ ನಾಗರಾಜಮೂರ್ತಿ

ಡಾ. ಎಂ. ನಂಜುಂಡಸ್ವಾಮಿ


ಶ್ರೀ ಕೊಡಗು ಗಣೇಶ್

ಪ್ರೊ. ಎನ್. ಬಸವಾರಾಧ್ಯ-೮೦
ಅಭಿನಂದನ ಸಂಪುಟ

ಆರಾಧ್ಯ ಸಿರಿ

ಸಂಪಾದಕರು
ಡಾ. ಸಿ. ಶಿವಕುಮಾರ ಸ್ವಾಮಿ

'ಅಜಾತಶತ್ರು' ಎನ್ನುವ ಹೆಸರು
ಯಾರಿಗಾದರೂ ಒಪ್ಪುವುದಿದ್ದರೆ
ಪ್ರೊ. ಎನ್. ಬಸವಾರಾಧ್ಯರಿಗೆ ಅದು
ಸೊಗಸಾಗಿ ಅನ್ವಯವಾಗುತ್ತದೆ.
ಭೌತಿಕ ಸಿರಿಗಿಂತ ಅಪಾರ ಗೆಳೆಯರ
ಅಭಿಮಾನಿಗಳ ಪ್ರೀತಿ-ವಿಶ್ವಾಸಗಳು
ದೊಡ್ಡದು; ಬೆಲೆಕಟ್ಟಲಾಗದು.
ಅವರು ೮೦ನೇ ವರ್ಷಕ್ಕೆ ಪದಾರ್ಪಣ
ಮಾಡುತ್ತಿರುವ ಸಂದರ್ಭದಲ್ಲಿ ಆತ್ಮೀಯರು,
ಅಭಿಮಾನಿಗಳು ತಮ್ಮ ಅಂತರಂಗದ
ನುಡಿ ನಮನಗಳನ್ನು, ಅವರ ಸಾಹಿತ್ಯಸೃಷ್ಟಿಯ
ಗುಣಾತ್ಮಕ ಮೌಲ್ಯವನ್ನು ಈ ಅಭಿನಂದನ
ಸಂಪುಟದಲ್ಲಿ ದಾಖಲಿಸುವ
ಪ್ರಾಮಾಣಿಕ ಪ್ರಯತ್ನ ಮಾಡಿರುವರು.



ಪ್ರೊ. ಎನ್. ಬಸವಾರಾಧ್ಯ ಅಭಿನಂದನ ಸಮಿತಿ, ಬೆಂಗಳೂರು-೧೦